ಹ್ಯಾರಡ ಗ್ರಾಮ: ಸಾಂಸ್ಕೃತಿಕ ಸ್ಥಿತ್ಯಂತರ

(ಜಾನಪದ ಅಧ್ಯಯನ ವಿಭಾಗದ ಮೂಲಕ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಯಲ್ಲಪ್ಪ ಸಣ್ಣೀಲಪ್ನರ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಹ್ಯಾರಡ ಗ್ರಾಮ: ಸಾಂಸ್ಕೃತಿಕ ಸ್ಥಿತ್ಯಂತರ

(ಜಾನಪದ ಅಧ್ಯಯನ ವಿಭಾಗದ ಮೂಲಕ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ಯಲ್ಲಪ್ಪ ಸಣ್ಣೇಲಪ್ಪನರ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩೨೭೬

2020

ಮಾರ್ಗದರ್ಶಕರ ದೃಢೀಕರಣ ಪತ್ರ

ಯಲ್ಲಪ್ಪ ಸಣ್ಣೀಲಪ್ನರ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಹ್ಯಾರಡ ಗ್ರಾಮ: ಸಾಂಸ್ಕೃತಿಕ ಸ್ಥಿತ್ಯಂತರ"** ಎಂಬ ಮಹಾಪ್ರಬಂಧವನ್ನು ಜಾನಪದ ಅಧ್ಯಯನ ವಿಭಾಗದ ಮೂಲಕ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಮಂಜುನಾಥ

ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

ದಿನಾಂಕ: ೧೨-೧೧-೨೦೨೦
ಸ್ಥಳ: ೧೨-೧೧-೨೦೨೦
ವಿದ್ಯಾರಣ್ಯ.

ಸಂಶೋಧಕರ ಘೋಷಣಾ ಪತ್ರ

"ಹ್ಯಾರಡ ಗ್ರಾಮ: ಸಾಂಸ್ಕೃತಿಕ ಸ್ಥಿತ್ಯಂತರ" ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಮಂಜುನಾಥ ಬೇವಿನಕಟ್ಟಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

(ಯಲ್ಲಪ್ಪ ಸಣ್ಣೇಲಪ್ನರ)
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 12-11-2020
ಸ್ಥಳ: ವಿದ್ಯಾರಣ್ಯ.

ಸಂಶೋಧನಾ ಪರಿವಿಡಿ

ಅಧ್ಯಾಯ–೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಸಂಶೋಧನ ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಮಾನವ ಮೂಲತಃ ಸಂಘಜೀವಿ. ಮಾನವನ ಇತಿಹಾಸ ಬಹಳಷ್ಟು ದೀರ್ಘವಾದುದು ಹಾಗೂ ವಿಸ್ತಾರವಾದುದು. ಸದಾ ಗತಿಶೀಲತೆಯಿಂದ ತನ್ನ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಹೊಸ ರೂಪವನ್ನು ಕೊಟ್ಟಿದ್ದಾನೆ. ಮಾನವನು ಅಲೆಮಾರಿ ಜೀವನದಿಂದ ಇಂದಿನ ಆಧುನಿಕ ಜೀವನದವರೆಗೆ ಹಲವಾರು ಸಂಘರ್ಷ, ಸಾಮರಸ್ಯಗಳನ್ನು ಗರ್ಭೀಕರಿಸಿಕೊಂಡು ಜೀವನ ಸಾಗಿಸುತ್ತಿದ್ದಾನೆ. ಮಾನವನು ಅಲ್ಪ ಜ್ಞಾನದಿಂದ ಪ್ರೌಢಜ್ಞಾನದವರೆಗೆ ತಲುಪಿದಾಗ ತನ್ನದೇ ಆದ ಸಮಾಜ, ಕುಟುಂಬ, ಧರ್ಮ, ಆಚರಣೆ, ಸಂಪ್ರದಾಯ, ನಂಬಿಕೆ ಮುಂತಾದವುಗಳನ್ನು ಸಾಮಾಜೀಕರಣಕ್ಕೆ ಒಳಪಡಿಸಿ ತನ್ನದೇ ಆದ ನಾಗರಿಕತೆಯನ್ನು ಸೃಷ್ಠಿಸಿಕೊಂಡಿದ್ದಾನೆ.

ಭಾರತದ ಇತಿಹಾಸವನ್ನು ನಾವು ಸ್ವಲ್ಪ ಸಿಂಹಾವಲೋಕನ ಮಾಡುವುದಾದರೆ ಮಾನವನ ಜೀವನ ಅಂದಿನಿಂದ ಇಂದಿನವರೆಗೆ ಹಲವಾರು ಸಂಘರ್ಷಗಳಿಂದ ಕೂಡಿದೆ. ಹಲವಾರು ಜನವರ್ಗಗಳು, ಧರ್ಮಗಳು, ವಿವಿಧ ಸಂಸ್ಕೃತಿ ಇವುಗಳ ಮಧ್ಯೆ ಸಂಘರ್ಷಗಳನ್ನು ಕಾಣಬಹುದಾಗಿದೆ. ಕ್ರಿ.ಪೂ.೧೫೦೦ರ ಕಾಲಾವಧಿಯಲ್ಲಿ ಮಧ್ಯ ಏಷಿಯಾದ ಸ್ಟೇಪೀಸ್ ಭೂಭಾಗದಿಂದ ಆರ್ಯರು ಭಾರತಕ್ಕೆ ಬಂದರು. ಅಂದಿನಿಂದ ಇಂದಿನವರೆಗೆ ಹಲವಾರು ಸಂಘರ್ಷಗಳನ್ನು ಕಾಣಬಹುದಾಗಿದೆ. ಈ ಭೂಭಾಗದಿಂದ ತಂಡೋಪತಂಡವಾಗಿ ಆರ್ಯರು ಭಾರತಕ್ಕೆ ವಲಸೆ ಬಂದರು. ಇಲ್ಲಿರುವ ಮೂಲನಿವಾಸಿಗಳಾದ ದ್ರಾವಿಡರ ಮಧ್ಯೆ ಹಲವಾರು ಸಂಘರ್ಷಗಳು ನಡೆದವು. ಆರ್ಯರಿಗೆ ಭಾರತದ ಭೂಭಾಗ ಬಹಳಷ್ಟು ಹಿತಕಾರಿಯಾಗಿತ್ತು. ಇವರು ದ್ರಾವಿಡರಿಗಿಂತ ಬಹಳಷ್ಟು ಬಲಶಾಲಿಗಳಾಗಿದ್ದರು. "ಇವರ ಹತ್ತಿರ ಹೇರಳವಾದ ಪಶು ಸಂಪತ್ತು ಹಾಗೂ ಕುದುರೆಗಳು ಇದ್ದವು. ಆರ್ಯರು ಈ ಕುದುರೆಗಳನ್ನು ಆಧುನಿಕ ಕಾಲದ 'ಟ್ಯಾಂಕರ್'ಗಳ ಹಾಗೆ ಬಳಸಿದರು" ಎಂದು ಎಸ್.ಜಿ. ಸರ್ದೇಸಾಯಿಯವರು ಅಭಿಪ್ರಾಯಪಟ್ಟಿದ್ದಾರೆ. (ಎಸ್.ಜಿ. ಸರ್ದೇಸಾಯಿ: ೨೦೧೬:೩೬) ನಂತರ ಕಾಲಾನಂತರದಲ್ಲಿ ದ್ರಾವಿಡರಿಗೂ ಹಾಗೂ ಆರ್ಯರಿಗೂ ರಕ್ತ ಸಂಬಂಧಗಳು

ಏರ್ಪಟ್ಟು, ಸಂಪೂರ್ಣವಾದ ಆರ್ಯ ಸಂಸ್ಕೃತಿಯನ್ನು ದ್ರಾವಿಡರ ಮೇಲೆ ಹೇರಿದರು. ದ್ರಾವಿಡರನ್ನು ಅತ್ಯಂತ ಅವಮಾನವೀಯವಾಗಿ ನಡೆಸಿಕೊಂಡರು. ಇಂತಹ ಸಂಘರ್ಷಗಳಿಗೆ ಹಲವಾರು ಶತಮಾನಗಳೇ ಉರುಳಿದವು. ದ್ರಾವಿಡರು ಮೂಲ ಕಸುಬಾದ ಪಶುಪಾಲನೆಯಲ್ಲಿ ಹಲವಾರು ಪಲ್ಲಟಗಳನ್ನು ಕಂಡುಕೊಂಡರು. ಒಂದೆಡೆ ನೆಲೆನಿಂತು ಬಾರ್ಲಿ(ಯುವ)ಯನ್ನು ಬೆಳೆಯತೊಡಗಿದರು. ಋಗ್ವೇದದಲ್ಲಿ ಉಲ್ಲೇಖಿಸಿದ ಮೊದಲ ಧಾನ್ಯ (ಎಸ್.ಜೆ. ಸರ್ದೇಸಾಯಿ : ೨೦೧೬:೩೭). ಇದರಿಂದ ಇವರ ಗಮನ ಸಂಪೂರ್ಣವಾಗಿ ಕೃಷಿಯತ್ತ ವಾಲಿತು.

ನಂತರದ ಋಗ್ವೇದ ಕಾಲಾವಧಿಯಲ್ಲಿ (ಕ್ರಿಪೂ. ೧೫೦೦ ರಿಂದ ೧೦೦೦ರವರೆಗೆ) ಬ್ರಾಹ್ಮಣಗಳು, ಉಪನಿಷತ್ತುಗಳು, ವೇದಗಳು, ವೇದಾಂಗಗಳು ಹುಟ್ಟಿಕೊಂಡವು. ಈ ಅವಧಿಯಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವುದರ ಬದಲಾಗಿ ಕೆಲವು ಪ್ರದೇಶಗಳಲ್ಲಿ ನೆಲೆನಿಂತು ವ್ಯವಸಾಯವನ್ನು ಪ್ರಾರಂಭಿಸಿದ ಪರ್ವಕಾಲವಿದು. ಈ ಅವಧಿಯಲ್ಲಿ ಮೊಟ್ಟ ಮೊದಲು ವರ್ಣಗಳ ಪರಿಕಲ್ಪನೆ ಋಗ್ವೇದ ಆರಂಭಕಾಲದಲ್ಲಿ ಪ್ರಾರಂಭವಾಗಿ ಉತ್ತರ ವೈದಿಕ ಕಾಲಾವಧಿಯಲ್ಲಿ ಪರಮೋಚ್ಛ ಸ್ಥಾನದಲ್ಲಿ ಬಂದು ತಲುಪಿದವು. ಈ ಅವಧಿಯಲ್ಲಿ ಸಮಾಜದಲ್ಲಿ ನಾಲ್ಕು ವರ್ಣಗಳು ಸಮಾಜದ ಮುಖ್ಯವಾಹಿನಿಗೆ ಬಂದವು. ಬೌದ್ಧಿಕ ಸಂಪತ್ತಿನ ರಕ್ಷಕರು ಬ್ರಾಹ್ಮಣರಾದರು, ಯುದ್ಧ ಸಾಹಸಗಳನ್ನು ಮಾಡುವವರು ಕ್ಷತ್ರಿಯರಾದರು, ಪುಶುಪಾಲನೆ, ವ್ಯವಸಾಯ ಮಾಡುವವರು ವೈಶ್ಯರಾದರು, ಮೇಲಿನ ಮೂರು ವರ್ಗದವರ ಸೇವೆಯನ್ನು ಮಾಡುವವರು ಶೂದ್ರರಾದರು.

ಕ್ರಿಪೂ.೨೦೦ರಲ್ಲಿ ಮೌರ್ಯರ ಕಾಲಾವಧಿಯಲ್ಲಿ ಹಾಗೂ ಕ್ರಿಶ.೩೦೦ರ ರಿಂದ ಕ್ರಿಶ. ೫೦೦ರ ವರೆಗಿನ ಗುಪ್ತರ ಕಾಲಾವಧಿಯಲ್ಲಿ ಪ್ರಾಚೀನ ಭಾರತದ ಗ್ರಾಮೀಣ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಸಂರಚನೆಯನ್ನು ಕಾಣಬಹುದಾಗಿದೆ. ಪ್ರಾಚೀನ ಕಾಲದ ಗ್ರಾಮೀಣ ಸಮುದಾಯಗಳು ಸಂಪೂರ್ಣವಾಗಿ ಸ್ವಯಂಪೂರ್ಣವಾಗಿದ್ದವು. ತಮಗೆ ಬೇಕಾದ ಅವಶ್ಯಕತೆಗಳನ್ನು ತಾವೇ ಪೂರೈಸಿಕೊಳ್ಳುತ್ತಿದ್ದವು. ಪ್ರತಿಯೊಂದು ವರ್ಗಕ್ಕೂ ಒಂದೊಂದು ಕಸುಬುಗಳಿದ್ದವು. ಇವರು ಪರಸ್ಪರ ತಮ್ಮ ಅವಶ್ಯಕತೆಗಳನ್ನು ಪೂರೈಸುತ್ತಿದ್ದರು. ಜನಸಂಖ್ಯೆಯು ಹೆಚ್ಚಾದಂತೆಲ್ಲಾ, ಅವಶ್ಯಕತೆಗಳು ಹೆಚ್ಚಾದಂತೆಲ್ಲಾ ವಿಪುಲವಾದ ಕಾಡನ್ನು ಕಡಿದು ಕೃಷಿಯನ್ನು ಮಾಡಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತಿದ್ದರು. ಒಟ್ಟಾರೆಯಾಗಿ ಕಾರ್ಲ್‌ಮಾರ್ಕ್ಸ್‌ನ "ಸಹಜ ಆರ್ಥಿಕತೆಯ" ರೀತಿಯಲ್ಲಿ ಸಾಮಾಜಿಕ ಜೀವನ ಸಂರಚನೆ ರೂಪುಗೊಂಡಿತ್ತು. "ಅಂದಿನ ಗ್ರಾಮೀಣ ಜೀವನವು ಆದರ್ಶಪೂರ್ಣ ಸಾಮಾಜಿಕ ಶ್ರಮ ವಿಭಜನೆಯನ್ನು ಆಧರಿಸಿದ್ದು, ಪ್ರತಿಯೊಬ್ಬರು ತಮ್ಮ ಪಾಲಿಗೆ ಸಹಜವಾಗಿ ಬಂದ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಯಾರೂ ಮತ್ತೊಬ್ಬರನ್ನು ಶೋಷಿಸುತ್ತಿರಲಿಲ್ಲ, ತುಳಿಯುತ್ತಿರಲಿಲ್ಲ. ಹೀಗಾಗಿ ಜನರು ಜಗತ್ತಿನ ಬೇರೆ ಯಾವ ಭಾಗದಲ್ಲಿಯೂ ಇಲ್ಲದಷ್ಟು ತೃಪ್ತಿ, ಸಂತೋಷಗಳಿಂದ ಬದುಕುತ್ತಿದ್ದರು" (ಎಸ್.ಜಿ ಸರ್ದೇಸಾಯಿ : ೨೦೧೬:೫೭).

ಹೀಗೆ ಗ್ರಾಮಗಳು ಒಂದು ಕಡೆ ನೆಲೆನಿಂತು, ತಮ್ಮ ವ್ಯವಸ್ಥಿತ ಜೀವನವನ್ನು ನಡೆಸತೊಡಗಿದವು. ಸಹಕಾರ, ಸಹಬಾಳ್ವೆ, ಜೀವನ ಕ್ರಮಗಳನ್ನು ವೃದ್ಧಿಸಿಕೊಂಡು ಹೊಸ ಹೊಸ ಆವಿಷ್ಕಾರಗಳಿಗೆ

ಭಾಷ್ಯವನ್ನು ಬರೆದು, ಉಡುಗೆ-ತೊಡುಗೆ, ಆಹಾರ ಪದ್ಧತಿ, ವ್ಯವಸಾಯ ಮುಂತಾದವುಗಳನ್ನು ಗರ್ಭೀಕರಿಸಿಕೊಂಡು ನಮ್ಮನ್ನು ಆಧುನಿಕ ಹೊಸ್ತಿಲಿಗೆ ತಲುಪಿಸಿದೆ. ಹೊಸ ಹೊಸ ಕೈಗಾರಿಕ ಕ್ರಾಂತಿಗಳು ನಗರೀಕರಣ ವ್ಯವಸ್ಥೆಯನ್ನು ಹೊಂದಿ ಹೊಸ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಹಿತ್ಯಿಕ ನೆಲೆಗಳನ್ನು ಸ್ಥಾಪಿಸಿಕೊಂಡಿದೆ.

ಭಾರತೀಯ ಭವ್ಯ ಪರಂಪರೆಯ ಹೂರಣ ಅಡಗಿರುವುದೇ ಗ್ರಾಮೀಣ ಸಮುದಾಯದಲ್ಲಿ. ಗ್ರಾಮೀಣ ಸಮುದಾಯಗಳು ವಿಭಿನ್ನ ಸಂಸ್ಕೃತಿಗಳ, ಸಂಪ್ರದಾಯಗಳ ಸೊಬಗನ್ನು ತಿಳಿಸುತ್ತಿವೆ. ಇಲ್ಲಿರುವಂತಹ ಆಚರಣೆ, ನಂಬಿಕೆ, ಸಂಪ್ರದಾಯಗಳು ಸಾರ್ವತ್ರಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಪಾಶ್ಚಾತ್ಯ ಸಂಸ್ಕೃತಿ, ನಗರೀಕರಣದಂತಹ ಆಧುನಿಕ ಪ್ರಪಂಚದಲ್ಲಿ ಗ್ರಾಮೀಣ ಸಮುದಾಯಗಳು ಹೊಸದೊಂದು ಆಯಾಮವನ್ನು ಸೃಷ್ಟಿಸಿವೆ. ಇಂದಿನ ಶ್ರೀಮಂತ ಜೀವನ ಶೈಲಿಯಲ್ಲಿ ಸಂಸ್ಕೃತಿ ಉಳಿದಿರುವುದೇ ಗ್ರಾಮೀಣ ಸಮುದಾಯಗಳಲ್ಲಿ. ಚಾರಿತ್ರಿಕವಾದ, ಸಾಂಸ್ಕೃತಿಕವಾದ ಹಿರಿಮೆಯನ್ನು ಹೊತ್ತು ನಿಂತ ಎಷ್ಟೋ ಗ್ರಾಮಗಳನ್ನು ಭಾರತದಲ್ಲಿ ಕಾಣಬಹುದಾಗಿದೆ. ಉದಾತ್ತವಾದ ಮೌಲ್ಯಗಳ ಮೊಗಸಾಲೆ ಗ್ರಾಮೀಣ ಸಮುದಾಯಗಳು ಎಂದರೆ ಅತಿಶಯೋಕ್ತಿಯಲ್ಲ. ಉತ್ತಮ ಸಂಸ್ಕೃತಿಯು ವ್ಯಕ್ತಿಯ ನಡವಳಿಕೆಯಲ್ಲಿ ಅಮೂಲಾಗ್ರವಾದ ಬದಲಾವಣೆಗಳನ್ನು ತರುತ್ತದೆ. ಅಂತಹ ಉದಾತ್ತವಾದ ಮೌಲ್ಯಗಳ ಆಗರ ಗ್ರಾಮೀಣ ಸಮುದಾಯಗಳಾಗಿವೆ.

"ಸಂಸ್ಕೃತಿಯು ಸಮಾಜದೊಡನೆ ಸಹಬಾಳ್ವೆಯ ಸೌಜನ್ಯದ ಮಾರ್ಗವಾಗಿದೆ. ಗ್ರಾಮದ ಜನರ ನೋವು-ನಲಿವು, ಕೆಲಸಕಾರ್ಯ ಪ್ರತಿಯೊಂದರಲ್ಲಿ ಕುಟಂಬದ ಪಾತ್ರ ಬಹಳ ಹಿರಿದಾಗಿದೆ. ವ್ಯಕ್ತಿಯ ವಿಕಾಸಕ್ಕೆ ಕುಟುಂಬ ಬಹಳ ಪ್ರಧಾನವಾಗಿದೆ. ಹಾಗೇ ನಮ್ಮ ಉಡುಗೆ-ತೊಡುಗೆ, ನಡೆ-ನುಡಿ, ಆಚಾರ-ವಿಚಾರ, ಹಬ್ಬ-ಹರಿದಿನಗಳು ಈ ಎಲ್ಲಾ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಶ್ರೀಮಂತಿಕೆ ತಿಳಿಯುತ್ತೆ. ಗ್ರಾಮದ ಜೀವನವು ಕುಟುಂಬದ ಆಧಾರದ ಮೇಲೆ ನಿರ್ಧಾರವಾಗಿರುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕುಟುಂಬವು ಪಿತೃಪ್ರಧಾನವಾಗಿದೆ. ತಂದೆಯೇ ಕುಟುಂಬದ ಹಿರಿಯ ಯಜಮಾನ. ಎಲ್ಲರೂ ಆತನಿಗೆ ತಲೆಬಾಗಿ ನಡೆಯುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಕುಟಂಬದಲ್ಲಿ ಸ್ತ್ರೀಯ ಯಜಮಾನಿಕೆಯನ್ನು ಕಾಣಬಹುದು" (ಎಚ್. ಬಸಪ್ಪ : ೨೦೧೨:೩).

ಪ್ರತಿಯೊಂದು ಗ್ರಾಮಗಳಿಗೂ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಹಿರಿಮೆ ಇದ್ದ ಹಾಗೆ ಹ್ಯಾರಡಾ ಗ್ರಾಮಕ್ಕೂ ಇದೆ. ಇಲ್ಲಿರುವ ವಿವಿಧ ಸಂಸ್ಕೃತಿಯ ಸ್ತರಗಳು, ಆಚರಣೆಗಳು, ನಂಬಿಕೆಗಳು, ಜನಪದ ಸಾಹಿತ್ಯ, ಗ್ರಾಮದ ಸಾಮಾಜಿಕ ಜೀವನ ಸಂರಚನೆ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಸ್ಥಿತಿಗತಿಗಳು ಇವುಗಳನ್ನು ಅಧ್ಯಯನ ಮಾಡುವ ಉದ್ದೇಶವಾಗಿದೆ. ಹ್ಯಾರಡಾ ಗ್ರಾಮೀಣ ಜನಪದರಲ್ಲಿ ಆಚರಿಸಲ್ಪಡುವ ವಾರ್ಷಿಕಾವರ್ತನ ಆಚರಣೆಗಳು, ಜೀವನಾವರ್ತನ ಆಚರಣೆಗಳ ಉದ್ದೇಶ, ಮಹತ್ವವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ವಿವಿದ ದೈವಗಳ ಹಿನ್ನೆಲೆ, ಐತಿಹ್ಯ, ವಿವಿಧ ಪಲ್ಲಟಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರ ಮುಖೇನ

ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿ ನಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸುವಂತಹ ಪ್ರಯತ್ನವನ್ನು ಮಾಡಲಾಗಿದೆ.

ಒಂದು ಪ್ರದೇಶದ ಸಂಸ್ಕೃತಿಯನ್ನು ಅರಿಯಬೇಕಾದರೆ ಅಲ್ಲಿಯ ಆಚರಣೆ, ಸಂಪ್ರದಾಯ, ನಂಬಿಕೆ, ದೈವಗಳೊಂದಿಗೆ ಜನಪದರ ಸಂಬಂಧ ಇವುಗಳನ್ನು ಮೊದಲು ಅರಿಯಬೇಕು. ಇವುಗಳನ್ನು ಅರಿಯಬೇಕಾದರೆ ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮೊರೆ ಹೋಗಬೇಕು. ಪ್ರಸ್ತುತ ನನ್ನ ಸಂಶೋಧನೆಯು "ಹ್ಯಾರಡಾ ಗ್ರಾಮಃ ಸಾಂಸ್ಕೃತಿಕ ಸ್ಥಿತ್ಯಂತರ " ಎಂಬ ಶೀರ್ಷಿಕೆಯಡಿಯಲ್ಲಿ ಇಡೀ ಗ್ರಾಮದ ಆಚರಣಾಲೋಕ, ಜೀವನ ಪದ್ಧತಿ, ವಿಧಿ-ನಿಷೇಧಗಳು, ದೈವಗಳೊಂದಿಗೆ ಜನಪದರ ಸಂಬಂಧಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಸಂಪೂರ್ಣ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ್ದು, ಜನಪದರ ಮೌಖಿಕ ಹೇಳಿಕೆಗಳು, ಮೌಖಿಕ ಸಾಹಿತ್ಯ, ಅವರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಸಂಶೋಧನಾ ಮಹಾಪ್ರಬಂಧಗಳು, ಸಂಪಾದಕೀಯ ಲೇಖನಗಳು ಮುಂತಾದ ಆನುಸಂಗಿತ ಮಾಹಿತಿಗಳನ್ನು ಆಕರಗಳನ್ನಾಗಿ ಬಳಸಿಕೊಂಡಿದ್ದೇನೆ. ಒಂದು ಪ್ರದೇಶದ ಜನರ ಜೀವನದ ಮೇಲೆ ಅಲ್ಲಿಯ ಭೌಗೋಳಿಕ ಪ್ರಭಾವವು ಹೆಚ್ಚಾಗಿರುತ್ತದೆ. ಇಂದಿನ ಗ್ರಾಮಗಳ ಬಹುತೇಕ ಸ್ಥಳನಾಮಗಳನ್ನು ಅಭ್ಯಾಸಿಸಿದಾಗ ಪ್ರಾಕೃತಿಕ ಹೆಸರುಗಳು, ಅದರಲ್ಲೂ ವಿಶೇಷವಾಗಿ ಜಲವಾಚಕ, ಭೂವಾಚಕ, ಶಿಲಾವಾಚಕಕ್ಕೆ ಸಂಬಂಧಿಸಿದ ಹೆಸರುಗಳನ್ನು ಕಾಣಬಹುದು. ಈ ಗ್ರಾಮದಲ್ಲಿರುವ ಕೆರೆಗಳು, ಮಣ್ಣಿನ ಸ್ವರೂಪ, ಬೆಳೆಗಳು, ಪ್ರಾಣಿ-ಪಕ್ಷಿ ಸಂಕುಲ, ಸಸ್ಯವರ್ಗ, ಉಷ್ಣತೆ, ಗುಡಿ ಕೈಗಾರಿಕೆಗಳು, ಗ್ರಾಮದ ಪ್ರಮುಖ ಬೀದಿಗಳು-ಓಣಿಗಳು ನೇರವಾಗಿ ಜನಪದರ ಮೇಲೆ ಪ್ರಭಾವವನ್ನು ಬೀರುತ್ತವೆ. ಹೀಗೆ ಜನಪದರು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಪ್ರಸ್ತುತ ಸಂಶೋಧನೆಯಲ್ಲಿ ಸ್ಥಳೀಯ ಭೌಗೋಳಿಕ ಲಕ್ಷಣಗಳು ಜನಪದರ ಮೇಲೆ ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರತಿಯೊಂದು ಗ್ರಾಮಗಳಿಗೆ ಚಾರಿತ್ರಿಕ ಹಿನ್ನೆಲೆ ಇರುತ್ತದೆ. ಅದರಂತೆಯೇ ಹ್ಯಾರಡಾ ಗ್ರಾಮಕ್ಕೆ ಚಾರಿತ್ರಿಕ ಹಿನ್ನೆಲೆಯನ್ನು ಕಾಣಬಹುದಾಗಿದೆ. ಲಭ್ಯವಿರುವ ಶಾಸನಗಳ ಆಧಾರದ ಮೇಲೆ, ಸ್ಥಳೀಯ ಐತಿಹಾಸಿಕ ಸ್ಮಾರಕಗಳನ್ನು ಆಧಾರವಾಗಿಟ್ಟುಕೊಂಡು ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. ಪೂರ್ವಜರು ಬಿಟ್ಟುಹೋಗಿರುವ ಅಪರೂಪದ ಪಳೆಯುಳಿಕೆಗಳು ಎಂದರೆ ಸ್ಮಾರಕಗಳು, ಇವುಗಳ ಮೂಲಕ ಜನಪದರ ಆಶಯ ಜೀವನ ಕ್ರಮವನ್ನು ಅರಿಯಬಹುದಾಗಿದೆ. ಗ್ರಾಮವು ಐತಿಹಾಸಿಕ ಕೋಟೆಯನ್ನು ಹೊಂದಿರುವುದರಿಂದ ಸುದೀರ್ಘವಾದ ಇತಿಹಾಸವನ್ನು ಹೊಂದಿದೆ. ಇದರ ಆಧಾರದ ಮೇಲೆ ಇಲ್ಲಿನ ಜನರ ಜೀವನ, ಸ್ಥಳೀಯ ಚರಿತ್ರೆ ಮುಂತಾದವುಗಳನ್ನು ಚರ್ಚಿಸಲಾಗಿದೆ.

ಒಂದು ನಿರ್ಧಿಷ್ಟ ಸಮುದಾಯವನ್ನು ಅಧ್ಯಯನ ಮಾಡಬೇಕಾದರೆ ಪ್ರಮುಖವಾಗಿ ಅವರ ಜೀವನದ ಕ್ರಮವನ್ನು ಅರಿಯಬೇಕು. ಅವರ ಆಹಾರ ಪದ್ಧತಿ, ಕುಟುಂಬ ಪದ್ಧತಿ, ಉಡುಗೆ-ತೊಡುಗೆ, ವ್ಯಾಪಾರ ಪದ್ಧತಿ, ಬಂಧುತ್ವ ವೈದ್ಯವಿದ್ಯೆ ವಸತಿ, ಕ್ರೀಡೆಗಳು, ವಿವಿಧ ಸಮುದಾಯಗಳೊಂದಿಗೆ

ಸಾಮರಸ್ಯ ಪ್ರಕ್ರಿಯೆ, ವೃತ್ತಿಗಳು ಹೀಗೆ ಅವರ ಸಾಮಾಜಿಕ ಜೀವನ ಸಂರಚನೆಯು ಅವರ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಹಲವು ಆಚರಣೆ, ಜೀವನ ಕ್ರಮ, ಸಂಪ್ರದಾಯಗಳ ಒಟ್ಟು ಕ್ರೋಢೀಕರಣವೇ ಸಂಸ್ಕೃತಿ. ಹೀಗೆ ಗ್ರಾಮೀಣ ಜನಪದರ ಸಂಸ್ಕೃತಿಯ ಅಧ್ಯಯನವೆಂದರೆ ಅವರ ಜೀವನ ಕ್ರಮದ ಅಧ್ಯಯನ ಎಂದರ್ಥ. ಹೀಗೆ ಹ್ಯಾರಡಾ ಗ್ರಾಮದ ಜನಪದರ ಜೀವನ ಕ್ರಮದ ವಿವಿಧ ಘಟ್ಟಗಳನ್ನು ನನ್ನ ಸಂಶೋಧನೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಅದರ ಮುಖೇನ ಅವರ ವಿಶಿಷ್ಟ ಸಂಸ್ಕೃತಿಯನ್ನು ಅನಾವರಣ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಗ್ರಾಮೀಣ ಜನಪದರ ನಂಬಿಕೆ ಮತ್ತು ಆಚರಣೆಗಳು ಅವರ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಇವರ ಸಂಸ್ಕೃತಿಯ ಹೂರಣ ಅಡಗಿರುವುದೇ ನಂಬಿಕೆ ಮತ್ತು ಆಚರಣೆಗಳಲ್ಲಿ, ಗ್ರಾಮೀಣ ಜನಪದರು ತಮ್ಮ ದಿನನಿತ್ಯದ ಜೀವನ ಕ್ರಮದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವಾಗ, ಮಳೆ ಬಾರದಿದ್ದರೆ, ಸುಗ್ಗಿಯ ಕಾಲದಲ್ಲಿ, ತಮ್ಮ ಕುಟುಂಬದಲ್ಲಿ ಹುಟ್ಟು-ಸಾವು, ಜಾತ್ರೆ-ಹಬ್ಬಗಳ ಸಂದರ್ಭದಲ್ಲಿ ಅವರ ಆಚರಣಾ ಲೋಕವನ್ನು ಕಾಣಬಹುದಾಗಿದೆ. ಅದರಂತೆಯೇ ಹ್ಯಾರಡಾ ಗ್ರಾಮದ ಜನಪದರ ಜೀವನಾವರ್ತನ ಆಚರಣೆಗಳು, ವಾರ್ಷಿಕಾವರ್ತನ ಆಚರಣೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ವಿಶಿಷ್ಟ ಸಂಸ್ಕೃತಿಯ ಅಧ್ಯಯನವನ್ನು ಕೈಗೊಳ್ಳಲಾಗಿದೆ. ವಿವಿಧ ಹಬ್ಬಗಳ ಆಚರಣೆ, ವಿಧಿ-ವಿಧಾನಗಳು, ಪ್ರಮುಖವಾಗಿ ಗ್ರಾಮದ ವಿಧಿ-ನಿಷೇಧಗಳ ಬಗ್ಗೆ ಚರ್ಚಿಸಿ ವೈಚಾರಿಕ ನೆಲೆಗಟ್ಟಿನಲ್ಲಿ ಜನಪದರ ಮೂಲ ಆಶಯ ಏನು ಎಂಬುದನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಗ್ರಾಮೀಣ ಜನಪದರು ಪ್ರತಿಯೊಂದು ವಸ್ತುವಿನಲ್ಲಿ ದೈವತ್ವವನ್ನು ಕಂಡುಕೊಂಡವರು. ಪ್ರಕೃತಿಯ ವಸ್ತುಗಳಾದ, ಗಾಳಿ, ಮಳೆ, ಗುಡುಗು, ಸಿಡಿಲು ಮುಂತಾದ ಪ್ರಾಕೃತಿಕ ಅಂಶಗಳನ್ನು ದೈವತ್ವದ ಎತ್ತರಕ್ಕೆ ಕೂರಿಸಿ, ಅವುಗಳನ್ನು ದೈವಗಳ ಹೆಸರಿನಲ್ಲಿ ಪೂಜಿಸುವ ಪ್ರಕ್ರಿಯೆಯನ್ನು ನೋಡಬಹುದಾಗಿದೆ. ಇದರ ಮುಖೇನ ವಿವಿಧ ಆಚರಣೆ, ಸಂಪ್ರದಾಯ ಹಾಗೂ ನಂಬಿಕೆಗಳನ್ನು ಹುಟ್ಟುಹಾಕಿ ಆಚರಣಾ ಲೋಕವನ್ನು ಸೃಷ್ಟಿಸುವುದನ್ನು ಕಾಣಬಹುದಾಗಿದೆ. ಅದರಲ್ಲಿ ವಿಶೇಷವಾಗಿ ಗ್ರಾಮೀಣ ಸ್ತ್ರೀ ದೈವಗಳಿಗೆ ವಿಶೇಷ ಆದ್ಯತೆಯನ್ನು ಕೊಟ್ಟಿರುವುದನ್ನು ಗಮನಿಸಬಹುದು. ಗ್ರಾಮೀಣ ಜನಪದರು ಸ್ತ್ರೀ ದೈವಗಳನ್ನು ಸೃಷ್ಟಿಸುವುದರ ಮೂಲಕ ಸಮಾಜದಲ್ಲಿ ತಿರಸ್ಕರಿಸಲ್ಪಟ್ಟ ಸ್ತ್ರೀಗೆ ದೈವತ್ವದ ಪಟ್ಟ ಕಟ್ಟಿ ಸಾಮಾಜಿಕ ನ್ಯಾಯದ ಹರಿಕಾರರಾದರು. ಪ್ರಸ್ತುತ ನನ್ನ ಸಂಶೋಧನೆಯಲ್ಲಿ ಗ್ರಾಮದಲ್ಲಿ ಸ್ತ್ರೀ ಹಾಗೂ ಪುರುಷ ದೈವಗಳನ್ನು ಬಹುತೇಕವಾಗಿ ಕಾಣಬಹುದು. ಇದರ ಹಿನ್ನೆಲೆಯಲ್ಲಿ ಗ್ರಾಮದ ಪ್ರತಿಯೊಂದು ದೈವಗಳು ಅದರ ಹಿನ್ನೆಲೆ, ಐತಿಹ್ಯ, ಮೌಖಿಕ ಹಾಡುಗಳು, ಜಾತ್ರೆ-ಹಬ್ಬ ಹರಿದಿನಗಳು, ಆಚರಣೆ, ಸಂಪ್ರದಾಯ ಹೀಗೆ ಹಲವಾರು ಅಂಶಗಳನ್ನು ವಿವಿಧ ಮಗ್ಗಲುಗಳಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಮಲಿಯಮ್ಮ ಗ್ರಾಮದೇವತೆಯಾಗಿದ್ದು, ಆಕೆಯ ಸುತ್ತ ಹುಟ್ಟಿಕೊಂಡಿರುವ ಕಥೆ, ಐತಿಹ್ಯ, ಆಚರಣೆಗಳನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಜನಪದರು ಬದುಕಿನ ಸೂಕ್ಷ್ಮ ಸಂಗತಿಗಳನ್ನು, ಬದುಕಿನ ಒಳನೋಟಗಳನ್ನು ತಮ್ಮ ಮೌಖಿಕ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಹ್ಯಾರಡಾ ಗ್ರಾಮದಲ್ಲಿಯೂ ಇಂತಹ ಪರಂಪರೆಯನ್ನು ಕಾಣಬಹುದಾಗಿದೆ. ಆದ್ದರಿಂದ ಈ ದೃಷ್ಟಿಕೋನವಿಟ್ಟುಕೊಂಡು ಸ್ಥಳೀಯ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿ, ಅದರ ಹಿನ್ನೆಲೆ, ಹುಟ್ಟು ಮುಂತಾದ ಸಾಧ್ಯತೆಗಳನ್ನು ಚರ್ಚಿಸಲಾಗಿದೆ. ಗಾದೆಗಳು, ಕಥೆಗಳು, ಒಗಟುಗಳು ಮುಂತಾದ ಮೌಖಿಕ ಸಾಹಿತ್ಯದ ಪರಂಪರೆಯನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಕೃತಿಯಲ್ಲಿರುವ ಪ್ರತಿಯೊಂದು ಪ್ರಾಕೃತಿಕ ವಸ್ತುಗಳು, ನಿರ್ಧಿಷ್ಟ ಪ್ರದೇಶಗಳ ಭೌಗೋಳಿಕ ಅಂಶಗಳು, ಆ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಸಮುದಾಯಗಳ ಜೀವನ ಶೈಲಿ, ಆಚಾರ-ವಿಚಾರ, ಸಂಪ್ರದಾಯ, ಆಚರಣೆ, ನಂಬಿಕೆ, ಆಲೋಚನೆಯ ಕ್ರಮ, ಗತಿಶೀಲತೆಯನ್ನು ಕಂಡುಕೊಳ್ಳುವುದನ್ನು ಕಾಣಬಹುದು. ವಿವಿಧ ಪ್ರಭಾವಗಳಿಗೆ ಒಳಪಟ್ಟು ಹಲವಾರು ಸ್ಥಿತ್ಯಂತರಗಳಿಗೆ ಒಳಗೊಂಡಿರುವುದನ್ನು ಮನಗಾಣಬಹುದು. ಇದೊಂದು ಪ್ರಕೃತಿಯ ಸಹಜ ನಿಯಮವಾಗಿದೆ. ಹ್ಯಾರಡ ಗ್ರಾಮದ ಪ್ರತಿಯೊಂದು ಘಟ್ಟಗಳ ಸ್ಥಿತ್ಯಂತರದ ವ್ಯವಸ್ಥೆಯನ್ನು ಕಂಡು-ಕೊಂಡಿರುವುದನ್ನು ಕಾಣಬಹುದಾಗಿದೆ. ಗ್ರಾಮದ ಬಹುತೇಕ ವಲಯಗಳು ಪಲ್ಲಟಗಳನ್ನು ಒಳಗೊಂಡಿವೆ. ಇದರ ಹಿನ್ನೆಲೆಯಲ್ಲಿ ಅದರ ಸಾಧ್ಯತೆಗಳನ್ನು ಇಲ್ಲಿ ಅಭ್ಯಾಸಿಸಲಾಗಿದೆ. ಪ್ರಮುಖವಾಗಿ ಸಾಮಾಜಿಕ ಸ್ಥಿತ್ಯಂತರ, ಸಾಂಸ್ಕೃತಿಕ ಸ್ಥಿತ್ಯಂತರ, ಶೈಕ್ಷಣಿಕ ಸ್ಥಿತ್ಯಂತರ, ಆರ್ಥಿಕ ಸ್ಥಿತ್ಯಂತರಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ಹೀಗೆ ಒಂದು ಗ್ರಾಮದ ಒಟ್ಟಾರೆ ಆಚರಣಾ ಲೋಕ, ಜೀವನ ಕ್ರಮ, ವಿವಿಧ ಘಟ್ಟಗಳ ಸ್ಥಿತ್ಯಂತರ, ವಿಭಿನ್ನ ಸಂಸ್ಕೃತಿ, ಮೌಖಿಕ ಸಾಹಿತ್ಯ, ಶಿಷ್ಟ ಸಾಹಿತ್ಯ ಮುಂತಾದವುಗಳನ್ನು ಕ್ಷೇತ್ರಕಾರ್ಯದ ಮೂಲಕ ನನ್ನ ಮಿತಿಯೊಳಗೆ ಮಾಹಿತಿ ಸಂಗ್ರಹಿಸಿ, ಚರ್ಚಿಸಿ, ವಿಶ್ಲೇಷಣೆಗೆ ಒಳಪಡಿಸಿ ಈ ಸಂಶೋಧನಾ ಮಹಾ ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

೧.೨. ಅಧ್ಯಯನದ ಉದ್ದೇಶ

"ಇತಿಹಾಸವನ್ನು ತಿಳಿಯದವನು ಇತಿಹಾಸವನ್ನು ಸೃಷ್ಟಿಸಲಾರ" ಎಂಬ ಡಾ.ಬಿ.ಆರ್. ಅಂಬೇಡ್ಕರರ ಮಾತು ಈ ಅಧ್ಯಯನದ ಉದ್ದೇಶ ಹಾಗೂ ಮಹತ್ವವನ್ನು ಸಾರುತ್ತದೆ. ನಾವು ಪ್ರಾಚೀನ ಕಾಲದಿಂದಲೂ ಇತಿಹಾಸವನ್ನು ಅಧ್ಯಯನ ಮಾಡಿದಾಗ ಧರ್ಮ-ಧರ್ಮಗಳ ನಡುವೆ, ಸಮುದಾಯ- ಸಮುದಾಯಗಳ ನಡುವೆ, ಸಂಸ್ಕೃತಿ-ಸಂಸ್ಕೃತಿಗಳ ನಡುವೆ, ವರ್ಗ-ವರ್ಗಗಳ ನಡುವೆ ಹಲವಾರು ಸಂಘರ್ಷಗಳು ನಡೆದಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಪ್ರಾಚೀನ ಭಾರತದಲ್ಲಿ ಆರ್ಯರು ಹಾಗೂ ದ್ರಾವಿಡರ ಮಧ್ಯೆ ಇರುವ ಸಂಘರ್ಷವು ವಿಭಿನ್ನ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು. ಇಂತಹ ಸಂಘರ್ಷದ ಮೂಲ ಬೇರುಗಳ ಬಗ್ಗೆ ಅಧ್ಯಯನ ಮಾಡಬೇಕಾಗಿರುವುದು ಅತ್ಯಂತ ಜರೂರು ಕೆಲಸವಾಗಿದೆ. ಯಾವ ಕಾಲಘಟ್ಟದಲ್ಲಿ ಹಂತ-ಹಂತವಾಗಿ ಬದಲಾವಣೆಗಳು ಕಂಡವು, ಅವು ಬೆಳೆದು ಬಂದ ಬಗೆ, ಮುಂದೆ ಆಗಬಹುದಾದ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಬೇಕಿದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಸಮುದಾಯಗಳು ವಿವಿಧ ಸ್ಥಿತ್ಯಂತರಗಳಿಗೆ ಒಳಪಟ್ಟು ಹೇಗೆ

ತಮ್ಮ ಸಾಮ್ರಾಜೀಕರಣದ ವ್ಯವಸ್ಥೆಯನ್ನು ಗಟ್ಟಿಗೊಳಿಸಿಕೊಂಡವು ಎಂಬ ಅಂಶವನ್ನು ಅಧ್ಯಯನಕ್ಕೊಳಪಡಿಸುವ ತುರ್ತು ಇದೆ. ಆದ್ದರಿಂದ ಗ್ರಾಮಗಳ ಅಧ್ಯಯನದ ಮಹತ್ವ ಎದ್ದು ಕಾಣುತ್ತಿದೆ.

ನಾವು ಇತಿಹಾಸವನ್ನು ಸಿಂಹಾವಲೋಕನ ಮಾಡಿದರೆ ಕೇವಲ ರಾಜ–ಮಹಾರಾಜರುಗಳ ಯುದ್ಧ, ಪಟ್ಟಾಭಿಷೇಕಗಳು, ದಾನಗಳು, ಸಾಮಂತರು, ದಿಗ್ವಜಯಗಳ ಸರಮಾಲೆಗಳನ್ನೇ ಕಾಣುತ್ತೇವೆ. ಯಾವೊಬ್ಬ ಇತಿಹಾಸಕಾರನು ಸಾಮಾನ್ಯ ಜನರ ಜೀವನ ಶೈಲಿ, ಆಚರಣೆ, ಸಂಪ್ರದಾಯ, ನಂಬಿಕೆ, ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಲಿಲ್ಲ. ಒಟ್ಟಾರೆಯಾಗಿ ಗ್ರಾಮೀಣ ಜನರ ಸಾಂಸ್ಕೃತಿಕ ಹಿರಿಮೆಯನ್ನು ಉಲ್ಲೇಖಿಸಿಲ್ಲ. ಇಂತಹ ಗ್ರಾಮೀಣ ಜನಪದರ ಸಾಂಸ್ಕೃತಿಕ ಬದುಕು ಹೇಗಿತ್ತು ಎಂಬುದರ ಅಧ್ಯಯನದ ಮಹತ್ವ ಎದ್ದು ಕಾಣುತ್ತಿದೆ. ಯಾವುದೇ ಒಂದು ಸಂಸ್ಥೆಯಾಗಲೀ, ಸಂಘವಾಗಲೀ, ಕ್ಷೇತ್ರವಾಗಲೀ ಗತಿಶೀಲತೆಯನ್ನು ಕಾಣಬೇಕಾದರೆ ಅಲ್ಲಿರುವ ವ್ಯಕ್ತಿಗಳ ಪಾತ್ರ ಬಹುಮುಖ್ಯವಾದುದು. ಒಂದು ದೇಶದ ಸಂಸ್ಕೃತಿಯನ್ನು ಅರಿಯಬೇಕಾದರೆ ಗ್ರಾಮೀಣ ಸಮುದಾಯದ ಜನಪದರ ಅಧ್ಯಯನ ಪ್ರಮುಖವಾದುದು. ಭಾರತವು ಹಳ್ಳಿಗಳ ನಾಡಾಗಿದ್ದರೂ ಭವ್ಯ ಪರಂಪರೆಯ ಆಗರವಾಗಿದೆ. ಗ್ರಾಮೀಣ ಜನಪದರಲ್ಲಿ ನಂಬಿಕೆಯೇ ಮೂಲ ಆಧಾರ. ಅವರ ನಂಬಿಕೆಯ ಮೇಲೆ ವಿವಿಧ ಆಚರಣೆ, ಸಂಪ್ರದಾಯಗಳು ಹುಟ್ಟಿಕೊಂಡಿವೆ. ಇಂತಹ ವಿಭಿನ್ನ ಸಂಸ್ಕೃತಿಗಳ ಮಹತ್ವವನ್ನು ಅಧ್ಯಯನದ ಮೂಲಕ ಅನಾವರಣಗೊಳ್ಳಬೇಕಾಗಿದೆ.

ಹ್ಯಾರಡಾದಂತಹ ಗ್ರಾಮವು ವಿಭಿನ್ನ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿದೆ. ವಿಪುಲವಾದ ಜನಪದ ಸಾಹಿತ್ಯವನ್ನು ಹೊಂದಿದೆ. ಚಾರಿತ್ರಿಕವಾದ ಇತಿಹಾಸವನ್ನು ಹೊಂದಿದೆ. ಹ್ಯಾರಡಾ ಗ್ರಾಮದ ಜನಪದರ ಆಹಾರ ಪದ್ಧತಿ, ವಸತಿ ನಿರ್ಮಾಣ, ಕುಟುಂಬ ಪದ್ದತಿ, ಉಡುಗೆ–ತೊಡುಗೆ, ವೃತ್ತಿ, ಕ್ರೀಡೆಗಳು, ವೈದ್ಯ–ವಿದ್ಯೆ, ನ್ಯಾಯಿಕ ವ್ಯವಸ್ಥೆ, ವಿವಿಧ ಸಮುದಾಯಗಳ ಸಾಮರಸ್ಯ, ಸಾರಿಗೆ ವ್ಯವಸ್ಥೆ, ಬೇಟೆ, ವಿವಾಹ ಪದ್ಧತಿ, ವಿಭಿನ್ನವಾದ, ವಿಶಿಷ್ಟವಾದ ಪರಂಪರೆಯನ್ನು ಹೊಂದಿವೆ. ಇವುಗಳನ್ನು ಅಧ್ಯಯನಕ್ಕೆ ಒಳಪಡಿಸುವದರ ಜೊತೆ–ಜೊತೆಗೆ ಗ್ರಾಮವು ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಹೇಗೆ ವಿವಿಧ ಪಲ್ಲಟಗಳನ್ನು ಹೊಂದಿತು ಎಂಬುದನ್ನು ವಿಮರ್ಶೆಗೆ ಒಳಪಡಿಸಿಲಾಗಿದೆ. ಇದರ ಮುಖೇನ ಹ್ಯಾರಡಾ ಗ್ರಾಮದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಹ್ಯಾರಡಾದ ಭೌಗೋಳಿಕ ಲಕ್ಷಣಗಳು ಇಲ್ಲಿನ ಗ್ರಾಮೀಣ ಜನಪದರ ಮೇಲೆ ಹೇಗೆ ಪರಿಣಾಮಗಳನ್ನುಂಟುಮಾಡಿವೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿವಿಧ ದೈವಗಳ ಮೂಲ, ಆಚರಣೆ, ಜನಪದ ಸಾಹಿತ್ಯ, ಜನಪದ ಗೀತೆ, ಜನಪದ ಕಥೆ, ಗಾದೆಗಳು, ಒಗಟುಗಳಿಗೆ ಹ್ಯಾರಡಾ ಜನಪದರ ಕೊಡುಗೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇತ್ತೀಚಿಗೆ ಪಾಶ್ಚಾತ್ಯ ಸಂಸ್ಕೃತಿಯ ಅಬ್ಬರದಿಂದಾಗಿ ಗ್ರಾಮೀಣ ಸಂಸ್ಕೃತಿಯು ನಶಿಸಿ ಹೋಗುತ್ತಿದೆ. ಇಂತಹ ಸಂಸ್ಕೃತಿಯನ್ನು ಕಟ್ಟಿಕೊಟ್ಟು ಮುಂದಿನ ಪೀಳಿಗೆಗೆ ವರ್ಗಾಯಿಸುವಂತಹ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆಯಾಗಿ ಹ್ಯಾರಡ ಗ್ರಾಮ ಸಂಸ್ಕೃತಿಯ ಸ್ಥಿತ್ಯಂತರವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಭೌಗೋಳಿಕ ಸ್ಥಿತ್ಯಂತರ, ದೈವಗಳ ಆಚರಣೆಗಳ ಸ್ಥಿತ್ಯಂತರ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ಥಿತ್ಯಂತರ, ಸಾಹಿತ್ಯಿಕ ಸ್ಥಿತ್ಯಂತರಗಳನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಒಟ್ಟು ಗ್ರಾಮವನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ಕ್ಷೇತ್ರ ಕಾರ್ಯದ ಮೂಲಕ ವಿವಿಧ ಸೈದ್ಧಾಂತಿಕ ನೆಲೆಗಟ್ಟಿನೊಂದಿಗೆ ಗ್ರಾಮದ ವಿಶಿಷ್ಟ ಸಂಸ್ಕೃತಿಯನ್ನು ಈ ಮಹಾಪ್ರಬಂಧದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ಮಹಾಪ್ರಬಂಧದಲ್ಲಿ ಗ್ರಾಮದ ಭೌಗೋಳಿಕ ಹಾಗೂ ಚಾರಿತ್ರಿಕ ಇತಿಹಾಸವನ್ನು ಕಟ್ಟಿಕೊಳ್ಳುವುದರ ಮುಖಾಂತರ, ಜನಪದರ ಮೇಲೆ ಬೀರಿದ ಪರಿಣಾಮಗಳನ್ನು ಇಲ್ಲಿ ಅಭ್ಯಾಸಿಸಲಾಗಿದೆ.

ಗ್ರಾಮದ ಎಲ್ಲಾ ಸಮುದಾಯಗಳ ಸಾಮಾಜಿಕ ಜೀವನ ಸಂರಚನೆಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸುವುದರ ಮೂಲಕ ಗ್ರಾಮದ ಜನಪದರ ಕುಟುಂಬ ಪದ್ದತಿ, ವಸತಿ ವ್ಯವಸ್ಥೆ, ಆಹಾರ ಪದ್ಧತಿ, ಸಾರಿಗೆ ವ್ಯವಸ್ಥೆ, ಉಡುಗೆ-ತೊಡುಗೆ, ಕ್ರೀಡೆಗಳು, ವೃತ್ತಿ, ವೈದ್ಯವಿದ್ಯೆ, ವಿವಾಹ ಪದ್ದತಿ, ವ್ಯಾಪಾರ ಇನ್ನಿತರ ಅಂಶಗಳನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಚರ್ಚಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಗ್ರಾಮದ ದೈವಗಳ ಸಾಂಸ್ಕೃತಿಕ ಆಚರಣೆಗಳು, ದೈವಗಳೊಂದಿಗೆ ಜನಪದರ ಸಂಬಂಧ, ವಿವಿಧ ಸ್ತ್ರೀ ಹಾಗೂ ಪುರುಷ ದೈವಗಳ ಪರಿಚಯ, ದೈವಗಳೊಂದಿಗೆ ಹುಟ್ಟಿಕೊಂಡ ಮೌಖಿಕ ಸಾಹಿತ್ಯ, ಕಥೆ, ಗಾದೆ, ಒಗಟು ಹಾಗೂ ಭಕ್ತಿ ಪರಂಪರೆಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅದರಲ್ಲಿ ವಿಶೇಷವಾಗಿ ಗ್ರಾಮ ದೇವತೆಯಾದ ಮಲಿಯಮ್ಮನ ಜಾತ್ರೆ, ಪರುವು, ವಿಶಿಷ್ಟ ಆಚರಣಾ ಪದ್ದತಿಯನ್ನು ಈ ಮಹಾಪ್ರಬಂಧದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಗ್ರಾಮದ ಜನಪದರ ವಾರ್ಷಿಕಾವರ್ತನ, ಜೀವನಾವರ್ತನ ಆಚರಣೆಗಳು, ಪದ್ದತಿ, ನಂಬಿಕೆ, ಸಂಪ್ರದಾಯ ಹಾಗೂ ವಿಧಿ-ನಿಷೇಧಗಳ ಬಗ್ಗೆ ಚರ್ಚಿಸಿ, ವಿಶಿಷ್ಟ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿಯ ಜನಪದರ ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಗಳನ್ನು ಚರ್ಚಿಸಿ ವಿವಿಧ ಸ್ಥಿತ್ಯಂತರಗಳನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

೧.೪ ಅಧ್ಯಯನದ ಮಹತ್ವ

ಗ್ರಾಮದಲ್ಲಿರುವ ಬಹುತೇಕ ದೈವಗಳು, ಅವುಗಳ ಆಚರಣೆ, ಸಂಪ್ರದಾಯ, ನಂಬಿಕೆಗಳು ನೇರವಾಗಿ ಇಲ್ಲಿಯ ಜನಪದರ ಮೇಲೆ ಪ್ರಭಾವ ಬೀರಿರುವುದರಿಂದ, ತಮ್ಮನ್ನು ತಾವು ಈ ಆಚರಣೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬ ಅಂಶವನ್ನು ಇಲ್ಲಿ ಅರಿಯಲಾಗಿದೆ. ಅದರಲ್ಲಿ ಪ್ರಮುಖವಾಗಿ ಗ್ರಾಮ ದೇವತೆಯಾದ ಮಲಿಯಮ್ಮನ ಜಾತ್ರೆ, ಪರುವು, ವಿವಿಧ ಆಚರಣೆಗಳು,

ಜನಪದರು ಈ ದೈವದೊಂದಿಗಿನ ನಂಬಿಕೆ, ಸಂಬಂಧ, ಸಂಪ್ರದಾಯಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಗ್ರಾಮದಲ್ಲಿ ಪ್ರತಿಯೊಂದು ದೈವಗಳೊಂದಿಗೆ ಇಲ್ಲಿನ ಜನಪದರು ಹೊಂದಿರುವ ಸಂಬಂಧ, ವಿಧಿ-ವಿಧಾನಗಳ ಅಧ್ಯಯನವನ್ನು ಮಾಡಲಾಗಿದೆ. ಇದರ ಮುಖೇನ ಅವರ ಸಾಂಸ್ಕೃತಿಕ ಆಚರಣಾ ಲೋಕವನ್ನು ಓರೆಗೆ ಹಚ್ಚಲಾಗಿದೆ. ವಿವಿಧ ದೈವಗಳೊಂದಿಗೆ ಹುಟ್ಟಿಕೊಂಡ ಐತಿಹ್ಯ ಜನಪದ ಸಾಹಿತ್ಯವನ್ನು ಪ್ರಮುಖ ಭೂಮಿಕೆಯನ್ನಾಗಿ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಗ್ರಾಮದ ಜನಪದರ ವಾರ್ಷಿಕಾವರ್ತನ, ಜೀವನಾವರ್ತನ ಆಚರಣೆಗಳು ಹಾಗು ವಿಧಿ-ನಿಷೇಧಗಳ ಬಗ್ಗೆ ಅಧ್ಯಯನ ಮಾಡಿ, ವಿಶಿಷ್ಟ ಸಂಸ್ಕೃತಿಯನ್ನು ಅರಿಯಲಾಗಿದೆ. ಈ ಆಚರಣೆಗಳ ಹಿನ್ನೆಲೆಯಲ್ಲಿ ಮುಂದಿನ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಗ್ರಾಮವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವುದರಿಂದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಳ್ಳುವುದರ ಮೂಲಕ ಮುಂದಿನ ಪೀಳಿಗೆಗೆ ಇದನ್ನು ವರ್ಗಾಯಿಸುವ ಪ್ರಯತ್ನವನ್ನು ಮಾಡಲಾಗಿದೆ.

ಇಲ್ಲಿಯ ಜನಪದರು ವಿಶಿಷ್ಟ ಸಾಮಾಜಿಕ ಜೀವನ ಸಂರಚನೆಯನ್ನು ಹೊಂದಿರುವುದರಿಂದ ಅವರ ಜೀವನ ಕ್ರಮವನ್ನು ಅನಾವರಣಗೊಳಿಸಲಾಗಿದೆ. ಇದರ ಮುಖಾಂತರ ವಿವಿಧ ಸಮುದಾಯಗಳೊಂದಿಗೆ ಇರುವ ಸಾಮರಸ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿವಿಧ ಸಮುದಾಯಗಳ ಹಿನ್ನೆಲೆಯಲ್ಲಿ ವಿವಿಧ ಆಚರಣೆಗಳು, ಆಹಾರ ಪದ್ಧತಿ, ವೃತ್ತಿ, ವ್ಯಾಪಾರ, ವಸತಿ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ವಿವಿಧ ಸಮುದಾಯಗಳ ಆರ್ಥಿಕ ಸ್ಥಿತಿಗತಿಗಳು, ಶೈಕ್ಷಣಿಕ ಸ್ಥಿತಗತಿಗಳು, ರಾಜಕೀಯ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿ, ಮುಂದಿನ ಸಾಧ್ಯತೆಗಳು, ಪರಿಣಾಮಗಳ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಗ್ರಾಮವು ಹಂತ-ಹಂತವಾಗಿ ಆಧುನಿಕಗೊಂಡಿರುವ ಪರಿಯನ್ನು ಅಧ್ಯಯನ ಮಾಡಲಾಗಿದೆ.

೧.೫. ಸಂಶೋಧನಾ ವಿಧಾನ

ಪ್ರಸ್ತುತ ಮಹಾಪ್ರಬಂಧವು "ಹ್ಯಾರಡಾ ಗಾಮ : ಸಾಂಸ್ಕೃತಿಕ ಸ್ಥಿತ್ಯಂತರ" ಎಂಬ ಶೀರ್ಷಿಕೆಯಡಿ ಸಂಪೂರ್ಣವಾಗಿ ಕ್ಷೇತ್ರಕಾರ್ಯದಿಂದ ಮಾಹಿತಿಗಳನ್ನು ಸಂಗ್ರಹಿಸಿದ್ದು, ಜಾನಪದೀಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜಾನಪದೀಯ ಅಂಶಗಳು ಸದಾ ಪ್ರಯೋಗಾತ್ಮಕ ಹಾಗೂ ಕೊನೆಯಿರದ ಕ್ಷೇತ್ರ ಎಂಬ ತಜ್ಞರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು, ಬಹು ಆಯಾಮದಡಿಯಲ್ಲಿ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇಲ್ಲಿ ಚರ್ಚಿಸಿದ ವಿಷಯಗಳು ಸ್ಥಳೀಯ ಜನಪದರ ಅಭಿಪ್ರಾಯ, ಮಾಹಿತಿ ಅನುಭವದ ಮೂಸೆಯಲ್ಲಿ ಮೂಡಿಬಂದ ಸಂಗತಿಗಳಾಗಿವೆ. ಈ ಸಂಗತಿಗಳನ್ನು ವಿವಿಧ ವಿಧಾನಗಳ ಮೂಲಕ, ವಿವಿಧ ಸಲಕರಣೆಗಳ ಮೂಲಕ ಸಂಗ್ರಹಿಸಿದ್ದು, ಪ್ರಸ್ತುತ ಸಂಶೋಧನೆಗೆ ಪ್ರಾಮಾಣಿಕ ನ್ಯಾಯವನ್ನು ಒದಗಿಸುವ ಪ್ರಯತ್ನವನ್ನು ಇಲ್ಲಿ ಕೈಗೊಳ್ಳಲಾಗಿದೆ.

೧.೫.೧ ಮಾಹಿತಿ ಸಂಗ್ರಹದ ವಿಧಾನ ಮತ್ತು ಬಳಸಿದ ಸಲಕರಣೆಗಳು

ಈ ಸಂಶೋಧನೆಯಲ್ಲಿ ಆನುಸಂಗಿಕ ಮಾಹಿತಿಗಳನ್ನು ಹೊರತುಪಡಿಸಿ, ಬಹುತೇಕ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಹೀಗೆ ಮಾಹಿತಿಗಳನ್ನು ಸಂಗ್ರಹಿಸುವಾಗ ಹಲವಾರು ವಿಧಾನಗಳನ್ನು ಹಾಗೂ ಸಲಕರಣೆಗಳನ್ನು ಬಳಸಲಾಗಿದೆ. ಸಂದರ್ಶನ, ಪ್ರಶ್ನಾವಳಿ, ಅವಲೋಕನದಂತಹ ವಿಧಾನಗಳನ್ನು ಅನುಸರಿಸಿದ್ದು, ಮೊಬೈಲ್, ಕ್ಯಾಮರಾ, ಧ್ವನಿಮುದ್ರಣ ಯಂತ್ರ ಕಂಪ್ಯೂಟರ್ ಮುಂತಾದ ಸಲಕರಣೆಗಳನ್ನು ಮಾಹಿತಿಗಳ ಸಂಗ್ರಹಕ್ಕಾಗಿ ಬಳಸಲಾಗಿದೆ.

೧.೫.೨ ಪ್ರಾಥಮಿಕ ಮಾಹಿತಿ ಸಂಗ್ರಹದ ವಿಧಾನಗಳು

ಈ ಸಂಶೋಧನೆಗೆ ಬೇಕಾಗುವ ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಲು ಹಲವು ವಿಧಾನಗಳನ್ನು ಅನುಸರಿಸಿದ್ದು, ಅವುಗಳಲ್ಲಿ ಪ್ರಮುಖವಾಗಿ ಸಂದರ್ಶನ, ಅವಲೋಕನ, ಪ್ರಶ್ನಾವಳಿಯಂತಹ ಪ್ರಮುಖ ಮೂರು ವಿಧಾನಗಳನ್ನು ಅನುಸರಿಸಲಾಗಿದೆ.

೧.೫.೨.೧ ಸಂದರ್ಶನ ವಿಧಾನ

ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಲು ಈ ವಿಧಾನ ಬಹು ಜನಪ್ರಿಯವಾಗಿದೆ. ವಕ್ತೃಗಳಿಗೆ ನೇರವಾಗಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಗಳನ್ನು ಸಂಗ್ರಹಿಸುವ ಪದ್ಧತಿಯನ್ನು ಇಲ್ಲಿ ಅನುಸರಿಸಿದ್ದೇನೆ. ಗ್ರಾಮದ ದೈವಗಳು, ಮೌಖಿಕ ಸಾಹಿತ್ಯ, ಸಾಮಾಜಿಕ ಜೀವನದ ಸಂರಚನೆಯ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ.

ಗ್ರಾಮದ ಸ್ಥಳನಾಮ, ನಿಷ್ಪತ್ತಿ, ಐತಿಹ್ಯದ ಬಗ್ಗೆ ಅಧ್ಯಯನ ಮಾಡಿ ಐದು ವಕ್ತೃಗಳನ್ನು ಸಂದರ್ಶಿಸಲಾಯಿತು. ಚಾರಿತ್ರಿಕ ಹಿನ್ನೆಲೆ ಬಗ್ಗೆ ಅಧ್ಯಯನ ಮಾಡಲು ನಾಲ್ಕು ವಕ್ತೃಗಳನ್ನು ಸಂದರ್ಶಿಸಲಾಯಿತು. ಗ್ರಾಮದ ಸಾಮಾಜಿಕ ಜೀವನ ಸಂರಚನೆಯ ಬಗ್ಗೆ ಅಭ್ಯಾಸಿಸಲು ಇಪ್ಪತ್ತು ವಕ್ತೃಗಳನ್ನು, ಗ್ರಾಮದ ಆಚರಣೆಗಳನ್ನು ಗ್ರಾಮದ ದೈವಗಳ ಬಗ್ಗೆ ಮಾಹಿತಿ ಪಡೆಯಲು ಮೂವತ್ತೆರಡು ವಕ್ತೃಗಳನ್ನು, ಗ್ರಾಮದ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಹತ್ತು ವಕ್ತೃಗಳನ್ನು, ಮಲಿಯಮ್ಮನ ಹುಟ್ಟು, ಸಂಪ್ರದಾಯ, ಆಚರಣೆ, ಜಾತ್ರೆ, ಪರುವು ಹಾಗೂ ಐತಿಹ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಎಂಟು ವಕ್ತೃಗಳನ್ನು ಸಂದರ್ಶಿಸಲಾಯಿತು.

ಈ ಸಂಶೋಧನೆಯನ್ನು ಕೈಗೊಳ್ಳಲು ಒಟ್ಟಾರೆ ಒಂದು ನೂರು ವಕ್ತೃಗಳನ್ನು ಸಂದರ್ಶಿಸಿ, ಸಮಗ್ರ ಮಾಹಿತಿಯನ್ನು ಪಡೆಯಲಾಯಿತು. ಸ್ಥಳೀಯ ಜನಪದರು ತಮ್ಮ ಮಿತಿಯೊಳಗೆ ತಮಗೆ ಗೊತ್ತಿರುವ ವಿಷಯಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ನಾನು ಗುರ್ತಿಸಿದ ಪ್ರಕಾರ ಗ್ರಾಮದ ಎಲ್ಲಾ ದೈವಗಳೊಂದಿಗೆ ಇರುವ ಅನ್ಯೋನ್ಯ ಸಂಬಂಧ, ನಂಬಿಕೆ, ಆಚರಣೆ, ಸಂಪ್ರದಾಯ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ನನ್ನ ಮನವಿಯನ್ನು ಮನ್ನಿಸಿ ಸಹಾನುಭೂತಿಯಿಂದ ಮಾಹಿತಿಗಳನ್ನು ಒದಗಿಸಿದರು.

೧.೫.೨.೨ ಅವಲೋಕನ ವಿಧಾನ

ಈ ವಿಧಾನವನ್ನು ಪ್ರಮುಖವಾಗಿ ಗ್ರಾಮದ ಸಾಮಾಜಿಕ ಜೀವನದ ಸ್ಥಿತಿಯನ್ನು ಅಧ್ಯಯನ ಮಾಡಲು ಅನುಸರಿಸಲಾಯಿತು. ಗ್ರಾಮದ ವಿವಿಧ ಸಮುದಾಯಗಳ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿಗಳನ್ನು ಅವಲೋಕಿಸಿ, ಕುಟುಂಬದ ಭಾಂದವ್ಯ, ಆಚರಣೆಗಳು, ದೈವಗಳ ಭಕ್ತಿ, ಧಾರ್ಮಿಕ ನಂಬಿಕೆ, ವಿವಿಧ ಸಮುದಾಯಗಳ ಪೂಜಾ ವಿಧಾನಗಳನ್ನು ಅವಲೋಕಿಸಿ ಮಾಹಿತಿಗಳನ್ನು ಪಡೆಯಲಾಯಿತು.

೧.೫.೨.೩ ಪ್ರಶ್ನಾವಳಿ ವಿಧಾನ

ಪ್ರಶ್ನಾವಳಿಯು ಅನೇಕ ಪ್ರಶ್ನೆಗಳ ಸರಣಿಯಾಗಿದ್ದು, ದತ್ತಾಂಶಗಳ ಸಂಗ್ರಹಣೆಯಲ್ಲಿ ಅತ್ಯುತ್ತಮ ವಿಧಾನವಾಗಿದೆ. ಪ್ರಶ್ನಾವಳಿಯಲ್ಲಿ ಹೌದು/ಅಲ್ಲ ಎನ್ನುವ ಪೂರ್ಣ ರೀತಿಯ ಪ್ರಶ್ನೆಗಳಿದ್ದು, ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ಪ್ರಮುಖವಾದ ಘಟ್ಟವಾಗಿದೆ. ಈ ಸಂಶೋಧನೆಗೆ ಪೂರಕವಾದ ಪ್ರಶ್ನೆಗಳನ್ನು ಮೊದಲೇ ತಯಾರಿಸಿಕೊಂಡಿದ್ದು, ಸಂದರ್ಶನದ ಅವಧಿಯಲ್ಲಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಗಳನ್ನು ಸಂಗ್ರಹಿಸುವ ಪ್ರಯತ್ನವನ್ನು ಮಾಡಿದ್ದೇನೆ. ಏಕೆ? ಏನು? ಹೇಗೆ? ಎಂಬ ಸರಣಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ.

ಅದರಲ್ಲಿ ಪ್ರಮುಖವಾಗಿ ಗ್ರಾಮದೈವಗಳ ಬಗ್ಗೆ ಪ್ರಶ್ನಿಸಲಾಯಿತು. ಉದಾಹರಣೆಗೆ ಮಲಿಯಮ್ಮನ ಜಾತ್ರೆಯಲ್ಲಿ ಹುಲುಸನ್ನು ಹೊಡೆಯುವ ಉದ್ದೇಶ ಏನು? ಮಲಿಯಮ್ಮನ ಗುಡಿಯ ಮುಂದಿನ ಗುಡ್ಡವನ್ನು 'ಗಾಗುರಿಮಲ್ದಿ' ಎಂದು ಕರೆಯಲು ಕಾರಣವೇನು? ಮಲಿಯಮ್ಮ ದೇವಿಯ ಮೂಲದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಕೋಣವನ್ನು ಅಂಕೆಗೆ ಹಾಕುವ ಉದ್ದೇಶವೇನು? ಮಲಿಯಮ್ಮನ ಪೋತರಾಜನ ಬಗ್ಗೆ ತಿಳಿಸಿ? ಬಸವ ಜಯಂತಿ ದಿನ ಸಂಗಮೇಶ್ವರನ ಕೆಂಡ ಹಾಯುವ ಉದ್ದೇಶವೇನು? ಅಲ್ಲಾವುದ್ದೀನ್ ಪವಾಡ ಪುರುಷನ ಬಗ್ಗೆ ನಿಮ್ಮ ನಂಬಿಕೆ ಏನು? ಹೀಗೆ ವಿವಿಧ ಪ್ರಶ್ನಾವಳಿಯ ಸರಣಿಗಳನ್ನು ಬಳಸಿಕೊಂಡು ವಕ್ತೃಗಳಿಂದ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ. ಎಲ್ಲಾ ವಯೋಮಾನದ ಜನಪದರನ್ನು ಸಂದರ್ಶಿಸುವ ಪ್ರಯತ್ನವನ್ನು ಮಾಡಿದ್ದೇನೆ.

೧.೫.೩ ಆನುಸಂಗಿಕ ಮಾಹಿತಿಗಳ ಸಂಗ್ರಹ ವಿಧಾನಗಳು

ಸಂಶೋಧನೆಯಲ್ಲಿ ಆನುಸಂಗಿಕ ಮಾಹಿತಿಗಳು ತುಂಬಾ ಮಹತ್ವದ ಅಂಶಗಳಾಗಿವೆ. ಸಂಶೋಧನೆಯಲ್ಲಿ ಸಮಸ್ಯೆಯ ಸ್ಪಷ್ಟೀಕರಣ ಹಾಗೂ ಪರಿಹಾರ ಕಂಡುಕೊಳ್ಳುವಲ್ಲಿ ತಜ್ಞರ ಅಭಿಪ್ರಾಯದ ಹಿನ್ನೆಲೆಯಲ್ಲಿ ಪರಿಹರಿಸಿಕೊಳ್ಳಬಹುದಾಗಿದೆ. ನಾನು ಕಂಡುಕೊಂಡ ಆನುಸಂಗಿಕ ಮಾಹಿತಿಗಳ ವಿವರ ಹೀಗಿವೆ. ಪ್ರಸ್ತುತ ಮಹಾಪ್ರಬಂಧಕ್ಕೆ ಪೂರಕವಾಗಿರುವ ವಿವಿಧ ಪುಸ್ತಕಗಳು, ಲೇಖನಗಳ ಅಂಕಣಗಳು, ಈಗಾಗಲೇ ಮಂಡನೆಯಾದ ಮಹಾಪ್ರಬಂಧಗಳು, ಯಾವುದೋ ರೂಪದಲ್ಲಿ ದಾಖಲಾಗಿರುವ ಮೌಖಿಕ ಸಾಹಿತ್ಯಗಳು, ಅನುವಾದಿತ ಕೃತಿಗಳು, ಸಂಪಾದಿತ ಕೃತಿಗಳು ಹಾಗೂ ನಿಯತಕಾಲಿಕೆಯಲ್ಲಿ ಪ್ರಕಟಿತವಾದ ಬರಹಗಳನ್ನು ಆನುಸಂಗಿಕ ಮಾಹಿತಿಗಳಾಗಿ ಸಂಗ್ರಹಿಸಲಾಗಿದೆ.

* ಬಳಸಿದ ಉಪಕರಣಗಳು

ಪ್ರಸ್ತುತ ಸಂಶೋಧನೆಯಲ್ಲಿ ಮಾಹಿತಿಗಳನ್ನು ಸರಳವಾಗಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲು ಆಧುನಿಕ ಉಪಕರಣಗಳು ಬಹಳಷ್ಟು ನೆರವಾದವು. ಇವುಗಳ ನೆರವಿನಿಂದ ವಸ್ತುನಿಷ್ಠ, ಪ್ರಾಮಾಣೀಕೃತ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಲು ಸಹಾಯಕವಾದವು. ಅವುಗಳು ಕೆಳಕಂಡಂತಿವೆ.

* ಮೊಬೈಲ್

ನನ್ನ ಸಂಶೋಧನೆಗೆ ಬೇಕಾಗುವ ಹಲವು ಮಾಹಿತಿಗಳನ್ನು ರೆಕಾರ್ಡ್ ಮಾಡಲು, ಪೋಟೋ ತೆಗೆಯಲು, ವೀಡಿಯೋ ಚಿತ್ರೀಕರಣ ಮಾಡಲು, ಅತ್ಯಂತ ವೇಗವಾಗಿ ಮಾಹಿತಿಗಳನ್ನು ಸಂಗ್ರಹಿಸಿ ಸಂಶೋಧನೆಯನ್ನು ಕೈಗೊಳ್ಳಲು ಸಹಾಯಕವಾಯಿತು.

* ಮುದ್ರಣ ಯಂತ್ರ

ಸಂಶೋಧನೆಯ ಪ್ರಮುಖ ಘಟ್ಟಗಳಾದ ಸಾರಲೇಖ, ವರದಿ ಹಾಗೂ ಸಂಶೋಧನಾ ಮಹಾಪ್ರಬಂಧವನ್ನು ಮುದ್ರಿಸಲು ಈ ಯಂತ್ರವು ಸಹಾಯಕವಾಯಿತು.

* ಕಂಪ್ಯೂಟರ್/ಅಂತರ್ಜಾಲ

ನನ್ನ ಸಂಶೋಧನೆಗೆ ಬೇಕಾದ ಮಾಹಿತಿಗಳನ್ನು ಹುಡುಕಲು, ಕ್ಷಣಾರ್ಧದಲ್ಲಿ ಮಾಹಿತಿಗಳನ್ನು ಸಂಗ್ರಹಿಸಲು ಅಂತರ್ಜಾಲವು ಬಹಳಷ್ಟು ನೆರವಾಯಿತು. ಹಾಗೂ ನನ್ನ ಸಂಶೋಧನೆಯ ಪ್ರತಿಯೊಂದು ಲೇಖನಗಳನ್ನು ಬೆರಳಚ್ಚು ಮಾಡಲು(ಟೈಪಿಸಲು) ತುಂಬಾ ಸಹಾಯಕವಾಯಿತು.

೧.೬ ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನೆಯ ಶೀರ್ಷಿಕೆಯಾದ "ಹ್ಯಾರಡಾ ಗ್ರಾಮ : ಸಾಂಸ್ಕೃತಿಕ ಸ್ಥಿತ್ಯಂತರ" ಅಡಿಯಲ್ಲಿ ಹಲವಾರು ಅಧ್ಯಾಯಗಳನ್ನು ಮಾಡಿಕೊಂಡು ಅಭ್ಯಾಸವನ್ನು ಮಾಡಲಾಗಿದೆ. ಪ್ರಸ್ತುತ ಮೊದಲನೇಯ ಅಧ್ಯಾಯದಲ್ಲಿ ಪ್ರಸ್ತಾವನೆ, ಉದ್ದೇಶ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಹತ್ವ ಸಂಶೋಧನಾ ವಿಧಾನ, ಅವುಗಳಲ್ಲಿ ಪ್ರಮುಖವಾಗಿ ಸಂದರ್ಶನ ವಿಧಾನ, ಅವಲೋಕನಾ ವಿಧಾನ, ಪ್ರಶ್ನಾವಳಿ ವಿಧಾನಗಳನ್ನು ಒಳಗೊಂಡಿದೆ. ಅಲ್ಲದೇ ಆನುಸಂಗಿಕ ಮಾಹಿತಿಯ ವಿಧಾನಗಳು, ಮತ್ತು ಸಂಶೋಧನೆಯಲ್ಲಿ ಬಳಸಿದ ಸಲಕರಣೆಗಳ ಬಗ್ಗೆ ಮಾಹಿತಿಗಳನ್ನು ಒದಗಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮದ ಭೌಗೋಳಿಕ ಲಕ್ಷಣಗಳು, ಚಾರಿತ್ರಿಕ ಹಿನ್ನೆಲೆ, ಸ್ಥಳನಾಮ, ಪದನಿಷ್ಪತ್ತಿ ಹಾಗೂ ಐತಿಹ್ಯವನ್ನು ವಿವರಿಸಲಾಗಿದೆ. ಇವುಗಳ ಮೂಲಕ ಇಲ್ಲಿಯ ಭೌಗೋಳಿಕ ಪರಿಸರವು ಜನಪದರ ಮೇಲೆ ಬೀರಿದ ಪರಿಣಾಮಗಳನ್ನು ಚರ್ಚಿಸಲಾಗಿದೆ. ಇಲ್ಲಿಯ ಸ್ಮಾರಕಗಳು, ಕೋಟೆಗಳ ಆಧಾರದ ಮೇಲೆ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಸ್ಥಳನಾಮದ ಬಗ್ಗೆ ಸ್ಥಳೀಯರಿಂದ ಐತಿಹ್ಯಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮಕ್ಕೆ ಸಂಬಂಧಿಸಿದ ಸಾಮಾಜಿಕ ಜೀವನ ಸಂರಚನೆಗಳಾದ ವಸತಿ ನಿರ್ಮಾಣ, ಆಹಾರ ಪದ್ಧತಿ, ಬೇಟೆ, ಕುಟುಂಬ ಪದ್ಧತಿ, ಬಂಧುತ್ವ, ವ್ಯಾಪಾರ, ಸಾರಿಗೆ ವ್ಯವಸ್ಥೆ, ಸಂಘ-ಸಂಸ್ಥೆಗಳು, ಉಡುಗೆ-ತೊಡುಗೆ, ವೃತ್ತಿ, ಕ್ರೀಡೆಗಳು, ವೈದ್ಯ-ವಿದ್ಯೆ, ಭಜನಾ ಸಂಘಗಳು, ಸುಗಮ ಸಂಗೀತ, ನ್ಯಾಯ ವ್ಯವಸ್ಥೆ, ಸಮುದಾಯಗಳ ಸಾಮರಸ್ಯ, ವಿವಾಹ ಪದ್ಧತಿ ಇತ್ಯಾದಿಗಳ ಬಗ್ಗೆ ವಿವರಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮದ ಆಚರಣೆಗಳಿಗೆ ಸಂಬಂಧಿಸಿದಂತೆ ಜೀವನಾವರ್ತನ ಆಚರಣೆಗಳು, ವಾರ್ಷಿಕಾವರ್ತನ ಆಚರಣೆಗಳು, ನಂಬಿಕೆ, ವಿಧಿ-ನಿಷೇಧಗಳ ಬಗ್ಗೆ ವಿವರಿಸಲಾಗಿದೆ. ತಮ್ಮ ದಿನನಿತ್ಯದ ಜೀವನದಲ್ಲಿ ಆಚರಿಸಿಕೊಂಡು ಬಂದ ಆಚರಣೆಗಳು, ಸಂಪ್ರದಾಯ, ವಿಧಿ-ವಿಧಾನಗಳು, ನಿಷೇಧಗಳ ಸೂಕ್ಷ್ಮ ಅಂಶಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಐದನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮದ ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಗ್ರಾಮದ ಸದ್ಯದ ಶೈಕ್ಷಣಿಕ ಸ್ಥಿತಿಗತಿಗಳನ್ನು ಚರ್ಚಿಸಿ, ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ. ಆರ್ಥಿಕ ಸ್ಥಿತಿಗತಿಗಳನ್ನು ಚರ್ಚಿಸಿ, ಪ್ರಮುಖ ವೃತ್ತಿಯನ್ನಾಧಾರಿತ ಸಮುದಾಯಗಳ ಮಾಹಿತಿಗಳನ್ನು ಒದಗಿಸಲಾಗಿದೆ. ರಾಜಕೀಯ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿ ಗ್ರಾಮವು ಹಂತ ಹಂತವಾಗಿ ಹೇಗೆ ರಾಜಕೀಯ ಗತಿಶೀಲತೆಯನ್ನು ಕಂಡುಕೊಂಡಿದೆ ಎಂಬುದನ್ನು ವಿವರಿಸಲಾಗಿದೆ.

ಆರನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮದ ವಿವಿಧ ದೈವಗಳ ಮಾಹಿತಿ, ಹಿನ್ನೆಲೆ, ಆಚರಣೆ, ಜಾತ್ರೆ, ಸಂಪ್ರದಾಯಗಳ ಬಗ್ಗೆ ವಿವರಿಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಮಲಿಯಮ್ಮ ದೇವಿ, ಸಂಗಮೇಶ್ವರ, ಹನುಮಂತ, ಕೇರಿಯ ದುರುಗಮ್ಮ, ಬೀರಲಿಂಗೇಶ್ವರ, ಕಾಳಮ್ಮ, ಭರ್ಮಪ್ಪ, ಯಲ್ಲಮ್ಮ ದೇವಿ, ಬನ್ನಿಕಾಳಮ್ಮ, ಅಲ್ಲಾಸ್ವಾಮಿ ಜಂಡಾ ಕಟ್ಟಿ, ಅಲ್ಲಾವುದ್ದೀನ್ ಪವಾಡ ಪುರುಷನ ಗದ್ದುಗೆ, ಕೋಟೆಯ ದುರುಗಮ್ಮ, ಚೌಡಮ್ಮ ದೇವಿ, ಅಡವಿ ಊರಮ್ಮ ದೇವಿ, ಕಲ್ಲೇಶ್ವರ ದೇವರು, ಹಾದಿ ಹನುಮಂತ, ಶರೀಫ್ ಸಾಹೇಬರ ಕಟ್ಟಿ, ಮೈಲಾರ ಲಿಂಗೇಶ್ವರನ ಶಿಬಾರ, ಹೊನ್ನತ್ತೆಮ್ಮ ದೇವಿ, ಚಿಕ್ಕಮಲಿಯಮ್ಮ, ನಾಗದೈವಗಳು, ಕೋಟೆ ಚೌಡಮ್ಮ, ಗಂಗಾ ಪರಮೇಶ್ವರಿ ದೇವಸ್ಥಾನ, ಕೇರಿಯ ಕರಿಬಾನಿ (ಮಾತೆಂಗೆಮ್ಮನ ಕಟ್ಟಿ), ಅಲ್ಲಾಸ್ವಮಿ ಮಸೀದಿ, ಕೆಂಗೇರಿ ಮಲಿಯಮ್ಮ, ಕಟ್ಟೆಪ್ಪನ ಗದ್ದುಗೆ, ದಾಸನಹಳ್ಳಿ ಕೆರೆಯ ಒಡ್ಡವ್ವ, ಲಿಂಗನಾಯಕನಹಳ್ಳಿ ಮಠದ ಗರ್ಭಗುಡಿ, ಬತ್ತಿಕಟ್ಟಿಸರ ಹನುಮಂತ, ಅಳ್ಳಳ್ಳಿ ಚೌಡಮ್ಮ ಇವುಗಳೆಲ್ಲವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಏಳನೇಯ ಅಧ್ಯಾಯದಲ್ಲಿ ಹ್ಯಾರಡಾ ಜನಪದರ ಜನಪದ ಸಾಹಿತ್ಯ, ಜನಪದ ಗೀತೆಗಳು, ಜನಪದ ಕಥೆಗಳು, ಗಾದೆಗಳು, ಶಿಷ್ಟ ಸಾಹಿತ್ಯದ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆ. ಸ್ಥಳೀಯ ಜನಪದರಿಂದ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿ ಚರ್ಚಿಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಜನಪದ ಗೀತೆಗಳು, ಜನಪದ ಕಥೆಗಳು, ಗಾದೆಗಳ ಬಗ್ಗೆ ವಿಸ್ತೃತ ಮಾಹಿತಿಗಳನ್ನು ಒದಗಿಸಲಾಗಿದೆ.

ಇತ್ತೀಚಿಗೆ ಗ್ರಾಮದಲ್ಲಿ ಬೆಳೆದು ಬಂದ ಶಿಷ್ಟ ಸಾಹಿತ್ಯದ ಪರಂಪರೆಯನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಎಂಟನೇಯ ಅಧ್ಯಾಯದಲ್ಲಿ ಹ್ಯಾರಡಾ ಗ್ರಾಮದ ಭೌತಿಕ ಸ್ಥಿತ್ಯಂತರ, ಸಾಮಾಜಿಕ ಸ್ಥಿತ್ಯಂತರ, ಸಾಂಸ್ಕೃತಿಕ ಸ್ಥಿತ್ಯಂತರ, ಶೈಕ್ಷಣಿಕ ಸ್ಥಿತ್ಯಂತರ, ಆರ್ಥಿಕ ಸ್ಥಿತ್ಯಂತರದ ಬಗ್ಗೆ ವಿವರಿಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಕೃಷಿ ಚಟುವಟಿಕೆಯಲ್ಲಿ ಆದ ಸ್ಥಿತ್ಯಂತರಗಳು, ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಆದ ಸ್ಥಿತ್ಯಂತರಗಳು, ಸಾರಿಗೆ ಸಂಪರ್ಕದಲ್ಲಿ ಆದ ಪರಿವರ್ತನೆಗಳು, ಶೈಕ್ಷಣಿಕವಾಗಿ ಆದ ಪರಿವರ್ತನೆಗಳು, ಕೊಡು-ಕೊಳ್ಳುವಿಕೆಯಲ್ಲಿ ಆದ ಬದಲಾವಣೆಗಳು, ಯಂತ್ರೋಪಕರಣದಲ್ಲಿ ಆದ ಬದಲಾವಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಒಂಭತ್ತನೇಯ ಅಧ್ಯಾಯದಲ್ಲಿ ಉಪಸಂಹಾರ, ಅನುಬಂಧಗಳ ಬಗ್ಗೆ ಮಾಹಿತಿಗಳನ್ನು ಒದಗಿಸಲಾಗಿದೆ. ಹಾಗೂ ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ. ಮುಂದಿನ ಸಾಧ್ಯತೆಗಳು, ವಕ್ತೃಗಳ ಮಾಹಿತಿ, ಸಾಂಸ್ಕೃತಿಕ ಪದಕೋಶ, ಆಧಾರ ಗ್ರಂಥಗಳು, ಛಾಯಚಿತ್ರಗಳು ಇದರ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಹೀಗೆ ಮಹಾಪ್ರಬಂಧವನ್ನು ರಚಿಸಲು ಬೇಕಾಗುವ ಪೂರಕ ಮಾಹಿತಿಗಳನ್ನು ಸಂಗ್ರಹಿಸಿ. ವಿದ್ವಾಂಸರಿಂದ, ಸ್ಥಳೀಯ ಜನಪದರಿಂದ, ವಿವಿಧ ಕೃತಿಗಳಿಂದ, ವಿವಿಧ ಸ್ಮಾರಕಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಚರ್ಚೆ, ವಿಶ್ಲೇಷಣೆಗೆ ಒಳಪಡಿಸಿ ಸಮಗ್ರವಾದ ಮಹಾಪ್ರಬಂಧವನ್ನು ರಚಿಸಲಾಗಿದೆ. ಈ ಸಂಶೋಧನೆಯು ಅಧ್ಯಯನದ ಪ್ರಯತ್ನವೇ ಹೊರತು ಸಂಪೂರ್ಣವಾದ ಅಧ್ಯಯನವಲ್ಲ ಎಂಬುದನ್ನು ಪ್ರಾಮಾಣಿಕವಾಗಿ ತಿಳಿಯಬಯಸುತ್ತೇನೆ.

೧.೭ ಇದುವರೆಗೂ ನಡೆದ ಅಧ್ಯಯನಗಳು

ಮಾನವನ ಇತಿಹಾಸದಲ್ಲಿ ಗ್ರಾಮಗಳು ತನ್ನದೇ ಆದ ಪಾತ್ರವನ್ನು ವಹಿಸುತ್ತಾ ಬಂದಿವೆ. ಪ್ರಾಚೀನ ಕಾಲದ ಗ್ರಾಮಗಳು ಇಂದು ದೊಡ್ಡ ದೊಡ್ಡ ನಗರಗಳಾಗಿ ಮಾರ್ಪಟ್ಟಿವೆ. ಇಂತಹ ಗ್ರಾಮಗಳು ಹಲವಾರು ಸ್ಥಿತ್ಯಂತರಗಳಿಗೆ ಒಳಪಟ್ಟು ತನ್ನದೇ ಆದ ಸಂಸ್ಕೃತಿಯನ್ನು ಪ್ರಸಾರ ಮಾಡುವಲ್ಲಿ ಯಶಸ್ವಿಯಾಗಿವೆ. ಭಾರತವು ಮೂಲತಃ ಗ್ರಾಮಗಳ ನಾಡು. ಇಲ್ಲಿಯ ವಿಭಿನ್ನ ಸಂಸ್ಕೃತಿ ಆಚಾರ-ವಿಚಾರಗಳು ನಮ್ಮ ನಾಗರಿಕತೆಯ ಹೆಮ್ಮೆಯಾಗಿವೆ. ಅಂತಹ ಗ್ರಾಮಗಳ ಅಧ್ಯಯನವನ್ನು ಮಾಡಲು ಹಲವಾರು ವಿದ್ವಾಂಸರುಗಳು ಮುಂದೆ ಬಂದರು. ಪ್ರಾಚೀನ ಕಾಲದಲ್ಲಿ ಗ್ರಾಮಗಳ ಅಧ್ಯಯನ ಅಷ್ಟೇನು ಇರಲಿಲ್ಲ. ಬ್ರಿಟೀಷರ ಕಾಲಾವಧಿಯಲ್ಲಿ ಗ್ರಾಮಗಳ ಅಧ್ಯಯನಕ್ಕೆ ಅವರು ನಾಂದಿ ಹಾಡಿದರು. ವಿದೇಶಿ ವಿದ್ವಾಂಸರುಗಳು ಬಂದು ಇಲ್ಲಿಯ ಗ್ರಾಮ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡತೊಡಗಿದರು. ಇಂತಹ ವಿದೇಶಿ ವಿದ್ವಾಂಸರುಗಳಲ್ಲಿ ಮೊದಲಿಗರು ಎಂದರೆ ಗಿಲ್ಬರ್ಟ್ ಸ್ಲಾಟ್ ಮತ್ತು ವಿಲಿಯಂ ವೈಸರ್‌ರವರು. ತದ ನಂತರದಲ್ಲಿ ಭಾರತೀಯ ವಿದ್ವಾಂಸರುಗಳು ಗ್ರಾಮಗಳ ಅಧ್ಯಯನವನ್ನು ಮಾಡತೊಡಗಿದರು. ಮೊದಲಿಗೆ ಎಂ.ಎನ್. ಶ್ರೀನಿವಾಸ್ ರವರ

"ಭಾರತೀಯ ಹಳ್ಳಿಗಳು" ಡಾ. ಶಾಮಚರಣ ದುಬೆಯವರ 'ಭಾರತೀಯ ಗ್ರಾಮ' ಎಂಬ ಕೃತಿಗಳು ಭಾರತದಲ್ಲಿನ ಗ್ರಾಮಗಳ ಅಧ್ಯಯನಕ್ಕೆ ಭದ್ರ ಬುನಾದಿಯನ್ನು ಹಾಕಿದವು. ಈ ಎರಡು ಕೃತಿಗಳು ಗ್ರಾಮ ಸಮುದಾಯಗಳಲ್ಲಿ ಬೇರೂರಿರುವ ಸಂಪ್ರದಾಯ, ಆಚರಣೆ, ನಂಬಿಕೆ, ವಿವಾಹ ವ್ಯವಸ್ಥೆ, ಧರ್ಮ, ದೈವಗಳು, ಗ್ರಾಮೀಣ ಬದುಕು, ಕೃಷಿಯ ಬಗ್ಗೆ ಸಮಗ್ರವಾದ ಚರ್ಚೆಯನ್ನು ಹುಟ್ಟುಹಾಕಿದವು.

ತದನಂತರದಲ್ಲಿ ಭಾರತದಲ್ಲಿ ಮೊದಲಿಗೆ 'ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರ್' ಎಂಬ ಆಯೋಗದ ಮೂಲಕ ಗ್ರಾಮಗಳ ಅಧ್ಯಯಗಳು ಪ್ರಾರಂಭವಾದವು. ಕೀಟಿಂಗ್ಸ್ ಹೇರಾಲ್ಡ್ ಮನ್, ಗಿಲ್ಬರ್ಟ್ ಸಲೇಟರ್. ಈ.ವಿ. ಲೂಕಾಸ್ ಮುಂತಾದವರು ಹಳ್ಳಿಗಳ ವಿಶಿಷ್ಟ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿದರು. ನಂತರದಲ್ಲಿ ಪ್ರಾನ್ಸಿಸ್ ಬುಕಾನನ್, ಜೆ.ಸಿ. ಜಾಕೆಯವರು ಮದ್ರಾಸ್ ಹಾಗೂ ಬಂಗಾಳದ ಹಲವು ಪ್ರಾಂತಗಳಲ್ಲಿ ಗ್ರಾಮಗಳ ಅಧ್ಯಯನಕ್ಕೆ ಟೊಂಕಕಟ್ಟಿ ನಿಂತರು. ಮುಕ್ತಿಯಾರ್ ಮತ್ತು ಶುಕ್ಲ, ಥಾಮಸ್ ಮತ್ತು ರಾಮಕೃಷ್ಣನ್‌ರವರು ಭಾರತದ ಗ್ರಾಮಗಳ ಭೂಮಿ, ಬೆಳೆ ಉತ್ಪನ್ನ, ಆದಾಯ, ಜಾನುವಾರು ಮುಂತಾದವುಗಳನ್ನು ಅಧ್ಯಯನಕ್ಕೆ ಒಳಪಡಿಸಿದರು.

ನಂತರದಲ್ಲಿ ಭಾರತೀಯ ಗ್ರಾಮಗಳ ಕುರಿತು ಡಾ.ಎಂ.ಎನ್. ಶ್ರೀನಿವಾಸರವರು "ಎಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ"ಯ ಲೇಖನಗಳನ್ನು 'ಇಂಡಿಯನ್ ವಿಲೇಜ್' ಎಂಬ ಗ್ರಂಥದಲ್ಲಿ ಪ್ರಕಟಿಸಿದರು. ಇದೇ ಸಮಯದಲ್ಲಿ ಡಿ.ಎನ್. ಮಜುಂದಾರ್‌ರವರು 'ರೂರಲ್ ಪ್ರೊಫಾಯಿಲ್ಸ್' ಎಂಬ ಗ್ರಂಥವನ್ನು ಸಂಪಾದಿಸಿ ಹೊರತಂದರು. ಡಾ. ದುಬೆ, ಮೊರಿಸ್ ಓಪ್ಲರ್, ಒಸ್ಕಾರ್‌ಲೆವಿಸ್‌ರ ಗ್ರಾಮಾಧ್ಯಯನದ ಕೃತಿಗಳು ಗ್ರಾಮಗಳ ಬಗ್ಗೆ ವಿಪುಲವಾದ ಮಾಹಿತಿಗಳನ್ನು ಒದಗಿಸಿದವು. ಮಲಬಾರಿನ ಹಲವು ಗ್ರಾಮಗಳ ಬಗ್ಗೆ ಎಡ್ರಿನ್ ಮೇಯರ್‌ರವರು ಹಾಗೂ ಓರಿಸ್ಸಾದ ಹಲವು ಗ್ರಾಮಗಳ ಬಗ್ಗೆ ಸ್ಕಾರ್ಲೆಟ್ ಎಪಿಸ್ಪಿನ್‌ರವರ ಅಧ್ಯಯನಗಳು ಬಹಳಷ್ಟು ಪ್ರಮುಖವಾದವುಗಳು. ಗ್ರಾಮೀಣ ಸಮುದಾಯಗಳ ನೀರಾವರಿ, ಸಾರಿಗೆ ವ್ಯವಸ್ಥೆ, ಸರ್ಕಾರದ ವಿಕಾಸ ಯೋಜನೆಗಳು ಇವುಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ದೆಹಲಿ, ಮದ್ರಾಸ್, ಪೂನಾ ಹಾಗೂ ವಿಶ್ವಭಾರತಿ ವಿದ್ಯಾಲಯಗಳಲ್ಲಿ ಗ್ರಾಮಗಳ ಅಧ್ಯಯನ ಕೇಂದ್ರಗಳನ್ನು ತೆರೆಯಲಾಯಿತು. ಈ ಅಧ್ಯಯನ ಕೇದ್ರಗಳು ಹಲವಾರು ಗ್ರಾಮಗಳ ಸರ್ವೇಕ್ಷಣೆಯನ್ನು ಮಾಡಿ ಗ್ರಾಮೀಣ ಸಮುದಾಯದ ಮೇಲೆ ಬೆಳಕು ಚೆಲ್ಲಿದವು. ನಂತರದಲ್ಲಿ ಹುಟ್ಟುಹಾಕಿದ ಗಾಂಧೀಜಿಯವರ 'ಮರಳಿ ಹಳ್ಳಿಗೆ' ಎಂಬ ಗ್ರಂಥವು ಹಲವಾರು ಗ್ರಾಮಗಳ ವಿಭಿನ್ನ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಪ್ರೇರೇಪಿಸಿತು.

ಪ್ರೊ.ಎಚ್.ವಿ. ನಾಗೇಶ ಅವರು ರಚಿಸಿದ ಕೃತಿಗಳಾದ 'ಗ್ರಾಮ ವ್ಯಾಸಂಗ', 'ಭಾರತಿಯ ಗ್ರಾಮ', 'ಗ್ರಾಮಂತರ' ಈ ಕೃತಿಗಳು ಪಾಶ್ಚಿಮಾತ್ಯ ದೇಶಗಳ ಗ್ರಾಮಗಳು ಹಾಗೂ ಭಾರತೀಯ ಗ್ರಾಮಗಳ ಮಾಹಿತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದವು. ಈ ಸಂಧರ್ಭದಲ್ಲಿ ಕನ್ನಡದಲ್ಲಿಯೂ ಸಹ ಗ್ರಾಮಗಳ ಅಧ್ಯಯನ ಪ್ರಾರಂಭವಾದವು. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಅರ್ಚಕ ಬಿ. ರಂಗಸ್ವಾಮಿಯವರು 'ಹುಟ್ಟಿದ ಹಳ್ಳಿ' ಎಂಬ ಕನ್ನಡದ ಪ್ರಥಮ ಗ್ರಾಮಾಧ್ಯಯನದ ಕೃತಿಯು

ಗ್ರಾಮೀಣ ಸಮುದಾಯದ ಅಧ್ಯಯನಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿತು. ಶ್ರೀರಾಮ ಇಟ್ಟಣ್ಣ ಅವರ 'ಹಲಗಲಿಯ ಗ್ರಾಮ ಜಾನಪದ' ಕೃತಿಯಲ್ಲಿ ಗ್ರಾಮಗಳ ಹಲವು ಸ್ಥಿತ್ಯಂತರಗಳನ್ನು ಕಂಡುಕೊಂಡಿದ್ದಾರೆ. ಜಾತಿ ವ್ಯವಸ್ಥೆಯ ಬಗ್ಗೆ, ಜನಪದರ ಬದಲಾದ ಧೋರಣೆಗಳ ಬಗ್ಗೆ, ಹಲಗಲಿ ಜನರ ಬಂಡಾಯ ಮುಂತಾದವುಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಡಾ.ಟಿ. ಗೋವಿಂದರಾಜು ಅವರ 'ಚೆನ್ನಾದೇವಿ ಅಗ್ರಹಾರ' ಎಂಬ ಕೃತಿಯಲ್ಲಿ ಜಾತಿ ವ್ಯವಸ್ಥೆ ಜೀವನಾವರ್ತನ, ವಾರ್ಷಿಕಾವರ್ತನ ಆಚರಣೆಗಳ ಬಗ್ಗೆ ಚರ್ಚಿಸಿದ್ದಾರೆ. ಚೆನ್ನಣ್ಣ ವಾಲಿಕಾರರ 'ಒಂದು ಗ್ರಾಮದ ಜಾನಪದೀಯ ಅಧ್ಯಯನ' ಕೃತಿಯು ಹಳ್ಳಿಗಳು ತಮ್ಮ ದೇಶಿ ಸಂಸ್ಕೃತಿಯನ್ನು ಬಿಟ್ಟು ಹೇಗೆ ನಗರೀಕರಣಗೊಳ್ಳುತ್ತವೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಇದರ ಹೊರತಾಗಿ ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾಲಯದ ಪಿ.ಎಚ್.ಡಿ. ವಿಧ್ಯಾರ್ಥಿಗಳು ಗ್ರಾಮಗಳ ಬಗ್ಗೆ ಅಧ್ಯಯನವನ್ನು ನಡೆಸಿ ತಮ್ಮದೇ ಆದ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಕೆ.ಎ. ಮಹೇಶ್ವರಯ್ಯ ಅವರ 'ಕಂದೀಕೇರೆ ಗ್ರಾಮ ಅಧ್ಯಯನ'. ಎಸ್.ಎಂ. ಸಾವಿತ್ರಿ ಅವರ 'ಕಂಪ್ಲಿ ಜಾನಪದ : ಒಂದು ಅಧ್ಯಯನ', ಎಚ್.ಎಸ್. ಗುರುಪ್ರಸಾದ್ ಅವರ 'ವಲಸಿಗರ ನೆಲೆ: ಮರಿಯಮ್ಮನಹಳ್ಳಿ ಸಂಕಥನ' ನಾರಾಯಣ ಗಿರಿಯಪ್ಪ ಅವರ 'ಕನಕಗಿರಿ ಸಂಕಥನ', ರಾಮಣ್ಣ ಸಿ. ದೊಡ್ಡನಿಂಗಪ್ಪಗೋಳ ಅವರ 'ಕೊಟ್ಟಲಗಿ ಸಾಂಸ್ಕೃತಿಕ ಸಂಕಥನ' ಬಸವರಾಜು. ಬಿ. ಎಸ್. ಅವರ 'ಕಬ್ಬಾಳು:ಸಂಕಥನ' ಶಾಂತವ್ವ ನಾಗಪ್ಪ ಲಕ್ಷ್ಮೇಶ್ವರವರ 'ಯಮನೂರು ಗ್ರಾಮ:ಸಾಂಸ್ಕೃತಿಕ ಸಂಕಥನ', ನಾಗರಾಜ ತಂಬ್ರಹಳ್ಳಿ ಅಂಜಿನಪ್ಪ ಅವರ 'ಕಡಲಬಾಳು ಗ್ರಾಮ ಸಾಂಸ್ಕೃತಿಕ ಸ್ಥಿತ್ಯಂತರ' ಮುಂತಾದ ಸಂಶೋಧನಾ ಮಹಾ ಪ್ರಬಂಧಗಳು ಗ್ರಾಮಗಳ ಅಧ್ಯಯನದ ಮೇಲೆ ಬೆಳಕನ್ನು ಚೆಲ್ಲಿವೆ.

ಹೀಗೆ ಇತ್ತೀಚಿಗೆ ಬಹುಪಾಲು ಗ್ರಾಮಾಧ್ಯಯನಗಳು ಜಾನಪದೀಯ ಹಿನ್ನೆಲೆಯಲ್ಲಿ ಹೆಚ್ಚು ಹೆಚ್ಚು ಗತಿಶೀಲತೆಯನ್ನು ಕಂಡುಕೊಂಡು ಗಮನಾರ್ಹವಾದ ಆಲೋಚನೆಗಳು, ಆವಿಷ್ಕಾರಗಳು ಸಾಮಾಜಿಕ ಮುನ್ನೆಲೆಗೆ ಬರುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ಅಧ್ಯಾಯ-೨

ಹ್ಯಾರಡಾ ಗ್ರಾಮ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಲಕ್ಷಣಗಳು

ಹ್ಯಾರಡಾ ಗ್ರಾಮವು ಕರ್ನಾಟಕದ ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೂಕು, ಹಿರೇಹಡಗಲಿ ಹೋಬಳಿಯಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮವು ಮೂರು ಜಿಲ್ಲೆಗಳಾದ ಬಳ್ಳಾರಿ, ಹಾವೇರಿ, ದಾವಣಗೆರೆ ಜಿಲ್ಲೆಗಳಿಗೆ ತನ್ನ ಹೆದ್ದಾರಿಗಳನ್ನು ಚಾಚಿಕೊಂಡಿದೆ. ಈ ಗ್ರಾಮವು ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಹಾಗೂ ಅತೀ ಎತ್ತರದ ಪ್ರದೇಶದಲ್ಲಿದೆ. ಸದಾ ಕಾನನದ ಸೊಬಗಿನ ಅಡಿಯಲ್ಲಿ ಕಂಗೊಳಿಸುತ್ತಾ, ಅತೀ ಹೆಚ್ಚು ಹುಣಸೆ ಮರಗಳಿಂದ ಕೂಡಿದ್ದು, ತೋಪಿನಿಂದ ಕಾಣುತ್ತಿದೆ. ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾಗಿದೆ.

ಕೆರೆಗಳು

ತುಂಗಾಭದ್ರ ನದಿಯು ಹ್ಯಾರಡಾ ಗ್ರಾಮದಿಂದ ೧೫ ರಿಂದ ೨೦ ಕಿ.ಮೀ. ದೂರದಲ್ಲಿದೆ. ಈ ನದಿಯು ಗ್ರಾಮಕ್ಕೆ ಯಾವುದೇ ರೀತಿಯ ನೀರಾವರಿ ಸೌಲಭ್ಯವನ್ನು ಒದಗಿಸಿಲ್ಲ. ಗ್ರಾಮವು ಪ್ರಮುಖವಾಗಿ ಕೆರೆಗಳನ್ನು ಆಶ್ರಯಿಸಿದೆ. ಗ್ರಾಮದಲ್ಲಿ ಪ್ರಮುಖವಾಗಿ ಆರು ಕೆರೆಗಳನ್ನು ಕಾಣಬಹುದಾಗಿದೆ. ಮಲಿಯಮ್ಮನ ಕೆರೆ, ಹೊಸಕೆರೆ, ಗರ್ಭಗುಡಿ ಕೆರೆ, ದಾಸನಹಳ್ಳಿ ಕೆರೆ, ಸಂಗಮೇಶ್ವರ ಕೆರೆ, ಕಲ್ಲಪ್ಪನ ಕಟ್ಟೆ ಕೆರೆ. ಇವುಗಳು ಅಲ್ಪ ಸ್ವಲ್ಪ ದನಕರುಗಳಿಗೆ ನೀರಿನ ವ್ಯವಸ್ಥೆಗೆ ಅನುಕೂಲವಾಗಿವೆ. ಆದರೆ ಇತ್ತೀಚಿಗೆ ಈ ಕೆರೆಗಳು ಮಳೆಯ ಅಭಾವದಿಂದ ಸೊರಗಿ ಹೋಗಿವೆ. ಮಳೆಗಾಲದಲ್ಲಿ ಅಲ್ಪಸ್ವಲ್ಪ ನೀರು ತುಂಬಿ ಸ್ವಲ್ಪ ದಿನಗಳಲ್ಲಿಯೇ ಇಂಗಿ ಹೋಗುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಅಂತರ್ಜಲಕ್ಕೆ ಈ ಕೆರೆಗಳೇ ಮೂಲ ಆಧಾರ. ಕೆರೆಗಳು ಸಂಪೂರ್ಣವಾಗಿ ತುಂಬಿದಾಗ ಅಂತರ್ಜಲದ ಮಟ್ಟ ಗಣನೀಯವಾಗಿ ಏರುತ್ತದೆ. ಕೆರೆಗಳು ಬತ್ತಿ ಹೋದಾಗ ಅಂತರ್ಜಲದ ಮಟ್ಟ ಬಹಳಷ್ಟು ಕುಸಿಯುತ್ತಿದೆ. ಇಲ್ಲಿಯ ಕೃಷಿಗೆ ಹೆಚ್ಚಾಗಿ ಬೋರ್‌ವೆಲ್‌ಗಳ ಮೂಲಕ ಅಂತರ್ಜಲವನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಹೂವಿನ ಹಡಗಲಿ ತಾಲೂಕಿನಲ್ಲಿಯೇ ಅತೀ ಹೆಚ್ಚು ಬೋರ್‌ವೆಲ್‌ಗಳನ್ನು ಹೊಂದಿದ ಗ್ರಾಮ ಇದಾಗಿದೆ. ಸುಮಾರು ೫೦೦ ರಿಂದ ೬೦೦ ಬೋರ್‌ವೆಲ್‌ಗಳನ್ನು ಕಾಣಬಹುದಾಗಿದೆ. ಸುಮಾರು ೧೦೦೦ ಅಡಿ ಆಳವನ್ನು ಕೊರೆದು ನೀರನ್ನು ಹೊರ ತೆಗೆಯಲಾಗುತ್ತಿದೆ. ಆದ್ದರಿಂದ ಇಲ್ಲಿಯ ಅಂತರ್ಜಲದ ಮಟ್ಟ ಅತ್ಯಂತ ಕಳವಳಕಾರಿಯಾಗಿ ಕುಸಿಯುತ್ತಿದೆ. ಆದರೆ ಇತ್ತೀಚಿಗೆ ಗ್ರಾಮದ ಮೂರು ಕೆರೆಗಳಾದ ಮಲಿಯಮ್ಮನ ಕೆರೆ, ಹೊಸಕೆರೆ, ದಾಸನಹಳ್ಳಿ ಕೆರೆಗಳಿಗೆ ತುಂಗಭದ್ರಾ ನದಿಯಿಂದ ಕೆರೆಗೆ ನೀರು ತುಂಬಿಸುವ ಯೋಜನೆ ಕೈಗೊಳ್ಳಲಾಗಿದೆ. ಈ ಯೋಜನೆಯೂ

ಕೂಡ ಹಲವಾರು ವಿಘ್ನಗಳನ್ನು ಅನುಭವಿಸುತ್ತಾ ಕಾಮಗಾರಿಯು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಕಾಮಗಾರಿಯು ಸಂಪೂರ್ಣವಾಗಿ ಮುಗಿದಿದ್ದು, ಹ್ಯಾರಡಾ ಗ್ರಾಮದ ಬಹುತೇಕ ಕೃಷಿ ಭೂಮಿಗಳು ನೀರಾವರಿ ವ್ಯವಸ್ಥೆಗೆ ಒಳಪಡುತ್ತಿವೆ.

ಮಣ್ಣಿನ ಸ್ವರೂಪ

ಹ್ಯಾರಡಾ ಗ್ರಾಮದಲ್ಲಿ ಕೃಷಿಗೆ ಯೋಗ್ಯವಾದ ಅಪಾರವಾದ ಭೂಮಿಯನ್ನು ಕಾಣಬಹುದಾಗಿದೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿಯೇ ಅತೀ ಹೆಚ್ಚು ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ. ಕೃಷಿ ಭೂಮಿಯಲ್ಲಿಯೇ ಶೇ.೮೦ ರಷ್ಟು ಕೆಂಪು ಮಣ್ಣು ಹೊಂದಿದ ಭೂಮಿ ಇದೆ. ಈ ಮಣ್ಣಿನಲ್ಲಿ ಕಬ್ಬಿಣದ ಅಂಶ ಹೆಚ್ಚಾಗಿರುವುದರಿಂದ ಅತೀ ಹೆಚ್ಚಿನ ಪ್ರಮಾಣದ ನೀರನ್ನು ಹರಿಸಬೇಕಾಗುತ್ತದೆ. ಇನ್ನು ಹಲವೆಡೆ ಕಪ್ಪು ಮಣ್ಣನ್ನು ಹೊಂದಿದ ಭೂಮಿಯನ್ನು ಕಾಣಬಹುದಾಗಿದೆ.

ಅರಣ್ಯ ಪ್ರದೇಶ

ಹ್ಯಾರಡಾ ಗ್ರಾಮವು ತಾಲೂಕಿನಲ್ಲಿಯೇ ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಒಟ್ಟು ೩,೭೫೧.೨೩ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದೆ. ಗ್ರಾಮದ ಸುತ್ತಲೂ ಬೆಟ್ಟ-ಗುಡ್ಡಗಳಿಂದ ಆವೃತವಾದ ಅಪಾರ ಅರಣ್ಯ ಸಂಪತ್ತನ್ನು ನಾವಿಲ್ಲಿ ಕಾಣಬಹುದಾಗಿದೆ. ೩,೭೫೧.೨೩ ಹೆಕ್ಟೇರ್ ಪ್ರದೇಶವನ್ನು ಎ.ಬಿ.ಸಿ. ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಸ.ನಂ-೨೯೭,ಸೆಕ್ಷೆನ್ -೪ ರಲ್ಲಿ ೩೭೫ ಎಕರೆ, ಸ.ನಂ- ೭೦, ಸೆಕ್ಷೆನ್ -೪ ರಲ್ಲಿ ೫೦ ಎಕರೆ, ಸ.ನಂ-೫೫೭ ೦/೧, ಸೆಕ್ಷೆನ್ -೪ ರಲ್ಲಿ ೧೧೦ ಹೆಕ್ಟೇರ್, ಸ.ನಂ- ಸೆಕ್ಷೆನ್ -೪ ರಲ್ಲಿ ೧೨೩ ಎಕರೆ ಅರಣ್ಯ ಪ್ರದೇಶವನ್ನು ಹೊಂದಿದೆ. ಇನ್ನುಳಿದ ಕಳಸಾಪುರ ಸ.ನಂ-೭೬ ರಲ್ಲಿ ೫೦ ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ನೆಡುತೋಪುಗಳನ್ನು ನಿರ್ಮಿಸಲಾಗುತ್ತಿದೆ (ಆಧಾರ-ಉಪವಲಯ ಅರಣ್ಯಾಧಿಕಾರಿಗಳ ಕಛೇರಿ. ಹ್ಯಾರಡ). ಮೇಲೆ ತಿಳಿಸಿದ ಅರಣ್ಯವು ಮೀಸಲು ಅರಣ್ಯಪ್ರದೇಶವಾಗಿದ್ದು, ಇಲ್ಲಿ ಬೇಟೆಯಾಡುವುದು, ಅರಣ್ಯ ಒತ್ತುವರಿಯನ್ನು ನಿಷೇಧಿಸಲಾಗಿದೆ. ಹ್ಯಾರಡ ಉಪವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಐದು ಜನರ ಸಿಬ್ಬಂದಿಯನ್ನು ಹೊಂದಿದ್ದು ಅರಣ್ಯವನ್ನು ಅತೀ ಜಾಗೃತೆಯಿಂದ ಕಾಪಾಡಲಾಗುತ್ತಿದೆ.

ಮುಖ್ಯ ಬೆಳೆಗಳು

ಹ್ಯಾರಡಾ ಗ್ರಾಮದಲ್ಲಿ ಶೇ.೮೦ ರಷ್ಟು ಮಳೆಯಾಶ್ರಿತ ಬೆಳೆಗಳನ್ನು ಬೆಳೆಯುವುದುಂಟು. ಬೆಳೆಯುವ ಪ್ರಮುಖ ಬೆಳೆಗಳು ಜೋಳ, ಹೆಸರು, ತೊಗರಿ, ಪ್ರಮುಖ ವಾಣಿಜ್ಯ ಬೆಳೆಗಳಾದ ಕಬ್ಬು, ತಂಬಾಕು, ಸೂರ್ಯಕಾಂತಿ, ರಾಗಿ, ಹತ್ತಿ, ಬಾಳೆ, ದಾಳಿಂಬೆ, ಮೆಕ್ಕೆಜೋಳ, ನವಣೆ, ಎಳ್ಳು, ಶೇಂಗಾ. ಇವುಗಳನ್ನು ಮಳೆ, ಅಂತರ್ಜಲವನ್ನು ಬಳಸುವುದರ ಮೂಲಕ, ನೀರಾವರಿಯ ಸಹಾಯದಿಂದ ಬೆಳೆಯನ್ನು ಬೆಳೆಯಲಾಗುತ್ತಿದೆ. ಇತ್ತೀಚಿಗೆ ಗ್ರಾಮದಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾದ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಏಕೆಂದರೆ ಪೂರಕವಾದ ಮಾರುಕಟ್ಟೆ ವ್ಯವಸ್ಥೆಯು ಇರುವುದರಿಂದ ಅತೀ ಹೆಚ್ಚು ರೈತರು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಸಣ್ಣಪುಟ್ಟ ತುಂಡು ಜಮೀನನ್ನು ಹೊಂದಿದ ರೈತರು ತರಕಾರಿ ಬೆಳೆಗಳಾದ ಮೆಣಸಿನ ಕಾಯಿ, ಟೊಮೊಟೋ, ಈರುಳ್ಳಿ, ಕೊತ್ತಂಬರಿ,

ಮೂಲಂಗಿ, ಮೆಂತೆ ಸೊಪ್ಪು, ಕರಿಬೇವು, ಹಿರೇಕಾಯಿ, ಸವತೆ ಕಾಯಿ, ಹಾಗಲ ಕಾಯಿ, ಬೆಂಡೆಕಾಯಿ, ಜವಳಿಕಾಯಿ ಮುಂತಾದ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಪ್ರಾಣಿ-ಪಕ್ಷಿ

ಹ್ಯಾರಡಾ ಗ್ರಾಮವು ಅಪಾರವಾದ ಅರಣ್ಯ ಭೂಮಿಯನ್ನು ಹೊಂದಿರುವುದರಿಂದ ಗ್ರಾಮದಲ್ಲಿ ಅರಣ್ಯ ಇಲಾಖೆಯಿಂದ ಉಪ ಅರಣ್ಯಾಧಿಕಾರಿಗಳ ಕಛೇರಿಯನ್ನು ತೆರೆಯಲಾಗಿದೆ. ಈ ಅರಣ್ಯವು ಬೆಟ್ಟ-ಗುಡ್ಡಗಳಿಂದ ಆವೃತವಾಗಿರುವುದರಿಂದ ಕಾಡು ಪ್ರಾಣಿಗಳನ್ನು ಹೇರಳವಾಗಿ ಕಾಣಬಹುದಾಗಿದೆ. ಕಾಡು ಹಂದಿ, ಚಿರತೆ, ಕರಡಿ, ನರಿ, ತೋಳ, ಮೊಲ, ಕೋತಿ ಮುಂತಾದ ಪ್ರಾಣಿಗಳನ್ನು ಕಾಣಬಹುದಾಗಿದೆ. ಗಿಳಿ, ಕಾಗೆ, ಗುಬ್ಬಿ, ನವಿಲು, ಗೀಜುಗ, ಗೊರವಂಕ, ಶಕುನದ ಹಕ್ಕಿ, ಹದ್ದು, ಕೊಕ್ಕರೆ, ಬುರ್ಲಿ, ರತ್ನಪಕ್ಷಿ ಮುಂತಾದ ಪಕ್ಷಿ ಸಂಕುಲವನ್ನು ನಾವಿಲ್ಲಿ ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಹಲವಾರು ಸಾಕು ಪ್ರಾಣಿಗಳನ್ನು ಕಾಣಬಹುದಾಗಿದೆ. ಹಸು, ಎಮ್ಮೆ, ಎತ್ತು, ಕುರಿ, ಆಡುಗಳು, ಬೆಕ್ಕು, ನಾಯಿ ಮೊದಲಾದ ಪ್ರಾಣಿಗಳನ್ನು ಕಾಣಬಹುದು. ಗೃಹ ಪ್ರವೇಶ ಮುಂತಾದ ಶುಭ ಕಾರ್ಯಕ್ರಮದಲ್ಲಿ ಮೊದಲು ಹಸುವನ್ನು ಪೂಜಿಸುವುದರ ಮೂಲಕ ಶುಭ ಕಾರ್ಯಗಳು ಪ್ರಾರಂಭವಾಗುತ್ತವೆ.

ಸ್ವಾಭಾವಿಕ ಸಸ್ಯವರ್ಗ

ಹ್ಯಾರಡ ಗ್ರಾಮದಲ್ಲಿ ಅಪಾರವಾದ ಅರಣ್ಯ ಪ್ರದೇಶವಿರುವುದರಿಂದ ಸ್ವಾಭಾವಿಕ ಸಸ್ಯವರ್ಗಗಳು ಹೇರಳವಾಗಿವೆ. ಹುಣಸೆ ಮರ, ಬೇವಿನಮರ, ಜಾಲಿ ಮರ, ಕಮರ(ಆಸಿನ), ಉದಯ, ಜಾನಿ, ತುಗ್ಗಿ ಮರ, ತೆರೆದ ಮರ, ತೇಗದ ಮರ, ಹೊಂಗೆ ಮರ, ಅರಳಿ ಮರ, ಈಚಲ ಮರ, ಚಿರಚಲ ಮರ, ತಾಳೆಮರ, ಮಾವಿನ ಮರ, ಅಶೋಕ ಮರ, ಪತ್ರಿಗಿಡ, ಪ್ಯಾರಲ, ಅರಬೇವು, ಹಲಸು, ಮಳಿಗಿ ಮರ, ಬನ್ನಿಮರ, ಅಕೇಶಿಯಾ ಮರ, ಸಿಲ್ವರ್ ಮರ, ಶ್ರೀಗಂಧ, ಮತ್ತಿಮರ, ರಕ್ತಚಂದನ, ಕವಳೆ ಮರ, ಕಾರಿಮರ, ಬಿಕ್ಕಿಮರ, ಅಡವಿ ನೆಲ್ಲಿಕಾಯಿ, ಬೆಟ್ಟದಾವರೆ, ಹೊನ್ನಾರ್ಕಿ ಗಿಡ, ಶಿವ ಶಂಕರಿ, ಶಿವಲಿಂಗ ಗಿಡ, ಲೆಕ್ಕಿ ಗಿಡ, ಯಕ್ಕಿ ಗಿಡ, ಸುಬಾಬುಲ್ ಮರ, ಹಾಲೆಮರ ಹೀಗೆ ವಿವಿಧ ಪ್ರಭೇದದ ಮರಗಳನ್ನು ಹ್ಯಾರಡಾದ ಮೀಸಲು ಅರಣ್ಯದಲ್ಲಿ ಕಾಣಬಹುದಾಗಿದೆ.

ಗುಡಿ ಕೈಗಾರಿಕೆಗಳು

ಹ್ಯಾರಡಾ ಗ್ರಾಮದಲ್ಲಿ ಸಣ್ಣ ಪ್ರಮಾಣದಲ್ಲಿ ಗುಡಿ-ಕೈಗಾರಿಕೆಗಳನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕಬ್ಬಿಣ ಕೈಗಾರಿಕೆಯು ದೊಡ್ಡ ಪ್ರಮಾಣದಲ್ಲಿ ಇತ್ತು. ಬೇರೆ ರಾಜ್ಯಗಳಿಂದ ಕಬ್ಬಿಣದ ವ್ಯವಹಾರವನ್ನು ನಡೆಸುತ್ತಿದ್ದರು. ಈಗಲೂ ಗ್ರಾಮದಲ್ಲಿ ಕಮ್ಮಾರ ಕೇರಿ ಎನ್ನುವ ಓಣಿಯನ್ನು ಕಾಣಬಹುದಾಗಿದೆ. ಇಲ್ಲಿ ದೊಡ್ಡ ಗಾತ್ರದ ಕುಲುಮೆಯ ಪೆಂಟೆಯನ್ನು ಕಾಣಬಹುದಾಗಿತ್ತು. ಕಬ್ಬಿಣದ ಅದಿರನ್ನು ಸಂಸ್ಕರಿಸಿ ಉಳಿದ ಕಚ್ಚಾಪದಾರ್ಥದ ಮಣ್ಣಿನ ಗುಡ್ಡವನ್ನು ಕಾಣಬಹುದು. ಆದರೆ ಇತ್ತೀಚಿಗೆ ಗ್ರಾಮವು ಬೆಳೆದಂತೆ ಇದು ಕಣ್ಮರೆಯಾಗಿದೆ. ಕ್ಷೇತ್ರ ಕಾರ್ಯವನ್ನು ಕೈಗೊಂಡಾಗ ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು ೨೦ ರಿಂದ ೨೫ ಕಬ್ಬಿಣದ ಕುಲಿಮೆಗಳಿದ್ದವು ಎಂದು ಸ್ಥಳೀಯರು ಹೇಳಿದ್ದಾರೆ. ಗ್ರಾಮದಲ್ಲಿ ಸಿಗುವ ಕಬ್ಬಿಣದ ಅದಿರನ್ನು ತಂದು ಅದಕ್ಕೆ ಅತೀಹೆಚ್ಚು

ಶಾಖವನ್ನು ಕೊಟ್ಟು ವಿವಿಧ ದ್ರವರೂಪದ ಕಬ್ಬಿಣವನ್ನು ಸಂಗ್ರಹಿಸಿ ಉಂಡೆಯಾಕಾರದಲ್ಲಿ ಮಾಡಿ ಅದನ್ನು ಮತ್ತೆ ಶಾಖ ಕೊಟ್ಟು ವಿವಿಧ ಆಕಾರದ ವಸ್ತುಗಳನ್ನು ಮಾಡುತ್ತಿದ್ದರು. ಆದರೆ ಇತ್ತೀಚಿಗೆ ಇದು ಕಣ್ಮರೆಯಾಗಿದೆ. ಈ ಕಬ್ಬಿಣದ ಉದ್ಯಮವು ಬಹಳಷ್ಟು ಪ್ರಚಲಿತದಲ್ಲಿತ್ತು. ಗ್ರಾಮದ ಪಕ್ಕದಲ್ಲಿರುವ ಜಾಜ್‌ಗಲ್ಲು ಗುಡ್ಡದಿಂದ ಕಬ್ಬಿಣದ ಅದಿರನ್ನು ಸಂಗ್ರಹಿಸುತ್ತಿದ್ದರು. ಗ್ರಾಮದಲ್ಲಿ ಬಡಿಗಿತನ ಮಾಡುವ ಬಹಳಷ್ಟು ಕುಟುಂಬಗಳನ್ನು ಕಾಣಬಹುದಾಗಿದೆ. ಕೃಷಿಗೆ ಬೇಕಾಗುವ ಉಪಕರಣಗಳನ್ನು ಇವರು ತಯಾರಿಸುವರು. ಆಧುನಿಕತೆಯ ಭರಾಟೆಯಲ್ಲಿ ಇವರ ಸ್ಥಿತಿಯು ಚಿಂತಾಜನಕವಾಗಿದೆ. ಗ್ರಾಮದಲ್ಲಿ ಕೈಮಗ್ಗ ಗುಡಿಕೈಗಾರಿಕೆಯಾದ ಕಂಬಳಿ ನೇಯ್ಗೆಯು ಇತ್ತು. ಇದು ಕಾಲಾಂತರದಲ್ಲಿ ಕಣ್ಮರೆಯಾಗಿ ಅವರ ಪೀಳಿಗೆಯು ಇಂದು ಅನಿವಾರ್ಯವಾಗಿ ಬದಲೀ ಉದ್ಯೋಗವನ್ನು ಮಾಡುತ್ತಿದೆ. ಎತ್ತುಗಳ ಬಾಯಿಗೆ ಹಾಕುವ ಕುಕ್ಕಿ ಹೆಣೆಯುವ ಗುಡಿ ಕೈಗಾರಿಕೆಯು ಇತ್ತು, ಆದರೆ ಇದು ಇಂದು ಕಣ್ಮರೆಯಾಗಿದೆ. ಆದ್ದರಿಂದ ಗ್ರಾಮದಲ್ಲಿ ಇದಕ್ಕೆ ಪ್ರತ್ಯೇಕವಾದ ಕುಕ್ಕಿಹಳ್ಳಿ ಎಂಬ ಓಣಿಯನ್ನು ಕಾಣಬಹುದಾಗಿದೆ.

ಉಷ್ಣತೆ

ಕರ್ನಾಟಕದ ಬಳ್ಳಾರಿ ಎಂದರೆ ಎಲ್ಲರ ಚಿತ್ತ ಬಿಸಿಲಿನ ಧಗೆಗೆ ಜಾರುತ್ತದೆ. ಕರ್ನಾಟಕದ ಬಹುತೇಕ ಜಿಲ್ಲೆಗಳಿಗೆ ಭೌಗೋಳಿಕವಾಗಿ ಮೂರು ಕಾಲಗಳು ಅಂದರೆ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ. ಬಳ್ಳಾರಿ ಅದಕ್ಕೆ ಹೊರತಾಗಿ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಮತ್ತು ಕಡು ಬೇಸಿಗೆ ಕಾಲ ಎಂದು ವರ್ಗೀಕರಿಸಬಹುದು. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕಟ್ಟಕಡೆಯ ಗ್ರಾಮವಾದ ಹ್ಯಾರಡಾ ಗ್ರಾಮ ಇದಕ್ಕೆ ಹೊರತಾಗಿಲ್ಲ, ಬೇಸಿಗೆಯಲ್ಲಿ ಅತೀ ಹೆಚ್ಚು ಉಷ್ಣತೆಯನ್ನು ಕಾಣಬಹುದಾಗಿದೆ. ಮಳೆಗಾಲ ಮತ್ತು ಚಳಿಗಾಲದಲ್ಲಿ ಉಷ್ಣತೆ ಸಾಮಾನ್ಯವಾಗಿ ೨೦ ಸೆ, ದಿಂದ ೨೯ ಸೆ, ಇರುತ್ತದೆ. ಆದರೆ ಬೇಸಿಗೆ ಕಾಲದಲ್ಲಿ ಇದು ೪೫ ಸೆ ದಿಂದ ೪೯ ಸೆ ವರೆಗೆ ಏರುತ್ತದೆ. ವಾರ್ಷಿಕವಾಗಿ ಸರಾಸರಿ ಮಳೆಯ ಪ್ರಮಾಣ ೪೯೦ ಮಿ.ಮೀ. ಇರುತ್ತದೆ.

ಓಣಿಗಳು

ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಓಣಿಗಳು ಇರುವಂತೆ ಹ್ಯಾರಡಾ ಗ್ರಾಮದಲ್ಲಿಯೂ ಸಹ ಓಣಿಗಳನ್ನು ಕಾಣಬಹುದಾಗಿದೆ. ಈ ಓಣಿಗಳು ಅಲ್ಲಿ ವಾಸಿಸುವಂತಹ ಸಮುದಾಯಕ್ಕೆ ಅನುಗುಣವಾದ ಹೆಸರುಗಳನ್ನು ಇಟ್ಟಿರುವುದನ್ನು ಕಾಣಬಹುದಾಗಿದೆ. ಕಮ್ಮಾರ ಕೇರೆಯಲ್ಲಿ ಅತೀ ಹೆಚ್ಚು ಕಮ್ಮಾರ ಸಮುದಾಯದವರು ಇರುವುದರಿಂದ ಈ ಹೆಸರನ್ನು ಇಡಲಾಗಿದೆ. ಕಮ್ಮಾರ ಓಣಿ, ಬೇವಿನಕಟ್ಟಿ ಓಣಿ, ಬಾರಿಕೇರ ಓಣಿ, ಚೌಡಿಕಟ್ಟೆ ಓಣಿ, ಕುಕ್ಕಿಹಳ್ಳಿ, ಹರಿಜನ ಓಣಿ, ಅಡಿವೇರ ಓಣಿ, ಪ್ಲಾಟ್ ಓಣಿ, ಬಣಕಾರ ಓಣಿ, ಕೋಟೆ ಓಣಿ, ಲಕ್ಕಪ್ಪರ ಓಣಿ ಹೀಗೆ ಹಲವಾರು ಓಣಿಗಳನ್ನು ಹೆಸರಿಸಬಹುದು.

೨.೨ ಚಾರಿತ್ರಿಕ ಹಿನ್ನೆಲೆ

ಚಾರಿತ್ರಿಕವಾಗಿ ಹ್ಯಾರಡಾ ಗ್ರಾಮವನ್ನು ಅಧ್ಯಯನಕ್ಕೆ ಒಳಪಡಿಸಿದರೆ ಸಿಕ್ಕಿರುವ ಆಧಾರದ ಮೇಲೆ ಸಾವಿರ ವರ್ಷಗಳ ಇತಿಹಾಸವನ್ನು ನಾವು ಕಾಣಬಹುದಾಗಿದೆ. ಸಿಕ್ಕಿರುವ ಶಾಸನಗಳು 'ಹೇರಡ' ಎಂಬ ಉಲ್ಲೇಖವನ್ನು ಕೊಡುತ್ತವೆ. ಗ್ರಾಮದಲ್ಲಿ ಅನತಿ ದೂರದ ಮೈಲಾರದಲ್ಲಿ ಸಿಕ್ಕಿರುವ ಶಾಸನದ

ಪ್ರಕಾರ ಗ್ರಾಮವನ್ನು ಯಾದವ ದೊರೆ ಮಹಾದೇವರಾಯನು ದಾನವನ್ನಾಗಿ ಕೊಟ್ಟ ಗ್ರಾಮವಾಗಿದೆ ಎಂದು ಉಲ್ಲೇಖಿಸಲಾಗಿದೆ. ಆಗ್ನೇಯಕ್ಕೆ ಹೊಲವೊಂದರಲ್ಲಿ ಬಿದ್ದಿರುವ ನಂದಿಕಂಬದ ಮೇಲಿನ ಬೆಣ್ಣೆವೂರ-೧೨ ಶಾಸನದ ಪ್ರಕಾರ [A.R.NO. 488 of 1914 : SII IX pt. I. NO. 373]

"This is damaged and dated saka 1184, Dundubhi, Chaitra, ba. Amavase, Somavara Suryagrahana, The date intended was probably A.D.1263, April 9 Monday ; the cyclic year was Rudhirodgarin and there was no eclipse. The record belongs tu the reign of the Yadava king mahadevaraya and Seems to record that the mahapasayita Dalavayya ..... soyidev made a gift of the village Herada for the service of the god Mallikarjunadeva at sriparvata. The geographical division Bennevuru twelve is mentioned"

"ತೃಟಿಕ, ಶಕ ೧೧೮೪ನೆಯ ದುಂದುಭಿ, ಚೈತ್ರ, ಬ, ಅಮವಾಸ್ಯೆ, ಸೋಮವಾರ, ಸೂರ್ಯಗ್ರಹಣ ಎಂದಿದ್ದು, ಈ ಕಾಲಕ್ಕೆ ರುಧಿರೋದ್ಗಾರಿಸಂವತ್ಸರ ಬರುತ್ತದೆ. ಮತ್ತು ಸೂರ್ಯಗ್ರಹಣವಿರುವುದಿಲ್ಲ. ಅಂದರೆ ಇದು ಸರಿಸುಮಾರಾಗಿ ಕ್ರಿ.ಶ. ೯-೪-೧೨೬೩ ಸೋಮವಾರಕ್ಕೆ ಸರಿಬರುತ್ತದೆ. ಯಾದವ ದೊರೆ ಮಹಾದೇವರಾಯನ ಆಳ್ವಿಕೆ ಮತ್ತು ಶ್ರೀ ಪರ್ವತದಲ್ಲಿನ ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗಾಗಿ 'ಹೆರಡ' ಗ್ರಾಮವನ್ನು ಮಹಾಪಸಾಯಿತ ದಳವಯ್ಯ..... ಸೋಯಿದೇವನು ದಾನ ಮಾಡಿದನು. ಬೆಣ್ಣೆವೂರ-೧೨ ಈ ಶಾಸನದಲ್ಲಿ ಹೆಸರಿಸಿದೆ."

೧) ನಮಸ್ತುಂಗಶಿರಸ್ತುಂಗ ಚಂದ್ರಚಾಮರ ಚಾರವೇ ತ್ರೈ

೨) ......ಮೂಲಸ್ತಂಬಾಯ ಶಂಭವೇ[೧೧*]

೩) ಸ್ವಸ್ತಿ ಶ್ರೀಸಕವರುಷದ ೧೧೮೪ನೆಯ ದುಂದುಭಿಸಂ

೪) ವತ್ಸರದ ಚೈತ್ರ ಬಹುಳ ಅಮವಾಸೆ ಸೋಮವಾರ ಸೂ

೫) ರ್ಯ್ಯ ಗ್ರಹಣನಿಮಿತ್ತಂ ಸ್ವಸ್ತಿ ಶ್ರೀಮತು ಯಾದ

೬) ವನಾರಾಯಣ ಭುಜಬಳ ಪ್ರತಾಪಚಕ್ರವರ್ತ್ತಿ

೭) ಶ್ರೀ ವೀರಮಹಾದೇವರಾಯನ ತತು ಪಾದಪದ್ಮೋ

೮) ಪಜೀವಿ ಶ್ರೀ ಮನು ಮಹಾಪಸಾಯಿತಂ ದಳವ

೯) ಯ್ಯಮ......ಸೋಯಿೀದೇವನು ಶ್ರೀ ಶ್ರೀ ಪರ್ವ್ವತದ ಶ್ರೀ

೧೦) ಸ್ವಯಂಭುಲಿಂಗ......ಶ್ರೀ ಮಲ್ಲಿಕಾರ್ಜ್ಜು

೧೧) ನಮಹಾ.................ಭೋಗ

೧೨) ಖಂಡಸ್ಪುಟಿತಜೀರ್ಣ್ನೋ.............

೧೩) ಪಟಿಮಾಡಿದ................ಬೆಂಣೆವೂ

೧೪) ರು ಹಲನೆರಡ................ಹೆರಡವ

೧೫) ನು ಸರ್ವ್ವನ..................ವಾನಸಿದ್ಧ.

ಅದೇ ರೀತಿಯಾಗಿ ಹರಪನಹಳ್ಳಿಯ ಪಾಳೆಗಾರರ ಹಲವಾರು ಶಾಸನಗಳಲ್ಲಿ ಹ್ಯಾರಡಾದ ಉಲ್ಲೇಖವನ್ನು ನಾವುಗಳು ಕಾಣಬಹುದಾಗಿದೆ. ಆಗ್ನೇಯಕ್ಕೆ ಹೊಲವೊಂದರಲ್ಲಿ ಬಿದ್ದಿರುವ ನಂದಿಕಂಬದ ಮೇಲಿನ ಇನ್ನೊಂದು ಶಾಸನ, Madapanayaka donated land to one (name lost) Son of Senabova Hanumanna of Herada by the order of Baguli Bassappanayaka.

ಹೆರಡದ ಸೇವೋವನ ಮಗ (ಹೆಸರು ಹಾಳಾಗಿದೆ) ನಿಗೆ ಬಾಗುಳಿ ಬಸಪ್ಪನಾಯಕನ ಆದೇಶದಂತೆ ಮದಪನಾಯಕನು ಭೂದಾನ ಮಾಡಿದನು.

೦೧) ಶ್ರೀ ಮನಾಂಮಹಾನಾಯಕಚರ್ಯ್ಯ ಬಾಗುಳಿ

೦೨) ಬಸವಪನಾಯಕಾ ಅಯನವರು ಅಕ್ಷ

೦೩) ನಶೆ ನಿರುಪದಿಂದಲೂ ಸೊಗೆ

೦೪) ಮಾದಪನಾಯಕರು ಹೆರಡ

೦೫) ದ ಸೇನಬೋಗ ಹನು

೦೬) ಮಂಣನ ಮಗ[ಭ]

೦೭) ಮಪಗೆ ಕೊಟ್ಟ ಸಲೆಗೆ

೦೮) ಮಾನ್ಯರ ಹೊಲ ೧s [ಮಾ]

೦೯) ನ್ಯ ಪೂರ್ವಮರಿಯ

೧೦) ದಿ, ಕಡದತ್ತ ಕಂಮರ ಬಾಗಳೋಜ,

ಮೇಲಿನ ಉಲ್ಲೇಖದಿಂದ ಹೆರಡವನ್ನು ಹರಪನಹಳ್ಳಿಯ ಪಾಳೆಗಾರರಾದ ಬಸಪ್ಪ ನಾಯಕ, ಮದಪನಾಯಕರು ಆಳ್ವಿಕೆ ನಡೆಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಹೂವಿನಹಡಗಲಿ ತಾಲೂಕಿನ ಮಸಲವಾಡ ಗ್ರಾಮದ ಮಠದ ಪಾಳು ನಿವೇಶನದಲ್ಲಿ ಸಿಕ್ಕಿರುವ ಶಾಸನದ ಪ್ರಕಾರ ಹೆರಡ ಗ್ರಾಮವನ್ನು ದಾನವನ್ನಾಗಿ ಕೊಟ್ಟು ಆಳ್ವಿಕೆ ಮಾಡಿದ ಯಾದವದೊರೆಯೂ ಸಹ ಮೊಸಳವಾಡ(ಮಸಲವಾಡ) ವನ್ನು ಆಳ್ವಿಕೆ ಮಾಡುತ್ತಿದ್ದನು ಎಂದು ತಿಳಿದು ಬರುತ್ತದೆ.

This is dated saka 1219, Hemalambi, Margasira. Su.5, guruvara Corresponding to A.D. 1297 November 20, Wednesday, not Thurs day. In the reign of the yadava king Ramachandradeva. It records a List of some plots of land to Vinayachandradeva, disciple of Nemichandra – Ravula of the Postaka-gachechha, desi-gana and mula-

sangha by the mahamandale svara Bhairavadevarasa a Vaishnava in faith. With the Goudas and others for the jina temple at Mosalavada, which was repaired by Kesava pandita, son of savanta-pandita, the prime-minister of the Mahamandaleswara Saliveya Tika madeva- Raneya. It also records the grant of some other plots of land by the eight Hittu and the people of the village, with parisa-Gouda of Hagaranuru at their head to the temple of parsvanathadeva constructed by Kannayi at Mosalavada. Kannayi is stated to be the mother of Kesava-Pandita.

ಶಕ ೧೨೧೯ ನೆಯ ಹೇವಿಳಂಬಿ, ಮಾರ್ಗಶಿರ, ಶು-೫ ಗುರುವಾರವಾಗಿದ್ದು, ಇದು ಕ್ರಿ.ಶ. ೨೦-೧೧-೧೨೯೭ ರ ಬುಧವಾರಕ್ಕೆ (ಗುರುವಾರವಲ್ಲ) ಸಮವಾಗುತ್ತದೆ. ಇದು ಯಾದವದೊರೆ ರಾಮಚಂದ್ರದೇವನ ಆಳ್ವಿಕೆಗೆ ಸೇರಿದ್ದು, ಪೊಸ್ತಕಗಚ್ಛ, ದೇಶಿಗಣ, ಮೂಲಸಂಘದ ನೇಮಿಚಂದ್ರರಾವುಳನ ಶಿಷ್ಯ, ರಾಮಚಂದ್ರ ದೇವನಿಗೆ ಭೂದಾನ ಮಾಡಿದುದನ್ನು ಉಲ್ಲೇಖಿಸುತ್ತದೆ. ಸಾವಂತ ಪಂಡಿತನ ಮಗನಾದ ಕೇಶವ ಪಂಡಿತನು ಮೊಸಳೆವಾಡದ ಜಿನಾಲಯವನ್ನು ಜೀರ್ಣೋದ್ದಾರ ಮಾಡಿದಾಗ ವೈಷ್ಣವ ಭಕ್ತನಾದ ಮಹಾಮಂಡಲೇಶ್ವರ ಭೈರವದೇವರಸನು ಕೆಲವು ಗೌಡರೊಡಗೂಡಿ ಈ ದಾನವನ್ನು ಮಾಡಿದನು. ಎಂಟು ಹಿಟ್ಟು ಮತ್ತು ಗ್ರಾಮದ ಜನರು ಮತ್ತು ಹಗರನೂರಿನ ಮುಖ್ಯಸ್ಥ ಪಾರಿಸಗೌಡನು ಪಾರ್ಶ್ವನಾಥ ದೇವಾಲಯಕ್ಕೆ ಭೂದಾನವನ್ನು ಮಾಡಿದನು. ಮೊಸಳವಾಡದ ಈ ಪಾರ್ಶ್ವನಾಥ ದೇವಾಲಯವನ್ನು ಕೇಶವ ಪಂಡಿತನ ತಾಯಿ ಕನ್ನಾಯಿ ಮಾಡಿಸಿದಳು.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹ್ಯಾರಡಾ ಗ್ರಾಮವು ಬಹು ಪ್ರಾಚೀನವಾದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದೆ. "ಹ್ಯಾರಡ ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ೨೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಮಧ್ಯದಲ್ಲಿ ಕೋಟೆ ಇದೆ. ಹ್ಯಾರಡವನ್ನು ಶಾಸನಗಳು "ಹೆರಡ" ವೆಂದು ಕರೆದಿವೆ. ಗ್ರಾಮದ ಪಶ್ಚಿಮಕ್ಕೆ ೧೨ ಕಿ.ಮೀ ದೂದರದಲ್ಲಿರುವ ಮೈಲಾರದಲ್ಲಿ ನೂತನ ಬೃಹತ್ ಮತ್ತು ಇತಿಹಾಸದ ಆರಂಭಯುಗ ಹಂತದ ಅವಶೇಷಗಳು ಕಂಡು ಬಂದಿವೆ. ಗ್ರಾಮದ ಆಗ್ನೇಯಕ್ಕೆ ಹೊಲದಲ್ಲಿರುವ ಕ್ರಿ.ಶ. ೧೨೬೩ ರ ಯಾದವ ದೊರೆ ಮಹಾದೇವರಾಯನ ಶಾಸನದಲ್ಲಿ ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗಾಗಿ 'ಹೆರಡ' ಗ್ರಾಮವನ್ನು ದಾನ ಮಾಡಿದನೆಂದು ತಿಳಿದು ಬರುತ್ತದೆ. ಈ ಮೇಲಿನ ಆಧಾರದ ಹಿನ್ನೆಲೆಯಲ್ಲಿ ಹ್ಯಾರಡ ಗ್ರಾಮವು ಬಹು ಪ್ರಾಚೀನವಾದುದು ಎಂಬುದು ಸ್ಪಷ್ಟವಾಗುತ್ತದೆ. ಹರಪನಹಳ್ಳಿ ಪಾಳೆಯಗಾರರ ಮೂರ್ನಾಲ್ಕು ಶಾಸನಗಳು ಪಾಳೆಗಾರರ ಆಳ್ವಿಕೆಯ ವಿವರಗಳನ್ನು ನೀಡುತ್ತವೆ. ಆದರೆ ಈ ಯಾವ ಶಾಸನಗಳಲ್ಲಿಯೂ ಕೋಟೆಯ ಬಗ್ಗೆ ಪ್ರಸ್ತಾಪಗಳಿಲ್ಲ. ಹರಪನಹಳ್ಳಿಯ ಪಾಳೆಯಗಾರರು ತಮ್ಮ ಗಡಿ ರಕ್ಷಣೆಗಾಗಿ ಹಲವೆಡೆ ಸೈನಿಕ ನೆಲೆಗಳನ್ನು ಸ್ಥಾಪಿಸಿ ಕೋಟೆ ಕಟ್ಟಿಕೊಂಡಿದ್ದರು. ಇವುಗಳ ಆಧಾರದಿಂದ ಹೇಳುವುದಾದರೆ ತಮ್ಮ ರಾಜ್ಯದ ಪಶ್ಚಿಮದ ಗಡಿ ರಕ್ಷಣೆಗಾಗಿ ಹ್ಯಾರಡ ಗ್ರಾಮದಲ್ಲಿ ಕೋಟೆ ಕಟ್ಟಿಕೊಂಡಿರಬೇಕು. ಇದರ ಲಕ್ಷಣಗಳು ಸುಮಾರು ೧೭-೧೮ ನೇ ಶತಮಾನದ ಕೋಟೆ ಎಂಬುದನ್ನು ದೃಡಪಡಿಸುತ್ತೆ. ಚೌಕಾಕಾರದ ಚಿಕ್ಕ ಕೋಟೆಯಿದು. ಇದನ್ನು ಕೆತ್ತಿ ನಯಮಾಡಿದ ಮಧ್ಯಮ ಗಾತ್ರದ ಕಣಶಿಲೆಯನ್ನು ಬಳಸಿ ಇವುಗಳ ಮಧ್ಯದಲ್ಲಿ ಸಂದುಗಳಿಗೆ ಮಣ್ಣನ್ನು ಹಾಕಿ ಒಂದು ಕಲ್ಲು

ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಜೋಡಿಸಲಾಗಿದೆ. ಗೋಡೆಯ ಮಧ್ಯದಲ್ಲಿ ಯಾವುದೇ ಗಾರೆ ಲೇಪನ ಮಾಡಿಲ್ಲ. ಸುಮಾರು ೧೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಕೋಟೆಯ ಅಗಲ ಸುಮಾರು ೩ ಅಡಿಗಳಾಗಿದ್ದು ಕೆಲವೆಡೆ ಹೆಚ್ಚು ಕಡಿಮೆ ಇದೆ. ಇದರ ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರಮೈಯನ್ನು ಮಧ್ಯಮ ಗಾತ್ರದ ಕಲ್ಲುಗಳಿಂದ ಮತ್ತು ಒಳಮೈಯನ್ನು ಚಿಕ್ಕ ಕಲ್ಲುಗಳಿಂದ ಮಧ್ಯದಲ್ಲಿ ಮಣ್ಣುತುಂಬಿ ಕಟ್ಟಿದೆ. ಕೋಟೆಯ ಎತ್ತರದ ಹೊರಮೈ ಮಾತ್ರ ಸುಸ್ಥಿತಿಯಲ್ಲಿದ್ದು, ಉಳಿದೆಡೆ ಬಿದ್ದು ಹೋಗಿದೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ವೃತ್ತಾಕಾರದ ಕೊತ್ತಳಗಳಿವೆ. ಇವುಗಳ ಪೈಕಿ ಈಶಾನ್ಯ ಮೂಲೆಯ ಕೊತ್ತಳ ಮಾತ್ರ ಸ್ವಲ್ಪ ಚೆನ್ನಾಗಿದೆ. ಕೋಟೆಯ ಉತ್ತರದ ಗೋಡೆಯಲ್ಲಿ ಬಾಗಿಲನ್ನು ಜೋಡಿಸಲಾಗಿದೆ. ಇದರ ಪೂರ್ವದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಕೋಟೆಯ ತುಂಬೆಲ್ಲಾ ವಾಸದ ಮನೆಗಳಿವೆ. ಕೋಟೆಯ ನೈರುತ್ಯ ಭಾಗದಲ್ಲಿ ಪಾಳೇಯಗಾರರ ಕುಲದೈವವಾದ ಆಂಜನೇಯನ ದೇವಾಲಯವಿದ್ದು. ಕೋಟೆಯ ಮಧ್ಯಭಾಗದಲ್ಲಿ ಬಸವೇಶ್ವರರ ದೇವಾಲಯವು ಕಂಡುಬರುವುದು (ಡಾ.ಎಂ.ಕೊಟ್ರೇಶ್ : ೨೦೧೧:೧೨೨).

೨.೩ ಸ್ಥಳನಾಮ, ಪದ ನಿಷ್ಪತ್ತಿ ಮತ್ತು ಐತಿಹ್ಯ

ನಾವು ಮಾನವನ ಪ್ರಾಗೈತಿಹಾಸಿಕ ಇತಿಹಾಸವನ್ನು ಸಿಂಹಾವಲೋಕನ ಮಾಡಿದರೆ ಮಾನವನು ಅಲೆಮಾರಿಯಾಗಿದ್ದ. ಆಹಾರಕ್ಕೋಸ್ಕರ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುತ್ತಿದ್ದ. ಪ್ರಕೃತಿಯಲ್ಲಿ ಸಿಗುವಂತಹ ಗೆಡ್ಡೆ-ಗೆಣಸು, ಹಣ್ಣು-ಹಂಪಲು. ಪ್ರಾಣಿ-ಪಕ್ಷಿಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದನು. ಹೀಗೆ ದಿನನಿತ್ಯದ ಕಾಯಕ ಅವನದಾಗಿತ್ತು. ಒಂದು ಹಂತದಲ್ಲಿ ಆ ಜಾಗದಲ್ಲಿ ತನಗೆ ಬೇಕಾದ ಆಹಾರ ಪದಾರ್ಥಗಳು ಅಲಭ್ಯವಾದವು. ನಂತರ ಮಾನವನು ಆ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗುವ ಅನಿವಾರ್ಯತೆ ಉಂಟಾಯಿತು. ಇಂತಹ ಸಂಚಾರಿ ವ್ಯವಸ್ಥೆಗೆ "ಅವನ ತಾತ್ಪೂರ್ತಿಕ ನೆಲೆಗಳನ್ನು ಸಂಚಾರಿ ಗ್ರಾಮಗಳೆಂದು" ವಿದ್ವಾಂಸರು ಕರೆದಿದ್ದಾರೆ. ಹೀಗೆ ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸಂಚಾರಿ ಜೀವನವನ್ನು ನಡೆಸುತ್ತಿದ್ದನು. ದಿನ ಕಳೆದಂತೆ ಆತನು ನೀರಿನ ನೆಲೆಗಳಿರುವ ಪ್ರದೇಶಗಳಲ್ಲಿ ಒಂದೆಡೆ ನೆಲೆನಿಂತು ಜೀವನವನ್ನು ಸಾಗಿಸುವ ಕಲೆಯನ್ನು ಕರಗತ ಮಾಡಿಕೊಂಡನು. ಅದರ ಜೊತೆ-ಜೊತೆಗೆ ಕೃಷಿಯನ್ನು ಕಲಿತು ಹೊಸ ರೀತಿಯ ಜೀವನವನ್ನು ಆರಂಭಿಸತೊಡಗಿದನು. ಅಂದಿನಿಂದಲೇ ಸಮುದಾಯದ ಹಟ್ಟಿ, ಊರು, ಗ್ರಾಮಗಳು ಉಗಮವಾದವು. ಹೀಗೆ ಬಹು ದಿನಗಳವರೆಗೆ ತನ್ನ ಜೀವನವನ್ನು ಸಾಗಿಸುತ್ತಾ ಬಂದಾಗ ಆತನಲ್ಲಿ ಬೌದ್ಧಿಕ ಆಲೋಚನೆ ಹುಟ್ಟತೊಡಗಿದಾಗ ತಾನು ವಾಸಿಸುವ ಸ್ಥಳಕ್ಕೊಂದು ಹೆಸರನ್ನು ಇಡುವ ಪರಿಪಾಠಕ್ಕೆ ಬಂದನು. ಆ ಸ್ಥಳವನ್ನು ಬಹುಬೇಗವಾಗಿ ಗುರ್ತಿಸಲು ತಾನು ವಾಸಿಸುವ ಬೆಟ್ಟ, ಗುಡ್ಡ, ನದಿ, ಪ್ರಾಣಿ, ಪಕ್ಷಿ, ಗಿಡ, ಮರ ಇವುಗಳ ಜೊತೆ ಅನ್ಯೋನ್ಯವಾದ ಸಂಬಂಧವಿರುವುದರಿಂದ ಮೊದಲಿಗೆ ತನ್ನ ಸ್ಥಳಕ್ಕೆ ಇವುಗಳ ಹೆಸರುಗಳನ್ನೇ ಇಟ್ಟನು.

ನಾವು ಪ್ರಾಚೀನ ಸ್ಥಳಗಳ ಸ್ಥಳನಾಮಗಳ ಅಧ್ಯಯನವನ್ನು ಕೈಗೊಂಡಾಗ ಬಹುತೇಕ ಪ್ರಾಕೃತಿಕ ವಾಚಕಗಳನ್ನು ಬಳಸಲಾಗಿದೆ. ಪ್ರಾಣಿಗಳಿಂದ,ಮರ-ಗಿಡಗಳಿಂದ ಪ್ರಾಕೃತಿಕ ವಿಸ್ಮಯಗಳಾದ ಸಿಡಿಲು-ಮಳೆಯಿಂದ, ಜಲಸೂಚಕ ಘಟಕಗಳಾದ ನದಿಯಿಂದ, ಅರಣ್ಯದಿಂದ, ಭೌಗೋಳಿಕ ಲಕ್ಷಣದಿಂದ, ಇತ್ಯಾದಿಗಳಿಂದ ಸ್ಥಳನಾಮಗಳನ್ನು ಕರೆದಿರುವುದನ್ನು ಕಾಣಬಹುದಾಗಿದೆ.

ನಂತರದಲ್ಲಿ ಮಾನವನು ವ್ಯಕ್ತಿಯಾಧಾರಿತ ಸ್ಥಳನಾಮಗಳನ್ನು ಇಟ್ಟಿರುವುದನ್ನು ಕಾಣುತ್ತೇವೆ. ತಮ್ಮ ಸಮುದಾಯದ ಹಿರಿಯರ ಹೆಸರನ್ನೋ, ಸಮುದಾಯದ ತನ್ನ ಹೆಸರನ್ನೋ ಇಡತೊಡಗಿದನು. ಡಾ.ರಘುಪತಿಭಟ್ ಕೆಮ್ತೂರ್ ಅವರು ತಮ್ಮ ಸಂಶೋಧನಾ ಪ್ರಬಂಧವಾದ "ತುಳುನಾಡಿನ ಸ್ಥಳನಾಮಗಳು" ಎಂಬ ಕೃತಿಯಲ್ಲಿ ಎರಡು ವರ್ಗಗಳಾಗಿ ವಿಂಗಡಿಸಿದ್ದಾರೆ.

ಹಲವಾರು ವಿದ್ವಾಂಸರ ವರ್ಗೀಕರಣವನ್ನು ಅವಲೋಕಿಸಿದಾಗ ಸ್ಥಳನಾಮಗಳು ಕೇವಲ ಹೆಸರಿಗಷ್ಟೇ ಸೀಮಿತವಾಗಿರದೇ ವ್ಯಕ್ತಿಯ ಸಂಸ್ಕೃತಿ, ಜೀವನ ಕ್ರಮ, ಧಾರ್ಮಿಕ ದೃಷ್ಠಿ, ಪ್ರಕೃತಿ ಪ್ರೇಮ, ಜನಾಂಗೀಯ ಇತಿಹಾಸ ಸಂಬಂಧಗಳು, ಸಾಮಾಜಿಕ ಜೀವನ, ಮನುಕುಲದ ಇತಿಹಾಸವನ್ನು ಅಧ್ಯಯನ ಮಾಡುವುದಕ್ಕೆ ಅತ್ಯಂತ ಅವಶ್ಯಕ ಆಧಾರದ ಮೂಲಗಳಾಗಿವೆ. ಹೀಗೆ ಪ್ರತಿಯೊಂದು ಗ್ರಾಮಗಳ ಸ್ಥಳನಾಮದಲ್ಲಿ ಊರಿನ ಹಿನ್ನೆಲೆಯನ್ನು ಅರ್ಥೈಯಿಸಬಹುದು. ಗ್ರಾಮದ ಸ್ಥಳನಾಮದ ಅಧ್ಯಯನವನ್ನು ಮಾಡುವುದರಿಂದ ಗ್ರಾಮದ ಭೌಗೋಳಿಕ ಪರಿಸರದ ಇತಿಹಾಸ, ಸಂಸ್ಕೃತಿಯ ಇತಿಹಾಸ, ಚಾರಿತ್ರಿಕ ಇತಿಹಾಸವನ್ನು ಅಭ್ಯಾಸಿಸಿದಂತಾಗುತ್ತದೆ. ಅದೇ ರೀತಿಯಲ್ಲಿ ಹ್ಯಾರಡ ಗ್ರಾಮದ ಸ್ಥಳನಾಮ ಕುರಿತು ಚರ್ಚಿಸಿದಾಗ ಹಲವಾರು ಅಂಶಗಳನ್ನು ಗಮನಿಸಬಹುದು.

ಹ್ಯಾರಡ ಗ್ರಾಮದ ಕ್ಷೇತ್ರ ಕಾರ್ಯದಲ್ಲಿ ತೊಡಗಿದಾಗ ಅಲ್ಲಿಯ ಜನಪದರು ವಿಭಿನ್ನ ರೀತಿಯ ಐತಿಹ್ಯಗಳನ್ನು ಹೇಳಿದ್ದುಂಟು. ಅವರ ಎಲ್ಲಾ ಹೇಳಿಕೆಯನ್ನು ಕ್ರೋಢೀಕರಿಸಿ ಹೇಳುವುದಾದರೆ ಹಲವಾರು ಐತಿಹ್ಯಗಳನ್ನು ಇಲ್ಲಿ ಚರ್ಚಿಸಬಹುದು. ಬೆಣ್ಣೆವೂರ ಶಾಸನದಲ್ಲಿ 'ಹೆರಡವ' ಎಂಬ ಉಲ್ಲೇಖವನ್ನು ಕಾಣಬಹುದಾಗಿದೆ.

ಐತಿಹ್ಯ-೧: ಈ ಗ್ರಾಮದ ಜನಪದರು ಹೇಳುವ ಪ್ರಕಾರ ಈ ಗ್ರಾಮದ ಮೂಲ ಹೆಸರು 'ಪೇರಡ' ಎಂಬ ಪದದಿಂದ ಬಂದಿದೆ ಎಂದು ಹೇಳುವರು. ಈ ಗ್ರಾಮವು ಮೊದಲಿನಿಂದಲೂ ದಟ್ಟವಾದ ಅರಣ್ಯ (ಅಡವಿ) ದಿಂದ ಕೂಡಿದ ಗ್ರಾಮವಾಗಿದೆ. ಆದ್ದರಿಂದ ಪೇರಡವಿ–ಪೇರಡ–ಹೇರಡವಿ–ಹರಡ–ಹ್ಯಾರಡ ಎಂದು ಇಲ್ಲಿನ ಜನಪದರು ಹೇಳುತ್ತಾರೆ.

ಐತಿಹ್ಯ-೨: ಈ ಗ್ರಾಮವು ಅನಾದಿ ಕಾಲದಿಂದಲೂ ಬೆಟ್ಟ-ಗುಡ್ಡಗಳಿಂದ ವಿವಿಧ ಮರಗಳಿಂದ ಆವೃತವಾಗಿರುವ ಗ್ರಾಮವಾಗಿದೆ. ಇಲ್ಲಿ ಸಾಮಾನ್ಯವಾಗಿ ಅರಳೆ ಮರ, ಬೇವಿನ ಮರ, ಹುಣಸೆ ಮರ, ತೇಗ ಮುಂತಾದ ಮರಗಳನ್ನು ಕಾಣಬಹುದಾಗಿತ್ತಂತೆ. ಅದರಲ್ಲಿ ಪ್ರಾಚೀನ ಕಾಲದಲ್ಲಿ ಹೆಚ್ಚಾಗಿ ಅರಳೆ ಮರಗಳನ್ನು ಹ್ಯಾರಡಾ ಗ್ರಾಮದಲ್ಲಿ ಹೆಚ್ಚಾಗಿ ಕಾಣಬಹುದು. ಈ ಅರಳೆ ಮರದ ಅರಳೆ ಕಾಯಿಗಳು ಹಲವಾರು ಚಿಕಿತ್ಸಕ ಗುಣಗಳನ್ನು ಹೊಂದಿವೆ. ಈ ಅರಳೆ ಕಾಯಿಗಳನ್ನು ತೆಗೆದುಕೊಂಡು ಹೋಗಲು ಸುತ್ತಮುತ್ತಲಿನ ಗ್ರಾಮದ ಜನರು ಬರುತ್ತಿದ್ದರಂತೆ. ಈ ಅರಳೆ ಕಾಯಿಗಳನ್ನು ಸಂಸ್ಕೃತದಲ್ಲಿ 'ಹೆರಡ' ಎಂದು ಕರೆಯುವರು. ಈ ಹೆರಡ ಪದವು ಬರಬರುತ್ತಾ ಜನರ ನಾಲಿಗೆಯಲ್ಲಿ ಹ್ಯಾರಡ ಆಯಿತೆಂದು ಹೇಳುತ್ತಾರೆ.

ಐತಿಹ್ಯ–೩: ಗ್ರಾಮಗಳ ಇತಿಹಾಸವನ್ನು ಅಭ್ಯಾಸಿಸಿದಾಗ ಕರ್ನಾಟಕದ ಬಹುತೇಕ ಗ್ರಾಮಗಳು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿದ್ದವು. ಅದರಂತೆಯೇ ಹ್ಯಾರಡ ಗ್ರಾಮವೂ ಕೂಡ ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟು ಈ ಗ್ರಾಮದಲ್ಲಿ 'ಹೇರಡ್' ಎಂಬ ಬ್ರಿಟೀಷರ ಪ್ರತಿನಿಧಿ ಆಡಳಿತವನ್ನು ಮಾಡುತ್ತಿದ್ದನು. ಆತನ ಹೆಸರೇ ಬರುಬರುತ್ತಾ ಜನರ ವಾಣಿಯಲ್ಲಿ ಹೇರಡ್–ಹ್ಯಾರಡ ಆಗಿದೆ ಎಂದು ಹೇಳುತ್ತಾರೆ.

ಐತಿಹ್ಯ–೪: ಹ್ಯಾರಡಾ ಗ್ರಾಮವು ಪ್ರಾಚೀನ ಕಾಲದಿಂದಲೂ ಹಾಗೂ ಈಗಲೂ ಗಟ್ಟಿಕಲ್ಲಿನಿಂದ ಕೂಡಿದ ಪ್ರದೇಶವಾಗಿದೆ. ಆದ್ದರಿಂದ ಬ್ರಿಟೀಷರು ಇದನ್ನು 'Hard stone village' ಎಂದು ಕರೆದರು. ಅದು ಬರುಬರುತ್ತಾ ಜನವಾಣಿಯಲ್ಲಿ ಹಾರ್ಡ್–ಹರ್ಡ್–ಹೇರಡ್ – ಹ್ಯಾರಡಾ ಎಂದಾಯಿತು ಎಂಬ ಐತಿಹ್ಯವಿದೆ.

ಅಧ್ಯಾಯ-೩

ಹ್ಯಾರಡ ಗ್ರಾಮ ಸಾಮಾಜಿಕ ಜೀವನ ಸಂರಚನೆ

ಪ್ರತಿಯೊಂದು ಸಮಾಜವು ಒಂದು ಸಂರಚನೆಯನ್ನು ಹೊಂದಿರುತ್ತದೆ.ಈ ಸಂರಚನೆಯು ಅದು ಒಳಗೊಂಡಿರುವ ಘಟಕಗಳು ಸಮಾಜದ ಗುಣಲಕ್ಷಣಗಳು, ಅದರಲ್ಲಿ ವಾಸಿಸುತ್ತಿರುವ ಜನರ ನಡವಳಿಕೆಗಳು ಮುಂತಾದವುಗಳನ್ನು ವಿವರಿಸುತ್ತದೆ. ಅದರಲ್ಲಿಯೂ ಭಾರತದ ಗ್ರಾಮೀಣ ಸಮಾಜವು ತನ್ನದೇ ಆದ ಸಂರಚನೆಯನ್ನು ಮತ್ತು ವಿಶಿಷ್ಟ ಗುಣಲಕ್ಷಣಗಳನ್ನು ಪಡೆದಿದೆ.

ಗ್ರಾಮೀಣ ಸಮಾಜದಲ್ಲಿ ಸಮುದಾಯದ ಭಾವನೆ ಇರುತ್ತದೆ. ಗ್ರಾಮೀಣ ಜನರು ಒಗ್ಗಟ್ಟಿನ ಮತ್ತು ಪರಸ್ಪರರ ನಡುವೆ ವಿಶ್ವಾಸದ ಮನೋಭಾವನೆಯನ್ನು ಹೊಂದಿರುತ್ತಾರೆ. ಗ್ರಾಮೀಣ ಜನರು ಅವರ ಬಹುತೇಕ ಅವಶ್ಯಕತೆಗಳನ್ನು ಗ್ರಾಮದಲ್ಲಿಯೇ ಈಡೇರಿಸಿಕೊಳ್ಳುತ್ತಾರೆ. ಜನರಲ್ಲಿ ಸಮುದಾಯದ ಪ್ರಜ್ಞೆ ಸದಾ ಅಸ್ತಿತ್ವದಲ್ಲಿರುವುದರಿಂದ ಗ್ರಾಮವನ್ನು ಒಂದು ಸಮುದಾಯ ಎಂತಲೇ ಗುರುತಿಸಬಹುದಾಗಿದೆ. ಗ್ರಾಮವು ಒಂದು ಪ್ರಾಥಮಿಕ ಸಂಸ್ಥೆಯಾಗಿರುತ್ತದೆ. ಗ್ರಾಮದ ಅಭಿವೃದ್ಧಿಯು ಅದರಲ್ಲಿ ವಾಸಿಸುತ್ತಿರುವ ಜನರ ಜೀವನದಿಂದ ಪ್ರಭಾವಿತಗೊಂಡಿರುತ್ತದೆ. ಧರ್ಮದಲ್ಲಿ ಶ್ರದ್ದೆಯು ಗ್ರಾಮೀಣ ಸಮಾಜದಲ್ಲಿ ಗಮನಕ್ಕೆ ಬರುವ ಮತ್ತೊಂದು ಮುಖ್ಯ ಲಕ್ಷಣವಾಗಿದೆ. ಗ್ರಾಮೀಣ ಜನರಲ್ಲಿ ನಂಬಿಕೆ, ಶ್ರದ್ದೆ, ಭಯ, ಮತ್ತು ಭಕ್ತಿ ವಿಪರೀತವಾಗಿ ತುಂಬಿ ತುಳುಕುತ್ತಿರುತ್ತದೆ. ಗ್ರಾಮೀಣ ಸಮಾಜದ ಮುಖ್ಯ ಕಸುಬಾದ ಕೃಷಿಯ ಕಾರ್ಯಾಚರಣೆಯಲ್ಲಿ ಮನುಷ್ಯನು ಪ್ರಕೃತಿಯೊಡನೆ ಹೋರಾಡುತ್ತಲೇ ಇರಬೇಕಾಗಿದೆ. ಆದರೆ ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ವಿಕೋಪಗಳಿಂದ ಫಸಲು ನಷ್ಟವಾದರೆ ರೈತರಿಗೆ ಅನ್ಯಾಯವಾಗುತ್ತದೆ. ಹಾಗೂ ಅವನು ಎದೆಗುಂದುತ್ತಾನೆ. ಆಗ ಅವನಿಗೆ ನೈಸರ್ಗಿಕ ಶಕ್ತಿಗಳ ಬಗೆಗೆ ಭಯ ಪ್ರಾರಂಭವಾಗುತ್ತದೆ. ದೇವರ ಬಗ್ಗೆ ಭಯ, ಭಕ್ತಿ ಅವನಲ್ಲಿ ಹೆಚ್ಚಲು ಕಾರಣವಾಗುತ್ತದೆ. ಕೆಲವೊಮ್ಮೆ ಅವನು ಮಾಟ, ಮಂತ್ರ ಮುಂತಾದವುಗಳಿಂದಲೂ ಪ್ರಾಕೃತಿಕ ಶಕ್ತಿಗಳ ಮೇಲೆ ಜಯವನ್ನು ಸಾಧಿಸಲು ಪ್ರಯತ್ನಿಸುತ್ತಾನೆ.

"ಗ್ರಾಮೀಣ ಜನರಲ್ಲಿ ಗುಂಪು ಭಾವನೆಯು ಪ್ರಧಾನವಾಗಿರುತ್ತದೆ. ತಾವೆಲ್ಲರೂ ಒಟ್ಟಾಗಿ ವಾಸಿಸಬೇಕು, ಕಷ್ಟಸುಖಗಳನ್ನು ಹಂಚಿಕೊಳ್ಳಬೇಕು, ತಾವೆಲ್ಲರೂ ಒಂದೇ ಎಂಬ ಭಾವನೆ ಅವರಲ್ಲಿ

ಮನೆ ಮಾಡಿರುತ್ತದೆ. ಹಿರಿಯರ ಮತ್ತು ಪಂಚಾಯತಿಯ ಆದೇಶಗಳನ್ನು ಅವರು ಪಾಲಿಸುತ್ತಾರೆ ಮತ್ತು ತೀರ್ಪುಗಳನ್ನು ಅವರು ಗೌರವಿಸುತ್ತಾರೆ. ವ್ಯಕ್ತಿಯ ಮೇಲೆ ಸಮಾಜ, ಸಮುದಾಯ ಮತ್ತು ಪಂಚಾಯತಿಯ ನಿಯಂತ್ರಣವನ್ನು ಗ್ರಾಮೀಣ ಸಮುದಾಯದಲ್ಲಿ ಗಮನಿಸಬಹುದಾಗಿರುತ್ತದೆ. ಗ್ರಾಮೀಣ ಜನರು ಸರಳ ಜೀವನಕ್ಕೆ ಪ್ರಸಿದ್ಧಿ. ಇದ್ದುದರಲ್ಲಿಯೇ ಸಂತೋಷ ಪಡುವ ಮನೋಭಾವ ಅವರಲ್ಲಿ ಪ್ರಭಲವಾಗಿರುತ್ತದೆ. ಅವರ ಸಾಧನೆಗಳು ಬಹಳ ಮಿತವಾಗಿರುತ್ತವೆ. ಆಡಂಬರಕ್ಕೆ ಅವರು ಹೆಚ್ಚಿನ ಮಹತ್ವ ನೀಡುವುದಿಲ್ಲ. ಅವರು ಬಹಳ ಶಾಂತಿಯುತ ಜೀವನವನ್ನು ಸಾಗಿಸಲು ಇಷ್ಟಪಡುವರು. ಸುಳ್ಳು ಆಶ್ವಾಸನೆಗಳನ್ನು ನೀಡುವುದು ಜಂಭ ಕೊಚ್ಚಿಕೊಳ್ಳುವುದು, ಅಪಾರವಾದ ಮಹತ್ವಾಕಾಂಕ್ಷೆಯನ್ನಿಟ್ಟುಕೊಳ್ಳುವುದು ಅವರಿಗೆ ಒಗ್ಗದ ವಿಚಾರಗಳಾಗಿವೆ. ಗ್ರಾಮೀಣ ಜನರಲ್ಲಿ ನೈತಿಕತೆಯ ಮಟ್ಟವು ಬಹಳ ಉನ್ನತವಾಗಿರುತ್ತದೆ" (ಡಾ. ಹೆಚ್.ಆರ್. ಕೃಷ್ಣಯ್ಯ ಗೌಡ : ೨೦೧೭:೩೦).

ಕೃಷಿಯು ಗ್ರಾಮೀಣ ಸಮಾಜದ ಮುಖ್ಯ ಕಸುಬಾಗಿರುತ್ತದೆ. ಅದು ಗ್ರಾಮೀಣ ಜನರ ಜೀವನೋಪಾಯದ ಮೂಲವೂ ಆಗಿರುತ್ತದೆ. ಭಾರತದಲ್ಲಿ ಪ್ರಸ್ತುತದಲ್ಲಿ ಒಟ್ಟು ಜನಸಂಖ್ಯೆಯ ಶೇಕಡ ೫೬ ರಷ್ಟು ಜನರು ಕೃಷಿಯನ್ನು ಅವಲಂಭಿಸಿರುವರು. ಕೃಷಿಯು ಜೀವನದ ಒಂದು ಸಾಧನವಾಗಿರುವ ಬದಲು ಅದೊಂದು ಮಾರ್ಗವಾಗಿರುವುದು ಕಂಡುಬರುತ್ತದೆ. ಅಂದರೆ ಕೃಷಿಕರು ಪಿತ್ರಾರ್ಜಿತವಾಗಿ ದೊರೆತ ಆಸ್ತಿಯನ್ನೇ ನಂಬಿಕೊಂಡು ಅದನ್ನು ಆಶ್ರಯಿಸಿ ಹೇಗೋ ಜೀವನ ಸಾಗಿಸಬೇಕೆಂಬ ಮನೋಪ್ರವೃತ್ತಿಯನ್ನು ಹೊಂದಿದವರಾಗಿರುತ್ತಾರೆ. ಕೃಷಿಯು ಗ್ರಾಮೀಣ ಸಮಾಜದ ಮೂಲಾಧಾರವಾಗಿರುತ್ತದೆ. ಕೃಷಿಯೊಡನೆ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಾದ ಹೈನುಗಾರಿಕೆ, ತೋಟಗಾರಿಕೆ, ರೇಷ್ಮೆಬೇಸಾಯ ಮುಂತಾದವುಗಳಲ್ಲಿ ಗ್ರಾಮೀಣ ಜನರು ಹೆಚ್ಚಿನ ರೀತಿಯಲ್ಲಿ ತೊಡಗಿರುತ್ತಾರೆ. ಈ ಚಟುವಟಿಕೆಗಳು ಅವರಿಗೆ ಉಪ ಕಸುಬುಗಳಾಗಿದ್ದು, ಪೂರಕ ಉದ್ಯೋಗಕ್ಕೆ ಮತ್ತು ಹೆಚ್ಚುವರಿ ಆದಾಯ ಸಂಪಾದನೆಗೆ ನೆರವಾಗುತ್ತವೆ.

೩.೧ ವಸತಿ ನಿರ್ಮಾಣ

ಹ್ಯಾರಡ ಗ್ರಾಮದ ವಸತಿ ವ್ಯವಸ್ಥೆಯು ಕೇಂದ್ರೀಕೃತ ಲಕ್ಷಣವನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಈ ಗ್ರಾಮವು ಎತ್ತರದ ಪ್ರದೇಶದಲ್ಲಿದೆ. ಈ ಗ್ರಾಮವು ಸಹ್ಯಾದ್ರಿ ಬೆಟ್ಟಗಳಂತೆಯೇ ಸುತ್ತುವರೆದಿದೆ. ಹರಪ್ಪಾ ನಾಗರಿಕತೆಯ ವಸತಿ ವ್ಯವಸ್ಥೆಯಂತೆಯೇ ಮನೆಗಳು ವ್ಯವಸ್ಥಿತವಾಗಿ ನಿರ್ಮಾಣಗೊಂಡಿವೆ. ಈ ಗ್ರಾಮದ ಮನೆಗಳು ಬಹುತೇಕ ಒಂದಕ್ಕೊಂದು ಅಂಟಿಕೊಂಡೇ ನಿರ್ಮಾಣವಾಗಿವೆ. ಮನೆಗಳ ನಡುವಿನ ಅಂತರ ಬಹಳ ಕಡಿಮೆ. ಮನೆಗಳ ನಡುವೆ ಬಹುತೇಕ ಸಂಧಿಗಳನ್ನು ಕಾಣಬಹುದಾಗಿದೆ. ಮನೆಗಳ ಮುಂದೆ ವ್ಯವಸ್ಥಿತವಾದ ಚರಂಡಿ ವ್ಯವಸ್ಥೆಯನ್ನು ಕಾಣಬಹುದು. ಮನೆಯಲ್ಲಿ ಉಪಯೋಗಿಸಿದ ತ್ಯಾಜ್ಯ ನೀರು ಹೋಗಲು ವ್ಯವಸ್ಥಿತವಾಗಿ ಚರಂಡಿ ಅಳವಡಿಸಲಾಗಿದೆ. ಅತ್ಯಂತ ವ್ಯವಸ್ಥಿತವಾದ

ರಸ್ತೆಯ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಇತ್ತೀಚಿಗೆ ಗ್ರಾಮದ ಬಹುತೇಕ ರಸ್ತೆಗಳು ಸಿ. ಸಿ. (ಕಾಂಕ್ರೀಟ್) ರಸ್ತೆಗಳಾಗಿ ಮಾರ್ಪಾಡಾಗಿವೆ. ಮನೆಗಳ ಸಂದಿಗಳಲ್ಲಿ ಹಾಸುಕಲ್ಲುಗಳನ್ನು ಜೋಡಿಸುವುದರ ಮೂಲಕ ಕಾಲುದಾರಿಗೆ ಅವಕಾಶ ಮಾಡಿಕೊಡಲಾಗಿದೆ.

ಗ್ರಾಮದ ಬಹುತೇಕ ಮನೆಗಳು ಹಳೇ ಕಾಲದ ಮೇಲುಮುದ್ದಿಯನ್ನು ಹಾಕಿರುವ ಮನೆಗಳೇ ಹೆಚ್ಚು. ಮನೆಗಳಿಗೆ ವಿವಿಧ ರೀತಿಯ ಮರಗಳಿಂದ ಜಂತಿಗಳನ್ನು ಹಾಕುವುದರ ಮೂಲಕ ಜಂತಿಗಳಿಗೆ ಅಡ್ಡಲಾಗಿ ಜಲಾವ್ (ಮರದ ರೆಂಬೆ ಕೊಂಬೆಗಳು)ಗಳನ್ನು ಹರಡಿ ಅದರ ಮೇಲೆ ಮಣ್ಣನ್ನು ಹಾಕಿರುತ್ತಾರೆ. ಇದನ್ನು ಮೇಲುಮುದ್ದಿ ಎಂದು ಕರೆಯುವರು. ಈ ಮೇಲುಮುದ್ದಿಯನ್ನು ಸುಮಾರು ೧ ೧/೨ ಅಡಿಯಿಂದ ೨ ಅಡಿವರೆಗೆ ಹಾಕಿರುತ್ತಾರೆ. ಇಂತಹ ಮನೆಗಳು ಬೇಸಿಗೆಯ ಸಂದರ್ಭದಲ್ಲಿ ಹೆಚ್ಚು ತಂಪಾಗಿರುತ್ತವೆ. ಪ್ರತಿಯೊಂದು ಮನೆಯು ಊಟದ ಕೋಣೆ, ದೇವರ ಕೋಣೆ, ಸ್ನಾನದ ಗೃಹ, ಮಲಗುವ ಕೋಣೆ ಹಾಗೂ ವಿಸ್ತಾರವಾದ ಹುಸಿ (ಎಲ್ಲರೂ ಕುಳಿತುಕೋಳ್ಳುವ ಜಾಗ) ಯನ್ನು ಹೊಂದಿರುತ್ತದೆ. ಈ ಹುಸಿಯಲ್ಲಿ ಗೋಡೆಗಳ ಮೇಲೆ ತಮ್ಮಿಷ್ಟವಾದ ದೈವಗಳ ಫೋಟೋಗಳನ್ನು ಕಾಣಬಹುದಾಗಿದೆ. ಮೊದಮೊದಲು ಎಲ್ಲರ ಮನೆಯಲ್ಲಿಯೂ ಎಲ್ಲಾ ಸಮುದಾಯದ ದೈವಗಳ ಫೋಟೋಗಳು ರಾರಾಜಿಸುತ್ತಿದ್ದವು. ಬದಲಾದ ಆಧುನಿಕತೆಯ ಪರಿಸ್ಥಿತಿಗೆ ತಮ್ಮ ಸಮುದಾಯ ಸಾಂಸ್ಕೃತಿಕ ನಾಯಕರ ಫೋಟೋಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ ಕುರುಬರ ಮನೆಗಳಲ್ಲಿ ಕನಕದಾಸರ ಫೋಟೋ, ವಾಲ್ಮೀಕಿ ಸಮುದಾಯದವರ ಮನೆಯಲ್ಲಿ ವಾಲ್ಮೀಕಿ ಋಷಿಯ ಫೋಟೋ, ಹರಿಜನರ ಮನೆಯಲ್ಲಿ ಅಂಬೇಡ್ಕರರ ಫೋಟೋ, ಲಿಂಗಾಯತರ ಮನೆಯಲ್ಲಿ ಬಸವಣ್ಣನ ಫೋಟೋ, ಮಡಿವಾಳರ ಮನೆಯಲ್ಲಿ ಮಡಿವಾಳ ಮಾಚಿದೇವ ಫೋಟೋ, ಅಂಬಿಗರ ಮನೆಯಲ್ಲಿ ಅಂಬಿಗರ ಚೌಡಯ್ಯನ ಫೋಟೋಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇತ್ತೀಚಿಗೆ ಆರ್ಥಿಕವಾಗಿ ಬಲಿಷ್ಠರಾದ ಕುಟುಂಬದವರು ಆರ್.ಸಿ.ಸಿ ಮನೆಯನ್ನು ರಚಿಸಿ ಮನೆಯ ಬಾಗಿಲುಗಳಿಗೆ ತಮ್ಮ ಸಾಂಸ್ಕೃತಿಕ ನಾಯಕರ ಚಿತ್ರವನ್ನು ಕೆತ್ತನೆ ಮಾಡಿಸಿಕೊಳ್ಳುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಸಾಮಾನ್ಯವಾಗಿ ಇಲ್ಲಿ ಸಮುದಾಯದ ಓಣಿಗಳನ್ನು ಕಾಣಬಹುದಾಗಿದೆ. ಕುಕ್ಕಿಹಳ್ಳಿಯಲ್ಲಿ ಬಹುತೇಕ ವಾಲ್ಮೀಕಿ ಸಮುದಾಯದವರು ಕಂಡುಬಂದರೆ, ಬೇವಿನಕಟ್ಟಿ ಓಣಿ(ಸಂಗಮೇಶ್ವರನ ದೇವಸ್ಥಾನದ ಹತ್ತಿರ) ಹೆಚ್ಚಾಗಿ ಲಿಂಗಾಯಿತ ಸಮುದಾಯದವರು ಕಂಡುಬಂದರೆ, ಹರಿಜನಕೇರಿಯಲ್ಲಿ ಹೆಚ್ಚಾಗಿ ಮಾದಿಗ ಸಮುದಾಯದವರು ಕಂಡುಬಂದರೆ, ಕಮ್ಮಾರ ಓಣಿಯಲ್ಲಿ ಹೆಚ್ಚಾಗಿ ಕಮ್ಮಾರ ಸಮುದಾಯದವರು ಕಂಡುಬಂದರೆ, ಲಕ್ಕಪ್ಪನ ಓಣಿಯಲ್ಲಿ ಹೆಚ್ಚಾಗಿ ಕುರುಬ ಸಮುದಾಯದ ಮನೆಗಳನ್ನು ಕಾಣಬಹುದಾಗಿದೆ.

ಬಹುತೇಕವಾಗಿ ಎಲ್ಲಾ ಸಮುದಾಯದವರು ಒಂದೇ ರೀತಿಯಾದ ವಸತಿ ವ್ಯವಸ್ಥೆಯನ್ನು ಹೊಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಕೆಲವೊಂದು ಸೀಮೆ ಹಂಚಿನಿಂದ ತಯಾರಿಸಿದ

ಮನೆಗಳನ್ನು ಕಾಣಬಹುದಿತ್ತು, ಸಾಮಾನ್ಯವಾಗಿ ಈ ಹಂಚುಗಳು ಗಟ್ಟಿಯಾಗಿಲ್ಲದ ಕಾರಣ ಬಹಳ ಬೇಗನೇ ಹಾಳಾಗುವುದರಿಂದ ಕಬ್ಬಿಣದ ತಗಡುಗಳಿಂದ ನಿರ್ಮಾಣ ಮಾಡಿದ ಮನೆಗಳನ್ನು ಕಾಣಬಹುದಾಗಿದೆ. ಕಳೆದ ಬಹುತೇಕ ವರ್ಷಗಳಿಂದ ಇಂತಹ ಮನೆಗಳನ್ನು ಕಾಣಬಹುದು. ಇವುಗಳನ್ನು ಹೆಚ್ಚಾಗಿ ದನಕರುಗಳು, ಎತ್ತು, ಎಮ್ಮೆಗಳನ್ನು ಕಟ್ಟಲು ಉಪಯೋಗಿಸುವುದುಂಟು. ಇತ್ತೀಚಿಗೆ ಗ್ರಾಮವು ಆಧುನಿಕ ಪ್ರಪಂಚಕ್ಕೆ ತೆರೆದುಕೊಳ್ಳುತ್ತಿದ್ದಂತೆಯೇ ಗ್ರಾಮದಲ್ಲಿ ಹೆಚ್ಚಾಗಿ ಆರ್.ಸಿ.ಸಿ ಮನೆಗಳು ನಿರ್ಮಾಣವಾಗುತ್ತಿವೆ. ಕೆಲವೊಬ್ಬರು ಪಟ್ಟಿ ಜಂತಿಯನ್ನು ಹೊಂದಿಸಿ ಅವುಗಳಿಗೆ ಕರೂರಿನ ಕಡಪಾ ಕಲ್ಲುಗಳನ್ನು ಹರಡಿ ಅದರ ಮೇಲೆ ಆರ್.ಸಿ.ಸಿಯನ್ನು ಹಾಕುವ ಹೊಸದೊಂದು ವಸತಿ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಬಹುತೇಕವಾಗಿ ಆರ್.ಸಿ.ಸಿ ಮನೆಗಳನ್ನು ಹರಿಹರದ ಹತ್ತಿರದ ಗುತ್ತೂರು ಇಟ್ಟಿಗೆಗಳಿಂದ ನಿರ್ಮಾಣ ಮಾಡುವ ಪರಿಪಾಠವನ್ನು ಬೆಳಸಿಕೊಂಡಿದ್ದಾರೆ. ಮನೆಯ ಪ್ರತಿಯೊಂದು ಗೋಡೆಗಳನ್ನು ಸಿಮೆಂಟಿನಿಂದ ಪ್ಲಾಸ್ಟರ್ ಮಾಡಲಾಗುತ್ತದೆ. ಆ ಗೋಡೆಗಳಿಗೆ ಮತ್ತೆ ಲಫ (ಗೋಡೆಗಳು ನಯವಾಗಿ ಕಾಣಲು ಮಾಡುವ ಕೆಲಸ)ವನ್ನು ಮಾಡಿ ವಿಧ ವಿಧವಾದ ಬಣ್ಣಗಳನ್ನು ಹಚ್ಚುವ ಪರಿಪಾಠವಿದೆ. ಆರ್ಥಿಕವಾಗಿ ಬಲಿಷ್ಠರಾದವರು ಇತ್ತೀಚಿಗೆ ಹುಸಿಯ ಮೇಲ್ಭಾಗಕ್ಕೆ ವಿಧ-ವಿಧವಾದ ಚಿತ್ತಾರದ ಪಿ.ಓ.ಪಿ. (ಪ್ಲಾಸ್ಟರ್ ಆಫ್ ಪ್ಯಾರಿಸ್)ನ್ನು ಅಳವಡಿಸುವುದುಂಟು. ಇವುಗಳನ್ನು ಮಾಡುವ ಉದ್ದೇಶ ನೋಡುಗರ ಕಣ್ಣಿಗೆ ಅಂದ ಚೆಂದವಾಗಿ ಕಾಣಲು. ಮನೆಯ ಕೆಳಭಾಗಕ್ಕೆ ಟೈಲ್ಸ್, ಮಾರ್ಬಲ್, ಗ್ರಾನೈಟ್ ಹಾಕುವ ಪದ್ಧತಿಯನ್ನು ಆರ್.ಸಿ.ಸಿ ಮನೆಯಲ್ಲಿ ಕಾಣಬಹುದಾಗಿದೆ.

ಗ್ರಾಮದ ಬಹುತೇಕ ಬಡಜನರು ಇನ್ನೂ ಸರ್ಕಾರದಿಂದ ಕೊಡ ಮಾಡಿದ ಆಶ್ರಯ ಮನೆಯನ್ನೇ ಅವಲಂಬಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಗ್ರಾಮ ಪಂಚಾಯಿತಿಯ ಮೂಲಕ ಬಸವ ಯೋಜನೆ, ಇಂದಿರಾ ಆವಾಸ್ ಯೋಜನೆ, ರಾಜೀವ್‌ಗಾಂಧಿ ಆವಾಸ್ ಯೋಜನೆಯ ಆಶ್ರಯ ಮನೆಗಳನ್ನು ಅವಲಂಬಿಸಿರುವುದನ್ನು ನಾವಿಲ್ಲಿ ಕಾಣಬಹುದು. ಈ ಆಶ್ರಯ ಯೋಜನೆಯಡಿಯಲ್ಲಿ ಬಹುತೇಕ ಪರಿಶಿಷ್ಟ ಸಮುದಾಯ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವುದನ್ನು ಕಾಣಬಹುದಾಗಿದೆ. ಇಂತಹ ಶೇ ೫೦ ರಷ್ಟು ಮನೆಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಹಿಂದಿನ ದಿನಮಾನಗಳಲ್ಲಿ ಹ್ಯಾರಡಾ ಗ್ರಾಮದಲ್ಲಿ ಕೃಷಿ ಮಾಡಲು ಅವಶ್ಯಕವಾಗಿರುವ ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಆಡು, ಎತ್ತುಗಳು ಮುಂತಾದವುಗಳನ್ನು ಒಂದೇ ಮನೆಯಲ್ಲಿ ಕಟ್ಟಿ ಅದರಲ್ಲಿ ಅವರೂ ಕೂಡ ವಾಸವಾಗುತ್ತಿದ್ದರು. ಆಧುನಿಕತೆಯ ಪ್ರಭಾವದಿಂದ ಇಂದು ದನ-ಕರುಗಳಿಗೆ ಪ್ರತ್ಯೇಕವಾದ ಕೊಟ್ಟಿಗೆ ಮನೆಗಳನ್ನು ಕಾಣಬಹುದಾಗಿದೆ. ಹ್ಯಾರಡ ಗ್ರಾಮದ ಶೇ ೮೦ ರಷ್ಟು ಜನರು ಶೌಚಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಈ ಕಾರ್ಯದಲ್ಲಿ ಗ್ರಾಮ ಪಂಚಾಯತಿಯ ಕಾರ್ಯ ಶ್ಲಾಘನೀಯವಾದುದು. ಈ ಪ್ರಯತ್ನಕ್ಕೆ ಹ್ಯಾರಡಾ ಗ್ರಾಮ ಪಂಚಾಯತಿಗೆ ಗಾಂಧಿ ನಿರ್ಮಲ ಗ್ರಾಮ ಪ್ರಶಸ್ತಿ ಲಭಿಸಿದೆ.

೩.೨ ಆಹಾರ ಪದ್ಧತಿ

ಮನುಷ್ಯನಿಗೆ ಮುಖ್ಯವಾಗಿ ಆಹಾರ ಬೇಕು. ತನ್ನ ಹಸಿವನ್ನು ನಿವಾರಿಸಿಕೊಳ್ಳಲು ಆಹಾರವನ್ನು ಸೇವಿಸುತ್ತಾನೆ. ಹಳೇ ಶಿಲಾಯುಗದಲ್ಲಿ ಮನುಷ್ಯನು ಆಹಾರಕ್ಕಾಗಿ ಗೆಡ್ಡೆ-ಗೆಣಸು, ಮಾಂಸ, ಹಣ್ಣು-ಹಂಪಲುಗಳನ್ನು ಹಸಿಯಾಗಿಯೇ ತಿನ್ನುತ್ತಿದ್ದನು. ಆಗ ಅವನಿಗೆ ಬೆಂಕಿಯ ಉಪಯೋಗ ಗೊತ್ತಿರಲಿಲ್ಲ. ಬೆಂಕಿಯ ಆವಿಷ್ಕಾರ ಆದ ಮೇಲೆ ಪದಾರ್ಥಗಳನ್ನು ಬೇಯಿಸಿಕೊಂಡು ತಿನ್ನುವ ಪರಿಪಾಠವನ್ನು ಬೆಳೆಸಿಕೊಂಡನು. ಹೀಗೆ ಮಾನವನು ರುಚಿಯ ಬೆನ್ನು ಹತ್ತಿ ವಿವಿಧ ರೀತಿಯ ಅಡುಗೆ ಪದಾರ್ಥಗಳನ್ನು ಕಂಡು ಹಿಡಿದು ಆಹಾರದ ರೀತಿಯಲ್ಲಿ ತಿನ್ನತೊಡಗಿದನು. ಹ್ಯಾರಡ ಗ್ರಾಮದಲ್ಲಿ ಪ್ರತಿಯೊಂದು ಸಮುದಾಯದವರು ವಿಧ-ವಿಧವಾದ ವಿಶಿಷ್ಟ ರೀತಿಯ ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ. ಒಂದೊಂದು ಸಮುದಾಯಕ್ಕೂ ಆಹಾರದ ಭಿನ್ನತೆಯನ್ನು ನಾವುಗಳು ಕಾಣುತ್ತೇವೆ.

ಹ್ಯಾರಡ ಗ್ರಾಮದಲ್ಲಿ ಆಹಾರವನ್ನು ತಯಾರಿಸಲು ಪ್ರತ್ಯೇಕವಾದ ಅಡುಗೆ ಕೋಣೆಯನ್ನು ನಿರ್ಮಾಣ ಮಾಡಿರುತ್ತಾರೆ. ಹಿಂದಿನ ಕಾಲದಲ್ಲಿ ಮಣ್ಣಿನ ಮಡಿಕೆ, ಕುಡಿಕೆ, ಗಡಿಗೆಯನ್ನು ಬಳಸುತ್ತಿದ್ದರು. ಕುಂಬಾರರು ತಯಾರಿಸಿದ ಮಣ್ಣಿನ ಒಲೆಗಳನ್ನು ತಂದು ಅಡುಗೆ ಮನೆಯ ಗೊತ್ತಾದ ಮೂಲೆಯಲ್ಲಿ ಇದನ್ನು ನೆಲದಲ್ಲಿ ಹುದುಗಿಟ್ಟು ಬೆಂಕಿಯನ್ನು ಅದರಲ್ಲಿ ಹಾಕಿ ಆಹಾರವನ್ನು ಬೇಯಿಸುವ ಪದ್ಧತಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿತ್ತು. ಈಗಲೂ ಸಹ ಹ್ಯಾರಡ ಗ್ರಾಮದಲ್ಲಿ ಬಹುತೇಕವಾಗಿ ಮಣ್ಣಿನ ಒಲೆಗಳನ್ನು ಮಾಡಿರುವುದನ್ನು ನಾವು ಕಾಣಬಹುದು. ದಿನನಿತ್ಯ ಮುಂಜಾನೆ ಎದ್ದ ತಕ್ಷಣ ಒಲೆಯನ್ನು ಕೆಮ್ಮಣ್ಣಿನಿಂದ ಬಳಿದು ಅದಕ್ಕೆ ಕುಂಕುಮ, ಭಂಡಾರ, ಊದುಬತ್ತಿ ಹಚ್ಚಿ ಆಹಾರವನ್ನು ತಯಾರಿಸುವ ಪರಿಪಾಠವನ್ನು ಇಂದಿಗೂ ಹ್ಯಾರಡ ಗ್ರಾಮದಲ್ಲಿ ಕಾಣುತ್ತೇವೆ.ಇತ್ತೀಚಿಗೆ ಆಧುನಿಕತೆಯ ಪ್ರಭಾವ ಜೋರಾದಂತೆ ಬಹುತೇಕ ಮನೆಯಲ್ಲಿ ಗ್ಯಾಸ್‌ಗಳನ್ನು ಬಳಸಿ ಸ್ಟವ್‌ಗಳ ಮೂಲಕ ಆಹಾರವನ್ನು ಬೇಯಿಸುವ ಪದ್ಧತಿಯನ್ನು ನಾವು ಕಾಣಬಹುದಾಗಿದೆ. ಹ್ಯಾರಡ ಗ್ರಾಮದ ಆಹಾರ ಪದ್ಧತಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

೦೧ ನಿತ್ಯದ ಅಡುಗೆ

೦೨ ಹಬ್ಬ ಜಾತ್ರೆ, ಮದುವೆ ವಿಶೇಷ ಸಂದರ್ಭದ ಅಡುಗೆ

೦೩ ಪಾನೀಯಗಳು.

೦೧ ನಿತ್ಯದ ಅಡುಗೆ ಹ್ಯಾರಡ ಗ್ರಾಮದಲ್ಲಿ ದಿನನಿತ್ಯದ ಅಡುಗೆಯಾಗಿ ರೊಟ್ಟಿ,ಅನ್ನ, ಮುದ್ದೆ ವಿವಿಧ ರೀತಿಯ ಸಾಂಬಾರು, ಹಾಗೂ ಮಾಂಸವನ್ನು ಸೇವಿಸುವುದನ್ನು ಕಾಣಬಹುದು. ನಿತ್ಯದ ಅಡುಗೆಯಲ್ಲಿ ಎರಡು ವಿಧ.

ಸಸ್ಯಾಹಾರದ ಅಡುಗೆ.

ಮಾಂಸಾಹಾರದ ಅಡುಗೆ.

ಸಸ್ಯಾಹಾರದ ಅಡುಗೆ

ಹ್ಯಾರಡ ಗ್ರಾಮದ ಜನಪದರು ದಿನನಿತ್ಯದ ಅಡುಗೆಯಲ್ಲಿ ಸಸ್ಯ ಜನ್ಯ ಮೂಲದಿಂದ ಬಂದ ಉತ್ಪನ್ನಗಳನ್ನು ಬಳಸಿಕೊಂಡು ಸಸ್ಯಾಹಾರವನ್ನು ತಯಾರಿಸುವುದುಂಟು. ಇದರ ಜೊತೆ-ಜೊತೆಗೆ ಪರಿಶಿಷ್ಟ ಜಾತಿ, ವಾಲ್ಮೀಕಿ, ಕುರುಬ, ಮಡಿವಾಳ, ಬಾರಿಕೇರ ಸಮುದಾಯದವರು ದಿನನಿತ್ಯದ ಅಡುಗೆಯಾಗಿ ಆಗಾಗ ಮಾಂಸಾಹಾರವನ್ನು ಸೇವಿಸುವುದುಂಟು. ಸಸ್ಯಜನ್ಯ ಮೂಲವಾದ ಪ್ರಮುಖವಾದ ಆಹಾರಗಳು ಕೆಳಕಂಡಂತಿವೆ.

೦೧ ರೊಟ್ಟಿ

* ಬೇಕಾಗುವ ವಸ್ತುಗಳು : ಜೋಳದ ಹಿಟ್ಟು

* ತಯಾರಿಸುವ ಬಗೆ : ಜೋಳದ ಹಿಟ್ಟನ್ನು ಬಿಸಿನೀರಿನಿಂದ ಮಿಶ್ರಣ ಮಾಡಿಕೊಂಡು ಚೆನ್ನಾಗಿ ಆ ಹಿಟ್ಟನ್ನು ಕೊಣಬಿಗಿಯಲ್ಲಿ ನಾದುವರು. ಅದು ಒಂದು ಹಂತಕ್ಕೆ ಮೃದು ಬರುವುದು. ತದನಂತರ ಕೊಣಬಿಗೆಯಲ್ಲಿ ನಾದಿದ ಹಿಟ್ಟಿನ ಸಣ್ಣ ಸಣ್ಣ ಭಾಗ ತೆಗೆದುಕೊಳ್ಳುವರು. ಅದನ್ನು ವೃತ್ತಾಕಾರವಾಗಿ ಕೈಯಿಂದ ಬಡಿಯುವರು. ತದ ನಂತರ ಅದನ್ನು ಒಲೆಯ ಮೇಲಿರುವ ಕಾದ ಹಂಚಿನ ಮೇಲೆ ಎರಡೂ ಕಡೆ ಬೇಯಿಸುವರು. ಆಗ ಬಿಸಿ-ಬಿಸಿಯಾದ ರೊಟ್ಟಿ ತಯಾರಾಗುವುದು.

ಈಗಲೂ ಹಳ್ಳಿಗಳಲ್ಲಿ ಬಹುತೇಕವಾಗಿ ರೊಟ್ಟಿಯನ್ನು ಪ್ರಮುಖ ಆಹಾರವನ್ನಾಗಿ ಸೇವಿಸುವರು. ಈ ಆಹಾರದಲ್ಲಿ ಪ್ರಮುಖವಾಗಿ ಕಾರ್ಬೋಹೈಡ್ರೇಟ್ಸ್ ಇರುವುದರಿಂದ ದೇಹಕ್ಕೆ ಬೇಕಾಗುವ ಪ್ರಮುಖ ಪೋಷಕಾಂಶಗಳನ್ನು ಒದಗಿಸುತ್ತದೆ. ಈ ಆಹಾರವನ್ನು ಸೇವಿಸುವುದರಿಂದ ವ್ಯಕ್ತಿಯು ದಿನವಿಡೀ ಎಂತಹ ಶ್ರಮದಾಯಕ ಕೆಲಸಗಳನ್ನು ಮಾಡಬಹುದಾಗಿದೆ. ಅದರಲ್ಲಿ ಪ್ರಮುಖವಾಗಿ ಗ್ರಾಮೀಣ ಜನಪದರು ಶ್ರಮದಾಯಕ ಕೆಲಸಗಳನ್ನು ಮಾಡುವುದರಿಂದ ಇಂತಹ ಆಹಾರದ ಅವಶ್ಯಕತೆಯನ್ನು ಕಾಣಬಹುದಾಗಿದೆ.

೦೨ ಜೋಳದ ಮುದ್ದೆ

* ಬೇಕಾಗುವ ಸಾಮಗ್ರಿ ;- ಜೋಳದ ಹಿಟ್ಟು

* ತಯಾರಿಸುವ ಬಗೆ :- ಒಂದು ಸಣ್ಣ ದಬರಿಯಲ್ಲಿ ನೀರನ್ನು ಹಾಕಿ ಒಲೆಯ ಮೇಲೆ ನೀರನ್ನು ಬಿಸಿ ಮಾಡುವುದರ ಮೂಲಕ ಕುದಿಸುವುದು, ಇದನ್ನು ಜನಪದ ಭಾಷೆಯಲ್ಲಿ ಹೆಸರಿಡುವುದು ಎಂದು ಕರೆಯುವರು. ನೀರು ಕುದಿಯುವ ಸಮಯದಲ್ಲಿ ಸೌಟಿನಿಂದ ಸ್ವಲ್ಪ ಸ್ವಲ್ಪ ಜೋಳದ ಹಿಟ್ಟನ್ನು ಹಾಕುತ್ತಾ ಹುಟ್ಟಿನಿಂದ ಹಿಟ್ಟು ಮಿಶ್ರಿತ ನೀರನ್ನು ಸದಾ ಹುಟ್ಟಾಡುವರು. ಒಂದು ಹಂತಕ್ಕೆ ಸ್ವಲ್ಪ ಗಟ್ಟಿಯಾದ ನಂತರ ಅದನ್ನು ಒಲೆಯಿಂದ ಕೆಳಗಿಳಿಸಿ ಅದನ್ನು ಕೈಬಟ್ಟಲಿನಿಂದ ವೃತ್ತಾಕಾರದ ಮುದ್ದೆಯನ್ನು ಮಾಡಿ ತಟ್ಟೆಗೆ ಹಾಕಿಕೊಂಡು ಮುದ್ದೆ ಆಹಾರವನ್ನು ಸೇವಿಸುವರು.

ಉತ್ತರ ಕರ್ನಾಟಕ, ಮಧ್ಯ ಕರ್ನಾಟಕದಲ್ಲಿ ಬಹುತೇಕವಾಗಿ ಮುದ್ದೆಯನ್ನು ಬಳಸುವುದುಂಟು. ಅತ್ಯಂತ ಕಡಿಮೆ ಅವಧಿಯಲ್ಲಿ ಆಹಾರವನ್ನು ತಯಾರಿಸಿ ದೇಹಕ್ಕೆ ಬೇಕಾಗಿರುವ ಅಗತ್ಯವಾದ ಕಾರ್ಬೋರ್ಹೈಡ್ರೇಟ್ಸ್‌ಗಳನ್ನು ಪಡೆಯಬಹುದಾಗಿದೆ. ಗ್ರಾಮೀಣ ಜನಪದರು ಪ್ರತಿನಿತ್ಯ ಸೇವಿಸುವ ಆಹಾರ ಪದಾರ್ಥವಾಗಿದೆ.

೦೩. ಬೇಳೆ ಸಾರು

* ಬೇಕಾಗುವ ಸಾಮಗ್ರಿಗಳು :- ಬೇಳೆ, ಖಾರದ ಪುಡಿ, ಉಪ್ಪು, ಅರಿಶಿನ ಪುಡಿ, ಮಸಾಲ ಪದಾರ್ಥ, ಎಣ್ಣೆ, ಜೀರಿಗೆ, ಸಾಸಿವೆ, ಕರಿಬೇವು, ಕೊತ್ತಂಬರಿ, ಬೆಳ್ಳುಳ್ಳಿ, ಒಣ ಮೆಣಸಿನ ಕಾಯಿ.

* ತಯಾರಿಸುವ ಬಗೆ:- ಒಲೆಯ ಮೇಲೆ ನೀರನ್ನು ಕುದಿಸುವುದು, ನೀರು ಕುದಿಯುವ ಬಿಂದು ತಲುಪಿದಾಗ ಬೇಳೆಯನ್ನು ಚೆನ್ನಾಗಿ ಕುದಿಸುವುದು, ತದ ನಂತರದಲ್ಲಿ ಖಾರದ ಪುಡಿ,ಉಪ್ಪು ಅರಿಶಿನ ಪುಡಿ, ಮಸಾಲ ಪದಾರ್ಥ ಇವುಗಳನ್ನು ಚೆನ್ನಾಗಿ ಮಿಶ್ರಣ ಮಾಡುವುದು, ತದ ನಂತರದಲ್ಲಿ ಎಣ್ಣೆಯಿಂದ ಒಗ್ಗರಣೆ ಹಾಕುವುದು.

ಬಹುತೇಕ ಹಳ್ಳಿಗಳಲ್ಲಿ ಬೇಳೆ ಸಾರು ಸರ್ವೇಸಾಮಾನ್ಯವಾದುದು. ಏಕೆಂದರೆ ಹೆಚ್ಚಾಗಿ ಹಳ್ಳಿಗಳಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವುದುಂಟು. ರೊಟ್ಟಿ, ಮುದ್ದೆ, ಅನ್ನದ ಜೊತೆಗೆ ಈ ಪದಾರ್ಥವನ್ನು ಬಳಸುವುದುಂಟು. ಈ ಪದಾರ್ಥದಲ್ಲಿ ಹೆಚ್ಚಾಗಿ ಪ್ರೋಟೀನ್ ಅಂಶ ಇರುವುದರಿಂದ ದೇಹಕ್ಕೆ ಅತ್ಯವಶ್ಯಕವಾದುದು. ಎಲ್ಲಾ ದ್ವಿದಳ ಧಾನ್ಯಗಳಲ್ಲಿ ಹೇರಳವಾಗಿ ಪ್ರೋಟೀನ್ ಅಂಶ ಇರುವುದರಿಂದ ಹೆಚ್ಚಾಗಿ ಈ ಪದಾರ್ಥವನ್ನು ಸೇವಿಸುವುದನ್ನು ಕಾಣಬಹುದಾಗಿದೆ. ಹಳ್ಳಿಗಳಲ್ಲಿ ಪ್ರತಿನಿತ್ಯ ಈ ಬೇಳೆ ಸಾಂಬಾರನ್ನು ಬಳಸುವುದನ್ನು ಕಾಣಬಹುದಾಗಿದೆ.

೦೪ ಟೊಮೋಟಾ ಸಾಂಬಾರ

* ಬೇಕಾಗುವ ಸಾಮಗ್ರಿಗಳು : ಟೊಮೋಟ ಹಣ್ಣುಗಳು, ಕೊಬ್ಬರಿ, ಜೀರಿಗೆ, ಎಣ್ಣೆ, ಲವಂಗ, ಯಾಲಕ್ಕಿ, ಚೆಕ್ಕಿ, ಗಸಗಸೆ, ಕೊತ್ತಂಬರಿ ಕಾಳು, ಹಸಿಶುಂಠಿ, ಉಪ್ಪು ಇತ್ಯಾದಿ,

* ತಯಾರಿಸುವ ಬಗೆ : ಮೇಲೆ ತಿಳಿಸಿದ ಎಲ್ಲಾ ಪದಾರ್ಥಗಳನ್ನು ಎಣ್ಣೆಯಿಂದ ಮಿತವಾಗಿ ಕರಿಯುವುದು. ನಂತರ ಈ ಪದಾರ್ಥಗಳನ್ನು ಮಿಕ್ಸಿ ಅಥವಾ ದುಂಡಿಯಿಂದ ರುಬ್ಬುವುದು, ನಂತರ ಒಲೆಯ ಮೇಲೆ ಎಣ್ಣೆಯನ್ನು ಬಿಸಿ ಮಾಡಿ ಅದರಲ್ಲಿ ಅಗತ್ಯಕ್ಕೆ ತಕ್ಕಂತೆ ಮಸಾಲೆ, ನೀರು, ಉಪ್ಪು, ಹುಳಿ ಹಾಕಿ ಅದನ್ನು ಕುದಿಸುವುದರ ಮೂಲಕ ಮಿಕ್ಸಿಯಿಂದ ರುಬ್ಬಿದ ಪದಾರ್ಥವನ್ನು ಹಾಕುವುದು.

ಗ್ರಾಮೀಣ ಜನಪದರು ಹೆಚ್ಚಾಗಿ ತಾಜಾ ತರಕಾರಿಗಳನ್ನು ತಮ್ಮ ಹೊಲದಲ್ಲಿಯೇ ಬೆಳೆಯುವುದುಂಟು. ಅದರಲ್ಲಿ ಪ್ರಮುಖವಾಗಿ ಟೊಮೋಟಾ ತರಕಾರಿಯನ್ನು ಹೆಚ್ಚು ಹೆಚ್ಚು

ಬೆಳೆಯುವರು. ಇದರಿಂದ ಟೊಮೋಟಾ ಸಾಂಬಾರು ತಯಾರಿಸುವರು. ಈ ತರಕಾರಿಯಲ್ಲಿ ಹೆಚ್ಚಾಗಿ ವಿಟಮಿನ್ ಸಿ ಇರುವುದನ್ನು ಕಾಣಬಹುದಾಗಿದೆ. ವಿಟಮಿನ್ ಸಿ ಯಿಂದ ದೇಹವು ಆರೋಗ್ಯಯುತವಾಗಿರುವುದನ್ನು ಕಾಣಬಹುದಾಗಿದೆ. ಎಲ್ಲಾ ಆಹಾರ ಪದಾರ್ಥಗಳ ಜೊತೆಗೆ ಈ ಟೊಮೋಟಾ ಸಾಂಬಾರನ್ನು ಬಳಸುವುದುಂಟು.

೦೫ ಬೆರಿಕೆ ಸೊಪ್ಪಿನ ಸಾರು

* ಬೇಕಾಗುವ ಸಾಮಗ್ರಿಗಳು : ಎಲ್ಲಾ ರೀತಿಯ ಸೊಪ್ಪುಗಳಾದ ಉಳಿಚಿಕ ಸೊಪ್ಪು, ಪಾಲಕ ಸೊಪ್ಪು, ಕೊತ್ತಂಬರಿ ಸೊಪ್ಪು, ಕೆಂಪು ಹರ್ವಿ ಸೊಪ್ಪು, ಪುಂಡಿ ಸೊಪ್ಪು, ಅಣ್ಣೇ ಸೊಪ್ಪು, ಕರಿಗಣಿಕೆ ಸೊಪ್ಪು, ಹೊನೆಗೊನೆ ಸೊಪ್ಪು, ಗಣಿಕೆ ಸೊಪ್ಪು, ಕುಂಬಳ ಕುಡಿ, ನುಗ್ಗೇ ಕುಡಿ ಇತ್ಯಾದಿ, ಖಾರದ ಪುಡಿ, ಅರಿಶಿನ ಪುಡಿ, ಉಪ್ಪು, ಮಸಾಲ ಪದಾರ್ಥ, ಎಣ್ಣೆ, ಬೆಳ್ಳುಳ್ಳಿ, ಬೇಳೆ.

* ತಯಾರಿಸುವ ಬಗೆ : ವಿವಿಧ ರೀತಿಯ ಸೊಪ್ಪನ್ನು ಚೆನ್ನಾಗಿ ಸಣ್ಣ ಚೂರಾಗಿ ಕತ್ತರಿಸುವುದು, ನಂತರ ಅದನ್ನು ನೀರಿನಿಂದ ಚೆನ್ನಾಗಿ ತೊಳೆಯುವುದು, ಒಲೆಯ ಮೇಲೆ ಬೇಳೆಯನ್ನು ಕುದಿಸುವುದು, ಬೇಳೆ ಕುದ್ದ ಮೇಲೆ ಸೊಪ್ಪನ್ನು ಹಾಕಿ ಚೆನ್ನಾಗಿ ಕುದಿಸುವುದು, ನಂತರ ಅಗತ್ಯಕ್ಕೆ ತಕ್ಕಂತೆ, ಮಸಾಲ ಪದಾರ್ಥ, ಉಪ್ಪು, ಖಾರ, ಅರಿಶಿನ ಪುಡಿ, ನೀರು, ಹುಳಿಹಾಕಿ ಕುದಿಸಿ ತಯಾರಿಸುವುದು.

ಹಳ್ಳಿಗಳಲ್ಲಿ ಬಹುತೇಕವಾಗಿ ಎಲ್ಲಾ ರೀತಿಯ ಸೊಪ್ಪುಗಳನ್ನು ಬೆಳೆಯುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಉಳಿಚಿಕ ಸೊಪ್ಪು, ಪಾಲಕ ಸೊಪ್ಪು, ಕೊತ್ತಂಬರಿ ಸೊಪ್ಪು, ಕೆಂಪು ಹರ್ವಿ ಸೊಪ್ಪು, ಪುಂಡಿ ಸೊಪ್ಪು, ಅಣ್ಣೇ ಸೊಪ್ಪು, ಕರಿಗಣಿಕೆ ಸೊಪ್ಪು, ಹೊನೆಗೊನೆ ಸೊಪ್ಪು, ಗಣಿಕೆ ಸೊಪ್ಪು, ಕುಂಬಳ ಕುಡಿ ಸೊಪ್ಪು, ನುಗ್ಗೇಗಿಡದ ಕುಡಿಯ ಸೊಪ್ಪು ಮುಂತಾದವುಗಳನ್ನು ಯಥೇಚ್ಛವಾಗಿ ಬೆಳೆಯುವುದುಂಟು. ಈ ಎಲ್ಲಾ ಸೊಪ್ಪುಗಳಲ್ಲಿ ಪ್ರಮುಖವಾಗಿ ಕಬ್ಬಿಣದ ಅಂಶ ಹೆಚ್ಚಾಗಿರುತ್ತದೆ. ಚಿಕ್ಕ ಮಕ್ಕಳಲ್ಲಿ ಮೂಳೆಗಳ ಬೆಳವಣಿಗೆಗೆ, ರಕ್ತ ಹೆಚ್ಚು ಹೆಚ್ಚು ವೃದ್ಧಿಯಾಗಲು ಬೇಕಾಗುವ ಪ್ರಮುಖವಾದ ಪದಾರ್ಥವಾಗಿದೆ. ಆದ್ದರಿಂದ ಗ್ರಾಮೀಣ ಜನಪದರು ಹೆಚ್ಚಾಗಿ ಇದನ್ನು ಬಳಸುವುದುಂಟು.

೦೬ ಪುಂಡಿ ಪಲ್ಲೆ

* ಬೇಕಾಗುವ ಸಾಮಗ್ರಿಗಳು : ಪುಂಡಿ ಸೊಪ್ಪು, ಶೇಂಗಾ, ಟೊಮೋಟಾ, ಹಸಿಮೆಣಸಿನ ಕಾಯಿ, ಕರೆಕಡ್ಲಿ, ಹೆಸರುಕಾಳು, ಬೇಳೆಕಾಳು, ಅಲಸಂದಿಕಾಳು, ಅಕ್ಕಿ, ಸಜ್ಜಿ, ಸೊಪ್ಪು, ಖಾರದ ಪುಡಿ, ಅರಿಶಿನ ಪುಡಿ, ಉಪ್ಪು, ಮಸಾಲ ಪದಾರ್ಥ, ಎಣ್ಣೆ, ಬೆಳ್ಳುಳ್ಳಿ, ಸಾಸಿವೆ, ಜೀರಿಗೆ, ಕೊತ್ತಂಬರಿ ಸೊಪ್ಪು, ಕರಿಬೇವು.

* ತಯಾರಿಸುವ ಬಗೆ: ಮೊದಲು ಪುಂಡಿಸೊಪ್ಪನ್ನು ಸಣ್ಣ ಸಣ್ಣ ಚೂರಾಗಿ ಕತ್ತರಿಸಿ ಅದನ್ನು ನೀರಿನಿಂದ ಚೆನ್ನಾಗಿ ತೊಳೆಯಬೇಕು. ನಂತರ ಒಲೆಯ ಮೇಲೆ ಎಲ್ಲಾ ಕಾಳುಗಳನ್ನು ಬೇಯಿಸಬೇಕು.

ನಂತರ ಮಂಡಿ ಸೊಪ್ಪನ್ನು ಹಾಕುವುದು. ಅಗತ್ಯಕ್ಕೆ ತಕ್ಕಂತೆ ಉಪ್ಪು, ಖಾರ, ಅರಿಶಿನ ಪುಡಿ, ಮಸಾಲ ಪದಾರ್ಥ ಹಾಕುವುದು. ನಂತರ ಎಣ್ಣೆಗೆ ಸಾಸಿವೆ ಕಾಳನ್ನು ಹಾಕಿ ಇದಕ್ಕೆ ಒಗ್ಗರಣೆ ಕೊಡುವುದು.

ಮಂಡಿ ಪಲ್ಲೆಯಲ್ಲಿ ಹೆಚ್ಚಾಗಿ ವಿವಿಧ ರೀತಿಯ ದ್ವಿದಳ ಧಾನ್ಯಗಳು, ಸೊಪ್ಪು, ಮಸಾಲ ಪದಾರ್ಥಗಳನ್ನು ಬಳಸುವುದರಿಂದ ದೇಹಕ್ಕೆ ಬೇಕಾಗುವ ಕಬ್ಬಿಣದ ಅಂಶ, ಪ್ರೋಟೀನ್ ಅಂಶಗಳು ಒಟ್ಟಿಗೆ ದೊರೆಯುವುದರಿಂದ ದೇಹಕ್ಕೆ ಒಳ್ಳೆಯ ಆಹಾರವಾಗಿದೆ. ಈ ಮಂಡಿ ಸೊಪ್ಪನ್ನು ಬಹುತೇಕವಾಗಿ ಹಳ್ಳಿಗಳಲ್ಲಿ ಹಿತ್ತಲಿನ ಮನೆಯಲ್ಲಿ, ಹೊಲ-ಗದ್ದೆಗಳಲ್ಲಿ ಬೆಳೆಯುವುದುಂಟು. ಹೇರಳವಾಗಿ ಈ ಸೊಪ್ಪು ದೊರೆಯುವುದರಿಂದ ಗ್ರಾಮೀಣ ಜನಪದರು ಈ ಪದಾರ್ಥವನ್ನು ಹೆಚ್ಚು ಹೆಚ್ಚು ಸೇವಿಸುವುದುಂಟು.

೦೭ ಕಟ್ಟಿನ/ಹೋಳಿಗೆ ಸಾಂಬಾರು

* ಬೇಕಾಗುವ ಸಾಮಗ್ರಿಗಳು : ಬೇಳೆ, ಒಣಮೆಣಸಿನಕಾಯಿ, ಬೆಳ್ಳುಳ್ಳಿ, ಜೀರಿಗೆ, ಚೆಕ್ಕಿ, ಲವಂಗ, ಕೊತ್ತಂಬರಿ ಕಾಳು, ಮೊಗ್ಗು(ಕಲ್ಲು ಮೊಗ್ಗು), ಗಸಗಸ್ಸಿ, ಉಪ್ಪು, ಖಾರ, ಅರಿಶಿಣ ಪುಡಿ, ಮಸಾಲ ಪದಾರ್ಥ, ಹುಣಸೆ ಹುಳಿ ಇತ್ಯಾದಿ

* ತಯಾರಿಸುವ ಬಗೆ : ಮೇಲ್ಕಾಣಿಸಿದ ಎಲ್ಲಾ ಪದಾರ್ಥಗಳನ್ನು ಎಣ್ಣೆಯಲ್ಲಿ ಕರಿಯುವುದು, ನಂತರ ಆ ಪದಾರ್ಥಗಳನ್ನು ಮಿಕ್ಸಿ ಅಥವಾ ದುಂಡಿಯಿಂದ ರುಬ್ಬುವ ಪದಾರ್ಥಗಳನ್ನು ಹಾಕಿ ಚೆನ್ನಾಗಿ ಕುದಿಸುವುದು, ನಂತರ ಅಗತ್ಯಕ್ಕೆ ತಕ್ಕಂತೆ ನೀರನ್ನು ಹಾಕಿ ಸಾಂಬಾರು ತಯಾರಿಸುವುದು.

ಈ ಸಾಂಬಾರನ್ನು ವಿಶೇಷವಾಗಿ ಹಬ್ಬದ ದಿನಗಳಲ್ಲಿ ಮಾಡುವುದುಂಟು. ಈ ಕಟ್ಟಿನ ಸಾಂಬಾರನ್ನು ಗ್ರಾಮೀಣ ಜನಪದರು ಎರಡು ಮೂರು ದಿನಗಳವರೆಗೂ ಬಿಸಿಮಾಡಿ ಊಟ ಮಾಡುವ ಪದ್ಧತಿಯನ್ನು ಕಾಣಬಹುದು. ಇದರಲ್ಲಿ ಹೆಚ್ಚಾಗಿ ಮಸಾಲೆ ಪದಾರ್ಥಗಳನ್ನು ಬಳಸುವುದರಿಂದ ವಿವಿಧ ರೀತಿಯ ಆಮ್ಲಗಳು, ಮೆಗ್ನೀಷಿಯಂ ಹಾಗೂ ವಿಟಮಿನ್‌ಗಳು ದೇಹಕ್ಕೆ ದೊರೆಯುವವು. ಆದ್ದರಿಂದ ಹಬ್ಬಗಳ ವಿಶೇಷ ಸಂದರ್ಭಗಳಲ್ಲಿ ಈ ಪದಾರ್ಥವನ್ನು ಉಪಯೋಗಿಸುವುದನ್ನು ಕಾಣಬಹುದಾಗಿದೆ.

೦೮ ಶೇಂಗಾ ತಂಬಳಿ

* ಬೇಕಾಗುವ ಸಾಮಗ್ರಿಗಳು : ಶೇಂಗಾ, ಹಸಿ ಮೆಣಸಿನಕಾಯಿ, ಜೀರಿಗೆ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು, ಹುಣಸೆ ಹಣ್ಣು ಇತ್ಯಾದಿ.

* ತಯಾರಿಸುವ ಬಗೆ : ಮೊದಲು ಶೇಂಗಾವನ್ನು ಕೆಂಪಾಗಿ ಹುರಿಯುವುದು, ಅದರ ಮೇಲಿನ ಸಿಪ್ಪೆಯನ್ನು ತೆಗೆದ ನಂತರ ಶೇಂಗಾ ಹಾಗೂ ಮೇಲೆ ತಿಳಿಸಿದ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ತೆಗೆಯುವುದು. ನಂತರ ಅಗತ್ಯಕ್ಕೆ ತಕ್ಕಂತೆ ನೀರಿನಲ್ಲಿ ಅದನ್ನು ಮಿಶ್ರಣ ಮಾಡಿ ಸೇವಿಸುವುದು.

ಸರ್ವೇಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿ ಶೇಂಗಾವನ್ನು ಪ್ರಮುಖ ಬೆಳೆಯನ್ನಾಗಿ ಬೆಳೆಯುವುದುಂಟು. ಶೇಂಗಾವನ್ನು ಹುರಿದು ವಿವಿಧ ರೀತಿಯ ಮಸಾಲ ಪದಾರ್ಥಗಳನ್ನು ಬೆರೆಸಿದಾಗ ದೇಹಕ್ಕೆ ಬೇಕಾಗುವ ವಿಟಮಿನ್-ಎ ಅಂಶ ದೊರೆಯುತ್ತದೆ. ದೇಹದ ವಿವಿಧ ಅಂಗಾಂಗಗಳು ಬಲಿಷ್ಠವಾಗಿ ಬೆಳೆಯಲು ಹಾಗೂ ದೇಹದ ಸಾಮರ್ಥ್ಯವನ್ನು ಹೆಚ್ಚಿಸಲು ಈ ಪದಾರ್ಥವನ್ನು ಹೆಚ್ಚಾಗಿ ಬಳಸುವುದುಂಟು.

೦೯ ಮೆಂತೆ ತಂಬಳಿ

* ಬೇಕಾಗುವ ಸಾಮಗ್ರಿಗಳು :- ಮೆಂತೆಕಾಳು, ಪುಟಾಣಿ, ಕೊಬ್ಬರಿ, ಜೀರಿಗೆ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು, ಎಣ್ಣೆ, ಅರಿಶಿನ ಪುಡಿ, ಖಾರದ ಪುಡಿ, ಉಪ್ಪು ಇತ್ಯಾದಿ.

* ತಯಾರಿಸುವ ಬಗೆ :- ಮೆಂತೆಕಾಳುಗಳನ್ನು ಐದು ನಿಮಿಷ ನೀರಿನಲ್ಲಿ ಇಡುವುದು, ಮೆಂತೆ ಕಾಳುಗಳು ಹಾಗೂ ಮೇಲ್ಕಾಣಿಸಿದ ಪದಾರ್ಥಗಳನ್ನು ಮಿಕ್ಸಿಗೆ ಹಾಕುವುದು, ತದ ನಂತರ ಅದನ್ನು ಎಣ್ಣೆಗೆ ಹಾಕಿ ಒಗ್ಗರಣೆ ಕೊಡುವುದು.

ಎಲ್ಲಾ ಗ್ರಾಮಗಳಲ್ಲಿ ಪ್ರಮುಖವಾಗಿ ಮೆಂತೆ ಸೊಪ್ಪನ್ನು ಬೆಳೆಯುವುದುಂಟು. ಈ ಮೆಂತೆ ಸೊಪ್ಪಿನಿಂದ ಮೆಂತೆ ಕಾಳುಗಳನ್ನು ಪಡೆದುಕೊಂಡು, ಅವುಗಳನ್ನು ನೀರಿನಲ್ಲಿ ನೆನೆಸಿ ಇಟ್ಟು ಬಳಸುವುದರಿಂದ ದೇಹಕ್ಕೆ ಬೇಕಾಗುವ ಕಬ್ಬಿಣದ ಅಂಶದ ಕೊರತೆಯನ್ನು ನೀಗಿಸಬಹುದಾಗಿದೆ. ಈ ಮೆಂತೆ ತಂಬಳಿಯನ್ನು ಹೆಚ್ಚಾಗಿ ಮುದ್ದೆಯೊಂದಿಗೆ ಬಳಸುವುದನ್ನು ಕಾಣಬಹುದಾಗಿದೆ.

೧೦ ಬದನೆಕಾಯಿ ಎಣ್‌ಗಾಯಿ ಸಾಂಬಾರು

* ಬೇಕಾಗುವ ಸಾಮಗ್ರಿಗಳು : ಬದನೆಕಾಯಿ, ಶೇಂಗಾ, ಗುರಾಳು ಪುಡಿ, ಕೊಬ್ಬರಿ, ಟೊಮೋಟಾ ಹಣ್ಣು, ಜೀರಿಗೆ, ಬೆಳ್ಳುಳ್ಳಿ, ಎಣ್ಣೆ, ಅರಿಶಿನ ಪುಡಿ, ಖಾರದ ಪುಡಿ, ಮಸಾಲ ಪದಾರ್ಥ, ಹುಣಸೆ ಹುಳಿ, ಉಪ್ಪು ಇತ್ಯಾದಿ.

* ತಯಾರಿಸುವ ಬಗೆ : ಬದನೆಕಾಯಿಯನ್ನು ಸಂಪೂರ್ಣ ನಾಲ್ಕು ಭಾಗ ಮಾಡದೇ ಅರ್ಧಕ್ಕೆ ಕತ್ತರಿಸುವುದು. ಶೇಂಗಾ, ಗುರಾಳು, ಟೊಮೋಟಾ ಹುರಿದುಕೊಳ್ಳುವುದು, ನಂತರ ಜೀರಿಗೆ, ಬೆಳ್ಳುಳ್ಳಿ, ಶೇಂಗಾ, ಗುರಾಳು, ಟೊಮೊಟೋಗಳನ್ನು ಮಿಕ್ಸಿ ಅಥವಾ ದುಂಡಿಯಿಂದ ರುಬ್ಬುವುದು, ನಂತರ ಇದನ್ನು ತೆಗೆದು ಪ್ರತಿಯೊಂದು ಬದನೆ ಕಾಯಿಯ ಹೋಳುಗಳ ಸಂದಿಗಳಲ್ಲಿ ತುಂಬುವುದು. ನಂತರದಲ್ಲಿ ಎಣ್ಣೆ ಹಾಕಿ ಒಗ್ಗರಣೆ ಹಾಕಿ ಪ್ರತಿಯೊಂದು ಬದನೆ ಕಾಯಿಯನ್ನು ಅದರಲ್ಲಿ ಕುದಿಸುವುದು, ನಂತರ ಅದನ್ನು ಆಹಾರವಾಗಿ ಸೇವಿಸುವುದು.

ಈ ಸಾಂಬಾರಿನಲ್ಲಿ ಹೆಚ್ಚಾಗಿ ಕೊಬ್ಬರಿ, ಶೇಂಗಾ, ಗುರಾಳು, ಟೊಮೋಟಾ, ಮಸಾಲ ಪದಾರ್ಥಗಳನ್ನು ಉಪಯೋಗಿಸುವುದರಿಂದ ಹೆಚ್ಚಾಗಿ ಮೆಗ್ನೀಷಿಯಂ, ವಿಟಮಿನ್ ಎ ಮತ್ತು ಸಿ ಯನ್ನು ಕಾಣಬಹುದಾಗಿದೆ. ಈ ಅಂಶಗಳು ದೇಹಕ್ಕೆ ಅವಶ್ಯಕವಾಗಿ ಬೇಕಾಗಿರುವುದರಿಂದ ಗ್ರಾಮೀಣ

ಜನಪದರು ಹೆಚ್ಚು ಹೆಚ್ಚಾಗಿ ಇಂತಹ ಪದಾರ್ಥಗಳನ್ನು ಬಳಸುವುದುಂಟು. ಗ್ರಾಮದ ಬಹುತೇಕ ಕುಟುಂಬಗಳಲ್ಲಿ ಬದನೆಕಾಯಿಗಳನ್ನು ತಮ್ಮ ಹೊಲಗದ್ದೆಗಳಲ್ಲಿ ಬೆಳೆಯುವುದುಂಟು. ಆದ್ದರಿಂದ ಈ ಪದಾರ್ಥದ ಸಾಂಬಾರು ಸರ್ವೇಸಾಮಾನ್ಯವಾಗಿದೆ.

೧೧ ದಾಣಿ ಹಿಟ್ಟಿನ ಜುಣುಕ

* ಬೇಕಾಗುವ ಸಾಮಗ್ರಿಗಳು : ಈರುಳ್ಳಿ, ಮೆಣಸಿನಕಾಯಿ, ಟೊಮೋಟಾ, ಕೊತ್ತಂಬರಿ ಸೊಪ್ಪು, ಕರಿಬೇವು, ದಾಣಿ ಹಿಟ್ಟು, ಎಣ್ಣೆ, ಅರಿಶಿನ ಪುಡಿ, ಉಪ್ಪು, ಮಸಾಲ ಪದಾರ್ಥ ಇತ್ಯಾದಿ.

* ತಯಾರಿಸುವ ಬಗೆ :- ಈರುಳ್ಳಿ ಹಾಗೂ ಮೆಣಸಿನ ಕಾಯಿಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸುವುದು, ಎಣ್ಣೆಯನ್ನು ಕಾಯಿಸಿ ಅದರಲ್ಲಿ ಈರುಳ್ಳಿ, ಮೆಣಸಿನಕಾಯಿ, ಸಾಸಿವೆ, ಜೀರಿಗೆ ಹಾಕಿ ಚೆನ್ನಾಗಿ ಬೇಯಿಸುವುದು, ಅದು ಕುದಿಯುವ ಬಿಂದು ತಲುಪಿದಾಗ ನೀರಿನಿಂದ ಮಿಶ್ರಣ ಮಾಡಿದ ದಾಣಿ ಹಿಟ್ಟನ್ನು ಹಾಕಿ ಬೇಯಿಸುವುದು, ಅಗತ್ಯಕ್ಕೆ ತಕ್ಕಂತೆ ನೀರನ್ನು ಬಳಸುವುದು.

ಬಹುತೇಕ ಹಳ್ಳಿಗಳಲ್ಲಿ ಸಾಂಬಾರನ್ನು ತಯಾರಿಸಲು ದಾಣಿ ಹಿಟ್ಟನ್ನು ಪ್ರಮುಖವಾಗಿ ಉಪಯೋಗಿಸುವರು. ಈ ಸಾಂಬಾರಿನಲ್ಲಿ ವಿವಿಧ ರೀತಿಯ ಸೊಪ್ಪು, ತರಕಾರಿಗಳು, ಮಸಾಲ ಪದಾರ್ಥಗಳನ್ನು ಉಪಯೋಗಿಸುವುದರಿಂದ ಪ್ರೋಟೀನ್, ಕಬ್ಬಿಣದ ಅಂಶ, ವಿಟಮಿನ್-ಸಿಯಂತಹ ಅಂಶಗಳು ದೇಹಕ್ಕೆ ದೊರೆಯುತ್ತವೆ. ಇದಕ್ಕೆ ಬೇಕಾಗುವ ಸಾಮಾಗ್ರಿಗಳನ್ನು ಗ್ರಾಮೀಣ ಜನಪದರು ದೇಶೀಯವಾಗಿ ಬೆಳೆಯುವುದರಿಂದ ಹೆಚ್ಚು ಹೆಚ್ಚು ಇದನ್ನು ಆಹಾರ ಪದಾರ್ಥವಾಗಿ ಸೇವಿಸುತ್ತಿದ್ದಾರೆ.

೧೨ ಬದನೆಕಾಯಿ ಗೊಜ್ಜು

* ಬೇಕಾಗುವ ಸಾಮಗ್ರಿಗಳು : ಬದನೆ ಕಾಯಿ, ಹುಣಸೆ ಹುಳಿ, ಹಸಿಮೆಣಸಿನಕಾಯಿ, ಉಪ್ಪು, ಜೀರಿಗೆ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು.

* ತಯಾರಿಸುವ ಬಗೆ : ಬದನೆಕಾಯಿಯ ತುಂಬನ್ನು ಕಿತ್ತೊಗೆದು ಕೆಂಡದಲ್ಲಿ ಅದನ್ನು ಸುಡುವರು. ಕೆಂಪಾಗಿ ಸುಟ್ಟ ಮೇಲೆ ಅದನ್ನು ಕೆಂಡದಿಂದ ಬೇರ್ಪಡಿಸಿ ಹುರಿದ ಹಸಿ ಮೆಣಸಿನ ಕಾಯಿ, ಜೀರಿಗೆ, ಬೆಳ್ಳುಳ್ಳಿ ಎಲ್ಲವನ್ನೂ ಬದನೆಕಾಯಲ್ಲಿ ಕೈಯಿಂದ ಸಂಪೂರ್ಣವಾಗಿ ಮಿಶ್ರಣ ಮಾಡಿ ಅದನ್ನು ರೊಟ್ಟಿಯಲ್ಲಿ ಹಚ್ಚಿಕೊಂಡು ಊಟ ಮಾಡುವರು.

ದೇಶೀಯವಾಗಿ ಬೆಳೆಯುವ ಬದನೆಕಾಯಿಯನ್ನು ಸುಟ್ಟು ಅದಕ್ಕೆ ಉಪ್ಪು, ಖಾರ, ಹುಳಿ ಮಿಶ್ರಣ ಮಾಡಿ ತಿನ್ನುವುದರಿಂದ ದೇಹಕ್ಕೆ ಬೇಕಾಗುವ ಮೆಗ್ನೀಷಿಯಂ ಪ್ರಮಾಣ ಹೇರಳವಾಗಿ ದೊರೆಯುತ್ತದೆ. ಕೃಷಿಕರು ಹೊಲದಲ್ಲಿ ಕೃಷಿ ಚಟುವಟಿಕೆಯನ್ನು ಮಾಡುವ ಸಂದರ್ಭದಲ್ಲಿ ಮಧ್ಯಾಹ್ನದ ಸಮಯದಲ್ಲಿ ರೊಟ್ಟಿಯಲ್ಲಿ ಇದನ್ನು ಕಿವುಚುತ್ತಾ ಊಟ ಮಾಡುವುದು ಸರ್ವೇಸಾಮಾನ್ಯವಾದುದು.

೧೩ ಜೋಳದ ಅಂಬಲಿ

* ಬೇಕಾಗುವ ಸಾಮಗ್ರಿಗಳು : ಜೋಳದ ನುಚ್ಚು, ಮಜ್ಜಿಗೆ, ಮೊಸರು, ಉಪ್ಪು.

* ತಯಾರಿಸುವ ಬಗೆ : ಒಲೆಯ ಮೇಲೆ ನೀರಿಗೆ ಹೆಸರಿಟ್ಟು ಅದು ಕುದಿಯುವ ಬಿಂದು ತಲುಪಿದಾಗ ಜೋಳದ ನುಚ್ಚನ್ನು ಅದರಲ್ಲಿ ಹಾಕುತ್ತಾ ಮಿಶ್ರಣ ಮಾಡುತ್ತಾ ಸಾಗಬೇಕು, ಅಗತ್ಯಕ್ಕೆ ತಕ್ಕಂತೆ ಉಪ್ಪು ಹಾಕಬೇಕು. ಬೆಂದು ಒಂದು ಹಂತದವರೆಗೆ ಅದು ಗಟ್ಟಿಯಾದಾಗ ಒಲೆಯಿಂದ ಕೆಳಗಿಳಿಸಬೇಕು.

ಮಧ್ಯ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಜೋಳದ ಅಂಬಲಿಯ ಆಹಾರವನ್ನು ಸೇವಿಸುವುದು ಸಾಮಾನ್ಯವಾಗಿದೆ. ಅದರಂತೆಯೇ ಹ್ಯಾರಡಾ ಗ್ರಾಮದಲ್ಲಿ ಜೋಳದ ಅಂಬಲಿಯನ್ನು ಅದರಲ್ಲೂ ವಿಶೇಷವಾಗಿ ಬೇಸಿಗೆಯ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಬಳಸುವುದುಂಟು. ಜೋಳದ ನುಚ್ಚನ್ನು ಹದವಾಗಿ ಬೇಯಿಸಿ ಅದಕ್ಕೆ ಮಜ್ಜಿಗೆ ಹಾಗೂ ಮೊಸರನ್ನು ಮಿಶ್ರಣ ಮಾಡಿ ಊಟ ಮಾಡಿದರೆ ಸೋಂಪಾಗಿ ನಿದ್ರೆಯನ್ನು ಮಾಡಬಹುದು. ಈ ಆಹಾರವನ್ನು ಸೇವಿಸುವುದರಿಂದ ದೇಹಕ್ಕೆ ಕೊಬ್ಬು, ಕಾರ್ಬೋಹೈಡ್ರೇಟ್‌ನ್ನು ಪಡೆಯಬಹುದು. ಇದರಿಂದ ಆರೋಗ್ಯವನ್ನು ಸುಸ್ಥಿತಿಯಲ್ಲಿಡಬಹುದು.

೧೪ ನವಣಕ್ಕಿ ಕಿಚಡಿ

* ಬೇಕಾಗುವ ಸಾಮಗ್ರಿಗಳು : ನವಣಕ್ಕಿ ನುಚ್ಚು (ನವಣೆಯನ್ನು ಕುಟ್ಟಿ ಮೇಲಿನ ತೌಡು ತೆಗೆದ ನುಚ್ಚು)

* ತಯಾರಿಸುವ ಬಗೆ : ಒಂದು ಪಾತ್ರೆಗೆ ಒಂದು ಲೋಟದಷ್ಟು ನವಣಕ್ಕಿ ನುಚ್ಚನ್ನು ಹಾಕಿ ಅದರ ಎರಡರಷ್ಟು ನೀರನ್ನು ಹಾಕಿ ಒಲೆಯ ಮೇಲೆ ಬೇಯಿಸಿ ಒಂದು ಹಂತದಲ್ಲಿ ನೀರು ಕಡಿಮೆ ಆದಾಗ ಆ ಪಾತ್ರೆಯನ್ನು ಕೆಳಗಿಳಿಸಿ ಆಹಾರವನ್ನು ಸೇವನೆ ಮಾಡುವುದು.

ಬಹುತೇಕ ಹಳ್ಳಿಗಳಲ್ಲಿ ಗಂಡುಮೆಟ್ಟಿನ ಆಹಾರ ಎಂದರೆ ನವಣಕ್ಕಿ ಕಿಚಡಿ. ನವಣಕ್ಕಿ ಕಿಚಡಿಯೊಂದಿಗೆ ಹೆಚ್ಚಾಗಿ ಶೇಂಗಾ ತಂಬಳಿಯನ್ನು ಬಳಸುವುದುಂಟು. ಈ ಆಹಾರವನ್ನು ಸೇವಿಸಿದ ನಂತರ ದಿನಪೂರ್ತಿ ಆಹಾರ ಸೇವಿಸದೇ ಎಂತಹ ಶ್ರಮದಾಯಕ ಕೆಲಸಗಳನ್ನು ಮಾಡಬಹುದಾಗಿದೆ. ಆದರೆ ಇತ್ತೀಚಿಗೆ ಹಳ್ಳಿಗಳಲ್ಲಿ ಇದು ಕಣ್ಮರೆಯಾಗುತ್ತಿದೆ. ಹ್ಯಾರಡಾದಂತಹ ಗ್ರಾಮಗಳಲ್ಲಿ ಇನ್ನೂ ಸಹ ಈ ಪದಾರ್ಥವನ್ನು ಪ್ರಮುಖ ಆಹಾರವಾಗಿ ಸೇವಿಸುತ್ತಿದ್ದಾರೆ.

೧೫ ಮಜ್ಜಿಗೆ ತಂಬಳಿ

* ಬೇಕಾಗುವ ಸಾಮಗ್ರಿಗಳು : ಮಜ್ಜಿಗೆ, ಜೀರಿಗೆ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು, ಹಸಿ ಮೆಣಸಿನ ಕಾಯಿ, ಉಪ್ಪು.

* ತಯಾರಿಸುವ ಬಗೆ : ಹಸಿ ಮೆಣಸಿನಕಾಯಿಯನ್ನು ಮೊದಲು ಎಣ್ಣೆಯಲ್ಲಿ ಹುರಿದುಕೊಳ್ಳುವುದು, ಜೀರಿಗೆ ಮತ್ತು ಬೆಳ್ಳುಳ್ಳಿಯನ್ನು ಸಣ್ಣಗೆ ಜಜ್ಜುವುದು, ನಂತರ ಕರಿದ ಹಸಿಮೆಣಸಿನಕಾಯಿಯನ್ನು

ಮಿಕ್ಸಿಗೆ ಹಾಕಿ ಸಣ್ಣ ಸಣ್ಣ ಪುಡಿಯನ್ನಾಗಿ ಮಾಡಿ ಮಜ್ಜಿಗೆಯಲ್ಲಿ ಜೀರಿಗೆ, ಬೆಳ್ಳುಳ್ಳಿ ಹಾಗೂ ಮೆಣಸಿನ ಕಾಯಿಯ ಪುಡಿಯನ್ನು ಹಾಕಿ ಮಿಶ್ರಣ ಮಾಡುವುದು.

ಹಳ್ಳಿಗಳಲ್ಲಿ ಬಹುತೇಕವಾಗಿ ಹೈನುಗಾರಿಕೆಯನ್ನು ಕಾಣಬಹುದಾಗಿದೆ. ಇದರಿಂದ ಎಲ್ಲರ ಮನೆಯಲ್ಲಿಯೂ ಮಜ್ಜಿಗೆಯನ್ನು ತಯಾರಿಸುವರು. ಬೇಸಿಗೆ ದಿನದಲ್ಲಂತೂ ಇದು ಶ್ರೇಷ್ಠವಾದ ಪಾನೀಯವಾಗಿದೆ. ಈ ಮಜ್ಜಿಗೆಯನ್ನು ಉಪಯೋಗಿಸಿಕೊಂಡು ತಂಬಳಿ ಮಾಡುವರು. ಇದನ್ನು ಸೇವಿಸುವುದರಿಂದ ದೇಹಕ್ಕೆ ಅಗತ್ಯ ಪ್ರಮಾಣದ ಕೊಬ್ಬಿನ ಅಂಶವನ್ನು ಪಡೆಯಬಹುದು.

೦೨ ಹಬ್ಬ, ಜಾತ್ರೆ, ಮದುವೆ ಮುಂತಾದ ವಿಶೇಷ ಸಂದರ್ಭದ ಅಡುಗೆಗಳು

ಮದುವೆ, ಹಬ್ಬ, ಜಾತ್ರೆಯಂತಹ ವಿಶೇಷ ಸಂದರ್ಭದಲ್ಲಿ ಹೆಚ್ಚಾಗಿ ಸಿಹಿ ಅಡುಗೆಯನ್ನು ಹ್ಯಾರಡಾದ ಜನಪದರು ತಯಾರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ತಳ (ಕಪ್ಪುಮಂದಿ) ಸಮುದಾಯಗಳು ಮಾಂಸದ ಅಡುಗೆಯನ್ನು ಮಾಡುವುದುಂಟು. ಅದರಲ್ಲಿ ವಿಶೇಷವಾಗಿ ಈ ಸಮುದಾಯದ ಕುಟುಂಬದಲ್ಲಿ ಯಾವುದಾದರೂ ಶುಭ ಕಾರ್ಯವನ್ನು ಮಾಡುವುದಕ್ಕಿಂತ ಮೊದಲು ಅವರ ಮನೆ ದೇವರ ಶಾಂತಿಯನ್ನು ಮಾಡುವುದುಂಟು. ಅದಕ್ಕೆಂದೇ ಇವರು "ದೇವರು ಹೊರಿಸುವುದು" ಅಂದರೆ ಆ ಕುಟುಂಬದ ಹಿರಿಯ ಸೊಸೆಯಂದಿರಿಗೆ ದೇವರು ಹೊರಿಸುವರು. ಅವರು ಮನೆಯಿಂದ ಬೇವಿನ ಸೊಪ್ಪಿನಿಂದ ಉಡುಗೆಯನ್ನು ತೊಟ್ಟು ಊರ ಹೊರಗೆ ಆ ಉಟುಗೆ(ಉಡುಗೆ)ಯನ್ನು ಬಿಟ್ಟು ವಿವಿಧ ರೀತಿಯ ಪೂಜಾ ಕೈಂಕರ್ಯಗಳನ್ನು ಮುಗಿಸಿ ಕೊರಳಲ್ಲಿ ದೇವಿಯ ಸರವನ್ನು ಹಾಕಿ ಚಾಚು ತಪ್ಪದೇ ಒಪ್ಪತ್ತು ಕಾರ್ಯವನ್ನು ಮಾಡುವುದುಂಟು. ಇಂತಹ ವಿಶೇಷ ಸಂದರ್ಭದಲ್ಲಿ ಮಾಂಸದ ಅಡುಗೆಯು ಸರ್ವೆಸಾಮಾನ್ಯವಾದುದು. ಈ ಕಾರ್ಯಕ್ಕೆಂದೇ ಐದಾರು ತಿಂಗಳ ಮೊದಲೇ ಅವರ ಶಕ್ತಾನುಸಾರ ಕುರಿಗಳನ್ನು ಸೋಂಪಾಗಿ ಮೇಯಿಸಿ ಅಂದಿನ ದಿನ ಅವುಗಳನ್ನು ಬಲಿದಾನ ಮಾಡುವುದರ ಮೂಲಕ ದೇವಿಯ ಶಾಂತಿಯನ್ನು ಮಾಡುವ ಪರಿಪಾಠ ಈಗಲೂ ಇದೆ. ಈ ಸಂದರ್ಭದಲ್ಲಿ ಇವರ ದೈವದವರು ಎಲ್ಲರೂ ಕೂಡಿ ಮಾಂಸದ ಅಡುಗೆಯನ್ನು ಸೇವಿಸಿ ಈ ಕಾರ್ಯವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುತ್ತಾರೆ. ಇನ್ನುಳಿದ ಸಂದರ್ಭಗಳಲ್ಲಿ ಸಿಹಿ ಅಡುಗೆಗಳನ್ನು ಮಾಡುವ ಪರಿಪಾಠವು ಸರ್ವೆಸಾಮಾನ್ಯವಾದುದು.

೦೧ ಹೋಳಿಗೆ

* ಬೇಕಾಗುವ ಸಾಮಗ್ರಿಗಳು :- ತೊಗರಿಬೇಳೆ ಅಥವಾ ಕಡ್ಲಿಬೇಳೆ, ಬೆಲ್ಲ, ಶುಂಠಿ, ಮೈದಾಹಿಟ್ಟು, ಇತ್ಯಾದಿ

* ತಯಾರಿಸುವ ಬಗೆ : ಮೊದಲು ಬೇಳೆಗಳನ್ನು ಚೆನ್ನಾಗಿ ಕುದಿಸುವುದು. ಅದರಲ್ಲಿಯ ಕಟ್ಟು(ನೀರು)ಬಸಿದು ಬೆಲ್ಲವನ್ನು ಮಿಶ್ರಣ ಮಾಡಿ ಸ್ವಲ್ಪ ಬೇಯಿಸಬೇಕು. ದುಂಡಿಯಿಂದ ಬೇಳೆ ಮತ್ತು ಬೆಲ್ಲದ ಮಿಶ್ರಣವನ್ನು ಹೂರಣ ಮಾಡುವುದು. ಮೈದಾ ಹಿಟ್ಟಿನಿಂದ ಹಾಳೆಗಳನ್ನು

ತಯಾರಿಸುವುದು, ನಂತರ ಆ ಹಾಳೆಗಳಲ್ಲಿ ಅದರ ಅಗತ್ಯಕ್ಕೆ ತಕ್ಕಂತೆ ಹೂರಣವನ್ನು ತುಂಬಿ ಮುರುಗಿ(ಚಿತ್ರ) ಮಾಡಿ ಎಣ್ಣೆಯಲ್ಲಿ ಕರಿಯುವುದು.

ಹಳ್ಳಿಗಳಲ್ಲಿ ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಹೋಳಿಗೆಯನ್ನು ಮಾಡುವುದುಂಟು. ಗ್ರಾಮೀಣ ಜನರು ಬಹಳಷ್ಟು ಇಷ್ಟಪಡುವ ಆಹಾರವಾಗಿದೆ. ಈ ಪದಾರ್ಥದಲ್ಲಿ ಹೆಚ್ಚಾಗಿ ಕಬ್ಬಿಣದ ಅಂಶ ಹಾಗೂ ಕೊಬ್ಬಿನ ಅಂಶಗಳನ್ನು ಕಾಣಬಹುದಾಗಿದೆ. ಈ ಆಹಾರ ಪದ್ಧತಿಯು ಎಲ್ಲಾ ಸಮುದಾಯದ ಪ್ರೀತಿಯ ಆಹಾರವಾಗಿದೆ. ಹುಣ್ಣಿಮೆ, ಅಮವಾಸ್ಯೆ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ವಿಶೇಷವಾಗಿ ಈ ಆಹಾರವನ್ನು ಮಾಡುವುದುಂಟು. ಗ್ರಾಮದ ಶಿಷ್ಟ ದೈವಗಳ ಪ್ರಮುಖವಾದ ಆಹಾರ ಪದಾರ್ಥ ಎಂದರೆ ಹೋಳಿಗೆ.

೨ ಶ್ಯಾವಿಗೆ ಪಾಯಸ

* ಬೇಕಾಗುವ ಸಾಮಗ್ರಿಗಳು : ಶ್ಯಾವಿಗೆ, ಸಕ್ಕರೆ, ತುಪ್ಪ, ಹಾಲು, ಗೋಡಂಬಿ, ದ್ರಾಕ್ಷಿ, ಲವಂಗ.

* ತಯಾರಿಸುವ ಬಗೆ : ಗೋಧಿಯಿಂದ ತಯಾರಿಸಿದ ಶ್ಯಾವಿಗೆಯನ್ನು ತುಪ್ಪ ಅಥವಾ ಎಣ್ಣೆಯಲ್ಲಿ ಕರಿಯುವುದು, ಗೋಡಂಬಿ ದ್ರಾಕ್ಷಿಯನ್ನು ತುಪ್ಪದಲ್ಲಿ ಕರಿಯುವುದು, ನಂತರ ನೀರನ್ನು ಬಿಸಿ ಮಾಡುವುದು, ಸಕ್ಕರೆಯನ್ನು ಬಿಸಿ ನೀರಿಗೆ ಹಾಕುವುದು, ಕುದಿಯುವ ಸಮಯದಲ್ಲಿ ಶ್ಯಾವಿಗೆ, ಗೋಡಂಬಿ, ದ್ರಾಕ್ಷಿ ಹಾಗೂ ಹಾಲನ್ನು ಅದರಲ್ಲಿ ಹಾಕಿ ಮಿಶ್ರಣ ಮಾಡುವುದು.

ಹಳ್ಳಿಗಳಲ್ಲಿ ಬಿಡುವಿನ ವೇಳೆಯಲ್ಲಿ ಅದರಲ್ಲೂ ವಿಶೇಷವಾಗಿ ಬೇಸಿಗೆ ಸಂಧರ್ಭದಲ್ಲಿ ಗ್ರಾಮೀಣ ರೈತ ಮಹಿಳೆಯರು (ಓಣಿಯ ಎಲ್ಲಾ) ಮಹಿಳೆಯರು ಕೂಡಿಕೊಂಡು ಗೋಧಿಯನ್ನು ಹಿಟ್ಟನ್ನಾಗಿ ಮಾಡಿ ಆ ಹಿಟ್ಟನ್ನು ತೆಳುವಾದ ಬಟ್ಟೆಯಿಂದ ಸೋಸಿ ಬಂದಂತಹ ಹಿಟ್ಟನ್ನು ನೀರಿಗೆ ಮಿಶ್ರಣ ಮಾಡುವುದರ ಮೂಲಕ ಮೆದುವಾಗಿ ಕಣುಕವನ್ನು ಮಾಡಿಕೊಂಡು ಶಾವಿಗೆಯನ್ನು ಹೊಸೆಯುವುದು ಸರ್ವೇಸಾಮಾನ್ಯವಾದುದು. ಅದಕ್ಕೆಂದೇ ಮೀಸಲಾಗಿರುವ ಪ್ರತ್ಯೇಕ ಶಾವಿಗೆಯ ಮಣಿಗಳಿಂದ ಗೋಧಿ ಹಿಟ್ಟನ್ನು ತೀಡುವುದರಿಂದ ಶಾವಿಗೆಯನ್ನು ತಯಾರಿಸುವರು. ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಡಬ್ಬಿಯಲ್ಲಿ ತುಂಬಿಟ್ಟು, ಹಬ್ಬ-ಹರಿದಿನ, ಜಾತ್ರೆಗಳಲ್ಲಿ ಶಾವಿಗೆ ಪಾಯಸವನ್ನು ಮಾಡುವುದು ಸಾಮಾನ್ಯ ಅದರಲ್ಲಿ ವಿಶೇಷವಾಗಿ ಯುಗಾದಿ ಹಬ್ಬಗಳಲ್ಲಿ ಶ್ಯಾವಿಗೆ ಪಾಯಸವನ್ನು ಹೆಚ್ಚು ತಯಾರಿಸುತ್ತಾರೆ. ಶ್ಯಾವಿಗೆ ಪಾಯಸಕ್ಕೆ ಸ್ವಲ್ಪ ಬೇವು-ಬೆಲ್ಲವನ್ನು ಮಿಶ್ರಣ ಮಾಡಿಕೊಂಡು ಊಟಮಾಡುವ ಸಂಪ್ರದಾಯ ಇನ್ನೂ ಹಳ್ಳಿಗಳಲ್ಲಿ ಜೀವಂತವಾಗಿರುವುದನ್ನು ಕಾಣಬಹುದಾಗಿದೆ.

ಶ್ಯಾವಿಗೆ ಪಾಯಸದಲ್ಲಿ ವಿಟಮಿನ್ ಎ ಹಾಗೂ ಇನ್ನಿತರ ಪೋಷಕಾಂಶಗಳು ದೊರೆಯುವುದರಿಂದ ದೇಹಕ್ಕೆ ಅತ್ಯವಶ್ಯಕವಾಗಿದೆ. ಈಗಲೂ ಗ್ರಾಮೀಣ ಹಿರಿಯ ಜೀವಿಗಳು ಅರೋಗ್ಯದಲ್ಲಿ ಸ್ವಲ್ಪ ವ್ಯತ್ಯಯವಾದರೆ ಶ್ಯಾವಿಗೆ ಪಾಯಸವನ್ನು ಸೇವಿಸುವುದರ ಮೂಲಕ ದೇಹದ ಸ್ಥಿತಿಯನ್ನು ಸರಿಮಾಡಿಕೊಳ್ಳುವ ಎಷ್ಟೋ ಉದಾಹರಣೆಗಳನ್ನು ಕಾಣಬಹುದಾಗಿದೆ.

೩. ಸವತೆ ಬೀಜದ ಹುಗ್ಗಿ

* ಬೇಕಾಗುವ ಸಾಮಗ್ರಿಗಳು : ಮೈದಾ ಅಥವಾ ಗೋಧಿ ಹಿಟ್ಟಿನಿಂದ ಮಾಡಿದ ಸವತೆ ಬೀಜದ ತರಹ ಇರುವ ಸಣ್ಣ ಸಣ್ಣ ತುಂಡುಗಳು, ಬೆಲ್ಲ ಅಥವಾ ಸಕ್ಕರೆ, ಕೊಬ್ಬರಿ, ಶುಂಠಿ, ತುಪ್ಪ.

* ತಯಾರಿಸುವ ಬಗೆ : ಮೊದಲು ನೀರನ್ನು ಹೆಸರಿಡುವುದು (ಕುದಿಸುವುದು). ಸವತೆ ಬೀಜಗಳನ್ನು ಅದಕ್ಕೆ ಹಾಕುವುದು, ನಂತರ ತುಪ್ಪ, ಶುಂಠಿ ಹಾಕಿ ಮಿಶ್ರಣ ಮಾಡಿ ಸೇವಿಸುವುದು.

ಶ್ಯಾವಿಗೆಯ ಪಾಯಸದಂತೆಯೇ ಇದನ್ನು ತಯಾರಿಸುವರು. ಶ್ಯಾವಿಗೆಯು ಉದ್ದವಾಗಿದ್ದು, ಈ ಹುಗ್ಗಿಯು ಸವತೆ ಕಾಯಿಯ ಒಳಗೆ ಇರುವ ಬೀಜದ ರೂಪದಲ್ಲಿ ಗೋಧಿ ಹಿಟ್ಟಿನಿಂದ ಮಾಡಿದ ಸಣ್ಣ ಸಣ್ಣ ತುಂಡುಗಳಾಗಿದೆ. ಶ್ಯಾವಿಗೆ ಪಾಯಸಕ್ಕಿಂತ ಸ್ವಲ್ಪ ಗಟ್ಟಿಯಾಗಿರುತ್ತದೆ. ಗ್ರಾಮೀಣ ರೈತ ಮಹಿಳೆಯರು ಸವತೆ ಬೀಜಗಳನ್ನು ತಯಾರಿಸಿ, ಬಿಸಿಲಿನಲ್ಲಿ ಒಣಗಿಸಿ ಡಬ್ಬಿಯಲ್ಲಿ ಶೇಖರಣೆ ಮಾಡುವರು. ಇದರಲ್ಲಿಯೂ ಸಹ ವಿಟಮಿನ್-ಎ ಯಂತಹ ಪೋಷಕಾಂಶಗಳನ್ನು ಕಾಣಬಹುದಾಗಿದೆ.

೦೪ ಕ್ಯಾರೆಟ್ ಹಲ್ವ

* ಬೇಕಾಗುವ ಸಾಮಗ್ರಿಗಳು : ಕ್ಯಾರೆಟ್, ಸಕ್ಕರೆ, ತುಪ್ಪ, ಒಣಕೊಬ್ಬರಿ.

* ತಯಾರಿಸುವ ಬಗೆ : ಮೊದಲು ಕ್ಯಾರೆಟ್‌ನ್ನು ತುರಿಯುವುದು (ಸಣ್ಣ ಸಣ್ಣ ಚೂರಾಗಿ ಮಾಡುವುದು). ತುರಿದ ಕ್ಯಾರೆಟ್‌ನ್ನು ತುಪ್ಪದಲ್ಲಿ ಕರಿಯುವುದು, ಆರಿದ ನಂತರ ಅಗತ್ಯಕ್ಕೆ ತಕ್ಕಂತೆ ನೀರನ್ನು ಹಾಕಿ ಕುದಿಸುವುದು. ನಂತರದಲ್ಲಿ ಒಣಕೊಬ್ಬರಿ, ಶುಂಠಿ, ಸಕ್ಕರೆ ಹಾಕಿ ಮಿಶ್ರಣ ಮಾಡುವುದು.

ಈ ಆಹಾರ ಪದಾರ್ಥವನ್ನು ವಿಶೇಷ ಸಂದರ್ಭಗಳಲ್ಲಿ ಮಾಡುವುದುಂಟು. ಇದು ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರೂ ಕೂಡ ಇದನ್ನು ಬಹಳಷ್ಟು ಇಷ್ಟಪಡುವರು. ಚಿಕ್ಕಮಕ್ಕಳಂತೂ ಈ ಪದಾರ್ಥವನ್ನು ಕೈಯಲ್ಲಿ ಹಿಡಿದುಕೊಂಡು ತಿನ್ನುತ್ತಾ ಇರುತ್ತಾರೆ. ಇದರಲ್ಲಿ ಕೊಬ್ಬು ಹಾಗೂ ವಿಟಮಿನ್-ಎ ಪೋಷಕಾಂಶಗಳನ್ನು ಕಾಣಬಹುದಾಗಿದೆ.

೫ ಜಾಮೂನ್

* ಬೇಕಾಗುವ ಸಾಮಗ್ರಿಗಳು : ಮೈದಾ/ಗೋಧಿ ಹಿಟ್ಟು, ಸಕ್ಕರೆ, ತುಪ್ಪ, ಹಾಲು.

* ತಯಾರಿಸುವ ಬಗೆ : ಮೊದಲು ಮೈದಾ ಹಿಟ್ಟನ್ನು ಮೃದುವಾಗಿ ನಾದುವುದು ಹಾಲು-ತುಪ್ಪದೊಂದಿಗೆ ಇದನ್ನು ನಾದುವುದು. ನಾದಿದ ಹಿಟ್ಟನ್ನು ಸಣ್ಣ ಸಣ್ಣ ಗೋಲಿ ತರಹ ದುಂಡಾಗಿರುವ ಹುಳಿಗಳನ್ನು (ತುಂಡು) ಮಾಡುವುದು. ಆ ಹುಳಿಗಳನ್ನು ಎಣ್ಣೆಯಲ್ಲಿ ಕೆಂಪಾಗಿ ಕರಿಯುವುದು, ನಂತರ ಸಕ್ಕರೆ ಪಾನಕವನ್ನು ಮಾಡುವುದು, ಹುಳಿಗಳು ಆರಿದ ಮೇಲೆ ಸಕ್ಕರೆ ಪಾನಕದಲ್ಲಿ ಹಾಕುವುದು.

ಈ ಆಹಾರ ಪದಾರ್ಥವನ್ನು ವಿಶೇಷ ಸಂಧರ್ಭಗಳಲ್ಲಿ ಮಾಡುವುದುಂಟು. ಹಳ್ಳಿಗಳಲ್ಲಿ ಅತ್ಯಂತ ಪ್ರೀತಿಯ ಆಹಾರ ಪದಾರ್ಥವಾಗಿದೆ. ಚಿಕ್ಕಮಕ್ಕಳಿಗಂತೂ ಎಲ್ಲಿಲ್ಲದ ಪ್ರೀತಿ. ಸಿಹಿ ಪದಾರ್ಥಗಳಲ್ಲಿ ಅತ್ಯಂತ ಇಷ್ಟವಾದ ಪದಾರ್ಥ ಎಂದರೆ ಜಾಮಾನ್. ಎಲ್ಲಾ ವರ್ಗದ ವ್ಯಕ್ತಿಗಳು ಈ ಆಹಾರವನ್ನು ಇಷ್ಟಪಡುವರು. ಈ ಆಹಾರದಲ್ಲಿ ಹೆಚ್ಚಾಗಿ ಕೊಬ್ಬು ಹಾಗೂ ಜೀವಸತ್ವಗಳನ್ನು ಹೊಂದಿರುವುದರಿಂದ ದೇಹಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿದೆ.

೬ ಮೈಸೂರು ಪಾಕ್

* ಬೇಕಾಗುವ ಸಾಮಗ್ರಿಗಳು : ಕಡ್ಲಿಬೇಳೆ ಹಿಟ್ಟು, ಸಕ್ಕರೆ, ಎಣ್ಣೆ.

* ತಯಾರಿಸುವ ಬಗೆ : ಮೊದಲು ಸಕ್ಕರೆಯಿಂದ ಪಾನಕವನ್ನು ಮಾಡುವುದು, ಪಾನಕವನ್ನು ಕಡ್ಲಿಬೇಳೆ ಹಿಟ್ಟಿಗೆ ಮಿಶ್ರಣ ಮಾಡುವುದು, ಬಾಕ್ಸನಲ್ಲಿ ಹಾಕಿ ನಮಗೆ ಬೇಕಾಗುವ ಅಳತೆಗೆ ಕತ್ತರಿಸುವುದು.

ಹಳ್ಳಿಗಳಲ್ಲಿ ಬಹುತೇಕವಾಗಿ ಸಿಗುವ ಆಹಾರ ಪದಾರ್ಥವೆಂದರೆ ಮೈಸೂರು ಪಾಕ್. ಸಿಹಿ ತಿನಿಸುಗಳಲ್ಲಿ ಅತ್ಯಂತ ವಿಶಿಷ್ಟವಾದುದು. ಶುಭ ಸಂಧರ್ಭಗಳಲ್ಲಿ ವಿಶೇಷ ದಿನಗಳಲ್ಲಿ ಈ ಸಿಹಿ ತಿನಿಸನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ. ಈ ಪದಾರ್ಥದಲ್ಲಿ ಹೆಚ್ಚಾಗಿ ವಿಟಮಿನ್-ಎ ಇರುವುದರಿಂದ ಆರೋಗ್ಯಕ್ಕೆ ಒಳ್ಳೆಯ ತಿನಿಸು ಆಗಿದೆ.

೦೭ ಬೂಂದ್ಯ

* ಬೇಕಾಗುವ ಸಾಮಗ್ರಿಗಳು : ದಾಣಿಹಿಟ್ಟು, ಸಕ್ಕರೆ, ಎಣ್ಣೆ, ಯಾಲಕ್ಕಿ, ಲವಂಗ.

* ತಯಾರಿಸುವ ಬಗೆ:- ಬಾಳೆಯಲ್ಲಿ ಎಣ್ಣೆಯನ್ನು ಮೊದಲು ಕುದಿಸುವುದು,ನೀರಿನಿಂದ ಮಿಶ್ರಣ ಮಾಡಿದ ದಾಣಿ ಹಿಟ್ಟನ್ನು ಚೆಟ್ಟಿಯ ಸಹಾಯದಿಂದ ಬುಗ್ಗಿಯನ್ನು ಮಾಡುವುದು, ಬುಗ್ಗಿಯನ್ನು ಸಕ್ಕರೆಯ ಪಾಣಕದಲ್ಲಿ ಮಿಶ್ರಣ ಮಾಡುವುದು, ಆಮೇಲೆ ಅದಕ್ಕೆ ಏಲಕ್ಕಿ, ಲವಂಗ, ಮಿಶ್ರಣ ಮಾಡುವುದು.

ಹಳ್ಳಿಗಳಲ್ಲಿ ಮದುವೆ, ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಬಹುತೇಕ ಜನರು ಸೇವಿಸುವ ಆಹಾರ ಪದಾರ್ಥವಾಗಿದೆ. ಬಹಳ ಸರಳವಾಗಿ ತಯಾರಿಸುವ ಆಹಾರ ಇದಾಗಿರುವುದರಿಂದ ವಿಶೇಷ ಸಂದರ್ಭಗಳಲ್ಲಿ ಈ ತಿನಿಸನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ. ಈ ಪದಾರ್ಥದಲ್ಲಿ ಹೆಚ್ಚಾಗಿ ವಿಟಮಿನ್-ಎ ಇರುವುದರಿಂದ ಆರೋಗ್ಯಕ್ಕೆ ಹೆಚ್ಚು ಉಪಯುಕ್ತವಾದ ಆಹಾರವಾಗಿದೆ.

೮ ಬಾದಷಾ

* ಬೇಕಾಗುವ ಸಾಮಾಗ್ರಿಗಳು : ಗೋಧಿ ಹಿಟ್ಟು, ಸಕ್ಕರೆ, ಕೇಸರಿ ಪುಡಿ, ಕೊಬ್ಬರಿ, ಎಣ್ಣೆ, ಶುಂಠಿ, ಏಲಕ್ಕಿ ಪುಡಿ.

* ತಯಾರಿಸುವ ಬಗೆ : ಗೋಧಿ ಹಿಟ್ಟನ್ನು ಮೃದುವಾಗಿ ನಾದಿಕೊಳ್ಳುವುದು, ಚಪಾತಿ ಆಕಾರದಲ್ಲಿ ವೃತ್ತಾಕಾರವಾಗಿ ಲಟ್ಟಿಸುವುದು, ಮಡಿಚಿದ ಹಾಳೆಗಳನ್ನು ಕರಿದು ಸಕ್ಕರೆ ಪಾನಕದಲ್ಲಿ ಹಾಕುವುದು, ನಂತರ ಪಾನಕದಿಂದ ತೆಗೆದು ಸಕ್ಕರೆ, ಒಣಕೊಬ್ಬರಿ ಪುಡಿ, ಏಲಕ್ಕಿ, ಶುಂಠಿ ಪುಡಿಯನ್ನು ಅದರ ಮೇಲೆ ಉದುರಿಸುವುದು.

ಇತ್ತೀಚಿಗೆ ಮದುವೆ ಸಂದರ್ಭದಲ್ಲಿ ಬಳಸುವ ವಿಶೇಷವಾದ ಸಿಹಿತಿನಿಸು ಇದಾಗಿದೆ. ಗೋಧಿ ಹಿಟ್ಟನ್ನು ಬಳಸುವುದರ ಮೂಲಕ ಈ ಸಿಹಿ ತಿನಿಸನ್ನು ತಯಾರಿಸುವರು. ಈ ಪದಾರ್ಥದಲ್ಲಿ ಕೊಬ್ಬಿನ ಅಂಶ ಹೆಚ್ಚಾಗಿರುವುದರಿಂದ ಆರೋಗ್ಯಕ್ಕೆ ಉತ್ತಮವಾದ ಆಹಾರವಾಗಿದೆ.

೯ ಉಂಡಿ

* ಬೇಕಾಗುವ ಸಾಮಾಗ್ರಿಗಳು : ಶೇಂಗಾ ಅಥವಾ ಎಳ್ಳು ಅಥವಾ ಹುರಕಡ್ಲಿ, ಒಣಕೊಬ್ಬರಿ, ಶುಂಠಿ, ಲವಂಗ, ಇತ್ಯಾದಿ.

* ತಯಾರಿಸುವ ಬಗೆ : ಮೊದಲು ಶೇಂಗಾ ಅಥವಾ ಎಳ್ಳುಗಳನ್ನು ಹುರಿದುಕೊಳ್ಳುವುದು, ಹುರಿದ ಶೇಂಗಾವನ್ನು ಸಣ್ಣ ಸಣ್ಣ ಬೇಳೆಗಳಾಗಿ ಮಾಡಿಕೊಳ್ಳುವುದು, ಬೆಲ್ಲದಿಂದ ಪಾನಕವನ್ನು ಮಾಡುವುದು, ಪುಡಿ ಮಾಡಿದ ಶೇಂಗಾವನ್ನು ಒಣಕೊಬ್ಬರಿ, ಶುಂಠಿ, ಯಾಲಕ್ಕಿ ಪುಡಿ ಹಾಕಿ ಪಾನಕವನ್ನು ಹಾಕಿ ಮಿಶ್ರಣ ಮಾಡುವುದು, ಆ ಮೇಲೆ ಅವರ ಅನುಕೂಲಕ್ಕೆ ತಕ್ಕಂತೆ ವಿವಿಧ ಗಾತ್ರದ ಉಂಡೆಗಳನ್ನು ಮಾಡುವುದು.

ಹಳ್ಳಿಗಳಲ್ಲಿ ವಿಶೇಷವಾಗಿ ಉಂಡಿಗಳನ್ನು ತಯಾರಿಸುವುದುಂಟು. ಅದರಲ್ಲೂ ವಿಶೇಷವಾಗಿ ಪಂಚಮಿಯ ಹಬ್ಬದಂದು ವಿವಿಧ ರೀತಿಯ ಉಂಡಿಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಶೇಂಗಾ, ಎಳ್ಳು ಹಾಗೂ ಹುರಕಡ್ಲಿಯಿಂದ ಮಾಡಿದ ಉಂಡಿಗಳು ಬಹಳಷ್ಟು ಪ್ರಸಿದ್ಧವಾದವುಗಳು. ಚಿಕ್ಕ ಮಕ್ಕಳಿಗಂತೂ ಬಹಳಷ್ಟು ಇಷ್ಟವಾದ ತಿನಿಸು ಇದಾಗಿದೆ. ಇದರಲ್ಲಿ ಪ್ರೋಟೀನ್ ಹಾಗೂ ಕೊಬ್ಬಿನ ಪೋಷಕಾಂಶಗಳು ಕಂಡುಬರುವುದರಿಂದ ದೇಹಕ್ಕೆ ಬಹಳಷ್ಟು ಉಪಯುಕ್ತವಾಗಿದೆ.

೧೦ ಶಂಕ್ರ ಪಾಳ್ಯ

* ಬೇಕಾಗುವ ಸಾಮಗ್ರಿಗಳು : ಮೈದಾ ಹಿಟ್ಟು, ಸಕ್ಕರೆ, ತುಪ್ಪ, ಹಾಲು, ಎಣ್ಣೆ, ಇತ್ಯಾದಿ.

* ತಯಾರಿಸುವ ಬಗೆ : ಮೈದಾ ಹಿಟ್ಟನ್ನು ಮೃದುವಾಗಿ ಮೊದಲು ನಾದುವುದು. ಈ ಹಿಟ್ಟಿಗೆ ತುಪ್ಪ, ಹಾಲು, ಸಕ್ಕರೆಯನ್ನು ಮಿಶ್ರಣ ಮಾಡುವುದು. ಹೀಗೆ ಮಿಶ್ರಣ ಮಾಡಿದ ಹಿಟ್ಟನ್ನು ಚಪಾತಿ ಆಕಾರದಲ್ಲಿ ಲಟ್ಟಿಸುವುದು. ಅವುಗಳನ್ನು ನಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿಕೊಂಡು ಎಣ್ಣೆಯಲ್ಲಿ ಕರಿಯುವುದು.

ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಸಿಹಿ ತಿನಿಸು ಇದಾಗಿದೆ. ಮೈದಾ ಹಿಟ್ಟನ್ನು ಉಪಯೋಗಿಸಿ ಹಾಲು ಅಥವಾ ತುಪ್ಪದಲ್ಲಿ ಇದನ್ನು ತಯಾರಿಸುವುದರಿಂದ ಕೊಬ್ಬಿನ ಪೋಷಕಾಂಶಗಳು ಯಥೇಚ್ಛವಾಗಿರುತ್ತವೆ. ಸರಳವಾಗಿ ಇದನ್ನು ತಯಾರಿಸುವುದರಿಂದ ಹೆಚ್ಚು ಪ್ರಚಲಿತದಲ್ಲಿರುವ ಸಿಹಿ ತಿನಿಸು ಇದಾಗಿದೆ.

೧೧ ಬೇಸನ್ ಉಂಡಿ

* ಬೇಕಾಗುವ ಸಾಮಗ್ರಿಗಳು:- ಕಡ್ಲಿಬೇಳೆ ಹಿಟ್ಟು, ಗೋಡಂಬಿ, ದ್ರಾಕ್ಷಿ, ಸಕ್ಕರೆ, ಡಾಲ್ಡಾ.

* ತಯಾರಿಸುವ ಬಗೆ:- ಕಡ್ಲಿ ಬೇಳೆ ಹಿಟ್ಟನ್ನು ಚೆನ್ನಾಗಿ ಕೆಂಪಾಗಿ ಹುರಿದುಕೊಳ್ಳುವುದು, ಆರಿದ ಮೇಲೆ ಕಡ್ಲಿ ಬೇಳೆ ಹಿಟ್ಟಿಗೆ ಗೋಡಂಬಿ, ದ್ರಾಕ್ಷಿ, ಮಿಶ್ರಣ ಮಾಡುವುದು, ಆರಿದ ಮೇಲೆ ವಿವಿಧ ಗಾತ್ರದ ಉಂಡೆಗಳನ್ನು ಮಾಡುವುದು.

ಉಂಡಿಗಳಲ್ಲಿಯೇ ಹೆಚ್ಚು ಪ್ರಚಲಿತದಲ್ಲಿರುವ ಸಿಹಿ ತಿನಿಸು ಇದಾಗಿದೆ. ಹಳ್ಳಿಗಳಲ್ಲಿ ಬಹುತೇಕರು ಇದನ್ನು ಮಾಡುವುದುಂಟು. ಹೆಚ್ಚಾಗಿ ಪಂಚಮಿಯ ದಿನದಂದು ಈ ಸಿಹಿ ತಿನಿಸನ್ನು ಮಾಡುವುದುಂಟು. ಇದರಲ್ಲಿ ಹೆಚ್ಚಾಗಿ ಕೊಬ್ಬಿನ ಅಂಶ ಇರುವುದರಿಂದ ದೇಹಕ್ಕೆ ಹೆಚ್ಚು ಉಪಯುಕ್ತವಾಗಿದೆ.

೧೨ ಮಾಂದ್ಲಿ

* ಬೇಕಾಗುವ ಸಾಮಗ್ರಿಗಳು: ಗೋಧಿ ಹಿಟ್ಟು, ಬೆಲ್ಲ, ಪುಟಾಣಿ, ಒಣ ಕೊಬ್ಬರಿ, ಲವಂಗ, ಯಾಲಕ್ಕಿ, ಶುಂಠಿ.

* ತಯಾರಿಸುವ ಬಗೆ: ಗೋದಿ ಹಿಟ್ಟನ್ನು ಚೆನ್ನಾಗಿ ನಾದಿಕೊಂಡು ಚಪಾತಿ ತರಹ ಲಟ್ಟಿಸುವುದು. ಅದನ್ನು ಹಂಚಿನಲ್ಲಿ ಬೇಯಿಸುವುದು, ಆರಿದ ಮೇಲೆ ಜಲ್ದಿಯಲ್ಲಿ ಅದನ್ನು ಪುಡಿ ಆಗುವ ತರಹ ತಿಕ್ಕುವುದು, ಪುಡಿ ಬಂದ ಮೇಲೆ ಅದಕ್ಕೆ ಬೆಲ್ಲ ಹಾಕಿ ಮಿಶ್ರಣ ಮಾಡುವುದು, ನಂತರ ಇದಕ್ಕೆ ಪುಟಾಣಿ ಪುಡಿ, ಶುಂಠಿ ಪುಡಿ, ಯಾಲಕ್ಕಿ, ಒಣ ಕೊಬ್ಬರಿ ಪುಡಿಯನ್ನು ಮಿಶ್ರಣ ಮಾಡುವುದು.

ಹಳ್ಳಿಗಳಲ್ಲಿ ಇದನ್ನು ವಿಶೇಷವಾಗಿ ಮೊಹರಂ ಹಬ್ಬದಲ್ಲಿ ತಯಾರಿಸುವುದುಂಟು. ಫಕೀರ್ ಸಾಬನಿಗೆ ಎಡೆಯನ್ನು ಕೊಡುವುದಕ್ಕಾಗಿ ಮಾಂದ್ಲಿಯನ್ನು ತಯಾರಿಸುವರು ಹಾಗೂ ವಿಶೇಷವಾದ ಸಂದರ್ಭಗಳಲ್ಲಿ ಇದನ್ನು ತಯಾರಿಸುವರು. ಇದರಲ್ಲಿ ವಿಶೇಷವಾಗಿ ಗ್ಲೋಮ್ಯಾಟಿಕ್ ಎಂಬ ಪೋಷಕಾಂಶ ಇರುವುದರಿಂದ ಇದು ದೇಹಕ್ಕೆ ಅತ್ಯಂತ ಉಪಯುಕ್ತವಾಗಿದೆ.

೩.೩ ಬೇಟೆ

ಹ್ಯಾರಡ ಗ್ರಾಮದಲ್ಲಿ ಹಲವಾರು ಬೇಡ ಸಮುದಾಯದ ಕುಟುಂಬಗಳನ್ನು ಕಾಣಬಹುದಾಗಿದೆ. ಈಗಲೂ ಈ ಸಮುದಾಯದವರು ಬೇಟೆಯಲ್ಲಿ ನಿಸ್ಸೀಮರು. ತಮ್ಮದೇ ಆದ ಆಯುಧಗಳಿಂದ

ಹ್ಯಾರಡಾದ ದಟ್ಟವಾದ ಆರಣ್ಯದಲ್ಲಿ ಬೇಟೆಯನ್ನಾಡುವುದು ಸರ್ವೇಸಾಮಾನ್ಯವಾಗಿದೆ. ಇತ್ತೀಚಿಗೆ ಬೇಡ ಸಮುದಾಯದವರೊಂದಿಗೆ ಮಾದಿಗ ಸಮುದಾಯದವರು ಕೂಡ ಬೇಟೆಯಾಡುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಇತರೆ ಸಮುದಾಯದ ಹಲವಾರು ಯುವಕರು ಇದಕ್ಕೆ ಸಾಥ್ ನೀಡುತ್ತಿದ್ದಾರೆ. ಮೊಲ, ಕೌಜುಗ, ಹಂದಿ, ಬುರ್ಲಿ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವುದುಂಟು. ವಿಶೇಷವಾಗಿ ಯುಗಾದಿ ಹಾಗೂ ಪಂಚಮಿ ಹಬ್ಬಗಳಲ್ಲಿ ಬೇಟೆಯಾಡುವ ಪದ್ಧತಿ ವಿಶೇಷವಾದುದು. ಸಾಮಾನ್ಯವಾಗಿ ಪಂಚಮಿ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸುವುದುಂಟು. ಮೊದಲನೆಯ ದಿನ ಖಡಕ್ ರೊಟ್ಟಿ, ವಿವಿಧ ರೀತಿಯ ಕಾಳಿನ ಪಲ್ಲೆಗಳನ್ನು ಹ್ಯಾರಡ ಗ್ರಾಮದ ಎಲ್ಲಾ ಜನಪದರು ಮಾಡುವರು. ನಂತರದ ದಿನದಲ್ಲಿ ಸಿಹಿ-ಅಡುಗೆಯನ್ನು ಮಾಡುವುದುಂಟು. ಮಾರನೆಯ ದಿನ ಕರಿಹಬ್ಬ(ಮಾಂಸದ ಊಟ)ವನ್ನು ಮಾಡುವರು. ಈ ದಿನದಂದು ಹ್ಯಾರಡಾದ ಬಹುತೇಕ ಯುವಜನರು ಐದು ಅಡಿ ಉದ್ದದ ಭರ್ಚಿ, ಕೊಡಲಿಯನ್ನು ಹಿಡಿದುಕೊಂಡು ಹ್ಯಾರಡಾದ ದಟ್ಟ ಅರಣ್ಯದಲ್ಲಿ ಹಂದಿ ಬೇಟೆಯನ್ನಾಡುವುದು ವಿಶೇಷವಾದುದು. ಅಂದಿನ ದಿನ ಯಾವುದೇ ಕಾರಣಕ್ಕೂ ಬರಿಗೈಯಿಂದ ವಾಪಸ್ಸಾಗುವಂತಿಲ್ಲ. ಏಕೆಂದರೆ ಅಂದು ಯಾವುದೇ ಪ್ರಾಣಿಯ ಬೇಟೆಯಾಗಿಲ್ಲವೆಂದರೆ ವರ್ಷ ಪೂರ್ತಿ ಯಾವುದೇ ಪ್ರಾಣಿಗಳ ಬೇಟೆ ಸಾಧ್ಯವಿಲ್ಲ ಎಂಬುದು ಹ್ಯಾರಡಾದ ಜನಪದರ ನಂಬಿಕೆಯಾಗಿದೆ. ಆದ್ದರಿಂದ ಅಂದಿನ ದಿನ ಬೇಟೆಯನ್ನಾಡಿ ಪ್ರಾಣಿಗಳನ್ನು ತಂದೇ ತರುತ್ತಾರೆ. ಬೇಟೆಯಾಡಿದ ಪ್ರಾಣಿಗಳನ್ನು ವಿವಿಧ ಸಮುದಾಯದ ಜನರು ಸಾಮಾನ್ಯವಾಗಿ ಹಂಚಿಕೊಂಡು ಭಕ್ಷಿಸುವುದು ಇಲ್ಲಿಯ ಪದ್ಧತಿಯಾಗಿದೆ. ಇನ್ನು ರಾತ್ರಿಯ ಸಮಯದಲ್ಲಿಯೂ ಸಹ ಬೇಟೆಯಾಡುವುದುಂಟು. ರಾತ್ರಿ ಸಮಯದಲ್ಲಿ ವಿಶೇಷವಾಗಿ ಮೊಲದ ಬೇಟೆಯನ್ನಾಡುವುದು ಸಾಮಾನ್ಯ. ಹಗಲಿನ ವೇಳೆಯಲ್ಲಿ ಮೊಲಕ್ಕೆಂದೇ ತಯಾರಿಸಿದ ಬಲೆಯನ್ನು ಕಟ್ಟಿ ಬರುತ್ತಾರೆ. ರಾತ್ರಿ ಊಟವಾದ ನಂತರ ಗ್ರಾಮದ ಹಿರಿಯರು ಕೆಲವು ಯುವಕರು ಹಣೆ ಪಟ್ಟಿಯ ಬ್ಯಾಟರಿಯನ್ನು ಎಲ್ಲರೂ ತಮ್ಮ ತಲೆಗೆ ಹಾಕಿಕೊಂಡು ಕೈಯಲ್ಲಿ ಉದ್ದನೆಯ ಕೋಲುಗಳನ್ನು ಹಿಡಿದುಕೊಂಡು ಹೋಗುವರು. ಮೊಲವು ಪ್ರಖರವಾದ ಬೆಳಕನ್ನು ನೋಡುತ್ತಾ ಅಲ್ಲಿಯೇ ಕುಳಿತುಕೊಳ್ಳುತ್ತದೆ. ಇನ್ನೊಬ್ಬ ಯುವಕ ಉದ್ದವಾದ ಕೋಲಿನಿಂದ ಮೊಲವನ್ನು ಜೋರಾಗಿ ಹೊಡೆಯುವುದರಿಂದ ಬೇಟೆಯಾಡುವರು. ಇನ್ನು ಹಲವಾರು ಪಕ್ಷಿಗಳನ್ನೂ ಸಹ ಬೇಟೆಯಾಡುವರು. ಅವುಗಳಲ್ಲಿ ಪ್ರಮುಖವಾಗಿ ಕೌಜುಗ ಹಾಗೂ ಬುರ್ಲಿ. ಕೌಜುಗವನ್ನು ಬಲೆಗೆ ಬೀಳಿಸಲು ಸ್ವತಃ ಜನಪದರೇ ಕೌಜುಗವನ್ನು ಸಾಕುವರು. ಕೌಜುಗದ ಬೇಟೆಯಾಡಲು ಹೋದಾಗ ಅದನ್ನು ಸಹ ಜೊತೆಯಲ್ಲಿ ತೆಗೆದುಕೊಂಡು ಹೋಗಿ ಗೊತ್ತಾದ ಪ್ರದೇಶಗಳಲ್ಲಿ ಕಾಳುಗಳನ್ನು ಹಾಕಲಾಗುತ್ತದೆ. ಸಾಕಿದ ಕೌಜುಗ ಪಕ್ಷಿಯು ಕೂಗಿದ ತಕ್ಷಣ ಆ ಕಾಳುಗಳನ್ನು ತಿನ್ನಲು ಬರುತ್ತವೆ. ಮೊದಲೇ ಪೂರ್ವ ನಿಯೋಜಿತವಾಗಿ ಹಾಕಿದ ಬಲೆಯಲ್ಲಿ ಆ ಪಕ್ಷಿಯು ಸಿಕ್ಕಿ ಹಾಕಿಕೊಳ್ಳುತ್ತದೆ. ಒಂದು ವೇಳೆ ಸಾಕಿದ ಕೌಜುಗ ಪಕ್ಷಿ ಇಲ್ಲದ ಪಕ್ಷದಲ್ಲಿ ಅವರಲ್ಲಿಯೇ ಯಾರಾದರೊಬ್ಬರು ಕೌಜುಗ ಪಕ್ಷಿ ಕೂಗಿದ ತರಹ ಕೂಗಿ ಪಕ್ಷಿಗಳನ್ನು ಕರೆಯುತ್ತಾರೆ. ಆಗ ಆ ಪಕ್ಷಿಗಳು ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತವೆ.

ಹೀಗೆ ಹ್ಯಾರಡಾದ ಜನಪದರು ಬೇಟೆಯಾಡುವ ಪದ್ಧತಿಯನ್ನು ಮೊದಲಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚಿಗೆ ಗ್ರಾಮವು ಆಧುನಿಕ ಪ್ರಪಂಚಕ್ಕೆ ತೆರೆದು ಕೊಳ್ಳುತ್ತಿದ್ದಂತೆಯೇ ಹೆಚ್ಚು ಹೆಚ್ಚು ಜನರು ಸುಶಿಕ್ಷಿತರಾಗುತ್ತಿದ್ದಂತೆಯೇ ಈ ಸಂಸ್ಕೃತಿಗಳು ಮಾಯವಾಗುತ್ತಿವೆ. ಹಬ್ಬ-ಹರಿದಿನಗಳಲ್ಲಿ ನಾಮಕಾವಸ್ಥೆಗೆ ಬೇಟೆಯನ್ನಾಡುವ ಪರಿಪಾಠ ಇತ್ತೀಚಿಗೆ ಕಂಡುಬರುತ್ತಿದೆ. ಇಂತಹ ಎಷ್ಟೋ ಅಪರೂಪದ ಗ್ರಾಮ ಸಂಸ್ಕೃತಿಯನ್ನು ಇಂದಿನ ಆಧುನಿಕ ಸಂಸ್ಕೃತಿಯು ನೆಲಸಮಮಾಡುತ್ತಿರುವುದು ದುರದೃಷ್ಟಕರ.

೩.೪ ಕುಟುಂಬ ಪದ್ಧತಿ

ಕುಟುಂಬವು ಸಮಾಜದ ಚಿಕ್ಕ ಘಟಕವಾಗಿದೆ. ಹ್ಯಾರಡಾ ಗ್ರಾಮವು ಸಹ ಹಲವಾರು ಕುಟುಂಬಗಳನ್ನು ಹೊಂದಿದ್ದು, ಅವಿಭಕ್ತ ಕುಟುಂಬ, ಪಿತೃ ಪ್ರಧಾನ ಕುಟುಂಬ, ಮಾತೃ ಪ್ರಧಾನ ಕುಟುಂಬ, ರಕ್ತ ಸಂಬಂಧಿಗಳ ಕುಟುಂಬ, ಗಂಡ-ಹೆಂಡತಿಯರ ಕುಟುಂಬ, ಏಕಪತ್ನಿ ಕುಟುಂಬ, ಬಹು ಪತ್ನಿತ್ವ ಕುಟುಂಬಗಳು ಹೀಗೆ ಹಲವು ರೀತಿಯ ಪ್ರಕಾರದ ಕುಟುಂಬಗಳನ್ನು ಹ್ಯಾರಡಾ ಗ್ರಾಮದಲ್ಲಿ ಕಾಣಹುದಾಗಿದೆ.

* ಅವಿಭಕ್ತ ಕುಟುಂಬ: ಭಾರತೀಯ ಗ್ರಾಮೀಣ ಸಮಾಜದಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಬಹಳ ಆಳವಾಗಿ ಬೇರೂರಿದೆ. ಅವಿಭಕ್ತ ಕುಟುಂಬದಲ್ಲಿ ತಂದೆ, ತಾಯಿ ಮತ್ತು ಅವರ ಮಕ್ಕಳು ಮಾತ್ರವಲ್ಲದೇ, ಅಜ್ಜಂದಿರು, ಅಜ್ಜಿಯರು, ಮೊಮ್ಮಕ್ಕಳು, ಚಿಕ್ಕಪ್ಪ, ದೊಡ್ಡಪ್ಪ ಮುಂತಾದವರು ಒಟ್ಟಿಗೆ ವಾಸಿಸುತ್ತಾರೆ. ಅಂದರೆ ಅನೇಕ ತಲೆಮಾರುಗಳ ಹಲವಾರು ಜನರು ಒಂದೇ ಮನೆಯಲ್ಲಿ ವಾಸಿಸುವ ವ್ಯವಸ್ಥೆಯೇ ಅವಿಭಕ್ತ ಕುಟುಂಬ ಪದ್ಧತಿ. ಈ ಕುಟುಂಬ ಪದ್ಧತಿಯಲ್ಲಿ ಎಲ್ಲಾ ಉತ್ಪಾದನಾ ಸಾಧನಗಳು ಸಾಮಾನ್ಯ ಒಡೆತನಕ್ಕೆ ಒಳಪಟ್ಟಿರುತ್ತವೆ. ಮತ್ತು ಶ್ರಮದ ಪ್ರತಿಫಲವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳುತ್ತಾರೆ. ಕುಟುಂಬದ ಎಲ್ಲಾ ಸದಸ್ಯರು ದುಡಿಯುತ್ತಾರೆ ಗಳಿಸುತ್ತಾರೆ. ಅವರ ಆದಾಯವನ್ನು ಕುಟುಂಬದ ಮುಖ್ಯಸ್ಥನ ಬಳಿ ಶೇಖರಿಸುತ್ತಾರೆ. ಹ್ಯಾರಡ ಗ್ರಾಮದಲ್ಲಿ ಬಹುತೇಕ ಕುಟುಂಬಗಳು ಅವಿಭಕ್ತ ಕುಟುಂಬಗಳೇ. ಈ ಗ್ರಾಮದಲ್ಲಿ ಎರಡು ತಲೆಮಾರಿನ ವ್ಯಕ್ತಿಗಳು ಸರ್ವೇಸಾಮಾನ್ಯವಾಗಿ ಒಂದೇ ಕುಟುಂಬದಲ್ಲಿ ವಾಸಿಸುತ್ತಿದ್ದಾರೆ. ಹ್ಯಾರಡಾದ ಈ ಅವಿಭಕ್ತ ಕುಟುಂಬದಲ್ಲಿ ಸಾಮಾನ್ಯವಾಗಿ ಪಿತೃ ಪ್ರಾಧಾನವಾದ ಕುಟುಂಬಗಳನ್ನು ನೋಡುತ್ತೇವೆ. ಗಂಡಸರೇ ಎಲ್ಲಾ ವ್ಯವಹಾರಗಳ ವಹಿವಾಟನ್ನು ಮಾಡುವರು. ಕುಟುಂಬದ ಏಳಿಗೆಗೋಸ್ಕರ ಬಹಳಷ್ಟು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆ. ಈ ವ್ಯವಸ್ಥೆಯಲ್ಲಿ ಸ್ತ್ರೀಯು ಕೌಟುಂಬಿಕ ಶಿಸ್ತನ್ನು ಕಾಪಾಡುವಲ್ಲಿ ಅತ್ಯಂತ ಮಹತ್ವದ್ದಾಗಿದೆ. ಗಂಡಸರು ಮನೆಯಿಂದ ಹೊರಗೆ ಹೋಗಿ ದುಡಿದುಕೊಂಡು ಬರುವರು. ಆದರೆ ಸ್ತ್ರೀಯರು ನಾಲ್ಕು ಗೋಡೆಗಳ ಮಧ್ಯೆ ಇದ್ದು ಅತ್ಯಂತ ಯಶಸ್ವಿಯಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ.

ಹ್ಯಾರಡಾದ ಯಾವುದೇ ಕುಟುಂಬವನ್ನು ನಾವುಗಳು ಗಮನಿಸಿದಾಗ ಕುಟುಂಬದ ಮುಖ್ಯಸ್ಥನ ಪ್ರಾಬಲ್ಯ ಹೆಚ್ಚಿರುತ್ತದೆ. ಈತನ ಆದೇಶಗಳನ್ನು ಇತರ ಸದಸ್ಯರು ಮೀರುವಂತಿಲ್ಲ. ಎಲ್ಲರ ಸಹಕಾರವನ್ನು ಪಡೆದುಕೊಂಡು ಅಡಳಿತವನ್ನು ನಡೆಸುವಂತಹ ಶಕ್ತಿ ಸಾಮರ್ಥ್ಯವನ್ನು ಹೊಂದಿದವನಾಗಿರುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ಹ್ಯಾರಡಾ ಗ್ರಾಮದಲ್ಲಿ ಶೇ ೩೦ ರಷ್ಟು ವಿಭಕ್ತ ಕುಟುಂಬಗಳನ್ನು ಕಾಣತ್ತಿದ್ದೇವೆ. ಗಂಡ–ಹೆಂಡತಿ, ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುವ ವಿಭಕ್ತ ಕುಟುಂಬಗಳು. ಇವುಗಳಿಗೆ ಮತ್ತೊಂದು ಹೆಸರಿನಲ್ಲಿ ಸರಳ ಕುಟುಂಬಗಳು ಎಂದು ಕರೆಯುವುದುಂಟು. ವಿಭಕ್ತ ಕುಟುಂಬಗಳು ಹೆಚ್ಚಾಗುವುದಕ್ಕೆ ಹಲವಾರು ಕಾರಣಗಳನ್ನು ನೋಡಬಹುದು. ಗ್ರಾಮೀಣ ವ್ಯವಸಾಯವು ಕ್ಷೀಣಿಸುತ್ತಿರುವುದು, ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಪ್ರಗತಿ ಕಾಣುತ್ತಿರುವುದು, ಕೈಗಾರಿಕೀಕರಣದ ಕ್ರಾಂತಿ ಆಗುತ್ತಿರುವುದು, ಸ್ತ್ರೀಯರು ಹೆಚ್ಚು ಹೆಚ್ಚು ಸುಶಿಕ್ಷಿತರಾಗುತ್ತಿರುವುದು, ಆಧುನಿಕತೆಯ ಸಂಸ್ಕೃತಿಯನ್ನು ಹೆಚ್ಚು ಹೆಚ್ಚಾಗಿ ಅನುಸರಿಸುತ್ತಿರುವುದು, ಸಾರಿಗೆ ಸಂಪರ್ಕಗಳು ಕ್ಷಿಪ್ರಗತಿಯಲ್ಲಿ ಆಗುತ್ತಿರುವುದು, ವಿದ್ಯಾವಂತ ಯುವಕ, ಯುವತಿಯರು ಉದ್ಯೋಗವನ್ನು ಅರಸಿ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು, ಉಡುಗೆ ತೊಡುಗೆಗಳು ಬದಲಾಗುತ್ತಿರುವುದು, ಸಮೂಹ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ವಿಷಯಗಳ ಪ್ರಭಾವದಿಂದ ಇವತ್ತು ಹ್ಯಾರಡಾ ಗ್ರಾಮದಲ್ಲಿ ಸರಳ ಕುಟುಂಬಗಳು ರಚನೆಯಾಗುತ್ತಿವೆ. ಈ ಬೆಳವಣಿಗೆಯು ಗ್ರಾಮೀಣ ಮೂಲ ಸಂಸ್ಕೃತಿಯ ಮಾರಣ ಹೋಮ ಮಾಡುತ್ತಿವೆ. ಸರಳ ಕುಟುಂಬಗಳಲ್ಲಿ ನೈತಿಕ ಮೌಲ್ಯಗಳಿಗೆ ಮಹತ್ವವಿಲ್ಲ. ನಾನು ಹೆಂಡತಿ, ಮಕ್ಕಳು ಅಷ್ಟೆ ಎಂಬ ಮನೋಭಾವ ಉಲ್ಬಣವಾಗುತ್ತಿರುವುದರಿಂದ ಸಾಮಾಜಿಕ ಸಂಬಂಧಗಳು ಅಧಃಪತನದ ಹಾದಿಯನ್ನು ಕಂಡುಕೊಳ್ಳುತ್ತಿವೆ ಎಂದು ಹೇಳಬಹುದು. ಹ್ಯಾರಡಾ ಗ್ರಾಮ ಮೊದಲಿಗಿಂತಲೂ ಇತ್ತೀಚಿಗೆ ಹೆಚ್ಚು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದೆ. ಸಂಬಂಧಗಳು ಕಿರಿಯದಾಗುತ್ತಾ ನಂಬಿಕೆ, ಪ್ರೀತಿ, ವಿಶ್ವಾಸ, ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಎಲ್ಲವೂ ಆಧುನಿಕತೆಯ ಭರಾಟೆಯಲ್ಲಿ ಕೊಚ್ಚಿ ಹೋಗುತ್ತಿವೆ. ಒಡಹುಟ್ಟಿದವರಲ್ಲೇ ಆಂತರಿಕ ಕಲಹಗಳು ಉಂಟಾಗಿ ಪರಸ್ಪರರು ಅಪನಂಬುಗೆಯಿಂದ ನೋಡುವ ಪರಿಸ್ಥಿತಿಯು ನಿರ್ಮಾಣವಾಗಿದೆ. ಹಿರಿಯರಿಗೆ ಇರಬೇಕಾದ ಗೌರವಯುತವಾದ ಮಾನದಂಡಗಳು ನಶಿಸಿ ಹೋಗುತ್ತಿವೆ. ಸಾಮಾಜಿಕ ಸಾಮರಸ್ಯ ಹದಗೆಡುತ್ತಿದೆ. ಮೂಲ ಸಂಸ್ಕೃತಿಯು ನಾಶವಾಗಿ ಪಶ್ಚಿಮದಿಂದ ಬಂದ ಸಂಸ್ಕೃತಿಯನ್ನು ಆಮದು ಮಾಡಿಕೊಂಡು ಅದನ್ನು ಅಕ್ಷರಶಃ ಪಾಲಿಸುತ್ತಿರುವ ಇತ್ತೀಚಿನ ಯುವ ಸಮೂಹದ ಪಡೆಯೊಂದು ಗ್ರಾಮದಲ್ಲಿ ತಲೆ ಎತ್ತಿದೆ. ಈ ಸಂಸ್ಕೃತಿಯು ಸಾಮಾಜಿಕ ಸಾಮರಸ್ಯಕ್ಕೆ ಅಡ್ಡಿಯಾಗುತ್ತಿದೆ ಎಂದು ಹೇಳಬಹುದು.

೩.೫ ಬಂಧುತ್ವ(ಬಾಂಧವ್ಯ)

ಬಾಂಧವ್ಯವು ಮಾನವ ಸಮಾಜದ ಅತೀ ಮುಖ್ಯವಾದ ಸಂಘಟನಾತ್ಮಕ ತತ್ವವಾಗಿದೆ. ರಕ್ತ ಸಂಬಂಧವನ್ನು ನಾವುಗಳು ತಂದೆ, ಮಕ್ಕಳು, ಗಂಡ, ಹೆಂಡತಿಯ ನಡುವೆ ಕಾಣಬಹುದಾಗಿದೆ.

ಆದರೆ ಬಂಧುತ್ವ ಸಮಾಜದ ಪ್ರತಿಯೊಂದು ಜನರಲ್ಲಿ ಕಾಣಬಹುದಾಗಿದೆ. ತಮ್ಮ ಸ್ವಂತ ರಕ್ತ ಸಂಬಂಧಿಕರಲ್ಲಿ ಯಾವ ರೀತಿಯ ಸಂಬಂಧವಿಟ್ಟುಕೊಂಡಿರುತ್ತಾರೆಯೋ ಅದೇ ರೀತಿಯಲ್ಲಿ ನೆರೆಹೊರೆಯವರೊಂದಿಗೆ ಸುಮಧುರವಾದ ಸಂಬಂಧವನ್ನು ಇಲ್ಲಿಯ ಗ್ರಾಮೀಣ ಜನಪದರು ಇಟ್ಟು ಕೊಂಡಿರುತ್ತಾರೆ. "ನಾವೆಲ್ಲರೂ ಗ್ರಾಮಕ್ಕಾಗಿ ಗ್ರಾಮ ನಮಗಾಗಿ" ಎಂಬ ತತ್ವದಲ್ಲಿ ಬಲವಾದ ನಂಬಿಕೆಯನ್ನು ಇಟ್ಟಿರುತ್ತಾರೆ. ಒಂದೇ ರೀತಿಯ ಆಚಾರ-ವಿಚಾರ, ಉಡುಗೆ-ತೊಡುಗೆ, ಸಂಪ್ರದಾಯ, ರೀತಿ-ನೀತಿಗಳು ಏಕರೀತಿಯಲ್ಲಿರುತ್ತವೆ. ಗ್ರಾಮದಲ್ಲಿ ವಿವಿಧ ರೀತಿಯ ಜಾತಿ, ಧರ್ಮ, ವರ್ಗ, ಪಂಥಗಳಿದ್ದರೂ ಪರಸ್ಪರ ಸಂಬಂಧವನ್ನಿಟ್ಟುಕೊಂಡಿರುತ್ತಾರೆ. ಹ್ಯಾರಡಾ ಗ್ರಾಮದಲ್ಲಿ ವಿವಿಧ ರೀತಿಯ ಶ್ರೇಣೀಕೃತ ಜಾತಿ-ವ್ಯವಸ್ಥೆಯನ್ನು ನಾವಿಲ್ಲಿ ಕಾಣಬಹುದು. ಮೇಲ್ವರ್ಗ. ಕೆಳವರ್ಗ ಎನ್ನದೇ ಸಮಾನ ರೀತಿಯಲ್ಲಿ ಅಕ್ಕ-ಅಣ್ಣ, ಮಾವ, ಚಿಕ್ಕಪ್ಪ, ದೊಡ್ಡಪ್ಪ, ಅತ್ತೆ, ಸೊಸೆ, ಅತ್ತಿಗೆ ಎಂಬ ಸಂಬಂಧದ ಸಂಬೋಧನೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಬಹುತೇಕವಾಗಿ ಹ್ಯಾರಡಾ ಗ್ರಾಮದಲ್ಲಿ ತಮ್ಮ ಸಂಬಂಧಿಕರ ಮನೆತನದಲ್ಲಿ ಮದುವೆಯ ಕೊಡು-ಕೊಳ್ಳುವಿಕೆಯ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಸೋದರ ಮಾವನ ಮಗಳನ್ನೋ, ಅಕ್ಕನ ಮಗಳನ್ನೋ, ಸೋದರತ್ತೆಯ ಮಗಳನ್ನೋ, ವರಿಸುವ ಪರಿಪಾಠವು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಇತ್ತೀಚಿಗೆ ಹ್ಯಾರಡಾ ಗ್ರಾಮದಲ್ಲಿ ಯುವಕರು ಸುಶಿಕ್ಷಿತರಾದಂತೆ, ಆಧುನಿಕತೆಯ ಪ್ರಭಾವದಿಂದ ಅವರ ಜಾತಿಯಲ್ಲೇ ಹೊರಗಿನಿಂದ ಸಂಬಂಧವನ್ನು ಗಟ್ಟಿಗೊಳಿಸುವ ಪ್ರಯತ್ನಗಳು ನಡೆಯುತ್ತವೆ. ಇತ್ತೀಚಿಗೆ ಸುಶಿಕ್ಷಿತ ಯುವ ಸಮುದಾಯವು ಸಂಬಂಧಿಕರಲ್ಲಿ ಹೆಚ್ಚಾಗಿ ಮದುವೆಯಾದರೆ ಮುಂದೆ ಹುಟ್ಟುವ ಮಕ್ಕಳ ಮೇಲೆ ಪರಿಣಾಮವನ್ನು ಬೀರಬಹುದು ಎಂದು ವೈಜ್ಞಾನಿಕ ಕಾರಣವನ್ನು ಕೊಟ್ಟು ಹೊರಗಿನಿಂದ ಸಂಬಂಧವನ್ನು ಬೆಳೆಸುವುದನ್ನು ಕಾಣಬಹುದಾಗಿದೆ.

೩.೬ ವ್ಯಾಪಾರ

ವ್ಯಾಪಾರ ಎಂಬುದು ಮಾನವನ ಅವಿಭಾಜ್ಯ ಅಂಗವಾಗಿದೆ. ಪ್ರತಿಯೊಂದು ಹಂತಗಳಲ್ಲಿಯೂ ವ್ಯಾಪಾರದ ವಹಿವಾಟುಗಳನ್ನು ಕಾಣುತ್ತೇವೆ. ಯಾವುದೇ ಒಂದು ಸರಕು ಅಥವಾ ವಸ್ತುವನ್ನು ನಿಗದಿತ ಬೆಲೆಗೆ ಹಣವನ್ನು ಕೊಟ್ಟು ಆ ವಸ್ತುವನ್ನು ಪಡೆಯುವ ಪ್ರಕ್ರಿಯೆಯನ್ನು ನಾವು ವ್ಯಾಪಾರ ಎಂದು ಕರೆಯಬಹುದು. ವ್ಯಾಪಾರವೆಂಬುದು ಮಾನವನು ಮೊದಲು ಸಾಂಸ್ಥಿಕ ಜೀವನವನ್ನು ನಡೆಸತೊಡಗಿದ ಸಮಯದಲ್ಲಿ ಹುಟ್ಟುಕೊಂಡಿರುವ ಪ್ರಕ್ರಿಯೆಯಾಗಿದೆ. ಪ್ರಾಚೀನ ಕಾಲದಲ್ಲಿ ಮಾನವರು ವಸ್ತುಗಳ ವಿನಿಮಯದಿಂದ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದರು.

"ಬಹಳ ದಿನಗಳವರೆಗೆ ವ್ಯಾಪಾರವು ವಸ್ತುಗಳ ವಿನಿಮಯದ ರೀತಿಯಲ್ಲಿ ನಡೆದುಕೊಂಡು ಬಂದವು. ಕ್ರಮೇಣ ಬದಲಾದ ಪರಿಸ್ಥಿತಿಗೆ ತಕ್ಕಂತೆ ಉತ್ಪಾದನೆಯು ಹೆಚ್ಚಿತು. ಅದರ ನಿರ್ವಹಣೆಗಾಗಿ ಪ್ರತ್ಯೇಕವಾದ ಒಂದು ವರ್ಗವು ಸಮಾಜದಲ್ಲಿ ಸೃಷ್ಟಿಯಾಯಿತು. ಈ ವರ್ಗಗಳೇ ವರ್ತಕರ

ವರ್ಗ(ಶ್ರೇಣಿ)ಗಳು. ಈ ವರ್ತಕರ ಗುಂಪುಗಳು ತಮ್ಮದೇ ಆದ ಒಂದು ಸಂಘವನ್ನು ಕಟ್ಟಿಕೊಂಡು ವ್ಯಾಪಾರ ವಹಿವಾಟನ್ನು ನಡೆಸುತ್ತಿದ್ದರು. ಇವರನ್ನು ಸಾಮಾನ್ಯವಾಗಿ ಸೆಟ್ಟಿಗಳು ಎಂದು ಕರೆಯುತ್ತಿದ್ದರು. ಅವುಗಳಲ್ಲಿ ಅಯ್ಯಾವೊಳೆಯಯ್ನೂರ್ವರು, ಬಣ್ಣಂಜಿಗರಯ್ನೂರ್ವರು, ತಳದಯ್ನೂರ್ವರು, ವಣಿಜ ಸ್ವಾಮಿಗಳಯ್ನೂರ್ವರು, ತಂಬುಲಿಗ ಸಾಸಿರ್ವರು ಎಂಬುದಾಗಿ ಗುರ್ತಿಸಬಹುದು" (ಡಾ.ವಾಸುದೇವ ಬಡಿಗೇರ : ೨೦೧೨:೨೪೪).

ಹ್ಯಾರಡದಲ್ಲಿಯೂ ಸಹ ಪ್ರಾಚೀನ ಕಾಲದಿಂದಲೂ ವ್ಯಾಪಾರ, ವಹಿವಾಟಗಳನ್ನು ನಡೆಸುತ್ತಿದ್ದರು ಎಂಬುದಕ್ಕೆ ಹಲವಾರು ಕುರುಹುಗಳನ್ನು ಕಾಣಬಹುದಾಗಿದೆ. ಪ್ರಮುಖವಾಗಿ ಹ್ಯಾರಡಾದಲ್ಲಿ ಕಬ್ಬಿಣದ ವ್ಯಾಪಾರವನ್ನು ಕಾಣಬಹುದಾಗಿದೆ. ಇದಕ್ಕೆ ಪುಷ್ಠಿ ನೀಡುವಂತೆ ಈಗಲೂ ಸಹ ಕುಲುಮೆಯ ಪೆಂಟೆಯನ್ನು ಕಾಣಬಹುದಾಗಿದೆ. ಕಬ್ಬಿಣದ ಅದಿರನ್ನು ಶೋಧಿಸಿ ಕಬ್ಬಿಣವನ್ನು ಬೇರ್ಪಡಿಸಿ ಉಳಿದಿರುವ ಕಬ್ಬಿಣದ ಕಿಟ್ಟ(ತ್ಯಾಜ್ಯ)ವನ್ನು ಕಾಣಬಹುದಾಗಿದೆ. ಗುಡ್ಡದ ಆಕಾರದಲ್ಲಿ ಇದನ್ನು ಕಾಣಬಹುದಾಗಿತ್ತು. ಆದರೆ ಇತ್ತೀಚಿಗೆ ಗ್ರಾಮವು ಬೆಳೆದಂತೆ ಇದನ್ನು ನೆಲಸಮ ಮಾಡಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಈಗಲೂ ಈ ಸ್ಥಳದಲ್ಲಿ ಕಬ್ಬಿಣದ ಕೆಲಸವನ್ನು ಮಾಡುವ ಕಮ್ಮಾರ ಕುಟುಂಬಗಳನ್ನು ಬಹಳಷ್ಟು ಕಾಣಬಹುದಾಗಿದೆ. ಇಲ್ಲಿಯ ನಿವಾಸಿಗಳು ಹೇಳುವ ಪ್ರಕಾರ ಒಂದಾನೊಂದು ಕಾಲದಲ್ಲಿ ಸುಮಾರು ೨೦ ರಿಂದ ೨೫ ಕುಲುಮೆಗಳು ಇದ್ದವು ಎಂಬುದನ್ನು ತಿಳಿಸುತ್ತಾರೆ. ಕಬ್ಬಿಣದ ಅದಿರನ್ನು ತೆಗೆದುಕೊಂಡು ಅದಕ್ಕೆ ಗರಿಷ್ಠ ಉಷ್ಣಾಂಶವನ್ನು ಕೊಟ್ಟು ದ್ರವರೂಪದ ಕಬ್ಬಿಣವನ್ನು ತೆಗೆದು ಅದನ್ನು ಉಂಡೆಯಾಕಾದಲ್ಲಿ ಮಾಡಿ ದೂರದ ಪ್ರದೇಶಗಳಿಗೆ ಅವುಗಳನ್ನು ಸಾಗಿಸುತ್ತಿದ್ದರು ಎಂದು ತಿಳಿಯುತ್ತದೆ. ಸುತ್ತಮುತ್ತಲಿನ ಗ್ರಾಮಗಳಿಗೆ ಹ್ಯಾರಡದಿಂದ ಕಬ್ಬಿಣವು ಸರಬರಾಜು ಆಗುತ್ತಿತ್ತು.

ಹ್ಯಾರಡಾ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ವಸ್ತುಗಳ ವಿನಿಮಯದಿಂದ ವ್ಯಾಪಾರ ವಹಿವಾಟನ್ನು ಮಾಡುತ್ತಿದ್ದರು. ಗ್ರಾಮಕ್ಕೆ ಮೊಟ್ಟಮೊದಲು ವ್ಯಾಪಾರಿಗಳಾಗಿ ಬಂದಿದ್ದು ಮುರಾರಿ ಆದಿ ರಾಜಪ್ಪನವರ ಪೂರ್ವಜರು ಎಂದು ಹೇಳಬಹುದು. ಕೋರ್ಲಹಳ್ಳಿಯಿಂದ ಇವರು ಉತ್ಕೃಷ್ಠ ಮಾದರಿಯ ಉಪ್ಪನ್ನು ತಂದು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರುತ್ತಿದ್ದರು. ತದನಂತರದಲ್ಲಿ ಗ್ರಾಮದಲ್ಲಿ ಬೆಳೆಯುವ ಭತ್ತ, ಜೋಳ, ರಾಗಿ, ಹುರುಳಿ, ನವಣೆ, ಹತ್ತಿ ಮುಂತಾದ ವಸ್ತುಗಳನ್ನು ಕೊಂಡುಕೊಂಡು ಹುಬ್ಬಳ್ಳಿ ಮಾರುಕಟ್ಟೆಗೆ ಸಾಗಿಸುತ್ತಿದ್ದರು. ಹೀಗೆ ವ್ಯಾಪಾರದ ಮೂಲಕ ಆರ್ಥಿಕವಾಗಿ ಬಹಳಷ್ಟು ಪ್ರಭಲರಾದರು. ನಂತರದ ದಿನಮಾನಗಳಲ್ಲಿ ಬ್ರಿಟೀಷರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ ಜಮೀನ್ದಾರಿ ಪಟ್ಟವನ್ನು ಹೊಂದಿದರು ಎಂದು ಸ್ಥಳೀಯ ವ್ಯಕ್ತಿಗಳು ಹೇಳುತ್ತಾರೆ. ತದನಂತರದಲ್ಲಿ ಕಬ್ಬಿಣದ ವ್ಯಾಪಾರವನ್ನು ಮುಂಬೈವರೆಗೆ ಕೊಂಡೊಯ್ದ ಕೀರ್ತಿ ಬಾವಿ ಲಿಂಗಪ್ಪ ಅವರಿಗೆ ಸಲ್ಲುತ್ತದೆ. ಬ್ರಿಟೀಷರ ಕಾಲಾವಧಿಯಲ್ಲಿ ರೈಲುಗಳ ಮುಖಾಂತರ ಮುಂಬೈಯೊಂದಿಗೆ ಕಬ್ಬಿಣದ ವ್ಯಾಪಾರವನ್ನು

ಹ್ಯಾರಡ ಗ್ರಾಮವು ಹೊಂದಿತ್ತು. ಕೃಷಿಯ ಉತ್ಪನ್ನಗಳನ್ನು ಕತ್ತೆ, ಕುದುರೆ, ಬಂಡಿಗಳ ಮುಖಾಂತರವಾಗಿ ರಾಣೇಬೆನ್ನೂರು, ಗುತ್ತಲ, ಹುಬ್ಬಳ್ಳಿ ವಾಣಿಜ್ಯ ನಗರಗಳಿಗೆ ಕೊಂಡೊಯ್ಯುತ್ತಿದ್ದರು. ಈಗಲೂ ಸಹ ಹ್ಯಾರಡ ಗ್ರಾಮದಲ್ಲಿ ವ್ಯಾಪಾರ ವಹಿವಾಟನ್ನು ಕಾಣಬಹುದಾಗಿದೆ. ಬಹುತೇಕವಾಗಿ ಕೃಷಿ ಉತ್ಪನ್ನಗಳನ್ನು ಪಕ್ಕದ ಹೊಳಲಿನ ಗ್ರಾಮದಲ್ಲಿ ಮಾರಾಟ ಮಾಡಲಾಗುವುದು. ಅತಿ ಹೆಚ್ಚು ಕಬ್ಬು, ಹತ್ತಿ, ಮೆಕ್ಕೆಜೋಳ, ಜೋಳ, ರಾಗಿ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಬೆಳೆಯಲಾಗುತ್ತಿದೆ. ಬಹಳ ವರ್ಷಗಳಿಂದಲೂ ಹ್ಯಾರಡಾದಲ್ಲಿ ಸಾಂಪ್ರದಾಯಕ ವ್ಯಾಪಾರ ಪದ್ಧತಿ ಇತ್ತು. ತಕ್ಕಡಿ, ತೂಕದ ಕಲ್ಲುಗಳನ್ನು ಬಳಸಿ ವ್ಯವಸಾಯದ ಉತ್ಪನ್ನಗಳ ತೂಕವನ್ನು ಮಾಡುತ್ತಿದ್ದರು. ಈ ಪದ್ಧತಿಯಲ್ಲಿ ರೈತರಿಗೆ ತೂಕದಲ್ಲಿ ಮೋಸ ಮಾಡುವ ಸಂಭವವಿತ್ತು. ಆದ್ದರಿಂದ ಗ್ರಾಮದ ಜನರು ಸುಶಿಕ್ಷಿತರಾಗುತ್ತಿದ್ದಂತೆ ನಿಷ್ಪಕ್ಷಪಾತವಾದ "ವೆ ಬ್ರಿಡ್ಜ" ತೂಕದ ಯಂತ್ರದ ಮೊರೆ ಹೊಗುತ್ತಿದ್ದಾರೆ.

ಗ್ರಾಮದಲ್ಲಿ ಇದಕ್ಕಿಂತ ಮೊದಲು ಸಣ್ಣಪುಟ್ಟ ದಿನಸಿ ಸರಕುಗಳನ್ನು ತರಲು ಪಕ್ಕದ ಹೊಳಲಿನ ಗ್ರಾಮಕ್ಕೆ ತೆರಳಬೇಕಾಗಿತ್ತು. ಆದರೆ ಗ್ರಾಮವು ಆಧುನಿಕತೆಗೆ ತೆರೆದು ಕೊಳ್ಳುತ್ತಿದ್ದಂತೆಯೇ ಹಲವಾರು ಕಿರಾಣಿ ಅಂಗಡಿಗಳು, ಸ್ಟೇಷನರಿ ಸಾಮಾನು ಅಂಗಡಿಗಳು, ಔಷಧಿ ಅಂಗಡಿಗಳು, ರಸಗೊಬ್ಬರ ಮಾರಾಟ ಕೇಂದ್ರಗಳು, ಪುಸ್ತಕ ಅಂಗಡಿಗಳು ಗ್ರಾಮದಲ್ಲಿ ಪ್ರಾರಂಭವಾದವು. ಇದು ಸ್ಪಷ್ಟವಾಗಿ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುವುದನ್ನು ಕಾಣಬಹುದಾಗಿದೆ.

ಹ್ಯಾರಡಾ ಗ್ರಾಮದಲ್ಲಿರುವ ವ್ಯಾಪಾರಸ್ಥರು

* ಕಿರಾಣಿ ವ್ಯಾಪಾರಿಗಳು : ಈ ವ್ಯಾಪಾರವನ್ನು ಮಾಡುವಂತಹ ಸುಮಾರು ೧೫ ರಿಂದ ೨೦ ಕುಟುಂಬಗಳನ್ನು ಹ್ಯಾರಡಾದಲ್ಲಿ ಕಾಣಬಹುದಾಗಿದೆ. ಈ ವ್ಯಾಪಾರಿಗಳು ದಿನನಿತ್ಯದ ದಿನಸಿ ಸಾಮಾನುಗಳನ್ನು ಪಟ್ಟಣದಿಂದ ಹೋಲ್ ಸೇಲ್ ದರದಲ್ಲಿ ತಂದು ರೀಟೇಲ್ ದರದಲ್ಲಿ ಗ್ರಾಮದಲ್ಲಿ ಮಾರುವಂತಹ ವಹಿವಾಟನ್ನು ಕಾಣಬಹುದಾಗಿದೆ. ಹಿಂದಿನ ಕಾಲಾವಧಿಯಿಂದಲೂ ಈ ವ್ಯಾಪಾರವು ನಡೆದುಕೊಂಡು ಬಂದಿದೆ. ಹಿಂದಿನ ದಿನಮಾನಗಳಲ್ಲಿ ಬೇವಿನಕಟ್ಟಿ ಕಾಡಮ್ಮ ದಿನಸಿ ವ್ಯಾಪಾರವನ್ನು ಮಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಇವರು ಇಡೀ ಗ್ರಾಮಕ್ಕೆ ಬೇಕಾಗುವ ದಿನಸಿ ಸಾಮಾನುಗಳನ್ನು ಒದಗಿಸುತ್ತಿದ್ದರು. ಗ್ರಾಮದ ಬಹುತೇಕ ಅಗತ್ಯ ವಸ್ತುಗಳನ್ನು ಪೂರೈಸುವ ಅಂಗಡಿ ಇದಾಗಿತ್ತು. ಆಗ ಗ್ರಾಮದಲ್ಲಿ ಒಂದೋ ಎರಡೋ ಅಂಗಡಿಗಳನ್ನು ಕಾಣುತ್ತಿದ್ದೆವು. ಆದರೆ ಗ್ರಾಮವು ಬೆಳೆದಂತೆಲ್ಲಾ ಓಣಿಗೆ ಒಂದರಂತೆ ಕಿರಾಣಿ ಅಂಗಡಿಗಳನ್ನು ಕಾಣಬಹುದಾಗಿದೆ. ಕೊರ್ಲಹಳ್ಳಿ ಮಂಜುನಾಥ, ಬಣಕಾರ ಶಿವಪ್ಪ, ಕುಂಬಾರ ಚೆನ್ನಪ್ಪ, ನಾಯಕರ ಕೊಟ್ರೇಶಪ್ಪ, ಕೊಟ್ರಯ್ಯ ಹೆಚ್.ಎಂ, ಬಡಿಗೇರ ಗಣೇಶಪ್ಪ, ಬಡಿಗೇರ ಮಾಲತೇಶ, ಯಲಗಚ್ಚಿನ ನಾಗರಾಜ, ನಾಯಕರ ನಾಗೇಶಪ್ಪ, ಚಿಕ್ಕಬಿದರಿ ಸಿದ್ದಪ್ಪ, ಕೊರ್ಲಹಳ್ಳಿ ನೇಮಿಚಂದ್ರಪ್ಪ, ಕೋಗನೂರು ಅಶೋಕ, ಮಾಚಿಹಳ್ಳಿ ಸೋಮಣ್ಣ ಮುಂತಾದ ಕಿರಾಣಿ ವ್ಯಾಪಾರಿಗಳನ್ನು ಕಾಣಬಹುದಾಗಿದೆ. ಈ ವ್ಯಾಪಾರಿಗಳು ದಿನನಿತ್ಯ ಬಳಕೆಗೆ ಬೇಕಾಗುವ

ಅಕ್ಕಿ, ಬೇಳೆ, ಬೆಲ್ಲ, ಸಾಂಬಾರು ಪದಾರ್ಥಗಳು, ಟೀಪುಡಿ, ಉಪ್ಪು, ಖಾರ, ಎಲೆ-ಅಡಿಕೆ, ಅಡುಗೆ ಎಣ್ಣೆ, ಸಕ್ಕರೆ ಮುಂತಾದ ಸಾಮಾನುಗಳನ್ನು ಗ್ರಾಹಕರಿಗೆ ಒದಗಿಸುವರು.

ದಿನಸಿ ಸಾಮಾನುಗಳನ್ನು ಕೆ.ಜಿ, ಲೀಟರ್ ಮುಂತಾದ ಅಳತೆ ಮಾಪನಗಳಿಂದ ಕೊಡುವ ಪದ್ಧತಿಯು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿಯಾಗಿದೆ. ಗ್ರಾಮದ ಮಧ್ಯಮ ವರ್ಗದವರು, ಬಡವರು ದಿನನಿತ್ಯದ ವಸ್ತುಗಳನ್ನು ಕೊಂಡು ಅನುಭೋಗಿಸುವ ಪದ್ಧತಿಯನ್ನು ಕಾಣಬಹುದಾಗಿದೆ. ಅತೀ ಬಡವರು ದಿನನಿತ್ಯ ಹಣವನ್ನು ಕೊಟ್ಟು ಸಾಮಾನುಗಳನ್ನು ಕೊಳ್ಳದೇ, ವರ್ಷಪೂರ್ತಿ ಸಾಮಾನುಗಳನ್ನು ಕೊಂಡು ಉದ್ರಿ ಲೆಕ್ಕದಲ್ಲಿ ಹಚ್ಚಿ ವರ್ಷಕ್ಕೊಮ್ಮೆ ಬೆಳೆ ಫಸಲು ಬಂದಾಗ ಅದರಿಂದ ಬಂದ ಹಣದಿಂದ ಉದ್ರಿ ಹಣವನ್ನು ಕೊಡುವುದರ ಮೂಲಕ ವಹಿವಾಟನ್ನು ನಡೆಸುತ್ತಿದ್ದಾರೆ. ಈ ರೀತಿಯ ಕೊಡು-ಕೊಳ್ಳುವುದರ ಸಹಕಾರವನ್ನು ಗ್ರಾಮದಲ್ಲಿ ಕಾಣಬಹುದಾಗಿದೆ. ಗ್ರಾಮದ ಬಹುತೇಕ ಕಿರಾಣಿ ವ್ಯಾಪಾರಿಗಳು ಅತೀ ಲಾಭವನ್ನು ಅಪೇಕ್ಷಿಸದೇ ಕೇವಲ ತಮ್ಮ ಕುಟುಂಬ ನಿರ್ವಹಣೆಗಷ್ಟೇ ಬೇಕಾದ ಲಾಭವನ್ನು ಪಡೆಯುವುದರ ಮೂಲಕ ಸಹಕಾರ ಮನೋಭಾವದ ತತ್ವವನ್ನು ಪರಿಪಾಲಿಸುತ್ತಿದ್ದಾರೆ. ಆದರೆ ಪಟ್ಟಣ, ನಗರಗಳಂತಹ ಪ್ರದೇಶಗಳಲ್ಲಿ ಅತೀ ಲಾಭವನ್ನು ಅಪೇಕ್ಷಿಸಿ ಕಲಬೆರಕೆ ಆಹಾರ ಪದಾರ್ಥಗಳನ್ನು ಕಾಣುತ್ತಿದ್ದೇವೆ. ಆದರೆ ಇಂತಹ ಪರಿಸ್ಥಿತಿ ಹ್ಯಾರಡಾ ಗ್ರಾಮದಲ್ಲಿ ಇಲ್ಲ. ಹ್ಯಾರಡಾ ಗ್ರಾಮಸ್ಥರು ದಿನನಿತ್ಯ ಅನುಭೋಗಿಸುವ ಬಹುತೇಕ ಸಾಮಾನುಗಳನ್ನು ತಮ್ಮ ಹೊಲಗಳಲ್ಲಿ ಬೆಳೆದು, ಮಿಕ್ಕಿದ್ದನ್ನು ಅಂಗಡಿಗಳಲ್ಲಿ ಕೊಳ್ಳವ ಪದ್ಧತಿ ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಆದರೆ ಇತ್ತೀಚಿಗೆ ಗ್ರಾಮವು ಹೆಚ್ಚು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಗ್ರಾಮಸ್ಥರು ಹೆಚ್ಚು ಹೆಚ್ಚು ವಾಣಿಜ್ಯ ಬೆಳೆಗೆ ಮಹತ್ವ ಕೊಟ್ಟಿದ್ದರಿಂದ ಅನಿವಾರ್ಯವಾಗಿ ದಿನಸಿ ವಸ್ತುಗಳನ್ನು ಕೊಂಡುಕೊಳ್ಳುವ ಪರಿಪಾಠ ಬೆಳೆದು ಬಂದಿದೆ. ಗ್ರಾಮದ ಸ್ಥಿತಿವಂತರು ವರ್ಷಕ್ಕೆ ಬೇಕಾಗುವಷ್ಟು ದಿನಸಿ ವಸ್ತುಗಳನ್ನು ನಗರ ಮತ್ತು ಪಟ್ಟಣಗಳಿಂದ ತರುವುದರಿಂದ ಕಿರಾಣಿ ವ್ಯಾಪಾರಿಗಳ ವ್ಯಾಪಾರ ಸ್ವಲ್ಪ ಮಟ್ಟಿಗೆ ಕುಸಿದಿರುವುದನ್ನು ಕಾಣಬಹುದಾಗಿದೆ. ಇಲ್ಲಿಯ ಸ್ಥಳೀಯ ವ್ಯಾಪಾರಿಗಳು ಇದ್ದುದರಲ್ಲಿಯೇ ಕಡಿಮೆ ಲಾಭವನ್ನು ಪಡೆದು ಸಹಕಾರಿ ಧರ್ಮವನ್ನು ಪರಿಪಾಲಿಸುತ್ತಿದ್ದಾರೆ.

* ಬಟ್ಟೆ ವ್ಯಾಪಾರಿಗಳು : ಬಟ್ಟೆ ವ್ಯಾಪಾರವು ಇತ್ತೀಚಿಗೆ ಗ್ರಾಮದಲ್ಲಿ ಪ್ರಚಲಿತದಲ್ಲಿ ಬಂದಿದೆ. ಮೊದಮೊದಲು ಗ್ರಾಮಸ್ಥರು ಪಕ್ಕದ ಊರಾದ ಹೊಳಲಿನ ಸಂತೆಗೆ ಹೋದಾಗ ಬಟ್ಟೆಗಳನ್ನು ಖರೀದಿಸುತ್ತಿದ್ದರು. ಆದರೆ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಬಟ್ಟೆ ಉದ್ಯಮವು ಹೆಚ್ಚು ಮುನ್ನೆಲೆಗೆ ಬರುತ್ತಿದೆ. ಗ್ರಾಮದಲ್ಲಿ ನಾಲ್ಕರಿಂದ ಐದು ಬಟ್ಟೆ ಅಂಗಡಿಗಳನ್ನು ಕಾಣಬಹುದಾಗಿದೆ. ಕೊರ್ಲಹಳ್ಳಿ ಸುಕುಮಾರಪ್ಪ, ಕೊರ್ಲಹಳ್ಳಿ ಅಭಿನಂದನ್, ಕೊರ್ಲಹಳ್ಳಿ ನಾಗರಾಜ ಹಾಗೂ ಮಾಚಿಹಳ್ಳಿ ಹರೀಶ್ ಮುಂತಾದ ಬಟ್ಟೆ ವ್ಯಾಪಾರಿಗಳನ್ನು ಹೆಸರಿಸಬಹುದು. ಕ್ಷೇತ್ರಕಾರ್ಯಕ್ಕೆ ತೆರಳಿದ ಸಂದರ್ಭದಲ್ಲಿ

ಕೊರ್ಲಹಳ್ಳಿ ಸುಕುಮಾರಪ್ಪ, ಮಾಚಿಹಳ್ಳಿ ಹರೀಶ್ ಅವರನ್ನು ಸಂದರ್ಶಿಸಿದಾಗ ಗ್ರಾಮದಲ್ಲಿ ಬಹುತೇಕವಾಗಿ ಹೆಣ್ಣುಮಕ್ಕಳ ಬಟ್ಟೆಗಳು ಹೆಚ್ಚು ಖರೀದಿ ಆಗುವುದನ್ನು ಹೇಳಿದ್ದುಂಟು. ಗ್ರಾಮದಲ್ಲಿ ಮಹಿಳೆಯರು ಬಹುತೇಕವಾಗಿ ಸೀರೆ, ಕುಪ್ಪಸ, ನೈಟಿ, ಚೂಡಿದಾರ ಧರಿಸುವುದರಿಂದ ಇವುಗಳ ಮಾರಾಟ ಬಹು ಜೋರಾಗಿದೆ. ಇನ್ನು ಗಂಡಸರು ಬಹುತೇಕವಾಗಿ ಲುಂಗಿ, ಅಂಗಿ, ಟವಲ್ ಹಿರಿಯರು ಪಂಚೆಯನ್ನು ಧರಿಸುವುದುಂಟು. ಈ ಉಡುಪುಗಳ ವ್ಯಾಪಾರವು ಬಹು ಜೋರಾಗಿದೆ ಎಂದು ಬಟ್ಟೆ ವ್ಯಾಪಾರಿಗಳು ತಿಳಿಸುವರು.

ಗ್ರಾಮದಲ್ಲಿ ದಿನನಿತ್ಯ ಧರಿಸುವ ಬಟ್ಟೆಗಳನ್ನು ಬಹುತೇಕವಾಗಿ ಸ್ಥಳೀಯ ಅಂಗಡಿಗಳಲ್ಲಿ ಖರೀದಿಸುವ ಸಂಪ್ರದಾಯವು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಗ್ರಾಮದಲ್ಲಿ ವಿಶೇಷ ಸಂದರ್ಭಗಳಾದ ಮದುವೆ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ತೆರಳಿ ಬಟ್ಟೆಗಳನ್ನು ಖರೀದಿಸುವುದುಂಟು. ಗ್ರಾಮದ ಅತೀ ಹೆಚ್ಚು ಜನರು ಮಾಸೂರು, ದಾವಣಗೇರಿ, ರಾಣೆಬೆನ್ನೂರು ಮತ್ತು ಹಾವೇರಿ ಪಟ್ಟಣಗಳಿಗೆ ತೆರಳಿ ಜವಳಿ ಬಟ್ಟೆಗಳನ್ನು ಖರೀದಿಸುವುದು ಇತ್ತೀಚಿಗೆ ಸರ್ವೆಸಾಮಾನ್ಯವಾಗಿದೆ.

ಗ್ರಾಮದ ಬಹುತೇಕ ಬಟ್ಟೆ ವ್ಯಾಪರಿಗಳು ಅತೀ ದುಬಾರಿಯಾದ ಬಟ್ಟೆಗಳನ್ನು ತರುವುದಿಲ್ಲ. ಗ್ರಾಮೀಣ ಜನರ ಹಣಕಾಸಿಗೆ ಹೊರೆಯಾಗದಂತೆ ಎಲ್ಲರಿಗೂ ಕೈಗೆಟುಕುವ ದರದಲ್ಲಿ ಬಟ್ಟೆಗಳನ್ನು ಮಾರಾಟಕ್ಕಿಟ್ಟಿರುವುದನ್ನು ಕಾಣಬಹುದಾಗಿದೆ. ಸಣ್ಣ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಬೇಕಾಗುವ ಬಟ್ಟೆಗಳನ್ನು ಮಾರಾಟ ಮಾಡುವುದನ್ನು ನಾವುಗಳು ಕಾಣಬಹುದಾಗಿದೆ. ಅತೀ ಆಡಂಬರದ ಉಡುಪುಗಳು ಇರದೆ ಜನಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಬಟ್ಟೆಗಳನ್ನು ಮಾರಾಟ ಮಾಡುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಗ್ರಾಮದಲ್ಲಿ ಜನರು ಮೊದಲು ಸಾಂಪ್ರದಾಯಿಕ ಉಡುಗೆಗಳನ್ನು ಧರಿಸುತ್ತಿದ್ದರು. ಆದರೆ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ತಮ್ಮ ಉಡುಪಿನ ಶೈಲಿಯನ್ನು ಬದಲಾಯಿಸಿಕೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

* ರಸಗೊಬ್ಬರ ಹಾಗೂ ಕ್ರಿಮಿನಾಶಕ ವ್ಯಾಪಾರಿಗಳು : ಈ ವ್ಯಾಪಾರವು ಗ್ರಾಮದಲ್ಲಿ ಮೊದಲಿನಿಂದಲೂ ಇರಲಿಲ್ಲ. ಇತ್ತೀಚಿಗೆ ಚಾಲ್ತಿಯಲ್ಲಿರುವ ವಹಿವಾಟು ಇದಾಗಿದೆ. ಗ್ರಾಮವು ಆಧುನಿಕ ಲಯವನ್ನು ಕಂಡುಕೊಳ್ಳುತ್ತಿದ್ದಂತೆಯೇ ಈ ವ್ಯಾಪಾರವು ಬೆಳೆದು ಬಂದಿದೆ. ಗ್ರಾಮದಲ್ಲಿ ಎರಡು ರಸಗೊಬ್ಬರ ಹಾಗೂ ಕ್ರಿಮಿನಾಶಕ ಅಂಗಡಿಗಳನ್ನು ಕಾಣಬಹುದಾಗಿದೆ. ಹರ್ವಿ ಶೇಖಪ್ಪ ಹಾಗೂ ನಾಯಕರ ಚಂದ್ರಪ್ಪ ಅವರು ರಸಗೊಬ್ಬರ ವ್ಯಾಪಾರಿಗಳು. ಸರ್ಕಾರದಿಂದ ಅಧಿಕೃತವಾಗಿ ಪರವಾನಿಗೆಯನ್ನು ತೆಗೆದುಕೊಂಡು ಈ ವ್ಯಾಪಾರವನ್ನು ಮಾಡುತ್ತಿದ್ದಾರೆ. ಗ್ರಾಮದ ಬಹುತೇಕ ಕೃಷಿಕರು ಈ ಅಂಗಡಿಗಳಲ್ಲಿಯೇ ರಸಗೊಬ್ಬರಗಳನ್ನು ಕೊಳ್ಳುವರು. ಸರ್ಕಾರವು ನಿಗದಿಪಡಿಸಿದ ದರಕ್ಕನುಗುಣವಾಗಿ ರಸಗೊಬ್ಬರಗಳನ್ನು ವಿತರಿಸುತ್ತಿದ್ದಾರೆ. ಮೊದ ಮೊದಲು ಗ್ರಾಮದಲ್ಲಿ ಕೇವಲ

ಸಾವಯವ ಗೊಬ್ಬರಗಳಾದ ಸಗಣಿ, ಕೆರೆ–ಕಟ್ಟೆಗಳಿಂದ ಫಲವತ್ತಾದ ಮಣ್ಣನ್ನು ಬಳಸುವುದರ ಮೂಲಕ ಸಾಂಪ್ರದಾಯಿಕ ಕೃಷಿಯನ್ನು ಮಾಡುತ್ತಿದ್ದರು. ಆದರೆ ಇತ್ತೀಚಿಗೆ ರಸಗೊಬ್ಬರದ ಮಾರಾಟವು ವೇಗವಾಗಿ ಚಲಿಸುತ್ತಿದೆ.

ರಸಗೊಬ್ಬರ ವ್ಯಾಪಾರಿಗಳು ನೇರವಾಗಿ ಕಾರ್ಖಾನೆಗಳಿಂದ ಗೊಬ್ಬರವನ್ನು ತರುವುದರ ಮೂಲಕ ನ್ಯಾಯಯುತವಾದ ಬೆಲೆಯಲ್ಲಿ ಮಾರುವುದುಂಟು. ಗ್ರಾಮದ ಸಣ್ಣ ಹಿಡುವಳಿದಾರರು ಹಾಗೂ ಅತೀ ಸಣ್ಣ ಹಿಡುವಳಿದಾರರು ರಸಗೊಬ್ಬರ ವ್ಯಾಪಾರಿಗಳ ಹತ್ತಿರ ಉದ್ರಿ ತೆಗೆದುಕೊಳ್ಳುವುದರ ಮೂಲಕ ವರ್ಷಕ್ಕೊಮ್ಮೆ ಫಸಲು ಬಂದಾಗ ಹಣವನ್ನು ಸಂದಾಯ ಮಾಡುವ ಸಂಪ್ರದಾಯವನ್ನು ಕಾಣಬಹುದಾಗಿದೆ. ಶ್ರೀಮಂತರು ನೇರವಾಗಿ ಹಣವನ್ನು ಕೊಡುವುದರ ಮೂಲಕ ಗೊಬ್ಬರಗಳನ್ನು ಖರೀದಿಸುವ ಸಂಪ್ರದಾಯ ಸರ್ವೇಸಾಮಾನ್ಯವಾಗಿದೆ. ರಸಗೊಬ್ಬರಗಳಲ್ಲಿ ಪ್ರಮುಖವಾಗಿ ಯೂರಿಯಾ, ಪೊಟ್ಯಾಷಿಯಂ, ಜಿಪ್ಸಂ ಮುಂತಾದ ರಸಗೊಬ್ಬರಗಳನ್ನು ಗ್ರಾಮದ ಕೃಷಿಕರು ಖರೀದಿಸುವುದುಂಟು.

* ಬಳೆ ವ್ಯಾಪಾರಿಗಳು : ಗ್ರಾಮದಲ್ಲಿ ಮೊಟ್ಟಮೊದಲು ಜೇನವ್ವ ಹಾಗೂ ಬುಡನ್‌ಸಾಬ್ ಬಳೆ ವ್ಯಾಪಾರ ಮಾಡುತ್ತಿದ್ದರು. ಈ ವ್ಯಾಪಾರವು ಗ್ರಾಮದಲ್ಲಿ ಇತ್ತೀಚಿಗೆ ಪ್ರವರ್ಧಮಾನಕ್ಕೆ ಬಂದಿದೆ. ಮೊದಲಿನಿಂದಲೂ ಗ್ರಾಮದ ಮಹಿಳೆಯರು ಪಕ್ಕದ ಊರಾದ ಹೊಳಲಿಗೆ ಹೋಗಿ ಬಳೆಗಳನ್ನು ಖರೀದಿಸುತ್ತಿದ್ದರು. ಗ್ರಾಮವು ಬೆಳೆದಂತೆಲ್ಲಾ ಹ್ಯಾರಡ ಗ್ರಾಮದಲ್ಲಿಯೇ ಬಳೆ ವ್ಯಾಪಾರಸ್ಥರು ಹುಟ್ಟಿಕೊಂಡರು. ಗ್ರಾಮದಲ್ಲಿ ಮೂರರಿಂದ ನಾಲ್ಕು ವ್ಯಾಪಾರಿಗಳು ಬಳೆಗಳನ್ನು ಮಾರುತ್ತಿದ್ದಾರೆ. ಈ ವ್ಯಾಪಾರಿಗಳು ಪಟ್ಟಣದಿಂದ ಬಹುವರ್ಣದ ಗಾಜಿನ ಬಳೆಗಳು, ಪ್ಲಾಸ್ಟಿಕ್ ಬಳೆಗಳನ್ನು ತಂದು ಮಾರುವರು. ಈ ವ್ಯಾಪಾರಸ್ಥರು ತರುವ ಬಳೆಗಳ ಮೇಲೆ ವಿವಿಧ ಕಲಾಕೃತಿಗಳು, ಕಸೂತಿ, ವರ್ಣಚಿತ್ರಗಳು ಮುಂತಾದ ಚಿತ್ರಗಳನ್ನು ಒಳಗೊಂಡಿರುತ್ತವೆ. ಬಣ್ಣ ಬಣ್ಣದ ಬಳೆಗಳಿಗೆ ಮಾರುಕಟ್ಟೆಯಲ್ಲಿ ಬಹುಬೇಡಿಕೆ ಇದೆ. ಆದ್ದರಿಂದ ಇಲ್ಲಿಯ ವ್ಯಾಪಾರಿಗಳು ಅಂತಹ ಬಳೆಗಳನ್ನು ತಂದು ಮಾರುವರು. ಹ್ಯಾರಡಾ ಗ್ರಾಮದಲ್ಲಿ ವಿಶೇಷವಾಗಿ ಗಾಜಿನ ಹಸಿರು ಬಳೆಗಳು, ಚುಕ್ಕಿ ಬಳೆಗಳನ್ನು ವಿವಾಹಿತ ಹೆಂಗಸರು ಹಾಗೂ ಹುಡುಗಿಯರು ಬಳಸುವರು. ಇತ್ತೀಚಿನ ಟ್ರೆಂಡ್ ಎಂದರೆ ಅದರಲ್ಲಿ ವಿಶೇಷವಾಗಿ ಯುವತಿಯರು ರಬ್ಬರ್ ಬಳೆಗಳು, ಮುತ್ತಿನ ಹರಳುಗಳನ್ನು ಜೋಡಿಸಿದ ಬಳೆಗಳು ಹೆಚ್ಚು ಪ್ರಚಲಿತದಲ್ಲಿವೆ.

ಬಡವರು ಹಾಗೂ ಜನಸಾಮಾನ್ಯರು ಬಹುತೇಕವಾಗಿ ಗಾಜಿನ ಬಳೆಗಳನ್ನು ಬಳಸುವುದುಂಟು. ಶ್ರೀಮಂತರು ಬಂಗಾರದಿಂದ ಮಾಡಿದ ಬಳೆಗಳನ್ನು ಧರಿಸುವುದುಂಟು. ಮಹಿಳೆಯರ ವಿವಿಧ ವಯೋಮಾನಕ್ಕೆ ತಕ್ಕಂತೆ ಬಳೆಗಳನ್ನು ಮಾರಾಟಕ್ಕಿಡುವುದನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದ ಪ್ರಸಿದ್ದ ಬಳೆ ವ್ಯಾಪಾರಿಗಳೆಂದರೆ. ಕೊರ್ಲಹಳ್ಳಿ ಸುಕುಮಾರಪ್ಪ, ಪಿಂಜಾರ ಪ್ಯಾರಿಮವ್ವ, ಪಿಂಜಾರ ಜಾಕೀರವ್ವ, ಕೊರ್ಲಹಳ್ಳಿ ಸುಶೀಲಮ್ಮ, ನಾಯಕರ ಶಾಂತವೀರಪ್ಪ. ಈ ವ್ಯಾಪಾರಸ್ಥರು ವಿಶೇಷವಾಗಿ

ಮದುವೆ ಸಂಧರ್ಭದಲ್ಲಿ ಅವರ ಮನೆಗಳಿಗೆ ತೆರಳಿ ಎಲ್ಲರಿಗೂ ಹಸಿರು ಬಳೆಗಳನ್ನು ಇಡುವರು. ನಂತರ ಮದುವೆ ಮನೆಯವರ ಕಡೆಯಿಂದ ಉಲ್ಪಿ ಹಾಗೂ ನಗದು ರೂಪದಲ್ಲಿ ಹಣವನ್ನು ಪಡೆಯುವ ಪರಿಪಾಠವನ್ನು ನಾವಿಲ್ಲಿ ಕಾಣಬಹುದಾಗಿದೆ. ನಮ್ಮೂರಿನಲ್ಲಿ ಅಲ್ಲದೇ ಸುತ್ತ-ಮುತ್ತಲಿನ ಗ್ರಾಮಗಳಿಗೆ ತೆರಳಿ ಬಳೆಗಳ ವ್ಯಾಪಾರವನ್ನು ಮಾಡುವ ಪದ್ಧತಿಯನ್ನು ಕಾಣಬಹುದು. ಬಳೆ ವ್ಯಾಪಾರವು ಹೆಚ್ಚು ಲಾಭದಾಯಕ ವ್ಯಾಪಾರವಲ್ಲ. ಈ ವ್ಯಾಪಾರಿಗಳ ಆರ್ಥಿಕ ಸುಧಾರಣೆ ಕಂಡಿಲ್ಲ, ಸರ್ಕಾರ ಇವರಿಗೆ ಇಲ್ಲಿಯವರೆಗೂ ಆರ್ಥಿಕ ಭದ್ರತೆಯನ್ನು ಒದಗಿಸಿಲ್ಲ. ಕೇವಲ ಮದುವೆ, ಮುಂಜಿ ಕಾರ್ಯಕ್ರಮಗಳಲ್ಲಿ ಮಾತ್ರ ವ್ಯಾಪಾರ ನಡೆಯುವುದುಂಟು. ಇನ್ನುಳಿದ ದಿನಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಸರ್ಕಾರದಿಂದ ಇವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿದರೆ ಇವರ ಜೀವನ ಸುಧಾರಿಸುವುದರಲ್ಲಿ ಸಂಶಯವಿಲ್ಲ.

* ಮೊಟ್ಟೆ ವ್ಯಾಪಾರಿಗಳು : ಗ್ರಾಮದಲ್ಲಿ ಇತ್ತೀಚಿಗೆ ಪ್ರಾರಂಭವಾದ ಉದ್ಯಮವಾಗಿದೆ. ಪಟ್ಟಣಗಳಿಂದ ಹೋಲ್ ಸೇಲ್ ದರಗಳಲ್ಲಿ ಮೊಟ್ಟೆಗಳನ್ನು ತಂದು ಅಥವಾ ನೇರವಾಗಿ ಕೋಳಿ ಫಾರಂಗಳಿಂದ ಮೊಟ್ಟೆಗಳನ್ನು ತಂದು ಮಾರಾಟ ಮಾಡುವ ಒಂದು ಪದ್ಧತಿಯನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಸುಮಾರು ಶೇ.೭೦ ರಷ್ಟು ಮಾಂಸಾಹಾರಿಗಳು ಇರುವುದರಿಂದ ಮೊಟ್ಟೆಗೆ ಬಹಳಷ್ಟು ಬೇಡಿಕೆಯನ್ನು ಕಾಣಬಹುದಾಗಿದೆ. ಮೊಟ್ಟೆ ವ್ಯಾಪಾರದಲ್ಲಿ ಪ್ರಸಿದ್ಧರಾದವರು ಪಿಂಜಾರ್ ಜಬ್ಬರ್ ಸಾಬ್. ಇವರು ಹೋಲ್‌ಸೇಲ್‌ದರದಲ್ಲಿ ಮೊಟ್ಟೆಗಳನ್ನು ತಂದು ಗ್ರಾಮದ ಎಗ್‌ರೈಸ್ ಅಂಗಡಿಗಳಿಗೆ, ದಿನಸಿ ಅಂಗಡಿಗಳಿಗೆ ಹಾಗೂ ಗ್ರಾಹಕರಿಗೆ ರಿಯಾಯತಿ ದರದಲ್ಲಿ ಮೊಟ್ಟೆಗಳನ್ನು ಮಾರುವುದನ್ನು ಕಾಣಬಹುದಾಗಿದೆ. ದಿನನಿತ್ಯ ಒಂದು ಸಾವಿರ ಮೊಟ್ಟೆಗಳು ಮಾರಾಟವಾಗುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

* ಕೋಳಿ ಮಾಂಸದ ವ್ಯಾಪಾರಿಗಳು : ಇತ್ತೀಚಿಗೆ ಗ್ರಾಮದಲ್ಲಿ ಅತೀ ವೇಗವಾಗಿ ಪ್ರಚಲಿತದಲ್ಲಿರುವ ವ್ಯಾಪಾರವಾಗಿದೆ. ಗ್ರಾಮದಲ್ಲಿ ಸುಮಾರು ನಾಲ್ಕರಿಂದ ಐದು ಅಂಗಡಿಗಳನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಬಹುತೇಕ ಜನರು ಮಾಂಸಹಾರಿಗಳು ಇರುವುದರಿಂದ ಕೋಳಿ ಮಾಂಸಕ್ಕೆ ಬಹು ಬೇಡಿಕೆಯನ್ನು ನಾವುಗಳು ಕಾಣಬಹುದಾಗಿದೆ. ಗ್ರಾಮದಲ್ಲಿ ಮೊಟ್ಟಮೊದಲು ಕೋಳಿಮಾಂಸದ ವ್ಯಾಪಾರವನ್ನು ಪ್ರಾರಂಭಿಸಿದವರು ಪಿಂಜಾರ್ ಚಮನ್ ಸಾಹೇಬ್. ಇತ್ತೀಚಿಗೆ ಪಿಂಜಾರ ರಫಿ, ಪಿಂಜಾರ ಅಬ್ದುಲ್ಲಾ, ಹಳ್ಳಿ ಇಮಾಮ್ ಸಾಬ್, ಪಿಂಜಾರ್ ಶರೀಫ್ ಸಾಹೇಬ್ ಪ್ರಮುಖವಾದ ಕೋಳಿವ್ಯಾಪಾರಿಗಳು. ಕ್ಷೇತ್ರ ಕಾರ್ಯಕ್ಕೆ ತೆರಳಿದ ಸಮಯದಲ್ಲಿ ಇವರ ಹೇಳಿಕೆಯ ಪ್ರಕಾರ ಪ್ರತಿಯೊಂದು ಅಂಗಡಿಯಲ್ಲಿ ಹದಿನೈದು ಕೆ.ಜಿ. ಕೋಳಿ ಮಾಂಸ ಮಾರಾಟವಾಗುವುದನ್ನು ಹೇಳಿದ್ದುಂಟು. ಸರಿಸುಮಾರಾಗಿ ಐವತ್ತರಿಂದ ಅರವತ್ತು ಕೆ.ಜಿ. ಪ್ರತಿನಿತ್ಯ ಕೋಳಿ ಮಾಂಸ ಮಾರಾಟವಾಗುವುದನ್ನು ಕಾಣಬಹುದಾಗಿದೆ.

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮದಲ್ಲಿ ಕೆಳವರ್ಗದ ಸಮುದಾಯ ಹೆಚ್ಚಿರುವುದರಿಂದ ಪ್ರಮುಖವಾಗಿ ಅವರು ಮಾಂಸದ ಊಟಕ್ಕೆ ಆದ್ಯತೆಯನ್ನು ಕೊಟ್ಟಿರುವುದನ್ನು

ಗಮನಿಸಬಹುದಾಗಿದೆ. ಆದರೆ ಇತ್ತೀಚಿಗೆ ಗ್ರಾಮದ ಎಲ್ಲಾ ಸಮುದಾಯದ ಯುವ ಜನಾಂಗವು ಹೆಚ್ಚು ಹೆಚ್ಚು ಕೋಳಿ ಮಾಂಸವನ್ನು ಇಷ್ಟಪಡುವರು. ಆದ್ದರಿಂದ ಗ್ರಾಮದಲ್ಲಿ ಹೆಚ್ಚು ಕೋಳಿ ಮಾಂಸ ಮಾರಾಟವಾಗುವುದನ್ನು ನಾವಿಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಮನುಷ್ಯನಿಗೆ ಬೇಕಾಗುವ ಕೊಬ್ಬಿನ ಅಂಶ ಇದರಿಂದ ದೊರೆಯುವುದರಿಂದ ಜನರು ಹೆಚ್ಚು ಇಷ್ಟಪಡುತ್ತಿದ್ದಾರೆ.

* ಎಲೆಕ್ಟ್ರಾನಿಕ್ ಸಾಮಾನು ವ್ಯಾಪಾರಿಗಳು : ಇತ್ತೀಚಿಗೆ ಎಲೆಕ್ಟ್ರಾನಿಕ್ ಸಾಮಾನುಗಳು ಹೆಚ್ಚಾಗಿ ಗ್ರಾಮದಲ್ಲಿ ಖರೀದಿ ಆಗುತ್ತಿವೆ. ಮನೆಗಳಿಗೆ ಬೇಕಾಗುವ ವಿದ್ಯುತ್ ವೈರ್‌ಗಳೂ, ಸ್ವಿಚ್‌ಗಳು, ಪೈಪ್‌ಗಳು, ವಿದ್ಯುತ್ ಬೋರ್ಡ್‌ಗಳು, ಬಲ್ಬ್‌ಗಳು, ವಿದ್ಯುತ್ ಪ್ಯೂಜ್‌ಗಳು, ಟೆಸ್ಟರ್‌ಗಳು, ಎಲೆಕ್ಟ್ರಾನಿಕ್ ಸ್ಕೂಟರ್ ವೈರ್‌ಗಳು, ಕೃಷಿ ಪಂಪ್ ಸೆಟ್‌ಗಳಿಗೆ ಬೇಕಾಗುವ ಟೇಪ್‌ಗಳು, ಬ್ಲೇಡ್‌ಗಳು, ನೆಟ್-ಬೋಲ್ಟ್‌ಗಳು, ಸ್ಟಾಟರ್‌ಗಳು, ಕೇಬಲ್ ವೈರ್‌ಗಳು, ಮುಂತಾದ ಎಲೆಕ್ಟ್ರಾನಿಕ್ಸ್ ಸಾಮಾನುಗಳು ಗ್ರಾಮದಲ್ಲಿ ಅತೀ ಹೆಚ್ಚು ಖರೀದಿ ಆಗುತ್ತಿವೆ.

ಮೊದಲಿಗೆ ಹೊಳಲು ಪಟ್ಟಣದಿಂದ ಸಾಮಾನುಗಳನ್ನು ತಂದು ಬಳಸುತ್ತಿದ್ದರು. ಆದರೆ ಇತ್ತೀಚಿಗೆ ಗ್ರಾಮದಲ್ಲಿಯೇ ಅಂಗಡಿಗಳು ತಲೆ ಎತ್ತಿರುವುದನ್ನು ಕಾಣಬಹುದಾಗಿದೆ. ಅಮಿತ್ ಕೊರ್ಲಹಳ್ಳಿ, ನಾಯಕರ ನಾಗೇಶಪ್ಪ, ನಾಯಕರ ಕೊಟ್ರಪ್ಪ ಪ್ರಮುಖ ಎಲೆಕ್ಟ್ರಾನಿಕ್ಸ್ ವ್ಯಾಪಾರಿಗಳನ್ನು ಹೆಸರಿಸಬಹುದಾಗಿದೆ. ಈ ವ್ಯಾಪಾರಿಗಳು ಹುಬ್ಬಳ್ಳಿ, ದಾವಣಗೇರಿ, ರಾಣೆಬೆನ್ನೂರು ಹಾಗೂ ಹಾವೇರಿಯಿಂದ ಸಾಮಾನುಗಳನ್ನು ತಂದು ಗ್ರಾಹಕರಿಗೆ ಮಾರುವ ಪದ್ಧತಿಯನ್ನು ಕಾಣಬಹುದಾಗಿದೆ.

ಈ ಉದ್ಯಮವು ಗ್ರಾಮದಲ್ಲಿ ಹೆಚ್ಚು ಪ್ರಚಲಿತದಲ್ಲಿ ಬರುವುದಕ್ಕೆ ಪ್ರಮುಖವಾದ ಕಾರಣವೇನೆಂದರೆ ಗ್ರಾಮದಲ್ಲಿ ಹೆಚ್ಚಾಗಿ ರೈತರು ಇರುವುದರಿಂದ ಕನಿಷ್ಠ ಮನೆಗೆ ಒಂದರಂತೆ ನೀರಾವರಿ ಪಂಪ್‌ಸೆಟ್‌ಗಳನ್ನು ಹೊಂದಿದ್ದಾರೆ. ಸಣ್ಣಪುಟ್ಟ ತಾಂತ್ರಿಕ ದೋಷಗಳು ಕಂಡುಬಂದಾಗ ತ್ವರಿತವಾಗಿ ಕಾರ್ಯನಿರ್ವಹಿಸಲು ಸ್ಥಳೀಯ ಎಲೆಕ್ಟ್ರಾನಿಕ್ಸ್ ವ್ಯಾಪಾರಿಗಳನ್ನು ಅವಲಂಭಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಆದ್ದರಿಂದ ಗ್ರಾಮದಲ್ಲಿ ಇತ್ತೀಚಿಗೆ ಈ ಉದ್ಯಮವು ಬಹಳಷ್ಟು ವೇಗವನ್ನು ಕಂಡುಕೊಳ್ಳುತ್ತಿದೆ.

* ಕಸಬರಿಗೆ ಹಾಗು ಪುಟ್ಟಿ ತಯಾರಿಕಾ ವ್ಯಾಪಾರಸ್ಥರು : ಗ್ರಾಮದಲ್ಲಿ ಅಳಿವಿನಂಚಿನಲ್ಲಿರುವ ಒಂದು ಉದ್ಯಮವಾಗಿದೆ. ಗ್ರಾಮವು ಮೂಲತಃ ಕೃಷಿ ಕುಟುಂಬಗಳನ್ನು ಹೊಂದಿರುವುದರಿಂದ ಕಸಬರಿಗೆ ಹಾಗೂ ಪುಟ್ಟಿಗಳನ್ನು ಹೆಚ್ಚಾಗಿ ಬಳಸುವುದುಂಟು. ಕೃಷಿ ಚಟುವಟಿಕೆಯಲ್ಲಿ ಇವುಗಳಿಗೆ ಅಗ್ರಸ್ಥಾನವಿದೆ. ಕೃಷಿಯ ಪ್ರತಿಯೊಂದು ಚಟುವಟಿಕೆಯಲ್ಲಿ ಇವುಗಳು ಬೇಕೇ ಬೇಕು. ಮನೆಯನ್ನು ಸ್ವಚ್ಚವಾಗಿಟ್ಟುಕೊಳ್ಳಲು, ಮನೆಯ ಸುತ್ತ-ಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಡಲು, ಕೃಷಿ ಉತ್ಪನ್ನಗಳನ್ನು ಹೊಲದಿಂದ ಕಣಗಳಿಗೆ ತರಲು, ಸುಗ್ಗಿಯ ಸಮಯದಲ್ಲಿ ಇವುಗಳ ಬಳಕೆ ಬಹು ಜೋರು. ಆದ್ದರಿಂದ ಗ್ರಾಮದಲ್ಲಿ ಇವುಗಳ ಬಳಕೆ ಹೆಚ್ಚಾಗಿದೆ. ಕಸಬರಿಗೆಯ ಮಹತ್ವದ ಬಗ್ಗೆ ವಿದ್ವಾನ್ ಮಂಜುನಾಥ ಭಟ್, ಹುಲ್ಗಾನು ಅವರ ಒಂದು ಕವನ ನೆನಪಾಗುತ್ತದೆ ಅದೇನೆಂದರೆ.

" ಹೆಸರಿನಲ್ಲಿ ಐದಕ್ಷರಗಳು

ಇದು ಹಳೆಯ ಫ್ಯಾಷನ್ನಾಯಿತು
ಹೊಸತನ ಬೇಕು ಎಂದು
ಮೂರಕ್ಷರದ ಹೆಸರಿಟ್ಟರು
ಪೊರಕೆ ಎಂದು.
ಹೆಸರು ಬದಲಾದರೇನು
ಕೆಲಸ ಬದಲಾಗುವುದೇ?
ಹಾಫ್ ಪ್ಯಾಂಟ್ ಎಂದು
ಕರೆದ ಮಾತ್ರಕ್ಕೆ
ಚಡ್ಡಿ ಉದ್ದವಾಗುವುದೇ?

ಊರೆಲ್ಲಾ ತಿರುಗಿ
ಒಪ್ಪಗೊಳಿಸುವುದೇನೋ ನಿಜ
ನೆಂಟರಿಗೆ ಮಾತ್ರ
ಮುಖ ತೋರಿಸುವಂತಿಲ್ಲ.

ಯಾರಲ್ಲೂ ಇಲ್ಲದ
ಒಗ್ಗಟ್ಟಿದ್ದರೂ
ತಿಪ್ಪೆ ಮುಟ್ಟುವುದು
ತಪ್ಪಲಿಲ್ಲ.

ಅಯ್ಯೋಪಾಪ
ಎನ್ನಿಸುವಂತೆ ಬಾಗಿ
ಕಸದ ಹಿಂಬದಿಗೋ
ಮನೆಯ ಮೂಲೆಯಲ್ಲೋ
ನಿಂತಿರುತ್ತೇನೆ
.....ಪಾಪ ನಾನು.

ಇತ್ತಿತ್ತಲಾಗೆ
ಕಡ್ಡಿಗಳನ್ನು ತೆಗೆದು
ಬಿಲ್ಲು ಬಾಣಗಳನ್ನು

ಮಾಡುವ ವೀರರಿಲ್ಲ
ಮುರಿದು ಕಡ್ಡಿ ಆಡುವ
ಜಾಣಾಕ್ಷೆಯರೂ ಇಲ್ಲ

ಮುಂದೊಂದು ದಿನ
ಗುಡಿಸಿ ಗುಡಿಸಿಯೇ
ಹಿಡಿಯಷ್ಟಾಗುತ್ತೇನೆ
ಆಗ ನನ್ನಂಥವನೇ
ಇನ್ನೊಬ್ಬ ಬಂದು
ನನ್ನನ್ನೇ ಗುಡಿಸಿ ಬಿಡುತ್ತಾನೆ.....

ನಿಜ, ಈ ಜಗತ್ತು
ಅನಾದಿ ಅನಂತ
ಇಲ್ಲಿ ಪ್ರತಿಯೊಂದಕ್ಕೂ
ಪ್ರವಾಹನಿತ್ಯತ್ವ ಮಾತ್ರ.....
......ಅಷ್ಟೇ.

ಮೇಲಿನ ಕವನದಿಂದ ಕಸಬರಿಗೆಯ ಮಹತ್ವವನ್ನು ತಿಳಿಯಬಹುದಾಗಿದೆ. ಗ್ರಾಮದಲ್ಲಿ ಮೊದಲಿನಿಂದಲೂ ಕೊರವರ ಈರಪ್ಪಜ್ಜ ಅವರ ಕುಟುಂಬ ಕಸಬರಿಗೆ ಹಾಗೂ ಬುಟ್ಟಿಯನ್ನು ಹೆಣೆಯುವಂತಹ ಕೆಲಸ ಮಾಡುತ್ತಿದ್ದರು. ಈ ಕುಟುಂಬವು ಸ್ಥಳೀಯವಾಗಿ ಅರಣ್ಯದಲ್ಲಿ ಸಿಗುವ ಈಚಲು ಮರವನ್ನು ಕೊಯ್ದುಕೊಂಡು ಬಂದು ಗ್ರಾಮದ ಕೃಷಿಕರಿಗೆ ಬೇಕಾಗುವ ಅಗತ್ಯವಾದ ಕಸಬರಿಗೆ ಹಾಗೂ ಬುಟ್ಟಿಯನ್ನು ಸರಬರಾಜು ಮಾಡುವ ಕುಟುಂಬವಾಗಿತ್ತು. ಆದರೆ ಇತ್ತೀಚಿಗೆ ಈ ಕುಟುಂಬವು ಈ ಉದ್ಯಮವನ್ನು ಬಿಟ್ಟು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಈ ಉದ್ಯಮವು ನೆಲಕಚ್ಚಲು ಪ್ರಮುಖವಾದ ಕಾರಣವೇನೆಂದರೆ ಮಾರುಕಟ್ಟೆಯಲ್ಲಿ ವಿವಿಧ ಶೈಲಿಯ ಪ್ಲಾಸ್ಟಿಕ್ ಕಸಬರಿಗೆಗಳು ಹಾಗೂ ಬುಟ್ಟಿಗಳು ಹೆಚ್ಚು ಹೆಚ್ಚು ದೊರೆಯುವುದರಿಂದ ಜನರು ಜಾಸ್ತಿ ಆಕರ್ಷಿತರಾಗಿ ಅವುಗಳನ್ನೇ ಬಳಸುತ್ತಿದ್ದಾರೆ. ಆದ್ದರಿಂದ ಈ ಕುಟುಂಬವು ಈ ಉದ್ಯಮವನ್ನು ಕೈ ಬಿಟ್ಟು ಅನಿವಾರ್ಯವಾಗಿ ಪಟ್ಟಣಗಳಿಗೆ ವಲಸೆ ಹೋಗಿರುವುದನ್ನು ಕಾಣಬಹುದಾಗಿದೆ.

* ಹೋಟೆಲ್ ವ್ಯಾಪಾರಸ್ಥರು : ಈ ಉದ್ಯಮವು ಇತ್ತೀಚಿಗೆ ಹೆಚ್ಚು ಪ್ರಚಲಿತದಲ್ಲಿದೆ. ಗ್ರಾಮದಲ್ಲಿ ಐದರಿಂದ ಆರು ಹೋಟೆಲ್‌ಗಳನ್ನು ಕಾಣಬಹುದಾಗಿದೆ. ಕುಂಬಾರ ಹೊಳಿಯಪ್ಪ, ಕೌಟಿ ವೀರಣ್ಣ, ಕಡಕೋಳ ರಾಜಪ್ಪ, ಅನಂತರಾಜ ಜೈನ್, ಇಟಗಿ ಬಸಮ್ಮ ಮುಂತಾದವರು ಹೋಟೆಲ್ ವ್ಯಾಪಾರಸ್ಥರು. ಈ ಉದ್ಯಮದವರು ಇಡ್ಲಿ, ಉಪ್ಪಿಟ್ಟು, ಅವಲಕ್ಕಿ, ಪೂರಿ, ವಡೆ, ಮಿರ್ಚಿ–ಮಂಡಕ್ಕಿ ಮುಂತಾದವುಗಳನ್ನು ಬೆಳಗಿನ ಉಪಹಾರಕ್ಕೆ ತಯಾರಿಸಿ ಗ್ರಾಹಕರಿಗೆ ಕೊಡುತ್ತಿದ್ದಾರೆ.

ಹೋಟೆಲ್ ಉಧ್ಯಮವು ಹೆಚ್ಚು ಪ್ರಚಲಿತಕ್ಕೆ ಬರುವುದಕ್ಕೆ ಕಾರಣವೇನೆಂದರೆ ಗ್ರಾಮಕ್ಕೆ ದೂರದ ಊರುಗಳಿಂದ ಕಬ್ಬು ಕಟಾವು ಮಾಡಲು ವರ್ಷಪೂರ್ತಿ ಜನರು ಬರುತ್ತಿದ್ದಾರೆ. ಇವರುಗಳು ತಮ್ಮ ಮುಂಜಾನೆಯ ಉಪಹಾರಕ್ಕೆ ಹೋಟೆಲ್‌ಗಳನ್ನು ಅವಲಂಭಿಸಿದ್ದಾರೆ. ಇನ್ನುಳಿದಂತೆ ಗ್ರಾಮದ ಇತ್ತೀಚಿನ ಯುವ ಪೀಳಿಗೆಯು ಮುಂಜಾನೆಯ ಉಪಹಾರಕ್ಕೆ ಹೋಟೆಲ್‌ಗಳನ್ನು ಅವಲಂಭಿಸಿದ್ದಾರೆ. ಆದ್ದರಿಂದ ಗ್ರಾಮದ ಹೋಟೆಲ್ ಉದ್ಯಮವು ಹೆಚ್ಚು ಲಾಭದಾಯಕವಾಗಿದೆ ಎಂದು ಹೇಳಬಹುದು.

* ಬೇಕರಿ ವ್ಯಾಪಾರಸ್ಥರು : ಈ ವ್ಯಾಪಾರವು ಇತ್ತೀಚಿಗೆ ನಾಲ್ಕೈದು ವರ್ಷಗಳಿಂದ ಚಾಲ್ತಿಯಲ್ಲಿದೆ. ಹ್ಯಾರಡಾ ಗ್ರಾಮದ ಪಕ್ಕದ ಊರಾದ ಅರಸನಾಳನಿಂದ ಬಂದ ಬಾರ್ಕಿ ಹೊನ್ನಪ್ಪ ಅವರು ಈ ಉದ್ಯಮವನ್ನು ಪ್ರಾರಂಭಿಸಿದ್ದಾರೆ. ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಇವರ ಹೇಳಿಕೆಯ ಪ್ರಕಾರ "ಮೊದಮೊದಲು ಈ ಉದ್ಯಮವು ಬಹಳ ಸಂಕಷ್ಟದಲ್ಲಿ ಇತ್ತು. ಗ್ರಾಮದ ಮೊಟ್ಟ ಮೊದಲ ಬೇಕರಿ ಅಂಗಡಿ ಆಗಿದ್ದರಿಂದ ಜನರು ಇತ್ತ ಕಡೆ ಸುಳಿಯುತ್ತಿರಲಿಲ್ಲ. ಆದರೆ ಇತ್ತೀಚಿಗೆ ಪರವಾಗಿಲ್ಲ ಜನರು ಬಂದು ತಮಗಿಷ್ಟವಾದ ತಿನಿಸನ್ನು ಕೊಳ್ಳುತ್ತಿದ್ದಾರೆ. ಪಟ್ಟಣಕ್ಕೆ ಹೋಲಿಸಿಕೊಂಡರೆ ಅತೀ ಕಡಿಮೆ ವ್ಯಾಪಾರವಾಗುತ್ತಿದೆ. ನಾವು ಮಾಡಿದ ಖರ್ಚು-ವೆಚ್ಚಕ್ಕೆ ಸಮವಾಗಿರುತ್ತದೆ ಹೆಚ್ಚೇನು ಇದರಿಂದ ಲಾಭವನ್ನು ನಿರಿಕ್ಷಿಸುವಂತಿಲ್ಲ" ಎಂದು ಹೇಳಿದ್ದುಂಟು.

ಈ ಉದ್ಯಮದವರು ಹಲವು ರೀತಿಯ ಸಿಹಿ ಪದಾರ್ಥಗಳು ಖಾರದ ತಿನಿಸುಗಳನ್ನು ಮಾರುತ್ತಿದ್ದಾರೆ. ಫ್ರೂಟ್‌ಕೇಕ್, ಕ್ರೀಮ್ ಕೇಕ್, ಆಪಲ್ ಕೇಕ್, ವೆಜಿಟಬಲ್ ಪಪ್ಸ್, ಎಗ್ ಪಪ್ಸ್, ಖಾರಾಬನ್, ಬ್ರೆಡ್ ಟೋಸ್ಟ್(ಈರುಳ್ಳಿಯಿಂದ ಮಾಡಿದ ಬ್ರೆಡ್), ಫ್ರೂಟ್ ಜಾಮ್ ಬನ್, ಚಿಪ್ಸ್(ಆಲೂಗಡ್ಡೆಯಿಂದ ಮಾಡಿದ್ದು), ಗೋಬಿ ಮಂಚೂರಿ, ಮೈಸೂರು ಪಾಕ್, ಜಿಲೇಬಿ, ಕೋಡಬಾಳೆ, ದಾಣಿ(ದಪ್ಪ, ಸಾಮಾನ್ಯ, ತೆಳ್ಳನೆಯ ದಾಣಿ), ವಿವಿಧ ರೀತಿಯ ತಂಪು ಪಾನೀಯ, ಮುಂತಾದ ಪದಾರ್ಥಗಳನ್ನು ಬೇಕರಿಯಲ್ಲಿ ಕಾಣಬಹುದಾಗಿದೆ. ಗ್ರಾಮದಲ್ಲಿ ಬಹತೇಕ ಯುವಕರು, ಮಕ್ಕಳು, ಹೆಣ್ಣು ಮಕ್ಕಳು ಸೇರಿದಂತೆ ಸಾಯಂಕಾಲದ ಸಮಯದಲ್ಲಿ ವಿಶೇಷವಾಗಿ ಗೋಬಿ ಮಂಚೂರಿಯನ್ನು ಬಹಳ ಅನುಭೋಗಿಸುತ್ತಿದ್ದಾರೆ. ಎಲ್ಲರೂ ಈ ತಿನಿಸನ್ನು ಇಷ್ಟಪಡುವರು ಎಂದು ಅಂಗಡಿ ಮಾಲಿಕರಾದ ಹೊನ್ನಪ್ಪ ಅವರು ತಿಳಿಸುವರು.

ಗ್ರಾಮದಲ್ಲಿ ಬೇಕರಿ ಉದ್ಯಮವು ಹೆಚ್ಚು ಪ್ರಚಲಿತದಲ್ಲಿ ಬರಲು ಪ್ರಮುಖವಾದ ಕಾರಣವೇನೆಂದರೆ ಇತ್ತೀಚಿಗೆ ಗ್ರಾಮವು ಹೆಚ್ಚು ಸುಶಿಕ್ಷಿತರನ್ನು ಹೊಂದಿದೆ, ಕಾಲೇಜ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸರ್ಕಾರಿ ನೌಕರರು, ಚಿಕ್ಕಮಕ್ಕಳು ಹೆಚ್ಚು ಪಟ್ಟಣದ ಜೀವನ ಶೈಲಿಯನ್ನು ಅನುಸರಿಸಲು ಇಷ್ಟಪಡುವರು. ಮೊದಲಿನಂತೆ ಗ್ರಾಮ ಈಗ ಇಲ್ಲ. ಬಹಳಷ್ಟು ಜನರು ಆರ್ಥಿಕವಾಗಿ ಸಬಲರಾಗಿದ್ದಾರೆ. ತಮಗಿಷ್ಟವಾದ ಆಹಾರ ತಿನಿಸು ಅನುಭೋಗಿಸಲು ಇಷ್ಟಪಡುತ್ತಿದ್ದಾರೆ. ಆದ್ದರಿಂದ ಇಂತಹ ಉದ್ಯಮಗಳು ಹೆಚ್ಚು ಮುನ್ನೆಲೆಗೆ ಬರುತ್ತಿವೆ.

* ಮೆಕ್ಕೆಜೋಳದ ಬೆಂಡಿನ ವ್ಯಾಪಾರಸ್ಥರು : ಕಳೆದ ೧೦-೧೨ ವರ್ಷಗಳಲ್ಲಿ ಈ ಉದ್ಯಮವು ಹೆಚ್ಚು ಪ್ರಚಲಿತದಲ್ಲಿದೆ. ಮೆಕ್ಕೆಜೋಳವನ್ನು ತಂದು ಕಾಳುಗಳನ್ನು ಬೇರ್ಪಡಿಸಿ ಉಳಿದ ಭಾಗವೇ ಬೆಂಡು ಎಂದು ಗ್ರಾಮ್ಯ ಭಾಷೆಯಲ್ಲಿ ಹೇಳುವರು. ಮೂಡ್ಗಡಿ ಲಕ್ಕಪ್ಪ, ಕಮ್ಮಾರ ಕೃಷ್ಣಪ್ಪ, ಕಳಸಾಪುರದ ನಾಗಪ್ಪ, ಸೆಟ್ಟಮ್ನರ ನಿಂಗರಾಜ, ಮಲ್ಲಪ್ಪ ಮುಂತಾದವರು ಬೆಂಡಿನ ವ್ಯಾಪಾರಸ್ಥರು. ಗ್ರಾಮದ ಕೃಷಿಕರಿಂದ ಒಂದು ಚೀಲಕ್ಕೆ ೧೮-೨೦ ರೂಪಾಯಿಗಳಿಗೆ ಖರೀದಿಸಿ ರಾಣೆಬೆನ್ನೂರು, ಹಾವೇರಿ, ದಾವಣಗೇರಿಯ ಹೋಟೆಲ್ ಹಾಗೂ ಬೇಕರಿ ಉದ್ಯಮಿದಾರರಿಗೆ ಮಾರಿ ಅಪಾರವಾದ ಲಾಭವನ್ನು ಗಳಿಸುವ ಒಂದು ಉದ್ಯಮವಾಗಿದೆ. ಗ್ರಾಮದಲ್ಲಿ ಮೆಕ್ಕೆಜೋಳವು ಪ್ರಧಾನ ವಾಣಿಜ್ಯ ಬೆಳೆಯಾಗಿದೆ. ನೀರಾವರಿ ಜಮೀನು, ಖುಷ್ಕಿ ಜಮೀನಿನಲ್ಲಿ ಈ ಬೆಳೆಯನ್ನು ಎಲ್ಲಾ ಕೃಷಿಕರು ಬೆಳೆಯುವುದುಂಟು. ಆದ್ದರಿಂದ ಗ್ರಾಮದಲ್ಲಿ ಮೆಕ್ಕೆಜೋಳದ ಬೆಂಡಿಗೆ ಇಲ್ಲಿ ಕೊರತೆ ಇಲ್ಲ.

* ತರಕಾರಿ ಮಾರಾಟಗಾರರು : ಗ್ರಾಮದಲ್ಲಿ ತಾಜಾ ತರಕಾರಿ ಮಾರಾಟಗಾರರು ಬಹಳಷ್ಟು ಇದ್ದಾರೆ. ಇವರು ತಮ್ಮ ಹೊಲ-ಗದ್ದೆಗಳಲ್ಲಿ ಬೆಳೆದ ತರಕಾರಿಗಳನ್ನು ಗ್ರಾಮದ ಸಂತೆಯಲ್ಲಿ ಮಾರುವ ಸಂಪ್ರದಾಯ ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ಮಲ್ಲಪ್ಪನರ ಮೀನಾಕ್ಷಮ್ಮ, ಪಿಟ್ಟೇರ ಬಸಪ್ಪ, ಬಸಾಪಟ್ನ ನೀಲಪ್ಪ, ಬಾರ್ಕಿ ರವಿ, ಊದೇರ ಗೋಣೆಪ್ಪ, ಬೆಣ್ಣಿಹಳ್ಳಿ ಸೋಮಣ್ಣ ಪ್ರಮುಖ ತರಕಾರಿ ವ್ಯಾಪಾರಿಗಳಾಗಿದ್ದಾರೆ. ಇವರುಗಳು ಈರುಳ್ಳಿ, ಮೆಣಸಿನಕಾಯಿ, ಟೊಮೋಟ, ಸವತೆಕಾಯಿ, ಜವಳಿಕಾಯಿ, ಹೀರೆಕಾಯಿ ವಿವಿಧ ರೀತಿಯ ಸೊಪ್ಪುಗಳನ್ನು ಮಾರಾಟಮಾಡುತ್ತಿದ್ದಾರೆ. ಗ್ರಾಮದ ಬಹುತೇಕ ಜನರು ತಮ್ಮ ಊರಿನಲ್ಲಿಯೇ ಬೆಳೆದ ತರಕಾರಿಗಳನ್ನು ಬಳಸುತ್ತಿದ್ದಾರೆ.

* ಹೂವಿನ ವ್ಯಾಪಾರಿಗಳು : ಹ್ಯಾರಡಾ ಗ್ರಾಮದಲ್ಲಿ ಇತ್ತೀಚೆಗೆ ಬೆಳೆದ ಉದ್ಯಮವಾಗಿದೆ. ಹಾವನೂರು ಶಿವಪ್ಪ, ಗಾಣದ ರವಿ, ಭೀಮಕ್ಕನವರ ರವಿ ಮುಂತಾದವರು ಹೂವಿನ ವ್ಯಾಪಾರಿಗಳಾಗಿದ್ದಾರೆ. ಮಲ್ಲಿಗೆ, ಸೇವಂತಿ, ಕನಕಾಂಬರಿ ಹೂವುಗಳನ್ನು ಗ್ರಾಮದಲ್ಲಿ ಮಾರುತ್ತಿದ್ದಾರೆ. ಗ್ರಾಮೀಣ ಮಾಪನಗಳಾದ ಮೊಳ, ಮಾರು ಲೆಕ್ಕದಲ್ಲಿ ಹೂವಿನ ಮಾಲೆಗಳನ್ನು ಮಾರುವುದುಂಟು. ಹಾವನೂರು ಶಿವಪ್ಪ ಹೂವಿನ ಮಾಲೆಗಳನ್ನು ಮಾರುವುದರಲ್ಲಿ ಪ್ರಸಿದ್ದರು. ದಾರಕ್ಕೆ ಸುಂಗಂಧರಾಜ, ಚೆಂಡು ಹೂ, ಸೇವಂತಿ, ಮೊಗ್ಗಿನ ಮಲ್ಲಿಗೆ, ಯಕ್ಕಿಗಿಡದ ಹೂ, ಗುಲಾಬಿ ಹೂ, ಗುಲಾಲು ಹೂ ಹಾಗೂ ಸಂಪಿಗೆ ಹೂವುಗಳನ್ನು ದಾರದಲ್ಲಿ ಪೋಣಿಸಿ ಆಕರ್ಷಕವಾದ ಹೂವಿನ ಮಾಲೆಗಳನ್ನು ತಯಾರಿಸುತ್ತಿದ್ದಾರೆ.

ಗ್ರಾಮದ ಇನ್ನೊಂದು ವಿಶೇಷವೆಂದರೆ ಸ್ಥಳೀಯವಾಗಿ ಹಳ್ಳದ ದಂಡೆ, ಹೊಳೆಯ ದಂಡೆಯಲ್ಲಿ ಸಿಗುವ ಕ್ಯಾದಿಗೆಯನ್ನು ಹೆಣ್ಣು ಮಕ್ಕಳು ತಲೆಯಲ್ಲಿ ಮುಡಿಯುವುದುಂಟು. ಗ್ರಾಮದ ವಿಶೇಷ ಸಂದರ್ಭಗಳಾದ ಮದುವೆ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ತಲೆಯ ತುಂಬೆಲ್ಲಾ ಮುಡಿದು ಅದರಲ್ಲಿ ವಿಶೇಷವಾಗಿ ಪಂಚಮಿಯಲ್ಲಿ ಇದನ್ನು ಗ್ರಾಮದ ಬಹುತೇಕ ಹೆಣ್ಣು ಮಕ್ಕಳು ಮುಡಿಯುವುದುಂಟು.

ಇದು ಹೂವಿಗಿಂತ ಭಿನ್ನವಾಗಿದ್ದು, ಹೂವಿನ ಆಕಾರವನ್ನು ಹೊಂದದೆ ಬಾಳೆದಿಂಡಿನ ಪೊರೆಯ ಆಕಾರದಲ್ಲಿ ಇರುತ್ತದೆ. ಇದನ್ನು ತೆಗೆದುಕೊಂಡು ಬಂದು ಚಿತ್ತಾಕರ್ಷಕವಾಗಿ ಹೆಣೆದುಕೊಂಡು ತಲೆಯ ತುಂಬೆಲ್ಲಾ ಮುಡಿಯುವ ಪದ್ಧತಿ ಬಹಳ ವರ್ಷಗಳಿಂದ ಸಾಗಿ ಬಂದಿದೆ. ಈ ಕ್ಯಾದಿಗೆಯು ಅತ್ಯಂತ ಸುವಾಸನೆಯುಕ್ತ ಪರಿಮಳ ಭರಿತದಿಂದ ಕೂಡಿರುತ್ತದೆ. ಆದರೆ ಇತ್ತೀಚಿಗೆ ಈ ಕ್ಯಾದಿಗೆಯ ಸಸ್ಯ ನಶಿಸುತ್ತಾ ಬಂದಿದೆ. ಏಕೆಂದರೆ ಗ್ರಾಮದ ಹಳ್ಳ-ಕೊಳ್ಳಗಳಲ್ಲಿ ನೀರಿನ ಸೆಲೆಯ ಕೊರತೆ ಎದ್ದು ಕಾಣುತ್ತಿದೆ.

* ರೊಟ್ಟಿ ವ್ಯಾಪಾರಿಗಳು : ಗ್ರಾಮದಲ್ಲಿ ಮೂರು ಕುಟುಂಬಗಳು ರೊಟ್ಟಿ ತಯಾರಿಸಿ ಈ ಉಧ್ಯಮವನ್ನು ಮಾಡುತ್ತಿದ್ದಾರೆ. ಬಡಿಗೇರ ಮಾಲತೇಶ, ಕೊರ್ಲಹಳ್ಳಿ ಅಭಿನಂದನ್, ಅಗಸರ ದೇವೇಂದ್ರಪ್ಪ ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಮೊದಮೊದಲು ಕೈಯಿಂದ ಲಟ್ಟಣಿಗೆಯ ಸಹಾಯದಿಂದ ರೊಟ್ಟಿಯನ್ನು ಉದ್ದಿ ತಯಾರಿಸುತ್ತಿದ್ದರು. ಆದರೆ ಇತ್ತೀಚಿಗೆ ರೊಟ್ಟಿಯನ್ನು ತಯಾರಿಸುವ ಯಂತ್ರಗಳನ್ನು ಬಳಸಿ ರೊಟ್ಟಿಯನ್ನು ತಯಾರಿಸುತ್ತಿದ್ದಾರೆ. ಗ್ರಾಮದ ವಿಶೇಷ ಸಂದರ್ಭಗಳಾದ ಮದುವೆ, ಜಾತ್ರೆಗಳಲ್ಲಿ ಈ ವ್ಯಾಪಾರ ಜೋರಾಗಿರುತ್ತದೆ.

ಒಂದು ರೊಟ್ಟಿಗೆ ೪ ರಿಂದ ೫ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಗ್ರಾಮದಲ್ಲಿ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಬಂದು ಯಂತ್ರೋಪಕರಣಗಳನ್ನು ಖರೀದಿಸಲು ರಿಯಾಯತಿ ದರದಲ್ಲಿ ಸಾಲ ಸೌಲಭ್ಯಗಳು ದೊರೆಯುತ್ತಿವೆ. ಇದೊಂದು ಮಹಿಳೆಯರಿಗೆ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸುವರ್ಣಾವಕಾಶವಾಗಿದೆ. ಇದರ ಮುಖೇನ ಗ್ರಾಮದ ನಿರುದ್ಯೋಗಿ ಸಮಸ್ಯೆಯನ್ನು ಹೋಗಲಾಡಿಸುವುದರ ಜೊತೆ ಜೊತೆಗೆ ಆರ್ಥಿಕ ಭದ್ರತೆಯನ್ನು ಒದಗಿಸುವಂತಹ ಉದ್ಯಮವಾಗಿದೆ. ಗ್ರಾಮದ ಎಷ್ಟೋ ಮಹಿಳೆಯರಲ್ಲಿ ಕೌಶಲ್ಯವಿರುತ್ತದೆ, ಆದರೆ ಆ ಕೌಶಲ್ಯವನ್ನು ಅನಾವರಣಗೊಳಿಸುವ ಅವಕಾಶಗಳು ಇರುವುದಿಲ್ಲ. ಆದ್ದರಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಂತಹ ಹಲವಾರು ಕಾರ್ಯಕ್ರಮಗಳು ಹಳ್ಳಿಯ ಹೆಣ್ಣು ಮಕ್ಕಳಿಗೆ ವರದಾನವಾಗಲಿದೆ. ಇದರ ಮುಖಾಂತರ ಮಹಿಳೆಯರು ಸಮಾಜದ ಮುನ್ನೆಲೆಗೆ ಬರಲು ಸಹಾಯಕಾರಿಯಾಗಿದೆ.

* ಕುಕ್ಕಿ ವ್ಯಾಪಾರ : ಗ್ರಾಮ್ಯ ಭಾಷೆಯಾದ 'ಕುಕ್ಕಿ' ಎಂದರೆ ಎತ್ತುಗಳು ಕೃಷಿ ಚಟುವಟಿಕೆಗಳನ್ನು ಮಾಡುವಾಗ ಬೆಳೆದ ಬೆಳೆಯನ್ನು ತಿನ್ನದೇ ಇರುವುದಕ್ಕೆ ಬಾಯಿಗೆ ಹಾಕುವ ಒಂದು ಉಪಕರಣವಾಗಿದೆ. ಈಗಲೂ ಕೂಡ ಹ್ಯಾರಡಾದ ಬಹುತೇಕ ಕೃಷಿಕರು ಈ ಕುಕ್ಕಿಯನ್ನು ಬಳಸುವುದುಂಟು. ಇಂತಹ ಕುಕ್ಕಿಯನ್ನು ಹೆಣೆದು ತಯಾರಿಸುವುದರಲ್ಲಿ ಸಂದಿಮನಿ ಬಸಜ್ಜ ಹೆಂಡತಿ ಗಂಗಮ್ಮ ಪ್ರಸಿದ್ದರು. ಇವರು ಸ್ಥಳೀಯವಾಗಿ ಅಡವಿಯಲ್ಲಿ ಸಿಗುವ 'ದಾಗಡಿ' ಬಳ್ಳಿಯನ್ನು ತೆಗೆದುಕೊಂಡು ಎತ್ತುಗಳ ಬಾಯಿಯ ಆಕಾರಕ್ಕೆ ತಕ್ಕಂತೆ ಕುಕ್ಕಿಯನ್ನು ತಯಾರಿಸುವುದರಲ್ಲಿ ನಿಸ್ಸೀಮರು. ಈಗಲೂ ಹ್ಯಾರಡಾ ಗ್ರಾಮದಲ್ಲಿ ವಾಸಿಸಿರುವ ಇವರ ಓಣಿಯನ್ನು 'ಕುಕ್ಕಿಹಳ್ಳಿ' ಎಂದು ಕರೆಯುತ್ತಿದ್ದಾರೆ. ಈ ಬಡ

ದಂಪತಿಗಳು ಜೀವನ ಪೂರ್ತಿ ಕುಕ್ಕಿಯನ್ನು ಹೆಣೆದು ಅದರಿಂದ ಬರುವ ಅಲ್ಪ-ಸ್ವಲ್ಪ ಆದಾಯವನ್ನು ಗಳಿಸುತ್ತಿದ್ದರು. ಸ್ವಲ್ಪ ದಿನದ ಹಿಂದೆ ಈ ದಂಪತಿಗಳು ಕಾಲವಾಗಿದ್ದಾರೆ. ಇವರ ಸಂತತಿಯು ಇನ್ನೂ ಕುಕ್ಕಿಹಳ್ಳಿಯಲ್ಲಿ ಇರುವುದನ್ನು ಕಾಣಬಹುದಾಗಿದೆ. ಆದರೆ ಇತ್ತೀಚಿಗೆ 'ದಾಗಡಿ' ಬಳ್ಳಿಯಿಂದ ತಯಾರಿಸುವ ಕುಕ್ಕಿಗಳು ನಶಿಸಿ ಹೋಗಿವೆ. ಕಾರಣ ಮಾರುಕಟ್ಟೆಯಲ್ಲಿ ಸಿಗುವ ಪ್ಲಾಸ್ಟಿಕ್ ಕುಕ್ಕಿಗಳನ್ನು ಬಹುತೇಕ ರೈತರು ಬಳಸುತ್ತಿದ್ದಾರೆ.

* ಸಿಮೆಂಟಿನ ವ್ಯಾಪಾರಿಗಳು : ಗ್ರಾಮದಲ್ಲಿ ಇತ್ತೀಚಿಗೆ ಈ ಉದ್ಯಮವು ಹೆಚ್ಚು ಪ್ರಚಲಿತದಲ್ಲಿದೆ. ಗ್ರಾಮದ ಬುಡುಗೌಡ್ರ ಮಹೇಶ್ವರಪ್ಪ, ಹೆಗ್ಗಮ್ಮನವರ ಚಂದ್ರಪ್ಪ ಪ್ರಮುಖ ಸಿಮೆಂಟಿನ ವ್ಯಾಪಾರಸ್ಥರು. ಇವರು ಪಟ್ಟಣದಿಂದ ಇಲ್ಲವೇ ಕಾರ್ಖಾನೆಗಳಿಂದ ನೇರವಾಗಿ ಸಿಮೆಂಟನ್ನು ತಂದು ಗ್ರಾಹಕರಿಗೆ ಒದಗಿಸುತ್ತಿದ್ದಾರೆ. ಗ್ರಾಮದಲ್ಲಿ ಈ ಉದ್ಯಮ ಹೆಚ್ಚು ಪ್ರಚಲಿತದಲ್ಲಿ ಬರುವುದಕ್ಕೆ ಪ್ರಮುಖವಾದ ಕಾರಣವೇನೆಂದರೆ ಗ್ರಾಮದಲ್ಲಿ ಮೊದಮೊದಲು ಹೆಚ್ಚು ಹೆಚ್ಚು ಹಳೆ ಮಾದರಿಯ ಮನೆಗಳು, ಗುಡಿಸಲುಗಳು ಇದ್ದವು, ಇತ್ತೀಚೆಗೆ ಗ್ರಾಮದಲ್ಲಿ ನೌಕರರ ಬಳಗ ಹೆಚ್ಚುತ್ತಿದ್ದಂತೆಯೇ ಸಾಕಷ್ಟು ಜನರು ಸುಶಿಕ್ಷಿತರಾಗುತ್ತಿದ್ದಂತೆಯೇ ಆರ್.ಸಿ.ಸಿ. ಮಾದರಿಯ ಮನೆಗಳನ್ನು ಹೆಚ್ಚು ನಿರ್ಮಿಸುತ್ತಿದ್ದಾರೆ. ಆದ್ದರಿಂದ ಸಹಜವಾಗಿಯೇ ಈ ಸಿಮೆಂಟಿಗೆ ಎಲ್ಲಿಲ್ಲದ ಬೇಡಿಕೆ ಇರುವುದನ್ನು ಕಾಣಬಹುದಾಗಿದೆ.

ಗ್ರಾಮದ ಜನರಿಗೆ ಕೈಗೆಟುಕುವ ದರದಲ್ಲಿ ಸಿಮೆಂಟ್ ಸಿಗುತ್ತದೆ. ಗ್ರಾಮದಲ್ಲಿ ಸರ್ಕಾರದಿಂದ ಮಂಜೂರಾಗುವ ಆಶ್ರಯ ಮನೆಗಳು ಹೆಚ್ಚು ಹೆಚ್ಚು ನಿರ್ಮಾಣವಾಗುತ್ತಿದ್ದು, ಸಿಮೆಂಟಿಗೆ ಭಾರಿ ಬೇಡಿಕೆ ಇರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

* ಛಾಯಾಚಿತ್ರ ತೆಗೆಯುವ ಉದ್ಯಮದಾರರು : ಗ್ರಾಮದಲ್ಲಿ ಪ್ರಮುಖವಾಗಿ ಮೂರು ಫೋಟೋ ಗ್ರಾಫರ್‌ಗಳನ್ನು ಕಾಣಬಹುದಾಗಿದೆ. ಮಡಿವಾಳ ಮಾಚಿದೇವ ಫೋಟೋ ಸ್ಟುಡಿಯೋ ಮಾಲೀಕರಾದ ಮಡಿವಾಳ ನಿಂಗಪ್ಪ, ಚಂದು ಫೋಟೋ ಸ್ಟುಡಿಯೋ ಮಾಲೀಕರಾದ ಅರ್ಕಚಾರಿ ಕುಮಾರ, ಗೋಣಿಬಸವೇಶ್ವರ ಪೋಟೋ ಸ್ಟುಡಿಯೋ ಮಾಲೀಕರಾದ ಬಾಗಳಿ ನಾಗರಾಜ ಇವರುಗಳು. ಮದುವೆ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಪೋಟೋ ಹಾಗೂ ವೀಡಿಯೋ ಚಿತ್ರೀಕರಣವನ್ನು ಮಾಡುವ ವ್ಯಾಪಾರಸ್ಥರಾಗಿದ್ದಾರೆ. ಇದರ ಜೊತೆ-ಜೊತೆಗೆ ಜೆರಾಕ್ಸ್, ಲ್ಯಾಮಿನೇಷನ್, ಆನ್‌ಲೈನ್ ಸೇವೆಗಳು ಮುಂತಾದ ಸೇವೆಗಳನ್ನು ಒದಗಿಸುವ ಕೇಂದ್ರಗಳಾಗಿವೆ. ಈ ಸೇವೆಗಳಿಂದ ಬಡಜನತೆಗೆ ಸರ್ಕಾರದಿಂದ ಬರಬಹುದಾದ ಬಹುತೇಕ ಸಾಲಸೌಲಭ್ಯಗಳನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ.

* ಎಲೆ ಮಾರಾಟಗಾರರು : ಹಳ್ಳಿಗಳಲ್ಲಿ ವಿಶೇಷವಾಗಿ ಬಳಸುವ ವಸ್ತುಗಳು ಎಂದರೆ ಎಲೆ-ಅಡಿಕೆ. ಕೃಷಿ ಕೆಲಸಗಳನ್ನು ಮಾಡುವ ಸಂದರ್ಭಗಳಲ್ಲಿ ವಿಶ್ರಾಂತಿಯ ಸಮಯದಲ್ಲಿ ಎಲೆ-ಅಡಿಕೆಯನ್ನು ಹಾಕಿಕೊಳ್ಳುವ ಪದ್ಧತಿಯನ್ನು ಹಳ್ಳಿಗಳಲ್ಲಿ ನೋಡಬಹುದಾಗಿದೆ. ಇಂತಹ ಎಲೆಗಳನ್ನು ಮಾರುವ ವ್ಯಾಪಾರಿಗಳನ್ನು ಹ್ಯಾರಡಾ ಗ್ರಾಮದಲ್ಲಿ ಕಾಣಬಹುದಾಗಿದೆ. ಪ್ರಮುಖ ಎಲೆ

ಮಾರಾಟಗಾರರೆಂದರೆ ಮುಸುರಿ ಗಂಗಿಮಾಳಪ್ಪ, ಬಡ್ಡೇರ ನೀಲಪ್ಪ, ಕಲ್ಲಳ್ಳಿ ನಿಂಗಪ್ಪ, ಪಿಟ್ಟೇರ ಬಸವಣ್ಣೆಪ್ಪ ಹಾಗೂ ದುರುಗವ್ವ ಇವರುಗಳು ಪಟ್ಟಣದಿಂದ ಇಲ್ಲವೇ ನೇರವಾಗಿ ತೋಟದಿಂದ ಎಲೆಗಳನ್ನು ಖರೀದಿಸಿ ಗ್ರಾಮದಲ್ಲಿ ಮಾರುತ್ತಿದ್ದಾರೆ. ಸ್ಥಳೀಯವಾಗಿ ಗ್ರಾಮ್ಯ ಭಾಷೆಯಲ್ಲಿ ಕರೆಯುವ ನಾಗದೇಳಿ ಎಲೆ, ಮರಬೀಜ ಎಲೆಯನ್ನು ಹೆಚ್ಚಾಗಿ ಬಳಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

೧೦೦ ಎಲೆಗಳಿಗೆ ಒಂದು ಚೆಟ್ಟಿ ಅಥವಾ ಒಂದು ಕೌಳಿ ಎಂದು ಕರೆಯುವರು. ೧೨೦ ಚೆಟ್ಟಿಗೆ ಒಂದು ಪೆಂಡಿ ಎಂದು ಕರೆಯುವರು. ಒಂದು ಪೆಂಡಿಯಲ್ಲಿ ೧೨೦೦೦ ಎಲೆಗಳಿರುವುದನ್ನು ಕಾಣಬಹುದು. ಮಾರುಕಟ್ಟೆಯಲ್ಲಿ ಒಂದು ಪೆಂಡಿಗೆ, ೪೦೦೦, ೫೦೦೦, ೮೦೦೦ ವರೆಗೂ ಬೆಲೆ ಇರುವುದನ್ನು ನಾವು ಕಾಣಬಹುದಾಗಿದೆ. ಇತ್ತೀಚಿಗೆ ಹ್ಯಾರಡಾ ಗ್ರಾಮದಲ್ಲಿ ಎಲೆ ಮಾರಾಟವು ಬಹಳಷ್ಟು ಪ್ರಸಿದ್ಧಿಯನ್ನು ಪಡೆದಿದೆ.

೩.೭ ಸಾರಿಗೆ ವ್ಯವಸ್ಥೆ

ಸಾರಿಗೆಯು ಅತ್ಯಂತ ಅವಶ್ಯಕವಾದ ಹಾಗೂ ಪ್ರಮುಖವಾದ ಮೂಲಭೂತ ಸೌಲಭ್ಯವಾಗಿದೆ. ಸಾರಿಗೆಯೂ ಒಂದು ಮಾಧ್ಯಮ. ಸಾರಿಗೆ ಸೌಲಭ್ಯವು ಆರ್ಥಿಕ ಪ್ರಗತಿಯ ಒಂದು ಪ್ರಮುಖ ನಿರ್ಧಾರಕ ಅಂಶವಾಗಿದೆ. ಕೃಷಿ ಕೈಗಾರಿಕೆ, ಮೊದಲಾದ ವಲಯಗಳಿಗೆ ಅವಶ್ಯಕವಿರುವ ಸೇವೆಗಳನ್ನು ಮತ್ತು ಸೌಲಭ್ಯಗಳನ್ನು ಸಾರಿಗೆಯು ಒದಗಿಸುತ್ತದೆ. ಅದರಲ್ಲಿ ವಿಶೇಷವಾಗಿ ಗ್ರಾಮೀಣ ಸಾರಿಗೆಯು ರೈತರಿಗೆ ಅತೀ ಪ್ರಮುಖವಾದುದು.

ಹ್ಯಾರಡಾ ಗ್ರಾಮವು ಬಹಳಷ್ಟು ವರ್ಷಗಳ ಹಿಂದೆ ಕುಗ್ರಾಮವಾಗಿತ್ತು. ಗ್ರಾಮಕ್ಕೆ ಸರಿಯಾದ ರಸ್ತೆಗಳ ವ್ಯವಸ್ಥೆ ಇರಲಿಲ್ಲ, ರಸ್ತೆಗಳು ಇದ್ದರೂ ಸಹ ತಗ್ಗು, ಗುಣಿಗಳಿಂದ ಅಸ್ತವ್ಯಸ್ತವಾಗಿದ್ದವು. ಆದರೆ ಇತ್ತೀಚಿಗೆ ೧೦-೧೫ ವರ್ಷಗಳಿಂದೀಚೆಗೆ ಗ್ರಾಮಕ್ಕೆ ಸುಸಜ್ಜಿತವಾದ ರಸ್ತೆಗಳನ್ನು ಕಾಣುತ್ತಿದ್ದೇವೆ. ಹ್ಯಾರಡಾಕ್ಕೆ ಸಂಪರ್ಕಿಸುವ ರಸ್ತೆಗಳು ಮೂರು ಜಿಲ್ಲೆಗಳಿಗೆ ಸಂಪರ್ಕವನ್ನು ಕಲ್ಪಿಸುತ್ತವೆ. ಬಳ್ಳಾರಿ, ಹಾವೇರಿ, ಹಾಗೂ ದಾವಣಗೆರೆ. ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲದೇ ಗ್ರಾಮದ ಪ್ರಮುಖ ರಸ್ತೆಗಳಿಗೆ ಕಾಂಕ್ರೀಟ್(ಸಿ.ಸಿ) ಹಾಕಿರುವುದನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಇಂದು ಬಹುತೇಕ ರಸ್ತೆಗಳು ದುರಸ್ಥಿಯನ್ನು ಕಂಡಿವೆ. ಇನ್ನು ಹೊಲ, ಗದ್ದೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಗ್ರಾಮ ಪಂಚಾಯಿತಿಯ ಉದ್ಯೋಗ ಖಾತ್ರಿ ಗ್ರಾಮೀಣ ಯೋಜನೆಯಡಿ ಬಹುತೇಕ ರಸ್ತೆಗಳನ್ನು ದುರಸ್ಥಿ ಮಾಡಲಾಗಿದೆ.

ಗ್ರಾಮಕ್ಕೆ ಮೊಟ್ಟಮೊದಲು ದಾವಣಗೆರೆಯಿಂದ ಒಂದು ಬಸ್ಸಿನ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಅದು ಊರಿನ ಮಧ್ಯದಲ್ಲಿ ಬಂದು ಸಾರ್ವಜನಿಕರನ್ನು ಹತ್ತಿಸಿಕೊಂಡು ಹೋಗುತ್ತಿತ್ತು. ನಂತರ ಇದೇ ಗ್ರಾಮದಲ್ಲಿ ಕುಂಬಾರ ಈರಮ್ಮನ ಮನೆಯ ಪಕ್ಕದಲ್ಲಿ ಬಂದು ರಾತ್ರಿ ನಿಲುಗಡೆಯಾಗುತ್ತಿತ್ತು. ಇದು ಗ್ರಾಮದ ಮೊಟ್ಟಮೊದಲ ಬಸ್ ವ್ಯವಸ್ಥೆಯಾಗಿದೆ. ಇನ್ನು ಇತ್ತೀಚಿಗೆ ಗ್ರಾಮಕ್ಕೆ ಹಲವಾರು

ಸರ್ಕಾರಿ ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರತಿನಿತ್ಯ ವಿವಿಧ ಪಟ್ಟಣಗಳಿಗೆ ತೆರಳಲು ೮-೧೦ ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುವುದಕ್ಕಿಂತ ಮೊದಲು ಸಾರಿಗೆ ವ್ಯವಸ್ಥೆಗೆ ಕತ್ತೆ, ಕುದುರೆ, ಹಾಗೂ ಬಂಡಿಗಳ ವ್ಯವಸ್ಥೆಯನ್ನು ಹೊಂದಿತ್ತು, ಈಗಲೂ ಸಹ ಹೊಲ, ಗದ್ದೆಗಳಿಗೆ ಹೋಗಲು ಕೃಷಿಯ ಉತ್ಪನ್ನಗಳನ್ನು ಕಣಗಳಿಗೆ ಸಾಗಿಸಲು ಬಂಡಿಯನ್ನು ಉಪಯೋಗಿಸುವುದುಂಟು. ಮೊದ-ಮೊದಲು ಎರಡು ಚಕ್ರಗಳ ಚಕ್ಕಡಿಯನ್ನು ಉಪಯೋಗಿಸುತ್ತಿದ್ದರು. ಬರುಬರುತ್ತಾ ಟಯರ್ ಬಂಡಿಯನ್ನು ಉಪಯೋಗಿಸುವ ವ್ಯವಸ್ಥೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಆದರೆ ಗ್ರಾಮವು ಆಧುನಿಕ ಯುಗಕ್ಕೆ ತೆರೆದುಕೊಳ್ಳುತ್ತಿದ್ದಂತೆಯೇ ಹಲವಾರು ಟ್ರಾಕ್ಟರ್‌ಗಳು ಗ್ರಾಮಕ್ಕೆ ಬಂದವು. ಕೃಷಿಯ ಬಹುತೇಕ ಉತ್ಪನ್ನಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಈ ಟ್ರಾಕ್ಟರ್‌ಗಳನ್ನು ಬಳಸಲಾಗುತ್ತಿದೆ. ಇತ್ತೀಚಿಗೆ ಸಾರಿಗೆ ವಾಹನಗಳಾಗಿ ಬೈಕ್, ಕಾರುಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಮೇಲಿನ ಎಲ್ಲಾ ನಿದರ್ಶನಗಳಿಂದ ಗ್ರಾಮವು ಹಂತ ಹಂತವಾಗಿ ಆಧುನಿಕತೆಗೆ ತೆರೆದುಕೊಳ್ಳುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಮೊದಲಿನಿಂದಲೂ ಗ್ರಾಮದಲ್ಲಿ ಸಾರಿಗೆ ವ್ಯವಸ್ಥೆಯು ಬಹುತೇಕ ಸುಧಾರಣೆಗೊಂಡಿದೆ. ಗ್ರಾಮದಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಲು ಬಹುತೇಕ ಬೈಕ್‌ಗಳನ್ನು ಬಳಸುವುದುಂಟು. ಗ್ರಾಮದಲ್ಲಿ ಮನೆಗೆ ಒಂದರಂತೆ ಬೈಕ್‌ಗಳನ್ನು ಕಾಣಬಹುದಾಗಿದೆ. ದೂರದ ಪ್ರಯಾಣವನ್ನು ಮಾಡಬೇಕಾದರೆ ಸಾರ್ವಜನಿಕ ಬಸ್ಸನ್ನು ಉಪಯೋಗಿಸುತ್ತಿದ್ದಾರೆ. ಗ್ರಾಮಕ್ಕೆ ಹಲವಾರು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಹಡಗಲಿ ಬಸ್ ಘಟಕ, ಹರಪನಹಳ್ಳಿ ಬಸ್ ಘಟಕ, ಹಾವೇರಿ ಬಸ್ ಘಟಕ, ದಾವಣಗೇರಿ ಬಸ್ ಘಟಕ, ರಾಣೇಬೆನ್ನೂರು ಬಸ್ ಘಟಕಗಳು ಹಲವಾರು ಬಸ್ಸುಗಳ ಸಂಪರ್ಕವನ್ನು ಒದಗಿಸಿವೆ. ಗ್ರಾಮದಲ್ಲಿ ಶ್ರೀಮಂತರು ಹಲವಾರು ಕಾರುಗಳನ್ನು ಹೊಂದಿದ್ದಾರೆ. ಪ್ರತಿಯೊಂದು ಕೆಲಸಕ್ಕೂ ಶ್ರೀಮಂತರು ಕಾರುಗಳನ್ನು ಉಪಯೋಗಿಸುವುದನ್ನು ಕಾಣಬಹುದಾಗಿದೆ. ಇನ್ನು ಗ್ರಾಮದ ಮದುವೆ ಸಮಾರಂಭ, ಸಾಮೂಹಿಕ ಧಾರ್ಮಿಕ ಕಾರ್ಯಗಳಿಗೆ ಟ್ರ್ಯಾಕ್ಟರ್‌ಗಳನ್ನು ಬಳಸುವುದುಂಟು. ಸುಮಾರು ೬೦ ರಿಂದ ೭೦ ಟ್ರ್ಯಾಕ್ಟರ್ ಗಳನ್ನು ಗ್ರಾಮದಲ್ಲಿ ಕಾಣಬಹುದಾಗಿದೆ. ಅದೇ ರೀತಿಯಾಗಿ ಕೃಷಿಯ ಉತ್ಪನ್ನಗಳನ್ನು ಪಟ್ಟಣಗಳಿಗೆ ಸಾಗಿಸಲು ಟ್ರ್ಯಾಕ್ಟರ್‌ಗಳನ್ನು ಬಳಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಗ್ರಾಮವು ಇಷ್ಟೆಲ್ಲಾ ಆಧುನಿಕತೆಗೆ ತೆರೆದುಕೊಂಡರೂ ಸಾಂಪ್ರದಾಯಿಕ ಸಾರಿಗೆ ವ್ಯವಸ್ಥೆಯನ್ನು ಕೈ ಬಿಟ್ಟಿಲ್ಲ, ಹೊಲಗಳಿಗೆ ಹೋಗಲು, ಜಾತ್ರೆಗೆ ಹೋಗಲು, ಬಂಡಿ ಮತ್ತು ಟಯರ್ ಗಾಡಿಗಳನ್ನು ಉಪಯೋಗಿಸುತ್ತಿದ್ದಾರೆ. ಹೀಗೆ ಗ್ರಾಮವು ಅತ್ಯುತ್ತಮವಾದ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ದಿನನಿತ್ಯದ ಅಗತ್ಯ ವಸ್ತುಗಳು ಗ್ರಾಮಸ್ಥರಿಗೆ ದಿನನಿತ್ಯ ದೊರಕುತ್ತಿವೆ. ಸಾರ್ವಜನಿಕ ಬಸ್ ಸೌಲಭ್ಯವು ಮುಂಜಾನೆ ೫ ಗಂಟೆಯಿಂದ ಸಂಜೆ ೯ ಗಂಟೆಯವರೆಗೆ ಸಂಪರ್ಕವನ್ನು ಕಲ್ಪಿಸಿವೆ. ಉತ್ತಮ

ಸಾರಿಗೆ ವ್ಯವಸ್ಥೆಯಿಂದ ಪಟ್ಟಣಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಅದರಲ್ಲಿ ವಿದ್ಯಾರ್ಥಿನಿಯರಿಗೆ ಇದೊಂದು ವರದಾನವಾಗಲಿದೆ. ತುರ್ತು ಆರೋಗ್ಯ ಸೇವೆಗಳನ್ನು ಒದಗಿಸಿಲು ಈ ಸಾರಿಗೆ ವ್ಯವಸ್ಥೆ ಬಹುಮುಖ್ಯ ಉಪಯೋಗವಾಗಿದೆ. ಸಕಾಲದಲ್ಲಿ ರೈತರಿಗೆ ಕೃಷಿಯ ತರಕಾರಿಗಳನ್ನು ಸಾಗಿಸಲು, ಕ್ರಿಮಿನಾಶಕಗಳು, ರಸಗೊಬ್ಬರಗಳನ್ನು ಕೊಳ್ಳಲು ಸಹಕಾರಿಯಾಗಿದೆ. ಸಾರ್ವಜನಿಕ ಬಸ್‌ಗಳಲ್ಲಿ ಬಡವರು, ಜನಸಾಮಾನ್ಯರು ತೆರಳಿ ತಮ್ಮ ಸರ್ಕಾರಿ ಕಛೇರಿ ಕೆಲಸಗಳನ್ನು ಸುಸೂತ್ರವಾಗಿ ಮುಗಿಸಲು ಬಹಳ ಸಹಕಾರಿಯಾಗಿದೆ. ಗ್ರಾಮದಲ್ಲಿ ಇಂದು ಬಹಳಷ್ಟು ಸಂಖ್ಯೆಯಲ್ಲಿ ಸುಶಿಕ್ಷಿತರು ಇದ್ದು, ಸರಕಾರಿ ನೌಕರಿಗಳನ್ನು ಪಡೆದುಕೊಂಡಿದ್ದಾರೆ. ಕಾರಣ ಉತ್ತಮ ಸಾರಿಗೆ ವ್ಯವಸ್ಥೆಯಿಂದ ಪಟ್ಟಣಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡಿದ್ದರಿಂದ ಹೇಳಬಹುದು. ಆದ್ದರಿಂದ ಒಂದು ಗ್ರಾಮವು ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬೇಕಾದರೆ ಉತ್ತಮ ಸಾರಿಗೆ ವ್ಯವಸ್ಥೆಯಿಂದ ಮಾತ್ರ ಎಂದು ಹೇಳಬಹುದಾಗಿದೆ. ಯಾವ ಗ್ರಾಮವು ಉನ್ನತ ಸಾರಿಗೆ ವ್ಯವಸ್ಥೆಯನ್ನು ಹೊಂದಿರುತ್ತದೆಯೋ ಆ ಗ್ರಾಮದಲ್ಲಿ ಎಲ್ಲಾ ರಂಗಗಳಲ್ಲಿ ಅಭಿವೃದ್ದಿಯನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮವು ಇದಕ್ಕೆ ಹೊರತಾಗಿಲ್ಲ.

ಇಂದು ಗ್ರಾಮವು ಸುಸಜ್ಜಿತ ಸಾರಿಗೆ ವ್ಯವಸ್ಥೆಯಿಂದ ಹೆಚ್ಚು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದೆ. ಗ್ರಾಮವು ಅಮೂಲಾಗ್ರ ಬದಲಾವಣೆಯನ್ನು ಕಂಡಿರುವುದನ್ನು ಕಾಣಬಹುದಾಗಿದೆ. ಕೃಷಿ, ಶಿಕ್ಷಣ, ವ್ಯಾಪಾರ, ವಹಿವಾಟು, ಬ್ಯಾಂಕಿಂಗ್ ಮುಂತಾದ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದೆ. ಹೀಗೆ ಉತ್ತಮ ಸಾರಿಗೆ ವ್ಯವಸ್ಥೆಯಿಂದ ಗ್ರಾಮವು ಪ್ರಗತಿಯನ್ನು ಸಾಧಿಸುತ್ತಿದೆ.

೩.೮ ಸಂಘ ಸಂಸ್ಥೆಗಳು

ಮಾನವ ಸಂಘಜೀವಿ. ಅವನು ಒಂಟಿಯಾಗಿ ಬಾಳಲಾರ. ಮಾನವನು ಹುಟ್ಟಿನಿಂದ ಸಾಯುವವರೆಗೂ ಹಲವಾರು ಆಸಕ್ತಿ ಬಯಕೆಗಳನ್ನು ಹೊಂದಿದ್ದಾನೆ. ವೈಯಕ್ತಿಕವಾಗಿ ಅವುಗಳನ್ನು ಈಡೇರಿಸಿಕೊಳ್ಳಲಾರನು, ಆದ್ದರಿಂದ ಸಮಾನ ಆಸಕ್ತಿ ಹೊಂದಿರುವ ಹಲವು ಜನರು ಒಂದುಗೂಡಿ ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳುವುದರ ಮೂಲಕ ತಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳುತ್ತಾರೆ. ಯಾವಾಗ ಒಂದು ಅಥವಾ ಕೆಲವು ಆಸಕ್ತಿಗಳ ಈಡೇರಿಕೆಗಾಗಿ ಒಂದು ಜನಸಮೂಹ ಒಟ್ಟಿಗೆ ಸಹಕಾರದಿಂದ ದುಡಿಯಲು ಸಿದ್ದವಾದಾಗಲೇ ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬರುವುದು.

“ಸಂಘ ಸಂಸ್ಥೆಗಳು ಸ್ವಯಂ ಪ್ರೇರಿತವಾಗಿ ನಿರ್ಧಿಷ್ಟ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಅದನ್ನು ಸಮರ್ಥವಾಗಿ ನಿರ್ವಹಿಸುವ ಪ್ರಯತ್ನವನ್ನು ಮಾಡುತ್ತವೆ. ಗ್ರಾಮ ನೈರ್ಮಲ್ಯದ ಬಗ್ಗೆ, ನೀರಿನ ಸಂರಕ್ಷಣೆಯ ಬಗ್ಗೆ, ಶೌಚಾಲಯದ ಮಹತ್ವದ ಬಗ್ಗೆ, ಬಡವರ್ಗದವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತಿವೆ. ಎಲ್ಲಿ ಅನ್ಯಾಯ ಎದ್ದು ಕಾಣುತ್ತದೆಯೋ ಅದನ್ನು ಸರಿಪಡಿಸಲು ಸಂಬಂಧಿಸಿದ

ಅಧಿಕಾರಿ ಅಥವಾ ವ್ಯಕ್ತಿಯನ್ನು ಬಡಿದೆಬ್ಬಿಸುವ ಕೆಲಸ ಕಾರ್ಯಗಳನ್ನು ಮಾಡುತ್ತವೆ. ಇಂತಹ ಸಂಘ ಸಂಸ್ಥೆಗಳು "ಪ್ರತಿಯೊಬ್ಬನೂ ಎಲ್ಲರಿಗಾಗಿ ಮತ್ತು ಎಲ್ಲರೂ ಪ್ರತಿಯೊಬ್ಬನಿಗಾಗಿ" ಎಂಬ ಸಹಕಾರದ ತತ್ವದಡಿಯಲ್ಲಿ ಕೆಲಸ ಮಾಡುವ ಧ್ಯೇಯವನ್ನು ಹೊಂದಿವೆ"(ಡಾ. ಹೆಚ್.ಆರ್. ಕೃಷ್ಣಯ್ಯಗೌಡ: ೨೦೧೭:೧೦).

ಹ್ಯಾರಡಾ ಗ್ರಾಮದಲ್ಲಿ ಮೊದಲಿನಿಂದಲೂ ಸಂಘ-ಸಂಸ್ಥೆಗಳನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಮೊಟ್ಟ ಮೊದಲು ಸಂಘಮೇಶ್ವರ ನಾಟ್ಯ ಸಂಘವು ಉಗಮವಾಗಿತ್ತು. ಈ ಸಂಘವು ಹಲವಾರು ದೇಣಿಗೆಗಳನ್ನು ಕೊಡುವುದರ ಮೂಲಕ ಸಮಾಜದ ಸಕ್ರಿಯ ಚಟುವಟಿಕೆಯಲ್ಲಿ ಭಾಗವಹಿಸಿತ್ತು. ನಂತರದಲ್ಲಿ ವಿಶ್ವೇಶ್ವರಯ್ಯ ರೈತ ಯುವಕ ಮಂಡಳಿ ಸ್ಥಾಪನೆಯಾಯಿತು. ಈ ಸಂಘವು ಗ್ರಾಮದ ಸ್ವಚ್ಛತೆ ಹಾಗೂ ಹಲವಾರು ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸಿತು.

ತದ ನಂತರದಲ್ಲಿ ಗ್ರಾಮದಲ್ಲಿ ತಲೆ ಎತ್ತಿದ ಪ್ರಮುಖವಾದ ಸಂಘ-ಸಂಸ್ಥೆ "ವಿನಾಯಕ ಯುವಕ ಮಿತ್ರ ಮಂಡಳಿ" ಪ್ರಮುಖವಾದುದು. ಈ ಯುವಕ ಮಂಡಳಿಯು ಗಣೇಶ ಉತ್ಸವವನ್ನು ಆಚರಿಸುವುದರ ಮೂಲಕ ನಾಡಿನ ಹಲವಾರು ಚಿಂತಕರನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಕ್ರೀಡೆ, ಕಲೆ, ಸಾಹಿತ್ಯ ಮುಂತಾದವುಗಳ ಮೂಲಕ ಜನರನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿತು.

ಇತ್ತೀಚಿನ ದಿನಮಾನಗಳಲ್ಲಿ ಹಲವಾರು ಸಂಘ-ಸಂಸ್ಥೆಗಳು ಗ್ರಾಮದಲ್ಲಿ ಹುಟ್ಟಿಕೊಂಡವು. ಅವುಗಳಲ್ಲಿ ಪ್ರಜ್ಞಾವಂತ ಯುವ ವೇದಿಕೆ, ಡಾ॥ ಅಂಬೇಡ್ಕರ ಯುವ ಮಂಡಳಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಮಂಡಳಿ, ವಾಲ್ಮೀಕಿ ಯುವ ಮಂಡಳಿ ಹೀಗೆ ಹಲವಾರು ಸಂಘಗಳು ಹುಟ್ಟಿಕೊಂಡವು. ಅದರಲ್ಲಿಯೇ ಹೆಚ್ಚು ಕ್ರಿಯಾಶೀಲವಾದ ಸಂಘವೆಂದರೆ ಪ್ರಜ್ಞಾವಂತ ಯುವ ವೇದಿಕೆಯಾಗಿದೆ. ಇದರ ಅಧ್ಯಕ್ಷರಾಗಿ ಗೋಣೆಪ್ಪ ಹಳ್ಳಿ ಆಯ್ಕೆಯಾಗಿದ್ದಾರೆ. ಸುಮಾರು ೩೦ ಯುವಕರನ್ನು ಹೊಂದಿದ ಈ ಸಂಘವು ಗ್ರಾಮದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಮಾಡತೊಡಗಿತು. ಈ ಸಂಘವು ಮಾಡಿದ ಅತೀ ದೊಡ್ಡ ಸಾಧನೆ ಏನೆಂದರೆ ಹ್ಯಾರಡಾ ಗ್ರಾಮವು ಮಧ್ಯ ಮುಕ್ತ ಗ್ರಾಮವನ್ನಾಗಿ ಮಾಡಿದ್ದು, ಗ್ರಾಮದಲ್ಲಿ ಯಾರಾದರೂ ಮಧ್ಯವನ್ನು ಮಾರಾಟ ಮಾರುವವರು ಇದ್ದರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ ಅಗತ್ಯ ಕ್ರಮವನ್ನು ಕೈಗೊಳ್ಳುವರು. ಗ್ರಾಮದಲ್ಲಿ ಎಲೆಮರೆಕಾಯಿಯೋಪಾದಿಯಲ್ಲಿದ್ದು ಗ್ರಾಮದ ಅಭ್ಯುದಯಕ್ಕಾಗಿ ದುಡಿಯುವಂತಹ ಹಲವಾರು ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡುವಂತಹ ಕಾಯಕ ಈ ಸಂಘದ ಎಲ್ಲಾ ಸದಸ್ಯರ ಕರ್ತವ್ಯವಾಗಿದೆ. ಇತ್ತೀಚಿಗೆ ಹ್ಯಾರಡಾದ ನಿಸ್ವಾರ್ಥ ಸಾಧಕರನ್ನು ಸನ್ಮಾನಿಸಿದ್ದು ಅತ್ಯಂತ ಔಚಿತ್ಯ ಪೂರ್ಣವಾಗಿದೆ. ಗ್ರಾಮದಲ್ಲಿ ಡೊಳ್ಳಿನ ಕುಣಿತದಲ್ಲಿ ಪ್ರಸಿದ್ದರಾದ ಬಡ್ಡಿ ಸುಡುಗಾಡೆಪ್ಪ, ಗ್ರಾಮದ ಪ್ರತಿಯೊಂದು ಶವಗಳನ್ನು ಸುಡುವ ಕಾಯಕವನ್ನು ಮಾಡುವ ಸಣ್ಣೀಲಪ್ನರ ಬಸವಲಿಂಗಪ್ಪ,

ಭಜನಾ ಪದಗಳನ್ನು ಶುಶ್ರಾವ್ಯವಾಗಿ ಹಾಡುವ ಕೊರ್ಲಹಳ್ಳಿ ರಂಗಜ್ಜ, ಬಹಳಷ್ಟು ವರ್ಷಗಳ ಕಾಲ ಸ.ಮಾ.ಹಿ.ಪ್ರಾ. ಶಾಲೆಯ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿದ ಬಿ. ವಿನೋದಕುಮಾರಿ, ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಆನಂದ ಬಾರ್ಕಿ ಹೀಗೆ ಇಂತಹ ಹ್ಯಾರಡಾದ ಅಸಾಮಾನ್ಯ ಸಾಧಕರನ್ನು ಗುರುತಿಸಿ ನಮ್ಮ ಗ್ರಾಮದವರು ಆದ ಅಂದಿನ ಕನ್ನಡ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಇವರಿಂದ ಸನ್ಮಾನಿಸಿದ್ದು ಅವಿಸ್ಮರಣೀಯವಾದದ್ದು.

ಹೀಗೆ ಪ್ರಜ್ಞಾವಂತ ಯುವ ವೇದಿಕೆಯ ಕೆಲಸಗಳನ್ನು ಮೆಚ್ಚಿ ಗ್ರಾಮಕ್ಕೆ ಆಗಮಿಸಿದ ಜಂಗಮಕ್ಷೇತ್ರ ಲಿಂಗನಾಯಕನಹಳ್ಳಿಯ ಮ.ನಿ.ಪ್ರ.ಚನ್ನವೀರ ಮಹಾಸ್ವಾಮಿಗಳು ತುಂಬು ಹೃದಯದಿಂದ ಹೊಗಳಿ ಆಶೀರ್ವದಿಸಿದರು. ಅದರಂತೆಯೇ ಈ ಯುವಕ ಮಂಡಳಿಯವರು ನಮ್ಮ ಮಠದಲ್ಲಿ ತಾಲೂಕಿನಲ್ಲಿ ನಿವೃತ್ತಿ ಹೊಂದಿದ ಎಲ್ಲಾ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮವನ್ನು ನಡೆಸಿಕೊಡಬೇಕು ಎಂದಾಗ ಅಲ್ಲಿಯೂ ಸಹ ಈ ಮಂಡಳಿಯು ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿ ಗುರುವಂದನಾ ಕಾರ್ಯಕ್ರಮವನ್ನು ನೆರವೇರಿಸಿತು. ಈ ರೀತಿಯಾಗಿ ಸಂಘ-ಸಂಸ್ಥೆಗಳು ಗ್ರಾಮವನ್ನು ಸ್ವಲ್ಪ ಮಟ್ಟಿಗೆ ಅಂಧಕಾರದಿಂದ ಬೆಳಕಿನಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿದವು.

೩.೯ ಉಡುಗೆ ತೊಡುಗೆ

ಸುಮಾರು ವರ್ಷಗಳ ಹಿಂದೆ ಹೊಸ ಶಿಲಾಯುಗ ಕಾಲಾವಧಿಯಲ್ಲೇ ಉಡುಪಿನ ಪ್ರಥಮ ರೂಪ ಕಾಣಿಸಿಕೊಂಡಿತೆಂದು ಊಹಿಸಲಾಗಿದೆ. ಇದಕ್ಕೂ ಹಿಂದೆ ಮಾನವನು ಚರ್ಮವನ್ನು ಬಟ್ಟೆಯನ್ನಾಗಿ ಉಪಯೋಗಿಸುತ್ತಿದ್ದನು. ಕಾಲ ಬದಲಾದಂತೆ ಅನೇಕ ರೀತಿಯ ಉಡುಗೆ-ತೊಡುಗೆಗಳನ್ನು ಕಾಣಬಹುದಾಗಿದೆ. ನಾವು ಸಿಂಧೂ ನದಿಯ ನಾಗರಿಕತೆಯನ್ನು ತೆಗೆದುಕೊಂಡಾಗ ಅಲ್ಲಿಯ ಜನರ ತೊಡುಗೆ ಮೇಲು ಹೊದಿಕೆ ಮತ್ತು ಕೆಳ ಹೊದಿಕೆಗಳಿಂದ ಕೂಡಿತ್ತು. ಸ್ತ್ರೀಯರು ಲಂಗ ಮತ್ತು ಸೀರೆಯನ್ನು ಉಡುತ್ತಿದ್ದರು. ಸ್ತ್ರೀ-ಪುರುಷರಿಬ್ಬರೂ ಆಭರಣ ಪ್ರಿಯರಾಗಿದ್ದರು. ಓಲೆ, ಮೂಗುತಿ, ಕಿವಿ ಉಂಗುರ, ತೋಳಬಂದಿ, ಕಂಠಹಾರ, ಡಾಬು, ಕಾಲ್ಗಡಗ, ಕೈಬಳೆ, ನಡುಪಟ್ಟಿ, ಕರ್ಣಕುಂಡಲ, ತಲೆಬಂದಿ, ಮತ್ತು ಸೌಂದರ್ಯ ವರ್ದಕಗಳಾಗಿ ಕಣ್ಣಿನ ಕಾಡಿಗೆ, ಕೂದಲು ತೊಳೆಯುವ ಶಾಂಪೂ, ತುಟಿಯ ಲೇಪನ, ಮುಖಕ್ಕೆ ಹಚ್ಚುವ ಮುಲಾಮು, ರಂಗು, ಪೌಡರ್, ಕಂಚಿನ ಕನ್ನಡಿಗಳು, ದಂತದ ಬಾಚಣಿಕೆಗಳು, ಗುಗ್ಗೆ ಕಡ್ಡಿ, ಚಿಮುಟ, ಸೂಜಿ, ಮೂಳೆಗಳಿಂದ ತಯಾರಿಸಿದ ಕೂದಲು ಪಿನ್ನುಗಳು ಈ ರೀತಿಯಾದ ಉಡುಗೆ-ತೊಡುಗೆಗಳನ್ನು ಹೊಂದಿದ್ದರು.

ಭಾರತದಲ್ಲಿ ಧೋತರ ಮತ್ತು ಸೀರೆ ಸಾವಿರಾರು ವರ್ಷಗಳಿಂದ ಬಂದಿರುವ ಉಡುಪು. ಮತ್ತೆ ಹಲವಾರು ಬದಲಾವಣೆಗಳು ಆಗತೊಡಗಿದವು. ನೀಳವಾದ ನಿರಿಗೆಗಳು ಇಳಿಬೀಳುವಂತೆ ಸ್ತ್ರೀಯರು ಸೀರೆ ಮತ್ತು ಪುರುಷರು ಧೋತರಗಳನ್ನು ಧರಿಸುವರು. ಇತ್ತೀಚಿನ ದಿನಮಾನಗಳಲ್ಲಿ ಭಾರತೀಯ

ಸಂಸ್ಕೃತಿಯ ಪ್ರತೀಕವಾದ ಧೋತರ ಮತ್ತು ಸೀರೆಗಳನ್ನು ಬಿಟ್ಟು ಪಾಶ್ಚಾತ್ಯ ಮಾದರಿಯ ಉಡುಪುಗಳನ್ನು ಧರಿಸುತ್ತಿದ್ದಾರೆ. ಭಾರತದಲ್ಲಿ ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚು ಬುಡಕಟ್ಟು ಸಮುದಾಯಗಳಿದ್ದು ಅವರು ಸಹ ತಮ್ಮ ಸಂಸ್ಕೃತಿಯಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳುತ್ತಿದ್ದಾರೆ,

ಆದರೂ ಸಹ ಸಂಪೂರ್ಣವಾಗಿ ತಮ್ಮ ಮೂಲ ಸಂಸ್ಕೃತಿಯನ್ನು ಮರೆಯಲು ಸಾಧ್ಯವಿಲ್ಲ. ತಮ್ಮ ಬುಡಕಟ್ಟು ಸಮುದಾಯದ ಆಚಾರ-ವಿಚಾರಗಳಿಗೆ ಅನುಗುಣವಾಗಿ ಉಡುಗೆ-ತೊಡುಗೆಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಯಾವುದೋ ಒಂದು ಸಮುದಾಯ ಅಥವಾ ಬುಡಕಟ್ಟು ಸಮುದಾಯವು ತನ್ನದೇ ಆದ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಒಳಗೊಂಡತೆಯೇ ತಮ್ಮ ತಮ್ಮ ಉಡುಗೆ-ತೊಡುಗೆಗಳಲ್ಲಿಯೂ ಸಹ ವಿಶೇಷತೆಯನ್ನು ಕಂಡುಕೊಂಡಿರುತ್ತದೆ. ಇದಕ್ಕೆ ಹ್ಯಾರಡಾ ಗ್ರಾಮದ ಸಮುದಾಯವೂ ಹೊರತಾಗಿಲ್ಲ. ಗ್ರಾಮದಲ್ಲಿ ಅಕ್ಷರಸ್ಥರು ಹೆಚ್ಚಿದಂತೆಲ್ಲಾ ಬೇರೆ ಬೇರೆ ಪ್ರದೇಶಗಳಲ್ಲಿ ನೌಕರಿಯನ್ನು ಮಾಡುತ್ತಾ ವಿವಿಧ ನಗರ ಪ್ರದೇಶಗಳಲ್ಲಿ ಓಡಾಡಿಕೊಂಡು ಬರುವುದರಿಂದ ಸ್ವಲ್ಪ ತಮ್ಮ ಮೂಲ ಉಡುಗೆ-ತೊಡುಗೆಯಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಆದರೂ ಸಹ ಇಂದಿಗೂ ಶೇ ೮೦ ರಷ್ಟು ಹ್ಯಾರಡಾದ ಜನಪದರು ತಮ್ಮ ವಿಶಿಷ್ಠ ಉಡುಗೆ-ತೊಡುಗೆಗಳನ್ನೇ ಧರಿಸುತ್ತಿದ್ದಾರೆ.

ಹ್ಯಾರಡಾ ಗ್ರಾಮದಲ್ಲಿ ವಿಭಿನ್ನ ರೀತಿಯ ಉಡುಗೆ-ತೊಡುಗೆಯನ್ನು ಧರಿಸುತ್ತಿದ್ದಾರೆ. ಉಡುಗೆಯು ಮಾನವನಿಗೆ ಮರ್ಯಾದೆಯನ್ನು ತಂದುಕೊಟ್ಟರೆ ತೊಡುಗೆಯು ಅವನ ಸೌಂದರ್ಯವನ್ನು ಹೆಚ್ಚಿಸಲು ಕಾರಣೀಭೂತವಾಗಿದೆ. ಇಂತಹ ಉಡುಗೆ-ತೊಡುಗೆಗಳು ಒಂದು ಸಮುದಾಯದ ಸಂಸ್ಕೃತಿಯನ್ನು ಬಿಂಬಿಸುವುದಲ್ಲದೇ ಅವರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದುಕಿನ ಬಿಂಬವನ್ನು ಪ್ರತಿನಿಧಿಸುತ್ತವೆ. ಹ್ಯಾರಡಾದಲ್ಲಿ ಮಹಿಳೆಯರ ಉಡುಗೆಯಲ್ಲಿ ಬಹಳಷ್ಟು ವಿಶಿಷ್ಠವಾಗಿದೆ. ದಿನನಿತ್ಯದ ಬಳಕೆಗೆ ಹೆಚ್ಚಾಗಿ ಮಹಿಳೆಯರು ಮೈ ಮುಚ್ಚುವಂತಹ ಸೀರೆಯನ್ನು ಉಟ್ಟುಕೊಂಡು ತಲೆಯ ಮೇಲೆ ಸೆರಗನ್ನು ಹಾಕಿಕೊಳ್ಳುವ ಪದ್ಧತಿ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಮೈ ನೆರೆದ ಬಾಲೆಯರೂ ಸಹ ಈ ನಿಯಮವನ್ನು ಅನುಸರಿಸಬೇಕು. ಆದರೆ ಶಾಲೆ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.

ಹೆಂಗಸರ ಉಡುಗೆ-ತೊಡುಗೆ : ಹೆಂಗಸರ ಉಡುಗೆ-ತೊಡುಗೆಗಳಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ವಿಶಿಷ್ಠವಾದ ಸ್ಥಾನವನ್ನು ನಾವುಗಳು ಗುರುತಿಸಬಹುದಾಗಿದೆ. ಮಹಿಳೆಯರು ಮೂಲತಃ ಸೌಂದರ್ಯ ಪ್ರಿಯರು. ಹ್ಯಾರಡಾ ಗ್ರಾಮದ ಮಹಿಳೆಯರು ಇದಕ್ಕೆ ಹೊರತಾಗಿಲ್ಲ. ಗ್ರಾಮದ ಹಿಂದಿನ ಕಾಲದ ಮಹಿಳೆಯರು ಗಟ್ಟಿಸೀರೆ(ಇಳಕಲ್ ಸೀರೆ)ಯನ್ನು ಉಟ್ಟು ಕುಪ್ಪಸವನ್ನು ತೊಟ್ಟು ಹಣೆಯ ತುಂಬಾ ದೊಡ್ಡದಾಗಿ ದುಂಡಾಗಿ ಕುಂಕುಮ ಇಟ್ಟುಕೊಂಡು ಕಚ್ಚೆಯನ್ನು ಹಾಕಿಕೊಂಡು ತಲೆಯ ಮೇಲೆ ಸೆರಗನ್ನು ಹಾಕಿ ತಮ್ಮ ದಿನನಿತ್ಯದ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಸದಾ ಯಾವಾಗಲೂ

ಕೈಯಲ್ಲಿ ಕಡಗವನ್ನು ಧರಿಸುತ್ತಿದ್ದರು. ಕಾಲಲ್ಲಿ ಕೊಲ್ಲಾಪುರ ಕುರುಬರ ಪಾದರಕ್ಷೆಯನ್ನು ಧರಿಸುತ್ತಿದ್ದರು. ಮೂಗಿನಲ್ಲಿ ದೊಡ್ಡ ಗಾತ್ರದ ಮುತ್ತಿನ ಮೂಗುತಿಯನ್ನು ಧರಿಸುತ್ತಿದ್ದರು. ಕಿವಿಯಲ್ಲಿ ವಿಶಿಷ್ಟವಾದ ಬುಗುಡಿ ಹಾಗೂ ಜುಮುಕಿ ಕಿವಿಯೋಲೆಯನ್ನು ಧರಿಸುತ್ತಿದ್ದರು. ಕೊರಳಲ್ಲಿ ಹೆಚ್ಚಾಗಿ ಬೇವಿನಕಾಯಿ ರೂಪದ ಆಕಾರವನ್ನು ಹೊಂದಿದ ಬೇವಿನಕಾಯಿ ಸರವನ್ನು ಧರಿಸುತ್ತಿದ್ದರು. ಇವು ದಿನನಿತ್ಯ ಧರಿಸುವ ಉಡುಗೆ-ತೊಡುಗೆಗಳಾಗಿದ್ದವು. ಇನ್ನು ಹಬ್ಬ-ಹರಿದಿನಗಳು, ಜಾತ್ರೆಗಳು, ಬ್ಯಾಟಿಯ ಹಬ್ಬಗಳು, ಸುಗ್ಗಿಯ ಸಮಯದಲ್ಲಿ ಮದುವೆ ಸಂಭ್ರಮದಲ್ಲಿ ವಿಶಿಷ್ಟವಾದ ಉಡುಗೆ-ತೊಡುಗೆಗಳನ್ನು ಧರಿಸುತ್ತಿದ್ದರು.

ಸ್ತ್ರೀಯರು ೧೬ ಮೊಳದ ಸೀರೆಯನ್ನು ಕಚ್ಚೆ ಹಾಕಿಕೊಂಡು ವಿವಿಧ ರೀತಿಯ ಕೇಶಾಲಂಕಾರವನ್ನು ಮಾಡಿಕೊಂಡು ಜಡೆಗೆ ಕ್ಯಾದಿಗೆಯಿಂದ ಹೆಣೆದ ಜಡೆಯನ್ನು ಮುಡಿಯುತ್ತಿದ್ದರು. ತಲೆಯ ಕೂದಲನ್ನು ತುರುಬು ಹಾಕಿ ತುರುಬಿಗೆ ಬೆಳ್ಳಿಯ ಆಕಳ ಕಡ್ಡಿಯಿಂದ ಸಿಕ್ಕಿಸಿಕೊಂಡು ಕುರಿ ಉಣ್ಣೆಯ ಸಣ್ಣ ಹಗ್ಗದಿಂದ ಬಿಗಿದುಕೊಂಡಿರುತ್ತಿದ್ದರು. ಸೊಂಟಕ್ಕೆ ಗೆಜ್ಜೆ ಪಟ್ಟಿ, ನಡುಪಟ್ಟಿಯನ್ನು ಬೆಳ್ಳಿಯಿಂದ ತಯಾರಿಸಿ ಧರಿಸುತ್ತಿದ್ದರು. ತೋಳುಗಳಿಗೆ ತೋಳುಬಂದಿಯನ್ನು ಧರಿಸುತ್ತಿದ್ದರು. ಕಿವಿಯಲ್ಲಿ ಬೆಂಡೋಲೆ, ಸಿರಿದೇವಿ, ಬುಗುಡಿ, ಕಿವಿಗುರುವಿ, ಜಾರ್ಲಿ ಧರಿಸುತ್ತಿದ್ದರು. ಕೆಳ ಕಿವಿಯಿಂದ ಮೇಲು ಕಿವಿಗೆ ಜೋಡಿಸುವಂತೆ ಕೆನೆ ಸರಪಣಿಯನ್ನು ಹಾಕುತ್ತಿದ್ದರು. ಕೊರಳಲ್ಲಿ ವಿಧವಿಧವಾದ ಸರಗಳನ್ನು ಧರಿಸುತ್ತಿದ್ದರು. ತೀಕೆ(ಬಂಗಾರದ ಗುಂಡಿನಿಂದ ಮಾಡಿದ ಸರ), ಗುಂಡಿನಸರ, ಬೇವಿನಕಾಯಿ ಸರ ಧರಿಸುತ್ತಿದ್ದರು. ಕಾಲಲ್ಲಿ ಹಾಲುಗಡುಗ, ಗೆಜ್ಜೆ ಪೆಂಡಿ, ಮಿಂಚು, ಕಾಲುಂಗುರ, ಚೈನಾವನ್ನು ಧರಿಸುತ್ತಿದ್ದರು. ತಲೆಯಲ್ಲಿ ಅಂದರೆ ತುರುಬಿನ ಪಕ್ಕದಲ್ಲಿ ನಾಗರ, ಜುಲ್ಪಿ ಹೂವು ಧರಿಸುತ್ತಿದ್ದರು. ಕೈ ಬೆರಳುಗಳಿಗೆ ವಿವಿಧ ರೀತಿಯ ಉಂಗುರಗಳನ್ನು ಧರಿಸುತ್ತಿದ್ದರು. ಕೆಂಪು, ಹಸಿರು, ಹರಳಿನ ಉಂಗುರ, ಬಂಡಿ ಉಂಗುರವನ್ನು ಧರಿಸುತ್ತಿದ್ದರು. ಮದುವೆ ಆಗದೇ ಇರುವ ಹೆಣ್ಣುಮಕ್ಕಳು ದಡಿ ಅಂಗಿ, ಜಾಕೀಟು ಧರಿಸುತ್ತಿದ್ದರು.

ಆದರೆ ಹ್ಯಾರಡಾ ಗ್ರಾಮವು ಆಧುನಿಕ ಯುಗಕ್ಕೆ ತೆರೆದುಕೊಳ್ಳುತ್ತಿಂದತೆಯೇ ಉಡುಗೆ-ತೊಡುಗೆಯಲ್ಲಿ ಹಲವಾರು ಬದಲಾಣೆಯನ್ನು ಕಾಣುತ್ತಿದ್ದೇವೆ. ಕ್ರಮೇಣವಾಗಿ ಕಚ್ಚೆ ಹಾಕುವ ಪದ್ಧತಿಯು ಸಡಿಲಗೊಂಡಿತು. ತೋಪು ಮುಸುಕಿನ ಸೀರೆ, ೧೬ ಮೊಳದ ಗಟ್ಟಿ ಸೀರೆ ಮಾಯವಾಗಿ ಕಾಂಚಿಪುರಂ ಸೀರೆ, ಮೈಸೂರು ಸಿಲ್ಕ ಸೀರೆ, ನೈಲಾನ್ ಪಾಲಿಸ್ಟರ ಸೀರೆಗಳನ್ನು ಧರಿಸುತ್ತಿದ್ದಾರೆ. ಇನ್ನೂ ಮುಂದುವರೆದು ಸಮೂಹ ಮಾಧ್ಯಮದಲ್ಲಿ ಭಿತ್ತರವಾಗುವ ಧಾರವಾಹಿಗಳ ಪ್ರಭಾವದಿಂದ ರಾಧಾರಮಣ ಸೀರೆ, ಶೃತಿ ಸೀರೆ, ಸುಬ್ಬಲಕ್ಷ್ಮೀ ಸೀರೆ, ನಾಗಿಣಿ ಸೀರೆ, ಇನ್ನೂ ವಿಧ-ವಿಧವಾದ ಸೀರೆಯನ್ನು ಧರಿಸುವುದನ್ನು ಕಾಣುತ್ತಿದ್ದೇವೆ. ಇನ್ನು ಮದುವೆಯಾಗದ ಹೆಣ್ಣು ಮಕ್ಕಳು ಚೂಡಿದಾರ, ಪೆಟ್ಟಿಕೋಟ್, ಲಾಂಗ್ ಫ್ರಾಕ್, ಮಿಡಿ, ನೈಟ್ ಡ್ರಸ್, ಪ್ಯಾಂಟ್ ಶರ್ಟ, ಜಗ್ಗೀನ್ಸ್, ಲಗ್ಗೀನ್ಸ್, ರಿಂಕಲ್ ಪ್ಯಾಂಟ್,

ಲಾಚಾಮಿಡಿ, ಗಾಗ್ರಾಮೀಡಿ ಮುಂತಾದ ಆಧುನಿಕ ಉಡುಪುಗಳನ್ನು ಧರಿಸಲು ಬಳಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಪೌಡರ್, ಲಿಪ್ ಸ್ಟಿಕ್, ಕಾಜಲ್, ನೇಲ್ ಪಾಲೀಶ್, ಐಬ್ರೋ ಪೆನ್ಸಿಲ್, ಮೆಹಂದಿ. ಜಡಿಗುಂಡು, ಕ್ಲಿಪ್, ರಬ್ಬರ್ ಬ್ಯಾಂಡ್, ವಿವಿಧ ಬಣ್ಣದ ರಿಬ್ಬನ್, ಮೇಕಪ್‌ಕಿಟ್‌ಗಳನ್ನು ಬಳಸುತ್ತಿದ್ದಾರೆ. ಇವೆಲ್ಲವೂ ಆಧುನಿಕತೆಯ ಪ್ರಭಾವವನ್ನು ಎತ್ತಿ ತೋರಿಸುತ್ತವೆ.

ಗಂಡಸರ ಉಡುಗೆ-ತೊಡುಗೆಗಳು : ಗ್ರಾಮವು ಸ್ಥಿರಗೊಳ್ಳುವ ಹಂತದಲ್ಲಿ ಕೇವಲ ಧೋತಿಯನ್ನು ಮಾತ್ರ ಧರಿಸುತ್ತಿದ್ದರು. ಅದರಲ್ಲಿ ಪ್ರಮುಖವಾಗಿ ಕೆಳವರ್ಗದ ಬಹುತೇಕ ಜನಾಂಗದವರು ಧೋತಿಯನ್ನು ಧರಿಸುವ ಸಂಪ್ರದಾಯವನ್ನು ಹೊಂದಿದ್ದರು. ಅದರಲ್ಲಿ ಸಮಾಜದಲ್ಲಿ ಮೇಲ್ವರ್ಗದವರು, ಶ್ರೀಮಂತರು, ಜಮೀನ್ದಾರರು ಮಾತ್ರ ಧೋತಿ ಮತ್ತು ಜುಬ್ಬಾವನ್ನು ಧರಿಸುತ್ತಿದ್ದರು. ಆಗ ಸಾಮಾನ್ಯ ಕೆಳವರ್ಗದವರಲ್ಲಿ ತೊಡುಗೆಗಳ ಬಗ್ಗೆ ಅವರಿಗೆ ಹೆಚ್ಚು ಆಸಕ್ತಿ ಇರಲಿಲ್ಲ. ಬರುಬರುತ್ತಾ ಗಂಡಸರು ಧೋತಿಯ ಜೊತೆಗೆ ಅಂಗಿಯನ್ನು ಹಾಕಿಕೊಳ್ಳುವ ಪರಿಪಾಠವನ್ನು ರೂಢಿಸಿಕೊಂಡರು. ಬರುಬರುತ್ತಾ ಕಚ್ಚೆ ಪಂಚೆ, ಮೂರು ಗುಂಡಿನ ಅಂಗಿ, ಶಾಲು, ಟವಾಲು, ಜಿರಿಕಿ ಪಾದರಕ್ಷೆ, ಕಿವಿಯಲ್ಲಿ ಮೇಟಿ ಮುರ, ಕಡಪಹರಳು ಧರಿಸುವ ಪರಿಪಾಠವನ್ನು ಬೆಳೆಸಿಕೊಂಡರು.

ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಪ್ಯಾಂಟ್, ಶರ್ಟ್, ಟೀಶರ್ಟ್, ಲುಂಗಿ, ಬನಿಯನ್ ಮುಂತಾದ ಆಧುನಿಕ ಉಡುಪುಗಳನ್ನು ಬಳಸತೊಡಗಿದರು. ಕೆಲವು ವಿದ್ಯಾವಂತ ಯುವಕರು ಶೂ ಬಳಸುತ್ತಿದ್ದಾರೆ. ಹೀಗೆ ಆಧುನಿಕ ಭರಾಟೆಯಲ್ಲಿ ಉಡುಗೆ-ತೊಡುಗೆಗಳ ಬದಲಾವಣೆಯನ್ನು ಕಾಣಬಹುದಾಗಿದೆ. ಚಿಕ್ಕ ಮಕ್ಕಳಿಗೆ ಕಿವಿಯಲ್ಲಿ ಮುರ ಚುಚ್ಚುವ ಕಾರ್ಯಕ್ರಮ ಕಡ್ಡಾಯವಾಗಿದೆ. ಹುಟ್ಟಿ ಮೂರು ತಿಂಗಳಾದ ಕೂಸಿಗೆ ಕಿವಿ ಚುಚ್ಚುವ ಕಾರ್ಯಕ್ರಮ ಏರ್ಪಡಿಸುವರು. ಊರಿನ ಬಡಿಗೇರ ಸಮುದಾಯದವರು ಇದನ್ನು ನಡೆಸಿಕೊಡುವರು. ಬಡಿಗೇರ ಮನೆಗೆ ಉಲ್ಪಿ(ಬೇಳೆ, ಹಿಟ್ಟು, ಬೆಲ್ಲ, ಕೊಬ್ಬರಿ ಬಟ್ಟಲು)ಯನ್ನು ತೆಗೆದುಕೊಂಡು ಹೋಗಿ ಮೊದಲು ಕೊಬ್ಬರಿ ಬಟ್ಟಲಿಗೆ ಮುರವನ್ನು ಚುಚ್ಚಿ ಅನಂತರ ಮೂರು ತಿಂಗಳಿನ ಕೂಸಿಗೆ ಮುರ ಚುಚ್ಚುವ ಕಾರ್ಯಕ್ರಮವನ್ನು ಏರ್ಪಡಿಸುವರು. ನಂತರ ಆ ಕೂಸಿಗೆ ಕೈ ಮತ್ತು ಕಾಲುಗಳಲ್ಲಿ ಕರಿಮಣಿ, ಕಾಲಲ್ಲಿ ಹಾಲುಗಡುಗ, ಗೆಜ್ಜೆ ಪೆಂಡಿ, ಲಿಂಗದಕಾಯಿ, ಬೆಳ್ಳಿಯ ಉಡುದಾರ ಕೊರಳಲ್ಲಿ ಚೈನು ಹಾಕುವುದರ ಮೂಲಕ ಆ ಮಗುವನ್ನು ಸಿಂಗರಿಸಿ ತೊಟ್ಟಿಲ ಕಾರ್ಯವನ್ನು ಮಾಡುವರು.

೩.೧೦ ವೃತ್ತಿ

ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ಆದ ವೃತ್ತಿ ಇರುತ್ತದೆ. ನಾವು ಪ್ರಾಚೀನ ಕಾಲದ ಗ್ರಾಮದ ಚಿತ್ರಣವನ್ನು ನೋಡಿದಾಗ ಪ್ರತಿಯೊಂದು ಗ್ರಾಮವು ಸ್ವಯಂಪೂರ್ಣವಾಗಿತ್ತು. ಅವರ ಬೇಡಿಕೆ ಮತ್ತು ಪೂರೈಕೆಗಳು ಸಮತೋಲನದಲ್ಲಿದ್ದವು. ಪುರೋಹಿತರು, ಗ್ರಾಮಾಧಿಕಾರಿಗಳು, ಕೃಷಿಕರು, ನೇಕಾರರು, ಬಡಿಗಿಗಳು, ಕಮ್ಮಾರರು, ಕುಂಬಾರರು, ಕ್ಷೌರಿಕರು, ಅಸ್ಪೃಶ್ಯರಾದ ಚಮ್ಮಾರರು ಹೀಗೆ ಪ್ರತಿಯೊಬ್ಬರಿಗೂ ಕಸುಬು ಇತ್ತು. ಪ್ರತಿಯೊಬ್ಬ ಕಸುಬುದಾರನಿಗೂ ಒಂದೊಂದು ಕೆಲಸವಿತ್ತು. ಇವು ಮುಂದೆ ಪ್ರತಿಯೊಂದು ಸಮುದಾಯದ ಹುಟ್ಟಿಗೆ ಕಾರಣವಾಯಿತು.

ಹೀಗೆ ಗ್ರಾಮದಲ್ಲಿ ಎಲ್ಲಾ ಕಸುಬುದಾರರು ಒಟ್ಟಿಗೆ ವಾಸಿಸುವಂತಹ ವ್ಯವಸ್ಥೆಯನ್ನು ಕಾಣುತ್ತೇವೆ. ಹ್ಯಾರಡಾ ಗ್ರಾಮದಲ್ಲಿ ಸಹ ವಿವಿಧ ವೃತ್ತಿ, ಕಸುಬು ಮಾಡುವಂತಹ ವರ್ಗಗಳನ್ನು ಕಾಣುತ್ತೇವೆ. ಬಡಿಗತನ, ಕಮ್ಮಾರ, ಚಮ್ಮಾರ, ಕುರಿಗಾಹಿ, ಕೃಷಿಕ ಮುಂತಾದವರನ್ನು ಕಾಣಬಹುದಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ವೃತ್ತಿಯನ್ನು ಕೀಳರಿಮೆಯಿಂದ ನೋಡದೇ ಅತ್ಯಂತ ಶ್ರದ್ಧೆಯಿಂದ ವೃತ್ತಿ ಪಾಲನೆಯನ್ನು ಕಾಣುತ್ತೇವೆ. ತಮ್ಮ ಹೊಟ್ಟೆಪಾಡಿಗಾಗಿ ಪ್ರತಿಯೊಬ್ಬರೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಆದರೆ ಗ್ರಾಮದಲ್ಲಿ ಹೆಚ್ಚು ಹೆಚ್ಚು ವ್ಯಕ್ತಿಗಳು ಸುಶಿಕ್ಷಿತರಾಗುತ್ತಿದ್ದಂತೆಯೇ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಎಲ್ಲಾ ವೃತ್ತಿಯವರಲ್ಲಿ ತಮ್ಮ ಮೂಲ ವೃತ್ತಿಯ ಸ್ವರೂಪದಲ್ಲಿ ಬಹುತೇಕ ಬದಲಾವಣೆಯಾಗುವುದನ್ನು ಕಾಣಬಹುದಾಗಿದೆ. ಎಲ್ಲಾ ವೃತ್ತಿಯ ಮಕ್ಕಳು ಸಹ ಸರ್ಕಾರಿ ಶಾಲೆಗಳಿಗೆ ಹೋಗಿ ಅಕ್ಷರಗಳನ್ನು ಕಲಿತು ಇಂದು ಹಲವಾರು ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಹೂವಿನ ಹಡಗಲಿಯಲ್ಲಿಯೇ ಅತೀ ಹೆಚ್ಚು ಸರ್ಕಾರಿ ನೌಕರಿಯನ್ನು ಮಾಡುತ್ತಿರುವ ಸರ್ಕಾರಿ ಬಳಗದವರನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಸುಮಾರು ೩೦೦ ಕ್ಕಿಂತಲೂ ಹೆಚ್ಚು ಸರ್ಕಾರಿ ನೌಕರರನ್ನು ಕಾಣಬಹುದಾಗಿದೆ. ಇಂಜನಿಯರ್, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಪೋಲೀಸ್ ಅಧಿಕಾರಿಗಳು, ರೆವಿನ್ಯೂ ಇನ್‌ಸ್ಪೆಕ್ಟರ್, ನಿರ್ವಾಹಕರು, ಶಿಕ್ಷಕರು, ಉಪನ್ಯಾಸಕರು, ವೈದ್ಯರು, ಮಿಲಿಟರಿ ಅಧಿಕಾರಿಗಳು, ಗ್ರಾಮಲೆಕ್ಕಾಧಿಕಾರಿಗಳು, ಬ್ಯಾಂಕ್ ಉದ್ಯೋಗಿಗಳು, ನರ್ಸ್ ಮುಂತಾದ ಪ್ರಮುಖ ಹುದ್ದೆಯಲ್ಲಿದ್ದಾರೆ. ಹೀಗೆ ಗ್ರಾಮದಲ್ಲಿ ಬಹುತೇಕ ಜನರು ಸುಶಿಕ್ಷಿತರಾಗುತ್ತಿದ್ದಂತೆಯೇ ತಮ್ಮ ಮೂಲ ವೃತ್ತಿಯನ್ನು ಬಿಟ್ಟು ಸರ್ಕಾರಿ ನೌಕರಿಯನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ.

೩.೧೧ ಕ್ರೀಡೆಗಳು

ಗ್ರಾಮೀಣ ಭಾಗದಲ್ಲಿ ಜನಪದ ಕ್ರೀಡೆಗಳು ಬಹಳಷ್ಟು ಪ್ರಾಮುಖ್ಯವಾದವುಗಳು. ಈ ಜನಪದ ಕ್ರೀಡೆಗಳು ಮನೋರಂಜನೆಯನ್ನು ಒದಗಿಸುವುದರ ಜೊತೆಗೆ ಸಾಮಾಜಿಕ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಸಹಾಯಕವಾಗುತ್ತವೆ. ಹಬ್ಬ-ಹರಿದಿನಗಳಲ್ಲಿ ಜಾತ್ರೆಗಳಲ್ಲಿ ವಿಶೇಷವಾಗಿ ಜನಪದ ಕ್ರೀಡೆಗಳನ್ನು ಆಡುವುದು ಸರ್ವೇಸಾಮಾನ್ಯವಾಗಿದೆ. ಕೆಲವೊಂದು ಕ್ರೀಡೆಗಳನ್ನು ವಿಶೇಷ ಸಂದರ್ಭಗಳಲ್ಲಿ ಆಡುವುದುಂಟು. ಗ್ರಾಮೀಣ ಜನಪದರು ವಿಶೇಷವಾಗಿ ಬಿಡುವಿನ ವೇಳೆಯಲ್ಲಿ ಜನಪದ ಕ್ರೀಡೆಗಳನ್ನು ಆಯೋಜಿಸುವುದುಂಟು. ಇವುಗಳ ಮೂಲಕ ಸ್ಪರ್ಧಾ ಮನೋಭಾವವನ್ನು ಬೆಳೆಸುತ್ತವೆ. ಜನಪದ ಕ್ರೀಡೆಗಳು ಮನುಷ್ಯನ ಶಾರೀರಿಕ ಸದೃಡತೆಗೆ ಆದ್ಯತೆ ಕೊಡುವಂತೆ, ಮಾನಸಿಕವಾಗಿ ವ್ಯಕ್ತಿಯು ಬೆಳೆಯುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಅದರಂತೆಯೇ ಹ್ಯಾರಡಾ ಗ್ರಾಮವು ಜನಪದ ಕ್ರೀಡೆಗಳನ್ನು ಅನಾದಿಕಾಲದಿಂದಲೂ ಆಚರಿಸಿಕೊಂಡು ಬಂದಿದೆ. ಕ್ರೀಡೆಗಳು ಹ್ಯಾರಡಾ ಜನಪದರ

ಜೀವಾಳವಾಗಿವೆ. ಸಾಮಾಜಿಕ ಕ್ರೀಡೆಗಳು, ವೈಯಕ್ತಿಕ ಕ್ರೀಡೆಗಳು ಇಲ್ಲಿ ಪ್ರಾಮುಖ್ಯತೆಯನ್ನು ಪಡೆದಿವೆ. ಹ್ಯಾರಡಾ ಗ್ರಾಮದ ಜನಪದರ ಆಟಗಳನ್ನು ಕೆಳಕಂಡಂತೆ ವರ್ಗೀಕರಿಸಬಹುದು.

೧. ಗಂಡು-ಮಕ್ಕಳ ಆಟಗಳು

೨. ಹೆಣ್ಣು-ಮಕ್ಕಳ ಆಟಗಳು

೩. ಚಿಕ್ಕ ಮಕ್ಕಳ ಆಟಗಳು

೪. ಹೆಂಗಸರು ಮತ್ತು ಗಂಡಸರ ಆಟಗಳು

೫. ಪ್ರಾಣಿ ಸಂಬಂಧಿ ಆಟಗಳು

೦೧. ಗಂಡು ಮಕ್ಕಳ ಆಟಗಳು

ಅ) ಚಾವಂಗಿ ಆಟ: ಇದೊಂದು ಜನಪ್ರಿಯ ಆಟ. ಈ ಆಟವನ್ನು 'ಕಣ್ಣೇಮನೆ ಆಟ'ವೆಂದೂ ಕರೆಯುವರು. ಇಬ್ಬರು ಅಥವಾ ನಾಲ್ಕು ಜನರು ಗಂಡು ಮಕ್ಕಳು ಒಟ್ಟಿಗೆ ಆಡಬಹುದಾದ ಆಟ. ಐದು ಮನೆಗಳನ್ನು ಬರೆದುಕೊಂಡು ಆಟ ಆಡಬಹುದು. ಐದುಮನೆ ಆಟಕ್ಕೆ ನಾಲ್ಕು ಹುಣಸೆಬೇಳೆಗಳನ್ನು ಬಳಸುವರು. ಪ್ರತಿ ಮನೆಯ ಮಧ್ಯದ ಮನೆಗೆ 'ಘಟ್ಟ' ಎನ್ನುವರು. ಮಧ್ಯದಲ್ಲೊಂದು ಘಟ್ಟವನ್ನು ಬರೆಯಬೇಕು. ಪ್ರತಿಯೊಬ್ಬರೂ ನಾಲ್ಕು ನಾಲ್ಕು ಕಾಯಿಗಳನ್ನು ಬಳಸಬೇಕು. ಆಟ ಪ್ರಾರಂಭಿಸಿದಾಗ ಹುಣಸೆ ಪಟ್ಟಿಗಳನ್ನು ಕುಲುಕಿ ಬಿಡುವರು.

ನಾಲ್ಕು ಕಾಳುಗಳು ಅಂಗಾತ ಬಿದ್ದರೆ ನಾಲ್ಕು ಎಂದು ಪರಿಗಣಿಸುವರು. ಬೋರಲಾಗಿ ಬಿದ್ದರೆ ಎಂಟು ಎಂದು ಪರಿಗಣಿಸುವರು. ಘಟ್ಟದಲ್ಲಿ ಕಾಯಿ ಹೊಡೆಯುವ ಹಾಗಿಲ್ಲ. ಇತರೆ ಯಾವ ಮನೆಯಲ್ಲಾದರೂ ಕಾಯಿ ಹೊಡೆದು ಮುಂದಕ್ಕೆ ಹೋಗಬಹುದು. ಕಾಯಿ ಹೊಡೆದಿರುವ ಕಾಯಿಗಳನ್ನು ಅವರ ಮಾಮೂಲಿನ ಜಾಗದಲ್ಲಿಡಬೇಕು. ಕಾಯಿ ಹೊಡೆದ ನಂತರವೇ ಒಳ ಮನೆಗೆ ನುಗ್ಗುವ ಅವಕಾಶ ಉಂಟು. ಕಾಯಿ ಹೊಡೆಯದೆ ಇದ್ದರೆ ಒಳಗೆ ನುಗ್ಗುವ ಹಾಗಿಲ್ಲ, ಸುಮ್ಮನೆ ಎಲ್ಲ ಮನೆಗಳನ್ನು ಸುತ್ತುತ್ತಿರಬೇಕು.

ಆಟಕ್ಕೆ ಬಳಸಿರುವ ಎಲ್ಲಾ ಕಾಯಿಗಳನ್ನು ಘಟ್ಟದಲ್ಲಿ ಇಡುವರು. ಸೋತವರು ಆ ಕಾಯಿಗಳ ಮೇಲೆ ತನ್ನೆರಡು ಕೈಗಳನ್ನು ಸವರುತ್ತಾ ಇರಬೇಕು. ಗೆದ್ದವನು ಅವರ ಎರಡು ಕೈಗಳನ್ನು ನೆಲಕ್ಕೆ ಉಜ್ಜುತ್ತಿರಬೇಕು. ಸಮಯ ನೋಡಿ ಕೈ ಕಾಯಿಸುತ್ತಿರುವವರಿಗೆ ಚಟೀರ್ ಎಂದು ಹೊಡೆಯುತ್ತಾನೆ. ಗೆದ್ದವರು ಹೊಡೆಯಲು ಬಂದಾಗ ಕೈ ತಪ್ಪಿಸಿಕೊಂಡರೆ ಅವರಿಗೆ ಒಂದು ಕಾಯಿಯನ್ನು ಕೊಟ್ಟು ಬಿಡಬೇಕು. ಇದೇ ರೀತಿ ಎಲ್ಲಾ ಕಾಯಿಗಳನ್ನು ಸೋತವರು ಪುನಃ ಪಡೆದುಕೊಳ್ಳಬೇಕು.

ಆಟದಲ್ಲಿ ಚಾಣಾಕ್ಷ ಬುದ್ಧಿ ಇದ್ದವನು ಹೆಚ್ಚು ಏಟುಗಳನ್ನು ಹೊಡೆಸಿಕೊಳ್ಳದೇ ಎಲ್ಲಾ ಕಾಯಿಗಳನ್ನು ಪಡೆದುಕೊಳ್ಳುತ್ತಾನೆ. ಮಂದಬುದ್ಧಿಯವರಾದರೆ ಎರಡು ಕೈಗಳಿಗೂ ಏಟನ್ನು ಹೊಡೆಸಿಕೊಂಡು ಕೈ

ಊದಿಸಿಕೊಳ್ಳುತ್ತಾರೆ. ಗೆದ್ದವರು ಆಟದ ಬೇಳೆಗಳನ್ನು ಸರಿಬೆಸ ಆಟದಂತೆ ಕೈಯಲ್ಲಿ ಬಚ್ಚಿಟ್ಟುಕೊಂಡು ಎಷ್ಟು ಎಂದು ಕೇಳಿ ತಪ್ಪು ಹೇಳಿದರೆ ಅಷ್ಟು ಗುದ್ದು ಎಂದು ಎಣಿಸಿಕೊಂಡು ಸರಿಯಾಗಿ ಹೇಳಿದರೆ ಬೇಳೆಗಳನ್ನು ಕೊಟ್ಟು ಕೊನೆಯಲ್ಲಿ ಆದಷ್ಟು ಗುದ್ದುಗಳನ್ನು ಸೋತವನ ಕೈ ಮೇಲೆ ಕೊಡುವರು.

ಈ ಆಟವನ್ನು ವಿಶೇಷವಾಗಿ ಗ್ರಾಮೀಣ ಜನಪದರು ವಿರಾಮ ವೇಳೆಯಲ್ಲಿ ಆಡುವರು. ದಿನಪೂರ್ತಿ ದುಡಿದು ದಣಿವಾದಾಗ ವಿರಾಮ ವೇಳೆಯಲ್ಲಿ ವಿನೋದಕ್ಕಾಗಿ ಆಡುವರು. ಇದರ ಜೊತೆಗೆ ವಿಶೇಷವಾಗಿ ತಮ್ಮ ಮಕ್ಕಳಿಗೆ ಅಂಕೆ-ಸಂಖ್ಯೆಗಳ ಪರಿಕಲ್ಪನೆಯನ್ನು ಮೂಡಿಸಲು ಈ ಆಟವನ್ನು ಆಡುವರು. ಈ ಆಟದಲ್ಲಿ ಹುಣಸೆ ಬೀಜ ಮೇಲ್ಮುಖವಾಗಿ ಬಿದ್ದರೆ 'ನಾಲ್ಕು' ಎಂದೂ, ಅಂಗಾತವಾಗಿ ಬಿದ್ದರೆ 'ಎಂಟು' ಎಂದು ಪರಿಗಣಿಸುತ್ತಿದ್ದಾರೆ. ಇಂತಹ ಅಂಕಿ-ಸಂಖ್ಯೆಗಳ ಬುದ್ಧಿಮತ್ತೆಯನ್ನು ಚುರುಕುಗೊಳಿಸುವ ಪ್ರಯತ್ನವನ್ನು ನಾವಿಲ್ಲಿ ಕಾಣಬಹುದಾಗಿದೆ. ಏಕೆಂದರೆ ಈ ಆಟದಲ್ಲಿ ಒಂದು ಮನೆಯಿಂದ ಇನ್ನೊಂದು ಮನೆಗೆ ಕಾಯಿಯನ್ನು ಬಿಡುವಾಗ (ಸಾಗಿಸುವಾಗ) ಬಹಳಷ್ಟು ಯೋಚಿಸಿ, ಚಾಣಾಕ್ಷತನದಿಂದ ಬಿಡಬೇಕಾಗುತ್ತದೆ. ಇಲ್ಲದಿದ್ದರೆ ಎದುರಾಳಿಯ ದಾಳಿಗೆ ಕಾಯಿ ಆಹುತಿಯಾಗುವ ಸಂಭವ ಉಂಟು. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ತನ್ನ ಅಲೋಚನಾ ಶಕ್ತಿಯಿಂದ ಬಿಡಬೇಕು. ಆದ್ದರಿಂದ ತಮ್ಮಲ್ಲಿ ಹಾಗೂ ತಮ್ಮ ಮಕ್ಕಳಲ್ಲಿ ಆಲೋಚನಾ ಶಕ್ತಿಯು ವೃದ್ಧಿಯಾಗಲು ಈ ಆಟಗಳನ್ನು ಪ್ರಮುಖವಾಗಿ ಆಡುವರು.

ಸೋತ ವ್ಯಕ್ತಿಯು ಕೈ ಕಾಯಿಸುವಾಗ ಹೊಡೆತಗಳಿಂದ ಕೈ ತಪ್ಪಿಸುವುದು ಚಾಣಾಕ್ಷತನಕ್ಕೆ ಒಂದು ಉದಾಹರಣೆಯಾಗಿದೆ. ಇಂತಹ ಆಟಗಳಿಂದ ಗ್ರಾಮೀಣ ಜನಪದರು ತಮ್ಮ ಮನಸ್ಸು, ಬುದ್ಧಿ, ದೇಹವನ್ನು ಸಮತೋಲನ ಸ್ಥಿತಿಯನ್ನು ಕಾಪಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದರ ಮುಖೇನ ತಮ್ಮ ಸಾಮರಸ್ಯದ ಜೀವನವನ್ನು ಕಂಡುಕೊಂಡಿದ್ದಾರೆ.

ಆ) ಗೋಲಿ ಆಟ : ಈ ಆಟವೆಂದರೆ ಗಂಡು-ಮಕ್ಕಳಿಗೆ ಬಲು ಇಷ್ಟ. ಬಣ್ಣ-ಬಣ್ಣದ ಗೋಲಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದೆಂದರೆ ತುಂಬಾ ಖುಷಿ ಪಡುತ್ತಾರೆ. ಈ ಆಟ ಆಡುವುದಕ್ಕೆ ಇಬ್ಬರು, ನಾಲ್ಕು ಜನ ಅಥವಾ ಎಷ್ಟು ಜನ ಬೇಕಾದರೂ ಆಡಬಹುದು. ಮೊದಲಿಗೆ ನೆಲದ ಮಣ್ಣಿನಲ್ಲಿ ಒಂದು ಚಿಕ್ಕ ಗುಳಿಮಾಡುವರು. ಆ ಜಾಗದಲ್ಲಿ ಒಂದು ಗೋಲಿಯನ್ನು ಇಡುವರು. ನಾಲ್ಕು ಅಡಿ ದೂರದಲ್ಲಿ ಮತ್ತೊಬ್ಬ ನಿಂತುಕೊಂಡು ಗೋಲಿಯನ್ನು ಎಸೆಯುತ್ತಾನೆ. ಆ ಗೋಲಿ ನೆಲದಲ್ಲಿಟ್ಟಿರುವ ಗೋಲಿಗೆ ತಾಕುವಂತೆ ಇರಬೇಕು. ಇಲ್ಲವಾದರೆ ಒಂದು ಗುಳಿಯಲ್ಲಿ ಗೋಲಿಯನ್ನು ಇಟ್ಟು ಎಡಗೈನ ಮೂರನೇ ಬೆರಳನ್ನು ಉಪಯೋಗಿಸಿ ಬಲಗೈಯಿಂದ ಗೋಲಿಗೂ ಗುಳಿಯಲ್ಲಿಟ್ಟಿರುವ ಗೋಲಿಗೂ ತಾಕಿದರೆ ಆ ಗೋಲಿಯನ್ನು ಗೆದ್ದನೆಂದು ತೆಗೆದಿಟ್ಟುಕೊಳ್ಳುವರು.

ಗೋಲಿ ಆಟ ಆಡುವ ಮುನ್ನ ಜಾಗವನ್ನು ಪರಿಶೀಲಿಸಬೇಕು. ಅಂದರೆ ಮನೆಯ ಗೋಡೆಗಳು, ಅಗಸಿಯ ಕಟ್ಟೆಗಳ ಗೋಡೆಗಳು ಗೋಲಿ ಆಡುವ ಸ್ಥಳಗಳಾಗಿವೆ. ಆಟಗಾರರಲ್ಲಿ ಚಪ್ಪಾಳೆ ಮುಖಾಂತರ ಯಾರು ಮೊದಲು ಆಟ ಪ್ರಾರಂಭಿಸಿ ಹಾಗೆಯೇ ಕ್ರಮವಾಗಿ ಒಬ್ಬರಾದ ಮೇಲೆ ಮತ್ತೊಬ್ಬರಂತೆ ಸರದಿಯ ಸಾಲಿನಲ್ಲಿ ಆಟವಾಡುತ್ತಾರೆ. ಆ ಆಟಕ್ಕೆ ನಾಲ್ಕು ಐದು ಜನರಿದ್ದರೆ ಸಾಕು. ಜನಸಂಖ್ಯೆ ಹೆಚ್ಚಾದರೆ ಆಟದ ಸರದಿ ಬರುವುದು ತಡವಾಗುತ್ತದೆ. ಈ ಆಟವನ್ನು ಇಬ್ಬರೇ ಬೇಕಾದರೂ ಆಡಬಹುದು. ಸಮಯದ ಕಟ್ಟುಪಾಡಿಲ್ಲ. ಗೋಲಿ ಆಟ ಪ್ರಾರಂಭಿಸುವವರು ಮೊದಲು ಎರಡು ಗೋಲಿಗಳನ್ನು ಆಟದ ಅಖಾಡಕ್ಕೆ ಬಿಡುತ್ತಾರೆ. ಆಗ ಎದುರು ಪಾರ್ಟಿ ಯಾವ ಗೋಲಿಯನ್ನು ಆಟಗಾರ ಹೊಡೆಯಬೇಕು ಈ ಎರಡು ಗೋಲಿಗಳನ್ನು ಅಖಾಡಕ್ಕೆ ಬಿಟ್ಟಾಗ ಇವುಗಳಲ್ಲಿ ಒಂದು "ಗೋಲಿ ಹೊಡೆಯುವುದು" ಮತ್ತೊಂದು "ಗೋಲಿ ಹೊಡೆಸಿಕೊಳ್ಳುವುದು" ಇರುತ್ತವೆ. ಹೇಳಿದ ಗೋಲಿಗೆ ಹೊಡೆದರೆ ಆಟ ಆಡುತ್ತಿರುವವರು ಗೆದ್ದ ಹಾಗೆ. ಪುನಃ ಅವನೇ ಗೋಲಿಗಳನ್ನು ಬಿಟ್ಟು ಆಡುವನು. ಹಾಗೇನಾದರೂ ಹೇಳಿದ ಗೋಲಿ ಹೊಡೆಯದೇ ಹೋದರೆ ಮುಂದಿನ ಆಟವನ್ನು ಎದುರು ಪಾರ್ಟಿಯವರು ಪ್ರಾರಂಭಿಸಬೇಕಾಗುತ್ತದೆ.

ಗೋಲಿ ಅಖಾಡದಲ್ಲಿ ಯಾವ ಬದಿಯಲ್ಲಾದರೂ ಅಂದರೆ ಎತ್ತರದ ಜಾಗದಲ್ಲಿ ಗುಣಿಗಳನ್ನು ತೋಡಿರುತ್ತಾರೆ. ಸಾಮಾನ್ಯವಾಗಿ ಬಿಡುವ ಗೋಲಿಗಳು ಈ ಗುಣಿಗೆ ಯಾವುದಾದರೂ ಒಂದು ಹೊಕ್ಕರೆ ಆಟ ಆಡುತ್ತಿರುವವರು ಗೆದ್ದ ಹಾಗೆ. ಒಂದು ಪಾಯಿಂಟ್ ಬಂದಂತಾಗುತ್ತದೆ. ಗೋಲಿ ಆಟ ಆಡುವಾಗ ಬಳಕೆಯ ಪದಗಳು ಗೋಲಿ ಹೊಡೆಯುವುದು, ಗೋಲಿಹೊಡೆಸಿಕೊಳ್ಳುವುದು, ಚಿಟ್ಟಿ ಮಿಟ್ಟಿ, ಗುಣಿ ಇವುಗಳನ್ನು ಬಳಸುವರು.

ಗೋಲಿ ಆಟ ಆಡುವಾಗ ಹೇಳುವ ಹಾಡು

"ಎಕ್ಕಲ್ ಕಾಜಾ
ಡಬ್ಬೈ ರಾಜಾ
ತೀನಂ ತೀರ್ಪು
ಚಾರಂ ಚೆಂಡು
ಪಾಂಚಂ ಪಂಡು
ಸೀಯಂ ಡೋಲಿ
ಸಾತಲ್ ಗೋಟೆ
ಆಟಲ್ ಮಾಟಿಲ್
ನಬೈ ನೇಲಾ
ದಸ್ ಗಾನ್ ಗೇಲಾ

ಏಕ್ ಪಟೀಟಾ

ಡುಂ ದಡೇಲಾ" (ಡಾ. ನಗುವನಹಳ್ಳಿ ರತ್ನ ನಾಗರಾಜ : ೧೯೯೬:೧೯)

ಗೋಲಿ ಆಟದ ಮೇಲಿನ ಹಾಡಿನ ತಾತ್ಪರ್ಯ ಇದಾಗಿದೆ. ಮೇಲಿನ ಹಾಡಿನಲ್ಲಿ ಗೋಲಿಯ ಗಾತ್ರಗಳನ್ನು ಹೇಳುವ ಹಾಡು ಇದಾಗಿದೆ. ಗೋಲಿಯಲ್ಲಿ ವಿವಿಧ ಆಕಾರಗಳನ್ನು ನೋಡುತ್ತೇವೆ. ಕೆಲವು ಗೋಲಿಗಳು ಚಿಕ್ಕವು, ಇನ್ನು ಕೆಲವು ಮಧ್ಯಮ ಗಾತ್ರ, ಇನ್ನುಳಿದವು ದೊಡ್ಡ ಗಾತ್ರಗಳನ್ನು ಹೊಂದಿರುತ್ತವೆ. ಎಕ್ಕಲ್ ಕಾಜಾ-ಒಂದು ಗೋಲಿ ಚಿಕ್ಕ ಗಾತ್ರವನ್ನು ಹೊಂದಿದ್ದು, ಅದಕ್ಕೆ ಕಾಜಾ ಎನ್ನುವರು. ಡಬ್ಬೆ ರಾಜಾ-ಎರಡು ಗೋಲಿಯ ಗಾತ್ರವನ್ನು ಹೊಂದಿದ್ದು, ಇದಕ್ಕೆ ರಾಜಾ ಎಂದು ಕರೆಯುವರು. ತೀನಂ ತೀರ್ಪು- ಮೂರು ಗೋಲಿಗಳ ಗಾತ್ರದ ಗೋಲಿ ಅದಕ್ಕೆ ತೀರ್ಪುಎನ್ನುವರು. ಚಾರಂ ಚೆಂಡು-ನಾಲ್ಕು ಗೋಲಿಯ ಗಾತ್ರದ್ದು ಎಂದು ಕರೆಯುವರು. ಪಾಂಚಂ ಪಂಡು-ಐದು ಗೋಲಿಯ ಗಾತ್ರ ಇದಕ್ಕೆ ಪಂಡು ಎಂದು ಕರೆಯುವರು. ಸೀಯಂ ಡೋಲಿ- ಆರುಗೋಲಿಯ ಗಾತ್ರ, ಇದಕ್ಕೆ ಸೀಯಂ ಎಂದು ಕರೆಯುವರು. ಆಟಲ್ ಮಾಟಿಲ್-ಏಳು ಗೋಲಿಯ ಗಾತ್ರದ್ದು, ಇದಕ್ಕೆ ಮಾಟಿಲ್ ಎಂದು ಕರೆಯುವರು. ನಬೈನೇಲಾ- ಎಂಟು ಗೋಲಿಯ ಗಾತ್ರದ್ದು, ಇದಕ್ಕೆ ನೇಲಾ ಎಂದು ಕರೆಯುವರು. ದಸ್ ಗಾನ್ ಗೇಲಾ- ಒಂಭತ್ತು ಗೋಲಿಯ ಗಾತ್ರದ್ದು. ಇದಕ್ಕೆ ಗಾನ್ ಗೇಲಾ ಎಂದು ಕರೆಯುವರು. ಏಕ್ ಪಟೀಲಾ- ಹತ್ತು ಗೋಲಿಗಳ ಗಾತ್ರದ್ದು ಇದಕ್ಕೆ ಏಕ್ ಪಟೀಲಾ ಎಂದು ಕರೆಯುವುದುಂಟು. ಹೀಗೆ ಗೋಲಿಗಳ ವಿವಿಧ ಗಾತ್ರಗಳನ್ನು ಹಾಡಿನ ಮೂಲಕ ಹೇಳುವುದು ರೂಢಿಯಾಗಿದೆ.

ಗೋಲಿ ಆಟಗಳನ್ನು ಆಡುವುದರ ಪ್ರಮುಖ ಉದ್ದೇಶ ಮಕ್ಕಳ ಗುರಿ ಹಾಗೂ ಏಕಾಗ್ರತೆಯನ್ನು ಉದ್ದೀಪನಗೊಳಿಸುವ ಒಂದು ಆಟವಾಗಿದೆ. ಏಕೆಂದರೆ ದೂರದ ಒಂದು ಗೋಲಿಯನ್ನು ತನ್ನ ಬೆರಳುಗಳ ಚಾಣಾಕ್ಷತನದಿಂದ ಹೊಡೆದುರುಳಿಸಬೇಕಾದರೆ ಏಕಾಗ್ರತೆ, ತಾಳ್ಮೆಗುಣ ಬಹಳ ಮುಖ್ಯ. ಈ ಆಟಗಳನ್ನು ಮಕ್ಕಳು ಹೆಚ್ಚು ಹೆಚ್ಚು ಆಡುವುದರಿಂದ ದೈಹಿಕ ವ್ಯಾಯಾಮದ ಜೊತೆಗೆ ಮನಸ್ಸಿನ ಏಕಾಗ್ರತೆಯನ್ನು ಇಮ್ಮಡಿಗೊಳಿಸಬಹುದು. ಆದ್ದರಿಂದ ಬಿಡುವಿನ ವೇಳೆಯಲ್ಲಿ ಇದನ್ನು ಆಡುವುದುಂಟು. ಈಗಲೂ ಕೂಡ ಗೋಲಿ ಆಟವನ್ನು ಹ್ಯಾರಡಾ ಗ್ರಾಮದಲ್ಲಿ ಕಾಣಬಹುದಾಗಿದೆ. ಇನ್ನೊಂದು ವಿಶೇಷವೇನೆಂದರೆ ಗೋಲಿ ಆಟದ ಹಾಡಿನಲ್ಲಿಯೇ ವಿವಿಧ ಗಾತ್ರದ ಪರಿಚಯವನ್ನು ನಾವು ನೋಡಬಹುದು. ಅಂದರೆ ಮಕ್ಕಳಿಗೆ ವಿವಿಧ ಗಾತ್ರದ ಆಕಾರದ ಅನುಭವಗಳನ್ನು ಒದಗಿಸಬಹುದು. ಚಿಕ್ಕದು, ದೊಡ್ಡದು ಎಂಬ ಕಲ್ಪನೆಯನ್ನು ಮಕ್ಕಳಲ್ಲಿ ಮೂಡಿಸಬಹುದಾಗಿದೆ.

ಇ) ಲಗ್ಗೆ ಚೆಂಡಾಟ : ಇದು ಗಂಡು ಮಕ್ಕಳು ಆಡುವ ಆಟ. ಎಂಟು, ಹತ್ತು, ಚಪ್ಪಟೆಯಾದ ಕಲ್ಲುಗಳು ಅಥವಾ ಕಟ್ಟಿಗೆಯಿಂದ ತಯಾರಿಸಿದ ಚಪ್ಪಟೆ ವಸ್ತುಗಳು ಹಾಗೂ ಚೆಂಡನ್ನು ಹೊಂದಿರಬೇಕು. ಆಟವನ್ನು ಪ್ರಾರಂಭಿಸುವ ಮುಂಚಿತವಾಗಿ ಒಂದರ ಮೇಲೆ ಒಂದರಂತೆ ಚಪ್ಪಟೆ ಕಲ್ಲುಗಳು

ಅಥವಾ ಕಟ್ಟಿಗೆಯ ಚಪ್ಪಟೆಯ ವಸ್ತುಗಳನ್ನು ಜೋಡಿಸಬೇಕು. ಈ ಆಟದಲ್ಲಿ ಹಲವಾರು ವ್ಯಕ್ತಿಗಳ ಎರಡು ಗುಂಪುಗಳನ್ನಾಗಿ ಮಾಡಿಕೊಳ್ಳುವರು. ಲಗ್ಗೆಯನ್ನು ಪ್ರಾರಂಭಿಸುವುದು ಒಂದು ಗುಂಪು, ಲಗ್ಗೆಯನ್ನು ಜೋಡಿಸುವುದು ಇನ್ನೊಂದು ಗುಂಪಾಗಿದೆ.

ಆಟ ಪ್ರಾರಂಭಿಸಿದಾಗ ಒಂದು ಗುಂಪಿನಲೊಬ್ಬನು ದೂರದಲ್ಲಿ ನಿಂತುಕೊಂಡು ಚೆಂಡಿನಿಂದ ಲಗ್ಗೆಗೆ ಹೊಡೆಯುವನು. ಎದುರು ಪಾರ್ಟಿಯವರು ಚದುರಿ ಹೋದ ಕಲ್ಲುಗಳನ್ನೆಲ್ಲ ಒಂದೆಡೆ ಸೇರಿಸುವರು. ಎದುರಾಳಿಯ ಪಾರ್ಟಿಯವರು ಓಡಿ ಬಂದು ಕಲ್ಲು ಜೋಡಿಸುವವನ ಬೆನ್ನ ಮೇಲೆ ದಭ ದಭ ಎಂದು ಗುದ್ದಿ ಓಡಿ ಹೋಗುವರು. ಪ್ರತಿಯೊಬ್ಬನಿಗೂ ಮೂರು ಅವಕಾಶ ಉಂಟು. ಪ್ರತಿಯೊಬ್ಬನೂ ಚೆಂಡಿರುವವರಂತೆ ನಟಿಸಿ ಲಗ್ಗೆ ಕಾಯುತ್ತಿದ್ದ ಗುಂಪಿನವರನ್ನು ಲಗ್ಯೋ... ಲಗ್ಯೋ... ಲಗ್ಯೋ... ಎಂದು ಕೂಗುತ್ತಾ ಹೊಡೆಯಲು ಅಟ್ಟಿಸಿಕೊಂಡು ಹೋಗುವರು.

ಈ ಆಟವು ಮೇಲ್ನೋಟಕ್ಕೆ ವಿನೋದದಿಂದ ಕೂಡಿದ್ದರೂ ಸಹ ವ್ಯಕ್ತಿಯ ಚಾಣಕ್ಷತನವನ್ನು ಅನಾವರಣಗೊಳಿಸುವ ಒಂದು ಆಟವಾಗಿದೆ. ದೂರದಿಂದ ಲಗ್ಗೆಯನ್ನು ಹೊಡೆಯುವಾಗ, ಪುಟಿದು ಬರುವ ಚೆಂಡನ್ನು ಹಿಡಿಯುವಾಗ, ಲಗ್ಗೆಗಳನ್ನು ಒಂದರ ಮೇಲೊಂದು ಜೋಡಿಸುವಾಗ, ಬಹಳಷ್ಟು ಚಾಣಕ್ಷತನ, ಬುದ್ಧಿವಂತಿಕೆ ಬೇಕು. ಆದ್ದರಿಂದ ತಮ್ಮ ಮಕ್ಕಳ ಬುದ್ಧಿವಂತಿಕೆಯನ್ನು ಒರೆ ಹಚ್ಚುವುದನ್ನು ಈ ಆಟದಲ್ಲಿ ನೋಡಬಹುದಾಗಿದೆ. ಲಗ್ಗೆಯನ್ನು ಒಂದರ ಮೇಲೊಂದು ಹಚ್ಚುವಾಗ ವ್ಯಕ್ತಿ ಎಷ್ಟೇ ಶಕ್ತಿವಂತನಿದ್ದರೂ ಸರಿಯಾಗಿ ಜೋಡಿಸಲಾರ. ಕಡಿಮೆ ಶಕ್ತಿಯನ್ನು ಹೊಂದಿದ್ದರೂ ಜಾಣ್ಮೆ ಇದ್ದರೆ ಲಗ್ಗೆಯನ್ನು ಸರಿಯಾಗಿ ಜೋಡಿಸಬಲ್ಲ. ಆದ್ದರಿಂದ ವ್ಯಕ್ತಿಯ ದೈಹಿಕ ವ್ಯಾಯಾಮದ ಜೊತೆ ಜೊತೆಗೆ ಬುದ್ಧಿವಂತಿಕೆಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಈ) ಬುಗುರಿ ಆಟ : ಈ ಆಟದಲ್ಲಿ ಬಣ್ಣ ಬಣ್ಣದ ಬುಗುರಿಯನ್ನು ಮತ್ತು ದಾರವನ್ನು ಬಳಸುವರು. ಇದು ಸುಮಾರು ಆರು ಗಂಡು-ಮಕ್ಕಳು ಆಡುವರು. ಎಲ್ಲರೂ ತಮ್ಮ ತಮ್ಮ ಬುಗುರಿಗೆ ದಾರವನ್ನು ಸುತ್ತುವರು. ಒಟ್ಟಿಗೆ ಎಲ್ಲರೂ ಬುಗುರಿಯನ್ನು ಬಿಡುವರು. ಬುಗುರಿ ತಿರುಗುತ್ತಿದ್ದಂತೆಯೇ ದಾರದಿಂದ ಸುತ್ತಿ ಮೇಲೆಸೆಯುವರು. ದಾರದಿಂದಲೇ ಬುಗುರಿಯನ್ನು ಹಿಡಿಯುವರು. ಹಾಗೆ ಹಿಡಿಯದೆ ಬುಗುರಿಯನ್ನು ಕೆಳಗೆ ಬೀಳಿಸಿದವರು ಸೋತಂತೆ.

ಸೋತವರ ಬುಗುರಿಯನ್ನು ಬದ್ದಿನಲ್ಲಿ ಇಡಬೇಕು. ಗೆದ್ದವರು ನೇರವಾಗಿ ಬುಗುರಿಗೆ ಚಚ್ಚುವರು. ಕೆಲವರು ಆಡುತ್ತಿದ್ದ ಬುಗುರಿಯನ್ನು ದಾರದಿಂದ ಎತ್ತಿ ಆ ಬುಗುರಿಯಿಂದಲೇ ಹೊಡೆಯುವರು. ಇದಕ್ಕೆ "ಗುನ್ನ" ಹೊಡೆಯುವುದು ಎನ್ನುವರು. ಸಾಮಾನ್ಯವಾಗಿ ಈ ರೀತಿ ಮಾಡುತ್ತಿರುವಾಗ ಬುಗುರಿ ಎರಡು ಪಾಲಾಗುವುದೂ ಉಂಟು. ಯಾರು ಬೇಗನೇ ಬುಗುರಿಯನ್ನು ಬಿಡುವರು ಮತ್ತು ಆ ಬುಗುರಿಯನ್ನು ಬುಗುರಿ ದಾರದಿಂದ ಮೇಲೆತ್ತಿ ಹಿಡಿದುಕೊಳ್ಳುವರು ಎಂಬುದು ಮುಖ್ಯ. ಗಣೇಶನ ಹಬ್ಬದ ಸಮಯದಲ್ಲಿ ಹೆಚ್ಚು ಬುಗುರಿಯಾಟವನ್ನು ಆಡುವರು.

ಬುಗುರಿ ಆಟ ಇದೊಂದು ಮೋಜಿನ ಆಟವಾಗಿದೆ. ಚಿಕ್ಕ ಮಕ್ಕಳು ಬಹಳಷ್ಟು ಇಷ್ಟಪಡುವ ಆಟ. ಹಿರಿಯರಿಗೂ ಬಹು ಪ್ರೀತಿಯ ಆಟವಾಗಿದೆ. ಬಣ್ಣ ಬಣ್ಣದ ಬುಗುರಿಗಳು ತಿರುಗುವುದನ್ನು ನೋಡುವುದು ಬಹಳ ರಂಜನೀಯವಾದದು. ಕೃಷಿಕರು ವಿರಾಮ ವೇಳೆಯನ್ನು ಅತ್ಯಂತ ಉಲ್ಲಾಸದಿಂದ ಕಳೆಯಲು ಈ ಆಟವನ್ನು ಆಡುವರು. ಮಕ್ಕಳು ಹಾಗೂ ಯುವಕರು ಈ ಆಟವನ್ನು ಆಡುವುದರ ಮೂಲಕ ಮಾನಸಿಕ ದೃಢತೆಯನ್ನು ಕಂಡುಕೊಳ್ಳುವ ಒಂದು ಆಟವಾಗಿದೆ.

ಹಿರಿಯರು ಹೇಳುವಂತೆ "ಸದೃಡವಾದ ಮನಸ್ಸಿನಲ್ಲಿ ಸದೃಡವಾದ ದೇಹವಿರುತ್ತದೆ" ಎಂಬಂತೆ ದಿನವಿಡೀ ದೈಹಿಕ ಶ್ರಮವನ್ನು ಮಾಡಿದ ಯುವಕರಿಗೆ, ಮಕ್ಕಳ ಮನಸ್ಸಿಗೆ ನೆಮ್ಮದಿಯ ಟಾನಿಕ್ ಒದಗಿಸಲು ಇಂತಹ ಆಟಗಳನ್ನು ಆಡುವರು. ಮೊದ ಮೊದಲು ಗ್ರಾಮದಲ್ಲಿಯೇ ದೇಶೀಯವಾಗಿ ತಯಾರಿಸಿದ ಬುಗುರಿಗಳನ್ನು ಕಾಣಬಹುದಿತ್ತು. ಆ ಬುಗುರಿಗಳ ಮೇಲೆ ಕೆತ್ತನೆಯ ಕಲಾಕುಸರಿಗಳು ಮನೋಹರವಾಗಿದ್ದವು. ವಿವಿಧ ರೀತಿಯ ಬಣ್ಣಗಳ ಲೇಪನಗಳನ್ನು ಕಾಣಬಹುದಿತ್ತು. ಇದು ಗ್ರಾಮೀಣ ಜನಪದರ ಕಲೆಗೆ ಹಿಡಿದ ಕೈಗನ್ನಡಿಯಾಗಿದೆ. ಬುಗುರಿ ಜೋರಾಗಿ ತಿರುಗುವ ವೇಳೆ ವಿವಿಧ ರೀತಿಯ ಬಣ್ಣಗಳ ಗೋಚರವು ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಆದರೆ ಇತ್ತೀಚಿಗೆ ದೇಶೀಯವಾಗಿ ತಯಾರಿಸುವ ಬುಗುರಿಗಳು ಕಣ್ಮರೆಯಾಗಿ ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಬುಗುರಿಗಳನ್ನು ಕಾಣಬಹುದಾಗಿದೆ. ಇತ್ತೀಚಿಗೆ ಈ ಬುಗುರಿ ಆಟದ ಸಂಪ್ರದಾಯಕ್ಕೆ ಬಹುತೇಕ ಎಳ್ಳುನೀರು ಬಿಡಲಾಗಿದೆ. ಆದರೂ ಗ್ರಾಮೀಣ ಸಮುದಾಯಗಳಲ್ಲಿ ಅಲ್ಪ-ಸ್ವಲ್ಪ ಕಾಣಬುಹುದಾಗಿದೆ. ಇಂತಹ ವಿಶಿಷ್ಟ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುವುದು ನಮ್ಮೆಲ್ಲರ ತುರ್ತು ಕಾರ್ಯವಾಗಿದೆ.

ಉ) ಚಿನ್ನಿ ದಾಂಡು : ಈ ಆಟಕ್ಕೆ ನಾಲ್ಕು-ಐದು ಜನರಿದ್ದರೆ ಸಾಕು. ಇಬ್ಬರೇ ಬೇಕಾದರೂ ಈ ಆಟವನ್ನು ಆಡಬಹುದು. ವಿಶಾಲವಾದ ಮೈದಾನವಿದ್ದರೆ ಒಳ್ಳೆಯದು. ಈ ಆಟವನ್ನು ಆಡುವಾಗ ಗ್ರಾಮ್ಯ ಭಾಷೆಯ ವಿಶೇಷ ಪದಗಳನ್ನು ಬಳಸುವುದುಂಟು. ಅವುಗಳೆಂದರೆ ಚಿನ್ನಿ ದಾಂಡು ಹಾಗೂ ಚಿನ್ನಿಕೋಲು.

ಚಿನ್ನಿ ದಾಂಡು: ಸುಮಾರು ಐದರಿಂದ ಆರು ಇಂಚು ಉದ್ದವಿರುವ ಮರದಿಂದ ಮಾಡಿದ ವಸ್ತುವಾಗಿದೆ. ಇದರ ಸುತ್ತಳತೆ ಒಂದು ಇಂಚು ಹಾಗೂ ಇದರ ಒಂದು ತುದಿ ಚೂಪಾಗಿ ಮಾಡಿರುವರು.

ಚಿನ್ನಿಕೋಲು : ಸುಮಾರು ಮೂರು ಇಂಚು ಉದ್ದವಿರುವ ಚಿಕ್ಕದಾದ ಕಟ್ಟಿಗೆಯ ವಸ್ತುವಾಗಿದೆ. ಇದರ ಸುತ್ತಳತೆ ಒಂದು ಇಂಚಾಗಿದ್ದು, ಇದರ ಎರಡೂ ತುದಿ ಚೂಪಾಗಿ ಮಾಡಿರುವರು.

ಆಟ ಆಡುವ ವಿಧಾನ : ಚಿನ್ನಿ ಆಟ ಆಡುವ ಜಾಗದಲ್ಲಿ ಸ್ವಲ್ಪ ಮಣ್ಣನ್ನು ಕೆರೆಯುವರು. ಚಿನ್ನಿ ಪಿಚ್ಚು ಏಳಲು ಅನುಕೂಲವಾಗಿರುವಂತೆ ಇದನ್ನು ಮಾಡಿರುತ್ತಾರೆ. ಈ ಜಾಗದಿಂದ ಸುಮಾರು

ಮೂವತ್ತು ಅಡಿ ದೂರದಲ್ಲಿ ಒಂದು ಗೆರೆ ಎಳೆದಿರುವರು. ಈ ಪಟ್ಟಿಯಿಂದ ಹೊರಗೆ ಎದುರು ಪಾರ್ಟಿಯವರಿರುವರು. ಆಟ ಆಡುವ ಮತ್ತೊಂದು ಪಾರ್ಟಿಯವರು ಗುಳಿಯ ಹತ್ತಿರ ನಿಲ್ಲುವರು. ಒಬ್ಬೊಬ್ಬರಂತೆ ಆಟವನ್ನು ಆಡುವರು.

೧೦೦ ಪಾಯಿಂಟ್ - ಬ್ಯಾಂಕ್

೧೦ ಬ್ಯಾಂಕಿಗೆ - ೧ ಮೆಡ್ರಾಸ್ (ಕಚ್ಚೆ)

೧೦,೨೦,೩೦, ಇವು ಸ್ಕೋರುಗಳು

ಆಟ ಪ್ರಾರಂಭಿಸಿದಾಗ ಚಿನ್ನಿ ದಾಂಡುವಿನಿಂದ ಚಿನ್ನಿ ಕೋಲಿಗೆ ಮೂರು ಬಾರಿ ಹೊಡೆದು ಪಿಚ್ ಏಳಿಸಬೇಕು. ಒಂದು ವೇಳೆ ಚಿನ್ನಿದಾಂಡುವಿನ ಏಟು ಚಿನ್ನಿಕೋಲಿಗೆ ಬೀಳದೆ ನೆಲಕ್ಕೆ ಬಿದ್ದರೆ ಆ ವ್ಯಕ್ತಿ ಆಟದಿಂದ ಔಟ್ ಆಗುವನು. ಒಂದುವೇಳೆ ಚಿನ್ನಿಗೆ ಹೊಡೆದು ಅದು ನೆಲಕ್ಕೆ ಬೀಳುವ ಮುನ್ನ ಕ್ಯಾಚ್ ಮಾಡಿದರೆ ಎದುರಿನ ಪಾರ್ಟಿಯವರು ಎಲ್ಲರೂ ಔಟ್ ಆಗುವರು.

ಒಬ್ಬ ವ್ಯಕ್ತಿಯು ಆಟ ಆಡುವಾಗ ಚಿನ್ನಿಯನ್ನು ಹೊಡೆದಾಗ ಕನಿಷ್ಠ ಐದು ಅಡಿ ದೂರ ಹೋಗಬೇಕು. ಅದಕ್ಕಿಂತ ಕಡಿಮೆ ಅಳತೆ ಹೊಂದಿದರೆ ಆಡುತ್ತಿರುವ ವ್ಯಕ್ತಿ ಔಟ್ ಆಗುವನು. ಚಿನ್ನಿಯನ್ನು ಗುಣಿಯಿಂದ ಚಿಮ್ಮಿದಾಗ ಎದುರು ಪಾರ್ಟಿಯವರು ಅದನ್ನು ಹಿಡಿಯಲು ಪ್ರಯತ್ನಿಸುವರು. ಹೀಗೆ ಆಟವನ್ನು ಆಡುತ್ತಾ ಎರಡೂ ತಂಡದವರು ತಮ್ಮ ಸ್ಕೋರುಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಾರೆ. ಯಾರು ಅತೀ ಹೆಚ್ಚು ಸ್ಕೋರನ್ನು ಹೊಂದುತ್ತಾರೆಯೋ ಅವರು ಆಟದಲ್ಲಿ ಗೆದ್ದಂತೆ. ಗೆದ್ದ ಪಾರ್ಟಿಯವರು ಗುಣಿಯಿಂದ ಇನ್ನೊಂದು ಗೆರೆವರೆಗೆ ಕುಂಟುತ್ತಾ ಹೋಗುವಂತೆ ಶಿಕ್ಷೆ ಕೊಡುವರು. ನಂತರ ಸೋತವರು ಆಟವನ್ನು ಪ್ರಾರಂಭಿಸುವರು. ಹೀಗೆ ಆಟವು ಮುಂದುವರಿಯತ್ತಾ ಹೋಗುತ್ತದೆ.

ಈ ಆಟವು ಇತ್ತೀಚಿಗೆ ಬಹುತೇಕವಾಗಿ ಕಣ್ಮರೆಯಾಗುತ್ತಿದೆ. ಹ್ಯಾರಡಾದಂತಹ ಪುಟ್ಟ ಗ್ರಾಮಗಳಲ್ಲಿ ಇನ್ನೂ ಸ್ವಲ್ಪ ಜೀವಂತವಾಗಿದೆ. ಈ ಆಟದಿಂದ ಮಕ್ಕಳಿಗೆ ದೂರ, ಹತ್ತಿರ ಸಂಖ್ಯೆಗಳ ಕಲ್ಪನೆಯನ್ನು ಮೂಡಿಸಬಹುದು. ಉದಾ: ದಾಂಡುವಿನ ಅಳತೆ ಮಾಡುವಾಗ ಒಂದು ಪಾರ್ಟಿನವರು ೫೦ ದಾಂಡು ಎಂದರೆ, ಎದುರು ಪಾರ್ಟಿನವರು ಅಷ್ಟು ದಾಂಡು ಆಗುವುದಿಲ್ಲ ಎಂದು ಊಹಿಸುವರು. ಇದರಿಂದ ಮಕ್ಕಳಿಗೆ ಇಷ್ಟೇ ದೂರ ಆಗುವುದು ಎಂಬ ಊಹೆಯನ್ನು ಮಾಡಲಿಕ್ಕೆ ಅವಕಾಶವಿದೆ. ಅದರಂತೆಯೇ ಚಿಂತನಾ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಅವಕಾಶವಿದೆ. ನಂತರ ಸ್ಕೋರುಗಳನ್ನು ಎಣಿಸುವಾಗ ಅಂಕೆ ಸಂಖ್ಯೆಗಳ ಪರಿಕಲ್ಪನೆಯು ಆಗುವುದು. ಆದ್ದರಿಂದ ನಮ್ಮ ಪೂರ್ವಜರು ಇಂತಹ ಆಟಗಳಿಗೆ ಹೆಚ್ಚು ಆದ್ಯತೆಯನ್ನು ಕೊಡುತ್ತಿದ್ದರು.

೦೨. ಹೆಣ್ಣು ಮಕ್ಕಳ ಆಟಗಳು

ಅ) ತೂರೋ ಕಲ್ಲಾಟ : ಈ ಆಟಕ್ಕೆ ದುಂಡನೆಯ ಗಾತ್ರದ ನಾಲ್ಕು ಕಲ್ಲುಗಳನ್ನು ಬಳಸುವರು. ಕಲ್ಲುಗಳು ಒಂದೇ ಗಾತ್ರವಾಗಿರಬೇಕು. ಇಬ್ಬರು ಅಥವಾ ಹೆಚ್ಚು ಜನರು ಆಟ ಆಡಬಹುದು. ಆಟ ಪ್ರಾರಂಭಿಸಿದವರು ಒಂದು ಕಲ್ಲನ್ನು ಮೇಲಕ್ಕೆಸೆದು ಉಳಿದ ಮೂರು ಕಲ್ಲುಗಳನ್ನು ಒಂದೇ ಕಡೆ ಕೆಳಗಿಟ್ಟು ಮೇಲಕ್ಕೆಸೆದಿರುವ ಕಲ್ಲನ್ನು ಅಂಗೈ ಚಾಚಿ ಹಿಡಿದುಕೊಳ್ಳಬೇಕು. ಮೇಲೆ ಎಸೆದಿರುವ ಕಲ್ಲು ಕೆಳಗೆ ಬೀಳುವಷ್ಟರಲ್ಲಿ ಉಳಿದ ಎಲ್ಲಾ ಕಲ್ಲುಗಳನ್ನು ಆಯ್ದುಕೊಳ್ಳಬೇಕು. ಒಮ್ಮೊಮ್ಮೆ ಕಲ್ಲುಗಳು ಎಷ್ಟೇ ದೂರ ಬಿದ್ದಿದ್ದರೂ ಅವನ್ನೆಲ್ಲಾ ಒಟ್ಟುಗೂಡಿಸಿ ಆಯ್ದುಕೊಳ್ಳಬೇಕು. ಆಟ ಮುಗಿದ ನಂತರ ಗೆದ್ದವರು, ಸೋತಿರುವವರ "ಕೈ ಕಾಯಿಸುತ್ತಾರೆ". ಇದೇ ರೀತಿ ಕಲ್ಲು ಕೆಳಗೆ ಬೀಳಿಸುವವರೆಗೂ ಆಟ ಆಡಬಹುದು.

ಕಲ್ಲಾಟ ಆಡುವಾಗ ಹೇಳುವ ಪದ :

"ಒಂದು ಸೀಬ್ ಸೀಬಿ
ಎರಡು ಗರುಡಾಳ
ಮೂರು ಮುತ್ತಪ್ಪ
ನಾಲ್ಕು ನಾಗೇಂದ್ರ
ಐದು ಪಂಚಾಂಗ
ಆರು ದಾಳಿಂಬೆ
ಏಳು ಕೋಡಂಬಿ
ಎಂಟು ರಾಯರ ಗಂಟೆ
ಒಂಭತ್ತು ಗೊಮ್ಮಣ್ಣ ಗೋಲಿ
ಹತ್ತು ತುಮ್ಮಣ್ಣ ತಾಲಿ
ಹನ್ನೊಂದು ತುಂಬಿಕೋತು
ನಿನ್ನ ತಾಲಿ (ಡಾ. ನಗುವಿನಹಳ್ಳಿ ರತ್ನ ನಾಗರಾಜ : ೧೯೯೬:೦೬)

ಕಲ್ಲಿಗೆ ನೀರು ಕುಡಿಸುವುದು : ಆಟದಲ್ಲಿ ಬಳಸಿದ ಎಲ್ಲಾ ಕಲ್ಲುಗಳನ್ನು ಗೆದ್ದವರು ತಮ್ಮ ಮುಂದೆ ಇಟ್ಟುಕೊಳ್ಳುವರು. ಸೋತವರು ತಮ್ಮೆರಡು ಕೈಗಳನ್ನು (ನಮಸ್ಕಾರ ಮಾಡುವ ರೀತಿ ಜೋಡಿಸಿಕೊಂಡು) ಕೈಯನ್ನು ಉಜ್ಜುತ್ತಾ ಇರುವರು. ಗೆದ್ದವರು ತಮ್ಮ ಕೈಯನ್ನು ನೆಲಕ್ಕೆ ಉಜ್ಜುತ್ತಾ ಇರುವರು. ಸಮಯ ನೋಡಿ ಸೋತವರ ಕೈಗೆ ಚಟೀರ್ ಎಂದು ಹೊಡೆಯುವರು. ಹೀಗೆ ಹೊಡೆಯುವಾಗ ಬೀಳುವ ಏಟನ್ನು ತಪ್ಪಿಸಿಕೊಂಡರೆ ಸೋತವರಿಗೆ ಒಂದು ಕಲ್ಲನ್ನು ವಾಪಾಸ್ ಕೊಟ್ಟು ಬಿಡಬೇಕು. ಇದೇ ರೀತಿ ಎಲ್ಲಾ ಕಲ್ಲುಗಳನ್ನು ವಾಪಾಸ್ ಪಡೆಯಬೇಕು. ಅಲ್ಲಿಗೆ ತೂರೋ ಕಲ್ಲಾಟ ಮುಗಿಯುವುದು.

ಈ ಆಟವನ್ನು ಆಡುವ ಪ್ರಮುಖ ಉದ್ದೇಶವೆಂದರೆ ನಮ್ಮ ಪೂರ್ವಿಕರ ಸಮಯದಲ್ಲಿ ವರ್ಷವಿಡೀ ಮಳೆ ಆಗುತ್ತಿತ್ತು. ದಿನನಿತ್ಯದ ಚಟುವಟಿಕೆಗಳಿಗೂ ಆಸ್ಪದ ಕೊಡುತ್ತಿರಲಿಲ್ಲ. ಆದ್ದರಿಂದ ಕಲ್ಲನ್ನು ಮೇಲಕ್ಕೆ ತೂರಿ ಆಟ ಆಡುವುದರಿಂದ ಮಳೆಯು ಕಡಿಮೆ ಆಗುವುದು ಎಂಬ ನಂಬಿಕೆಯಿಂದ ಈ ಆಟವನ್ನು ಆಡುವರು. ಕಲ್ಲನ್ನು ಮೇಲಕ್ಕೆ ತೂರುವುದೆಂದರೆ ಮಳೆರಾಯನಿಗೆ ಕಲ್ಲನ್ನು ಹೊಡೆದು ನಿಲ್ಲಿಸುವುದು ಎಂದರ್ಥ. ಇಂತಹ ನಂಬಿಕೆಯನ್ನು ನಮ್ಮ ಜನಪದರು ಗಾಢವಾದ ಇಟ್ಟುಕೊಂಡಿರುವರು. ನಂಬಿಕೆಯೇ ಜೀವನದ ಆಧಾರಸ್ತಂಭವಾಗಿ ಇಂತಹ ಹಲವಾರು ನಂಬಿಕೆಗಳು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅದರಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳು ಪ್ರಾಮಾಣಿಕರು, ಮುಗ್ದರು ಅವರು ಏನೇ ಮಾಡಿದರೂ ದೇವರು ಕರುಣಿಸುವನು ಎಂದು ನಂಬಿದ್ದರು. ಆದ್ದರಿಂದಲೇ ಹೆಣ್ಣು ಮಕ್ಕಳೇ ಕಲ್ಲನ್ನು ಮೇಲಕ್ಕೆ ತೂರುವುದರಿಂದ ಮಳೆರಾಯ ತನ್ನ ಆರ್ಭಟವನ್ನು ನಿಲ್ಲಿಸುವನು ಎಂಬ ನಂಬಿಕೆ ಇವರಲ್ಲಿ ಈಗಲೂ ಚಾಲ್ತಿಯಲ್ಲಿದೆ. ಹೆಣ್ಣುಮಕ್ಕಳನ್ನು ಬಿಟ್ಟು ಗಂಡು ಮಕ್ಕಳಿಂದ ಏಕೆ ಈ ಆಟವನ್ನು ಆಡಿಸಲಿಲ್ಲ ಎಂಬ ಪ್ರಶ್ನೆ ಪ್ರಮುಖವಾಗಿ ನಿಲ್ಲುತ್ತದೆ. ಆದ್ದರಿಂದ ಜನಪದರು ಸ್ತ್ರೀಯ ಬಗ್ಗೆ ಅಪಾರವಾದ ಗೌರವವನ್ನಿಟ್ಟುಕೊಂಡಿದ್ದರು.

ಕಲ್ಲಾಟವನ್ನು ಆಡುವಾಗ ಹೇಳುವ ಹಾಡಿನಲ್ಲಿ ಹಲವಾರು ದೈವಗಳನ್ನು ಸ್ತುತಿಸಿರುವುದನ್ನು ನಾವುಗಳು ಕಾಣಬಹುದು. ಗರುಡಾಳ, ಮುತ್ತಪ್ಪ, ನಾಗೇಂದ್ರ, ಪಂಚಾಂಗ, ಕೊಡಂಬಿ, ಗೊಮ್ಮಣ್ಣ, ತುಮ್ಮಣ್ಣ ಮುಂತಾದ ದೈವಗಳನ್ನು ಸ್ತುತಿಸುವುದರ ಮೂಲಕ ಮಳೆಯರಾಯನಿಗೆ ಪ್ರಾರ್ಥನೆಯನ್ನು ಸಲ್ಲಿಸುವ ಪರಿಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಆ) ಕುಂಟೆ ಬಿಲ್ಲೆ ಆಟ : ಸಾಮಾನ್ಯವಾಗಿ ಹೆಣ್ಣು ಮಕ್ಕಳು ಹೆಚ್ಚು ಆಡುವ ಆಟವಾಗಿದೆ. ಈ ಆಟವನ್ನು ಹಳ್ಳಿಗಳಲ್ಲಿ 'ಕುಂಟೆಬಿಲ್ಲೆ' ಆಟ ಎನ್ನುವರು. ಚಚ್ಚೌಕವಾಗಿರುವ ನಾಲ್ಕು ಅಥವಾ ಆರು ಮನೆಗಳನ್ನು ಬರೆಯುವರು. ಹೆಂಚಿನ ಅಥವಾ ಮಡಿಕೆಯ ಚೂರನ್ನು ತೆಗೆದುಕೊಂಡು ದುಂಡಾಗಿ ತೇಯುವರು, ಅದಕ್ಕೆ ಬಚ್ಚ ಎನ್ನುವರು. ಬಚ್ಚವನ್ನು ಒಂದೊಂದು ಮನೆಗೂ ತಳ್ಳಬೇಕು. ಗೆರೆಯ ಮಧ್ಯದಲ್ಲಿ ಬಿದ್ದರೆ ಅವರು ಆಟವನ್ನು ನಿಲ್ಲಿಸಬೇಕು. ಇತರರು ಆಟ ಆಡಲು ಅವಕಾಶ ಕೊಡಬೇಕು. ಆಟ ನಿಲ್ಲಿಸದೆಯೇ ಜಾಗರೂಕತೆಯಿಂದ ಆಟ ಆಡಿದಾಗ ಮೊದಲನೇ ಮನೆಯು ಹಣ್ಣಾಗುವುದು. ಆ ಮನೆಗೆ ಬಚ್ಚದಿಂದ(x) ಗುರುತು ಮಾಡುವರು. ಕುಂಟೆಬಿಲ್ಲೆ ಆಡುವಾಗ ಹಣ್ಣಾಗಿರುವ ಮನೆಯನ್ನು ಕುಂಟುತ್ತಲೇ ದಾಟಬೇಕು. ಬಚ್ಚವನ್ನು ಅಂಗೈ ಮೇಲೆ, ಮುಂಗೈ ಮೇಲೆ, ತಲೆಯ ಮೇಲೆ, ಪಾದಗಳ ಮೇಲೆ ಇಟ್ಟುಕೊಂಡು ನಿಧಾನವಾಗಿ ಕುಂಟುತ್ತಾ ಆಟ ಆಡುವರು. ಯಾರು ಹೆಚ್ಚು ಮನೆಯನ್ನು ಹಣ್ಣು ಮಾಡುತ್ತಾರೋ ಅವರು ಆಟದಲ್ಲಿ ಗೆದ್ದಂತೆ.

ಇದೊಂದು ಕೇವಲ ಹೆಣ್ಣುಮಕ್ಕಳಿಗೆ ಮೀಸಲಾಗಿರುವ ಆಟವಾಗಿದೆ. ಬಹುತೇಕ ಹೆಣ್ಣು ಮಕ್ಕಳು ಈ ಆಟವನ್ನು ಆಡುತ್ತಾರೆ. ಈ ಆಟದಲ್ಲಿ ಆರು ಚೌಕವಾಗಿರುವ ಮನೆಗಳನ್ನು ಕಾಣಬಹುದಾಗಿದೆ.

ಒಂದೊಂದು ಮನೆಯನ್ನು ಹಣ್ಣು ಮಾಡುವುದರ ಮೂಲಕ ಆರೂ ಮನೆಗಳನ್ನು ಹಣ್ಣು ಮಾಡಿ ಕೊನೆಗೆ ಗೆಲ್ಲುವರು. ಈ ಕುಂಟೆಬಿಲ್ಲೆ ಆಟದಲ್ಲಿ ಹೆಣ್ಣಿನ ಜೀವನದ ಸಾರವನ್ನು ತಿಳಿಸಿಕೊಡುತ್ತದೆ. ಮೊದಲನೇಯ ಮನೆ ಹೆಣ್ಣಿನ ತವರು ಮನೆ, ಈ ಮನೆಯನ್ನು ಮೊದಲು ಗೆಲ್ಲುವಳು. ಎರಡನೇಯ ಮನೆ ಗಂಡನ ಮನೆ, ಈ ಮನೆಯನ್ನು ಗೆಲ್ಲುವಳು. ಮೂರನೇಯ ಮನೆ ಅತ್ತೆಯ ಸೇವೆಯ ಮನೆ, ಈ ಮನೆಯನ್ನು ಗೆಲ್ಲುವಳು. ನಾಲ್ಕನೇಯ ಮನೆ ಮಾವನ ಸೇವೆಯ ಮನೆ, ಈ ಮನೆಯನ್ನು ಗೆಲ್ಲುವಳು. ಐದನೇಯ ಮನೆ ಸೊಸೆಯ ಆರೈಕೆಯಿಂದ ಗೆಲ್ಲುವ ಮನೆ. ಆರನೇ ಮನೆ ಮೊಮ್ಮಕ್ಕಳು ಪ್ರೀತಿಯನ್ನು ಕಂಡು ಮೋಕ್ಷಕ್ಕೆ ಪ್ರಾಪ್ತವಾಗುವ ಮನೆಯಾಗಿದೆ. ಹೀಗೆ ಒಂದು ಹೆಣ್ಣು ತನ್ನ ಜೀವನದ ಪ್ರತಿಯೊಂದು ಹಂತದಲ್ಲಿಯೂ ಗೆಲುವನ್ನು ಸಾಧಿಸಿ ಮೋಕ್ಷವನ್ನು ಪಡೆಯುವ ಒಂದು ರಹದಾರಿಯಾಗಿದೆ. ಆದ್ದರಿಂದ ನಮ್ಮ ಪೂರ್ವಜರು ಹೆಣ್ಣುಮಕ್ಕಳಿಗೆಂದೇ ಈ ಆಟವನ್ನು ಮೀಸಲಿಟ್ಟಿರುವರು.

ಇ) ಅರಳುಮಣೆ ಆಟ : ಈ ಆಟಕ್ಕೆ ಹಳ್ಳಿಗಳಲ್ಲಿ "ಹರಳು ಮಣೆ" ಆಟ ಎಂದು ಕರೆಯುತ್ತಾರೆ. ಏಳು ಏಳು ಗುಳಿಗಳನ್ನು ಮಾಡಿದ ಮರದ ಮಣೆ ಇರುತ್ತದೆ. ಪ್ರತಿಯೊಂದು ಗುಳಿಗೂ ಐದೈದು ಹುಣಸೆ ಬೀಜಗಳನ್ನು ತುಂಬಿರುತ್ತಾರೆ.

ಅರಳು ಮಣೆಯಲ್ಲಿ ಏಳುಗುಳಿಗಳಿದ್ದು, ಏಳು ಗುಳಿಗೂ ಐದು ಐದು ಕಾಳುಗಳನ್ನು ತುಂಬುವರು. ಇಬ್ಬರು ಆಟವಾಡಬೇಕು. ಒಬ್ಬರು ಒಂದು ಕಡೆಯ ಸಾಲನ್ನೂ ಇನ್ನೊಬ್ಬರು ಇನ್ನೊಂದು ಕಡೆಯ ಸಾಲನ್ನೂ ತಮ್ಮದೆಂದು ಕರೆದುಕೊಳ್ಳುತ್ತಾರೆ. ಆಟದ ಪ್ರಾರಂಭದಲ್ಲಿ ಯಾವುದಾದರೊಂದು ಗುಳಿಯನ್ನು ತೆಗೆದು ಬಲಭಾಗದಿಂದ ಒಂದೊಂದು ಕಾಳಂತೆ ಹಾಕುತ್ತಾ ಹೋಗುತ್ತಾರೆ. ಕಾಳು ಮುಗಿದಾಗ ಮುಂದಿನ ಮನೆಯ ಕಾಳನ್ನು ತೆಗೆದುಕೊಂಡು ಪ್ರತಿಯೊಂದು ಮನೆಗೂ ಒಂದೊಂದು ಹಾಕುತ್ತಿರಬೇಕು. ಯಾವ ಮನೆಯಲ್ಲಿ ನಾಲ್ಕು ಕಾಳು ಸೇರಿರುತ್ತದೆಯೋ ಆ ಕಾಳುಗಳನ್ನು 'ಕರು ಹಾಕಿದೆ' ಎಂದು ಕರೆದು ಆ ಸಾಲಿನವರು ಎತ್ತಿಟ್ಟುಕೊಳ್ಳವರು. ಕಾಳುಗಳನ್ನು ಹಾಕುವಾಗ ಒಂದು ಮನೆಯಲ್ಲಿ ಏನೂ ಇಲ್ಲದೆ ಇದ್ದಾಗ ಆ ಗುಳಿಯನ್ನು ಕೈಯಿಂದ ಸವರಿ ಮುಂದಿನ ಮನೆಯ ಎಲ್ಲಾ ಕಾಳುಗಳನ್ನೂ ಆಡುವವರು ಎತ್ತಿಟ್ಟುಕೊಳ್ಳಬಹುದು. ಆಗ ಅವರ ಆಟ ಮುಗಿಯಿತು. ಅನಂತರ ಮತ್ತೊಬ್ಬರು ಆಟವಾಡುತ್ತಾರೆ. ಇಬ್ಬರೂ ಆಟ ಆಡಿದ ಅನಂತರ ಎಲ್ಲಾ ಗುಳಿಗಳಿಗೂ ಐದೈದರಂತೆ ಕಾಳುಗಳನ್ನು ತುಂಬಬೇಕು. ಇಬ್ಬರಲ್ಲಿ ಒಬ್ಬರು ಗೆದ್ದು ಮತ್ತೊಬ್ಬರಿಗೆ ಕಾಳುಗಳು ಕಡಿಮೆ ಆಗಿರುತ್ತವೆ. ಆಗ 'ಪಿಗ್ಗಿ ಬಿದ್ದಿವೆ' ಎಂದು ಆ ಗುಳಿಗಳಿಗೆ ಕಾಗದದ ಚೂರುಗಳನ್ನೊ ಅಥವಾ ಕಡ್ಡಿಚೂರುಗಳನ್ನೊ ಹಾಕುತ್ತಾರೆ.

ಅಳ್ಳುಗುಳಿ ಮಣೆ ಆಟವನ್ನು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಆಡುವುದುಂಟು. ಈ ಆಟದಲ್ಲಿ ಪ್ರಮುಖವಾಗಿ ಮಕ್ಕಳಿಗೆ ಸರಿ-ಬೆಸ ಕಲ್ಪನೆಯನ್ನು ಮೂಡಿಸುವ ಆಟವಾಗಿದೆ. ನಾಲ್ಕು ಕಾಳುಗಳು ಸೇರುವ ಗುಳಿಯನ್ನು 'ಕರುಹಾಕಿದೆ' ಎಂದು ಪರಿಗಣಿಸುವರು. ಇದು 'ಸರಿ' ಸಂಖ್ಯೆಯ ಪರಿಕಲ್ಪನೆಯನ್ನು

ಮೂಡಿಸುವುದಾಗಿದೆ. ಒಂದೊಂದು ಗುಳಿಗಳಿಗೆ ಆಟದ ಪ್ರಾರಂಭದಲ್ಲಿ ಐದೈದು ಕಾಳುಗಳನ್ನು ಹಾಕುವುದುಂಟು, ಇದು 'ಬೆಸ' ಸಂಖ್ಯೆಯ ಪರಿಕಲ್ಪನೆಯನ್ನು ಮೂಡಿಸುವುದಾಗಿದೆ. ಹೀಗೆ ಮಕ್ಕಳಲ್ಲಿ ಸಂಖ್ಯಾ ಶಾಸ್ತ್ರದ ಪರಿಕಲ್ಪನೆಯನ್ನು ಮೂಡಿಸುವುದು ಈ ಆಟದ ಪ್ರಮುಖ ಉದ್ದೇಶವಾಗಿದೆ.

ಈ) ರತ್ತೋ ರತ್ತೋ ಆಟ : ಹೆಣ್ಣು ಮಕ್ಕಳೆಲ್ಲಾ ನೇರವಾಗಿ ನಿಲ್ಲುವರು. ಒಬ್ಬರಿಗೊಬ್ಬರು ಕೈ ಕಟ್ಟಿಕೊಂಡು "ರತ್ತೋ ರತ್ತೋ ರಾಯನ ಮಗಳೇ, ಬಿತ್ತೋ ಬಿತ್ತೋ ಭೀಮನ ಮಗಳೇ ಹದಿನಾರೆಮ್ಮೆ ಕಾಯಲಾರೆ, ಕಾಸಲಾರೆ, ಬೈಟ್ ಗುಬ್ಬಿ ಬಾಳೇಕಂಬ, ಕುಕ್ಕರ ಬಸವಿ, ಕೂರು ಬಸವಿ," ಎಂದು ತತ್ ಕ್ಷಣ ಎಲ್ಲರೂ ಕೆಳಗೆ ಕುಳಿತುಕೊಳ್ಳುವರು, ಕೊನೆಯಲ್ಲಿ ಕುಳಿತವರು ಸೋತಂತೆ, ಎಲ್ಲರೂ ಆಕೆಯ ತಲೆಯ ಮೇಲೆ ಕೈ ಹಾಕಿ "ಕುಕ್ಕರ ಬಸವಿ ಕೂರು ಬಸವಿ" ಎಂದು ಬಲತ್ಕಾರವಾಗಿ ಎಲ್ಲರೂ ಕೂರಿಸುವರು.

ಆಗ ಅವಳನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು ಎಲ್ಲರೂ ಮೊದಲಿನಂತೆ ರತ್ತೋ ರತ್ತೋ ರಾಯನ ಮಗಳೇ ಎಂದು ಸುತ್ತಲೂ ತಿರುಗುವರು. ಇದೇ ರೀತಿ ಎಲ್ಲರಿಗೂ ಒಂದು ಸರದಿ ಬರುವುದು.

ಈ ಆಟವನ್ನು ಸಾಮಾನ್ಯವಾಗಿ ಹೆಣ್ಣುಮಕ್ಕಳು ಹಬ್ಬ-ಹರಿದಿನದ ಸಂದರ್ಭದಲ್ಲಿ ಆಡುವುದುಂಟು. ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಯಿಂದ ಬಂದಾಗ ತನ್ನ ವಾರಿಗೆಯ ಗೆಳತಿಯರೊಂದಿಗೆ ಯೋಗಕ್ಷೇಮವನ್ನು ವಿಚಾರಿಸಿ ಸಂತೋಷದಿಂದ ಆಡುವ ಆಟ ಇದಾಗಿದೆ. ತನ್ನ ಆಸರಿಕೆ, ಬ್ಯಾಸರಿಕೆಯನ್ನು ಗೆಳತಿಯರಲ್ಲಿ ಹೇಳಿಕೊಳ್ಳುವ ಸಂದರ್ಭ ಇದಾಗಿದೆ. ಅವರ ಹಾಡಿನಲ್ಲಿಯೇ ತಮ್ಮ ಅಭಿಪ್ರಾಯವನ್ನು ತನ್ನ ಗೆಳತಿಯರಿಗೆ ತಿಳಿಸುವರು " ನಾನು ತವರಿನಲ್ಲಿ ಇದ್ದಾಗ ರಾಯರ ಮಗಳಾಗಿದ್ದೆ, ಭೀಮನ ಮಗಳಾಗಿದ್ದೆ, ಆದರೆ ಗಂಡನ ಮನೆಯಲ್ಲಿ ಎಮ್ಮೆಗಳನ್ನು ಕಾಯಬೇಕು, ಹೊಲ-ಮನೆಯ ಕೆಲಸವನ್ನು ಮಾಡಬೇಕು, ಬಸವ(ಎತ್ತು) ಹೇಗೆ ಕೆಲಸ ಮಾಡುತ್ತದೆಯೋ ಹಾಗೆ ಕೆಲಸವನ್ನು ಮಾಡಬೇಕು ಎಂದು ತನ್ನ ಅಳಲನ್ನು ಗೆಳತಿಯರಲ್ಲಿ ತೋಡಿಕೊಳ್ಳುವಳು. ಆದ್ದರಿಂದ ಆಕೆ ತನ್ನನ್ನು ತಾನು ಕುಕ್ಕರ ಬಸವಿ, ಕೂರು ಬಸವಿ ಎಂದು ಅಂದುಕೊಂಡಿದ್ದಾಳೆ. ಹೀಗೆ ತನ್ನ ವಾರಿಗೆಯ ಗೆಳತಿಯರೊಂದಿಗೆ ಕಷ್ಟ ಸುಖಗಳನ್ನು ಹಂಚಿಕೊಂಡು ಆಡುವ ಆಟ ಇದಾಗಿದೆ.

೩. ಚಿಕ್ಕ ಮಕ್ಕಳ ಆಟಗಳು

ಅ) ಕಣ್ಣೇ ಮುಚ್ಚೆ ಗಾಡೆ ಗೂಡೆ ಆಟ : ಪುಟಾಣಿಗಳಿಗೆ ಬಹು ಇಷ್ಟವಾದ ಆಟವಾಗಿದೆ. ಈ ಆಟವನ್ನು "ಅವುತುಗುಮ್ಮನೆ" ಆಟವೆಂದೂ ಕರೆಯುವುದುಂಟು. ಸುಮಾರು ಐದು ಆರು ಮಕ್ಕಳು ಈ ಆಟವಾಡುವರು. ಒಬ್ಬರು ಅಜ್ಜಿಯಿಂದ ಕಣ್ಣು ಮುಚ್ಚಿಸಿಕೊಳ್ಳುವರು. "ಕಣ್ಣೇ ಮುಚ್ಚೆ ಕಾಡೇಗೂಡೆ, ಉದ್ದಿನ ಮೂಟೆ ಉರುಳೇ ಹೋಯ್ತು, ನಮ್ಮಯ ಹಕ್ಕಿ ಬಿಟ್ಟೇ ಬಿಟ್ಟೇ ಎಲ್ಲರೂ ಬಚ್ಚಿಟ್ಟುಕೊಳ್ಳಿ" ಎಂದು ಅಜ್ಜಿ ಹೇಳಿ ಕಣ್ಣು ಮುಚ್ಚುವರು. ಉಳಿದವರು ಅವಿತುಕೊಳ್ಳುವರು, ಕಣ್ಣು ಮುಚ್ಚಿದವರನ್ನು ಬಿಟ್ಟು ಕೂಡಲೇ ಅವರು ಇತರರನ್ನು ಹುಡುಕುವುದಕ್ಕಾಗಿ ಓಡುವರು.

ಅವಿತುಕೊಂಡಿರುವವರು ಇನ್ನೊಂದು ಕಡೆಯಿಂದ ಓಡಿ ಬಂದು ಅಜ್ಜಿಯನ್ನು ಮುಟ್ಟಿ ಬಿಟ್ಟರೆ ಅವರೆ ಮತ್ತೆ ಕಣ್ಣನ್ನು ಮುಚ್ಚಿಸಿಕೊಳ್ಳಬೇಕಾಗಿರುತ್ತದೆ. ಪ್ರತಿಯೊಂದು ಮಗುವಿಗೂ ಒಂದೊಂದು ಸಾರಿ ಕಣ್ಣು ಮುಚ್ಚಿಸಿಕೊಳ್ಳುವ ಅವಕಾಶ ಬರುತ್ತದೆ.

ಮಕ್ಕಳಿಗೆ ಮನೆಯಲ್ಲಿ ಅಜ್ಜಿ ಅಂದರೆ ಬಹಳ ಪ್ರೀತಿ. ಅದರಲ್ಲಿ ಅಜ್ಜಿಯ ಕಥೆ, ಹಾಡು ಅಂದರೆ ಇನ್ನೂ ಪ್ರೀತಿಯಿಂದ ಇಷ್ಟಪಡುತ್ತಾರೆ. ಈ ಆಟದಲ್ಲಿ ಅಜ್ಜಿಯ ಬಾಯಿಂದ 'ಕಣ್ಣೆಮುಚ್ಚೆ ಕಾಡೇಗೂಡೇ..... ಎನ್ನುವ ಹಾಡು ಮಕ್ಕಳಿಗೆ ಬಲು ಇಷ್ಟ ಈ ಆಟದಿಂದ ಚಿಕ್ಕ ಮಕ್ಕಳು ಕುಟುಂಬದ ಹಿರಿಯ ಜೀವಗಳಿಗೆ ಗೌರವ, ಪ್ರೀತಿ ಕೊಡುವ ಸಂಸ್ಕೃತಿಯ ಮಾನವೀಯ ಮೌಲ್ಯಗಳ ಹೂರಣವನ್ನು ಮಕ್ಕಳಲ್ಲಿ ಬೆಳೆಸಬಹುದಾಗಿದೆ.

ಆ) ಅವರ್ ಬಿಟ್ ಇವರ್ ಯ್ಯಾರು ಆಟ : ಇದು ಹೆಚ್ಚು ಕಡಿಮೆ ಕಣ್ಣೇ ಮುಚ್ಚೇ ಆಟದ ತರಹ. ಒಬ್ಬ ಅಜ್ಜಿಯಿಂದ ಕಣ್ಣನ್ನು ಮುಚ್ಚಿಸಿಕೊಳ್ಳಬೇಕು. ಇತರರೆಲ್ಲರೂ ಅಜ್ಜಿಯ ಮುಂಭಾಗದಲ್ಲಿ ಸಾಲಾಗಿ ನಿಲ್ಲಬೇಕು. ಅಜ್ಜಿಯೂ ಕಣ್ಣು ಮುಚ್ಚಿಸಿಕೊಂಡವರ ತೋರು ಬೆರಳನ್ನು ಹಿಡಿದುಕೊಂಡು......

"ಅವರ ಬಿಟ್

ಇವರ ಬಿಟ್

ಅವರು ಯಾರು..?

ಎಂದು ಎಲ್ಲರನ್ನೂ ತೋರಿಸಿ ಕಡೆಗೆ ಒಬ್ಬರ ಮುಂದೆ ಕೈ ಬೆರಳನ್ನು ತೋರಿಸುವರು. ಕಣ್ಣು ಮುಚ್ಚಿಸಿಕೊಂಡಿರುವವರು ಅವರ ಹೆಸರನ್ನು ಸರಿಯಾಗಿ ಸೂಚಿಸಿ ಹೇಳಿದರೆ ಅವರೇ ಕಣ್ಣು ಮುಚ್ಚಿಸಿಕೊಳ್ಳಬೇಕು. ಹೆಸರನ್ನು ಸರಿಯಾಗಿ ಹೇಳದಿದ್ದರೆ ಎಲ್ಲರೂ ಒಂದೊಂದು ಕಡೆ ಅವಿತು ಕೊಂಡಿರುವರು. ಕಣ್ಣು ಮುಚ್ಚಿಸಿಕೊಂಡವರು ಓಡಿ ಹೋಗಿ ಅವರನ್ನು ಹಿಡಿದುಕೊಂಡು ಬರಬೇಕು. ಯಾರೂ ಸಿಗದಿದ್ದರೆ ಮತ್ತೆ ಅವರೇ ಕಣ್ಣು ಮುಚ್ಚಿಸಿಕೊಳ್ಳುತ್ತಾರೆ.

ಈ ಆಟವು ಮುದ್ದಿನ ಅಜ್ಜಿಯ ಜೊತೆ ಚಿಕ್ಕ ಮಕ್ಕಳು ಆಡುವ ಆಟವಾಗಿದೆ. ಮಕ್ಕಳು ಅವಿತು ಕುಳಿತುಕೊಳ್ಳುವುದರಲ್ಲಿ ಬಹಳ ಖುಷಿ. ಮಕ್ಕಳ ಮನಸ್ಸನ್ನು ರಂಜಿಸಲು ಇಂತಹ ಆಟಗಳನ್ನು ಆಡುವರು. ಹಳ್ಳಿಗಳಲ್ಲಿ ಈ ಆಟವು ಸರ್ವೇಸಾಮಾನ್ಯವಾದುದು. ಮಕ್ಕಳು ಒಟ್ಟಿಗೆ ಸೇರಿ ಅವಿತುಕೊಳ್ಳುವುದು, ಅವರನ್ನು ಹಿಡಿದು ತರುವುದು ಮಕ್ಕಳಿಗೆ ಬಹಳಷ್ಟು ರಂಜನೆಯನ್ನು ಒದಗಿಸುತ್ತದೆ. ಮಕ್ಕಳು ಖುಷಿಯಿಂದ ಇರುವುದಕ್ಕೆ ಈ ಆಟವನ್ನು ಆಡುವುದುಂಟು.

ಇ) ಉಪ್ಪಿನಕಾಯಿ ಆಟ : ಹಳ್ಳಿಗಳಲ್ಲಿ ಹೆಚ್ಚಾಗಿ ಮೇಲುಮುದ್ದಿಯ ಜಂತಿ ಮನೆಗಳನ್ನು ಕಾಣಬಹುದು. ಇಂತಹ ಮನೆಗಳು ಹಲವಾರು ಕಂಬಗಳನ್ನು ಹೊಂದಿರುತ್ತವೆ. ಈ ಕಂಬಗಳ ಸಹಾಯದಿಂದ ಆಡುವ ಆಟ ಇದಾಗಿದೆ. ಸಾಮಾನ್ಯವಾಗಿ ಐದು, ಆರು ಮಕ್ಕಳು ಸೇರಿಕೊಂಡು

ಈ ಆಟ ಆಡುವರು. ಕಂಬಗಳಿಗೆ ಒಬ್ಬೊಬ್ಬರಂತೆ ಒಂದೊಂದು ಕಂಬವನ್ನು ಒರಗಿ ನಿಲ್ಲುವರು. ಯಾರು ಉಪ್ಪಿನ ಕಾಯಿ ಮಾರುವುದು ಎಂದು ಮೊದಲೇ ನಿರ್ಧರಿಸಿಕೊಳ್ಳುವರು. ಅದಕ್ಕಾಗಿ ಚಪ್ಪಾಳೆ ಹಾಕಿ ಗೆದ್ದವರು ಕಂಬಕ್ಕೆ ನಿಲ್ಲುವರು. ಸೋತವರು ಉಪ್ಪಿನಕಾಯಿಯನ್ನು ತಲೆಯಲ್ಲಿ ಹೊತ್ತು ಮಾರುವವರಂತೆ ನಟಿಸುತ್ತಾ ಅಪ್ಪನವರ ಉಪ್ಪಿನಕಾಯಿ, ಕಾಸಿಗೆರಡು ಮಾವಿನಕಾಯಿ ಈ ರೀತಿ ಹೇಳುತ್ತಾ ಉಪ್ಪು, ಉಪ್ಪು, ಕಾರಬೇಕೇ ಎಂದು ಎಲ್ಲರ ಹತ್ತಿರಕ್ಕೂ ತಲೆ ಮೇಲೆ ಕೈ ಹೊತ್ತುಕೊಂಡು ಉಪ್ಪು ಮಾರುವವರಂತೆ ಹೋಗುವರು. "ಮುಂದಿನ ಮನೆಗೆ ಹೋಗು" ಎನ್ನುವರು. ಅವರು ಬೇರೆಯವರ ಹತ್ತಿರ ಬೇಡಲು ಹೋಗುತ್ತಿರುವಾಗ ಈ ಕಡೆ ಒಬ್ಬರಿಗೊಬ್ಬರು ಕಂಬವನ್ನು ಬದಲಾಯಿಸುತ್ತ ಇರುತ್ತಾರೆ. ಉಪ್ಪಿನಕಾಯಿ ಬೇಡುವವರು ಓಡಿ ಬಂದು ಕಂಬವನ್ನು ಆಕ್ರಮಿಸಿ ನಿಲ್ಲಬೇಕು. ಕಂಬಕ್ಕೆ ಬರಬೇಕಾದವರು ಹೊರಗೆ ನಿಲ್ಲುವರು. ಅವರನ್ನೇ 'ಕಳ್ಳ' 'ಕಳ್ಳ' ಎನ್ನುವರು. 'ಕಳ್ಳ' ಮತ್ತೆ ಉಪ್ಪಿನಕಾಯಿ ಮಾರುವುದು. ಎಲ್ಲರ ಸರದಿ ಬರುವವರೆಗೂ ಆಟ ನಡೆಯುತ್ತಲೇ ಇರುವುದು. ಈ ಆಟ ಮಕ್ಕಳಿಗೆ ಬಲು ಪ್ರಿಯ.

ನಮ್ಮ ಪೂರ್ವಜರು ಆಹಾರಕ್ಕೆ ಬಹಳ ಆದ್ಯತೆಯನ್ನು ಕೊಟ್ಟಿದ್ದರು. ಈಗಲೂ ಕೂಡ ಹಳ್ಳಿಗಳಲ್ಲಿ ಮುಂಜಾನೆ ಉಪಾಹಾರವನ್ನು ಸೇವಿಸದೇ ಬಿಸಿ ಬಿಸಿಯಾದ ರೊಟ್ಟಿ, ಮೊಸರು, ಬೇಳೆ ಸಾರು, ಶೇಂಗಾಚಟ್ನಿ, ಉಪ್ಪಿನ ಕಾಯಿ, ವಿವಿಧ ರೀತಿಯ ಸೊಪ್ಪು, ನವಣಕ್ಕಿ ಕಿಚಡಿ ಒಳಗೊಂಡ ಊಟ ಆರೋಗ್ಯವಂತ ವ್ಯಕ್ತಿಯ ಪರಿಪಾಠವಾಗಿದೆ. ಸಾಮಾನ್ಯವಾಗಿ ಊಟ ಮಾಡುವಾಗ ಗ್ರಾಮೀಣ ಜನಪದರು ಉಪ್ಪಿನ ಕಾಯಿಯನ್ನು ವಿಶೇಷವಾಗಿ ಬಳಸುವರು. ಅದರ ಬಳಕೆಯ ತೀವ್ರತೆಯನ್ನು ತಿಳಿಸಿಕೊಡುವ ಒಂದು ಆಟವಾಗಿದೆ. ಚಿಕ್ಕಮಕ್ಕಳಿಗೂ ಸಹ ಉಪ್ಪಿನಕಾಯಿ ಅಂದರೆ ಬಹಳ ಪ್ರೀತಿ. ಮನೆಯಲ್ಲಿ ಚಿಕ್ಕಮಕ್ಕಳು ಅಳುತ್ತಿರುವಾಗ ಅಂಗೈಯಲ್ಲಿ ಸ್ವಲ್ಪ ಉಪ್ಪಿನಕಾಯಿಯನ್ನು ಇಟ್ಟರೆ ಆ ಮಗು ಅದನ್ನು ಬಾಯಿಯಿಂದ ನೆಕ್ಕುತ್ತಾ ಅಳು ನಿಲ್ಲಿಸುವುದನ್ನು ಕಾಣಬಹುದಾಗಿದೆ.

ಹಳ್ಳಿಗಳಲ್ಲಿ ಸಾಮಾನ್ಯವಾಗಿ ದೊಡ್ಡ ಮನೆಗಳನ್ನು ಕಾಣಬಹುದು. ಆ ಮನೆಯಲ್ಲಿ ವಿವಿಧ ಕಂಬಗಳನ್ನು ನೋಡಬಹುದು. ಮನೆಯ ಮಕ್ಕಳೆಲ್ಲಾ ಅಂಗೈಯಲ್ಲಿ ಸ್ವಲ್ಪ ಉಪ್ಪಿನಕಾಯಿಯನ್ನು ಹಾಕಿಕೊಂಡು ನೆಕ್ಕುತ್ತಾ ಪ್ರತಿಯೊಂದು ಕಂಬಕ್ಕೆ ಚಲಿಸುತ್ತಾ ಆಟವಾಡುವುದು ಅತ್ಯಂತ ಮನೋಹರವಾಗಿದೆ.

೪ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳ ಆಟಗಳು

ಅ) ಸುರುಗೋಲು ಆಟ (ಕಲ್ಲು ಮಣ್ಣು ಆಟ) : ಹೆಣ್ಣು ಮಕ್ಕಳು, ಗಂಡು ಮಕ್ಕಳು ಒಟ್ಟಿಗೆ ಸೇರಿ ಆಡಬಹುದಾದಂತಹ ಆಟ ಇದಾಗಿದೆ. ಎಂಟು, ಹತ್ತು ಜನರು ಆಡುವರು. ಎಡಗೈ ಹಸ್ತದ ಮೇಲೆ ಬಲಗೈ ಹಸ್ತವನ್ನು ತಾಳ ಹಾಕುವುದರ ಮೂಲಕ ಹಿಡಿಯುವವರನ್ನು ನಿರ್ಧಾರ ಮಾಡುತ್ತಾರೆ. ಎಲ್ಲರೂ ಒಂದು ಕಡೆ ನಿಲ್ಲುವರು. ಹಿಡಿಯುವವರು "ಕಲ್ಲು ಬೇಕೋ, ಮಣ್ಣು ಬೇಕೋ" ಎನ್ನುವರು. ಅವರು ಹೇಳಿದಂತೆ ಹಿಡಿಯಬೇಕು.

ಕಲ್ಲು ಬೇಕೆಂದು ಹೇಳಿದಾಗ ಕಲ್ಲಿನ ಮೇಲೆ ನಿಂತವರನ್ನು ಓಡೋಗಿ ಹಿಡಿಯಬೇಕು. ಮಣ್ಣು ಬೇಕು ಎಂದರೆ ಮಣ್ಣಿನ ಮೇಲೆ ನಿಂತವರನ್ನು ಹಿಡಿಯಬೇಕು ಬಹು ಚಾಣಾಕ್ಷತನದಿಂದ ಆಟ ನಡೆಯುತ್ತಾ ಇರುತ್ತದೆ. ಆಟ ಆಡುವಾಗ ಆಟಗಾರರು "ನಿನ್ನ ಕಲ್ಲಿಗೆ ನಾನು ಬಂದೆ, ನಿನ್ನ ಮಣ್ಣಿಗೆ ನಾನು ಬಂದೆ" ಎಂದು ರೇಗಿಸುತ್ತಾ ಆಟ ಮನರಂಜನೀಯವಾಗಿ ನಡೆಯುವುದು. ಆಟದಲ್ಲಿ ಭಾಗವಹಿಸಿದ ಎಲ್ಲರಿಗೂ ಹಿಡಿಯುವ ಕೆಲಸ ಬಂದೇ ಬರುವುದು.

ಇದೊಂದು ಅತ್ಯಂತ ಮನರಂಜನೀಯ ಆಟವಾಗಿದೆ. ಈ ಆಟದ ಇನ್ನೊಂದು ವಿಶೇಷ ಹೆಣ್ಣು ಮಕ್ಕಳು, ಗಂಡು ಮಕ್ಕಳು ಒಟ್ಟಿಗೆ ಸೇರಿ ಆಡಬಹುದಾದಂತಹ ಆಟವಾಗಿದೆ. ನಮ್ಮ ಜನಪದರು ಸಾಮೂಹಿಕ ಮನೋರಂಜನೆಗೆ ಹೆಚ್ಚು ಒತ್ತನ್ನು ಕೊಟ್ಟಿದ್ದರು. ಹೆಣ್ಣು ಗಂಡು ಎಂಬ ಬೇಧವಿಲ್ಲದೇ ಎಲ್ಲರೂ ಒಂದೆಡೆ ಬೆರೆತು ಸಾಮಾಜಿಕ ಸಾಮರಸ್ಯ ತತ್ವವನ್ನು ಪ್ರತಿಪಾದಿಸಿದವರು. ಇಂತಹ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ಎಷ್ಟೋ ಆಟಗಳನ್ನು ನಮ್ಮ ಜನಪದರು ರೂಢಿಸಿಕೊಂಡಿದ್ದಾರೆ.

ಆ) ಟೋಪಿ ಆಟ : ಸಾಮಾನ್ಯವಾಗಿ ಶಾಲೆ ಮಕ್ಕಳು ಈ ಆಟವನ್ನು ಆಡುವರು. ಎಲ್ಲಾ ಮಕ್ಕಳು ವೃತ್ತಾಕಾರವಾಗಿ ಕುಳಿತುಕೊಳ್ಳುವರು. ಯಾರಾದರೊಬ್ಬರು ಬಟ್ಟೆಯನ್ನು ಬಚ್ಚಿಟ್ಟುಕೊಂಡು ಓಡುತ್ತ ಸುತ್ತುವರು. ಓಡುತ್ತಾ ಓಡುತ್ತಾ ಯಾರ ಬೆನ್ನಿನಿಂದಲಾದರೂ ಬಟ್ಟೆಯನ್ನು ಇಡುವರು. ಎಲ್ಲಾ ಮಕ್ಕಳೂ ಬಹು ಜಾಗ್ರತೆಯಿಂದ ಬಟ್ಟೆ ಇಟ್ಟಿರಬಹುದೆಂದು ಕಾಯುವರು. ಯಾರ ಹಿಂಬದಿಯಲ್ಲಿ ಬಟ್ಟೆ ಇರುವುದೋ ಅವರು ತಕ್ಷಣ ಆ ಬಟ್ಟೆಯನ್ನು ಎತ್ತಿಕೊಂಡು ಕಳ್ಳನನ್ನು ಅಟ್ಟಿಸಿಕೊಂಡು ಓಡುವರು. ಅವರು ಓಡಿ ಬಂದು ಎದ್ದವನ ಜಾಗವನ್ನು ಆಕ್ರಮಿಸಿಕೊಂಡು ಕುಳಿತುಕೊಳ್ಳುವರು.

ಈ ಆಟ ಆಡುವುದರಿಂದ ಬುದ್ಧಿ ಚುರುಕಾಗುವುದು. ಕಣ್ಣು, ಕಿವಿ ಮತ್ತು ಇತರ ಅಂಗಾಂಗಗಳೆಲ್ಲ ಚುರುಕಾಗುವುದು. ಮಕ್ಕಳ ಮನಸ್ಸು ಸಂತೋಷಗೊಳ್ಳುವುದು. ಈ ಆಟವನ್ನು ಬಹುತೇಕವಾಗಿ ಎಲ್ಲಾ ಮಕ್ಕಳು ಆಡಿರುವರು. ಇದು ಪ್ರಮುಖವಾಗಿ ಮಕ್ಕಳ ಪಂಚೇದ್ರಿಯಗಳನ್ನು ಚುರುಕುಗೊಳಿಸುವ ಆಟವಾಗಿದೆ. ಮಕ್ಕಳು ಬಟ್ಟೆ ಇಟ್ಟಿರಬಹುದು ಎಂದು ತನ್ನ ಕಣ್ಣು, ಬುದ್ಧಿ, ಉಪಯೋಗಿಸಿ ಚಾಣಾಕ್ಷತನದಿಂದ ವರ್ತಿಸಬೇಕು. ಒಂದಿಷ್ಟೂ ಗಮನವನ್ನು ಆಚೀಚೆ ಹರಿಬಿಡದೇ ಈ ಆಟವನ್ನು ಆಡಬೇಕು. ಈ ಆಟವನ್ನು ಆಡುವುದರಿಂದ ಮಕ್ಕಳ ಬುದ್ಧಿ ಚುರುಕಾಗುವುದು. ಪಂಚೇಂದ್ರಿಯಗಳನ್ನು ಹೆಚ್ಚುಹೆಚ್ಚು ಕ್ರಿಯಾಶೀಲಗೊಳಿಸಬಹುದು.

ಇ) ಕುಕ್ಕರ ಬಸವಿ ಆಟ : ಈ ಆಟದಲ್ಲಿ ಎಷ್ಟು ಮಕ್ಕಳಾದರೂ ಭಾಗವಹಿಸಬಹುದು. ಎಲ್ಲರೂ ಕೈ ಕೈ ಜೋಡಿಸಿ ವೃತ್ತಾಕಾರವಾಗಿ ನಿಲ್ಲುವರು. ಚಪ್ಪಾಳೆ ಹಾಕಿದಂತೆ ಕೈ ಜೋಡಿಸುವರು. ಅಂಗೈ ಮೇಲ್ಮುಖವಾಗಿ ಹಾಕಿದರೆ ಅವರು ಗೆದ್ದಂತೆ. ಇದೇ ರೀತಿ ಐದಾರು ಸಾರಿ ಮಾಡುವರು. ಹಿಡಿಯುವುದಕ್ಕೆ ಒಬ್ಬ ಕಳ್ಳ ಸಿಗುವನು.

ಮಕ್ಕಳೆಲ್ಲರೂ ಓಡುತ್ತಾ ಈ ಆಟವನ್ನು ಆಡುವರು. ಕಳ್ಳ ಹಿಡಿಯಲು ಬಂದ ತಕ್ಷಣ ಕುಕ್ಕರಗಾಲಿನಲ್ಲಿ ಕೂರುವರು. ಮತ್ತೊಬ್ಬ ಓಡಿ ಬಂದು ಕಳ್ಳನಿಗೆ ಗೊತ್ತಾಗದಂತೆ ಅವನ ತಲೆ ಮೇಲೆ ಮುಟ್ಟುವನು. ಕಳ್ಳ ಓಡಿ ಹೋಗಿ ಅವರನ್ನು ಹಿಡಿಯುವನು. ಕೆಲವು ಮಕ್ಕಳು ಹಿಡಿಯಲು ಬಂದಾಗ ಕುಕ್ಕರಗಾಲಿನಲ್ಲಿ ಕೂರದೇ ಸುಮ್ಮನಿದ್ದಾಗ 'ಔಟ್' ಆಗುತ್ತಾರೆ ಅವರೇ ಕಳ್ಳರು.

ಇದೊಂದು ಮನೋರಂಜನೆಯ ಆಟವಾಗಿದೆ. ಮಕ್ಕಳು ದೈಹಿಕ ಶ್ರಮದೊಂದಿಗೆ ತಮ್ಮ ಮನಸ್ಸನ್ನು ಮುದಗೊಳಿಸುವ ಆಟವಾಗಿದೆ. ಕಳ್ಳನನ್ನು ಓಡಿ ಹೋಗಿ ಹಿಡಿಯುವುದು, ಕಳ್ಳ ಹಿಡಿಯಲು ಬಂದಾಗ 'ಶರಾಫ್' ಹೇಳಿ ಕುಕ್ಕರಗಾಲಿನಲ್ಲಿ ಕುಳಿತುಕೊಳ್ಳುವುದು, ಮತ್ತೊಬ್ಬ ಓಡಿಬಂದು 'ಕರೆಂಟು' ಎಂದು ತಲೆಯ ಮೇಲೆ ಕೈ ಇಡುವುದು, ಈ ಆಟದ ಪ್ರಮುಖ ಅಂಶಗಳು. ಹೀಗೆ ಮಕ್ಕಳ ದೈಹಿಕ ವ್ಯಾಯಾಮದೊಂದಿಗೆ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವಂತಹ ಆಟವಾಗಿದೆ.

ಈ) ಮೂಗು ಮುಟ್ಟೋ ಆಟ : ಸುಮಾರು ಹತ್ತರಿಂದ ಹನ್ನೆರಡು ಮಕ್ಕಳು ಸೇರಿ ಆಡುವಂತಹದ್ದು. ಐದೈದು ಜನರು ಒಂದು ಗುಂಪಾಗಿ ಮಾಡಿಕೊಳ್ಳುತ್ತಾರೆ. ಒಂದು ಗುಂಪಿನವರು ಹಣ್ಣುಗಳ ಹೆಸರುಗಳನ್ನು, ಮತ್ತೊಂದು ಗುಂಪಿನವರು ಹೂಗಳ ಹೆಸರುಗಳನ್ನು ಇಟ್ಟುಕೊಳ್ಳುವರು. ಒಂದು ಗುಂಪಿನವರು ಚಕ್ಕಲ ಬಕ್ಕಲೆ ಹಾಕಿಕೊಂಡು ನೆಲದಲ್ಲಿ ಕೂರುವರು. ಅವರ ಎದುರುಗಡೆ ಎಂಟು, ಹತ್ತು ಅಡಿ ದೂರದಲ್ಲಿ ಮತ್ತೊಂದು ಗುಂಪಿನವರು ಇರುವರು. ಒಬ್ಬರಿಗೆ ಕಣ್ಣು ಮುಚ್ಚಿಕೊಂಡು ಹೂಗಳ ಹೆಸರಾದಲ್ಲಿ ಗುಲಾಬಿ ಎಂದು ಒಬ್ಬರನ್ನು ಕರೆಯುವರು. ಆ ಮಗು ಕಣ್ಣು ಮುಚ್ಚಿಸಿಕೊಂಡವರ ಮೂಗನ್ನು 'ಮೆತ್ತಗೆ ಹಿಂಡಬೇಕು' ಅವರು ಕುಳಿತಿದ್ದ ಸ್ಥಾನಕ್ಕೆ ಹೋಗಿ 'ಅ,ಆ,ಇ,ಈ' ಬರೆಯುತ್ತಾ ತಲೆ ತಗ್ಗಿಸಿ ಕುಳಿತುಕೊಳ್ಳುವರು.

ಕಣ್ಣು ಮುಚ್ಚಿಸಿಕೊಂಡಿರುವವರಿಗೊಂದು ಹೆಸರಿರುವುದು, ಉದಾಹರಣೆಗೆ – ಬಾದಾಮಿ, ಎಂದು ಕರೆಯುವುದು. ಬಾದಾಮಿ ನಿನ್ನ ಮೂಗನ್ನು ಹಿಂಡಿದವರನ್ನು ಗುರುತಿಸು ಎಂದು ಕೇಳಿ ಕಳಿಸುವುದು. ಎದುರುಗಡೆ ಕುಳಿತಿರುವವರಲ್ಲಿ ಒಬ್ಬರನ್ನು ಗುರುತಿಸಬೇಕು. ಗುರುತಿಸುವಿಕೆ ಸರಿಯಾಗಿದ್ದರೆ ಇವರು ಗೆದ್ದಂತೆ, ಇಲ್ಲವಾದರೆ ಮತ್ತೆ ಬಂದು ಕಣ್ಣನ್ನು ಮುಚ್ಚಿಸಿಕೊಳ್ಳಬೇಕಾಗುವುದು.

ಈ ಆಟವು ವಿಶೇಷವಾಗಿ ಮಕ್ಕಳ ಗ್ರಹಿಕೆಯನ್ನು ಉತ್ತಮಪಡಿಸುವ ಒಂದು ಆಟವಾಗಿದೆ. ಇದರ ಜೊತೆ-ಜೊತೆಗೆ ವಿವಿಧ ರೀತಿಯ ಹಣ್ಣು, ಹೂವು, ಪಕ್ಷಿ, ಪ್ರಾಣಿಗಳ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕಾರಿಯಾಗುತ್ತದೆ.

ಎದುರಿಗೆ ಕುಳಿತವರ ಪೈಕಿ ಕಣ್ಣು ಮುಚ್ಚಿದವರ ಮೂಗನ್ನು ಯಾವ ವ್ಯಕ್ತಿ ಮುಟ್ಟಿದ್ದಾನೆ ಎಂಬುದನ್ನು ಗ್ರಹಿಸುವುದು ಬಹಳ ಕಷ್ಟಸಾಧ್ಯ. ಆದರೆ ವ್ಯಕ್ತಿಯ ನೋಟ, ನಡೆ-ನುಡಿ, ಮಾತು ಆಧರಿಸಿ ಆ ವ್ಯಕ್ತಿಯನ್ನು ಗುರ್ತಿಸಬೇಕು. ಇದಕ್ಕೆ ಮಕ್ಕಳ ಗ್ರಹಿಕೆ ಬಹಳ ತೀಕ್ಷ್ಣವಾಗಿರಬೇಕು ಹಾಗಿದ್ದರೆ ಮಾತ್ರ ಈ ಆಟದಲ್ಲಿ ಗೆದ್ದಂತೆ. ಈ ಆಟದಿಂದ ಮಕ್ಕಳಲ್ಲಿ ಗ್ರಹಿಕೆಯ ಶಕ್ತಿ ಉಂಟಾಗುವುದು.

ಉ) ಹುಲಿ ಬೆಕ್ಕಿನಾಟ : ಎಲ್ಲರೂ ಕೈ ಚಪ್ಪಾಳೆ ಹಾಕುತ್ತಾ ಈ ಆಟವನ್ನು ಆಡುವರು. ಯಾರ ಎರಡು ಕೈಗಳು ಒಂದರ ಮೇಲೊಂದು ಹಾಕಿಕೊಂಡಾಗ ಬೇರೆ ರೀತಿಯಾಗಿರುವುದೋ ಅವರಲ್ಲಿ ಇಬ್ಬರನ್ನು ಗುರುತಿಸಿಕೊಳ್ಳುವರು. ಒಬ್ಬರು ಇಲಿ, ಮತ್ತೊಬ್ಬರು ಬೆಕ್ಕು. ಆಟ ಮುಗಿಯುವವರೆಗೂ ಹುಲಿ, ಬೆಕ್ಕು ಎಂದು ಅವರನ್ನು ಕರೆಯುತ್ತಿರಬೇಕು.

ಮಕ್ಕಳೆಲ್ಲರೂ ವೃತ್ತಾಕಾರವಾಗಿ ಕೈಜೋಡಿಸಿ ನಿಲ್ಲುವರು. ಹುಲಿಯು ವೃತ್ತಾಕಾರದ ಮಧ್ಯದ ಸ್ಥಳದಲ್ಲಿ ನಿಲ್ಲಬೇಕು. ಬೆಕ್ಕು ವೃತ್ತಾಕಾರದ ಹೊರಗೆ ನಿಲ್ಲಬೇಕು. ಆಟ ಪ್ರಾರಂಭಿಸಿದ ತಕ್ಷಣವೇ ಹುಲಿ ಬೆಕ್ಕನ್ನು ಹುಡುಕತೊಡಗುವುದು. ಕೈ ಜೋಡಿಸಿ ನಿಂತಿರುವವರ ಕೈ ಸಂದಿನಿಂದ ವೃತ್ತದ ಒಳಕ್ಕೆ ನುಗ್ಗುವುದು. ಹುಲಿಯನ್ನು ಕಂಡ ತಕ್ಷಣ ಬೆಕ್ಕು ಗಾಬರಿಗೊಂಡು ಹೊರಕ್ಕೆ ಬರುವುದು. ಹುಲಿಯ ಕೈಲಿ ಬೆಕ್ಕು ಸಿಕ್ಕಿದ ಅನಂತರ ಮಕ್ಕಳೆಲ್ಲರೂ 'ಗೊಳ್' ಎಂದು ನಗುವರು.

ಈ ಆಟವನ್ನು ಸಾಮಾನ್ಯವಾಗಿ ಹುಲಿ-ಬೆಕ್ಕಿನಾಟ ಎಂದು ಕರೆಯುವರು. ಮಕ್ಕಳಿಗೆ ವಿನೋದವನ್ನು ನೀಡುವ ಆಟವಾಗಿದೆ. ಇಲಿ ಮತ್ತು ಹುಲಿಯ ರೀತಿಯಲ್ಲಿ ಆರ್ಭಟಿಸುತ್ತಾ ಇರುವುದು ಎಲ್ಲರಿಗೂ ನಗೆಯ ಕಡಲಲ್ಲಿ ತೇಲಿಸುತ್ತದೆ. ಮಕ್ಕಳು ಬಹಳ ಖುಷಿಯಿಂದ ಈ ಆಟವನ್ನು ಆಡುವರು.

೫ ಪ್ರಾಣಿ ಸಂಬಂಧೀ ಆಟಗಳು

ತಮ್ಮ ದಿನನಿತ್ಯದ ಒಡನಾಟದ ಪ್ರಾಣಿಗಳೊಂದಿಗೆ ಗ್ರಾಮೀಣ ಜನಪದರು ಅವಿನಾಭಾವ ಸಂಬಂಧವನ್ನು ಹೊಂದಿರುತ್ತಾರೆ. ಇಂತಹ ಸಾಕು ಪ್ರಾಣಿಗಳ ಮುಖಾಂತರ ತಮ್ಮ ಕ್ರೀಡಾ ಮನೋಭಾವನೆಯನ್ನು ಹೊಂದಿರುತ್ತಾರೆ. ಎತ್ತು, ಟಗರು, ಕೋಳಿ ಮುಂತಾದ ಪ್ರಾಣಿಗಳಿಂದ ಕ್ರೀಡೆಗಳನ್ನು ಆಯೋಜಿಸಿ ಮನೋರಂಜನೆಯನ್ನು ಪಡೆಯುತ್ತಾರೆ. ಉದಾ;- ಕಾರಹುಣ್ಣಿಮೆಯ ದಿನದಂದು ಎತ್ತುಗಳನ್ನು ಕರಿ ಹರಿಸುವುದರ ಮೂಲಕ ಮನೋರಂಜನೆಯನ್ನು ತೆಗೆದುಕೊಳ್ಳುವರು. ಇನ್ನು ಹಳ್ಳಿಗಳಲ್ಲಿ ಟಗರಿನ ಕಾಳಗ ವಿಶೇಷವಾದುದು, ಇದಕ್ಕೆಂದೇ ಟಗರುಗಳನ್ನು ಸೋಂಪಾಗಿ ಬೆಳೆಸಿ ಈ ಕಾಳಗಕ್ಕೆ ತಯಾರು ಮಾಡುವರು. ಹೀಗೆ ಪ್ರಾಣಿಗಳನ್ನು ಸಹ ಅವರು ಕ್ರೀಡೆಯಲ್ಲಿ ಬಳಸುವುದು ಸಾಮಾನ್ಯ.

ಇತ್ತೀಚಿನ ದಿನಮಾನಗಳಲ್ಲಿ ಸಮೂಹ ಮಾಧ್ಯಮದ ಪ್ರಭಾವದಿಂದ ಮಕ್ಕಳು ಇಂತಹ ಆಟದಿಂದ ವಂಚಿತರಾಗುತ್ತಿದ್ದಾರೆ. ಹುಟ್ಟುವ ಮಗುವೂ ಸಹ ಮೊಬೈಲ್ ಎಂಬ ಮಾಯೆಗೆ ಮಾರು ಹೋಗಿ, ಇಂತಹ ಅಪರೂಪವಾದ ಗ್ರಾಮೀಣ ಆಟಗಳು ಇಂದು ಕಣ್ಮರೆಯಾಗುತ್ತಿವೆ. ಪೋಷಕರು ಮಕ್ಕಳಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಡದೇ ಅವರನ್ನು ಪಂಜರದ ಗಿಳಿಯನ್ನಾಗಿ ಮಾಡಿ ಕೇವಲ ಪುಸ್ತಕದ ಹುಳುಗಳನ್ನಾಗಿ ಮಾಡುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇಂತಹ ಸನ್ನಿವೇಶಗಳಿಂದ ಇಂದಿನ ಮಕ್ಕಳು ಹೆಚ್ಚು-ಹೆಚ್ಚು ಅಂತರ್‌ಮುಖಿಗಳಾಗಿ ಬೆಳೆದು ತಮ್ಮ ಬದುಕನ್ನು ಕಟ್ಟಿಕೊಳ್ಳಲಾರದ ಪರಿಸ್ಥಿತಿಯನ್ನು ತಂದುಕೊಳ್ಳುತ್ತಿದ್ದಾರೆ. ಜಾಗತೀಕರಣದ ಪ್ರಭಾವದಿಂದ ಹೆಚ್ಚು

ಹೆಚ್ಚು ಗ್ರಾಮಗಳು ನಗರೀಕರಣವಾಗುತ್ತಾ, ಗ್ರಾಮೀಣ ಕ್ರೀಡೆಯ ಸೊಗಡು ನಿಧಾನವಾಗಿ ಕಣ್ಮರೆಯಾಗುತ್ತಿರುವುದು ಅತ್ಯಂತ ವಿಷಾಧನೀಯ ಸಂಗತಿಯಾಗಿದೆ. ಆದರೆ ಇಂದಿಗೂ ಸಹ ಹ್ಯಾರಡಾದಂತಹ ಕೆಲವೊಂದು ಹಳ್ಳಿಗಳಲ್ಲಿ ಇಂತಹ ಹಳ್ಳಿಯ ಸೊಗಡನ್ನು ಕಾಣಬಹುದಾಗಿದೆ. ಹ್ಯಾರಡದ ಜನಪದರಲ್ಲಿ ವಿಶೇಷವಾಗಿ ಹಬ್ಬಹರಿದಿನ, ಜಾತ್ರೆಗಳಲ್ಲಿ ಇಂತಹ ಅಪರೂಪದ ಕ್ರೀಡೆಗಳು, ಆಟಗಳು, ವಿನೋದಾವಳಿಗಳನ್ನು ಕಾಣಬಹುದಾಗಿದೆ.

೩.೧೧ ಟಗರಿನ ಕಾಳಗ

ಹ್ಯಾರಡಾ ಗ್ರಾಮದಲ್ಲಿ ಬಹುತೇಕ ಕುರುಬ ಸಮುದಾಯದವರು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ಕುರಿ ಕಾಯುವ ವರ್ಗ ಬಹಳಷ್ಟಿದೆ. ಬಹಳಷ್ಟು ಸಂಖ್ಯೆಯಲ್ಲಿ ನಾವಿಲ್ಲಿ ಕುರಿಗಳನ್ನು ಕಾಣಬಹುದಾಗಿದೆ. ಆದ್ದರಿಂದ ಹಬ್ಬ-ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಕುರಿಗಳ ಕಾಳಗ ಬಹಳಷ್ಟು ಮನಮೋಹಕವಾದುದು. ಆರೋಗ್ಯವಾಗಿರುವ ಕುರಿಯನ್ನು ಆಯ್ದುಕೊಂಡು ಅದಕ್ಕೆ ಕಾಲ-ಕಾಲಕ್ಕೆ ಪೌಷ್ಠಿಕವಾದ ಆಹಾರವನ್ನು ಒದಗಿಸಿ, ಸೊಂಪಾಗಿ ಬೆಳೆಸಿರುತ್ತಾರೆ. ಕುರಿಗಳ ಕಾಳಗಕ್ಕೆಂದೇ ವಿಶೇಷವಾಗಿ ಕುರಿಯನ್ನು ಬೆಳೆಸುವುದುಂಟು. ಟಗರಿನ ಕಾಳಗ ಇದ್ದ ಸಂಧರ್ಭದಲ್ಲಿ ಅಕ್ಕ-ಪಕ್ಕದ ಊರುಗಳಿಂದ ಬಂದಿರುವ ಟಗರುಗಳ ಕಾಳಗವು ನೋಡುಗರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ.

ಟಗರಿನ ಕಾಳಗದಲ್ಲಿ ಗೆದ್ದ ಟಗರುಗಳಿಗೆ ನಗದು ರೂಪದಲ್ಲಿ ಪ್ರಶಸ್ತಿಯನ್ನು ಕೊಟ್ಟು, ಮೆರವಣಿಗೆ ಮಾಡಲಾಗುತ್ತದೆ. ಮೆರವಣಿಗೆಯ ಸಂಧರ್ಭದಲ್ಲಿ ಟಗರಿನ ಕೊಂಬುಗಳಿಗೆ ಎಣ್ಣೆಯನ್ನು ಸವರಿ ವಿವಿಧ ರೀತಿಯ ಅಲಂಕಾರಗಳನ್ನು ಮಾಡಿ ನೋಡುಗರಿಗೆ ಹಬ್ಬವನ್ನುಂಟು ಮಾಡುತ್ತದೆ.

೩.೧೨ ವೈದ್ಯ ವಿದ್ಯೆ

ಜನಪದ ವೈದ್ಯ ಎನ್ನುವಂತಹದ್ದು ಮಾನವನಷ್ಟೇ ಪ್ರಾಚೀನವಾದುದು. ಅತ್ಯಂತ ಪ್ರಾಚೀನ ಯುಗ ಸಿಂಧೂ ಬಯಲಿನಲ್ಲಿಯೇ ಸಾಕಷ್ಟು ವೈದ್ಯ ಪದ್ದತಿಯು ಪ್ರಚಲಿತದಲ್ಲಿತ್ತು. ಪ್ರಪಂಚದ ಇಂದಿನ "ವೈದ್ಯ ಪದ್ದತಿಗಳಿಗೆ ತಾಯಿ ಬೇರು ಜನಪದ ವೈದ್ಯ" ಎಂದು ಹೇಳಬಹುದು. ಆರ್ಯರ ಅವಧಿಯಲ್ಲಿ ರೋಗರುಜಿನಗಳನ್ನು ನಿವಾರಿಸುವ ವಿಧಾನ ಗೊತ್ತಿತ್ತು. ಅವುಗಳಿಗೆ ಗಿಡಮೂಲಿಕೆಗಳಿಂದ ಔಷಧಿ ಕಂಡುಹಿಡಿದಿದ್ದರು. ಧನ್ವಂತ್ರಿ ಹಾಗೂ ಚರಕರು ಆಗಿನ ಹೆಸರಾಂತ ಆಯುರ್ವೇದ ಪಂಡಿತರಾಗಿದ್ದರು. ಅವರಿಗೆ ಶಸ್ತ್ರ ಚಿಕಿತ್ಸೆಯೂ ಕೂಡ ತಿಳಿದಿತ್ತು. ಯುದ್ದದಲ್ಲಿ ಕಾಲು ಕಳೆದುಕೊಂಡವರಿಗೆ ಕಬ್ಬಿಣದ ಕಾಲು ತೊಡಿಸಿದ ಹಾಗೂ ಕುರುಡರಿಗೆ ದೃಷ್ಠಿ ಕೊಡಿಸಿದ ಉಲ್ಲೇಖ ಋಗ್ವೇದದಲ್ಲಿ ಬಂದಿದೆ. ಈ ಪಾರಂಪರಿಕ ವೈದ್ಯ ವಿಜ್ಞಾನ ಇತ್ತೀಚಿಗೆ ಬೆಳವಣಿಗೆ ಕಂಡಿದ್ದಲ್ಲ. ಒಬ್ಬ ವ್ಯಕ್ತಿಯಿಂದ, ಒಂದು ಸಮುದಾಯದಿಂದ ಬೆಳೆದು ಬಂದಿರುವಂತಹದ್ದಲ್ಲ. ಸಾವಿರಾರು ವರ್ಷಗಳ ಹಿಂದೆ ಆದಿವಾಸಿಗಳ ವಿಶಿಷ್ಟವಾದ ಅನುಭವದ ಮೂಸೆಯಲ್ಲಿ ಬೆಳೆದು ಬಂದ ಪದ್ದತಿಯಾಗಿದೆ.

ಇವರುಗಳು ತಮ್ಮ ಸುತ್ತ-ಮುತ್ತಲಿನಲ್ಲಿಯೇ ದೊರೆಯುವಂತಹ ಗಿಡಮೂಲಿಕೆಗಳು, ಹಣ್ಣುಗಳು, ಸೊಪ್ಪು, ಬೇರು, ಪ್ರಾಣಿಗಳ ದೇಹದ ಅಂಗಗಳು, ವಿವಿಧ ರೀತಿಯ ಖನಿಜಗಳು, ಸಸ್ಯಗಳು,

ಬಳ್ಳಿಗಳು, ಮೊದಲಾದವುಗಳ ಬಳಕೆಯಿಂದ ತಮಗೆ ಭಾದಿಸುವ ರೋಗಗಳಿಗೆ ಔಷಧಿಗಳನ್ನು ಕಂಡುಕೊಳ್ಳುತ್ತಿದ್ದರು. ತಮ್ಮ ದೇಹದಲ್ಲಿ ಕಾಣಿಸುವ ಆರೋಗ್ಯದ ಏರುಪೇರುಗಳಲ್ಲಿ ತಮ್ಮ ದಿನನಿತ್ಯ ಸೇವಿಸುವ ಆಹಾರದಿಂದಲೇ ಗುಣಮುಖಪಡಿಸಿಕೊಳ್ಳುವರು.

ಅದರಂತೆಯೇ ಹ್ಯಾರಡಾ ಗ್ರಾಮ ಸುತ್ತಲೂ ಗುಡ್ಡ-ಬೆಟ್ಟಗಳಿಂದ ಆವೃತ್ತವಾಗಿದ್ದು ಅಪಾರವಾದ ಸಸ್ಯ ಸಂಕುಲವನ್ನು ಹೊಂದಿದೆ. ಕಾಡಿನಿಂದ ಅಪಾರ ಪ್ರಮಾಣದ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಹಲವಾರು ಔಷಧೀಯ ಗಿಡಮೂಲಿಕೆಗಳನ್ನು ಕಾಡಿನಿಂದ ಈಗಲೂ ಪಡೆಯುವರು. ಹ್ಯಾರಡಾ ಗ್ರಾಮದಲ್ಲಿ ಕ್ಷೇತ್ರ ಕಾರ್ಯಕ್ಕೆ ತೆರಳಿದಾಗ ಹಲವಾರು ಔಷಧೋಪಚಾರಗಳನ್ನು ಸಂಗ್ರಹಿಸಲಾಗಿದೆ. ಹಾಗೂ ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೆಮ್ಮು : ವ್ಯಕ್ತಿ ಹಾಗೂ ಮಕ್ಕಳು ಅತೀ ಹೆಚ್ಚು ಕೆಮ್ಮಿನಿಂದ ಬಳಲುತ್ತಿದ್ದರೆ ಮುಂಜಾನೆ ತುಳಸಿಗಿಡದ ನಾಲ್ಕೈದು ಎಲೆಗಳು, ಸಾಯಂಕಾಲ ನಾಲ್ಕೈದು ಎಲೆಗಳನ್ನು ಚೆನ್ನಾಗಿ ಅಗಿದು ನುಂಗಿದರೆ ಕೆಮ್ಮು ವಾಸಿಯಾಗುವುದು.

ನೋವು ನಿವಾರಕ : ಬೇವಿನ ಸೊಪ್ಪಿನ ಎಲೆಗಳನ್ನು ಹಾಗೂ ಅರಿಶಿಣವನ್ನು ಮಿಶ್ರಣ ಮಾಡಿ ದುಂಡಿಯಲ್ಲಿ ಅರೆದು ನೋವಾದ ಭಾಗಕ್ಕೆ ಲೇಪನ ಮಾಡುವುದರಿಂದ ನೋವು ಕಡಿಮೆಯಾಗುವುದು.

ಪಾದದ ಉರಿ ಮತ್ತು ಚರ್ಮ ಮೃದುವಾಗಲು : ಲೌಳಸರ ಎಂಬ ವಸ್ತುವನ್ನು ಕಲ್ಲಿಗೆ ತೇಯ್ದು ಹಚ್ಚುವುದರಿಂದ ಈ ಬಾಧೆಯು ಕಡಿಮೆಯಾಗುವುದು.

ಸಕ್ಕರೆ ಕಾಯಿಲೆ : ದಿನನಿತ್ಯ ನಾಲ್ಕು ಬೇವಿನ ಎಲೆಗಳನ್ನು ಅಗೆದು ತಿನ್ನುವುದರಿಂದ ಸಕ್ಕರೆ ಕಾಯಿಲೆಯು ನಿಯಂತ್ರಣದಲ್ಲಿರುವುದು.

ಬಂಗು ನಿವಾರಣೆಗೆ : ಅಂಬಿ ಅರಿಶಿಣವನ್ನು ನೀರಿನೊಂದಿಗೆ ತೇಯ್ದು ದಿನನಿತ್ಯ ಹಚ್ಚುವುದರಿಂದ ಬಂಗು ಕಡಿಮೆಯಾಗುವುದು ಹಾಗೆಯೇ ಮುಖವು ಕಾಂತಿಯುತವಾಗುವುದು.

ಹಲ್ಲುನೋವು : ಲವಂಗವನ್ನು ಚೆನ್ನಾಗಿ ಪುಡಿಮಾಡಿ ನೋವು ಇರುವ ಭಾಗದಲ್ಲಿ ಇಟ್ಟುಕೊಳ್ಳುವುದರಿಂದ ಹಲ್ಲುನೋವು ಕಡಿಮೆಯಾಗುವುದು.

ನೆಗಡಿ : ಶುಂಠಿ ಮತ್ತು ಕೊತ್ತಂಬರಿ ಕಾಳುಗಳನ್ನು ಹುರಿದು ಪುಡಿಮಾಡಿ ಕಷಾಯ ಮಾಡಿಕೊಂಡು ಕುಡಿದರೆ ನೆಗಡಿ ಮಾಯವಾಗುವುದು. ಹಾಗೂ ಸ್ಥಳೀಯವಾಗಿ ಸಿಗುವ ನೀಲಗಿರಿ ಸೊಪ್ಪು, ಗ್ವಾನ ಮರದ ಸೊಪ್ಪನ್ನು ಬಿಸಿ ನೀರಿನಲ್ಲಿ ಕುದಿಸಿ ಅದರಿಂದ ಬರುವ ಹಬೆಯನ್ನು ಮೂಗಿನಿಂದ ಸೇವಿಸುವುದರಿಂದ ನೆಗಡಿ ಕಡಿಮೆಯಾಗುವುದು.

ಕಿವಿಯಲ್ಲಿ ನೋವು ಬಂದಾಗ :-ಒಂದು ಹನಿ ಮೇಕೆಯ ಮೂತ್ರ ಮತ್ತು ಅದಕ್ಕೆ ಸ್ವಲ್ಪ ಇಂಗನ್ನು ಸೇರಿಸಿ ಕಿವಿಯಲ್ಲಿ ಹಾಕಿಕೊಳ್ಳುವುದರಿಂದ ಕಿವಿ ಸೋರುವುದು ಹಾಗೂ ಕಿವಿಯಲ್ಲಿರುವ ನೋವು ಕಡಿಮೆಯಾಗುವುದು.

ಹೊಟ್ಟೆ ನೋವು :- ಸ್ಥಳೀಯವಾಗಿ ಸಿಗುವ ತುರುಬೆ ಗಿಡದ ಸೊಪ್ಪನ್ನು ಪುಡಿ ಮಾಡಿ ಅದನ್ನು ಮೊಸರಿನಲ್ಲಿ ಮಿಶ್ರಣ ಮಾಡಿ ಸೇವಿಸುವುದರಿಂದ ಹೊಟ್ಟೆ ನೋವು ಕಡಿಮೆಯಾಗುವುದು.

ಚೇಳು ಕಡಿದಾಗ :- ಸ್ಥಳೀಯವಾಗಿ ಸಿಗುವ ತೀಕಿ ಸೊಪ್ಪನ್ನು ಚೆನ್ನಾಗಿ ಅರೆದು ಚೇಳು ಯಾವ ಭಾಗದಲ್ಲಿ ಕಡಿದಿದೆಯೋ ಅದರ ವಿರುದ್ದ ದಿಕ್ಕಿನ ಕಿವಿಯಲ್ಲಿ ಅದರ ರಸವನ್ನು ಹಿಂಡುವುದು. ಉದಾ : ಬಲಗಾಲಿಗೆ ಚೇಳು ಕಡಿದಿದ್ದರೆ ಎಡಭಾಗದ ಕಿವಿಯಲ್ಲಿ ತೀಕಿ ಸೊಪ್ಪಿನ ರಸವನ್ನು ಹಿಂಡುವುದು ಹಾಗೆಯೇ ಬಿಳಿ ಈರುಳ್ಳಿಯನ್ನು ಚೇಳು ಕಡಿದ ಭಾಗದಲ್ಲಿ ಹಚ್ಚುವರು. ಇನ್ನೊಂದು ಪದ್ಧತಿ ಎಂದರೆ ಹುಣಸೆ ಬೀಜವನ್ನು ಚೇಳು ಕಡಿದ ಭಾಗದಲ್ಲಿ ಹಚ್ಚುವುದು.

ಹೊಟ್ಟೆ ಉಬಾರ ಆದಾಗ : ಸಾಮಾನ್ಯವಾಗಿ ಹಬ್ಬ-ಹರಿದಿನಗಳಲ್ಲಿ ವಿಶೇಷ ಅಡುಗೆಯನ್ನು ಮಾಡಿದಾಗ ಜಾಸ್ತಿ ಆಹಾರ ಸೇವಿಸುವುದುಂಟು. ಆಗ ಹೊಟ್ಟೆ ಉಬಾರ ಆಗುವುದು, ಆಗ ಬಜೆ ಮತ್ತು ಸಣಗಾಳನ್ನು ಚೆನ್ನಾಗಿ ಅಗೆದು ತಿನ್ನುವುದು.

ಹೆರಿಗೆ ನೋವು ಕಡಿಮೆ ಆಗಲು :-ಹೆರಿಗೆಯ ಸಮಯದಲ್ಲಿ ಮಹಿಳೆಯರು ಹೆಚ್ಚಾಗಿ ನೋವು ಅನುಭವಿಸುವ ಸಂದರ್ಭದಲ್ಲಿ ನೋವು ಕಡಿಮೆಯಾಗಲು ಜೀರಿಗೆ ಕಷಾಯ ಕೊಡುವರು.

ಹೊಸ ಗಾಯ ಆದಾಗ : ಯಾವುದಾದರೂ ಹರಿತವಾದ ವಸ್ತುಗಳಿಂದ ಗಾಯವಾದಾಗ ರಕ್ತ ಬೇಗ ಹೆಪ್ಪುಗಟ್ಟಲು ಅದೇ ವ್ಯಕ್ತಿಯ ಮೂತ್ರವನ್ನು ಆ ಗಾಯಕ್ಕೆ ಸಿಂಪಡಿಸುವುದರಿಂದ ರಕ್ತ ಸೋರುವುದು ಕಡಿಮೆಯಾಗುತ್ತದೆ.

ದೇಹದ ಭಾಗ ಸುಟ್ಟಾಗ : ಬೆಂಕಿಯಿಂದ ದೇಹದ ಯಾವುದೇ ಭಾಗ ಸುಟ್ಟಾಗ ಸ್ಥಳೀಯವಾಗಿ ಸಿಗುವ ಸುಟ್ಟು ಮಾರೆ ಸೊಪ್ಪನ್ನು ಅರೆದು ಆ ಭಾಗಕ್ಕೆ ಹಚ್ಚುವುದರಿಂದ ಸುಟ್ಟ ಭಾಗ ಬೇಗ ಗುಣಮುಖವಾಗುತ್ತದೆ.

ಕಣ್ಣಲ್ಲಿ ಹರಳು ಬಿದ್ದಾಗ : ಕಣ್ಣು ಸೂಕ್ಷ್ಮವಾದ ಭಾಗ. ಅಕಸ್ಮಾತ್ ಆಗಿ ಕಣ್ಣಲ್ಲಿ ಸಣ್ಣ ಹರಳು ಬಿದ್ದಾಗ ಅದನ್ನು ಹೊರತೆಗೆಯಲು ಆಡಿನ(ಮೇಕೆ) ಹಾಲಿನಲ್ಲಿ ಹತ್ತಿಯನ್ನು ಅದ್ದಿ ಕಣ್ಣಲ್ಲಿ ಅದನ್ನು ಆಡಿಸುವುದರಿಂದ ಕಣ್ಣಲ್ಲಿ ಬಿದ್ದಿರುವ ಹರಳು ಅದಕ್ಕೆ ಅಂಟಿಕೊಂಡು ಹೊರಬರುವುದು.

ಪಾರ್ಶ್ವವಾಯು ಸಂದರ್ಭದಲ್ಲಿ : ವ್ಯಕ್ತಿಗೆ ಆಗತಾನೇ ಪಾರ್ಶ್ವವಾಯು ಅಪ್ಪಳಿಸಿದ ಸಮಯದಲ್ಲಿ ವ್ಯಕ್ತಿಗೆ ಕೊಬ್ಬರಿ ಎಣ್ಣೆಯನ್ನು ಕುಡಿಸುವುದರಿಂದ ಸ್ವಲ್ಪ ಮಟ್ಟಿಗೆ ಗುಣಮುಖವಾಗುವುದು.

ಚರ್ಮದ ಮೇಲೆ ತದ್ದು ಆದಾಗ : ದೇಹದ ಯಾವುದೇ ಭಾಗದ ಚರ್ಮದ ಮೇಲೆ ತದ್ದು ಉಂಟಾದಾಗ ಅದನ್ನು ಸ್ಥಳೀಯವಾಗಿ ಸಿಗುವ ಚಂದ್ರಾಕಿ ಗಿಡದ ಎಲೆಯಿಂದ ತಿಕ್ಕುವುದರಿಂದ ತದ್ದು ಕಡಿಮೆಯಾಗುವುದು.

ಚಿಕ್ಕ ಮಕ್ಕಳಿಗೆ ಕೇರು ಹಾಕಿದಾಗ : ಗ್ರಾಮದಲ್ಲಿ ಮಕ್ಕಳಾಗದೇ ಬಂಜೆಯಾದವರು ಚಿಕ್ಕ ಮಕ್ಕಳಿಗೆ ಕೇರು ಹಾಕುವುದರಿಂದ ತಮಗೆ ಮಕ್ಕಳಾಗುವುದೆಂಬ ಮೂಢನಂಬಿಕೆ ಇದೆ. ಅದೇ ರೀತಿ

ಚಿಕ್ಕ ಮಕ್ಕಳಿಗೆ ಯಾರಾದರೂ ಕೇರು ಹಾಕಿದಾಗ ಅದನ್ನು ಗುಣ ಪಡಿಸಲು ಸ್ಥಳೀಯವಾಗಿ ಸಿಗುವ ಚಳ್ಳಾರಿ ಸೊಪ್ಪನ್ನು ಅರೆದು ಹಚ್ಚುವುದರಿಂದ ಬೇಗ ಗುಣಮುಖವಾಗುವುದು.

ಸ್ತ್ರೀಯರಿಗೆ ಜಾಸ್ತಿ ಬಿಳಿ ಮುಟ್ಟಾದಾಗ : ಸ್ತ್ರೀಯರಿಗೆ ಜಾಸ್ತಿ ಬಿಳಿ ಮುಟ್ಟು ಸಂಭವಿಸಿದಾಗ ಆ ಸಂದರ್ಭದಲ್ಲಿ ಬಿಳಿ ದಾಸವಾಳವನ್ನು ತಂದು, ಅದನ್ನು ತುಂಡು-ತುಂಡಾಗಿ ಕತ್ತರಿಸಿ ತುಪ್ಪದಲ್ಲಿ ಅದನ್ನು ಕರಿದು ಸೇವಿಸುವುದರಿಂದ ಬೇಗ ಗುಣ ಮುಖವಾಗುವುದು.

ಸಂತಾನ ಹರಣ ಶಸ್ತ್ರಚಿಕಿತ್ಸೆಗೆ : ಹಿಂದಿನ ದಿನಮಾನಗಳಲ್ಲಿ ಈಗಿನ ತರಹ ಸಂತಾನ ಹರಣ ಶಸ್ತ್ರಚಿಕಿತ್ಸೆ ಇರಲಿಲ್ಲ. ಅದರ ಬದಲಾಗಿ ಗ್ರಾಮೀಣ ಜನಪದರು ಐದಾರು ಹನಿಯ ಕಳ್ಳಿಯ ಹಾಲನ್ನು ಸೇವಿಸುವುದರಿಂದ ಮಕ್ಕಳು ಆಗುವುದನ್ನು (ಸಂತಾನೋತ್ಪತ್ತಿಯನ್ನು) ತಡೆಯುತ್ತಿದ್ದರು.

ನಂಜು ನಿವಾರಕ : ಹೆಚ್ಚು ಹೆಚ್ಚು ನುಗ್ಗೆ ಸೊಪ್ಪನ್ನು ಸೇವಿಸುವುದರಿಂದ ನಂಜು ನಿವಾರಣೆಯಾಗುವುದು.

ಬಾಣಂತಿಯರಿಗೆ ಸೊಂಟ ನೋವು ನಿವಾರಣೆಗೆ : ಹೆರಿಗೆ ಆದ ಸಂದರ್ಭದಲ್ಲಿ ಬಾಣಂತಿಯರು ಹೆಚ್ಚಾಗಿ ಸೊಂಟ ನೋವನ್ನು ಅನುಭವಿಸುವುದು ಸಾಮಾನ್ಯ. ಈ ನೋವನ್ನು ಕಡಿಮೆ ಮಾಡಲು ಹವಳೆ ಬೀಜವನ್ನು ನೀರಿನಲ್ಲಿ ಬೇಯಿಸಿ ಆ ನೀರನ್ನು ಬಾಣಂತಿಯರಿಗೆ ಕೊಡುವರು.

ಮಂಡಿ ನೋವಿಗೆ : ಸ್ಥಳೀಯವಾಗಿ ಸಿಗುವ ಉಡದ ಪ್ರಾಣಿಯ ದೇಹದ ನೆಣವನ್ನು ನೋವಿರುವ ಭಾಗಕ್ಕೆ ಹಚ್ಚುವುದರಿಂದ ನೋವು ಗುಣಮುಖವಾಗುವುದು.

ದೇಹಕ್ಕೆ ಜಾಸ್ತಿ ಜ್ವರ ಬಂದಾಗ : ದೇಹವು ಅತಿಯಾದ ಜ್ವರದಿಂದ ಬಳಲುತ್ತಿದ್ದರೆ ಏಡಿಯ ಸಾಂಬಾರನ್ನು ಸೇವಿಸುವುದರಿಂದ ಜ್ವರ ಬೇಗನೇ ಕಡಿಮೆಯಾಗುವುದು.

ಜಂತು ನಿವಾರಣೆಗೆ : ಆಹಾರದಲ್ಲಿ ಹಾಗಲಕಾಯಿಯನ್ನು ಹೆಚ್ಚು-ಹೆಚ್ಚು ಸೇವಿಸುವುದರಿಂದ ದೇಹದಲ್ಲಿರುವ ಜಂತುಗಳು ಕಡಿಮೆಯಾಗುವವು.

ಸಕ್ಕರೆ ಖಾಯಿಲೆ : ಸ್ಥಳೀಯವಾಗಿ ಸಿಗುವ ಅಮೃತ ಬಳ್ಳಿಯ ಎಲೆಗಳನ್ನು ದಿನನಿತ್ಯ ಸೇವಿಸುವುದರಿಂದ ಸಕ್ಕರೆ ಖಾಯಿಲೆ ನಿಯಂತ್ರಣದಲ್ಲಿರುವುದು.

ನಾಲಿಗೆ ಮೇಲೆ ಗುಳ್ಳೆಗಳು ಬಂದಾಗ : ದೇಹದಲ್ಲಿ ಉಷ್ಣಾಂಶ ಹೆಚ್ಚುವುದರಿಂದ ನಾಲಿಗೆಯ ಮೇಲೆ ನೋವಿನ ಗುಳ್ಳೆಗಳು ಏಳುವುದುಂಟು. ಇವುಗಳ ನಿವಾರಣೆಗೆ ಗಸಗಸೆಯನ್ನು ನೀರಿನಲ್ಲಿ ರಾತ್ರಿಯ ಸಮಯದಲ್ಲಿ ನೆನೆಸಿಟ್ಟು ಮುಂಜಾನೆ ಅದನ್ನು ಅಗೆದು ತಿನ್ನುವುದರಿಂದ ಗುಳ್ಳೆಗಳು ನಿವಾರಣೆಯಾಗುವವು.

ತಲೆಗೂದಲು ಸೋಂಪಾಗಿ ಬೆಳೆಯಲು : ಬೇವಿನ ಬೀಜಗಳನ್ನು ತಂದು ಬಿಸಿಲಿನಲ್ಲಿ ಒಣಗಿಸಿ ಅವುಗಳನ್ನು ಚೆನ್ನಾಗಿ ಹುರಿದು ದುಂಡಿಯಲ್ಲಿ ತಿರುವಿ ಅದನ್ನು ನೀರಿನಲ್ಲಿ ಕುದಿಸಿ ತಲೆಗೆ ಹಚ್ಚುವುದರಿಂದ ತಲೆಗೂದಲು ಸೋಂಪಾಗಿ ಬೆಳೆಯುವವು.

ಜೋಳಕ್ಕೆ ನುಶಿಬರದಂತೆ ತಡೆಯಲು : ಗ್ರಾಮದ ಪ್ರಮುಖ ಆಹಾರ ಪದಾರ್ಥವಾದ ಜೋಳಕ್ಕೆ ಬೇಗನೇ ನುಶಿ ಹುಳುಗಳು ಬರದಂತೆ ತಡೆಯಲು ಜೋಳದ ಮಧ್ಯದಲ್ಲಿ ಬೇವಿನ ಸೊಪ್ಪಿನ ಎಲೆಗಳನ್ನು ಇಡುವುದರಿಂದ ನುಶಿ ಬರದಂತೆ ತಡೆಯಬಹುದು.

ನಾಯಿ ಕಡಿದಾಗ : ನಾಯಿ ಕಚ್ಚಿದಾಗ ತಾಮ್ರದ ತಂಬಿಗೆಯಲ್ಲಿ ರಾತ್ರಿಯ ಸಮಯದಲ್ಲಿ ನೀರನ್ನು ತುಂಬಿ ಬೆಳಿಗ್ಗೆ ಹಾಳು ಹೊಟ್ಟೆಗೆ ಆ ನೀರನ್ನು ಸೇವಿಸುವುದು.

ಮಂಗನ ಬಾವು : ಜಿಂಕೆಯ ಕೋಡನ್ನು ನೀರಿನೊಂದಿಗೆ ತೇಯ್ದು ಗಂಟಲಿನ ಭಾಗಕ್ಕೆ ಹಚ್ಚುವುದರಿಂದ ಮಂಗನಬಾವು ಕಡಿಮೆಯಾಗುವುದು

ಹಸಿವಾಗಲು : ಸ್ಥಳೀಯವಾಗಿ ಸಿಗುವ ಇಂಗ್ಲಾರ್ ಹಣ್ಣನ್ನು ಉಪ್ಪಿನಲ್ಲಿ ಹಾಕಿ ನುಂಗುವುದರಿಂದ ಹೊಟ್ಟೆ ಹಸಿವಾಗಿ ಆಹಾರವನ್ನು ಸೇವಿಸಲು ಸಹಾಯಕಾರಿಯಾಗಿದೆ.

ಸರ್ಪದ ಹುಣ್ಣು : ಯಾವ ಭಾಗದಲ್ಲಿ ಸರ್ಪದ ಹುಣ್ಣು ಆಗಿರುತ್ತದೆಯೋ ಆ ಭಾಗಕ್ಕೆ ಕೆಮ್ಮಣ್ಣನ್ನು ಹಚ್ಚುವುದರಿಂದ ಕಡಿಮೆಯಾಗುವುದು.

ಮೇಲಿನ ವೈದ್ಯ ಪದ್ದತಿಯು ಹ್ಯಾರಡಾ ಜನಪದರಲ್ಲಿ ಪರಂಪರಾನುಗತವಾಗಿ ಸಾಗಿ ಬಂದಿದೆ. ಒಬ್ಬರಿಂದ ಇನ್ನೊಬ್ಬರಿಗೆ ಸಾಗಿ ಬಂದ ಪದ್ದತಿಯಾಗಿದೆ. ಗ್ರಾಮದ ಹಿರಿಯ ಜನಪದರು ಈ ಪದ್ದತಿಯ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದಾರೆ. ಗ್ರಾಮದ ಪಕ್ಕದಲ್ಲಿ ಅಪಾರವಾದ ದಟ್ಟವಾದ ಕಾಡು ಇದೆ. ಕಾಡಿನಲ್ಲಿ ಸ್ಥಳೀಯವಾಗಿ ಸಿಗುವ ಗಿಡಮೂಲಿಕೆಗಳಿಂದ ಈ ಔಷಧವನ್ನು ತಯಾರಿಸಿ ಈಗಲೂ ಬಳಸುತ್ತಿದ್ದಾರೆ. ದಿನನಿತ್ಯದ ಜೀವನದಲ್ಲಿ ಬಾಧಿಸುವ ರೋಗಗಳಾದ ನೆಗಡಿ, ಕೆಮ್ಮು, ಜ್ವರ, ತಲೆನೋವು ಇತ್ಯಾದಿಗಳಿಗೆ ತಮ್ಮ ಮನೆ ಮದ್ದನ್ನೇ ಬಳಸುತ್ತಿದ್ದಾರೆ. ಅದರಂತೆಯೇ ತಮ್ಮ ಆಹಾರದಲ್ಲಿಯೇ ಬದಲಾವಣೆಯನ್ನು ಮಾಡಿಕೊಳ್ಳುವುದರ ಮೂಲಕ ಮನೆ ಮದ್ದನ್ನು ಕಂಡುಕೊಳ್ಳುತ್ತಿದ್ದಾರೆ. ಸಣ್ಣ ಖಾಯಿಲೆಗಳಿಗೆ ವೈದ್ಯರ ಬಳಿಗೆ ಹೋಗುವುದು ಕಡಿಮೆ.

ಗ್ರಾಮದ ಬಹುತೇಕ ಹಿರಿಯ ಜನಪದರು ವೈದ್ಯ-ವಿದ್ಯೆಯನ್ನು ಕಂಡುಕೊಂಡಿದ್ದಾರೆ. ಆದರೆ ಇತ್ತೀಚಿನ ಯುವ ಪೀಳಿಗೆಗೆ ಇದರ ಬಗ್ಗೆ ನಂಬಿಕೆ ಇಲ್ಲ. ಬದಲಾದ ಪರಿಸ್ಥಿತಿಗನುಗುಣವಾಗಿ ಯುವ ಪೀಳಿಗೆಯು ಸಣ್ಣ-ಪುಟ್ಟ ಖಾಯಿಲೆಗಳಿಗೆ ವೈದ್ಯರ ಬಳಿಗೆ ಹೋಗುವುದನ್ನು ಕಾಣಬಹುದಾಗಿದೆ. ಯುವ ಪೀಳಿಗೆಯು ವೈದ್ಯ ಪದ್ದತಿಯ ಹಿಂದೆ ಇರುವ ವೈಜ್ಞಾನಿಕ ಸತ್ಯವನ್ನು ಕಂಡುಕೊಳ್ಳುವ ಬಗ್ಗೆ ಗಮನಹರಿಸುತ್ತಿಲ್ಲ. ಅವುಗಳ ಬಗ್ಗೆ ಅಸಡ್ಡೆ ಭಾವನೆಯನ್ನು ತಳೆದಿದ್ದಾರೆ. ಇಂತಹ ವಿಭಿನ್ನ ವೈಜ್ಞಾನಿಕ ಸತ್ಯವಿರುವ ಎಷ್ಟೊ ವೈದ್ಯ-ಪದ್ದತಿಗಳು ಹ್ಯಾರಡಾ ಜನಪದರಲ್ಲಿ ಹಾಸು ಹೊಕ್ಕಾಗಿವೆ. ಇದನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ವರ್ಗಾಯಿಸುವಂತಹ ಕಾರ್ಯ ತುರ್ತಾಗಿ ಆಗಬೇಕಿದೆ.

೩.೧೩ ಭಜನಾ ಸಂಘ

ಪ್ರಾಚೀನ ಜನಪದರು ದೈವಾರಾಧನೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುತ್ತಿದ್ದರು. ಪ್ರಕೃತಿಯಲ್ಲಿ ಅಗೋಚರ ಶಕ್ತಿಗಳು ನಡೆಸುವ ವಿಸ್ಮಯಗಳು, ವಿಪ್ಲವಗಳು, ನಿಸರ್ಗದ ಬದಲಾವಣೆಗೆ ಪ್ರಕೃತಿಯ ಅತಿಮಾನುಷ ಶಕ್ತಿಯೇ ಕಾರಣವೆಂದು ನಂಬಿದ್ದರು. ನಿಸರ್ಗದ ಪ್ರತಿಯೊಂದು ಘಟನೆಗಳಿಗೆ ದೈವತ್ವದ ಹಿನ್ನೆಲೆಯನ್ನು ಕೊಡುತ್ತಿದ್ದರು. ನಿಸರ್ಗದ ಬದಲಾವಣೆಗಳನ್ನು ವಿಸ್ಮಯ, ಭಯದಿಂದ ನೋಡಿ ನಿಸರ್ಗವನ್ನು ತನ್ನದೇ ಆದ ರೀತಿಯಲ್ಲಿ ಒಲಿಸಿಕೊಳ್ಳುವಲ್ಲಿ ಪ್ರಯತ್ನಿಸುತ್ತಿದ್ದರು. ಜಗತ್ತನ್ನು ಬೆಳಗುವ ಸೂರ್ಯ, ಬೀಸುವ ಗಾಳಿ, ಗುಡುಗು-ಮಿಂಚು, ಮಳೆ, ಬೆಂಕಿ ಇವುಗಳನ್ನು ದೈವೀಕರಣಗೊಳಿಸಿ ಅವುಗಳನ್ನು ಪೂಜಿಸುವ, ಆರಾಧಿಸುವ ಸಂಪ್ರದಾಯವನ್ನು ಹುಟ್ಟು ಹಾಕಿದರು. ಇದೇ ನಂಬಿಕೆಗಳು ಸಂಪ್ರದಾಯಗಳು ಮುಂದೆ ವಿಶಿಷ್ಠ ಸ್ಥಾನವನ್ನು ಪಡೆದುಕೊಂಡವು. ಆಚರಣೆ ಎಂಬುದು ತಮ್ಮ ದಿನನಿತ್ಯ ಜೀವನದ ಒಂದು ಅವಿಭಾಜ್ಯ ಅಂಗವಾಯಿತು.

ದೈವರಾಧನೆಯಲ್ಲಿ ಅತ್ಯಂತ ಪ್ರಮುಖವಾದುದು ಭಜನೆ. ಈಗಲೂ ಕೂಡ ಗ್ರಾಮದಲ್ಲಿ ಸಾಮೂಹಿಕವಾಗಿ ದೇವರನ್ನು ಸ್ತುತಿಸುವ ಸಂಪ್ರದಾಯಕ್ಕೆ ಭಜನೆ ಎಂದು ಕರೆಯುವರು. ದೇಶೀಯವಾಗಿ ಜನಪದರು ಸೃಷ್ಟಿಸಿದ ದೈವಗಳ ಮೇಲಿನ ಹಾಡುಗಳನ್ನು ಹಾಡುವ ಒಂದು ಸಂಪ್ರದಾಯವಾಗಿದೆ. ಹೆಚ್ಚಾಗಿ ಗ್ರಾಮದಲ್ಲಿರುವ ಪ್ರಮುಖ ದೇವರುಗಳನ್ನು ಕುರಿತು ಸ್ತುತಿಸುವ ಸಂಪ್ರದಾಯವಿದೆ. ಗ್ರಾಮದ ಎಲ್ಲಾ ಸಮುದಾಯದವರು, ಮಕ್ಕಳು, ಯುವಕರು, ಮಧ್ಯವಯಸ್ಕರು, ಮುದುಕರು ಸೇರಿಕೊಂಡು ದೇವರ ಆರಾಧನೆಯನ್ನು ಮಾಡುವುದು ಜನಪದರ ಮೇಳವಾಗಿದೆ. ಈ ಭಜನಾ ಮೇಳದಲ್ಲಿ ಹಿಂದೂ, ಮುಸ್ಲಿಂ ಒಳಗೊಂಡಂತೆ ಎಲ್ಲಾ ಧರ್ಮದ ತತ್ವ, ವಚನ, ದಾಸರ ಪದಗಳು, ತತ್ವಪದಗಳು, ಗ್ರಾಮದ ಪ್ರಮುಖ ದೈವಗಳ ಮೇಲೆ ಹಾಡುಗಳನ್ನು ಹೇಳುತ್ತಾ ದೈವವನ್ನು ಸ್ತುತಿಸುವುದಾಗಿದೆ. ತಾಳ, ಡಗ್ಗ, ಹಾರ್ಮೋನಿಯಂ, ಕಾಂಗೋ, ಟಾಕೋ, ಬ್ಯಾಂಗೋಸ್, ತಬಲ, ಲೇಜಿಮ್, ಗಗ್ರಿ, ದಮ್ಮಡಿ, ಜಾಂಜ್, ಏಕತಾರಿ ಮುಂತಾದ ವಾದ್ಯಗಳನ್ನು ಬಳಸುವುದರ ಮೂಲಕ ಭಜನೆಯನ್ನು ಗ್ರಾಮೀಣ ಜನಪದರು ಮಾಡುವರು.

ಇದಕ್ಕೆ ಹ್ಯಾರಡಾ ಗ್ರಾಮವು ಹೊರತಾಗಿಲ್ಲ. ಭಜನೆಯನ್ನು ಪ್ರಾರಂಭಿಸುವಾಗ ಹಾಗೂ ಪ್ರತಿಯೊಂದು ಹಾಡು, ಪದ ಮುಗಿದ ಕೂಡಲೇ "ಜಯಾ ಜಯ ನಮಃ ಪಾರ್ವತೀ ಪತಿ" ಎಂದು ಭಜನೆಯ ಮುಖ್ಯಸ್ಥನು ಹೇಳಿದರೆ ಉಳಿದವರು "ಹರಹರ ಮಹಾದೇವ" ಎಂದು ಉದ್ಗರಿಸುವರು. ಹ್ಯಾರಡಾದ ಜನಪದರು ಭಜನೆಯನ್ನು ಗಣೇಶನ ಉತ್ಸವ, ಗ್ರಾಮದ ವಿವಿಧ ದೈವಗಳ ಕಾರ್ತಿಕೋತ್ಸವ, ಗ್ರಾಮದಲ್ಲಿ ಯಾರಾದರೂ ಮರಣ ಹೊಂದಿದಾಗ, ಹುಣ್ಣಿಮೆ-ಅಮವಾಸ್ಯೆ, ಗ್ರಾಮದಲ್ಲಿ ಮೆರವಣಿಗೆ ಇದ್ದಾಗ, ಗ್ರಾಮೀಣ ದೈವಗಳ ಜಾತ್ರೆ, ಉತ್ಸವ, ಗ್ರಾಮದಲ್ಲಿ ಮಳೆ ಬಾರದೇ ಬರಗಾಲದ ಛಾಯೆ ಇದ್ದಾಗ, ಗ್ರಾಮದ ದೈವಗಳ ಪರುವು ಇದ್ದಾಗ, ಶ್ರಾವಣ, ಯುಗಾದಿ, ಪಂಚಮಿ, ವಿಶೇಷ

ಸಂದರ್ಭಗಳಲ್ಲಿ ಈ ಭಜನೆಯನ್ನು ಮಾಡುವುದುಂಟು. ಹ್ಯಾರಡಾದ ಜನಪದರ ವಿಶೇಷ ಭಜನೆಯೆಂದರೆ ಬರಗಾಲದ ಸಂಧರ್ಭದಲ್ಲಿ ಮಳೆರಾಯನನ್ನು ಒಲಿಸಿಕೊಳ್ಳಲು "ಸಪ್ತ ಭಜನೆ". ಗ್ರಾಮ್ಯ ಭಾಷೆಯಲ್ಲಿ "ಕಟ್ ಭಜನೆ"ಯನ್ನು ಮಾಡುವುದು ವಿಶೇಷವಾಗಿದೆ.

ಈ ಸಪ್ತ ಭಜನೆ ಏಳುದಿನಗಳ ಕಾಲ ಹಗಲೂ-ರಾತ್ರಿ, ಅತೀ ಮಡಿವಂತಿಕೆಯಿಂದ ಮಾಡುವ ಭಜನೆಯಾಗಿದೆ. ಗ್ರಾಮೀಣ ಜನಪದರೆಲ್ಲರೂ ಸೇರಿಕೊಂಡು ಏಳು ದಿನ ಮನೆಗೆ ಹೋಗದೇ ಪ್ರತಿನಿತ್ಯ ಸ್ನಾನ ಮಾಡಿ ಮಡಿಬಟ್ಟೆಗಳನ್ನು ಉಟ್ಟುಕೊಂಡು ಊರಲ್ಲಿ ಆಹಾರವನ್ನು ಊಟಕ್ಕೆ "ಕಂತಿ ಬಿಕ್ಷೆ"ಯಿಂದ ತಂದು ಮುಂಜಾನೆ ನಾಲ್ಕು ಗಂಟೆಗೆ ಭಜನೆಯನ್ನು ಮಾಡುತ್ತಾ ಗ್ರಾಮದ ಪ್ರತಿಯೊಂದು ದೇವಾಲಯಗಳಿಗೆ ತೆರಳಿ ಪೂಜೆಯನ್ನು ಸಲ್ಲಿಸುವರು. ತದನಂತರ ಸಾಯಂಕಾಲ ಎಂಟು ಗಂಟೆಗೆ ಅದೇ ಪ್ರಕಾರವಾಗಿ ಪ್ರತಿಯೊಂದು ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸುವುದು ಈ ಭಜನೆಯ ವಿಶೇಷವಾಗಿದೆ. ಭಜನೆಯನ್ನು ಮಾಡುವ ಪ್ರತಿಯೊಬ್ಬರೂ ತಣ್ಣೀರಿನ ಬಟ್ಟೆಗಳನ್ನು ಧರಿಸಿ ಭಜನೆ ಮಾಡುವರು. ಏಳು ದಿನಗಳ ಕಾಲ ದೇವಾಲಯದಲ್ಲೇ ವಾಸ್ತವ್ಯ, ಹಗಲೂ-ರಾತ್ರಿಯನ್ನದೇ ಭಜನಾ ಕಾರ್ಯಕ್ರಮ ಮುಂದುವರೆಯುತ್ತದೆ. ರಾತ್ರಿಯ ಸಮಯದಲ್ಲಿ ಪಾಳೆಯ ಪ್ರಕಾರ ಭಜನೆಯನ್ನು ಮಾಡುವರು. ಮಲ, ಮೂತ್ರ ವಿಸರ್ಜನೆ ಮಾಡಿ ಬಂದರೂ ಸಹ ಸ್ನಾನವನ್ನು ಮಾಡಿ ದೇವಸ್ಥಾನವನ್ನು ಪ್ರವೇಶಿಸಬೇಕಾಗಿತ್ತು. ಹೀಗೆ ಕಟ್ಟು ನಿಟ್ಟಿನ ವ್ರತಾಚರಣೆಯನ್ನು ಮಾಡುವರು. ಈ ಸಪ್ತ ಭಜನೆಯ ಹಾಡುಗಾರಿಕೆಯಲ್ಲಿ ಸಣ್ಣೀಲಪ್ನರ ಬಸವಲಿಂಗಪ್ಪ ಪ್ರಸಿದ್ದರು. ಇವರು ಶಿವನ ನಾಮಸ್ಮರಣೆಗೆ ಸಂಬಂಧಿಸಿದ ಹಾಡುಗಳನ್ನು ಹಾಡುವುದರಲ್ಲಿ ಸಿದ್ದ ಹಸ್ತರು. ಹೀಗೆ ಕಟ್ಟುನಿಟ್ಟಿನ ಸಪ್ತಭಜನೆಯನ್ನು ನೆರವೇರಿಸಿದ ನಂತರ ಮಳೆ ಬಂದಿರುವ ಎಷ್ಟೋ ಉದಾಹರಣೆಗಳಿವೆ.

ಭಜನೆಯ ಹಾಡುಗಾರಿಕೆಯಲ್ಲಿ ಹ್ಯಾರಡಾದ ಮೇರು ಪ್ರತಿಭೆಗಳೆಂದರೆ ಕೊರ್ಲಹಳ್ಳಿ ರಂಗಜ್ಜ, ಚಕ್ರಸಾಲಿ ಹೊಳಿಯಪ್ಪ, ಕುಂಚೂರು ಅಂಜಿನಪ್ಪ, ಕೊಂಬಳಿ ನೀಲಪ್ಪ, ಮಲ್ಕಪ್ನರ ಭೀಮಪ್ಪ, ಸೆಟ್ಟೆಮ್ನರ ಸಂತೋಷ, ರವಿ ದ್ಯಾಮಕ್ಕನವರ, ಬಸವಲಿಂಗಪ್ಪ ಸಣ್ಣೀಲಪ್ನರ, ಪಾಪಣ್ಣನವರ ನಿಂಗಪ್ಪ ಪ್ರಮುಖರಾದವರು. ಇವರುಗಳು ಶಿಶುನಾಳ ಶರೀಫರ ತತ್ವ ಪದಗಳು, ದಾಸರ ಪದಗಳು, ಮಲಿಯಮ್ಮ, ಆಂಜನೇಯ, ಸವದತ್ತಿ ಯಲ್ಲಮ್ಮ, ಹಾವನೂರು ದ್ಯಾಮವ್ವ, ಪರಶುರಾಮ, ಮೈಲಾರಲಿಂಗೇಶ್ವರ, ಗೋಣಿ ಬಸವೇಶ್ವರ, ಶಿವ-ಪಾರ್ವತಿ, ಗಣೇಶ, ದುರುಗಮ್ಮ, ಕಾಳಮ್ಮ ಮುಂತಾದ ದೈವಗಳ ಮೇಲೆ ಹಾಡುಗಳನ್ನು ಹೇಳುವುದುಂಟು.

ಹ್ಯಾರಡಾ ಗ್ರಾಮದಲ್ಲಿ ಹಲವಾರು ಭಜನಾ ಸಂಘಗಳನ್ನು ನೋಡಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳು ಕೆಳಕಂಡಂತಿವೆ;

೧ ಮಲಿಯಮ್ಮ ದೇವಿ ಭಜನಾ ಸಂಘ

೨ ಮಾರುತಿ ಭಜನಾ ಸಂಘ

೩ ಕಾಳಮ್ಮ ದೇವಿ ಭಜನಾ ಸಂಘ

೦೧. ಮಲಿಯಮ್ಮದೇವಿ ಭಜನಾ ಸಂಘ : ಈ ಸಂಘವು ಸುಮಾರು ೧೯೬೦ರ ದಶಕದಲ್ಲಿ ಪ್ರಾರಂಭವಾಗಿದೆ. ಈ ಸಂಘದ ಅಧ್ಯಕ್ಷರು–ಬತ್ತಿ ನಿಂಗಪ್ಪ, ಉಪಾಧ್ಯಕ್ಷರು –ಸುಣಗಾರ ಪ್ರಕಾಶ್, ಖಜಾಂಚಿ–ಕೊಂಬಳಿ ಹನುಮಂತಪ್ಪ, ಈ ಭಜನಾ ಸಂಘದ ಸದಸ್ಯರು ಹಾಗೂ ವಿಶೇಷ ಪರಿಣಿತಿ ಕೆಳಕಂಡಂತಿವೆ.

ಕ್ರಸಂ	ಹೆಸರು	ವೃತ್ತಿ	ವಿಶೇಷ ಪರಿಣಿತಿ
೦೧	ಪಡುಗದ ನಿಂಗಪ್ಪ	ವ್ಯವಸಾಯ	ತಬಲ
೦೨	ಬತ್ತಿ ನಿಂಗಪ್ಪ	ವ್ಯವಸಾಯ	ತಾಳ
೦೩	ಕೊಂಬಳಿ ನೀಲಪ್ಪ	ವ್ಯವಸಾಯ	ಹಾರ್ಮೋನಿಯಂ ಮತ್ತು ಹಾಡುಗಾರಿಕೆ
೦೪	ಕೊಂಬಳಿ ಹನುಮಂತ	ವ್ಯವಸಾಯ	ತಾಳ
೦೫	ಪಿಳ್ಳಿ ಡಿಳ್ಳೆಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೦೬	ಗುಂಡಾವರ ಸಣ್ಣ ನಿಂಗಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೦೭	ಹಾವನೂರು ಜಗದೀಶ	ವ್ಯವಸಾಯ	ಡಗ್ಗ ಬಾರಿಸುವುದು
೦೮	ಬಡ್ಡಿ ಗುಡ್ಡಪ್ಪ	ವ್ಯವಸಾಯ	ದಮ್ಮಡಿ ಬಾರಿಸುವುದು
೦೯	ಕಿಚಡಿ ತಿರುಕಪ್ಪ	ವ್ಯವಸಾಯ	ಹಾರ್ಮೋನಿಯಂ ಮತ್ತು ಹಾಡುಗಾರಿಕೆ
೧೦	ಮಲ್ಕಪ್ನರ ಭೀಮಪ್ಪ	ವ್ಯವಸಾಯ	ಹಾಡುಗಾರಿಕೆ
೧೧	ಗುಮಾನಿ ಶಂಕ್ರಪ್ಪ	ವ್ಯವಸಾಯ	ಲೇಜೀಮ್
೧೨	ಬಾರ್ಕಿ ಸೋಮಣ್ಣ	ವ್ಯವಸಾಯ	ಹಾಡುಗಾರಿಕೆ
೧೩	ಸಂದಿಮನಿ ರಾಜಪ್ಪ	ವ್ಯವಸಾಯ	ಲೇಜೀಮ್
೧೪	ಮಲ್ಕಪ್ನರ ಬಸಪ್ಪ	ವ್ಯವಸಾಯ	ಹಾರ್ಮೋನಿಯಂ
೧೫	ಹೊಳಲು ಪುಟ್ಟಪ್ಪ	ವ್ಯವಸಾಯ	ತಾಳ
೧೬	ಕುಂಚೂರು ಅಂಜಿನಪ್ಪ	ವ್ಯವಸಾಯ	ಹಾಡುಗಾರಿಕೆ
೧೭	ಬಾರ್ಕಿ ರಂಗಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೧೮	ಬಾರ್ಕಿ ಮಂಜಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೧೯	ಹಳ್ಳಿ ಬಸಪ್ಪ	ವ್ಯವಸಾಯ	ತಬಲ
೨೦	ಹಳ್ಳಿ ಸುರೇಶ	ವ್ಯವಸಾಯ	ತಾಳ

೨೧	ಹೆಗ್ಗಮ್ಮರ ಬಸಪ್ಪ	ವ್ಯವಸಾಯ	ತಾಳ
೨೨	ಕೊಂಬಳಿ ಬಸವರಾಜ	ವ್ಯವಸಾಯ	ಲೇಜೀಮ್
೨೩	ಹರಿಜನ ಪಕ್ಕೀರಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೨೪	ಸುಣಗಾರ ಅಶೋಕ	ವ್ಯವಸಾಯ	ತಾಳ
೨೫	ತಂಬಳಿ ಕೆಂಚಪ್ಪ	ವ್ಯವಸಾಯ	ತಾಳ
೨೬	ಮುದ್ದಿ ಚಿಕ್ಕಪ್ಪ	ವ್ಯವಸಾಯ	ತಬಲ
೨೭	ಮೈಲಾರ ಕುರುವತ್ತೆಪ್ಪ	ವ್ಯವಸಾಯ	ಲೇಜೀಮ್
೨೮	ಚಿಗರಿ ಚಂದ್ರಪ್ಪ	ವ್ಯವಸಾಯ	ಲೇಜೀಮ್
೨೯	ಚಿಗರಿ ಬಸವರಾಜ	ವ್ಯವಸಾಯ	ತಾಳ
೩೦	ಸುಣಗಾರ ಚಂದ್ರಪ್ಪ	ವ್ಯವಸಾಯ	ಡಗ್ಗ ಬಾರಿಸುವುದು

ಮೇಲಿನ ಭಜನಾ ತಂಡದವರು ಕೇವಲ ಹ್ಯಾರಡಾ ಗ್ರಾಮದಲ್ಲಿ ಅಲ್ಲದೇ ಅನೇಕ ಗ್ರಾಮಗಳಲ್ಲಿ ಭಜನೆಯನ್ನು ಮಾಡಿ ವಿವಿಧ ಪ್ರಶಸ್ತಿಗಳನ್ನು ಗೆದ್ದು ಕೊಂಡಿದ್ದಾರೆ, ಆ ಗ್ರಾಮಗಳು ಕೆಳಕಂಡಂತಿವೆ, ಲಿಂಗನಾಯಕನಹಳ್ಳಿ, ಮುಂಡವಾಡ, ದಾಸನಹಳ್ಳಿ, ನಡುವಿನಹಳ್ಳಿ, ಬೂದನೂರು, ಕತ್ತೆಬೆನ್ನೂರು, ಹೊಳಲು, ಮೈಲಾರ, ಕುರುವತ್ತಿ, ಬೇಲೂರು, ಸೂಗೂರು, ನಂದೀಪುರ, ಹುಲಿಕಟ್ಟಿ, ಗೌರಿಹಳ್ಳಿ, ನೀರಲಗಿ, ಗುತ್ತಲ, ಬಸಾಪುರ, ಹರವಿ ಬಸಾಪುರ, ಹರವಿ, ನಿಟ್ಟೂರು, ಕುಂಚೂರು, ಡಂಬ್ರಳ್ಳಿ, ಕಳಸಾಪುರ, ಅರಸನಾಳು, ಹಲುವಾಗಲು, ಗರ್ಭಗುಡಿ, ಸಿದ್ದಾಪುರ, ಶಾಕಾರ, ಹೌಸಿ, ಬನ್ನಿಮಟ್ಟಿ, ಹೀಗೆ ರಾಜ್ಯದ ಹಲವಾರು ಗ್ರಾಮಗಳಿಗೆ ತೆರಳಿ ಭಜನಾ ಕಲೆಯನ್ನು ಪ್ರದರ್ಶಿಸಿದ್ದಾರೆ.

೦೨ ಮಾರುತಿ ಭಜನಾ ಸಂಘ : ಈ ಭಜನಾ ಸಂಘವು ಸ್ವಾತಂತ್ರ್ಯ ಪೂರ್ವದಷ್ಟು ಹಳೆಯದು. ಈಗಲೂ ಕೂಡ ಇದು ಅಸ್ತಿತ್ವದಲ್ಲಿದೆ. ಇದರ ಅಧ್ಯಕ್ಷರು–ಸಣ್ಣೀಲಪ್ನರ ಬಸವಲಿಂಗಪ್ಪ, ಉಪಾಧ್ಯಕ್ಷರು–ಬುಡಗೌಡ್ರ ಬಸವರಾಜ, ಖಜಾಂಚಿ–ಚಕ್ರಸಾಲಿ ಸಂಗಪ್ಪ, ಈ ಭಜನಾ ಸಂಘದ ಸದಸ್ಯರು ಹಾಗೂ ವಿಶೇಷ ಪರಿಣಿತಿ ಕೆಳಕಂಡಂತಿವೆ.

ಕ್ರಸಂ	ಹೆಸರು	ವೃತ್ತಿ	ವಿಶೇಷ ಪರಿಣಿತಿ
೦೧	ಚಕ್ರಸಾಲಿ ಹೊಳಿಯಪ್ಪ	ವ್ಯವಸಾಯ	ಹಾರ್ಮೋನಿಯಂ, ಟಾಕೋ ಮತ್ತು ಹಾಡುಗಾರಿಕೆ
೦೨	ಚಕ್ರಸಾಲಿ ಸಂಗಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೦೩	ಗದುಗಿನ ಬಸಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೦೪	ಗದುಗಿನ ದುರುಗಪ್ಪ	ವ್ಯವಸಾಯ	ತಾಳ
೦೫	ಗದುಗಿನ ಮಲ್ಲಪ್ಪ	ವ್ಯವಸಾಯ	ತಾಳ
೦೬	ಸಣ್ಣೀಲಪ್ನರ ಬಸವಲಿಂಗಪ್ಪ	ವ್ಯವಸಾಯ	ಗಗ್ರಿ, ಬ್ಯಾಂಗೋಸ್

೦೭	ಕೊರ್ಲಹಳ್ಳಿ ರಂಗಜ್ಜ	ವ್ಯವಸಾಯ	ಹಾಡುಗಾರಿಕೆ
೦೮	ಸೆಟ್ಟೆಮ್ನರ ಸಂತೋಷ	ವ್ಯವಸಾಯ	ಹಾಡುಗಾರಿಕೆ
೦೯	ಕಮ್ಮಜ್ಜಿ ಕುರುವತ್ತೆಪ್ಪ	ವ್ಯವಸಾಯ	ತಾಳ
೧೦	ಹರ್ವಿ ವೀರಣ್ಣ	ವ್ಯವಸಾಯ	ತಾಳ
೧೧	ರವಿ ದ್ಯಾಮಕ್ಕನವರ	ವ್ಯವಸಾಯ	ಹಾಡುಗಾರಿಕೆ
೧೨	ಬಸವಣ್ಣೆಪ್ಪ ಕಮ್ಮಜ್ಜಿ	ವ್ಯವಸಾಯ	ತಾಳ
೧೩	ಗದುಗಿನ ಭರಮಪ್ಪ	ವ್ಯವಸಾಯ	ತಾಳ
೧೪	ಬಡ್ಡಿ ಭರಮಪ್ಪ	ವ್ಯವಸಾಯ	ತಾಳ
೧೫	ಕುಮಾರಸ್ವಾಮಿ. ಹೆಚ್.ಎಮ್	ಎಲೆಕ್ಟ್ರಿಷನ್	ಜಾಂಬ್
೧೬	ಕಮ್ಮಜ್ಜಿ ಚಂದ್ರಪ್ಪ	ವ್ಯವಸಾಯ	ತಾಳ
೧೭	ನಾಯಕರ ಕೊಟ್ರಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೧೮	ಗಡ್ಡದ ನಾಗಪ್ಪ	ವ್ಯವಸಾಯ	ತಾಳ
೧೯	ಗಡ್ಡದ ನಾಗಪ್ಪ	ವ್ಯವಸಾಯ	ತಾಳ
೨೦	ಗಡ್ಡದ ಹನುಮಂತಪ್ಪ	ವ್ಯವಸಾಯ	ತಾಳ
೨೧	ವೀರಭದ್ರಪ್ಪ ಹರ್ವಿ	ವ್ಯವಸಾಯ	ತಾಳ

ಈ ಭಜನಾ ಸಂಘವೂ ಕೂಡ ವಿವಿಧ ಗ್ರಾಮಗಳಿಗೆ ತೆರಳಿ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಆ ಗ್ರಾಮಗಳು ಕೆಳಕಂಡಂತಿವೆ. ಮಂಡ್ಯ, ಬೀದರ್, ಬಳ್ಳಾರಿ, ದಾಸನಹಳ್ಳಿ, ಬೂದನೂರು, ವೀರಾಪುರ, ಲಿಂಗನಾಯಕನಹಳ್ಳಿ, ಮಳಲೀಮಠ, ನಂದೀಪುರ, ಕೊರ್ಲಳ್ಳಿ, ಹೊಳಲು, ಹರಪನಹಳ್ಳಿ, ಗಿರಿಯಾಪುರ, ಸೂಗೂರು, ಮೇಡ್ಲೇರಿ, ಕುಂಚೂರು, ಹುಲಿಕಟ್ಟಿ, ಕಲ್ಲಹಳ್ಳಿ, ಹಾರಕನಾಳು, ತಂಬ್ರಳ್ಳಿ, ಚೌಡಯ್ಯದಾನಪುರ ಇತ್ಯಾದಿ.

೦೩. ಕಾಳಿಕಾ ದೇವಿ ಭಜನಾ ಸಂಘ : ಈ ಭಜನಾ ಸಂಘವು ಹಲವಾರು ವರ್ಷಗಳಿಂದ ಹ್ಯಾರಡಾ ಗ್ರಾಮದಲ್ಲಿ ಅಸ್ತಿತ್ವದಲ್ಲಿದೆ. ಈ ಸಂಘದ ಸದಸ್ಯರು, ಮತ್ತು ವಿಶೇಷ ಪರಿಣಿತಿ ಕೆಳಕಂಡಂತಿವೆ.

ಕ್ರಸಂ	**ಹೆಸರು**	**ವೃತ್ತಿ**	**ವಿಶೇಷ ಪರಿಣಿತಿ**
೦೧	ಭಾವಿ ನಿಂಗಪ್ಪ	ವ್ಯವಸಾಯ	ಹಾರ್ಮೋನಿಯಂ ಮತ್ತು ಹಾಡುಗಾರಿಕೆ
೦೨	ಪಟ್ಟೇದ ನಿಂಗಪ್ಪ	ವ್ಯವಸಾಯ	ಡಗ್ಗ ಬಾರಿಸುವುದು
೦೩	ಸಾಲ್ಮನಿ ನಾಗಪ್ಪ	ವ್ಯವಸಾಯ	ಡಗ್ಗ ಮತ್ತು ತಬಲ
೦೪	ಕಲ್ಲಹಳ್ಳಿ ರಾಜಪ್ಪ	ವ್ಯವಸಾಯ	ಹಾಡುಗಾರಿಕೆ
೦೫	ತಡತಲಿ ಚಂದ್ರಪ್ಪ	ವ್ಯವಸಾಯ	ಗಗ್ರಿ ಮತ್ತು ಹಾಡುಗಾರಿಕೆ

೦೬	ಬಡಿಗೇರ ಚಂದ್ರಪ್ಪ	ಬಡಗಿತನ	ಹಾರ್ಮೋನಿಯಂ ಮತ್ತು ಡಗ್ಗ
೦೭	ಪಾಪಣ್ಣನವರ ನಿಂಗಪ್ಪ	ವ್ಯವಸಾಯ	ಹಾಡುಗಾರಿಕೆ
೦೮	ಚಮನ್ ಸಾಹೇಬ್	ಕಲಾವಿದರು	ತಾಳ ಮತ್ತು ಹಾಡುಗಾರಿಕೆ
೦೯	ಪಟ್ಟೇದ ಲೋಕಪ್ಪ	ವ್ಯವಸಾಯ	ಗಗ್ರಿ
೧೦	ಭಾವಿ ಸಣ್ಣನಿಂಗಪ್ಪ	ವ್ಯವಸಾಯ	ತಾಳ ಮತ್ತು ಲೇಜೀಮ್
೧೧	ಗೊರವರ ನಾಗಪ್ಪ	ವ್ಯವಸಾಯ	ತಾಳ
೧೨	ನಾಗಪ್ಪ	ವ್ಯವಸಾಯ	ಹಾಡುಗಾರಿಕೆ

ಹೀಗೆ ಹ್ಯಾರಡಾ ಗ್ರಾಮದಲ್ಲಿ ಹಲವಾರು ಭಜನಾ ಸಂಘಗಳು ಈಗಲೂ ಅಸ್ತಿತ್ವದಲ್ಲಿವೆ. ಇತ್ತೀಚಿನ ದಿನಮಾನಗಳಲ್ಲಿ ಗ್ರಾಮವು ಆಧುನಿಕತೆಗೆ ಒಗ್ಗಿಕೊಳ್ಳುತ್ತಿರುವುದರಿಂದ, ಸಮೂಹ ಮಾಧ್ಯಮಗಳ ಭರಾಟೆಯಿಂದ, ಗ್ರಾಮದಲ್ಲಿ ಹೆಚ್ಚು ಹೆಚ್ಚು ಯುವಕರು ಅಕ್ಷರಸ್ಥರಾಗುತ್ತಿರುವುದರಿಂದ ಭಜನೆಯ ಮೂಲ ಸಂಸ್ಕೃತಿಯು ಕುಸಿಯುತ್ತಿರುವುದನ್ನು ಗಮನಿಸಬಹುದಾಗಿದೆ. ಕೇವಲ ಹಬ್ಬ, ಜಾತ್ರೆ, ಉತ್ಸವದಲ್ಲಿ ನಾಮಕಾವಸ್ಥೆಗೆ ಭಜನೆಗಳನ್ನು ಪ್ರಾರಂಭಿಸುವುದನ್ನು ಕಾಣುತ್ತಿದ್ದೇವೆ. ಗ್ರಾಮದಲ್ಲಿ ಬಹುತೇಕ ಯುವಕರು ಭಜನೆಯಿಂದ ವಿಮುಖವಾಗುತ್ತಿದ್ದಾರೆ. ಭಜನಾ ಸಂಘವು ಕೆಲಸವಿಲ್ಲದ ನಿರುದ್ಯೋಗಿಗಳಿಗೆ ಮಾತ್ರ ಮೀಸಲು ಎನ್ನುವ ಮನೋಭಾವ ಬಹುತೇಕ ಯುವಕರ ಅಭಿಪ್ರಾಯವಾಗಿದೆ. ಇಂತಹ ವಿಶಿಷ್ಟವಾದ ಸಂಸ್ಕೃತಿಯನ್ನು ನಮ್ಮ ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಭಜನೆ ಎನ್ನುವುದು ಧಾರ್ಮಿಕತೆಯ ಬಹುಮುಖ ಆಯಾಮಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಇದರ ಮುಖೇನ ಗ್ರಾಮದ ಸಂಪ್ರದಾಯ, ದೈವದ ಆಚರಣೆ ಮುಂತಾದವುಗಳನ್ನು ಉಳಿಸಿಕೊಂಡು ಹೋಗಬೇಕಾಗಿದೆ. ಇಂದಿನ ಸಮೂಹ ಮಾಧ್ಯಮದ ಆರ್ಭಟದಲ್ಲಿ ಇಂತಹ ಅಪರೂಪದ ಕಲೆಗಳು ಕಣ್ಮರೆಯಾಗುತ್ತಿವೆ. ಇದರ ಉಳಿವಿಗಾಗಿ ಇಂದಿನ ಯುವ ಪೀಳಿಗೆಯು ಚಿಂತಿಸಬೇಕಾದ ಅಗತ್ಯವಿದೆ.

೩.೧೪ ಸುಗಮ ಸಂಗೀತ

ಸಂಗೀತ ಎನ್ನುವುದು ಮನುಷ್ಯನಿಗೆ ಅವಶ್ಯಕವಾದುದು. ಸಂಗೀತದಿಂದಲೇ ಮನುಷ್ಯನು ತನ್ನ ದಣಿವನ್ನು, ಆಯಾಸವನ್ನು ಮರೆಯುವನು. ಅನಾದಿಕಾಲದಿಂದಲೂ ತನ್ನ ದಿನ-ನಿತ್ಯದ ಜೀವನದಲ್ಲಿ ಸಂಗೀತವನ್ನು ಮೈಗೂಡಿಸಿಕೊಂಡು ಬಂದಿದ್ದಾನೆ. ನಮ್ಮ ಪೂರ್ವಜರು ಬಿಡುವಿನ ವೇಳೆಯಲ್ಲಿ ತಮ್ಮದೇ ಆದ ಮೌಖಿಕ ಸಾಹಿತ್ಯವನ್ನು ಸೃಷ್ಟಿಮಾಡಿ ಅದನ್ನು ಹಾಡುತ್ತಾ ಅದಕ್ಕೆ ನೃತ್ಯವನ್ನು ಕಲ್ಪಿಸುತ್ತಾ ನಡೆದುಕೊಂಡು ಬಂದ ಪರಂಪರೆಯನ್ನು ಕಾಣಬಹುದಾಗಿದೆ. ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಸಂಗೀತ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನಾವು ಇತಿಹಾಸದಿಂದ ಕಾಣಬಹುದಾಗಿದೆ.

ಕೆಲವೊಮ್ಮೆ ನಿಸರ್ಗದ ಅತಿಮಾನುಷ ಶಕ್ತಿಯನ್ನು ಒಲಿಸಿಕೊಳ್ಳಲು ಸಂಗೀತವನ್ನು ಬಳಸಿ ಒಲಿಸಿಕೊಳ್ಳುವ ತಮ್ಮ ದೈವಗಳನ್ನು ಒಲಿಸಿಕೊಳ್ಳಲು, ದೈವಗಳನ್ನು ಶಾಂತವಾಗಿರಿಸಲು ಸಂಗೀತದ ಮೊರೆ ಹೋಗುವುದನ್ನು ಕಾಣಬಹುದಾಗಿದೆ. ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಸಂಗೀತದಿಂದ ದೇವರ ಮೊರೆ ಹೋಗುವುದು ಜನಪದರ ಮೂಲ ಉದ್ದೇಶವಾಗಿದೆ. ಸಂಗೀತದಿಂದಲೇ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳವುದನ್ನು ಕಾಣಬಹುದಾಗಿದೆ. ಆರಾಧನೆ, ಪೂಜೆ, ಅರ್ಪಣೆ ಮುಂತಾದ ವಿಧಾನಗಳ ಮೂಲಕ ದೇವರ ಮೊರೆ ಹೋಗುವುದನ್ನು ಕಾಣಬಹುದಾಗಿದೆ. ಕಾಲ ಗತಿಸಿದಂತೆ ವಿನೋದಕ್ಕೆ, ಮನಸ್ಸನ್ನು ಖುಷಿಪಡಿಸುವುದಕ್ಕೆ ಸಂಗೀತವನ್ನು ಬಳಸುವುದುಂಟು. ಹ್ಯಾರಡಾ ಜನಪದರು ಸಂಗೀತ ಕಲೆಯನ್ನು ಕರಗತ ಮಾಡಿಕೊಂಡು ಆ ಪರಂಪರೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿದ್ದಾರೆ. ಇಂತಹ ಆಧುನಿಕ ಕಾಲದಲ್ಲಿ ಸಂಗೀತ ಕಲೆಯನ್ನು ಮುಂದುವರೆಸಿಕೊಂಡು ಬಂದಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಹ್ಯಾರಡಾದಲ್ಲಿ ಇಂತಹ ಸಂಗೀತ ಮೇಳಗಳು ಇಂದಿಗೂ ಅಸ್ತಿತ್ವದಲ್ಲಿವೆ. ಪುಷ್ಪಕಲಾ ಬಳಗವು ಸುಗಮ ಸಂಗೀತದ ಸುಧೆಯನ್ನು ಹರಿಸುವುದರಲ್ಲಿ ಪ್ರಮುಖವಾದುದು. ಪಿಂಜಾರ ಚಮನ್ ಸಾಹೇಬರ ಸಾರಥ್ಯದಲ್ಲಿ ಮರೋಳ ಮಂಜುನಾಥ, ಮಂಜುನಾಥ ನಾಯ್ಕರ, ಚಕ್ರಸಾಲಿ ಹೊಳಿಯಪ್ಪ ಕೊರ್ಲಹಳ್ಳಿ ರಂಗಪ್ಪ ಮುಂತಾದವರು ನಾಡಿನಾದ್ಯಂತ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಗ್ರಾಮದ ಶಿಕ್ಷಕರಾದ ನಾಗರಾಜ ಟಿ. ಅವರು ಕರೋನ ಹಾಡುಗಳನ್ನು ಹಾಡುವುದರ ಮೂಲಕ ಸಂಗೀತ ಸುಧೆಯನ್ನು ಪಸರಿಸುತ್ತಿದ್ದಾರೆ. ಜನಪದ ಗೀತೆ, ರಿವಾಯತ್ ಪದಗಳು, ಕ್ರಾಂತಿಗೀತೆ ಮುಂತಾದವುಗಳನ್ನು ತಾವೇ ಸ್ವತಃ ಸಾಹಿತ್ಯ ಸೃಷ್ಠಿ ಮಾಡಿ ಅದನ್ನು ಹಾಡಿ ನಾಡಿನಾದ್ಯಂತ ಈ ಸಂಗೀತ ಕಲೆಯನ್ನು ಪ್ರದರ್ಶಿಸಿದ್ದಾರೆ. ದಸರಾ ಉತ್ಸವ, ಹಂಪಿ ಉತ್ಸವ, ಹೆಸರಾಂತ ಕಾರ್ಯಕ್ರಮದಲ್ಲಿ ತಮ್ಮ ಕಲೆಯನ್ನು ಈಗಲೂ ಪ್ರದರ್ಶಿಸುತ್ತಿದ್ದಾರೆ. ಇವರ ಹಲವಾರು ಕಾರ್ಯಕ್ರಮಗಳು ದೂರದರ್ಶನದಲ್ಲಿ ಪ್ರಸಾರವಾಗಿ ಅಪಾರ ಜನಮನ್ನಣೆಯನ್ನು ಗಳಿಸಿವೆ. ಆದರೂ ಇಂತಹ ಕಲೆಗಾರರನ್ನು ಸರ್ಕಾರ ಗುರ್ತಿಸದಿರುವುದು ಅತ್ಯಂತ ವಿಶಾದಕರವಾಗಿದೆ.

೩.೧೫ ನ್ಯಾಯ ವ್ಯವಸ್ಥೆ

ಪ್ರಾಚೀನ ಕಾಲದಲ್ಲಿಯೂ ಸಹ ನ್ಯಾಯ ಪದ್ಧತಿಯ ವ್ಯವಸ್ಥೆಯು ಚಾಲ್ತಿಯಲ್ಲಿತ್ತು ಎಂದು ಇತಿಹಾಸದಲ್ಲಿ ಉಲ್ಲೇಖವನ್ನು ಕಾಣಬಹುದಾಗಿದೆ. ಪ್ರಾಚೀನ ಜನಪದರು ಸಾಮಾಜಿಕ ಕಟ್ಟಳೆಗಳಿಗೆ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು. ಪ್ರತಿಯೊಂದು ಕುಟುಂಬಗಳು, ಸಮುದಾಯಗಳು ತಮ್ಮದೇ ಆದ ಒಪ್ಪಿತ ಸಂಪ್ರದಾಯಗಳ ಕಟ್ಟು ಪಾಡುಗಳಿಗೆ ಬೆಲೆಯನ್ನು ಕೊಡುತ್ತಿದ್ದರು. ಹಳ್ಳಿಗಳ ನೆಮ್ಮದಿಗೆ, ಶಾಂತಿಗೆ ಈ ಕಟ್ಟು ಪಾಡುಗಳೇ ಕಾರಣೀಭೂತವಾಗಿದ್ದವು. ಕುಟುಂಬವನ್ನು, ಸಮುದಾಯವನ್ನು, ವ್ಯಕ್ತಿಯನ್ನು ಇವು ನಿಯಂತ್ರಿಸುತ್ತಿದ್ದವು. ಪ್ರಾಚೀನ ಆರ್ಯರ ಕಾಲಾವಧಿಯಲ್ಲಿ ಪ್ರತಿಯೊಂದು ಗ್ರಾಮಕ್ಕೂ 'ಗ್ರಾಮಿಣಿ" ಎಂಬ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಆ ಗ್ರಾಮದ

ಸಂಪೂರ್ಣ ಜವಾಬ್ದಾರಿ, ನ್ಯಾಯಿಕ ವ್ಯವಸ್ಥೆ, ಸಾಮಾಜಿಕ ನೀತಿ, ನಿಯಮಗಳು ಈತನಿಂದ ನಿರ್ಮಾಣವಾಗುತ್ತಿದ್ದವು. ಬಗೆ ಹರಿಸಲಾಗದ ಸಮಸ್ಯೆಗಳನ್ನು ರಾಜನ್(ರಾಜ) ನ್ಯಾಯನಿರ್ಣಯವನ್ನು ಮಾಡುತ್ತಿದ್ದನು. ವಿಶೇಷವಾಗಿ ಬುಡಕಟ್ಟು ಸಮುದಾಯಗಳಲ್ಲಿ ನ್ಯಾಯ ಪದ್ದತಿಗೆ ಬಹಳಷ್ಟು ಗೌರವವನ್ನು ಕೊಡುತ್ತಿದ್ದರು. ಆ ನ್ಯಾಯ ನಿರ್ಣಯಗಳಿಗೆ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದರು.

ಆದರೆ ಇತ್ತೀಚಿಗೆ ಆಧುನಿಕತೆಯ ಸ್ಪರ್ಶವಾದಂತೆ ಸಮಾಜದಲ್ಲಿ ನ್ಯಾಯ-ನಿರ್ಣಯದ ಬೇರುಗಳು ಸಡಿಲವಾಗುತ್ತಿವೆ. ಪ್ರತಿಯೊಂದು ಸಣ್ಣ ಪುಟ್ಟ ವಿಚಾರಗಳಿಗೂ ಕೋರ್ಟ್ ಕಛೇರಿಗೆ ಅಲೆದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದು ಗ್ರಾಮದ ಹಲವಾರು ವ್ಯಾಜ್ಯಗಳು ಕೋರ್ಟಿನಲ್ಲಿ ಇತ್ಯರ್ಥವಾಗುತ್ತಿವೆ. ಗ್ರಾಮದಲ್ಲಿ ಯುವಕರು ಸುಶಿಕ್ಷಿತರಾಗುತ್ತಿದ್ದಂತೆಯೇ ಹಿರಿಯರ ಸಲಹೆ, ಮಾರ್ಗದರ್ಶನಗಳಿಗೆ ಮನ್ನಣೆ ಸಿಗುತ್ತಿಲ್ಲ. ಪರಸ್ಪರ ಸಹಕಾರ, ಮಾನವೀಯ ಮೌಲ್ಯಗಳು, ಸೋದರತ್ವ, ಕೊಡು-ಕೊಳ್ಳುವಿಕೆಯು ಇಲ್ಲವಾಗುತ್ತಾ ಸದಾ ಸಮಾಜದಲ್ಲಿ ಅನಗತ್ಯ ತಲ್ಲಣಗಳು ಸೃಷ್ಟಿಯಾಗುತ್ತಿವೆ. ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಸಾಮರಸ್ಯದ ಜೀವನ ಕಣ್ಮರೆಯಾಗುತ್ತಿದೆ. ಸದಾ ವಿವಿಧ ರೀತಿಯ ಸಮಸ್ಯೆಗಳ ಸರಮಾಲೆಗಳೇ ಎದ್ದು ಕಾಣುತ್ತಿವೆ. ಸಮುದಾಯವೆಂಬ ವಿಷ ಬೀಜ ಹೆಮ್ಮರವಾಗುತ್ತಾ ಬೆಳೆಯತೊಡಗಿದೆ.

ಹಿಂದಿನ ದಿನಮಾನಗಳಲ್ಲಿ ಹ್ಯಾರಡಾ ಜನಪದರು ನ್ಯಾಯ ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ಪರಿಪಾಲಿಸಿಕೊಂಡು ಬಂದಿದ್ದರು. ಗ್ರಾಮದಲ್ಲಿ ಏನಾದರೂ ಜಗಳ, ಕಳ್ಳತನ, ಜಮೀನಿಗೆ ಸಂಬಂಧಿಸಿದಂತೆ ವಿವಾದಗಳು ಇತ್ಯಾದಿಗಳನ್ನು ಪಂಚಾಯತಿಯನ್ನು ಕೂಡಿಸುವ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಇದನ್ನು ಗ್ರಾಮ್ಯ ಭಾಷೆಯಲ್ಲಿ 'ಪಂಚೇತಿ' ಎಂದು ಕರೆಯುವರು. ಇಂತಹ ಸಮಸ್ಯೆಗಳು ಬಂದಾಗ ಊರಿನ ಹಿರಿಯರು ಕೂಡಿಕೊಂಡು ಎರಡೂ ಪಾರ್ಟಿಯವರನ್ನು ಕರೆಸಿಕೊಂಡು ಮಾತುಕತೆಯ ಮೂಲಕ ಬಗೆಹರಿಸುತ್ತಿದ್ದರು. ಅನ್ಯಾಯಕ್ಕೆ ಒಳಗಾದವನಿಗೆ ಪರಿಹಾರವನ್ನು ಒದಗಿಸುತ್ತಿದ್ದರು. ಇದರಲ್ಲಿ ಊರಿನ ಹಿರಿಯರ ನಿರ್ಧಾರವೇ ಅಂತಿಮವಾಗಿರುತ್ತಿತ್ತು. ಯಾರೂ ಇದನ್ನು ಪ್ರಶ್ನಿಸುತ್ತಿರಲಿಲ್ಲ. ಒಂದು ವೇಳೆ ವ್ಯಕ್ತಿಯು ತಪ್ಪು ಮಾಡಿದಾಗಲೂ ಹಿರಿಯರ ಮಾತು ಕೇಳದೇ ಇದ್ದಾಗ, ಹಿರಿಯರು ಆತನಿಗೆ ಒಂದೆರಡು ಏಟುಗಳನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸುತ್ತಿದ್ದರು. ಒಂದರ್ಥದಲ್ಲಿ ಈ 'ಪಂಚೇತಿ'ಯು ಕೋರ್ಟ್‌ನ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿತ್ತು.

ಪಂಚೇತಿಯನ್ನು ಮಾಡುವ ಹಿರಿಯರು ಯಾರ ಲಾಭಿಗೂ ಮಣಿಯದೇ ಸದಾ ನ್ಯಾಯವನ್ನು ಒದಗಿಸುವ ಮನೋಧರ್ಮವನ್ನು ಹೊಂದಿದವರಾಗಿದ್ದರು. ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಒದಗಿಸುತ್ತಿದ್ದರು. ಈ ಹಿರಿಯರ ಮಾತಿಗೆ ಎಲ್ಲರ ಮನ್ನಣೆಯು ದೊರೆಯುತ್ತಿತ್ತು. ಹ್ಯಾರಡಾ ಗ್ರಾಮದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಗ್ರಾಮ ಪಂಚಾಯತಿಯ ಜನ

ಪ್ರತಿನಿಧಿಗಳು ಇಂದು ಬಹುತೇಕವಾಗಿ 'ಪಂಚೇತಿ'ಗಳನ್ನು ಮಾಡುತ್ತಿದ್ದಾರೆ. ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಗ್ರಾಮದ ಹಿರಿಯರು ಕೂಡಿಕೊಂಡು ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳುವ ಪದ್ದತಿಯನ್ನು ಇತ್ತೀಚಿಗೆ ಕಂಡುಕೊಂಡಿದ್ದಾರೆ.

ಗ್ರಾಮವು ಹೆಚ್ಚು ಹೆಚ್ಚು ಸುಶಿಕ್ಷಿತರನ್ನು ಹೊಂದುತ್ತಿದೆ. ಇತ್ತೀಚಿಗೆ ಪ್ರತಿಯೊಂದು ಸಣ್ಣ ಸಮಸ್ಯೆಯನ್ನು ಕೋರ್ಟಿನಲ್ಲಿ ಪ್ರಶ್ನಿಸುವ ಮನೋಭಾವನೆಯನ್ನು ತಾಳುತ್ತಿದ್ದಾರೆ. ಅದರಲ್ಲೂ ಪ್ರಮುಖವಾಗಿ ಜಮೀನಿಗೆ ಸಂಬಂಧಿಸಿದ ಹೆಚ್ಚು ವಿವಾದಗಳು ಹ್ಯಾರಡಾದಲ್ಲಿ ಇವೆ. ಇಂತಹ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲಿ ಬಗೆಹರಿಸಿಕೊಳ್ಳದೇ ಕೋರ್ಟಿನಲ್ಲಿ ಇತ್ಯರ್ಥವಾಗುತ್ತಿರುವುದನ್ನು ಇತ್ತೀಚಿಗೆ ಕಾಣಬಹುದಾಗಿದೆ. ಸುಶಿಕ್ಷಿತರು ಸ್ಥಳೀಯ ಪಂಚಾಯತಿಗಳಿಗೆ ಮಾನ್ಯತೆಯನ್ನು ಕೊಡುತ್ತಿಲ್ಲ. ತಾವು ಪಡೆದ ಜ್ಞಾನವನ್ನು ಉಪಯೋಗಿಸಿಕೊಂಡು ಕಾನೂನಾತ್ಮಕವಾಗಿ ಕೋರ್ಟಿನಲ್ಲಿ ಪ್ರಶ್ನಿಸುವ ಮನೋಭಾವನೆಯನ್ನು ತಾಳುತ್ತಿದ್ದಾರೆ. ಆದ್ದರಿಂದ ಗ್ರಾಮವು ಹೆಚ್ಚು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಪರಂಪರಾನುಗತ ನ್ಯಾಯವ್ಯವಸ್ಥೆಯು ಇಂದು ಬದಲಾವಣೆಯನ್ನು ಕಾಣುತ್ತಿದೆ.

೩.೧೬ ಸಮುದಾಯಗಳು

ಗ್ರಾಮೀಣ ಸಮುದಾಯವು ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದಲ್ಲಿ ಶಾಶ್ವತವಾಗಿ ವಾಸಿಸುತ್ತಿರುವ ಜನರ ಒಂದು ಗುಂಪು ಎಂದು ವ್ಯಾಖ್ಯಾನಿಸಬಹುದು. ಈ ಗುಂಪಿನ ಸದಸ್ಯರು, ಸಮುದಾಯ ಪ್ರಜ್ಞೆಯನ್ನು ಹೊಂದಿದ್ದು, ವಿಶಿಷ್ಟವಾದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ಹೊಂದಿರುತ್ತಾರೆ. ಇವುಗಳಿಂದಾಗಿ ಈ ಸಮುದಾಯವನ್ನು ಇತರೆ ಸಮುದಾಯಗಳಿಂದ ಪ್ರತ್ಯೇಕಿಸಬಹುದು.

ಇಂದಿನ ಬಹುತೇಕ ಗ್ರಾಮಗಳು ಸಮುದಾಯ ಪದ್ದತಿಯನ್ನು ಬೆಳೆಸಿಕೊಂಡು ಬಂದಿವೆ. ಸಮುದಾಯವು ಗ್ರಾಮಸ್ಥರಲ್ಲಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಉಚ್ಚ-ನೀಚ, ತಾರತಮ್ಯ ಭಾವನೆಯನ್ನು ಬೆಳೆಸುತ್ತಿವೆ. ಇದಕ್ಕೆ ಹ್ಯಾರಡಾ ಗ್ರಾಮವೇನೂ ಹೊರತಾಗಿಲ್ಲ. ಗ್ರಾಮದಲ್ಲಿ ಹಲವಾರು ಸಮುದಾಯಗಳನ್ನು ಕಾಣಬಹುದಾಗಿದೆ. ಅದರಲ್ಲೂ ವಿಶೇಷವಾಗಿ ಹಿಂದೂ ಧರ್ಮದಲ್ಲಿ ಸಮುದಾಯ ವ್ಯವಸ್ಥೆ ಪ್ರಮುಖವಾಗಿದೆ.

ಹ್ಯಾರಡಾ ಗ್ರಾಮದಲ್ಲಿ ಹಲವಾರು ಸಮುದಾಯಗಳನ್ನು ಕಾಣಬಹುದು. ವಿವಿಧ ಸಮುದಾಯದವರು ವಿವಿಧ ರೀತಿಯ ವೃತ್ತಿಯನ್ನು ಮಾಡುತ್ತಿದ್ದಾರೆ. ಕುರುಬರು ಹೆಚ್ಚಾಗಿ ಕುರಿಕಾಯುವ ವೃತ್ತಿಯನ್ನು ಮಾಡುತ್ತಿದ್ದಾರೆ. ಲಿಂಗಾಯತ ಸಮುದಾಯದವರು ಹೆಚ್ಚಾಗಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಮ್ಮಾರ ಸಮುದಾಯದವರು ಕಬ್ಬಿಣದ ಕೃಷಿ ಉಪಕರಣಗಳ ತಯಾರಿಕೆಯಲ್ಲಿ ತಮ್ಮನ್ನು ತಾವುಗಳು ತೊಡಗಿಸಿಕೊಂಡಿದ್ದಾರೆ. ವಾಲ್ಮೀಕಿ ಸಮುದಾಯದವರು ಸಾಂಪ್ರದಾಯಕ ಕೃಷಿ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಹರಿಜನ ಸಮುದಾಯದವರು ತಮ್ಮ ತುಂಡು ಜಮೀನಿನಲ್ಲಿ ಕೃಷಿಯನ್ನು

ಮಾಡುತ್ತಾ ಕೂಲಿ ಕೆಲಸವನ್ನು ಮಾಡುತ್ತಿದ್ದಾರೆ. ಕ್ಷೌರಿಕರು ತಮ್ಮ ಮೂಲ ವೃತ್ತಿಯನ್ನೆ ಮುಂದುವರೆಸಿಕೊಂಡು ಬಂದಿದ್ದಾರೆ. ಬಡಗಿತನ ಮಾಡುವವರು ಕಟ್ಟಿಗೆಯ ಸಾಂಪ್ರದಾಯಕ ಕೃಷಿ ಉಪಕರಣಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದಾರೆ. ಪಿಂಜಾರ್ ಸಮುದಾಯದವರು ಕೃಷಿ ಹಾಗೂ ವ್ಯಾಪಾರವನ್ನು ನೆಚ್ಚಿಕೊಂಡಿದ್ದಾರೆ.

ಹೀಗೆ ವಿವಿಧ ಸಮುದಾಯಗಳು ಬಹುತೇಕವಾಗಿ ತಮ್ಮ ಮೂಲ ವೃತಿಯನ್ನೇ ಮುಂದುವರೆಸಿಕೊಂಡು ಬಂದಿರುವುದನ್ನು ನಾವಿಲ್ಲಿ ಕಾಣಬಹುದು. ಹೀಗೆ ತಮ್ಮ ವೃತ್ತಿಯಾಧಾರಿತ ವಿವಿಧ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡು ಗ್ರಾಮದ ಅಭಿವೃದ್ದಿಗೆ ಶ್ರಮಿಸುತ್ತಿದ್ದಾರೆ. ನೆರೆಹೊರೆಯ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಬಾಂಧವ್ಯವನ್ನು ಇಟ್ಟುಕೊಂಡಿರುವುದನ್ನು ನಾವಿಲ್ಲಿ ಕಾಣಬಹುದು.

೩.೧೬.೧ ಹಿಂದೂ ಧರ್ಮ

ಹಿಂದೂ ಧರ್ಮವು ಅತ್ಯಂತ ಪುರಾತನವಾದ, ಸನಾತನವಾದ ಧರ್ಮವಾಗಿರುತ್ತದೆ. ವಿಶ್ವದ ಹಲವಾರು ಪ್ರಮುಖ ಧರ್ಮಗಳಲ್ಲಿ ಹಿಂದೂ ಧರ್ಮವು ಒಂದಾಗಿರುತ್ತದೆ. ಹಿಂದೂ ಎಂಬ ಪದವು ಭೌಗೋಳಿಕ ನಿರೂಪಣೆಯಿಂದ ಬಂದಿರುತ್ತದೆ. ಹಿಂದೂ ಎನ್ನುವ ಪದವು ಪುರಾತನ ಪರ್ಶಿಯನ್ನರು ಸಿಂಧೂ ನದಿಯ ಮೇಲೆ ವಾಸಿಸುವವರನ್ನು ಹಿಂದೂ ಎಂದು ಕರೆಯುತ್ತಿದ್ದರು. ಅಂದರೆ ಅವರು 'ಸ' ಕಾರದ ಬದಲಾಗಿ 'ಹ' ಕಾರವನ್ನು ಉಚ್ಚರಿಸುತ್ತಿದ್ದರು. ಕಾರಣ ಸಿಂದೂ ಎಂಬ ಪದವು ಕಾಲಾಂತರದಲ್ಲಿ ಹಿಂದೂ ಆಗಿ ಮಾರ್ಪಟ್ಟಿತು. ಆದ್ದರಿಂದ ಸಿಂದೂ ನದಿಯ ಮೇಲೆ ವಾಸಿಸುವವರನ್ನು ಹಿಂದೂಗಳೆಂದು ಅವರು ಅನುಸರಿಸಿಕೊಂಡು ಬಂದ ಧರ್ಮವನ್ನು ಹಿಂದೂ ಧರ್ಮ ಎಂದು ಕರೆಯುತ್ತಿದ್ದರು. ಸಿಂಧೂ ನದಿಯ ಮೇಲೆ ವಾಸಿಸುವ ಜನರನ್ನು ಗ್ರೀಕರು 'Indom' ಎಂದು ಕರೆದರೆ. ಆಂಗ್ಲರು 'Indus' ಎಂದು ಕರೆದರು. 'Indus' ಎಂಬ ಪದವು ಕ್ರಮೇಣವಾಗಿ 'India' ಎಂದು ಕರೆಯತೊಡಗಿದರು.

ಹ್ಯಾರಡ ಗ್ರಾಮದಲ್ಲಿ ಬಹುತೇಕವಾಗಿ ಶೇ ೯೦ ರಷ್ಟು ಹಿಂದೂಗಳನ್ನು ಕಾಣಬಹುದಾಗಿದೆ. ಇಲ್ಲಿ ಹಲವಾರು ವೈಷ್ಣವ ದೇವಾಲಯಗಳನ್ನು ಕಾಣಬಹುದಾಗಿದೆ. ಈ ವೈಷ್ಣವ ಪಂಥದ ಬ್ರಾಹ್ಮಣರು ಶಿವನ ಆರಾಧಕರಾಗಿದ್ದರು. ಹ್ಯಾರಡಾ ಗ್ರಾಮದ ಅಕ್ಕಪಕ್ಕದಲ್ಲಿರುವ ಬಹುತೇಕ ಗ್ರಾಮಗಳು ಅಂದರೆ ಹೊಳಲು, ಕುರುವತ್ತಿ, ಹಡಗಲಿ ಮುಂತಾದವುಗಳು ಬ್ರಾಹ್ಮಣರ ಗ್ರಾಮಗಳಾಗಿದ್ದವು. ಇವರು ಅಗ್ರಹಾರಗಳನ್ನಾಗಿ ಮಾಡಿಕೊಂಡು ಇದ್ದುದರಿಂದ ವೈಷ್ಣವ ಪಂಥವು ಉನ್ನತ ಸ್ಥಾನದಲ್ಲಿತ್ತು. ಇದಕ್ಕೆ ಪುಷ್ಟಿ ನೀಡುವಂತೆ ಮೈಲಾರ ಶಾಸನವು "ವೇದವಿದರ್ವ್ವೈಷ್ಣವಧರ್ಮೊದಯರ ಕಳಂಕಚರಿತರಿನ್ನೂರ್ವ್ವರು ಮತ್ಯಾದರದಿ ಶಿವಾಲಯದೀ ಮೇದಿನಿ ಸರ್ವ್ವಮಾನ್ಯಾದಿಂ ಪಾಲಿಸುವರ್" ಎಂದಿದೆ. ಅಗ್ರಹಾರಗಳು ವೈಷ್ಣವ ಪಂಥದ ಕೇಂದ್ರವಾಗಿತ್ತು. ಬರುಬರುತ್ತಾ ಹನ್ನೆರಡನೇಯ

ಶತಮಾನದಲ್ಲಿ ಬಸವಣ್ಣನವರ ವಚನ ಸಾಹಿತ್ಯದ ಭರಾಟೆಯಲ್ಲಿ ಬ್ರಾಹ್ಮಣರ ಪ್ರಭುತ್ವ ಕಡಿಮೆಯಾಗಿ ಲಿಂಗಾಯತ-ವೀರಶೈವ ತತ್ವಗಳು ಮುನ್ನೆಲೆಗೆ ಬಂದವು. ಹೀಗೆ ಹಿಂದೂ ಧರ್ಮದಲ್ಲಿ ಹಲವಾರು ಸಮುದಾಯಗಳು ಉಗಮವಾದವು. ಹ್ಯಾರಡಾ ಗ್ರಾಮದಲ್ಲಿ ಶ್ರೇಣೀಕೃತ ವ್ಯವಸ್ಥೆಯ ಸಮುದಾಯ ಪದ್ದತಿಯನ್ನು ಕಾಣಬಹುದಾಗಿದೆ. ಕುರುಬ, ಲಿಂಗಾಯತ, ವಾಲ್ಮೀಕಿ, ಹರಿಜನ, ಗೊಲ್ಲರು, ಮಡಿವಾಳರು, ಗಂಗಾಮತಸ್ಥರು, ಕಮ್ಮಾರ, ಬಣಜಿಗ, ಜಂಗಮ, ಚಕ್ರಸಾಲಿಗಳು, ಕ್ಷೌರಿಕರು, ಮತ್ತು ಪಿಂಜಾರರು ಮುಂತಾದ ಸಮುದಾಯಗಳು ಪ್ರಮುಖವಾದವುಗಳಾಗಿವೆ.

ಕುರುಬ ಸಮುದಾಯ

ಕರ್ನಾಟಕದ ಪ್ರಮುಖ ಜನ ಸಮುದಾಯಗಳಲ್ಲಿ ಹಾಲುಮತ ಜನಾಂಗವು ಒಂದು. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹು ದೊಡ್ಡದಾದ ಪರಂಪರೆಯನ್ನು ಹೊಂದಿರುವ ಸಮುದಾಯವಾಗಿದೆ. ಇವರನ್ನು ಗ್ರಾಮ್ಯ ಭಾಷೆಯಲ್ಲಿ ಕುರುಬರು ಎಂದು ಕರೆಯುವರು. ಅನಾದಿಕಾಲದಿಂದಲೂ ಕುರಿಯನ್ನು ಸಾಕಣೆ ಮಾಡುವುದು, ಅದರಿಂದ ಬಂದ ಉಣ್ಣೆಯಿಂದ ಕಂಬಳಿ ತಯಾರಿಸುವುದು, ಇದರ ಜೊತೆ ಜೊತೆಗೆ ವ್ಯವಸಾಯವನ್ನು ಮಾಡುವುದು ಇವರ ಉದ್ಯೋಗಗಳಾಗಿವೆ. ತಮ್ಮ ಸಮುದಾಯದ ಸಂಸ್ಕೃತಿ, ಆಚಾರ-ವಿಚಾರ, ಜೀವನ ಪದ್ದತಿ, ಧಾರ್ಮಿಕ ವಿಧಿ-ವಿಧಾನಗಳನ್ನು ಈಗಲೂ ಪೋಷಿಸಿಕೊಂಡು ಬಂದಿದ್ದಾರೆ. ವಿಶೇಷವಾಗಿ ಹಬ್ಬಗಳಲ್ಲಿ , ಜಾತ್ರೆಗಳಲ್ಲಿ ಇವರ ಸಂಸ್ಕೃತಿಯ ಅನಾವರಣಗಳನ್ನು ಕಾಣಬಹುದಾಗಿದೆ. ಹ್ಯಾರಡ ಗ್ರಾಮದಲ್ಲಿ ಬಹು ಸಂಖ್ಯಾತ ಪ್ರಭಲ ಕೋಮು ಆಗಿದೆ. ಈಗಲೂ ಸಹ ಬಹುತೇಕ ಜನರು ಕುರಿಕಾಯುವ ಕಾಯಕವನ್ನು ಮಾಡುವುದನ್ನು ಕಾಣಬಹುದಾಗಿದೆ.

ಕೊಲ್ಲಿಪಾಕಿಯ ರೇವಣಸಿದ್ದೇಶ್ವರ, ಸೊನ್ನಲಾಪುರದ ಸಿದ್ದರಾಮೇಶ್ವರ, ಅರಕೇರಿಯ ಅಮೋಘಸಿದ್ದೇಶ್ವರ, ಸರೂರು ಶಾಂತ ಮುತ್ತಯ್ಯ, ತೂಗುಡ್ಡದ ಮರುಳ ಸಿದ್ದೇಶ್ವರ ಮುಂತಾದ ಗುರುಪರಂಪರೆಯನ್ನು ಹೊಂದಿದ ಸಮುದಾಯವಾಗಿದೆ. ಬೀರೇಶ, ಮೈಲಾರಲಿಂಗೇಶ್ವರ, ಕಮಾಳಿಂಗರಾಯ, ಜಟ್ಟಿಂಗರಾಯ, ಇಟ್ಟಪ್ಪ, ಬುಳ್ಳಪ್ಪ, ಕನಕದಾಸರು, ಸಂಗೊಳ್ಳಿ ರಾಯಣ್ಣ, ಮುಂತಾದವರನ್ನು ತಮ್ಮ ಸಾಂಸ್ಕೃತಿಕ ನಾಯಕರನ್ನಾಗಿ ಸ್ವೀಕರಿಸಿದ್ದಾರೆ. ಗ್ರಾಮದಲ್ಲಿ ಬಹಳಷ್ಟು ವರ್ಷಗಳವರೆಗೆ ಇವರು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸುಧಾರಣೆಯನ್ನು ಕಂಡಿರಲಿಲ್ಲ. ೧೯೫೦ ರ ದಶಕದಿಂದೀಚೆಗೆ ರಾಜಕೀಯವಾಗಿ, ಆರ್ಥಿಕವಾಗಿ ಮುನ್ನಲೆಗೆ ಬರತೊಡಗಿದರು. ಗ್ರಾಮದಲ್ಲಿ ಇವರು ಅಷ್ಟೇನು ಜಮೀನುಗಳನ್ನು ಹೊಂದಿಲ್ಲ. ತಮ್ಮ ಪರಿಶ್ರಮದ ಬಲದಿಂದಲೇ ಜೀವನ ನಡೆಸುತ್ತಿದ್ದಾರೆ. ಕುರಿಗಾಹಿ ಇವರ ಪ್ರಮುಖ ಉದ್ಯೋಗವಾಗಿದೆ. ಬಹುತೇಕವಾಗಿ ಇವರು ಊರ ಹೊರಗೆ ಹಟ್ಟಿಗಳನ್ನು ನಿರ್ಮಿಸಿಕೊಂಡು ಕುರಿಗಳ ಜೊತೆಗೆ ಇರುವರು. ಗ್ರಾಮದ ಸುತ್ತ-ಮುತ್ತಲಿರುವ ಕಾಡು ಪ್ರದೇಶವೇ ಇವರ ಕುರಿಗಳಿಗೆ ಮೂಲ ಆಹಾರ.

ಕೈಯಲ್ಲೊಂದು ಕೊಡಲಿ, ಹೆಗಲ ಮೇಲೆ ಕಂಬಳಿ, ಬಗಲಲ್ಲಿ ನೀರಿನ ತತ್ರಾಣಿಯನ್ನು ಹಿಡಿದು ಕುರಿಗಳನ್ನು ಕಾಯುವುದು ಇವರ ದಿನನಿತ್ಯದ ಕಾಯಕ. ಗ್ರಾಮದಲ್ಲಿ ಮಳೆಯ ಅಭಾವದಿಂದ ನೀರಿರುವ ದೂರದ ಪ್ರದೇಶಗಳಿಗೆ ವಲಸೆ ಹೋಗುವುದು ಸರ್ವೇಸಾಮಾನ್ಯವಾಗಿದೆ. ಹಟ್ಟಿಗಳಲ್ಲಿಯೇ ಇವರು ಆಹಾರವನ್ನು ತಯಾರಿಸುವರು. ಜೋಳದ ಅಂಬಲಿ, ಮುದ್ದೆ, ಕುರಿಯ ಹಾಲು ಇವರ ನಿತ್ಯದ ಊಟವಾಗಿದೆ.

ಇತ್ತೀಚಿಗೆ ಗ್ರಾಮದಲ್ಲಿ ಈ ಸಮುದಾಯದವರು ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸದೃಢರಾಗುತ್ತಿದ್ದಾರೆ. ಬಹುತೇಕ ಯುವಕರು ಸರ್ಕಾರಿ ನೌಕರಿಯಲ್ಲಿದ್ದಾರೆ. ರಾಜಕೀಯದಲ್ಲಿಯೂ ಸಹ ಉನ್ನತ ಸ್ಥಾನದಲ್ಲಿದ್ದಾರೆ. ಸಾಮಾಜಿಕವಾಗಿಯೂ ತಮ್ಮದೇ ಛಾಪನ್ನು ಮೂಡಿಸಿದ್ದಾರೆ.

ಇಂದಿನ ಬಹುತೇಕ ಕುರುಬ ಸಮುದಾಯದವರು ತಮ್ಮ ವೃತ್ತಿಯಲ್ಲಿ ಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ. ಪ್ರಮುಖವಾಗಿ ಕುರಿಕಾಯುವ ವೃತ್ತಿಯನ್ನು ಅಳವಡಿಸಿಕೊಂಡಿದ್ದಾರೆ. ಇನ್ನಷ್ಟು ಕುಟುಂಬಗಳು ವ್ಯಾಪಾರ ಹಾಗೂ ಇನ್ನಿತರ ವೃತ್ತಿಯನ್ನು ಮಾಡುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಕುರಿ ಕಂಬಳಿಯನ್ನು ನೇಯುವ ಕುಟುಂಬಗಳು ಇಂದು ಬಹುತೇಕವಾಗಿ ಕಣ್ಮರೆಯಾಗಿ ಬದಲೀ ವೃತ್ತಿಯನ್ನು ಆಶ್ರಯಿಸಿರುವದನ್ನು ಕಾಣಬಹುದು. ಹೀಗೆ ಈ ಸಮುದಾಯದವರು ಬದಲಾದ ಪರಿಸ್ಥಿತಿಗನುಗುಣವಾಗಿ ವೃತ್ತಿಯಲ್ಲಿ ಹಲವಾರು ಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ. ಒಂದು ಐತಿಹ್ಯದ ಪ್ರಕಾರ ಕುರುಬ ಸಮುದಾಯದವರು ಹಾಲಿನಂತ ಮನಸ್ಸುಳ್ಳವರು, ಪ್ರಾಮಾಣಿಕರು ಆದ್ದರಿಂದ ಗ್ರಾಮದಲ್ಲಿ ಏನಾದರೂ ಶುಭಕಾರ್ಯಗಳನ್ನು ಪ್ರಾರಂಭಿಸಬೇಕಾಗಿದ್ದರೆ ಮೊದಲು ಕುರುಬ ಸಮುದಾಯದ ವ್ಯಕ್ತಿಗಳಿಂದ ಪೂಜೆ ಮಾಡಿಸುವುದನ್ನು ಕಾಣಬಹುದಾಗಿದೆ. ಇದರ ಪ್ರಮುಖ ಉದ್ದೇಶ ಯಾವುದೇ ಅಡ್ಡಿ ಆತಂಕ ಬಾರದೇ ಈ ಕಾರ್ಯವು ಮುಂದುವರಿಯುತ್ತದೆ ಎಂಬುದು ಇಲ್ಲಿಯ ಜನಪದರ ಆಪಾರ ನಂಬಿಕೆಯಾಗಿದೆ. ಹಿಂದಿನ ದಿನಮಾನಗಳಲ್ಲಿ ಗ್ರಾಮದಲ್ಲಿ ಮಳೆ ಬಾರದೇ ಇದ್ದಲ್ಲಿ ಗುಡ್ಡದಲ್ಲಿ ಕುರುಬ ಸಮುದಾಯದ ವ್ಯಕ್ತಿ ನಿಂತುಕೊಂಡು ಕಂಬಳಿ ಬೀಸಿದಾಗ ಮಳೆ ಬಂದ ಎಷ್ಟೋ ಉದಾಹರಣೆಗಳನ್ನು ಇಲ್ಲಿಯ ಜನಪದರು ಹೇಳಿದ್ದಾರೆ.

ಲಿಂಗಾಯತ ಸಮುದಾಯ

ಲಿಂಗಾಯತ ಸಮುದಾಯದವರು ಹ್ಯಾರಡಾ ಗ್ರಾಮದಲ್ಲಿ ಅತ್ಯಂತ ಪ್ರಭಲವಾದ ಸಮುದಾಯವಾಗಿದೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬಹಳಷ್ಟು ಪ್ರಭಲ ಕೋಮು ಇದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಅತೀ ಹೆಚ್ಚು ಜಮೀನನ್ನು ಹೊಂದಿದ ಸಮುದಾಯವಾಗಿದೆ. ಜಮೀನನ್ನು ಉಳುಮೆ ಮಾಡಿ ಶ್ರಮಪಟ್ಟು ಬೆಳೆಯನ್ನು ತೆಗೆಯುವುದು ಇವರ ಪ್ರಮುಖವಾದ

ಕಾಯಕವಾಗಿದೆ. ಬಸವ ತತ್ವ ಪರಿಪಾಲನೆಯನ್ನು ಕಾಣಬಹುದಾಗಿದೆ. ಬಸವಣ್ಣನವರು ಇವರ ಆರಾಧ್ಯ ದೈವವಾಗಿದ್ದಾನೆ. ಹೂವಿನ ಹಡಗಲಿಯ ಎಲ್ಲಾ ಗ್ರಾಮಗಳ ಇತಿಹಾಸವನ್ನು ತೆಗೆದುಕೊಂಡಾಗ ಎಲ್ಲೆಲ್ಲಿ ಲಿಂಗಾಯತ ಸಮುದಾಯದವರು ಬಹುಸಂಖ್ಯಾತರಾಗಿದ್ದಾರೋ ಅಲ್ಲಿ ಹಿಂದೆ ಬ್ರಾಹ್ಮಣರು ಬಹುಸಂಖ್ಯಾತರಾಗಿದ್ದರು ಎಂಬುದನ್ನು ಶಾಸನಗಳು ತಿಳಿಸುತ್ತವೆ. ಬಸವಣ್ಣನವರ ಧಾರ್ಮಿಕ ಕ್ರಾಂತಿ ಆದಕಾರಣ ಬಹುತೇಕ ಬ್ರಾಹ್ಮಣರು ಲಿಂಗಾಯತ ಧರ್ಮಕ್ಕೆ ಮತಾಂತರವಾಗಿ ಬಸವ ತತ್ವವನ್ನು ಅನುಸರಿಸಿರುವ ಬಹುದೊಡ್ಡ ಪಂಥ ಬೆಳೆದು ಬಂದಿತು. ಮೈಲಾರ ಶಾಸನ, ಮೋರಿಗೇರಿ ಶಾಸನ, ಹೊಳಗುಂದಿ ಶಾಸನ, ಕುರುವತ್ತಿ ಶಾಸನಗಳು ಇದಕ್ಕೆ ಪುಷ್ಠಿ ನೀಡುತ್ತವೆ. ಆದರೆ ಹ್ಯಾರಡಾ ಗ್ರಾಮದ ಲಿಂಗಾಯತ ಸಮುದಾಯದವರು ಹ್ಯಾರಡಾದ ಮೂಲ ನಿವಾಸಿಗಳಾಗಿರದೇ ಪಕ್ಕದ ಹರ್ವಿ ಗ್ರಾಮದಿಂದ ವಲಸೆ ಬಂದಿರುವವರು ಎಂದು ಊಹಿಸಬಹುದು. ಏಕೆಂದರೆ ಹ್ಯಾರಡಾ ಗ್ರಾಮದಲ್ಲಿ ಇಂದಿಗೂ ಸಹ ಬಹುತೇಕ ಲಿಂಗಾಯತ ಸಮುದಾಯದವರು 'ಹರ್ವಿ'ಎಂಬ ಮನೆತನವನ್ನು ಕಾಣಬಹುದಾಗಿದೆ. ಭಾರತದ ಬಹುತೇಕ ಗ್ರಾಮಗಳ ಅಧ್ಯಯನವನ್ನು ಕೈಗೊಂಡಾಗ ಬಹುತೇಕ ಗ್ರಾಮಗಳ ಮೂಲ ನಿವಾಸಿಗಳು ಅತ್ಯಂತ ಕೆಳವರ್ಗದವರು ಎಂದು ಹೇಳಬಹುದು. ಹ್ಯಾರಡಾ ಸುತ್ತಮುತ್ತಲಿನ ಪ್ರದೇಶ ಬಹಳಷ್ಟು ಫಲವತ್ತಾದ ಭೂ ಪ್ರದೇಶವಾಗಿದ್ದು ಅವುಗಳನ್ನು ಉಳುಮೆ ಮಾಡಲು ಈ ಸಮುದಾಯವು ಬಂದಿರಬಹುದು ಎಂದು ಹೇಳಬಹುದು. ಏಕೆಂದರೆ ಭೂಮಿಯನ್ನು ಉಳುಮೆ ಮಾಡಿ ಅತ್ಯಂತ ಉತ್ಕೃಷ್ಟವಾದ ಬೆಳೆಯನ್ನು ತೆಗೆಯುವುದರಲ್ಲಿ ಈ ಸಮುದಾಯದವರು ಪ್ರಸಿದ್ದರು. ಈಗಲೂ ಸಹ ಹ್ಯಾರಡ ಗ್ರಾಮದಲ್ಲಿ ಈ ಸಮುದಾಯದವರು ಬಹಳ ಶ್ರಮಪಟ್ಟು ಉತ್ಕೃಷ್ಟ ಬೆಳೆಯನ್ನು ತೆಗೆಯುತ್ತಿದ್ದಾರೆ.

ಈ ಸಮುದಾಯವು ತನ್ನದೇ ಆದ ಸಾಂಸ್ಕೃತಿಕ, ಹಾಗೂ ಚಾರಿತ್ರಕವಾದ ಹಿನ್ನೆಲೆಯನ್ನು ಹೊಂದಿದ್ದು ತಮ್ಮ ಧಾರ್ಮಿಕ ವಿಧಿ-ವಿಧಾನಗಳನ್ನು ಅತ್ಯಂತ ಶ್ರದ್ದೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು ಗ್ರಾಮದ ಅಭಿವೃದ್ದಿಗೆ ಶ್ರಮಿಸುತ್ತಿದ್ದಾರೆ.

ಬಹುತೇಕವಾಗಿ ಈ ಸಮುದಾಯದವರು ಪ್ರಧಾನವಾಗಿ ಕೃಷಿ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಕೆಲವು ಕುಟುಂಬಗಳು ಮಾತ್ರ ಬದಲೀ ವೃತ್ತಿಯನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಕೆಲವು ಕುಟುಂಬಗಳು ವ್ಯಾಪಾರ ವೃತ್ತಿಯನ್ನು, ಹೈನುಗಾರಿಕೆ, ಹೋಟೆಲ್, ಸರ್ಕಾರಿ ನೌಕರಿ ಇತ್ಯಾದಿ ವೃತ್ತಿಗಳನ್ನು ಮಾಡುತ್ತಿದ್ದಾರೆ. ಇದರ ಮುಖೇನ ತಮ್ಮ ಮೂಲ ವೃತ್ತಿಯಲ್ಲಿ ಸ್ಥಿತ್ಯಂತರ ಹೊಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ವಾಲ್ಮೀಕಿ ಸಮುದಾಯ

ಕರ್ನಾಟಕದ ಮೂಲನಿವಾಸಿಗಳೆನ್ನಬಹುದಾದ ಸಮುದಾಯಗಳ ಪೈಕಿ ಬೇಡ ಸಮುದಾಯವೂ

ಕೂಡ ಹೌದು. ಸಮುದಾಯವು ಬಳ್ಳಾರಿ, ಬೆಳಗಾವಿ, ಧಾರವಾಡ, ಕಲಬುರಗಿ, ಚಿತ್ರದುರ್ಗ ಮತ್ತು ರಾಯಚೂರುಗಳಲ್ಲಿ ಅತೀ ಹೆಚ್ಚು ಕಂಡುಬರುವರು. ಈ ಸಮುದಾಯವು ವಿಶೇಷವಾಗಿ ಗುಡ್ಡದ ಸಾಲುಗಳಲ್ಲಿ ಕಂಡುಬರುವರು. ಭಾರತದ ಆದಿಮ ಸಮುದಾಯಗಳಲ್ಲಿ ಬೇಡ ಸಮುದಾಯವು ಒಂದಾಗಿದೆ. ಭಾರತದ ಆದಿ ಕಾವ್ಯವನ್ನು ರಚಿಸಿದ ಬೇಡ ಮಹರ್ಷಿಗಳು ಈ ಸಮುದಾಯದವರೇ. ಆದ್ದರಿಂದ ಈ ಸಮುದಾಯಕ್ಕೆ ಬಹು ಪುರಾತನವಾದ ಪರಂಪರೆ ಇರುವುದನ್ನು ನಾವುಗಳು ನೋಡಬಹುದಾಗಿದೆ. ಆರ್ಯರಿಗಿಂತ ಮುಂಚೆಯೇ ಭಾರತದಲ್ಲಿ ಈ ಸಮುದಾಯ ಅಸ್ತಿತ್ವದಲ್ಲಿತ್ತು. ಹರಪ್ಪ ಸಂಸ್ಕೃತಿಯ ಆರಾಧಕರೂ ಕೂಡ ಇವರಾಗಿದ್ದರು. ಇವರನ್ನು ಅಂದಿನ ಸನ್ನಿವೇಶದಲ್ಲಿ 'ಕಿರಾತರು', 'ನಿಶಾಧರು', 'ಫಣಿಗಳು' ಎಂದು ಕರೆಯುತ್ತಿದ್ದರು. ಆರ್ಯರು ಬರುವುದಕ್ಕಿಂತ ಪೂರ್ವದಲ್ಲಿ ಅತ್ಯಂತ ವ್ಯವಸ್ಥಿತ ಜೀವನವನ್ನು ನಡೆಸಿದವರು ಬೇಡ ಸಮುದಾಯದವರು. ವ್ಯವಸ್ಥಿತವಾದ ಕೋಟೆ, ಪಶುಪಾಲನೆಯಲ್ಲಿ ಇವರು ಪ್ರಸಿದ್ದರಾಗಿದ್ದರು. ಇವರು ತಮ್ಮ ಅದ್ವಿತೀಯ ಹೋರಾಟ, ಕಾರ್ಯ, ಸಾಹಸಗಳಿಂದ ಇತಿಹಾಸದಲ್ಲಿ ಪ್ರಸಿದ್ದರಾಗಿದ್ದಾರೆ. ಆರ್ಯರು ಹಾಗೂ ಬೇಡರು ಕಡು ವೈರಿಗಳಾಗಿದ್ದರು. ಯುದ್ದದಲ್ಲಿ ಆರ್ಯರು ಬೇಡರ ಸಪ್ತ ನಗರಗಳನ್ನು ನಾಶಗೊಳಿಸಿದರು, ಈ ಬುಡಕಟ್ಟು ಸಮುದಾಯದ ಮೇಲೆ ದಾಳಿ ಮಾಡಿ ಛಿದ್ರಗೊಳಿಸಿ ವರ್ಣ, ಅವರ್ಣ, ಸ್ಪರ್ಶ, ಅಸ್ಪರ್ಶರೆಂದೂ ಇವರನ್ನು ಮೂಲ ಸ್ಥಾನದಿಂದ ಹೊರದಬ್ಬಿದರು. ಅಂದಿನಿಂದ ಈ ಬುಡಕಟ್ಟು ಸಮುದಾಯವು ದಕ್ಷಿಣ ಭಾರತದ ವಿವಿಧ ಪ್ರದೇಶಗಳಿಗೆ ವಲಸೆ ಬಂದು ಪಶುಪಾಲನೆ, ಬೇಟೆಯಲ್ಲಿ ನಿರತವಾದ ಉದಾಹರಣೆಯನ್ನು ನೋಡಬಹುದಾಗಿದೆ.

ಹಲವಾರು ಪಾಳೆಪಟ್ಟುಗಳನ್ನು ರಚಿಸಿ ರಾಜ್ಯಭಾರವನ್ನು ಮಾಡಿದ ಕೀರ್ತಿ ಈ ಸಮುದಾಯಕ್ಕಿದೆ. ರಾಜ ಮಹಾರಾಜರುಗಳ ಸೈನ್ಯದಲ್ಲಿ ಉನ್ನತ ಸ್ಥಾನಗಳನ್ನು ಹೊಂದಿದವರಾಗಿದ್ದರು. ಈಗಲೂ ಕೂಡ ಹ್ಯಾರಡಾ ಗ್ರಾಮದಲ್ಲಿ ಈ ಸಮುದಾಯವನ್ನು ಕಾಣಬಹುದಾಗಿದೆ. ಈಗಲೂ ಕೂಡ ಬೇಟೆಯಾಡುವುದರಲ್ಲಿ ಇವರು ಸಿದ್ದಹಸ್ತರು. ಹ್ಯಾರಡಾ ಗ್ರಾಮ ಸುತ್ತಲೂ ಬೆಟ್ಟ-ಗುಡ್ಡಗಳಿಂದ ಆವೃತ್ತವಾಗಿದ್ದು ದಟ್ಟವಾದ ಅರಣ್ಯವನ್ನು ಹೊಂದಿದೆ. ಈ ಅರಣ್ಯದಲ್ಲಿ ಚಿರತೆ, ಕರಡಿ, ಹಂದಿ, ಮೊಲ, ಕಾಡುಕೋಣ ಮುಂತಾದ ಪ್ರಾಣಿಗಳನ್ನು ಕಾಣಬಹುದು. ಆದರೂ ಬಹಳ ಧೈರ್ಯಶಾಲಿಗಳಾದ ಬೇಡ ಸಮುದಾಯದವರು ಆ ದಟ್ಟವಾದ ಅರಣ್ಯದಲ್ಲಿ ಹಂದಿ, ಮೊಲ ಮುಂತಾದ ಪ್ರಾಣಿಗಳನ್ನು ಬೇಟೆಯಾಡುವುದು ಸರ್ವೇಸಾಮಾನ್ಯವಾದುದು. ಇನ್ನು ತಮ್ಮ ಜನಪದ ಕಲೆಗಳಾದ ಕೋಲಾಟ, ಭಜನೆ ಮುಂತಾದವುಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಈ ಸಮುದಾಯದ ಚಿಕ್ಕ ಮಕ್ಕಳೂ ಸಹ ಅತ್ಯಂತ ಮನಮೋಹಕವಾಗಿ ಕೋಲಾಟ ನೃತ್ಯವನ್ನು ಮಾಡುವುದುಂಟು. ಆರ್ಥಿಕವಾಗಿ, ರಾಜಕೀಯವಾಗಿ, ಇನ್ನೂ ಸದೃಢರಾಗಬೇಕಾಗಿದೆ. ತಮ್ಮ ಸಮುದಾಯದ ವಿಶಿಷ್ಟ ಸಂಸ್ಕೃತಿಯನ್ನು ಪಸರಿಸುವಲ್ಲಿ ನಿರತರಾಗಿದ್ದಾರೆ. ವಾಲ್ಮೀಕಿಯನ್ನು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕನನ್ನಾಗಿ

ಸ್ವೀಕರಿಸಿ ವಾಲ್ಮೀಕಿ ಜಯಂತಿಯನ್ನು ಮಾಡುವ ಮೂಲಕ ಸಮುದಾಯವು ಸಂಘಟಿತವಾಗುತ್ತಿದ್ದು, ತಮ್ಮ ಹಕ್ಕು-ಬಾಧ್ಯತೆಗಳನ್ನು ಪಡೆಯಲು ಶ್ರಮಿಸುತ್ತಿದ್ದಾರೆ. ಇತ್ತೀಚಿಗೆ ಗ್ರಾಮದಲ್ಲಿ ಈ ಸಮುದಾಯದ ಯುವಕರು ಸರ್ಕಾರಿ ನೌಕರಿಯನ್ನು ಮಾಡುತ್ತಿದ್ದು ಆರ್ಥಿಕವಾಗಿ ಸದೃಡರಾಗುವತ್ತ ದಾಪುಗಾಲನ್ನು ಇಡುತ್ತಿದ್ದಾರೆ. ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು ಗ್ರಾಮದ ಅಭಿವೃದ್ದಿಗೆ ಕಾರಣೀಭೂತರಾಗುತ್ತಿದ್ದಾರೆ.

ಈ ಸಮುದಾಯದವರು ಬದಲಾದ ಪರಿಸ್ಥಿತಿಗನುಗುಣವಾಗಿ ತಮ್ಮ ವೃತ್ತಿಯಲ್ಲಿ ಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ. ಇವರ ಪ್ರಧಾನ ವೃತ್ತಿಯಾದ ಸಾಂಪ್ರದಾಯಿಕ ಬೇಟೆಯ ಪದ್ದತಿಯನ್ನು ಬಹುತೇಕವಾಗಿ ನಿಲ್ಲಿಸಿದ್ದಾರೆ. ಅದರ ಬದಲಾಗಿ ಕೃಷಿ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ. ಇನ್ನಿತರರು ವ್ಯಾಪಾರ, ಹೈನುಗಾರಿಕೆ, ಸರ್ಕಾರಿ ನೌಕರಿ ಇತ್ಯಾದಿ ವೃತ್ತಿಗಳನ್ನು ಅವಲಂಬಿಸಿದ್ದಾರೆ.

ಹರಿಜನ ಸಮುದಾಯ

ಭಾರತದಲ್ಲಿ ಪರಿಶಿಷ್ಟ ಜಾತಿ ಎಂದು ಸೂಚಿಸಲು ಮೊದಲು ೧೯೨೮ ರಲ್ಲಿ ಸೈಮನ್ ಆಯೋಗವು ಜಾರಿಗೆ ಬಂದಿತು. ಅಂಬೇಡ್ಕರ್ ಅವರು ಈ ವರ್ಗವನ್ನು "ಬಹಿಷ್ಕೃತ ವರ್ಗ (Broken men or out clasess)" ಎಂದು ಕರೆದರು, ಬ್ರಿಟೀಷರು "ದಮನಿತ ವರ್ಗಗಳು (Depressed clasess)" ಎಂದು ಕರೆದರು. ಗಾಂಧೀಜಿಯವರು ದೇವರ ಮಕ್ಕಳು ಎಂಬ ಅರ್ಥದಲ್ಲಿ ಅವರನ್ನು ಹರಿಜನ ಎಂದು ಕರೆದರು. ಭಾರತದ ಸ್ವಾತಂತ್ರ್ಯ ನಂತರ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಾಂವಿಧಾನಿಕ ಹಾಗೂ ಸಾಮಾಜಿಕ ವಿಶೇಷ ಸೌಲಭ್ಯಗಳನ್ನು ನೀಡಿತು.

ಹ್ಯಾರಡ ಗ್ರಾಮದಲ್ಲಿ ಈ ಸಮುದಾಯದವರು ಸೌಲಭ್ಯವಂಚಿತ ಸಮುದಾಯವಾಗಿದೆ. ಇವರು ಇನ್ನೂ ಸಹ ಆರ್ಥಿಕವಾಗಿ ಸಭಲರಾಗಿಲ್ಲ. ಆದರೆ ಇತ್ತೀಚಿಗೆ ಈ ಸಮುದಾಯದ ಹಲವಾರು ಯುವಕರು ಸರ್ಕಾರಿ ನೌಕರಿಯನ್ನು ಮಾಡುತ್ತಿದ್ದು, ಅರ್ಥಿಕವಾಗಿ ಸಬಲರಾಗುವತ್ತ ಹೆಜ್ಜೆ ಇಟ್ಟಿದ್ದಾರೆ. ಜಮೀನಿನ ಹಂಚಿಕೆಯ ಪ್ರಮಾಣದಲ್ಲಿ ಇವರು ಕಡಿಮೆ ಇದ್ದಾರೆ. ಇದ್ದ ತಮ್ಮ ತುಂಡು ಜಮೀನಿನಲ್ಲಿ ಆಹಾರ ಬೆಳೆಗಳನ್ನು ಬೆಳೆಯುವ ಪದ್ದತಿ ಬೆಳೆದು ಬಂದಿದೆ. ಇತ್ತೀಚಿನ ದಿನಮಾನಗಳಲ್ಲಿ ಸರ್ಕಾರವು ಇವರ ಅಭಿವೃದ್ದಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದು, ಅವುಗಳ ಉಪಯೋಗವನ್ನು ಪಡೆದುಕೊಂಡಿದ್ದಾರೆ. ಇವರು ಸಹ ಸ್ಥಳೀಯ ಸಂಸ್ಥೆಗಳ ರಾಜಕೀಯದಲ್ಲಿ ಇತ್ತೀಚಿಗೆ ಭಾಗವಹಿಸುತ್ತಿದ್ದು ರಾಜಕೀಯವಾಗಿ ಸ್ಥಾನಮಾನಗಳನ್ನು ಪಡೆಯುತ್ತಿದ್ದಾರೆ.

ಹ್ಯಾರಡ ಗ್ರಾಮದಲ್ಲಿ ಬಹುದಿನಗಳವರೆಗೆ ಇವರ ಜೀವನ ಶೋಚನೀಯವಾಗಿತ್ತು. ಮೇಲ್ವರ್ಗದವರ ಮನೆಗಳಲ್ಲಿ ಅತೀ ಕಡಿಮೆ ಅಥವಾ ಉಚಿತವಾಗಿ ಸೇವೆ ಮಾಡುವುದು ಮತ್ತು ಅವರಿಗಾಗಿ ಎಲ್ಲಾ ಬಗೆಯ ದೈಹಿಕ ಶ್ರಮದ ಕೆಲಸಗಳನ್ನು ಮಾಡಬೇಕಿತ್ತು. ಜೀವನ ಕ್ರಮದ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಸಾರ್ವಜನಿಕ ಸ್ಥಳಗಳು ಇವರಿಗೆ ನಿಷೇಧವಾಗಿದ್ದವು. ಸಾಮಾಜಿಕವಾಗಿ ಘನತೆ

ಹೊಂದಿದ ಮತ್ತು ಲಾಭದಾಯಕ ವೃತ್ತಿಯಿಂದ ಹೊರಗಿಡುವಿಕೆ ಮತ್ತು ಕೊಳಕು ಎಂದು ಭಾವಿಸಲ್ಪಟ್ಟು ದೈಹಿಕ ಶ್ರಮಗಳಿಗೆ ಸೀಮಿತಗೊಳಿಸಲಾಗಿತ್ತು. ಅವರ ಸಾರ್ವಜನಿಕ ಸಂಚಾರದ ಮೇಲೂ ಕೆಲ ನಿರ್ಬಂಧಗಳನ್ನು ಹೇರಲಾಗಿತ್ತು. ಆದರೆ ಇತ್ತೀಚಿಗೆ ಈ ಸಮುದಾಯದಲ್ಲಿ ಸುಶಿಕ್ಷಿತ ಯುವಕರು ಹೆಚ್ಚು ಹೆಚ್ಚು ಸಾಮಾಜಿಕ ಮುನ್ನಲೆಗೆ ಬಂದರು. ಇವರು ಸಾಂವಿಧಾನಿಕ ನೆರವನ್ನು ಪಡೆದು ಇಂತಹ ನಿಷೇಧದ ವಿರುದ್ಧ ಜನರಲ್ಲಿ ಜಾಗೃತಿಯನ್ನು ಮೂಡಿಸುವುದರ ಮೂಲಕ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಸಬಲರಾಗುತ್ತಾ ಸಾಗುತ್ತಿದ್ದಾರೆ.

ಇತ್ತೀಚಿಗೆ ಈ ಸಮುದಾಯದವರ ಮೂಲ ವೃತ್ತಿಯದ ಚಮ್ಮಾರಿಕೆಯು ಕಣ್ಮರೆಯಾಗಿದೆ. ಅದರ ಬದಲಾಗಿ ಕೃಷಿ ವ್ಯವಸ್ಥೆ, ಸರ್ಕಾರಿ ನೌಕರಿ, ಕುರಿಸಾಕಾಣಿಕೆ, ವ್ಯಾಪಾರ ಮುಂತಾದ ಬದಲೀ ವೃತ್ತಿಯನ್ನು ಅನುಸರಿಸುತ್ತಿದ್ದಾರೆ. ಇದರ ಮುಖೇನ ತಮ್ಮ ಮೂಲ ವೃತ್ತಿಯಲ್ಲಿ ಸ್ಥಿತ್ಯಂತರ ಕಾಣಬಹುದಾಗಿದೆ. ಹಿಂದಿನ ದಿನಮಾನಗಳಲ್ಲಿ ಈ ಸಮುದಾಯದವರು ಒಕ್ಕಲುತನದ ಮನೆತನಕ್ಕೆ 'ಮನೆಮಕ್ಕಳು' ಎಂದು ಸಂಭೋದಿಸುತ್ತಿದ್ದರು. ಇತರೆ ಸಮುದಾಯದವರಿಗೆ ಚಪ್ಪಲಿ, ನೊಗಸುತ್ತು, ಪಟಗಾಣಿ ಮಾಡಿಕೊಡುತ್ತಿದ್ದರು ಹಾಗೂ ವ್ಯವಸಾಯಕ್ಕೆ ಸಂಭಂದಿಸಿದ ಚರ್ಮದ ಸಾಮಾನುಗಳನ್ನು ಮಾಡಿ ಕೊಡುತ್ತಿದ್ದರು. ಇವರಿಗೆ ವರ್ಷಕ್ಕೆ ಇಷ್ಟು ಎಂದು ಕಾಳು-ಕಡಿ ಕೊಡುತ್ತಿದ್ದರು. ಹಾಗೂ ಒಕ್ಕಲುತನದ ಮನೆತನದಲ್ಲಿ ಏನಾದರೂ ಶುಭಕಾರ್ಯಗಳು ಆಗುತ್ತಿದ್ದರೆ ಹೊಸ ಬಟ್ಟೆಗಳನ್ನು ಕೊಡಿಸುತ್ತಿದ್ದರು. ಆದರೆ ಇತ್ತೀಚಿಗೆ ಇಂತಹ ಸಂಸ್ಕೃತಿ ಸಂಪೂರ್ಣ ಕಣ್ಮರೆಯಾಗಿದೆ.

ಗೊಲ್ಲ ಸಮುದಾಯ

ಗೊಲ್ಲರೆಂದರೆ ಗೋಪಾಲರು, ಅಂದರೆ ಗೋವುಗಳನ್ನು ಸಾಕುವವರು. ಕರ್ನಾಟಕದಲ್ಲಿ ಬಹು ಹಿಂದಿನಿಂದ ವಾಸಮಾಡುತ್ತಾ ಬಂದ ಬುಡಕಟ್ಟುಗಳಲ್ಲಿ ಗೊಲ್ಲ ಸಮುದಾಯವೂ ಒಂದು. ಗೋವುಗಳನ್ನು ಸಾಕುವುದಷ್ಟೇ ಅಲ್ಲದೇ ಇವರು ಬೇರೆ ವೃತ್ತಿಗಳಲ್ಲಿ ತೊಡಗುತ್ತಿದ್ದರು. ಬದಲಾದ ಕಾಲದ ಪರಿಸ್ಥಿತಿ ಇದಕ್ಕೆ ಕಾರಣವಾಗಿದೆ.

"ಬಾಗಿಲು ಕಾಯ್ದೆರ್ದ ಗೊಲ್ಲಂಗೆ ವೆಚ್ಚಡೆ ಒಡೆತವವುಂಟೇ ಅಯ್ಯಾ" ಎಂಬ ಚನ್ನಬಸವಣ್ಣನವರ ವಚನ ಗಮನಿಸಿದಾಗ ಗೊಲ್ಲರು 'ಖಜಾನೆ'ಯ ರಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರೆಂಬುದು ತಿಳಿದುಬರುತ್ತದೆ. 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪನು "ಅಂಗ, ವಂಗ, ಕಳಿಂಗ, ಕೊಂಗ, ಕೊಂಕಣ, ಗೊಲ್ಲ, ಕಾಂಭೋಜ ನಾನಾದ್ವೀಪ ದೇಶಾಧೀಶ್ವರರು" ಎಂದು ಉಲ್ಲೇಖಿಸಿದ್ದಾನೆ. ಇದರಿಂದ ಗೊಲ್ಲರೂ ಸಹ ರಾಜರಾಗಿದ್ದರು ಎಂದು ತಿಳಿದು ಬರುತ್ತದೆ.

೧೦ ನೇಯ ಶತಮಾನದಲ್ಲಿ ರಾಜ್ಯಾಧಿಕಾರಿಗಳಾಗಿದ್ದ ಗೊಲ್ಲರು ವೈರಿಗಳಿಂದ ಸೋತು, ಮುಂದೆ ಗೌಡ ಮುಂತಾದ ಗ್ರಾಮಾಧಿಕಾರಿಗಳಾದರು. ಬರುಬರುತ್ತಾ ಇವರು ದೇವಾಲಯದ ಸೇವಕರಾಗಿ

ಖಜಾನೆ ಕಾಯುವ ಉದ್ಯೋಗದವರಾಗಿ, ದ್ವಾರ ಪಾಲಕರಾಗಿ ಕಾಲ ಉರುಳಿದಂತೆ ಮತ್ತೆ ಮೂಲ ವೃತ್ತಿಯಾದ ಪಶುಪಾಲಕರಾಗಿ ಮಾರ್ಪಟ್ಟು ಆಧುನಿಕ ಕಾಲದಲ್ಲಿ ಸಾಮಾಜಿಕವಾಗಿ ಇನ್ನೂ ಕೆಳಗಿಳಿದು ಸಂಚಾರಿ ಅರೆ ಸಂಚಾರಿ ಸಮುದಾಯಗಳ ಸಾಲಿಗೆ ಸೇರಿದರು.

ಹ್ಯಾರಡ ಗ್ರಾಮದಲ್ಲಿ ಗೊಲ್ಲ ಸಮುದಾಯದ ಹಲವಾರು ಕುಟುಂಬಗಳನ್ನು ಕಾಣಬಹುದಾಗಿದೆ. ಈ ಸಮುದಾಯದ ಐತಿಹ್ಯದ ಪ್ರಕಾರ ಗೊಲ್ಲ ಸಮುದಾಯದವರೇ ಹ್ಯಾರಡ ಗ್ರಾಮದ ಮೂಲ ನಿವಾಸಿಗಳು ಎಂದು ಹೇಳುವರು. ಇವರ ಹೇಳಿಕೆಗೆ ಪುಷ್ಠಿ ನೀಡುವಂತೆ ಬೆಣ್ಣೆವೂರ ಶಾಸನದ ಈ ಹೇಳಿಕೆ ಗಮನಿಸಬಹುದು. ತೃಟಿಕ ಶಕ ೧೧೮೪ ದುಂಧುಬಿ, ಚೈತ್ರ,ಬ, ಅಮವಾಸ್ಯೆ, ಸೋಮವಾರ, ಸೂರ್ಯಗ್ರಹಣ ಎಂದಿದ್ದು ಈ ಕಾಲಕ್ಕೆ ರುಧಿರೋದ್ಗಾರಿ ಸಂವತ್ಸರ ಬರುತ್ತದೆ. ಮತ್ತು ಸೂರ್ಯಗ್ರಹಣವಿರುವುದಿಲ್ಲ. ಅಂದರೆ ಇದು ಸರಿಸುಮಾರಾಗಿ ಕ್ರಿ.ಶ. ೯-೪-೧೨೬೩ ಸೋಮವಾರಕ್ಕೆ ಸರಿ ಬರುತ್ತದೆ. ಯಾದವ ದೊರೆ ಮಹಾದೇವರಾಯನ ಆಳ್ವಿಕೆ ಮತ್ತು ಶ್ರೀ ಪರ್ವತದಲ್ಲಿನ ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗಾಗಿ 'ಹೆರಡ' ಗ್ರಾಮವನ್ನು ಮಹಾಪಸಾಯತ ದಳವಯ್ಯ.... ಸೋಯಿದೇವು ದಾನ ಮಾಡಿದನು" ಎಂದು ಉಲ್ಲೇಖಿಸಲಾಗಿದೆ. ಈ ಹೇಳಿಕೆಯಿಂದ ಇವರು ಮೂಲ ನಿವಾಸಿಗಳು ಎಂದು ಹೇಳಬಹುದು. ಇನ್ನೊಂದು ಅಂಶವನ್ನು ಗಮನಿಸಬಹುದಾದರೆ ಈಗಲೂ ಕೋಟೆಯಲ್ಲಿ ಹಲವಾರು ಗೊಲ್ಲ ಮನೆತನದ ಸಮುದಾಯದವರು ವಾಸಿಸುತ್ತಿರುವುದನ್ನು ಕಾಣಬಹುದಾಗಿದೆ.

ಈ ಸಮುದಾಯವು ಇತ್ತೀಚಿಗೆ ಕೃಷಿ ವ್ಯವಸ್ಥೆಯನ್ನು ಹೆಚ್ಚು ಅಳವಡಿಸಿಕೊಂಡಿದೆ. ಕೃಷಿಯಿಂದ ಉತ್ಕೃಷ್ಟವಾದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಕೃಷಿಯಲ್ಲದೇ ವ್ಯಾಪಾರ, ಹೈನುಗಾರಿಕೆ, ದಿನಸಿ ಸಾಮಾನುಗಳ ವ್ಯಾಪಾರ ಹೀಗೆ ಬದಲೀ ಉದ್ಯೋಗಗಳನ್ನು ಅನುಸರಿಸುತ್ತಿದ್ದಾರೆ.

ಬಣಜಿಗ ಸಮುದಾಯ

"ಈ ಸಮುದಾಯದವರು ಹಲವಾರು ತಲೆಮಾರುಗಳಿಂದ ಪಾರಂಪರಿಕವಾಗಿ ವ್ಯಾಪಾರದಲ್ಲಿ ತೊಡಗಿದ ಒಂದು ವರ್ಗವಾಗಿದೆ. ಬಣಜಿಗ ಎಂಬುವುದು ಸಂಸ್ಕೃತ ಪದದ 'ವಣಿಜ' 'ಶ್ರೇಷ್ಠನ್' ಪದದಿಂದ ಬಂದಿದೆ. ಇವರನ್ನು ಸೆಟ್ಟಿ ಬಣಜಿಗಿ, ಬಿರುದರ ಬಣಜಿಗ, ವೀರಬಣಜಿಗ, ವಣಿಜಸ್ವಾಮಿ, ವಿಭೂತಿ ಕುಲ ಜಂಗಮಲಿಂಗ ಪ್ರಸಾದಕರು ಎಂಬ ಅನೇಕ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಹಿಂದಿನ ಕಾಲಾವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ವ್ಯಾಪಾರವನ್ನು ಮಾಡುವಂತಹ ವರ್ತಕರ ಗುಂಪಾಗಿದೆ. ಗ್ರಾಮಕ್ಕೆ ಬೇಕಾದ ದಿನನಿತ್ಯದ ವಸ್ತುಗಳನ್ನು ತಂದು ಮಾರುವುದು ಈ ವರ್ತಕರ ಗುಂಪಿನ ಕೆಲಸವಾಗಿತ್ತು. ದೇಶೀಯ ರಾಜರುಗಳ ಕಾಲಾವಧಿಯಲ್ಲಿ ಕೇವಲ ಇವರು ವರ್ತಕರಾದರೆ ಹಲವಾರು ಮಂದಿ ವೀರರೂ ಆಗಿದ್ದರು ಎಂದು ಶಾಸನಗಳಿಂದ

ತಿಳಿದು ಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿರುವ ಹಲವಾರು ಶಾಸನಗಳಿಂದ ತಿಳಿಯಬಹುದಾಗಿದೆ. ಇವರನ್ನು ಸಾಮಾನ್ಯವಾಗಿ ಶೆಟ್ಟಿಗಳೆಂದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಮೂಲಿಗ ಮಾಜಿಸೆಟ್ಟಿ, ಹಂಪಸೆಟ್ಟಿ, ಓಲೆಯ ಭರಿಸೆಟ್ಟಿ, ಥಲಂಡ ಬೈಜಿಸೆಟ್ಟಿ, ವರ್ತಕರಾಗದೇ ವೀರಾವೇಶದಿಂದ ಹೋರಾಡುತ್ತಿದ್ದರು. ಎಷ್ಟೋ ಜನರು ವೀರ ಮರಣವನ್ನು ಹೊಂದಿರುವುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ. ವಿಭೂತಿ ಕುಲಜಾತಿ ಮತ್ತು ಜಂಗಮಲಿಂಗ ಪ್ರಸಾದಕರು ಎಂದು ಕರೆದಿರುವುದು ಹನ್ನೆರಡನೇಯ ಶತಮಾನದ ಶರಣರ ಪ್ರಭಾವ ಇವರ ಮೇಲೆ ಆಗಿತ್ತು ಎಂದು ತಿಳಿಯುತ್ತದೆ(ಡಾ. ವಾಸುದೇವ ಬಡಿಗೇರ : ೨೦೧೨:೨೪೦)

ಹ್ಯಾರಡಾ ಗ್ರಾಮದಲ್ಲಿ ಈಗಲೂ ಈ ಸಮುದಾಯದವರನ್ನು ಕಾಣಬಹುದಾಗಿದೆ. ಬದಲಾದ ಪರಿಸ್ಥಿತಿಯಲ್ಲಿ ಈ ಸಮುದಾಯಗಳು ಇಂದು ಕೈಗಾರಿಕೀಕರಣದ ಪ್ರಭಾವದಿಂದ ಯಂತ್ರೋಪಕರಣಗಳ ಆಧುನಿಕತೆಯಲ್ಲಿ ಸಿಕ್ಕು ನಲುಗಿವೆ. ಈ ಸಮುದಾಯಗಳು ತಮ್ಮತನಕ್ಕಾಗಿ ಹೋರಾಟ ಮಾಡುತ್ತಿವೆ. ಈ ಸಮುದಾಯಗಳು ತಮ್ಮ ವೃತ್ತಿಯತ್ತ ಮುಖಮಾಡದೇ ತಮ್ಮ ಗ್ರಾಮದ ತುಂಡು ಜಮೀನಿನಲ್ಲಿ ವ್ಯವಸಾಯವನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದಾರೆ. ಕೆಲವರು ಅನಿವಾರ್ಯವಾಗಿ ನಗರಗಳತ್ತ ಬದುಕು ರೂಪಿಸಿಕೊಳ್ಳಲು ವಲಸೆ ಹೋಗುತ್ತಿರುವುದನ್ನು ಕಾಣಬಹುದಾಗಿದೆ.

ಮಡಿವಾಳ ಸಮುದಾಯ

ಹ್ಯಾರಡಾ ಗ್ರಾಮದಲ್ಲಿ ಈ ಸಮುದಾಯದವರ ನಾಲ್ಕೈದು ಕುಟುಂಬಗಳನ್ನು ಕಾಣಬಹುದಾಗಿದೆ. ಈ ಸಮುದಾಯದವರು ಮದುವೆ ಸಂದರ್ಭಗಳಲ್ಲಿ, ಋತುಮತಿಯಾದಾಗಿನ ಆಚರಣೆಗಳಲ್ಲಿ ಇವರ ಪಾತ್ರ ಬಹುಮುಖ್ಯವಾದುದು. ಗ್ರಾಮದ ಎಲ್ಲಾ ಸಮುದಾಯದವರ ಮದುವೆ ಸಂದರ್ಭಗಳಲ್ಲಿ ಮದುವೆಯ ಚಪ್ಪರಕ್ಕೆ ಹದಡಿಯನ್ನು ಹಾಕುವುದು ಇವರ ಕರ್ತವ್ಯವಾಗಿದೆ. ಸುರಿಗೆಯ ಸಂದರ್ಭದಲ್ಲಿ ಮಧುಮಕ್ಕಳು ಬಿಟ್ಟ ಬಟ್ಟೆಗಳನ್ನು ಇವರು ಕೊಂಡೊಯ್ಯುವರು ಹಾಗೂ ಋತುಮತಿಯ ಕಾರ್ಯಕ್ರಮದ ಸಂದರ್ಭದಲ್ಲಿ ತಮ್ಮ ಕಾರ್ಯವನ್ನು ಮಾಡುವರು. ಗ್ರಾಮದ ದೈವವಾದ ಸಂಗಮೇಶ್ವರನ ಪುರುವಂತಿಕೆಯ ಸಮಯದಲ್ಲಿ ದೇವರನ್ನು ಹೊತ್ತುಕೊಂಡವರು ನಡೆದು ಕೊಂಡು ಹೋಗಲು ಮಡಿ ಬಟ್ಟೆಯನ್ನು ಹಾಕುವ ಕಾಯಕವನ್ನು ಇಂದೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ಕಾರ್ಯವನ್ನು ಮಾಡುವುದರಿಂದ ಸಂಗಮೇಶ್ವರನು ನಮಗೆ ಇಷ್ಟಾರ್ಥಗಳನ್ನು ಸಿದ್ದಿಸುವನು ಎಂಬುದು ಇವರ ನಂಬಿಕೆಯಾಗಿದೆ.

ಗ್ರಾಮದ ಪ್ರತಿಯೊಂದು ಧಾರ್ಮಿಕ ಚಟುವಟಿಕೆಯಲ್ಲಿ ಭಾಗವಹಿಸಿ ತಮ್ಮ ಕಾಯಕವನ್ನು ಚಾಚೂ ತಪ್ಪದೇ ಮಾಡುತ್ತಿದ್ದಾರೆ. ಇಂತಹ ಧಾರ್ಮಿಕ ಚಟುವಟಿಕೆಗಳನ್ನು ಮಾಡುವುದರಲ್ಲಿ ಈ ಸಮುದಾಯದ ಮಡಿವಾಳರ ಗೌರಮ್ಮ, ಮಡಿವಾಳರ ಸುಶೀಲಮ್ಮ ಪ್ರಮುಖರಾದವರು. ಗ್ರಾಮದ ಎಲ್ಲಾ ಸಮುದಾಯದವರು ಇವರನ್ನು ನಮ್ಮ ಕುಟುಂಬದ ಆಯಗಾರರು ಎಂದು ಪರಿಗಣಿಸಿ

ತಾವು ಬೆಳೆದ ದವಸ ಧಾನ್ಯಗಳನ್ನು ದೇಣಿಗೆಯನ್ನಾಗಿ ಕೊಡುವುದರ ಮೂಲಕ ವಿಶಿಷ್ಠ ಪರಂಪರೆಯನ್ನು ಕಂಡುಕೊಂಡಿದ್ದಾರೆ. ಈ ಸಮುದಾಯದವರ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿಲ್ಲ. ತಮ್ಮ ಮೂಲ ವೃತ್ತಿಯಿಂದ ಬಂದ ಅಲ್ಪ ಸ್ವಲ್ಪ ಹಣದಿಂದ ಜೀವನ ಸಾಗಿಸುತ್ತಿದ್ದಾರೆ. ಆದರೆ ಇತ್ತೀಚಿನ ಯುವ ಪೀಳಿಗೆಯು ಬದಲೀ ವೃತ್ತಿಯನ್ನು ಆರಂಭಿಸುವುದರ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಗಂಗಾಮತಸ್ಥ ಸಮುದಾಯ

ಹ್ಯಾರಡಾ ಗ್ರಾಮದಲ್ಲಿ ಈ ಸಮುದಾಯದವರ ನಲವತ್ತರಿಂದ ನಲವತ್ತೈದು ಮನೆಗಳನ್ನು ಕಾಣಬಹುದು. ಸುಮಾರು ಎರಡು ನೂರು ಜನಸಂಖ್ಯೆಯನ್ನು ಹೊಂದಿದೆ. ಈ ಸಮುದಾಯದವರು ತಮ್ಮ ಮೂಲ ವೃತ್ತಿಯನ್ನು ಇತ್ತೀಚೆಗೆ ಕೈಬಿಟ್ಟಿದ್ದಾರೆ. ತಮ್ಮ ಕೃಷಿ ಭೂಮಿಯಲ್ಲಿ ವ್ಯವಸಾಯವನ್ನು ಮಾಡುವ ಪದ್ದತಿಯನ್ನು ಕಾಣಬಹುದಾಗಿದೆ. ಧಾರ್ಮಿಕ ಚಟುವಟಿಕೆಯಲ್ಲಿ ಇವರ ಪಾತ್ರ ಬಹುಮುಖ್ಯವಾದುದು. ಅದರಲ್ಲೂ ವಿಶೇಷವಾಗಿ ಗ್ರಾಮ ದೇವತೆಯಾದ ಮಲಿಯಮ್ಮನ ಜಾತ್ರೆಯಲ್ಲಿ ಇವರ ಕಾಯಕ ಪ್ರಮುಖವಾದುದು. ಜಾತ್ರೆಯ ಸಂದರ್ಭದಲ್ಲಿ ಗ್ರಾಮದ ಎಲ್ಲಾ ದೈವಗಳ ದೇವಾಲಯಗಳಿಗೆ ಸುಣ್ಣ ಬಣ್ಣ ಬಳಿಯುವುದು, ಅಲಂಕಾರಗೊಳಿಸುವುದು ಈ ಸಮುದಾಯದವರ ಪ್ರಮುಖ ಕರ್ತವ್ಯವಾಗಿದೆ.

ಗ್ರಾಮದ ಎಲ್ಲಾ ಸಮುದಾಯದವರು ಈ ಸಮುದಾಯದವರನ್ನು ಆಯಗಾರರು ಎಂದು ಪರಿಗಣಿಸಿ ಕೊಡು-ಕೊಳ್ಳುವಿಕೆಯನ್ನು ನಾವಿಲ್ಲಿ ಕಾಣಬಹುದು. ಜಾತ್ರೆ, ಮದುವೆ, ಹಬ್ಬ-ಹರಿದಿನಗಳು ಮುಂತಾದ ಧಾರ್ಮಿಕ ಚಟುವಟಿಕೆಯಲ್ಲಿ ಸಕ್ರಿಯವಾಗಿ ಈ ಸಮುದಾಯದವರು ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಈ ಸಮುದಾಯದ ಎಷ್ಟೋ ಕುಟುಂಬಗಳ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ತಮ್ಮ ತುಂಡು ಜಮೀನಿನಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಇತ್ತೀಚಿನ ಯುವ ಪೀಳಿಗೆಯು ಹೆಚ್ಚು-ಹೆಚ್ಚು ಸುಶಿಕ್ಷಿತರಾಗಿ ಸರ್ಕಾರಿ ನೌಕರಿಗಳನ್ನು ಪಡೆದುಕೊಂಡು ಆರ್ಥಿಕ ಸ್ಥಿರತೆಯತ್ತ ದಾಪುಗಾಲು ಇಟ್ಟಿರುವುದನ್ನು ಕಾಣಬಹುದಾಗಿದೆ. ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಬಾಂಧವ್ಯವನ್ನು ಹೊಂದಿದ್ದಾರೆ. ತಮ್ಮದೇ ಆದ ವಿಶಿಷ್ಟ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡಿದ್ದಾರೆ. ಇದರ ಮುಖೇನ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಕಮ್ಮಾರ ಸಮುದಾಯದವರು

ಗ್ರಾಮದಲ್ಲಿ ಈ ಸಮುದಾಯದವರ ಹತ್ತರಿಂದ ಹದಿನೈದು ಕುಟುಂಬಗಳನ್ನು ಕಾಣಬಹುದು. ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಕಮ್ಮಾರಿಕೆಯನ್ನು ಈಗಲೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಹ್ಯಾರಡಾ ಗ್ರಾಮದಲ್ಲಿ ಸಾಂಪ್ರದಾಯಿಕ ಕೃಷಿಯಲ್ಲಿ ಬಳಸುವ ಕಬ್ಬಿಣದ ಉಪಕರಣಗಳನ್ನು

ತಯಾರಿಸುವುದು ಪ್ರಮುಖವಾದ ಉದ್ಯೋಗವಾಗಿದೆ. ಗ್ರಾಮದಲ್ಲಿ ಈ ಸಮುದಾಯದವರ ಪ್ರತ್ಯೇಕವಾದ ಕಮ್ಮಾರ ಓಣಿಯನ್ನು ಕಾಣಬಹುದು. ಹಿಂದಿನ ದಿನಮಾನಗಳಲ್ಲಿ ಕಬ್ಬಿಣದ ಅದಿರಿನಿಂದ ಕುಲುಮೆಗಳಲ್ಲಿ ಕಬ್ಬಿಣವನ್ನು ಸಂಸ್ಕರಿಸಿ, ಕಬ್ಬಿಣದಿಂದ ವಿವಿಧ ವಸ್ತುಗಳನ್ನು ತಯಾರಿಸಿ ಅಕ್ಕ-ಪಕ್ಕದ ಗ್ರಾಮಗಳಿಗೆ ಮಾರುತ್ತಿದ್ದರು. ಆದ್ದರಿಂದ ಈಗಲೂ ಗುಡ್ಡೆಯಾಕಾರದ ಕಬ್ಬಿಣದ ಕಿಟ್ಟದ ರಾಶಿಯನ್ನು ಕಾಣಬಹುದು. ಆದರೆ ಇತ್ತೀಚಿಗೆ ಈ ಗುಡ್ಡವನ್ನು ನೆಲಸಮ ಮಾಡಿ ಜನವಸತಿ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಕಬ್ಬಿಣದ ಅದಿರನ್ನು ಸಂಸ್ಕರಿಸುವ ಕಾರ್ಯ ಗ್ರಾಮದಲ್ಲಿ ಜೋರಾಗಿತ್ತು. ಕಬ್ಬಿಣದ ಅದಿರನ್ನು ಸಂಸ್ಕರಿಸಿ ದ್ರವರೂಪದ ಕಬ್ಬಿಣವನ್ನು ತೆಗೆದು ಉಂಡೆಯಾಕಾರದಲ್ಲಿ ಮಾಡಿಕೊಂಡು, ಮತ್ತೆ ಶಾಖವನ್ನು ಕೊಟ್ಟು ತಮಗೆ ಬೇಕಾದ ಕಬ್ಬಿಣದ ಉಪಕರಣಗಳನ್ನು ತಯಾರಿಸುವುದರಲ್ಲಿ ಬಹಳಷ್ಟು ಕುಟುಂಬಗಳು ನಿರತವಾಗಿದ್ದವು. ಆದರೆ ಇತ್ತೀಚಿಗೆ ಕಬ್ಬಿಣದ ಸಂಸ್ಕರಣ ಕಾರ್ಯವು ನಶಿಸಿ, ಕೇವಲ ಕಬ್ಬಿಣದ ಸಾಮಾನುಗಳನ್ನು ತಯಾರಿಸುವುದನ್ನು ನಾವಿಲ್ಲಿ ಗಮನಿಸಬಹುದು. ಈ ಸಮುದಾಯದವರ ಆರ್ಥಿಕ ಸ್ಥಿತಿ ಅಷ್ಟೇನು ಹೇಳಿಕೊಳ್ಳುವಂತಿಲ್ಲ. ತಮ್ಮ ಸಾಂಪ್ರದಾಯಿಕ ವೃತ್ತಿಯಿಂದ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದಾರೆ. ಇತ್ತೀಚಿಗೆ ಯುವ ಪೀಳಿಗೆಯು ಸುಶಿಕ್ಷಿತರಾಗಿ ಸರ್ಕಾರಿ ನೌಕರಿಗಳನ್ನು ಪಡೆದುಕೊಂಡು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದ್ದಾರೆ. ಈ ಸಮುದಾಯದವರು ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು, ತಮ್ಮ ಧಾರ್ಮಿಕ ವಿಧಿ-ವಿಧಾನಗಳ ಮೂಲಕ ವಿಶಿಷ್ಟ ಪರಂಪರೆಯನ್ನು ಸೃಷ್ಟಿಸಿಕೊಂಡಿದ್ದಾರೆ. ಇದರ ಮುಖೇನ ಗ್ರಾಮದ ಅಭಿವೃದ್ದಿಗಾಗಿ ಶ್ರಮಿಸುತ್ತಿದ್ದಾರೆ.

ಜಂಗಮ ಸಮುದಾಯ

ಗ್ರಾಮದಲ್ಲಿ ಈ ಸಮುದಾಯದವರ ನಾಲ್ಕೈದು ಕುಟುಂಬಗಳನ್ನು ಕಾಣಬಹುದು. ಇದೇ ಸಮುದಾಯದ ಶಿವರುದ್ರಯ್ಯನವರು ಗ್ರಾಮದಲ್ಲಿ ಮೊದಲು ಶಾಲೆಯನ್ನು ತೆರೆಯುವುದರ ಮೂಲಕ ಶಿಕ್ಷಣಕ್ಕೊಂದು ಭಾಷ್ಯವನ್ನು ಬರೆದರು. ತಮ್ಮ ಮನೆಯನ್ನೇ ಶಾಲೆಯನ್ನಾಗಿ ಮಾಡಿಕೊಂಡು ಸಂಬಳ ರಹಿತ ಶಿಕ್ಷಕರಾಗಿ ಶಿಕ್ಷಣ ಪ್ರಸಾರವನ್ನು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಸಮುದಾಯವು ಧಾರ್ಮಿಕ ಚಟುವಟಿಕೆಗಳಲ್ಲಿ ಮಂತ್ರ ಪಠಣ, ಪೂಜಾ ವಿಧಾನ ಮಾಡುವುದು, ಜೋತಿಷ್ಯ ಶಾಸ್ತ್ರ, ಪಂಚಾಂಗ ಪಠಣ ಮಾಡುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಗ್ರಾಮದ ಎಲ್ಲಾ ಸಮುದಾಯದವರ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಮಂತ್ರ ಪಠಣವನ್ನು ಮಾಡುವುದನ್ನು ನಾವಿಲ್ಲಿ ಕಾಣಬಹುದು.

ಮದುವೆಯ ಸಂದರ್ಭದಲ್ಲಂತೂ ಈ ಸಮುದಾಯದ ಪಾತ್ರ ಬಹುಮುಖ್ಯವಾದುದು. ಮದುವೆಯ ಮಾತುಕತೆಯಿಂದ ಹಿಡಿದು ಮದುವೆ ಆಗುವವರೆಗೂ ಇವರ ಮಾರ್ಗದರ್ಶನದಲ್ಲಿ ಪ್ರತಿಯೊಂದು ಚಟುವಟಿಕೆಗಳು ಜರುಗುವುದುಂಟು. ಹ್ಯಾರಡಾ ಗ್ರಾಮದ ಜನಪದರು ಜಂಗಮ ಸ್ವಾಮಿಗಳ

ಸಾರಥ್ಯದಲ್ಲಿ ಪ್ರತಿಯೊಂದು ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸುವರು. ಜಾತ್ರೆ, ಹಬ್ಬ-ಹರಿದಿನಗಳು, ವಾರ್ಷಿಕಾವರ್ತನ ಆಚರಣೆಗಳು, ಜೀವನಾವರ್ತನ ಆಚರಣೆಗಳನ್ನು ಮಾಡುವಾಗ ಇವರ ಪಾತ್ರ ಬಹುಮುಖ್ಯವಾದುದು. ಈಗಲೂ ಸಹ ಈ ಸಮುದಾಯದ ಕುಟುಂಬಗಳು ತಮ್ಮ ಮೂಲ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಹ್ಯಾರಡಾದ ಜನಪದರು ಪ್ರತಿಯೊಂದು ಶುಭಕಾರ್ಯಕ್ಕೂ ಪಂಚಾಂಗವನ್ನು ತೆಗೆಯಿಸಿ ಕಾಲವನ್ನು ನಿರ್ಣಯಿಸಿದ ನಂತರವೇ ಕಾರ್ಯವನ್ನು ಪ್ರಾರಂಭಿಸುವರು. ಈ ಸಮುದಾಯದವರು ತಮ್ಮ ಮೂಲ ವೃತ್ತಿಯ ಜೊತೆ-ಜೊತೆಗೆ ಕೃಷಿಯನ್ನು ಮಾಡುತ್ತಿದ್ದಾರೆ. ಈ ಕುಟುಂಬಗಳು ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದು, ಆರ್ಥಿಕ ಸ್ಥಿತಿಗತಿ ಚೆನ್ನಾಗಿದೆ. ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಚಕ್ರಸಾಲಿ ಸಮುದಾಯ

ಈ ಸಮುದಾಯದವರನ್ನು ಗ್ರಾಮದಲ್ಲಿ ಕುಂಬಾರರು ಎಂದು ಕರೆಯುವರು. ಗ್ರಾಮದಲ್ಲಿ ಆರರಿಂದ ಏಳು ಕುಟುಂಬಗಳನ್ನು ಕಾಣಬಹುದಾಗಿದೆ. ಇವರ ಪೂರ್ವಜರ ಕಾಯಕ ಮಡಿಕೆಗಳನ್ನು ತಯಾರಿಸುವುದಾಗಿತ್ತು. ಆದರೆ ಇಂದು ಮೂಲ ವೃತ್ತಿಯನ್ನು ಕೈಬಿಡಲಾಗಿದೆ. ಇತರೆ ಕ್ಷೇತ್ರಗಳಾದ ಕೃಷಿ, ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಗ್ರಾಮದ ಎಲ್ಲಾ ಸಮುದಾಯದವರ ಮದುವೆ ಸಂದರ್ಭಗಳಲ್ಲಿ ದಂಡೆ ಬಾಸಿಂಗವನ್ನು ತಯಾರಿಸುವವರು ಈ ಸಮುದಾಯದವರೆ. ವಿವಿಧ ರೀತಿಯ ನವೀನ ಮಾದರಿಯ ದಂಡೆ ಬಾಸಿಂಗವನ್ನು ತಯಾರಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಗ್ರಾಮದ ದಳಪತಿಯಾಗಿ ಈ ಸಮುದಾಯದ ಚಕ್ರಸಾಲಿ ಸಂಗಪ್ಪನವರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಪ್ರಮುಖ ಕಾರ್ಯಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮದೇ ಆದ ವಿಶಿಷ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ಸಮುದಾಯದವರೂ ಸಹ ತಮ್ಮ ಧಾರ್ಮಿಕ ವಿಧಿ-ವಿಧಾನಗಳನ್ನು ಚಾಚೂತಪ್ಪದೆ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿದ್ದಾರೆ. ಗ್ರಾಮ ಅಭಿವೃದ್ಧಿಗಾಗಿ ಈ ಸಮುದಾಯವು ಶ್ರಮಿಸುತ್ತಿರುವದನ್ನು ನಾವಿಲ್ಲಿ ಕಾಣಬಹುದಾಗಿದೆ.

ಈ ಸಮುದಾಯದ ಮೂಲ ವೃತ್ತಿಯಾದ ಕುಂಬಾರಿಕೆಯನ್ನು ಬಹುತೇಕವಾಗಿ ಕೈಬಿಟ್ಟಿದ್ದಾರೆ. ಕೃಷಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. ಇನ್ನಿತರ ಕುಟುಂಬಗಳು ವ್ಯಾಪಾರ, ಹೋಟೆಲ್, ಹೈನುಗಾರಿಕೆ, ಕುರಿಸಾಕಾಣಿಕೆ, ಸರ್ಕಾರಿ ನೌಕರಿಯನ್ನು ಅವಲಂಬಿಸಿದ್ದಾರೆ. ಈ ಮುಖಾಂತರವಾಗಿ ತಮ್ಮ ವೃತ್ತಿಯಲ್ಲಿ ಸ್ಥಿತ್ಯಂತರವನ್ನು ಕಂಡುಕೊಂಡಿದ್ದಾರೆ.

ಕ್ಷೌರಿಕ ಸಮುದಾಯ

ಈ ಸಮುದಾಯದ ಎರಡು ಕುಟುಂಬಗಳನ್ನು ಗ್ರಾಮದಲ್ಲಿ ಕಾಣಬಹುದಾಗಿದೆ. ಈಗಲೂ ಸಹ ಈ ಕುಟುಂಬಗಳು ತಮ್ಮ ಮೂಲ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿವೆ. ಗ್ರಾಮದ ಎಲ್ಲಾ ಸಮುದಾಯದವರ ಕ್ಷೌರ ಮಾಡುವ ಕಾಯಕ ಈ ಸಮುದಾಯದವರದಾಗಿದೆ. ಹ್ಯಾರಡಾ ಗ್ರಾಮದ ಜನಪದರು ಈ ಸಮುದಾಯದ ಕುಟುಂಬಗಳನ್ನು ಆಯಗಾರರು ಎಂದು ಪರಿಗಣಿಸಿ ತಾವು ಬೆಳೆದ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳನ್ನು ಕೊಡುವುದರ ಮೂಲಕ ವಿಶಿಷ್ಟ ಪರಂಪರೆಯನ್ನು ಸೃಷ್ಟಿಸಿಕೊಂಡಿದ್ದಾರೆ.

ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಈ ಕುಟುಂಬಗಳ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದಿದ್ದರೂ ದಿನ-ನಿತ್ಯದ ಜೀವನ ನಿರ್ವಹಣೆಗೆ ತೊಂದರೆ ಇಲ್ಲ. ತಮ್ಮ ಮೂಲ ವೃತ್ತಿಯಿಂದ ಬಂದ ಹಣದಿಂದ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದಾರೆ.

ಪಿಂಜಾರ ಸಮುದಾಯ

ಭಾರತದ ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಗುಜರಾತ್, ಹಾಗೂ ರಾಜಸ್ಥಾನದಲ್ಲಿ ಈ ಸಮುದಾಯದವರನ್ನು ಕಾಣಬಹುದು. ಇವರನ್ನು 'ಮನ್ಸೂರಿ' ಎಂಬ ಹೆಸರಿನಿಂದಲೂ ಕರೆಯುವರು. ಒಂದು ಐತಿಹ್ಯದ ಪ್ರಕಾರ ಈ ಸಮುದಾಯದವರು ಪರ್ಷಿಯಾ ಮತ್ತು ಅಫಘಾನಿಸ್ತಾನದಿಂದ ಹತ್ತಿ ಕೃಷಿ ಮತ್ತು ಕೈಗಾರಿಕೆಗಳ ವ್ಯಾಪಾರ ಉದ್ದೇಶಕ್ಕಾಗಿ ಬಂದವರು ಎಂದು ಹೇಳಲಾಗುತ್ತಿದೆ. ಬಹುತೇಕ ವಿದ್ವಾಂಸರ ಪ್ರಕಾರ ಭಾರತೀಯ ಉಪಖಂಡದ ಹೊರಗಿನ ಪ್ರದೇಶದಿಂದ ವಲಸೆ ಬಂದ ವಿದೇಶಿಯರು ಎಂದು ನಂಬಲಾಗಿದೆ. ಇನ್ನೊಂದು ಐತಿಹ್ಯದ ಪ್ರಕಾರ ಪಿಂಜಾರರು ಇಸ್ಲಾಂಗೆ ಮತಾಂತರ ಗೊಂಡವರು, ರಜಪೂತರಿಂದ ಬಂದವರು ಎಂದು ಹೇಳಲಾಗುತ್ತಿದೆ. ಇತಿಹಾಸದ ಪ್ರಕಾರ ಈ ಸಮುದಾಯದವರು ರಣಸಿಂಗ್ ರೂಪದಲ್ಲಿ ರಾಜಸ್ಥಾನದಿಂದ ಗುಜರಾತ್‌ಗೆ ಬಂದು ಇಲ್ಲಿ ವಾಸವಾಗಿದ್ದರು ಎಂದು ಹೇಳಲಾಗುತ್ತಿದೆ. ಇಂದಿಗೂ ಅವರ ಮುಖ್ಯ ಜಾತಿಗಳಾದ ರಾವ್, ಡಿಯೋರಾ, ಚೌಹಾನ್, ಭತಿ ಇವುಗಳು ರಜಪೂತರ ಕುಲವೂ ಆಗಿವೆ. ಹೀಗೆ ರಜಪೂತರಿಂದ ಮತಾಂತರಗೊಂಡವರು ಎಂದು ಹೇಳಲಾಗುತ್ತಿದೆ.

ಹ್ಯಾರಡಾ ಗ್ರಾಮದಲ್ಲಿಯೂ ಕೂಡ ಎಂಟರಿಂದ ಹತ್ತು ಕುಟುಂಬಗಳನ್ನು ನಾವಿಲ್ಲಿ ಕಾಣಬಹುದು. ಈ ಸಮುದಾಯಗಳು ಬಹುತೇಕ ವ್ಯಾಪಾರದಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು. ಈ ಸಮುದಾಯದವರು ಹಿಂದೂ ಹಾಗೂ ಮುಸ್ಲಿಂ ಸಂಸ್ಕೃತಿಯ ಸಮ್ಮಿಲನವಾಗಿದೆ. ಹಿಂದೂ ಧರ್ಮದ ಬಹುತೇಕ ಹಬ್ಬಗಳನ್ನು ಈ ಸಮುದಾಯದವರು ಆಚರಿಸುವುದರ ಮೂಲಕ ಧಾರ್ಮಿಕ ಸಾಮರಸ್ಯವನ್ನು ಕಂಡುಕೊಂಡಿದ್ದಾರೆ. ಈ ಸಮುದಾಯದವರೂ ಸಹ ತಮ್ಮದೇ ಆದ ವಿಶಿಷ್ಟ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡು, ಧಾರ್ಮಿಕ ವಿಧಿ-ವಿಧಾನಗಳನ್ನು ಚಾಚೂ ತಪ್ಪದೇ ಮಾಡುತ್ತಿದ್ದಾರೆ. ಗ್ರಾಮದ

ವಿವಿಧ ಸಮುದಾಯದವರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು ಗ್ರಾಮದ ಏಳಿಗೆಗೆ ಶ್ರಮಿಸುತ್ತಿದ್ದಾರೆ.

ಈ ಸಮುದಾಯದವರು ಇತ್ತೀಚಿಗೆ ಹೆಚ್ಚಾಗಿ ಕೃಷಿ ವ್ಯವಸ್ಥೆಯನ್ನು ಅವಲಂಬಿಸಿದ್ದಾರೆ. ಇನ್ನಿತರ ಕುಟುಂಬಗಳು ವ್ಯಾಪಾರ, ಬಳೆ ವ್ಯಾಪಾರ, ಕೋಳಿ ಮಾಂಸ ವ್ಯಾಪಾರ, ಮೊಟ್ಟೆ ವ್ಯಾಪಾರ ಇನ್ನಿತರ ಬದಲೀ ಉದ್ಯೋಗಗಳನ್ನು ಅನುಸರಿಸುತ್ತಿದ್ದಾರೆ.

ಬಡಿಗೇರ ಸಮುದಾಯ

ಹ್ಯಾರಡಾ ಗ್ರಾಮದಲ್ಲಿ ಸುಮಾರು ಹದಿನೈದು ಕುಟುಂಬಗಳನ್ನು ಕಾಣಬಹುದಾಗಿದೆ. ಈಗಲೂ ಸಹ ಸಾಂಪ್ರದಾಯಿಕ ವೃತ್ತಿಯಾದ ಬಡಗಿತನವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸಾಂಪ್ರದಾಯಿಕ ಕೃಷಿ ಚಟುವಟಿಕೆಗಳಿಗೆ ಬೇಕಾದ ಕಟ್ಟಿಗೆಯ ಕೃಷಿ ಉಪಕರಣಗಳನ್ನು ತಯಾರಿಸುವುದು ಇವರ ಪ್ರಮುಖ ಉದ್ಯೋಗವಾಗಿದೆ. ಗ್ರಾಮದ ಎಲ್ಲಾ ಸಮುದಾಯದವರಿಗೆ ಕಟ್ಟಿಗೆಯ ಕೃಷಿ ಉಪಕರಣಗಳನ್ನು ತಯಾರಿಸುವುದು ಈ ಸಮುದಾಯದವರೆ. ಗ್ರಾಮದ ಎಲ್ಲಾ ಸಮುದಾಯದ ಕೃಷಿ ಕುಟುಂಬಗಳು ಆಯಗಾರರೆಂದು ಪರಿಗಣಿಸಿ ತಾವು ಬೆಳೆದ ಆಹಾರ ಪದಾರ್ಥಗಳು, ದ್ವಿದಳ ಧಾನ್ಯಗಳನ್ನು ಕೊಡುವುದುಂಟು.

ಸಮುದಾಯದವರು ಸಾಂಪ್ರದಾಯಿಕ ವೃತ್ತಿಯಲ್ಲಿ ಹಳೆಯ ಮಾದರಿಯ ಸಲಕರಣೆಗಳನ್ನು ಬಳಸುತ್ತಿದ್ದರು. ಆದರೆ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಆಧುನಿಕ ತಂತ್ರಜ್ಞಾನದ ನವೀನ ಮಾದರಿಯ ಯಂತ್ರಗಳನ್ನು ಬಳಸುವುದರ ಮೂಲಕ ತಮ್ಮ ವೃತ್ತಿ ದಕ್ಷತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಉಳಿ, ಬಾಚಿ, ಗರಗಸಗಳು ಮಾಯವಾಗಿ ಪ್ಲೇನಿಂಗ್ ಮಿಷನ್, ಕಟಿಂಗ್ ಮಿಷನ್ ಅಂತಹ ಹಲವಾರು ಆಧುನಿಕ ಉಪಕರಣಗಳನ್ನು ಬಳಸುತ್ತಿದ್ದಾರೆ. ಈ ಸಮುದಾಯದವರು ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಅನ್ಯೋನ್ಯವಾದ ಬಾಂಧವ್ಯವನ್ನಿಟ್ಟುಕೊಂಡಿದ್ದಾರೆ.

೩.೧೬.೨ ಮುಸ್ಲಿಂ ಧರ್ಮ

ಇಸ್ಲಾಂ ಧರ್ಮವು ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾಗಿದೆ. ಭಾರತದ ಐತಿಹಾಸಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಇಸ್ಲಾಂ ಧರ್ಮದ ಪಾತ್ರ ಅತ್ಯಂತ ಮಹತ್ತರವಾಗಿದ್ದು ಮಹಮ್ಮದ್ ಪೈಗಂಬರರವರ ಆದರ್ಶಗಳ ಆಧಾರದ ಮೇಲೆ ಬೆಳೆದು ಬಂದ ಧರ್ಮವೇ ಇಸ್ಲಾಂ. ಇದರ ಧರ್ಮ ಸಂಸ್ಥಾಪಕ ಮಹಮ್ಮದ್ ಪೈಗಂಬರ.

ಇಸ್ಲಾಂ ಎಂಬುದು ಅರಬ್ ಭಾಷೆಯ 'ಸಲಾಂ' ಎಂಬ ಪದದಿಂದ ಉಗಮಗೊಂಡಿದೆ. ಸಲಾಂ ಎಂದರೆ "ಶರಣಾಗು" ವಿಧೇಯತೆ, ಶಾಂತಿ, ಅನುಕರಣೆಯ ಸಂಕೇತ. ಇಸ್ಲಾಂ ದೈವ ಸಂಕಲ್ಪಕ್ಕೆ ಶರಣಾಗು ಎಂದರ್ಥ".

ಹ್ಯಾರಡಾ ಗ್ರಾಮದಲ್ಲಿ ಬೆರಳೆಣಿಕೆಯಷ್ಟು ಕುಟುಂಬಗಳು ಇರುವುದನ್ನು ಕಾಣಬಹುದಾಗಿದೆ. ಆದರೂ ಈ ಸಮುದಾಯಗಳು ತಮ್ಮ ಧಾರ್ಮಿಕ ತತ್ವಗಳನ್ನು ಚಾಚೂ ತಪ್ಪದೇ ಮಾಡುವರು. ಬಹುತೇಕ ಕುಟುಂಬಗಳು, ಬಳೆಗಾರಿಕೆ, ಮಾಂಸದ ಅಂಗಡಿ, ವ್ಯಾಪಾರ ಮುಂತಾದ ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ಇಸ್ಲಾಂ ಧರ್ಮದ ಆಚರಣೆಗಳನ್ನು ಹಾಗೂ ಮೂಲಭೂತ ತತ್ವಗಳನ್ನು ಆಚರಿಸುತ್ತಿದ್ದಾರೆ. ಇತ್ತೀಚಿಗೆ ಗ್ರಾಮದಲ್ಲಿ ನೂತನವಾದ ಮಸೀದಿಯನ್ನು ನಿರ್ಮಿಸಿದ್ದಾರೆ. ದಿನನಿತ್ಯದ ಆಚರಣೆಗಳನ್ನು ಮಾಡಲು ಬೇರೆ ಊರಿನಿಂದ ಒಬ್ಬ ಮೌಲ್ವಿಯನ್ನು ನೇಮಿಸಿದ್ದಾರೆ.

ಹೀಗೆ ಪ್ರತಿಯೊಬ್ಬರೂ ಇಸ್ಲಾಂ ತತ್ವಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ. ಹ್ಯಾರಡಾ ಗ್ರಾಮದಲ್ಲಿ ಮೊಹರಂ ಹಬ್ಬವನ್ನು ವಿಶೇಷವಾಗಿ ಆಚರಿಸುವುದುಂಟು, ಇದನ್ನು ಗ್ರಾಮ್ಯ ಭಾಷೆಯಲ್ಲಿ 'ಅಲೆಹಬ್ಬ' 'ಪೀರಲ' ಹಬ್ಬ ಎಂದು ಕರೆಯುವುದುಂಟು.

೩.೧೬.೩ ಜೈನ ಧರ್ಮ

ಕರ್ನಾಟಕದ ಇತಿಹಾಸವನ್ನು ಅಭ್ಯಾಸಿಸಿದಾಗ ಪುರಾತನ ಕಾಲದಿಂದಲೇ ಜೈನ ಧರ್ಮವು ಕರ್ನಾಟಕವನ್ನು ಪ್ರವೇಶಿಸಿತ್ತು. ಹನ್ನೆರಡನೇಯ ಶತಮಾನದಿಂದೀಚಿಗೆ ಕರ್ನಾಟಕದಲ್ಲಿ ದೇವಾಲಯಗಳು, ಜೈನ ಬಸದಿಗಳು, ನಿರ್ಮಾಣವಾದವು. ಕರ್ನಾಟಕವನ್ನು ಆಳಿದ ಹಲವಾರು ರಾಜಮನೆತನಗಳು ಜೈನ ಧರ್ಮಕ್ಕೆ ರಾಜಾಶ್ರಯವನ್ನು ಕೊಟ್ಟಿದ್ದವು. ಅವುಗಳಲ್ಲಿ ಕದಂಬ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಹೀಗೆ ಹಲವಾರು ಸಾಮಂತ ಅರಸುರುಗಳು ಈ ಧರ್ಮಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದರು. ಚಂದ್ರಗುಪ್ತ ಮೌರ್ಯ, ಬದ್ರಬಾಹುನೊಡನೆ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದಾಗಿನಿಂದ ಇದರ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ.

ಹ್ಯಾರಡಾ ಗ್ರಾಮದಲ್ಲಿ ಬಹಳಷ್ಟು ವರ್ಷಗಳ ಹಿಂದೆ ಈ ಗ್ರಾಮಕ್ಕೆ ವಲಸೆ ಬಂದವರು ಮೂಲವಾಗಿ ಮುರಾರಿಯವರ ಮನೆತನ. ಇವರು ಕೊರ್ಲಹಳ್ಳಿ ಗ್ರಾಮದಿಂದ ವ್ಯಾಪಾರಕ್ಕೆಂದು ಬಂದವರು. ಕೊರ್ಲಹಳ್ಳಿ ಗ್ರಾಮದಿಂದಲೇ ವಲಸೆ ಬಂದಿದ್ದರು ಎಂಬುದಕ್ಕೆ ಸಾಕ್ಷಿ ಈಗಲೂ ಕೂಡ ಹ್ಯಾರಡಾದಲ್ಲಿ ಕೊರ್ಲಹಳ್ಳಿ ಹೆಸರಿನ ಕುಟುಂಬಗಳು ಇರುವುದನ್ನು ಕಾಣಬಹುದಾಗಿದೆ. ವ್ಯಾಪಾರವು ಇವರ ಮೂಲ ವೃತ್ತಿಯಾಗಿದೆ. ಬಳೆಗಾರಿಕೆ, ಕಿರಾಣಿ ಅಂಗಡಿ, ಬಟ್ಟೆ ಅಂಗಡಿ ಹೀಗೆ ಹಲವಾರು ವೃತ್ತಿಗಳನ್ನು ಮಾಡುತ್ತಿರುವುದನ್ನು ನಾವುಗಳು ಕಾಣಬಹುದಾಗಿದೆ.

ಇತ್ತೀಚಿಗೆ ಹ್ಯಾರಡಾ ಗ್ರಾಮದಲ್ಲಿ ಈ ಸಮುದಾಯದವರು ಮಹಾವೀರನ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವುದುಂಟು. ಸಾಮಾನ್ಯವಾಗಿ ಈ ಸಮುದಾಯದ ಪುರುಷರನ್ನು ಶ್ರಾವಕರು ಹಾಗೂ ಸ್ತ್ರೀಯರನ್ನು ಶ್ರಾವಕಿಯರು ಎಂದು ಕರೆಯುವುದುಂಟು. ತಮ್ಮದೇ ಆದ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡು ಜೈನ ಧರ್ಮದ ತತ್ವಗಳನ್ನು ಈಗಲೂ ಪಾಲಿಸುತ್ತಿದ್ದಾರೆ. ಮಹಾವೀರನ ಜಯಂತಿಯ ದಿನದಂದು ಜೈನ ಧರ್ಮಿಯರೆಲ್ಲರೂ ಕೂಡಿ ಮಹಾವೀರನ

ಮೂರ್ತಿಯನ್ನು ಮೆರವಣಿಗೆ ಮಾಡುವುದರ ಮುಖಾಂತರವಾಗಿ, ವಿವಿಧ ರೀತಿಯ ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸುವರು. ನಂತರದಲ್ಲಿ ನಾಡಿನ ಹೆಸರಾಂತ ಬುದ್ಧಿ ಜೀವಿಗಳನ್ನು ಕರೆಯಿಸಿ ಉಪನ್ಯಾಸಗಳನ್ನು ಕೊಡಿಸುವರು. ವಿವಿಧ ರೀತಿಯ ಮನೋರಂಜನೆಗಳನ್ನು ಏರ್ಪಡಿಸುವುದರ ಮೂಲಕ ಮಹಾವೀರನ ಆಚರಣೆಯನ್ನು ಮಾಡುವರು.

ಹ್ಯಾರಡಾದ ಜೈನ ಧರ್ಮಿಯರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳು

ಪ್ರಸ್ತುತ ಹ್ಯಾರಡಾ ಗ್ರಾಮದಲ್ಲಿ ಜೈನ ಧರ್ಮಿಯರ ಹದಿನಾರು ಕುಟುಂಬಗಳಿವೆ. ಐವತ್ತೆರಡು ಜನಸಂಖ್ಯೆಯನ್ನು ಹೊಂದಿದ್ದು. ಗಂಡು ಇಪ್ಪತ್ತೇಳು, ಹೆಣ್ಣು ಇಪ್ಪತ್ತೈದು ಜನಸಂಖ್ಯೆಯನ್ನು ಹೊಂದಿದೆ. ಈ ಸಮುದಾಯದ ಸಾಕ್ಷರತೆ ನೂರಕ್ಕೆ ನೂರು ಇದೆ. ಆರ್ಥಿಕವಾಗಿ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಹ್ಯಾರಡಾದ ಜೈನ ಧರ್ಮಿಯರ ಪುರುಷರಿಗೆ ಶ್ರಾವಕರು, ಮಹಿಳೆಯರಿಗೆ ಶ್ರಾವಕಿಯರು ಎಂದು ಕರೆಯುವರು. ಹೀಗೆ ಶ್ರಾವಕ, ಶ್ರಾವಕಿಯರು ವಿವಿಧ ಸಂಘ ಸಂಸ್ಥೆಗಳ, ಸಂಘಟನೆಗಳನ್ನು ಕಟ್ಟಿಕೊಂಡು ತಮ್ಮ ಧರ್ಮದ ತತ್ವಗಳ ಅಡಿಯಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ಈಗಲೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಗ್ರಾಮದಲ್ಲಿ ಪ್ರಮುಖವಾಗಿ ಪುರುಷರ ಸಂಘಟನೆಯಾದ ವರ್ಧಮಾನ ಮಹಾವೀರ ದಿಗಂಬರ ಜೈನ ಸಮಾಜ ಸಂಘಟನೆಯು ಅಸ್ತಿತ್ವದಲ್ಲಿದೆ. ಈ ಸಂಘಟನೆಗೆ ಗೌರವ ಅಧ್ಯಕ್ಷರಾಗಿ ಸುಕುಮಾರ ಕೊರ್ಲಹಳ್ಳಿ, ಅಧ್ಯಕ್ಷರಾಗಿ ಸುರೇಂದ್ರನಾಥ ಕೊರ್ಲಹಳ್ಳಿ, ಕಾರ್ಯದರ್ಶಿಯಾಗಿ ಶಾಂತರಾಜ ಜೈನ್ ಆಯ್ಕೆಯಾಗಿದ್ದಾರೆ. ಇನ್ನು ಮಹಿಳಾ ಸಂಘಟನೆಯಾದ ಜ್ವಾಲಾಮಾಲಿನಿ ಮಹಿಳಾ ಸಮಾಜ ಸಂಘಟನೆಯು ಅಸ್ತಿತ್ವದಲ್ಲಿದೆ. ಈ ಸಂಘಟನೆಗೆ ಅಧ್ಯಕ್ಷರಾಗಿ ಅರುಣಾ ಕೊರ್ಲಹಳ್ಳಿ, ಗೌರವ ಅಧ್ಯಕ್ಷರಾಗಿ ಜಯಲಕ್ಷ್ಮಿ ಕೊರ್ಲಹಳ್ಳಿ, ಕಾರ್ಯದರ್ಶಿಯಾಗಿ ಪವಿತ್ರಾ ಜೈನ್ ಆಯ್ಕೆಯಾಗಿದ್ದಾರೆ. ಗ್ರಾಮದಲ್ಲಿ ಈ ಎರಡು ಸಂಘಟನೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ.

ಈ ಸಂಘಟನೆಗಳಿಗೆ ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಸಂಘಟನೆಯು ಸಾಥ್ ನೀಡುತ್ತಿದ್ದು, ಈ ಸಂಘಟನೆಯು ದೇಶದಲ್ಲಿ ಎಂಟು ವಲಯಗಳನ್ನು ಹೊಂದಿದೆ. ಕರ್ನಾಟಕದಲ್ಲಿ ಬೆಂಗಳೂರು, ಮಂಗಳೂರು, ಬೆಳಗಾವಿ, ಹಾಗೂ ದಾವಣಗೇರಿ ಹೀಗೆ ನಾಲ್ಕು ಶಾಖೆಗಳನ್ನು ಹೊಂದಿದೆ. ದಾವಣಗೇರಿಯ ಶಾಖೆಯಡಿಯಲ್ಲಿ ಹ್ಯಾರಡಾದ ಎರಡು ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಹ್ಯಾರಡಾದ ಜೈನ ಧರ್ಮಿಯರು ಸ್ಥಳೀಯ ರಾಜಕೀಯ ಸಂಸ್ಥೆಯಲ್ಲಿ ಮೊದಲಿನಿಂದಲೂ ಸಕ್ರಿಯರಾಗಿದ್ದಾರೆ. ಮುರಾರಿ ಆದಿರಾಜಪ್ಪ, ಕೊರ್ಲಹಳ್ಳಿ ಭೂಪಾಲಪ್ಪ ಹಾಗೂ ಶಕುಂತಲಮ್ಮ ಸಕುಮಾರಪ್ಪ ಅವರುಗಳು ಸಕ್ರಿಯ ಸ್ಥಳೀಯ ರಾಜಕೀಯದಲ್ಲಿದ್ದವರು. ಇತ್ತೀಚಿಗೆ ಗ್ರಾಮಪಂಚಾಯತಿಯ ಸದಸ್ಯರಾಗಿ ಕೊರ್ಲಹಳ್ಳಿ ಬಾಹುಬಲಿಯವರು ಸಕ್ರಿಯ ರಾಜಕೀಯದಲ್ಲಿದ್ದಾರೆ. ಜೈನ್ ಮಿಲನ್ ರಾಷ್ಟ್ರೀಯ ಸಂಘಟನೆಯ ಮೂಲಕ ಹ್ಯಾರಡಾದ ಜೈನ ಸಂಘಟನೆಗಳು ವ್ಯಕ್ತಿತ್ವ

ವಿಕಸನ, ಕೌಶಲ್ಯಾಭಿವೃದ್ಧಿ ಚಟುವಟಿಕೆಗಳು, ಪಶುಚಿಕಿತ್ಸಾ ಶಿಬಿರ, ಆರೋಗ್ಯ ಶಿಬಿರ ಹಾಗೂ ಪರಿಸರ ಜಾಗೃತಿಯನ್ನು ಮೂಡಿಸುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿವೆ. ಇದರ ಮುಖಾಂತರ ಗ್ರಾಮದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಹ್ಯಾರಡಾ ಜೈನ ಧರ್ಮಿಯರ ಧಾರ್ಮಿಕ ಆಚರಣೆಗಳು

ಜೈನ ಧರ್ಮದಲ್ಲಿ ದಿಗಂಬರ ಹಾಗೂ ಶ್ವೇತಾಂಬರ ಎಂಬ ಎರಡು ಪಂಥಗಳನ್ನು ಕಾಣಬಹುದು. ಹ್ಯಾರಡಾದಲ್ಲಿರುವ ಜೈನ ಧರ್ಮಿಯರು ದಿಗಂಬರ ಪಂಥಕ್ಕೆ ಸೇರಿದವರು. ಈ ಧರ್ಮಿಯರಿಗೆ ಭಾನುವಾರ ಪವಿತ್ರ ದಿನವಾಗಿದೆ. ಯಾವುದೇ ಶುಭ ಸಂದರ್ಭ, ಧಾರ್ಮಿಕ ಚಟುವಟಿಕೆಗಳನ್ನು ಬಹುತೇಕ ಭಾನುವಾರ ದಿನದಂದು ಆಚರಿಸುವರು. ಈ ಧರ್ಮಿಯರು ಪ್ರಮುಖವಾಗಿ ಎರಡು ದೈವಗಳನ್ನು ಆರಾಧಿಸುವುದುಂಟು. ಆ ದೈವಗಳು ಯಾವುದೆಂದರೆ ತೀರ್ಥಂಕರು ಹಾಗೂ ಯಕ್ಷದೇವತೆಗಳು.

ತೀರ್ಥಂಕರರಿಗೆ ಧಾರ್ಮಿಕ ವಿಧಿವಿಧಾನ

ಜೈನ ಧರ್ಮದಲ್ಲಿ ಬರುವ ಇಪ್ಪತ್ನಾಲ್ಕು ತೀರ್ಥಂಕರರು ಅದರಲ್ಲಿ ವಿಶೇಷವಾಗಿ ಮಹಾವೀರ ತೀರ್ಥಂಕರರ ಆರಾಧನೆಯನ್ನು ಮಾಡುವುದನ್ನು ಕಾಣಬಹುದಾಗಿದೆ. ದಿನನಿತ್ಯ ತಮ್ಮ ತಮ್ಮ ಮನೆಗಳಲ್ಲಿ ತೀರ್ಥಂಕರರನ್ನು ಪೂಜಿಸುವುದುಂಟು. ತೀರ್ಥಂಕರ ಮೂರ್ತಿಯನ್ನಿಟ್ಟು ಪೂಜಿಸುವರು. ಈ ಮೂರ್ತಿಗಳು ಒಂಭತ್ತು ಇಂಚುಗಳಿಗಿಂತ ಹೆಚ್ಚಾಗಿರುವುದಿಲ್ಲ ಚಿಕ್ಕ-ಚಿಕ್ಕ ಮೂರ್ತಿಗಳನ್ನು ಪೂಜಿಸುವರು. ಪೂಜೆಯಲ್ಲಿ ಯಾವುದೇ ರೀತಿಯ ಹಣ್ಣು, ಹೂವು, ಕರ್ಪೂರ, ಕಾಯಿ ವಸ್ತುಗಳನ್ನು ಉಪಯೋಗಿಸುವುದಿಲ್ಲ. ಕೇವಲ ಜಲಾಭಿಷೇಕದಿಂದ ಮೂರ್ತಿಯನ್ನು ಶುದ್ಧಗೊಳಿಸುವುದರ ಮೂಲಕ ಆರಾಧಿಸುವುದುಂಟು. ಈ ಜಲವನ್ನು ಸೂರ್ಯನ ಕಿರಣಗಳು ಹಾದು ಹೋಗದ ದಪ್ಪನೆಯ ವಸ್ತ್ರದಿಂದ ಸೋಸಿ ಜಲಾಭಿಷೇಕವನ್ನು ಮಾಡುವುದನ್ನು ಕಾಣಬಹುದಾಗಿದೆ.

ತೀರ್ಥಂಕರರಿಗೆ ಯಾವುದೇ ರೀತಿಯ ನೈವೇದ್ಯ ನಿಷಿದ್ಧವಾಗಿದೆ. ತೀರ್ಥಂಕರರ ಪೂಜೆಯನ್ನು ಮಾಡುವಾಗ ಈ ಕೆಳಕಂಡ " ಣಮೋಕಾರ ಮಂತ್ರ" ವನ್ನು ಪಠಿಸುವರು.

"ಣಮೋ ಅರಹಂತಾಣಂ,
ಣಮೋ ಸಿದ್ಧಾಣಂ, ಣಮೋ ಆಇರಿಯಾಣಂ।
ಣಮೋ ಉವಜ್ಝಾಯಾಣಾಂ,
ಣಮೋ ಲೋಏ ಸವ್ವಸಾಹೂಣಂ"

ಮೇಲಿನ ಮಂತ್ರವನ್ನು ಪ್ರತಿಯೊಬ್ಬ ಜೈನಧರ್ಮದ ಶ್ರಾವಕ, ಶ್ರಾವಕಿಯರು ಕಲಿಯಲೇಬೇಕು, ತೀರ್ಥಂಕರರ ಪೂಜೆಯನ್ನು ಮಾಡುವಾಗ ಶ್ವೇತ ವರ್ಣದ ಬಟ್ಟೆಗಳನ್ನು ಧರಿಸಿ, ಅದರಲ್ಲಿ ಮಡಿ

ಬಟ್ಟೆಗಳನ್ನೇ ಧರಿಸುವುದರ ಮೂಲಕ ಪೂಜಾ ಕಾರ್ಯವನ್ನು ನೆರವೇರಿಸುವರು. ದಿಗಂಬರ ಪಂಥದಲ್ಲಿ ಶ್ರಾವಕ ಪರಂಪರೆಯ ಉಪಾಧ್ಯಾಯ ಪರಂಪರೆ ಎಂಬ ಎರಡು ಪರಂಪರೆಯನ್ನು ಕಾಣಬಹುದು. ಶ್ರಾವಕ ಪರಂಪರೆಯಲ್ಲಿ ಜೈನ ಧರ್ಮದ ತತ್ವಗಳನ್ನು ಚಾಚೂ ತಪ್ಪದೇ ಪರಿಪಾಲಿಸುವರು. ಉಪಾಧ್ಯಾಯ ಪರಂಪರೆಯವರು ಹೆಚ್ಚಾಗಿ ಧಾರ್ಮಿಕ ವಿಧಿ-ವಿಧಾನಗಳು ಇವರ ಸಾರಥ್ಯದಲ್ಲಿ ನಡೆಯುತ್ತವೆ. ಮಂತ್ರಗಳು, ಭಜನೆಗಳು, ವ್ರತೋಪದೇಶವನ್ನು ಹೆಚ್ಚಾಗಿ ಪ್ರಾಕೃತ ಭಾಷೆಯಲ್ಲಿ ಹೇಳುವರು. ಜೈನ ಧರ್ಮಿಯರ ಬಹುತೇಕ ಧಾರ್ಮಿಕ ವಿಧಿ-ವಿಧಾನಗಳು, ಸಾಂಸ್ಕೃತಿಕ ಚಟುವಟಿಕೆಗಳನ್ನು ಉಪಾಧ್ಯಾಯರ ಸಾರಥ್ಯದಲ್ಲಿ ನಡೆಯುತ್ತವೆ. ಅದರಲ್ಲಿ ಪ್ರಮುಖವಾಗಿ ದಶ ಲಕ್ಷಣ ಪರ್ವ, ನೋಂಪಿಗಳ ಪ್ರಕಾರ ವ್ರತಾಚರಣೆಗಳನ್ನು, ಪರಮ ಜಿನೇಂದ್ರವಾಣಿಗಳನ್ನು ಬೋಧಿಸುವಾಗ ಇವರ ಪಾತ್ರ ಮಹತ್ವದ್ದಾಗಿದೆ.

ಯಕ್ಷದೇವತೆಗಳಿಗೆ ಧಾರ್ಮಿಕ ವಿಧಿ-ವಿಧಾನಗಳು

ಬಹುತೇಕ ಜೈನ ಧರ್ಮದ ವಿವಿಧ ಪಂಗಡಗಳಾದ ದಿಗಂಬರ, ಶ್ವೇತಾಂಬರ, ಬೋಗಾರು, ಚತುರ್ಥರು ಹಾಗು ಪಂಚಮರು ಯಕ್ಷದೇವತೆಗಳನ್ನು ಪೂಜಿಸುವರು. ಕುಷ್ಮಾಂಡಿನಿ, ಜ್ವಾಲಾಮಾಲಿನಿ, ಪದ್ಮಾವತಿ, ಬ್ರಹ್ಮ, ಮೋಕ್ಷಲಕ್ಷ್ಮಿ, ಹೀಗೆ ಹಲವಾರು ಯಕ್ಷದೇವತೆಗಳನ್ನು ಪೂಜಿಸುವುದನ್ನು ಕಾಣಬಹುದು. ಈ ಯಕ್ಷದೇವತೆಗಳನ್ನು ಪೂಜಿಸುವರು. ಹಣ್ಣು, ಕಾಯಿ, ಹೂವು, ಅದರಲ್ಲಿ ವಿಶೇಷವಾಗಿ ವಿವಿಧ ರೀತಿಯ ಹಣ್ಣುಗಳನ್ನು ಬಳಸುವರು. ಎಲ್ಲಾ ಜೈನ ಧರ್ಮಿಯರ ಜಗುಲಿಯ ಮೇಲೆ ತೀರ್ಥಂಕರರ ಮೂರ್ತಿಗಿಂತ ಕೆಳಗೆ ಈ ಯಕ್ಷದೇವತೆಗಳನ್ನು ಇಟ್ಟು ಪೂಜಿಸುವುದನ್ನು ಕಾಣಬಹುದಾಗಿದೆ.

ಈ ಯಕ್ಷದೇವತೆಗಳು ತೀರ್ಥಂಕರರ ತಪಸ್ಸಿನ ಸಮಯದಲ್ಲಿ ದುಷ್ಟ ಶಕ್ತಿಗಳು ಯಾವುದೇ ರೀತಿಯಲ್ಲಿ ಅಡ್ಡಿಪಡಿಸದಂತೆ ಕಾವಲು ನಿಂತಿದ್ದರು ಎಂಬ ನಂಬಿಕೆಯು ಇವರಲ್ಲಿ ಅಪಾರವಾಗಿದೆ. ಆದ್ದರಿಂದ ಯಕ್ಷದೇವತೆಗಳನ್ನು ಅತ್ಯಂತ ಶ್ರದ್ಧೆಯಿಂದ ಪೂಜಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಅದರಲ್ಲೂ ವಿಶೇಷವಾಗಿ ಮೋಕ್ಷ ಲಕ್ಷ್ಮಿಯನ್ನು ಪೂಜಿಸುವುದುಂಟು. ಈ ಮೋಕ್ಷ ಲಕ್ಷ್ಮಿಯು ಪ್ರತಿಯೊಬ್ಬ ಜೈನ ಧರ್ಮಿಯರಿಗೆ ಮೋಕ್ಷವನ್ನು ಒದಗಿಸುವ ದೇವತೆಯಾಗಿದ್ದಾಳೆ. ಹೀಗೆ ಗ್ರಾಮದ ಬಹುತೇಕ ಶ್ರಾವಕ, ಶ್ರಾವಕಿಯರು ಜೈನ ಧರ್ಮದ ತತ್ವೋಪದೇಶಗಳನ್ನು ನಿಯಮಬದ್ಧವಾಗಿ ಪಾಲಿಸುತ್ತಿದ್ದಾರೆ.

ಹ್ಯಾರಡಾ ಜೈನ ಧರ್ಮಿಯರ ಜೀವನಾವರ್ತನ ಆಚರಣೆಗಳು

ಹ್ಯಾರಡಾ ಜೈನ ಧರ್ಮಿಯರು ತಮ್ಮ ಜೀವನದಲ್ಲಿ ಘಟಿಸುವ ಅನೇಕ ಆಚರಣೆಗಳನ್ನು ಅತ್ಯಂತ ವಿಶಿಷ್ಟವಾಗಿ ಆಚರಿಸುವರು. ಈ ಎಲ್ಲಾ ಜೀವನಾವರ್ತನ ಆಚರಣೆಗಳು ಉಪಾಧ್ಯಾಯ (ಪುರೋಹಿತರ)ರ ಸಾರಥ್ಯದಲ್ಲಿ ನಡೆಯುವುದನ್ನು ಕಾಣಬಹುದು. ಈ ಆಚರಣೆಗಳು ಜೈನ ಧರ್ಮದ

ತತ್ವಗಳಿಗನುಗುಣವಾಗಿ ನಡೆಯುವುದನ್ನು ನಾವಿಲ್ಲಿ ಅರಿಯಬಹುದಾಗಿದೆ. ಅಂತಹ ಆಚರಣೆಗಳು ಕೆಳಕಂಡಂತಿವೆ;

ಉಪನಯನ

ಜೈನ ಧರ್ಮದಲ್ಲಿ ಹುಟ್ಟಿದ ಪ್ರತಿಯೊಬ್ಬ ಗಂಡಸಿಗೆ ಉಪನಯನವು ಕಡ್ಡಾಯವಾಗಿದೆ. ಮಗು ಹುಟ್ಟಿದ ಎಂಟು ವರ್ಷಕ್ಕೆ ಉಪನಯನ ಕಾರ್ಯಕ್ರಮವನ್ನು ಪ್ರತಿಯೊಬ್ಬರು ಮಾಡುವರು. ಉಪನಯನವನ್ನು ಮಾಡುವ ಪ್ರಮುಖ ಉದ್ದೇಶ ಅಧಿಕೃತವಾಗಿ ಈ ವ್ಯಕ್ತಿಯು ಜೈನ ಧರ್ಮದ ತತ್ವ ಸಿದ್ಧಾಂತಗಳನ್ನು ಪರಿಪಾಲಿಸುವುದು ಎಂದರ್ಥ. ಉಪನಯನವನ್ನು ಮಾಡಿಕೊಳ್ಳದ ವ್ಯಕ್ತಿಯು ಅಶುದ್ಧ ಎಂಬ ನಂಬಿಕೆ ಜೈನ ಧರ್ಮಿಯರಲ್ಲಿದೆ. ಆದ್ದರಿಂದ ಉಪನಯನವನ್ನು ಮಾಡಿಕೊಳ್ಳದೇ ಇರುವ ವ್ಯಕ್ತಿಯನ್ನು ಕುಲಹೀನರು (ಧರ್ಮ ಆಚರಣೆ ಮಾಡದೇ ಇರುವವನು) ಎಂದು ನಂಬಿದ್ದಾರೆ. ಆದುದರಿಂದ ಧರ್ಮದ ಪ್ರತಿಯೊಂದು ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಉಪನಯನ ಕಡ್ಡಾಯವಾಗಿದೆ.

ಉಪನಯನ ಸಂದರ್ಭದಲ್ಲಿ ಎಂಟು ವರ್ಷದ ಮಗುವಿಗೆ ಮೂರು ಎಳೆಯ ದಾರವನ್ನು ಕೊರಳಲ್ಲಿ ಹಾಕುವರು. ಈ ಮೂರು ಎಳೆಗಳ ದಾರಗಳು ಒಂದೊಂದು ತತ್ವಗಳನ್ನು ಪ್ರತಿನಿಧಿಸುವಂತಹವು, ಒಂದು ದಾರದ ಎಳೆ ಸಮ್ಯಕ್ ದರ್ಶನ, ಇನ್ನೊಂದು ದಾರದ ಎಳೆ ಸಮ್ಯಕ್ ಜ್ಞಾನ, ಮತ್ತೊಂದು ದಾರದ ಎಳೆ ಸಮ್ಯಕ್ ಚಾರಿತ್ರ್ಯ ಹೀಗೆ ಜೈನ ಧರ್ಮದ ಪ್ರಮುಖ ಮೂರು ಅಂಶಗಳನ್ನು ಪ್ರತಿನಿಧಿಸುತ್ತವೆ. ಈ ವ್ಯಕ್ತಿಯು ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜೀವನವನ್ನು ನಡೆಸಬೇಕು. ಉಪನಯುನದಿಂದ ಹಿಡಿದು ಮದುವೆಯಾಗುವವರೆಗೆ ಈ ವ್ಯಕ್ತಿ ಎಲ್ಲಾ ಕರ್ಮಗಳಿಗೆ ತಂದೆ–ತಾಯಿಗಳು ಉತ್ತರದಾಯಿತ್ವವನ್ನು ಹೊಂದಿರುತ್ತಾರೆ.

ನಾಮಕರಣ

ಮಗು ಹುಟ್ಟಿ ಹನ್ನೊಂದನೇ ದಿನಕ್ಕೆ ಸೂತಕವನ್ನು ತೆಗೆಯುವರು. ಹದಿಮೂರನೇ ದಿನಕ್ಕೆ ಮನೆಯಲ್ಲಿರುವ ಪ್ರತಿಯೊಂದು ವಸ್ತುಗಳನ್ನು ಶುದ್ಧಗೊಳಿಸುವರು. ನಂತರ ಪಂಡಿತರ ಸಾರಥ್ಯದಲ್ಲಿ ಗಂದೋಧರವನ್ನು ಕೊಡುವುದರ ಮೂಲಕ ಸೂತಕವನ್ನು ಕಳೆಯುವರು. ನಂತರದಲ್ಲಿ ಮಗುವು ಐದು ಅಥವಾ ಆರು ತಿಂಗಳು ತಲುಪಿದಾಗ ನಾಮಕರಣ ಕಾರ್ಯಕ್ರಮವನ್ನು ನೆರವೇರಿಸುವರು. ಈ ಕಾರ್ಯಕ್ರಮವು ಬಹುತೇಕ ಹಿಂದೂಗಳ ನಾಮಕರಣ ರೀತಿಯಲ್ಲಿಯೇ ನಡೆಯುವುದುಂಟು. ಮಗುವಿನ ತಂದೆಯ ಮನೆಯಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ತಮ್ಮ ಸಂಬಂಧಿಕರೆಲ್ಲಾ ಕೂಡಿಕೊಂಡು ಮಗುವಿಗೆ ಜನ್ಮನಾಮಗಳ ಪ್ರಕಾರ ಹೆಸರನ್ನು ಇಡುವರು. ಪರಸ್ಪರ ಸಿಹಿಯೂಟವನ್ನು ಸೇವಿಸುವುದರ ಮೂಲಕ ಈ ಕಾರ್ಯಕ್ರಮವನ್ನು ನೆರವೇರಿಸುವರು.

ಋತುಮತಿ (ವ್ರತೋಪದೇಶ) ಕಾರ್ಯಕ್ರಮ

ಋತುಮತಿಯಾದ ದಿನದಿಂದ ಹನ್ನೊಂದನೇಯ ದಿನಕ್ಕೆ ಸೂತಕವನ್ನು ತೆಗೆಯುವರು. ಈ ಸಮಯದಲ್ಲಿ ಮನೆಯನ್ನೆಲ್ಲಾ ಸ್ವಚ್ಛಗೊಳಿಸುವರು. ಮನೆಯ ಪ್ರತಿಯೊಂದು ವಸ್ತುಗಳನ್ನು ಶುದ್ಧಗೊಳಿಸುವರು. ಮನೆಯನ್ನು ಸುಣ್ಣಬಣ್ಣಗಳಿಂದ ಸಾರುವರು. ಜೈನ ಧರ್ಮದ ಪ್ರಕಾರ ಋತುಮತಿ ಕಾರ್ಯಕ್ರಮ ಎನ್ನುವ ಬದಲಾಗಿ ವ್ರತೋಪದೇಶ ಕಾರ್ಯಕ್ರಮ ಎಂದು ಕರೆಯುವರು. ಈ ಕಾರ್ಯಕ್ರಮವು ಪಂಡಿತರ ಸಾರಥ್ಯದಲ್ಲಿ ನಡೆಯುವುದು. ಈ ಸಂದರ್ಭದಲ್ಲಿ ಋತುಮತಿಯಾದ ಹೆಣ್ಣು ಮಗುವನ್ನು ಕೂಡಿಸಿ ವಿವಿಧ ರೀತಿಯ ಆಚರಣೆಗಳನ್ನು ಮಾಡುವರು. ಅದಕ್ಕಿಂತ ವಿಶೇಷವಾಗಿ ವ್ರತೋಪದೇಶ ಮಾಡುವರು.

ವ್ರತೋಪದೇಶವೆಂದರೆ ಆ ಹೆಣ್ಣುಮಗು ಜೈನ ಧರ್ಮದ ತತ್ವ-ಸಿದ್ಧಾಂತಗಳ ಪ್ರಕಾರ ಹೇಗೆ ಜೀವನವನ್ನು ನಡೆಸಬೇಕು ಎಂಬುದನ್ನು ಪುರೋಹಿತರು ಬೋಧಿಸುವರು. ಹಿಂಸೆಯನ್ನು ಮಾಡಬಾರದು, ಆಹಾರ ಸೇವನೆ ಕ್ರಮ ಹೇಗಿರಬೇಕು, ಯಾವ-ಯಾವ ಆಹಾರವನ್ನು ಸೇವಿಸಬೇಕು, ಜೈನ ಧರ್ಮದ ತತ್ವಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದರ ಬಗ್ಗೆ ಉಪದೇಶವನ್ನು ಮಾಡುವರು. ಗಂಡು ಮಕ್ಕಳಿಗೆ ಉಪನಯನ ಕಾರ್ಯಕ್ರಮ ಮುಖ್ಯ ಹೇಗೆಯೋ, ಹಾಗೆಯೇ ಹೆಣ್ಣು ಮಕ್ಕಳಿಗೆ ಈ ವ್ರತೋಪದೇಶ ಕಾರ್ಯಕ್ರಮ ಬಹುಮುಖ್ಯವಾದುದು. ನಂತರ ಬಂಧುಗಳು ಕೂಡಿಕೊಂಡು ಪರಸ್ಪರ ಸಿಹಿಯನ್ನು ಸೇವಿಸುವುದರ ಮೂಲಕ ಈ ಕಾರ್ಯಕ್ರಮವನ್ನು ಮಾಡುವರು.

ಮದುವೆ ಕಾರ್ಯಕ್ರಮ

ಬಹುತೇಕ ಹಿಂದೂ ಧರ್ಮದ ಸಂಪ್ರದಾಯದಂತೆಯೇ ಮದುವೆ ಕಾರ್ಯಕ್ರಮ ನಡೆಯುವುದನ್ನು ಕಾಣಬಹುದು. ಈ ಕಾರ್ಯಕ್ರಮವು ಪರೋಹಿತರ ಸಾರಥ್ಯದಲ್ಲಿ ನಡೆಯುವುದು. ಪುರೋಹಿತರು ಣಮೋಕಾರ ಮಂತ್ರವನ್ನು ಹೇಳುವುದರ ಮೂಲಕ ವಿವಿಧ ರೀತಿಯ ಮಂತ್ರಗಳನ್ನು ಪಠಿಸುವುದರ ಮುಖಾಂತರ ವಧುವಿಗೆ ವರನಿಂದ ತಾಳಿಯನ್ನು ಕಟ್ಟಿಸುವರು. ಈ ಸಂದರ್ಭದಲ್ಲಿ ತಮ್ಮ ಬಂಧುಗಳು, ಆಪ್ತರು, ಹಿತೈಷಿಗಳು ಕೂಡಿಕೊಂಡು ಅತ್ಯಂತ ಸಂಭ್ರಮದಿಂದ ಈ ಕಾರ್ಯಕ್ರಮವನ್ನು ನೆರವೇರಿಸುವರು.

ಈ ಮದುವೆ ಕಾರ್ಯಕ್ರಮದಲ್ಲಿ ವಧುವಿಗೆ ಆರು ಎಳೆಯ ದಾರದ ಜನಿವಾರವನ್ನು ಹಾಕುವರು. ಉಪನಯನ ಸಂದರ್ಭದಲ್ಲಿ ಮೂರು ಎಳೆಯ ದಾರದ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯದ ಜನಿವಾರ ಹಾಗೂ ಹೆಂಡತಿಯ ಮೂರು ಎಳೆಯ ದಾರ ಒಟ್ಟು ಆರು ಎಳೆಯ ಜನಿವಾರವನ್ನು ಹಾಕುವುದನ್ನು ಕಾಣಬಹುದು. ಉಪನಯನದಿಂದ ಮದುವೆಯವರೆಗೆ ವ್ಯಕ್ತಿಯ ಕರ್ಮಗಳಿಗೆ ತಂದೆ-ತಾಯಿಗಳು ಉತ್ತರದಾಯಿತ್ವವನ್ನು ಹೊಂದಿದ್ದರೆ, ಮದುವೆಯ ನಂತರ ವ್ಯಕ್ತಿಯ ಕರ್ಮಗಳಿಗೆ ಹೆಂಡತಿಯು ಉತ್ತರದಾಯಿತ್ವವನ್ನು ಹೊಂದಿರುವಳು ಎಂಬುದು ಇವರ ನಂಬಿಕೆಯಾಗಿದೆ. ಈ ರೀತಿಯಾಗಿ ಈ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನಡೆಯುವುದು.

ಶ್ರದ್ಧಾ ಕಾರ್ಯಕ್ರಮ (ಸಾವು)

ಹ್ಯಾರಡಾದ ಜೈನ ಧರ್ಮಿಯರು ವ್ಯಕ್ತಿಯ ಅಂತ್ಯ ಸಂಸ್ಕಾರವನ್ನು ಶ್ರದ್ಧಾ ಕಾರ್ಯಕ್ರಮವೆಂದು ಕರೆಯುವರು. ಈ ಶ್ರದ್ಧಾ ಕಾರ್ಯಕ್ರಮವು ಪುರೋಹಿತರ ಸಾರಥ್ಯದಲ್ಲಿ ನೆರವೇರುವುದು. ಪುರೋಹಿತರು ಣಮೋಕಾರ ಮಂತ್ರ, ವಿವಿಧ ಜಿನ ಭಜನೆಗಳನ್ನು ಹೇಳುವುದರ ಮೂಲಕ ಹಲವಾರು ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸುವುದರ ಮೂಲಕ ಅಂತ್ಯ ಸಂಸ್ಕಾರಕ್ಕೆ ಅನುವು ಮಾಡಿಕೊಡುವರು . ಜೈನ ಧರ್ಮಿಯರು ಐದು ಮಾರ್ಗಗಳ ಮುಖಾಂತರ ವ್ಯಕ್ತಿಯ ಅಂತ್ಯ ಸಂಸ್ಕಾರವನ್ನು ಮಾಡುವರು. ಆ ಐದು ಮಾರ್ಗಗಳು ಕೆಳಕಂಡತಿವೆ.

೦೧ ಆಕಾಶ ಮಾರ್ಗ : ಮರಣ ಹೊಂದಿದ ವ್ಯಕ್ತಿಯ ದೇಹವನ್ನು ಯಾವ ಪ್ರಾಣಿಗಳೂ ವಾಸಿಸದ ಪ್ರದೇಶದಲ್ಲಿ ಇಟ್ಟು ಬರುವುದು. ಅಲ್ಲಿರುವ ಹಕ್ಕಿ-ಪಕ್ಷಿಗಳು ಆ ದೇಹವನ್ನು ತಿನ್ನುವವು. ಇದರಿಂದ ಸತ್ತ ವ್ಯಕ್ತಿಯ ದೇಹ ನಿರರ್ಥಕವಾಗದೇ ಪಕ್ಷಿಗಳಿಗೆ ಆಹಾರವಾಗುವುದರ ಮೂಲಕ ಮೋಕ್ಷವನ್ನು ಪಡೆಯುವುದು ಈ ಮಾರ್ಗದ ಉದ್ದೇಶವಾಗಿದೆ. ಸಾಮಾನ್ಯವಾಗಿ ಹಿಮಾಲಯ ಪರ್ವತದಂತಹ ಪ್ರದೇಶ, ಬೆಟ್ಟ-ಗುಡ್ಡಗಳ ಎತ್ತರವಾದ ಸ್ಥಳಗಳಲ್ಲಿ ವ್ಯಕ್ತಿಯ ದೇಹವನ್ನು ಇಟ್ಟು ಬರುವುದೇ ಆಕಾಶ ಮಾರ್ಗವಾಗಿದೆ.

೦೨. ಜಲಮಾರ್ಗ : ವ್ಯಕ್ತಿಯ ಮೃತ ದೇಹವನ್ನು ಸಮುದ್ರಗಳಲ್ಲಿ, ದೊಡ್ಡ-ದೊಡ್ಡ ನದಿಗಳಲ್ಲಿ ಬಿಡುವರು. ಈ ಮೃತ ದೇಹವನ್ನು ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳು ತಿನ್ನುವುದರ ಮೂಲಕ ಜೀವನದಲ್ಲಿ ಮೋಕ್ಷ ಪಡೆಯುವುದು ಎಂಬ ನಂಬಿಕೆಯಾಗಿದೆ.

೦೩. ಅಗ್ನಿ ಮಾರ್ಗ : ವ್ಯಕ್ತಿಯ ಮೃತ ದೇಹವನ್ನು ಬೆಂಕಿಯಿಂದ ಸುಡುವುದರ ಮೂಲಕ ಅದರಿಂದ ಬಿಡುಗಡೆಯಾಗುವ ವಿವಿಧ ರಾಸಾಯನಿಕ ಅನಿಲಗಳು ವಾತಾವರಣದಲ್ಲಿರುವ ಜೀವಿಗಳಿಗೆ ಅನುಕೂಲವಾಗಲು ಈ ಮಾರ್ಗವನ್ನು ಅನುಸರಿಸುವರು. ಉದಾಹರಣೆಗೆ ವ್ಯಕ್ತಿಯ ದೇಹವನ್ನು ಸುಟ್ಟಾಗ ಅಪಾರ ಪ್ರಮಾಣದ ಇಂಗಾಲ ವಾತಾವರಣದಲ್ಲಿ ಸೇರುವುದು ಈ ಇಂಗಾಲವು ಸಸ್ಯಗಳಿಗೆ ಪ್ರಮುಖವಾದುದು. ಇದರ ಮುಖಾಂತರ ವ್ಯಕ್ತಿಯು ಮೋಕ್ಷವನ್ನು ಪಡೆಯುವುದು ಈ ಮಾರ್ಗದ ಉದ್ದೇಶವಾಗಿದೆ.

೦೪. ಅರಣ್ಯ ಮಾರ್ಗ : ವ್ಯಕ್ತಿಯ ಮೃತದೇಹವನ್ನು ಮನುಷ್ಯರು ಹೋಗದೇ ಇರುವ ಕೇವಲ ಅರಣ್ಯದ ಪ್ರಾಣಿಗಳು ಇರುವ ದಟ್ಟವಾದ ಅರಣ್ಯದಲ್ಲಿ ಇಟ್ಟು ಬರುವರು. ಇದರಿಂದ ಅರಣ್ಯದ ಕ್ರೂರ ಪ್ರಾಣಿಗಳಿಗೆ ದೇಹವು ಆಹುತಿಯಾಗುವುದರ ಮೂಲಕ ಜೀವನದಲ್ಲಿ ಮೋಕ್ಷವನ್ನು ಪಡೆಯುವುದು.

೦೫. ಭೂಮಿ ಮಾರ್ಗ : ವ್ಯಕ್ತಿಯ ಮೃತ ದೇಹವನ್ನು ಭೂಮಿಯಲ್ಲಿ ಹೂಳುವುದರ ಮೂಲಕ ಭೂಮಿಯ ಅಂತರಾಳದಲ್ಲಿರುವ ಸೂಕ್ಷ್ಮಾಣು ಜೀವಿಗಳಿಗೆ ಆಹಾರವಾಗುವುದು. ಇದರ ಮೂಲಕ ಜೀವನದಲ್ಲಿ ಮೋಕ್ಷವನ್ನು ಪಡೆಯುವುದು ಭೂಮಿ ಮಾರ್ಗದ ಪ್ರಮುಖ ಉದ್ದೇಶವಾಗಿದೆ.

ಹೀಗೆ ಜೈನ ಧರ್ಮಿಯರು ಪ್ರಮುಖವಾಗಿ ಐದು ಮಾರ್ಗಗಳ ಮೂಲಕ ವ್ಯಕ್ತಿಯ ಶವ ಸಂಸ್ಕಾರವನ್ನು ಮಾಡುವರು. ಆದರೆ ಇತ್ತೀಚಿನ ಬಹುತೇಕ ಜೈನ ಧರ್ಮಿಯರು ಕೇವಲ ಅಗ್ನಿ ಮಾರ್ಗದ ಮೂಲಕ ಶವ ಸಂಸ್ಕಾರವನ್ನು ಮಾಡುವರು. ಇನ್ನುಳಿದ ನಾಲ್ಕು ಮಾರ್ಗಗಳು ಅಸ್ತಿತ್ವದಲ್ಲಿಲ್ಲ. ಹ್ಯಾರಡಾ ಗ್ರಾಮದ ಜೈನ ಧರ್ಮಿಯರೂ ಸಹ ಅಗ್ನಿ ಮಾರ್ಗದ ಮೂಲಕ ಶವ ಸಂಸ್ಕಾರ ಪದ್ಧತಿಯನ್ನು ಮಾಡುವರು. ಮೇಲಿನ ನಾಲ್ಕು ಮಾರ್ಗಗಳು ಬಹುತೇಕ ಕಣ್ಮರೆಯಾಗಿವೆ. ಏಕೆಂದರೆ ಇಂದಿನ ದಿನಮಾನಗಳಲ್ಲಿ ಜನವಸತಿ ಇರದೇ ಇರುವ ಪ್ರದೇಶಗಳಿಲ್ಲ. ಆದ್ದರಿಂದ ಈ ಪದ್ಧತಿಗಳು ನಶಿಸಿ ಹೋಗುವುದಕ್ಕೆ ಮೂಲ ಕಾರಣವನ್ನು ನೋಡಬಹುದು.

೩.೧೬.೪ ಕ್ರಿಶ್ಚಿಯನ್ ಧರ್ಮ

ಕ್ರೈಸ್ತ ಧರ್ಮವು ವಿಶಿಷ್ಟವಾದ ಒಂದು ಧರ್ಮವಾಗಿದೆ. ಇಂದು ಬಹುತೇಕ ದೇಶಗಳಲ್ಲಿ ಈ ಧರ್ಮ ಪ್ರಚಲಿತದಲ್ಲಿದೆ. ಏಸುಕ್ರಿಸ್ತನು ಕ್ರಿಶ್ಚಿಯನ್ ಧರ್ಮದ ಮೂಲ ಪ್ರವರ್ತಕನಾಗಿರುತ್ತಾನೆ. ಶಿಲುಬೆ ಈ ಧರ್ಮದ ಸಂಕೇತವಾಗಿದೆ. ಬೈಬಲ್ ಇದರ ಪವಿತ್ರ ಧರ್ಮ ಗ್ರಂಥವಾಗಿದೆ. ಯೇಸು ಪ್ಯಾಲಿಸ್ತೇನ್ ದೇಶದ ಬೂಡಿಯಾದ ಜೆರುಸಲೀಂ ಬಳಿಯ ಬೆತ್ಲಹೇಂ ಎಂಬಲ್ಲಿ ಜನಿಸಿದರು.

ಹ್ಯಾರಡಾ ಗ್ರಾಮದಲ್ಲಿ ಕೆಲವೊಂದು ಕುಟುಂಬಗಳು ಇತ್ತೀಚೆಗೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿವೆ. ಪೂರ್ವಜರ ಕಾಲದಿಂದ ಕ್ರೈಸ್ತ ಧರ್ಮ ಹ್ಯಾರಡಾ ಗ್ರಾಮದಲ್ಲಿ ಅಸ್ತಿತ್ವದಲ್ಲಿ ಇಲ್ಲ. ಮತಾಂತರ ಹೊಂದಿದ ಕುಟುಂಬಗಳು ಸಹ ನಮ್ಮೂರಿನಲ್ಲಿ ಇಲ್ಲ. ನಮ್ಮೂರಿನ ಕುರುಬ ಸಮುದಾಯದ ಒಂದು ಕುಟುಂಬವಾದ ಕರಿಗಾರ ಕುಟುಂಬವು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದೆ. ಈಗಲೂ ಸಹ ಈ ಕುಟುಂಬಗಳು ತಮ್ಮ ಮೂಲ ಹೆಸರುಗಳನ್ನು ಬದಲಾಯಿಸಿಕೊಂಡಿವೆ. ಕ್ರೈಸ್ತ ಧರ್ಮದ ತತ್ವಗಳನ್ನು ಚಾಚು ತಪ್ಪದೆ ಪರಿಪಾಲಿಸುತ್ತಿದ್ದಾರೆ. ದೇವತೆಯ ಜಾತ್ರೆ ಹಾಗೂ ವಿಶೇಷ ಸಂದರ್ಭಗಳಲ್ಲಿ ಬಂದು ಅದರಲ್ಲಿ ಭಾಗವಹಿಸುವ ಪರಿಪಾಠವನ್ನು ಹೊಂದಿದ್ದಾರೆ.

೩.೧೬.೫ ಹಿಂದೂ ಧರ್ಮ, ಮುಸ್ಲಿಂ ಧರ್ಮ, ಜೈನ ಧರ್ಮ ಹಾಗೂ ಕ್ರೈಸ್ತ ಧರ್ಮಗಳ ಸಾಮರಸ್ಯ

ಹ್ಯಾರಡಾ ಗ್ರಾಮವು ಮೊದಲಿನಿಂದಲೂ, ಧಾರ್ಮಿಕ ಸಾಮರಸ್ಯವನ್ನು ಕಾಪಾಡಿಕೊಂಡು ಬಂದಿದೆ. ಯಾವುದೇ ಒಂದು ಸಂಸ್ಥೆ, ಸ್ಥಳ, ಗ್ರಾಮ ಅಭಿವೃದ್ಧಿಯನ್ನು ಕಾಣಬೇಕಾದರೆ ಆ ಕ್ಷೇತ್ರದಲ್ಲಿಯ ಮಾನವ ಸಂಪತ್ತು ಬಹಳಷ್ಟು ಪ್ರಮುಖವಾದುದು. ಅವರ ಪರಿಶ್ರಮದಿಂದ ಆ ಕ್ಷೇತ್ರ ಉನ್ನತ ಸ್ಥಾನವನ್ನು ಪಡೆದಿರುತ್ತದೆ. ಅದೇ ರೀತಿಯಾಗಿ ಹ್ಯಾರಡಾ ಗ್ರಾಮವು ಪುಟ್ಟದಾಗಿದ್ದರೂ ಕರ್ನಾಟಕ ನಕ್ಷೆಯಲ್ಲಿ ಗುರ್ತಿಸುವಂತಹದ್ದು. ಈ ಗ್ರಾಮದ ಶೈಕ್ಷಣಿಕ ಸಾಧನೆ ಇಡೀ ಬಳ್ಳಾರಿಯಲ್ಲೇ ಹಿರಿತನವಾದುದು. ಸಮಾಜದ ಉನ್ನತ ಸ್ಥಾನಗಳಲ್ಲಿ ಹ್ಯಾರಡಾದ ಯುವಜನರು ಇದ್ದಾರೆ. ಇದಕ್ಕೆಲ್ಲ ಮೂಲ ಕಾರಣ ಗ್ರಾಮದ ಎಲ್ಲಾ ಸಮುದಾಯಗಳು ಸಾಮರಸ್ಯದಿಂದ ಕೂಡಿದ್ದು, ಗ್ರಾಮದ ಎಲ್ಲಾ

ಜನಪದರು ಅಣ್ಣ ತಮ್ಮಂದಿರಂತೆ ಅಕ್ಕ, ಮಾವ, ಅಳಿಯ, ದೊಡ್ಡಪ್ಪ, ದೊಡ್ಡಮ್ಮ, ಅತ್ತೆ ಎಂಬ ಗೌರವ ಸೂಚಕ ಸಂಬೋಧನೆಗಳನ್ನು ಬಳಸುತ್ತಾ ಧಾರ್ಮಿಕ ಸಾಮರಸ್ಯವನ್ನು ಇಂದಿಗೂ ಕಾಪಾಡಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಸಾಮರಸ್ಯಕ್ಕೆ ಒಂದೇ ಒಂದು ಉದಾಹರಣೆಯಂದರೆ ಮೊಹರಂ ಹಬ್ಬವನ್ನು ಸ್ವತಃ ಹಿಂದೂ ಧರ್ಮದ ಎಲ್ಲಾ ಸಮುದಾಯದವರು ಕೂಡಿಕೊಂಡು ಅತ್ಯಂತ ವಿಜೃಂಭಣೆಯಿಂದ ಆಚರಿಸುವರು. ಮುಸ್ಲಿಂ ಬಾಂಧವರು ಈ ಹಬ್ಬದಲ್ಲಿ ನಗಣ್ಯ. ಹೀಗೆ ಯಾವುದೇ ಬೇಧಭಾವವಿಲ್ಲದೇ ಸಾಮರಸ್ಯ ಜೀವನವನ್ನು ನಡೆಸುತ್ತಿದ್ದಾರೆ.

ಜೈನ ಸಮುದಾಯದವರೂ ಸಹ ಹಿಂದೂ ಧರ್ಮದ ಯಾವುದೇ ಉತ್ಸವ ಜಾತ್ರೆ, ಹಬ್ಬಗಳಿಗೆ ದೇಣಿಗೆಯನ್ನು ಕೊಡುವುದರ ಮೂಲಕ ತಾವು ಕೂಡ ಹಬ್ಬಗಳಲ್ಲಿ ಭಾಗವಹಿಸಿ ತಮ್ಮ ಧಾರ್ಮಿಕ ಸಾಮರಸ್ಯವನ್ನು ಮೆರೆದಿದ್ದಾರೆ. ಅದೇ ರೀತಿಯಾಗಿ ಜೈನ ಧರ್ಮದ ಜಯಂತಿ, ಉತ್ಸವದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಹಿಂದೂ ಸಮುದಾಯವು ಶ್ರಮಿಸುತ್ತಿದೆ. ಇಂತಹ ಧಾರ್ಮಿಕ ಸಾಮರಸ್ಯವು ಪ್ರತಿಯೊಂದು ಗ್ರಾಮದಲ್ಲಿ ಅವಶ್ಯಕವಾದುದು. ಗ್ರಾಮವು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಅಭಿವೃದ್ದಿಯನ್ನು ಕಾಣುವುದರಲ್ಲಿ ಸಹಕಾರಿಯಾಗುತ್ತದೆ. ಹಿಂದೂಗಳು ಬಹುಸಂಖ್ಯಾತರಾಗಿದ್ದರೂ ಸಹ ಅಲ್ಪ ಸಂಖ್ಯಾತರ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬಂದಿಲ್ಲ. ರಾಜಕೀಯವಾಗಿ ಅಲ್ಪ ಸಂಖ್ಯಾತ ಸಮುದಾಯದವರಿಗೂ ಅವಕಾಶ ಮಾಡಿಕೊಡಲಾಗಿದೆ. ಇದಕ್ಕೆ ಸ್ಪಷ್ಟವಾದ ಉದಾಹರಣೆ ಜೈನ ಸಮುದಾಯವು ೧೦ ರಿಂದ ೧೬ ಕುಟುಂಬಗಳನ್ನು ಹೊಂದಿದ್ದರೂ ಸಹ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೈನ ಸಮುದಾಯದ ವ್ಯಕ್ತಿಯನ್ನು ಚುನಾವಣೆಯಲ್ಲಿ ಗೆಲ್ಲಿಸಲಾಗಿದೆ. ಹೀಗೆ ರಾಜಕೀಯವಾಗಿಯೂ ಸಹ ಅವರಿಗೆ ಅವಕಾಶವನ್ನು ಕೊಡಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಹ್ಯಾರಡಾ ಗ್ರಾಮವು ಮೊದಲಿನಿಂದಲೂ ಶಾಂತಿ ಪ್ರಿಯ ಗ್ರಾಮ. ಎಲ್ಲಾ ಧರ್ಮಿಯರನ್ನು ಒಳಗೊಂಡರೂ ಸಹ ಧಾರ್ಮಿಕ ಸಾಮರಸ್ಯವನ್ನು ಕಾಪಾಡಿಕೊಂಡು ಬಂದಿರುವ ಗ್ರಾಮವಾಗಿದ್ದು, ಗ್ರಾಮದ ಸರ್ವತೋಮುಖ ಅಭಿವೃದ್ದಿಗಾಗಿ ಎಲ್ಲ ಸಮುದಾಯಗಳು ಅವಿರತವಾಗಿ ಶ್ರಮಿಸುತ್ತಿದೆ.

೩.೧೭ ವಿವಾಹ ಪದ್ಧತಿ

ಮಾನವನು ಸಂಘದಲ್ಲಿ ಹುಟ್ಟುತ್ತಾನೆ ಆದರೆ ಅವನ ವರ್ತನೆಗಳೆಲ್ಲವೂ ಸಂಸ್ಥೆಯ ಮೂಲಕ ನಿರ್ದೇಶಿಸಿಲ್ಪಡುತ್ತವೆ. (Man born and live in associations but act through institutions). ಆದ್ದರಿಂದ ಸಾಮಾಜಿಕ ಜೀವನದಲ್ಲಿ ವಿವಾಹ ಎಂಬುದು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕುಟುಂಬವು ಒಂದು ಸಂಘವಾದರೆ ವಿವಾಹ ಎಂಬುದು ಅದರಲ್ಲಿಯ ಪ್ರಮುಖ ಅಂಶವಾಗಿದೆ. ಮಾನವನ ಎಲ್ಲಾ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಂಡು ಬರಲು ವಿವಾಹ ಮಹತ್ವದ ಪಾತ್ರವನ್ನು

ವಹಿಸುತ್ತದೆ. ವಿವಾಹ ಸಂಸ್ಕಾರಗಳು ಹಿಂದೂಗಳಲ್ಲಿ ಅತ್ಯಂತ ಪವಿತ್ರವಾದ ಧಾರ್ಮಿಕ ಸಂಸ್ಕಾರವಾಗಿದೆ. ವಿವಾಹವು ಸಮಾಜದ ಮುನ್ನಡೆಗೆ ಚಾಲನಾ ಶಕ್ತಿಯಾಗಿದೆ. ಸಾಮಾನ್ಯವಾಗಿ ಸಮಾಜದಿಂದ ಮನ್ನಿಸಲ್ಪಟ್ಟ ಸ್ತ್ರೀ-ಪುರುಷರ ಒಕ್ಕೂಟಕ್ಕೆ ವಿವಾಹ ಎಂದು ಕರೆಯುವರು.

ವಿವಾಹ ಎಂಬ ಕನ್ನಡ ಪದಕ್ಕೆ ಆಂಗ್ಲ ಭಾಷೆಯಲ್ಲಿ marriage ಎನ್ನುವರು. Marriage ಎಂಬ ಆಂಗ್ಲ ಪದವು morris or mos ಎಂಬ ಪದದಿಂದ ಉಗಮಗೊಂಡಿದೆ. morris or mρ ಎಂದರೆ ಜೋಡಿಯಾಗು, ಕೂಡಿಬಾಳು, ಒಂದಾಗಿ ಬಾಳು ಎಂದು ಅರ್ಥ. ವಿವಾಹ ಎಂಬ ಪದವು ಸಂಸ್ಕೃತ ಪದವಾಗಿದೆ. 'ವಿ' ಎಂದರೆ ಹೋಗು, 'ವಾಹ' ಎಂದರೆ ಹೊತ್ತುಕೊಂಡು ಹೋಗು ಎಂದರ್ಥ. ವಿವಾಹ ಸಮಾರಂಭದ ನಂತರ ವಧುವನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಹೊತ್ತುಕೊಂಡು ಗಂಡನ ಮನೆಗೆ ಕರೆತರುವ ಕ್ರಮವೇ ವಿವಾಹವಾಗಿದೆ.

ಹ್ಯಾರಡಾ ಗ್ರಾಮದಲ್ಲಿ ವಿವಾಹ ಪದ್ಧತಿಗಳು ಬಹಳಷ್ಟು ವೈವಿಧ್ಯ ಪೂರ್ಣವಾಗಿವೆ. ಹ್ಯಾರಡಾ ಗ್ರಾಮದಲ್ಲಿ ವಿವಿಧ ಸಮುದಾಯದ ಜನರಿದ್ದರೂ ಬಹುತೇಕವಾಗಿ ವಿವಾಹ ಪದ್ಧತಿ ಒಂದೇ ರೀತಿಯಾಗಿದೆ. ಪ್ರತಿ ಸಮುದಾಯಗಳು ತಮ್ಮ ಧಾರ್ಮಿಕ ಚೌಕಟ್ಟನ್ನು ಮೀರುವುದಿಲ್ಲ. ಎಲ್ಲಾ ಸಮುದಾಯದವರು ತಮ್ಮ ನೀತಿ, ಆಚಾರ-ವಿಚಾರಗಳಿಗೆ ತಕ್ಕಂತೆ ವಿವಾಹಗಳನ್ನು ಏರ್ಪಡಿಸುತ್ತಾರೆ. ಈಗಲೂ ಕೂಡ ವಿಶಿಷ್ಟ ರೀತಿಯಲ್ಲಿ ವಿವಾಹವನ್ನು ಏರ್ಪಡಿಸುವುದನ್ನು ಕಾಣಬಹುದಾಗಿದೆ. ಕೆಳವರ್ಗದ ಸಮುದಾಯವು ಆರ್ಥಿಕ ಕಾರಣದಿಂದ ಸರಳವಾಗಿ ವಿವಾಹವನ್ನು ಏರ್ಪಡಿಸಿದ್ದರೆ, ಶ್ರೀಮಂತರು ಅದ್ದೂರಿಯಾದ ವಿವಾಹವನ್ನು ಏರ್ಪಡಿಸುವರು.

ಸಾಮಾನ್ಯವಾಗಿ ಹ್ಯಾರಡಾದಲ್ಲಿ ವಿವಾಹಗಳಲ್ಲಿ 'ಬೆಡಗಿಗೆ' ಹೆಚ್ಚು ಪ್ರಾಶಸ್ತ್ಯವನ್ನು ಕೊಡುವರು. ಬೆಡಗು ಒಂದೇ ಆಗಿದ್ದರೆ ಹುಡುಗ-ಹುಡುಗಿ ಒಪ್ಪಿದರೂ ವಿವಾಹವಾಗುವಂತಿಲ್ಲ. ಕಾರಣ ಎರಡೂ ಕುಟುಂಬಗಳು ಅಣ್ಣ-ತಮ್ಮಂದಿರುಗಳಾಗುತ್ತಾರೆ. ಇಬ್ಬರೂ ಕುಟುಂಬಗಳ ಬೆಡಗುಗಳು ಬೇರೆ ಬೇರೆಯಾಗಿದ್ದರೆ, ವಿವಾಹ ಸಂದರ್ಭಗಳು ಏರ್ಪಡುವವು. ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಬೆಡಗುಗಳು ಇರುತ್ತವೆ. ತದ ನಂತರದಲ್ಲಿ ಇಬ್ಬರೂ ಕುಟುಂಬದವರ ಮನೆ ದೇವರು ಬೇರೆ ಬೇರೆಯಾಗಿರಬೇಕು. ಒಂದೇ ಮನೆ ದೇವರು ಆದರೆ ವಿವಾಹಗಳು ಏರ್ಪಡುವುದಿಲ್ಲ. ತದ ನಂತರದಲ್ಲಿ ಗಂಡು-ಹೆಣ್ಣಿನ ಜಾತಕವನ್ನು ನೋಡಿ ಎರಡೂ ತಾಳೆಯಾದರೆ ಸಂಬಂಧವನ್ನು ಕುದುರಿಸುವರು. ಹ್ಯಾರಡಾದ ಜನಪದರು ತಮ್ಮ ಸಂಬಂಧಿಕರಲ್ಲಿ ಸಂಬಂಧಗಳನ್ನು ಬೆಳೆಸುವುದು ಸರ್ವೇಸಾಮಾನ್ಯವಾಗಿದೆ. ಸೋದರತ್ತೆಯ ಮಗಳು, ಸೋದರಮಾವನ ಮಗಳು, ಅಕ್ಕನ ಮಗಳು, ಸೋದರತ್ತೆಯ ಮಗ, ಸೋದರ ಮಾವನ ಮಗನನ್ನು ಮದುವೆಯಾಗುವುದು ಸರ್ವೇಸಾಮಾನ್ಯವಾಗಿದೆ. ಆದರೆ ಇತ್ತೀಚಿಗೆ ಸುಶಿಕ್ಷಿತ ಯುವಕರು ವೈಜ್ಞಾನಿಕ ಕಾರಣದ ನೆಪವೊಡ್ಡಿ ಹೊರಗಿನಿಂದ ಹೆಣ್ಣನ್ನು ತರುವುದು ಮತ್ತೊಂದು ವಿಧಾನವಾಗಿದೆ. ಹುಡುಗ-ಹುಡುಗಿಯವರ ಕುಟುಂಬಗಳು ಸಂಬಂಧಗಳನ್ನು

ಕುದುರಿಸಲು ಬಹಳಷ್ಟು ಜಾಗೃತಿಯನ್ನು ವಹಿಸುವರು. ಹೆಣ್ಣಿನ ಕಡೆಯವರು ಹುಡುಗನ ಎತ್ತರ, ಸೌಂದರ್ಯ, ಕುಟುಂಬದ ಹಿನ್ನಲೆ, ಆಸ್ತಿ, ನೌಕರಿ, ಅಂತಸ್ತು ಇವೆಲ್ಲವುಗಳನ್ನು ಗಮನದಲ್ಲಿರಿಸುತ್ತಾರೆ. ಗಂಡಿನ ಮನೆಯವರು ಹೆಣ್ಣಿನ ಸೌಂದರ್ಯ, ಕುಟುಂಬದ ಹಿನ್ನಲೆ, ಆಕೆಯ ಶೈಕ್ಷಣಿಕ ಸ್ಥಿತಿಗತಿ ಇವುಗಳ ಬಗ್ಗೆ ಮಾಹಿತಿಗಳನ್ನು ಕಲೆಹಾಕಿ ಮೊದಲು ನೇರವಾಗಿ ಹುಡುಗಿಯ ಮನೆಗೆ ಹೋಗದೇ ಮಧ್ಯವರ್ತಿಗಳ ಮುಖಾಂತರ ಅಕ್ಕಪಕ್ಕದ ಮನೆಯವರ ಮುಖಾಂತರ ವಿಚಾರಿಸಿ ವರ ಹೆಣ್ಣನ್ನು ನೋಡಲು ಹೋಗುತ್ತಾನೆ. ಹೆಣ್ಣು ಒಪ್ಪಿಗೆಯಾದಲ್ಲಿ ಗಂಡಿನ ಮನೆಯ ತಂದೆ-ತಾಯಿ, ಸಂಬಂಧಿಕರು ಹೆಣ್ಣನ್ನು ನೋಡಲು ಹೋಗುವರು. ಆಗ ಹೆಣ್ಣನ್ನು ಮುಂದೆ ಕೂಡಿಸಿಕೊಂಡು ನಿನ್ನ ಹೆಸರೇನು? ನಿಮ್ಮ ತಂದೆ-ತಾಯಿ ಹೆಸರೇನು? ಏನು ಓದಿದ್ದೀಯಾ ? ನಿನ್ನ ವಯಸ್ಸೆಷ್ಟು ? ಹೀಗೆ ಹಲವಾರು ಪ್ರಶ್ನೆಗಳನ್ನು ಕೇಳುವರು. ಹುಡುಗಿಯ ಎತ್ತರ, ಬಣ್ಣ, ಮಾತಿನ ಶೈಲಿ, ಕಣ್ಣು , ಕೈ-ಕಾಲುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವರು, ಹೆಣ್ಣಿನ ಮನೆಯವರು ಮಾಡಿದ ಸಿಹಿಯೂಟವನ್ನು ಸವಿದು ಹಿಂತಿರುಗುವರು. ಹುಡುಗಿ ಒಪ್ಪಿಗೆಯಾದಲ್ಲಿ ಹೆಣ್ಣಿನ ಮನೆಯವರಿಗೆ ವಿಷಯ ಮುಟ್ಟಿಸುವರು, ಹೆಣ್ಣಿನ ಮನೆಯವರು ಗಂಡಿನ ಮನೆತನವನ್ನು ನೋಡಲು ಬರುವರು. ಗಂಡಿನ ಮನೆ, ಆಸ್ತಿ, ಕುಟುಂಬದ ಹಿನ್ನೆಲೆಯನ್ನು ತಿಳಿಯುವರು. ಇಬ್ಬರಿಗೂ ಒಪ್ಪಿಗೆಯಾದಲ್ಲಿ ವಿವಾಹದ ಮುಂದಿನ ಕಾರ್ಯಕ್ರಮಕ್ಕೆ ಎರಡೂ ಕಡೆಯಿಂದ ಮುದ್ರೆಯೊತ್ತುವರು. ಹ್ಯಾರಡಾ ಗ್ರಾಮದ ವಿವಾಹ ಪದ್ಧತಿಯ ವಿವಿಧ ಹಂತಗಳು ಕೆಳಕಂಡಂತಿವೆ.

ಮದುವೆಗೆ ಮಾತುಕತೆ : ಮದುವೆಗೆ ಎರಡೂ ಕುಟುಂಬಗಳು ಒಪ್ಪಿಗೆಯಾದ ನಂತರ ಎರಡೂ ಕುಟುಂಬದವರು, ಹಿರಿಯರು, ದೈವದವರು ಕೂಡಿಕೊಂಡು ಕೊಡು-ಕೊಳ್ಳುವಿಕೆಯ ವಿಚಾರಗಳನ್ನು ಪ್ರಸ್ತಾಪಿಸುವರು. ವರನ ಮನೆಯಲ್ಲಿಯೇ ಹೆಚ್ಚಾಗಿ ಮಾತುಕತೆಗೆ ಕುಳಿತುಕೊಳ್ಳುವ ಪದ್ಧತಿ ಇದೆ. ವರದಕ್ಷಿಣೆ, ವರೋಪಚಾರಕ್ಕೆ ಏನೇನು ಕೊಡಬೇಕೆಂಬುದು ನಿಶ್ಚಯವಾಗುತ್ತದೆ. ಸಾಮಾನ್ಯವಾಗಿ ಇಂತಿಷ್ಟು ನಗದು, ಇಂತಿಷ್ಟು ಚಿನ್ನ, ಮದುವೆ ಮಾಡಿಕೊಡುವ ಜವಾಬ್ದಾರಿ ಯಾರದ್ದು ಎಂದು ಚರ್ಚೆಯಾಗುತ್ತದೆ. ಹ್ಯಾರಡಾದಲ್ಲಿ ಮೇಲ್ವರ್ಗದ ಸಮುದಾಯದಲ್ಲಿ ಅತೀ ಹೆಚ್ಚು ವರದಕ್ಷಿಣೆ, ವರೋಪಚಾರ ಕೊಡುವುದು ಸಾಮಾನ್ಯ ಇನ್ನು ಕೆಳವರ್ಗದ ಸಮುದಾಯದಲ್ಲಿ ತಮ್ಮ-ತಮ್ಮ ಅಂತಸ್ತಿಗೆ ಅನುಗುಣವಾಗಿ ವರದಕ್ಷಿಣೆ, ವರೋಪಚಾರ ಕೊಡುವುದುಂಟು. ಎಷ್ಟೋ ಸಂಬಂಧಗಳಲ್ಲಿ ವರದಕ್ಷಿಣೆ, ವರೋಪಚಾರಕ್ಕೆ ಸಂಬಂಧಿಸಿದಂತೆ ಮಾತುಕತೆ ಮುರಿದುಬೀಳುವ ಸಂದರ್ಭಗಳನ್ನು ಕಾಣುತ್ತೇವೆ. ಮಧ್ಯವರ್ತಿಗಳು ಎರಡೂ ಕುಟುಂಬಗಳಿಗೆ ಒಪ್ಪಿತ ರೂಪದಲ್ಲಿ ಇದನ್ನು ನಿಭಾಯಿಸುವರು, ಹೀಗೆ ಎರಡೂ ಕುಟುಂಬಗಳು ಒಪ್ಪಿಗೆಯನ್ನು ಸೂಚಿಸಿದ ಮೇಲೆ ವೀಳ್ಯದ ಎಲೆಯನ್ನು ಪರಸ್ಪರ ಅದಲು ಬದಲು ಮಾಡಿಕೊಳ್ಳುತ್ತಾರೆ. ಪರಸ್ಪರರ ಕುಟುಂಬದ ಹಿರಿಯರ ಬಾಯಲ್ಲಿ ಸಕ್ಕರೆಯನ್ನು ಹಾಕುವುದರ ಮೂಲಕ ಅಧಿಕೃತ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾರೆ. ಅಂದರೆ ಹುಡುಗ-ಹುಡುಗಿಯರಿಬ್ಬರೂ ಮದುವೆಗೆ ಸಮ್ಮತಿ ಸೂಚಿಸಿದಂತೆಯೇ.

ನಿಶ್ಚಿತಾರ್ಥ : ಈ ಕಾರ್ಯಕ್ರಮವು ಹೆಣ್ಣಿನ ಮನೆಯ ಮುಂದೆ ನಡೆಯುತ್ತದೆ. ಈ ಶಾಸ್ತ್ರವು ಮದುವೆಗೆ ಮುಂಚೆ (ಮೂರು-ನಾಲ್ಕು ತಿಂಗಳಿನ ಮುಂಚೆ) ನಡೆಯುತ್ತದೆ. ಕೆಲವೊಂದು ಸಲ ಮದುವೆಯ ಹಿಂದಿನ ರಾತ್ರಿಯಲ್ಲಿ ಜರುಗುವುದುಂಟು. ಈ ಶಾಸ್ತ್ರವನ್ನು ಸಾಮಾನ್ಯವಾಗಿ ಶಿಷ್ಟ ಭಾಷೆಯಲ್ಲಿ "ಎಂಗೇಜ್ ಮೆಂಟ್" ಎಂದು ಕರೆಯುವರು. ಹುಡುಗನ ಮನೆಯ ಹಿರಿಯರು, ಸಂಬಂಧಿಕರು ಆಪ್ತರು ಹುಡುಗಿಯ ಮನೆಗೆ ಬರುವರು, ಬರುವಾಗ ಹೆಣ್ಣಿಗೆ ಸೀರೆ, ಕೈಯುಂಗುರ, ಬಳೆ, ಅರಿಶಿಣ-ಕುಂಕುಮ, ಹೂವು, ಎಲೆ-ಅಡಿಕೆ ವಿವಿಧ ರೀತಿಯ ಹಣ್ಣುಗಳನ್ನು ತರುವರು.

ಇಳೇವು ಒಡೆಯುವುದು : ಇದು ಮದುವೆಗೂ ಮುಂಚೆ ಜರುಗುವ ಶಾಸ್ತ್ರವಾಗಿದೆ. ಗಂಡಿನ ಮನೆಯವರು ಹೆಣ್ಣಿನ ಮನೆಗೆ ಅಕ್ಕಿ, ಬೆಲ್ಲ, ಬೇಳೆ, ಎಲೆ ಅಡಿಕೆಯನ್ನು ತೆಗೆದುಕೊಂಡು ಹೋಗಿ ಎರಡೂ ಕಡೆಯ ಕುಲವನ್ನು ಕೂಡಿಸುವುದು ಈ ಶಾಸ್ತ್ರದ ಪ್ರಮುಖ ಉದ್ದೇಶವಾಗಿದೆ. ಇಳೇವು ಜರುಗುವ ಸಮಯದಲ್ಲಿ ಊರಿನ ಗೌಡ, ಬಣಕಾರ, ಗ್ರಾಮದ ಹಿರಿಯರು ಕೂಡಿ ಜಂಗಮರ ಸಮಕ್ಷಮದಲ್ಲಿ ಇಳೇವು ಒಡೆಯುವರು. ಜಂಗಮರು ಶಾಸ್ತ್ರೋಕ್ತವಾಗಿ ಮಂತ್ರವನ್ನು ಪಠಣ ಮಾಡುವುದರ ಮೂಲಕ ಗಂಡಿನವರು ತಂದಿರುವ ಸಾಮಾಗ್ರಿಗಳಿಗೆ ಪೂಜೆಯನ್ನು ಮಾಡುವುದರ ಮೂಲಕ ಈ ಕಾರ್ಯ ಜರುಗುವುದು.

ಈ ಶಾಸ್ತ್ರಕ್ಕೆ ಕುಲದವರೆಲ್ಲರನ್ನೂ ಒಂದು ಗೂಡಿಸುವ ಕೆಲಸ ಆಯಗಾರನಾದ ತಳವಾರನದ್ದು. ಇವರು ಗ್ರಾಮದಲ್ಲಿ ಅವರ ದೈವದವರು ಯಾರ‍್ಯಾರು ಎಂದು ಪತ್ತೆ ಹಚ್ಚಿ ಎಲೆ-ಅಡಿಕೆಯನ್ನು ಕೊಡುವುದರ ಮೂಲಕ ಇಂತಹವರ ಮನೆಯಲ್ಲಿ ಇಳೇವು ಒಡೆಯಲಿದೆ, ಬರಬೇಕು ಎಂದು ಆಹ್ವಾನವನ್ನು ಕೊಡುವುದುಂಟು. ಒಂದು ವೇಳೆ ಆ ಮನೆಯಲ್ಲಿ ಯಾರೂ ಇಲ್ಲದಿದ್ದರೆ, ಪಕ್ಕದ ಮನೆಗೆ ಎಲೆ-ಅಡಿಕೆಯನ್ನು ಕೊಟ್ಟು ಬರಬೇಕು. ಒಂದು ವೇಳೆ ಆಯಾ ದೈವದವರ ಮನೆಗೆ ಎಲೆ-ಅಡಿಕೆ ಮುಟ್ಟದಿದ್ದರೆ ಪಂಚಾಯಿತಿಯಲ್ಲಿ ಇದರ ಬಗ್ಗೆ ಪ್ರಶ್ನಿಸುವ ಅಧಿಕಾರ ಆ ದೈವದವರಿಗಿರುತ್ತದೆ. ಆದ್ದರಿಂದ ಇದನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುವರು. ಹೀಗೆ ದೈವದವರೂ ಎಲ್ಲರೂ ಕೂಡಿಕೊಂಡು ಈ ಇಳೇವು ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವರು.

ಲಗ್ನ ಕಟ್ಟಿಸುವುದು : ಈ ಕಾರ್ಯ ಗಂಡಿನ ಮನೆಯ ಮುಂದೆ ಜರುಗುವುದು. ಊರಿನ ಹಿರಿಯರು, ದೈವದವರು ಕೂಡಿಕೊಂಡು ಈ ಕಾರ್ಯವನ್ನು ಮುಗಿಸುವರು. ಈ ಶಾಸ್ತ್ರವನ್ನು ಮಾಡುವಾಗ ಒಳ್ಳೆಯ ಸಮಯವನ್ನು ನೋಡಿ ಲಗ್ನ ಕಟ್ಟಿಸುವರು. ಶಾಸ್ತ್ರಿಗಳ ಸಾರಥ್ಯದಲ್ಲಿ ಇಂತಿಷ್ಟು ಅಡಿಗಳ ಅಂತರದಲ್ಲಿ ನಾಲ್ಕು ಕಂಬಗಳನ್ನು ನೆಟ್ಟು, ಚಪ್ಪರವನ್ನು ಹಾಕುವರು. ಚಪ್ಪರವನ್ನು ಹಸಿರು-ತೋರಣಗಳಿಂದ ಸಿಂಗರಿಸುವರು. ನಾಲ್ಕು ಕಂಬಗಳಿಗೆ ಬಾಳೆದಿಂಡು, ತೆಂಗಿನಗರಿಗಳಿಂದ ಸಿಂಗರಿಸುವರು, ಚಪ್ಪರದ ಮೇಲ್ಭಾವಣೆಯಲ್ಲಿ ಅಗಸರ ಮನೆಯಿಂದ ಎರಡು ಪಂಚೆಯಲ್ಲಿ

ಅರಿಶಿಣದಿಂದ ಶಾಸ್ತ್ರೋಕ್ತವಾಗಿ ಆ ಬಟ್ಟೆಯ ಮೇಲೆ ಕೆಲವು ಚಿತ್ರಗಳನ್ನು ಬಿಡಿಸಿ, ಚಪ್ಪರದ ಮೇಲ್ಭಾಗದಲ್ಲಿ ಕಟ್ಟುವರು. ಇದನ್ನು 'ಹಡದಿ' ಕಟ್ಟುವುದು ಎಂದು ಕರೆಯುವರು. ಚಪ್ಪರದ ಮೇಲ್ಭಾವಣೆಯಲ್ಲಿ ಸದಾ ಬೆಳಕಿರುವಂತೆ 'ಲಾಟೀಣ'ವನ್ನು ಕಟ್ಟುವರು. ಇತ್ತೀಚಿನ ದಿನಮಾನಗಳಲ್ಲಿ ವಿದ್ಯುತ್ ದೀಪಗಳನ್ನು ಹಚ್ಚುವುದು ಸಾಮಾನ್ಯವಾಗಿದೆ. ಚಪ್ಪರವನ್ನು ಶೃಂಗಾರ ಮಾಡಿದ ನಂತರ ಊರಿನ ಪ್ರಮುಖರೆಲ್ಲರೂ ಲಗ್ನ ಪತ್ರಿಕೆಯನ್ನಿಟ್ಟು ಪೂಜಾ ಕೈ ಕಾರ್ಯವನ್ನು ನೆರವೇರಿಸುವುದರ ಮೂಲಕ ಬಂದವರಿಗೆ ಮಂಡಕ್ಕಿ, ಟೀ ಕೊಡುವರು. ಹೋಗುವಾಗ ಪ್ರತಿಯೊಬ್ಬರಿಗೂ ತಪ್ಪದೆ ಅಡಿಕೆ, ಎಲೆ, ತೆಂಗಿನಕಾಯಿಯನ್ನು ಕೊಡುವುದುಂಟು. ಈ ರೀತಿಯಾಗಿ ಲಗ್ನ ಕಟ್ಟಿಸುವ ಶಾಸ್ತ್ರವನ್ನು ಮುಗಿಸುವರು.

ಹಾಲುಗಂಬ ಮತ್ತು ಹಸಿರುಗಂಬ ತರುವುದು : ಆಲದ ಮರ ಹಾಗೂ ಹತ್ತಿಮರದ ಕೊಂಬೆಗಳನ್ನು ಕಡಿದು ಮೂರರಿಂದ ನಾಲ್ಕು ಅಡಿಯಲ್ಲಿ ಕತ್ತರಿಸಿ ಅದಕ್ಕೆ ಅರಿಶಿಣ, ಕುಂಕುಮ, ಅಕ್ಷತೆ, ಬುತ್ತಿಯನ್ನು ಕಟ್ಟಿ ಸೋದರ ಮಾವರಿಂದ ಇದನ್ನ ಚಪ್ಪರದ ಕಂಬಕ್ಕೆ ಕಟ್ಟುವುದು ಪ್ರಮುಖವಾದ ಶಾಸ್ತ್ರವಾಗಿದೆ.

ಹರಿಜನ ಮನೆ ಮಕ್ಕಳಿಂದ ಪಾದರಕ್ಷೆ ಶಾಸ್ತ್ರ : ಮದು ಮಕ್ಕಳಿಗೆ ಪಾದರಕ್ಷೆ ಶಾಸ್ತ್ರವನ್ನು ಮನೆಯ ಮಕ್ಕಳೆಂದು ಕರೆಯಲ್ಪಡುವ ಹರಿಜನ ಸಮುದಾಯದವರು ಮಾಡುವುದುಂಟು. ಹರಿಜನರು ವರ ವಧುಗಳಿಗೆ ಪಾದರಕ್ಷೆಗಳನ್ನು ತಂದು ಚಪ್ಪರದ ಕೆಳಗೆ ಗೊಂಗಡಿಯನ್ನು ಹಾಸಿ ಐದು ಗುಂಪಿನ ಜೋಳವನ್ನಿಟ್ಟು ಅವುಗಳನ್ನು ಪೂಜೆ ಮಾಡಿ ಸೋಬಾನ ಪದಗಳನ್ನು ಹಾಡುವುದರ ಮೂಲಕ ಉಲ್ಪಿ(ಎಲಿ, ಅಕ್ಕಿ, ಬೇಳೆ, ಬೆಲ್ಲ, ಜೋಳ ಕೊಬ್ಬರಿ)ಯನ್ನು ತೆಗೆದುಕೊಳ್ಳುವರು. ಅವರವರ ಶಕ್ತಾನುಸಾರ ದೇಣಿಗೆಯನ್ನು ಕೊಡುವ ಪದ್ಧತಿ ಈಗಲೂ ನಡೆದುಕೊಂಡು ಬಂದಿದೆ. ಮಧುಮಕ್ಕಳು ಅಂದಿನಿಂದ ಕಡ್ಡಾಯವಾಗಿ ಇದೇ ಪಾದರಕ್ಷೆಗಳನ್ನು ಹಾಕಬೇಕೆಂಬುದು ನಿಯಮ ಇದೆ.

ಮದುಮಕ್ಕಳನ್ನು ಮಾಡುವ ಶಾಸ್ತ್ರ : ಇದಕ್ಕೆ ಇನ್ನೊಂದು ಅರ್ಥದಲ್ಲಿ ನೀರುಯ್ಯುವ ಶಾಸ್ತ್ರ ಎಂದು ಕರೆಯುವರು. ಈ ಕಾರ್ಯಕ್ರಮವನ್ನು ಮುತ್ತೈದೆಯರು ಮಾಡಿಕೊಡುವ ಶಾಸ್ತ್ರವಾಗಿದೆ. ಅರಿಶಿಣ ಹಾಗೂ ಎಣ್ಣೆಯನ್ನು ಮಿಶ್ರಣ ಮಾಡಿ ಒಂದು ತಟ್ಟೆಯಲ್ಲಿ ಇಟ್ಟುಕೊಂಡು ಅರಿಶಿಣವನ್ನು ಮದುಮಗನ ಮೈಗೆಲ್ಲಾ ಸವರುವುದು. ಇದರಿಂದ ಗಂಡು–ಹೆಣ್ಣಿನ ಸೌಂದರ್ಯ ಹೆಚ್ಚಾಗಲಿದೆ ಎಂದು ಇವರ ನಂಬಿಕೆ. ಮದುವೆಯ ಸಂದರ್ಭದಲ್ಲಿ ಚರ್ಮವು ಕಾಂತಿಯಿಂದ ಕಾಣಲು ಈ ಶಾಸ್ತ್ರವನ್ನು ನೇರವೇರಿಸುವರು. ಈ ಶಾಸ್ತ್ರವನ್ನು ಮಾಡುವಾಗ ವಿವಿಧ ರೀತಿಯ ಸೋಬಾನೆ ಪದಗಳನ್ನು ಹಾಡುವರು. ಕಳಸ, ವಿಭೂತಿ, ಅಕ್ಷತೆ, ಎಲೆ–ಅಡಿಕೆ ಮುಂತಾದವುಗಳನ್ನು ಈ ಶಾಸ್ತ್ರದಲ್ಲಿ ಬಳಸುವುದುಂಟು. ಹಿಂದಿನ ದಿನಮಾನಗಳಲ್ಲಿ ಈ ಕಾರ್ಯಕ್ರಮವನ್ನು ಒಂಬತ್ತು ದಿನ, ಏಳು ದಿನ, ಐದು ದಿನಗಳ ಕಾಲ ಪ್ರಾರಂಭ ಮಾಡುತ್ತಿದ್ದರು. ಆದರೆ ಇತ್ತೀಚಿಗೆ ಈ ಶಾಸ್ತ್ರವನ್ನು ಮೂರು ಇಲ್ಲವೆ ಎರಡು ದಿನಕ್ಕೆ ಮುಗಿಸುವರು.

ಬೀಗರನ್ನು ಎದುರುಗೊಳ್ಳುವುದು : ಮದು ಮಗಳೊಂದಿಗೆ ಹಲವಾರು ಜನರು ಮದುವೆಗೆ ಮುಂಚಿತವಾಗಿ ಬರುವರು. ಅವರು ನೇರವಾಗಿ ಮದು ಮಗನ ಮನೆಗೆ ಬರುವುದಿಲ್ಲ, ಅದರ ಬದಲಾಗಿ ಊರಿನ ಪ್ರಮುಖ ದೇವಾಲಯವಾದ ಸಂಗಮೇಶ್ವರನ ದೇವಸ್ಥಾನ, ಆಂಜನೇಯನ ದೇವಸ್ಥಾನದಲ್ಲಿ ಬಂದು ತಂಗುವರು. ಇವರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಗುವುದು. ಮೆರವಣಿಗೆಯೊಂದಿಗೆ (ಡೊಳ್ಳು, ಬಾಜಾಬಜಂತ್ರಿಯೊಂದಿಗೆ) ದೇವಸ್ಥಾನಕ್ಕೆ ತೆರಳುವರು. ಅಲ್ಲಿ ಗಂಡಿನ ಕಡೆಯಿಂದ ಐದು ಜನ, ಹೆಣ್ಣಿನ ಕಡೆಯಿಂದ ಐದು ಜನರನ್ನು ಎದುರು ಬದರಾಗಿ ಕೂರಿಸಿಕೊಂಡು ಪರಸ್ಪರ ವಿನೋದದ ರೀತಿಯಲ್ಲಿ ಪೂಜಾ ಕೈಂಕರ್ಯವನ್ನು ನೆರವೇರಿಸುವರು. ನಂತರದಲ್ಲಿ ಗಂಡು-ಹೆಣ್ಣು ಕೈ-ಕೈ ಹಿಡಿದುಕೊಂಡು ಮೆರವಣಿಗೆ ಮುಖಾಂತರವಾಗಿ ಗಂಡಿನ ಮನೆಗೆ ತೆರಳುವರು.

ಐತನ್ನಕ್ಕೆ ಇಡುವುದು : ಮದುವೆಯ ಶಾಸ್ತ್ರವನ್ನು ಸಂಪೂರ್ಣವಾಗಿ ಮಾಡುವುದು ಐದು ಜನರ ಮೇಲಿರುತ್ತದೆ. ಆದ್ದರಿಂದ ಇದನ್ನು ಗ್ರಾಮ್ಯ ಭಾಷೆಯಲ್ಲಿ ಐತನಕ್ಕೆ ಇಡುವುದು ಎಂದು ಕರೆಯುವರು. ನಾಳೆ ಮದುವೆ ಇದೆ ಎಂದರೆ ರಾತ್ರಿಯಲ್ಲಿ ಕುಟುಂಬದ ಹಿರಿಯರು ಕೂಡಿಕೊಂಡು ಹೆಣ್ಣಿನ ಕಡೆಯಿಂದ ಒಬ್ಬರು, ದೈವದ ಕಡೆಯಿಂದ ಇಬ್ಬರು, ಕುಟುಂಬದ ಕಡೆಯಿಂದ ಇಬ್ಬರನ್ನು ನೇಮಿಸುವುದು. ಈ ಐದು ಜನರು ಬಹುತೇಕವಾಗಿ ಎಲ್ಲಾ ಶಾಸ್ತ್ರಗಳಲ್ಲಿ ಬಾಗವಹಿಸುವರು. ಮದುವೆ ಕಾರ್ಯಕ್ರಮ ಮುಗಿಯುವವರೆಗೂ ಎಲ್ಲಿಯೂ ಹೋಗದಂತೆ ಯಶಸ್ವಿಯಾಗಿ ಮದುವೆ ಕಾರ್ಯವನ್ನು ಮುಗಿಸುವುದು ಇವರ ಕರ್ತವ್ಯವಾಗಿದೆ.

ಕೇಲು ತರುವುದು : ಐತನ್ನಕ್ಕೆ ಇರುವಂತಹ ಐದು ಜನರು ಹಾಗೂ ಮನೆಯಲ್ಲಿರುವ ತಂದೆ ತಾಯಿ, ಅಣ್ಣ ತಮ್ಮಂದಿರು ಕುಂಬಾರರ ಮನೆಯಿಂದ ಐದು ಮಣ್ಣಿನ ಕುಡಿಕೆಯನ್ನು ಮೆರವಣಿಗೆ ಮುಖಾಂತರ ತೆಗೆದುಕೊಂಡು ಬರುವುದೇ ಕೇಲು ತರುವುದು ಎಂದು ಕರೆಯುವರು. ಕುಂಬಾರರ ಮನೆಯಲ್ಲಿ ವಿವಿಧ ರೀತಿಯ ಪೂಜೆಯನ್ನು ಈಡೇರಿಸಿ ಮೆರವಣಿಗೆಯೊಂದಿಗೆ ಕೇಲು ತರುವುದು ರೂಢಿಯಾಗಿದೆ.

ದಂಡಿ ಬಾಸಿಂಗ ತರುವುದು : ಮದುವೆಗೆ ಒಂದು ತಿಂಗಳು ಮುಂಚಿತವಾಗಿ ಕುಂಬಾರರಿಗೆ ದಂಡಿ ಬಾಸಿಂಗ ಮಾಡಲು ಹೇಳುವರು. ಇವರು ಅವರ ಅಂತಸ್ಥಿಗೆ ತಕ್ಕಂತೆ ತಯಾರಿಸುವರು. ಕುಂಬಾರರು ಈ ದಂಡಿ ಬಾಸಿಂಗವನ್ನು ವಿವಿಧ ರೀತಿಯ ಬಣ್ಣ ಬಣ್ಣದ ಹಾಳೆಗಳು, ಮುತ್ತುಗಳು, ಗುಂಡುಗಳನ್ನು ಹಾಕಿ ತಯಾರಿಸುವರು. ಕುಂಬಾರರಿಗೆ ದಕ್ಷಿಣೆಯನ್ನು ಕೊಟ್ಟು ಮೆರವಣಿಗೆ ಮುಖಾಂತರ ಈ ದಂಡಿ ಬಾಸಿಂಗವನ್ನು ತರುವರು.

ಕಟ್ಟಿಗೆಯ ಮಕ್ಕಳನ್ನು ತರುವುದು. : ಬಡಿಗೇರ ಮನೆಯಿಂದ ಕಟ್ಟಿಗೆಯಿಂದ ಮಾಡಿದ ನಾಲ್ಕು ಮಕ್ಕಳನ್ನು ತರುವುದು ವಾಡಿಕೆ. ಬಡಿಗೇರ ಸಮುದಾಯದವರು ಕಟ್ಟಿಗೆಯಲ್ಲಿ ಮಕ್ಕಳ ಮೂರ್ತಿಯನ್ನು

ಕೆತ್ತುವರು. ಇವುಗಳಿಗೆ ಅರಿಶಿಣ ಕುಂಕುಮ ಹಚ್ಚಿ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿ ಮೆರವಣಿಗೆಯ ಮೂಲಕ ಮಕ್ಕಳನ್ನು ತರುವರು. ಇದರ ಉದ್ದೇಶ ಮದುವೆಯಾದ ನಂತರ ಮುತ್ತಿನಂಥ ನಾಲ್ಕು ಮಕ್ಕಳು ಜನಿಸಲಿ ಎಂದು ಈ ಶಾಸ್ತ್ರವನ್ನು ನೆರವೇರಿಸುವರು.

ಸುರಿಗೆಯನ್ನು ಸುತ್ತುವುದು : ಮದುವೆಯ ಮನೆಯ ಮುಂದಿರುವ ಚಪ್ಪರದ ಕೆಳಗೆ ಸುರುಗಿಯನ್ನು ಸುತ್ತುವರು. ಚಪ್ಪರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ತಾಮ್ರದ ಬಿಂದಿಗೆಯನ್ನಿಟ್ಟು ಸುರುಗೆಯನ್ನು ಸುತ್ತುವರು. ಹತ್ತಿಯ ದಾರದಿಂದ ಸುರುಗಿಯನ್ನು ಸುತ್ತುವರು. ಸಾಮಾನ್ಯವಾಗಿ ೨೧ ಎಳೆಯ ದಾರವನ್ನು ಸುರಿಗೆ ಸುತ್ತುವರು. ಮದುಮಕ್ಕಳನ್ನು ಎರೆಯುವುದು ಇದೇ ಸುರಿಗಿಯ ಒಳಗೆ, ಸುರುಗಿಯ ಒಳಗೆ ಹೋಗುವವರು ಮದುಮಕ್ಕಳು ಹಾಗೂ ಅವರ ಹಿಂದೆ ಅಕ್ಕ ತಂಗಿಯರು ಒಳಗೆ ಹೋಗುವರು, ಬೇರೆಯವರಿಗೆ ಈ ಪ್ರವೇಶ ನಿಷಿದ್ಧ. ಮದುಮಕ್ಕಳನ್ನು ಸುರಿಗಿಯಲ್ಲಿ ಬಿಸಿನೀರನಿಂದ ಎರೆದ ಮೇಲೆ ಅವರಿಗೆ ಶುಭ್ರವಾದ ಹೊಸ ಬಟ್ಟೆಯನ್ನು ಕೊಡುವರು. ನಂತರ ಮದುಮಕ್ಕಳಿಗೆ ದಂಡಿ ಬಾಸಿಂಗವನ್ನು ಕಟ್ಟುವರು. ನಂತರ ತಾಮ್ರದ ತಂಬಿಗೆ, ತಾಮ್ರದ ತಟ್ಟೆ, ಬಂಗಾರ, ಹವಳ ಮುತ್ತುಗಳಿಂದ ಐದು ಬಾರಿ ಮದುಮಕ್ಕಳನ್ನು ಸುತ್ತಲು ನೀರನ್ನು ಚುಮುಕಿಸುವರು. ಈ ರೀತಿಯಾಗಿ ಎಲ್ಲಾ ಶಾಸ್ತ್ರವನ್ನು ಮುಗಿಸಿದ ಮೇಲೆ ಸುರುಗಿಯಿಂದ ಹೊರಬರುವರು. ಸುರುಗಿಯ ದಾರವನ್ನು ತೆಗೆದುಕೊಂಡು ಮದುಮಕ್ಕಳಿಗೆ ಸುರುಗಿಯ ಕಂಕಣ ಎಂದು ಕೈಗೆ ಕಟ್ಟುವರು.

ಸುರಿಗೆಯನ್ನು ಸುತ್ತುವ ಪ್ರಮುಖವಾದ ಉದ್ದೇಶವೆಂದರೆ ವ್ಯಕ್ತಿಯು ಅಧಿಕೃತವಾಗಿ ಒಂದು ಚೌಕಟ್ಟಿನ ಒಳಗೆ ತನ್ನ ಜೀವನವನ್ನು ಇಂದಿನಿಂದ ಪ್ರಾರಂಭಿಸುವುದು. ಇಂತಹ ಜೀವನವನ್ನು ಪ್ರಾರಂಭಿಸುವುದಕ್ಕೆ ಹಿರಿಯರು, ಆಪ್ತರು, ಸಂಬಂಧಿಕರು ಸಾಕ್ಷಿಯಾಗುವುದು ಎಂದರ್ಥ. ಆದ್ದರಿಂದ ಸುರಿಗೆಯ ಸಂದರ್ಭದಲ್ಲಿ ಬಹುತೇಕ ಹಿರಿಯರು ಈ ಸಂಪ್ರದಾಯವನ್ನು ಮಾಡುವುದುಂಟು. ಸುರುಗಿಯ ನೀರು ಮೈಮೇಲೆ ಹಾಕಿಕೊಳ್ಳುವುದರಿಂದ ಹೊಸ ಜೀವನಕ್ಕೆ ಕಾಲಿಡುವ ಒಂದು ಸಂಕೇತವಾಗಿದೆ. ಆದ್ದರಿಂದ ಸುರಿಗೆ ಶಾಸ್ತ್ರವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡುವರು.

ತಾಳಿಯ ಮುಹೂರ್ತ : ಹಂದರದ ಕೆಳಗೆ ಹೆಣ್ಣು-ಗಂಡನ್ನು ಎದುರು ಬದುರಾಗಿ ನಿಲ್ಲಿಸಿ ಹೆಣ್ಣನ್ನು ಬೀಸುವ ಕಲ್ಲಿನ ಮೇಲೆ ಮೆಟ್ಲಕ್ಕಿ ಪುಟ್ಟಿಯ ಮೇಲೆ ನಿಲ್ಲಿಸುವರು. ಮಂತ್ರ ಘೋಷಗಳನ್ನು ಪಠಣ ಮಾಡುವುದರ ಮೂಲಕ ಹೆಣ್ಣಿನ ಕೊರಳಿಗೆ ಗಂಡು ಮೂರು ಗಂಟನ್ನು ಹಾಕುವುದರ ಮೂಲಕ ತಾಳಿಯನ್ನು ಕಟ್ಟುವರು. ಆಗ ನೆರೆದ ಜನರೆಲ್ಲರೂ ಅವರ ಮೇಲೆ ಅಕ್ಷತೆಯನ್ನು ಹಾಕುವುದರ ಮೂಲಕ ಅಧಿಕೃತವಾಗಿ ಅವರು ಗಂಡ-ಹೆಂಡತಿಯಾಗುವರು.

ಊಟೋಪಚಾರ : ಮದುವೆಯ ಮುಹೂರ್ತ ಮುಗಿದ ಮೇಲೆ ಮದುವೆಗೆ ಬಂದ ಜನಸಾಗರಕ್ಕೆ ವಿವಿಧ ರೀತಿಯ ತಿಂಡಿ-ತಿನಿಸುಗಳನ್ನು, ಸಿಹಿ-ಸಿಹಿಯಾದ ಅಡುಗೆಗಳು ಕಾಯ್ದಿರುತ್ತವೆ. ಬಂದಿರುವ ಎಲ್ಲಾ ಸಮುದಾಯದವರು ಊಟವನ್ನು ಮಾಡಿಕೊಂಡು ತಮ್ಮ ಊರಿಗೆ ತೆರಳುವರು.

ಹ್ಯಾರಡಾ ಗ್ರಾಮದಲ್ಲಿ ಎಲ್ಲಾ ಸಮುದಾಯದವರು ಒಂದೇ ರೀತಿಯ ಊಟದ ವ್ಯವಸ್ಥೆಯನ್ನು ಕಂಡುಕೊಂಡಿರುವುದನ್ನು ಕಾಣಬಹುದಾಗಿದೆ. ಬಹುತೇಕವಾಗಿ ಬೂಂದ್ಯ, ಪಲಾವ್, ರೊಟ್ಟಿ, ಅನ್ನ, ಸಾಂಬಾರ್, ಮಜ್ಜಿಗೆ, ಪಾಯಸ, ಹಪ್ಪಳ, ಮಿರ್ಚಿ, ಕೋಸಂಬರಿ, ಬದನೆಕಾಯಿ ಪಲ್ಲೆ, ವಿವಿಧ ರೀತಿಯ ಕಾಳಿನ ಪಲ್ಲೆ ಇನ್ನಿತರ ತಿನಿಸುಗಳನ್ನು ತಯಾರಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಬಡವರು ಹಾಗೂ ಶ್ರೀಮಂತರು ಒಂದೇ ರೀತಿಯ ಊಟದ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಮದುವೆ ಸಂಧರ್ಭದಲ್ಲಿ ಮಾಂಸದ ಊಟವು ನಿಶಿದ್ಧವಾಗಿದೆ.

ಇಸ್ಲಾಂ ಧರ್ಮದಲ್ಲಿ ವಿವಾಹ ಪದ್ದತಿ: ಇಸ್ಲಾಂ ಧರ್ಮದಲ್ಲಿ ವಿವಾಹ ಕಾರ್ಯವು ಅತ್ಯಂತ ಸರಳ ರೂಪದಲ್ಲಿ ಜರುಗುತ್ತದೆ. ಸ್ತ್ರೀ ಪುರುಷರ ಮಧ್ಯ ಏರ್ಪಟ್ಟ ಒಪ್ಪಂದಕ್ಕೆ, ಕರಾರಿಗೆ,ಅನುಸಂಧಾನಕ್ಕೆ ವಿವಾಹ ಎಂದು ಕರೆಯುವರು, ಮುಸ್ಲಿಂರು ವಿವಾಹಕ್ಕೆ "ನಿಖಾ" ಅಥವಾ 'ನಿಕಾಹ' ಎಂದು ಕರೆಯುತ್ತಾರೆ. ಹೀಗೆ ಸ್ತ್ರೀ ಪುರುಷರು ಎಂಬ ಎರಡು ಪಕ್ಷಗಳ ಮಧ್ಯ ಏರ್ಪಟ್ಟ ಸಂಧಾನಕ್ಕೆ ನಿಖಾ ಅಥವಾ ನಿಖಾಹ ಎನ್ನುವರು. ಇಸ್ಲಾಂ ವಿವಾಹದಲ್ಲಿ ಮೇಹರ ಮಹತ್ವದ ಪಾತ್ರ ವಹಿಸುತ್ತದೆ. ಮುಸ್ಲಿಂ ಸಮಾಜದಲ್ಲಿ ಜರುಗುವ ನಿಖಾ ಸಂದರ್ಭದಲ್ಲಿ ಮೇಹರ ಅಥವಾ ವಧುದಕ್ಷಿಣೆ (ಕನ್ಯಾ ಶುಲ್ಕ) ಪ್ರಮುಖ ಕಾರಣವಾದ ಹಂತವಾಗಿದೆ. ಈ ಒಪ್ಪಂದದ ಪ್ರತಿ ಫಲವೇ ಮೇಹರ ಆಗಿದೆ. ಮೇಹರ ಮೊತ್ತ ಕನಿಷ್ಠ ಒಂದು ದಿನಾರ(೩ ರೂ) ಆಗಿರುತ್ತದೆ. ವಧುವಿನ ರೂಪ, ವಿದ್ಯಾರ್ಹತೆ, ಕೌಟುಂಬಿಕ ಸ್ಥಾನಮಾನ, ಉದ್ಯೋಗಸ್ಥ ಮಹಿಳೆ ಮುಂತಾದವುಗಳ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಕಾಯ್ದೆ ಬದ್ದವಾದ ರೀತಿಯಲ್ಲಿ ಬಯಕೆಗಳನ್ನು ಈಡೇರಿಸಿಕೊಂಡು ಮಕ್ಕಳನ್ನು ಹೊಂದುವುದು ಮುಸ್ಲಿಂ ವಿವಾಹದ ಪ್ರಮುಖ ಉದ್ದೇಶವಾಗಿರುತ್ತದೆ. 'ನಿಖಾ' ವಿವಾಹ ಕ್ರಮವು ಅತ್ಯಂತ ಸರಳ ಕ್ರಮವಾಗಿದೆ. ಇಸ್ಲಾಂ ಧರ್ಮವು ಸನ್ಯಾಸ, ವೈರಾಗ್ಯವನ್ನು ಅನಾಚಾರವೆಂದು ಪರಿಗಣಿಸುತ್ತದೆ.

ಇಂದಿನ ಆಧುನಿಕ ಪರಿಸರದಲ್ಲಿ ವಿವಾಹದ ಎಷ್ಟೋ ಶಾಸ್ತ್ರಗಳು ಕಣ್ಮರೆಯಾಗುತ್ತವೆ. ಇತ್ತೀಚಿಗೆ ಕಲ್ಯಾಣ ಮಂಟಪದಲ್ಲಿ ಜರುಗುವ ವಿವಾಹ ಪದ್ದತಿಗಳು ಅನೇಕ ವಿಧಿ-ವಿಧಾನಗಳನ್ನು ಅನುಸರಿಸುವುದಿಲ್ಲ. ಇದು ಬದಲಾದ ಪರಿಸ್ಥಿತಿಗೆ ಹಿಡಿದ ಕೈ ಗನ್ನಡಿಯಾಗಿದೆ. ಅಂತರ್ಜಾತಿ ವಿವಾಹಗಳು ಎಷ್ಟೋ ವಿವಾಹನೋಂದಣಿ ಕಛೇರಿಯಲ್ಲಿ ನಡೆಯುವುದರಿಂದ ಇಂತಹ ವಿಧಿ-ವಿಧಾನಗಳಿಗೆ ತಿಲಾಂಜಲಿ ಇಡಲಾಗುತ್ತಿದೆ.

ಅಧ್ಯಾಯ–೪

ಹ್ಯಾರಡ ಗ್ರಾಮದ ಆಚರಣೆಗಳು

ಜನಪದರ ದಿನನಿತ್ಯದ ಜೀವನದಲ್ಲಿ ನಂಬಿಕೆ ಮತ್ತು ಆಚರಣೆಗಳು ಒಂದನ್ನೊಂದು ಪ್ರತಿನಿಧಿಸುವ ಅಂಶಗಳು ಹಾಗೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಜನಪದರು ಯಾವುದಾದರೊಂದು ದೈವದ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟು ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿಯನ್ನು ಕೊಂಡ್ಯೊಯ್ಯುವುದರ ಮೂಲಕ ಆಚರಣೆಯನ್ನು ಕಾರ್ಯರೂಪದಲ್ಲಿ ತರುವರು. ಮಾನವರಿಗೆ ಅಗೋಚರ ಶಕ್ತಿಗಳ ಬಗ್ಗೆ ಭಯ, ಭಕ್ತಿ ಉಂಟಾಗಿ ಅದನ್ನು ಆಚರಣೆಗಳ ರೂಪದಲ್ಲಿ ಜಾರಿಗೆ ತಂದಿದ್ದಾರೆ. ಪ್ರಕೃತಿ ಮೂಲದ ವಿಸ್ಮಯ ಹಾಗೂ ನಿಗೂಢತೆಗೆ ಹೆದರಿ ಆಚರಣಾ ಲೋಕವನ್ನು ಸೃಷ್ಟಿಸಿದ್ದಾರೆ. ಆಚರಣೆ ಎಂಬುದು ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಗತಿಶೀಲತೆಯನ್ನು ಕಂಡುಕೊಳ್ಳುತ್ತಾ ಕಾಲಕಾಲಕ್ಕೆ ಬದಲಾವಣೆಯನ್ನು ಕಾಣುವಂತಹದ್ದಾಗಿದೆ. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುಗಳನ್ನು ಮಾನವನು ಯಾವಾಗ ಆರಾಧಿಸತೊಡಗಿದನೋ ಅಂದಿನಿಂದಲೇ ಆಚರಣೆಗಳು ಹುಟ್ಟಿಕೊಂಡವು.

"ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಆ ಆಚರಣೆ ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ವ್ಯಕ್ತಿಯಿಂದಲೇ ಆಗಬೇಕಾದುದು. ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆ ಎನ್ನಲಾಗಿದೆ. ನಂಬಿಕೆ ಆಚರಣೆಯ ಬೆನ್ನೆಲುಬು. ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಪುರಾಣ ಕಥೆ ಮರೆತು ಹೋದ ಸಂದರ್ಭದಲ್ಲೂ ಯಾವುದೇ ಆತಂಕವಿಲ್ಲದೆ ಆಚರಣೆ ಮುಂದುವರೆಯುತ್ತಾ ಹೋಗುವುದನ್ನು ಕಾಣಬಹುದು". (ಡಾ. ಸಿದ್ದಲಿಂಗಯ್ಯ: ೨೦೧೫:೭೧)

"ಭಾವನೆ ಮತ್ತು ಆಲೋಚನೆಯ ರೂಪದಲ್ಲಿ ನಂಬಿಕೆ ಇದ್ದರೆ ಕ್ರಿಯಾ ರೂಪದಲ್ಲಿ ಆಚರಣೆ ಇರುತ್ತದೆ. ನಂಬಿಕೆಗಳು ಆಚರಣೆಗಳಿಗೆ ಶಾಸನ ಪ್ರಾಯವಾಗಿ ಇರುವುದೇ ಅಲ್ಲದೇ ಅವು ಸುರಕ್ಷಿತವಾಗಿ

ಮುನ್ನಡೆದುಕೊಂಡು ಹೋಗಲು ಸಹಕಾರಿಯಾಗಿಯೂ ಇವೆ ಎನ್ನಬಹುದು. ಒಟ್ಟಿನಲ್ಲಿ ನಂಬಿಕೆಗಳು ಮತ್ತು ಆಚರಣೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ". (ಡಾ. ಮಂಜುನಾಥ ಬೇವಿನಕಟ್ಟಿ : ೧೯೯೬:೨೦)

Roy A Report : "Ritual refers to any practice….. regularly repeated in a set precise manner so as to satisfy one's sense of fitness."

Monica Wilson : "By ritual we mean a primary religious action, that is action distracted to securing the blessing of some power of powers." (ಆಚರಣೆ ಎಂಬುದು ಪ್ರಾದಿಮ ಧಾರ್ಮಿಕ ಕ್ರಿಯೆಯ ಮುಂದುವರಿದ ರೂಪ. ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹ ಪಡೆಯಲೋಸುಗ ಕೈಗೊಂಡ ಕ್ರಿಯೆ ಇದಾಗಿದೆ. ಎಂದು ಮೋನಿಕಾ ವಿಲ್ಸನ್ ಹೇಳಿದ್ದಾರೆ).

"ಮತ ಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯಾರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ, ಕರ್ಮಗಳಿಗೆ ಈ ಹೆಸರಿದೆ" (ಜಿ.ಶಂ. ಪರಮಶಿವಯ್ಯ : ೨೦೧೬:೨೮)

ಹೀಗೆ ಹಲವಾರು ಜನಪದ ವಿದ್ವಾಂಸರು ಆಚರಣೆಗಳ ಬಗ್ಗೆ ತಮ್ಮದೇ ಆದ ವಾದವನ್ನು ಮಂಡಿಸಿದ್ದಾರೆ. ಜನಪದರ ಜೀವನದಲ್ಲಿ ಹಲವಾರು ಆಚರಣೆಗಳು ಆಳವಾಗಿ ಬೇರು ಬಿಟ್ಟಿವೆ. ಜೀವನದ ಪ್ರತಿಯೊಂದು ಹಂತದಲ್ಲಿ ಆಚರಣೆಗಳ ಮೊರೆ ಹೋಗಿದ್ದಾರೆ. ಆಚರಣೆಗಳಿಗೆ ಸಂವಾಧಿಯಾಗಿ ರೂಢಿಗಳು ಎಂದು ಕರೆಯಬಹುದು. ಈ ರೂಢಿಗಳು ಜನಪದರಲ್ಲಿ ಹಾಸುಹೊಕ್ಕಾಗಿವೆ. ಇವಕ್ಕೆಲ್ಲಾ ಪ್ರಮುಖವಾದ ಕಾರಣ ಜನಪದರ ಮೂಲ ನಂಬಿಕೆಯಾಗಿದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಜನಪದರು ಹಲವಾರು ಆಚರಣೆ, ಸಂಪ್ರದಾಯ, ರೂಢಿಗಳನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನಾವುಗಳು ಕಾಣಬಹುದು. ಹೊಲ ಉಳುಮೆ ಮಾಡುವಾಗ, ಬೀಜಗಳನ್ನು ಬಿತ್ತನೆ ಮಾಡುವಾಗ, ಮಳೆ ಬಾರದಿದ್ದಾಗ, ಕೃಷಿಯ ಪೈರು ಬಂದಾಗ, ಕುಟುಂಬದಲ್ಲಿ ಹುಟ್ಟು, ಸಾವು, ಹಬ್ಬ, ಜಾತ್ರೆ ಹಾಗೂ ಸಂತೋಷದ ಕ್ಷಣಗಳಲ್ಲಿ ಗ್ರಾಮೀಣ ಜನಪದರು ತಮ್ಮ ವೈಚಾರಿಕ ನೆಲೆಗಟ್ಟಿನಲ್ಲಿ ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಹ್ಯಾರಡಾದಂತಹ ಪುಟ್ಟ ಗ್ರಾಮಗಳಲ್ಲಿ ಆಚರಣಾ ಲೋಕದ ಪರಂಪರೆಯನ್ನು ಕಾಣಬಹುದಾಗಿದೆ. ಇಂತಹ ಆಚರಣೆಗಳನ್ನು ಆಚರಿಸುವ ಮೂಲಕ ಜನಪದರು ಮಾನಸಿಕ ನೆಮ್ಮದಿ ಹಾಗೂ ಧನ್ಯತಾ ಭಾವವನ್ನು ಕಂಡುಕೊಳ್ಳುತ್ತಿದ್ದಾರೆ. ಗ್ರಾಮೀಣ ಸಾಮಾಜೀಕರಣದಂತಹ ಪರಿಸ್ಥಿತಿಯಲ್ಲಿ ಇವು ಹಾಸುಹೊಕ್ಕಾಗಿವೆ. ಇಂತಹ ಆಚರಣೆಗಳು ಗ್ರಾಮದ ಪರಂಪರೆಯನ್ನು ತನ್ನ ಪೀಳಿಗೆಗೆ ವರ್ಗಾಯಿಸುವಂತಹ ಕೆಲಸವನ್ನು ಮಾಡುತ್ತಿವೆ. ಇದರ ಮುಖಾಂತರವಾಗಿ ತಮ್ಮ ಗ್ರಾಮದ ಸಂಸ್ಕೃತಿಯನ್ನು ವೈಭವೀಕರಿಸಿ ಸಮಾಜದ ವ್ಯವಸ್ಥೆಯ ಅಸ್ತಿತ್ವವನ್ನು ಕಾಪಾಡಿಕೊಂಡು ಬರುತ್ತಿವೆ. ಹ್ಯಾರಡಾ ಗ್ರಾಮದ ಆಚರಣಾ ಲೋಕದ ವ್ಯವಸ್ಥೆಯನ್ನು ಗಮನಿಸಿದಾಗ ಆಚರಣೆಗಳು ವ್ಯಕ್ತಿಗತವಾಗದೇ ಸಮಷ್ಟಿಯ ತತ್ವಗಳಿಗನುಗುಣವಾಗಿ ಸರ್ವ ಸಮುದಾಯಗಳ ಏಕ ರೀತಿಯ ಆಚರಣಾ ವ್ಯವಸ್ಥೆಯನ್ನು ಕಾಣಬಹುದಾಗಿದೆ. ತಮ್ಮ

ಬದುಕಿಗೆ ಅನುಗುಣವಾದ ಸಾಂಸ್ಕೃತಿಕ ಪರಂಪರೆಯನ್ನು ಕಾಣಬಹುದಾಗಿದೆ. ಗ್ರಾಮ ದೇವತೆಯಂತಹ ಜಾತ್ರೆ, ಹಬ್ಬಗಳಲ್ಲಿ ಇದರ ದೊಡ್ಡ ಪರಂಪರೆಯನ್ನು ನಾವಿಲ್ಲಿ ಕಾಣಬಹುದಾಗಿದೆ.

೪.೧ ಜೀವನಾವರ್ತನ ಆಚರಣೆಗಳು

ವ್ಯಕ್ತಿಯು ಹುಟ್ಟಿನಿಂದ ಸಾವಿನವರೆಗೆ ಪ್ರತಿ ಸಂದರ್ಭದಲ್ಲಿ ಹಲವಾರು ಆಚರಣೆಗಳನ್ನು ಮಾಡುತ್ತಾನೆ. ಇವುಗಳನ್ನು ಜೀವನಾವರ್ತನ ಆಚರಣೆಗಳು ಎಂದು ಕರೆಯುವರು. ವ್ಯಕ್ತಿಯ ಜೀವನದಲ್ಲಿ ಧಾರ್ಮಿಕತೆಯು ಪ್ರಮುಖವಾದುದು. ಈ ಧಾರ್ಮಿಕತೆಯ ತಳಹದಿಯ ಮೇಲೆ ತನ್ನ ಜೀವಿತಾವಧಿಯಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ಇಂತಹ ಆಚರಣೆಗಳು ಚಾಲ್ತಿಯಲ್ಲಿವೆ. ಅದು ವೈಯಕ್ತಿಕವಾಗಿರಬಹುದು, ಕೌಟುಂಬಿಕವಾಗಿರಬಹುದು ಹಾಗೂ ಸಾಮೂಹಿಕವಾಗಿರಬಹುದು. ಪ್ರತಿ ಸಾಂದರ್ಭಿಕ ಪರಿಸ್ಥಿತಿಯಲ್ಲಿಯೂ ವ್ಯಕ್ತಿಯು ಆಚರಿಸುವ ಆಚರಣೆಗಳಿಗೆ ಜೀವನಾವರ್ತನ ಆಚರಣೆ ಎಂದು ಕರೆಯುತ್ತಾರೆ. ಇಲ್ಲಿ ಧಾರ್ಮಿಕತೆಯು ಪ್ರೇರಕಶಕ್ತಿಯಾಗಿ ಕೆಲಸ ಮಾಡುತ್ತದೆ.

ದೇವರಿಗೆ ಹರಕೆ ತೀರಿಸುವುದು, ತಮ್ಮ ಕುಟುಂಬದಲ್ಲಿ ಹುಟ್ಟು, ನಾಮಕರಣ, ಜವುಳ, ಹೆಣ್ಣು ಮಕ್ಕಳು ಮೈನೆರೆದಾಗ, ವಿವಾಹ ಸಂದರ್ಭ, ಸಾವು ಮುಂತಾದ ಸಂದರ್ಭಗಳಲ್ಲಿ ಇಂತಹ ಆಚರಣೆಗಳನ್ನು ನಾವುಗಳು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಕುರುಬ, ಲಿಂಗಾಯತ, ವಾಲ್ಮೀಕಿ, ಹರಿಜನರು ಬಹು ಸಂಖ್ಯಾತ ಸಮುದಾಯಗಳಾಗಿದ್ದು, ಇವರಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಾದ ಆಚರಣೆಗಳನ್ನು ಕಾಣಬಹುದಾಗಿದೆ.

"ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಆಚರಣೆಗಳು ವೈವಿಧ್ಯಮಯದಿಂದ ಕೂಡಿರುತ್ತವೆ. ಒಂದು ಸಮುದಾಯದ ಜನ ಆಚರಿಸುವ ಆಚರಣೆಗಳು ವೈವಿಧ್ಯಮಯದಿಂದ ಕೂಡಿರುತ್ತವೆ. ಒಂದು ಸಮುದಾಯದ ಜನ ಆಚರಿಸುವ ಆಚರಣೆಗಳು ಒಂದೇ ತೆರನಾಗಿರುತ್ತವೆ. ಕೆಲವು ವೇಳೆ ತಮ್ಮ ಸುತ್ತ ಮುತ್ತಲಿನ ಬಹುಸಂಖ್ಯಾತ ಸಮುದಾಯದಿಂದ ಪ್ರಭಾವ ಪಡೆದು ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಅವುಗಳು ತಮ್ಮ ಮೂಲವನ್ನು ಹಾಗೆಯೇ ಉಳಿಸಿಕೊಂಡಿವೆ. ಪ್ರತಿ ಸಾಂದರ್ಭಿಕ ಪರಿಸ್ಥಿತಿಯಲ್ಲಿ ವ್ಯಕ್ತಿಯು ಆಚರಿಸುವ ಆಚರಣೆಗಳಿಗೆ ಜೀವನಾವರ್ತನ ಆಚರಣೆಗಳು ಎಂದು ಕರೆಯಬಹುದು (ಬಸವರಾಜು ಬಿ. ಎಸ್ – ಕಬ್ಬಾಳು : ಸಂಕಥನ)

೪.೧.೧ ಹುಟ್ಟು

ಹ್ಯಾರಡಾ ಗ್ರಾಮದಲ್ಲಿ ಯಾವುದೇ ಮಗು ಹುಟ್ಟಿದಾಗ ಅತ್ಯಂತ ವಿಶಿಷ್ಟವಾಗಿ ಈ ಕಾರ್ಯವನ್ನು ಮಾಡುವುದುಂಟು. ಹ್ಯಾರಡಾದ ಬಹುತೇಕ ಶೇ ೮೦ ರಷ್ಟು ಹೆರಿಗೆಗಳು ಮನೆಯಲ್ಲಿಯೇ ಆಗುವುದನ್ನು ಕಾಣುತ್ತೇವೆ. ಮಹಿಳೆಯು ಆರು ತಿಂಗಳು ಗರ್ಭವತಿಯಾದಾಗ ಸೀಮಂತ ಕಾರ್ಯಕ್ರಮವನ್ನು ಮಾಡುತ್ತಾರೆ. ಅದಕ್ಕೂ ಮುಂಚೆ ತವರು ಮನೆಯವರು ಗರ್ಭಧರಿಸಿದ ಮಹಿಳೆಗೆ ಬಯಕೆ ಊಟವನ್ನು ತರುವರು. ರೊಟ್ಟಿ, ವಿವಿಧ ರೀತಿಯ ಸಿಹಿ ತಿನಿಸುಗಳು ಮುಂತಾದವುಗಳನ್ನು ತೆಗೆದುಕೊಂಡು ಬರುವರು. ಈ ಆಹಾರ ಪದಾರ್ಥಗಳನ್ನು ಅಕ್ಕ-ಪಕ್ಕದ ಮನೆಗಳಿಗೂ ಹಂಚುವರು.

ಬಯಕೆ ಊಟದ ಮುಖ್ಯ ಉದ್ದೇಶವೆಂದರೆ ಗರ್ಭಧರಿಸಿದ ಸ್ತ್ರೀಯು ಸಹಜವಾಗಿ ತನಗೆ ಇಷ್ಟವಾದ ಆಹಾರವನ್ನು ಬಯಸುವುದುಂಟು. ಆದ್ದರಿಂದ ತವರು ಮನೆಯವರು ಆ ಬಯಕೆಯನ್ನು ಈಡೇರಿಸುವುದಕ್ಕಾಗಿ ಈ ಕಾರ್ಯವನ್ನು ಮಾಡುವರು. ನಂತರ ಸೀಮಂತ ಕಾರ್ಯಕ್ರಮದಲ್ಲಿ ಗಂಡ ಹೆಂಡತಿಯನ್ನು ಕೂಡಿಸಿ ಆರತಿ ಬೆಳಗುವರು. ಬಂಧುಗಳು ಎಲ್ಲರೂ ಬೆರೆತು ಖುಷಿಯಿಂದ ಕೂಡಿ ಹೆರಿಗೆಯು ಸುಸೂತ್ರವಾಗಿ ಆಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವರು.

ಗರ್ಭಧರಿಸಿದ ಮಹಿಳೆಯು ಸಾಮಾನ್ಯವಾಗಿ ಒಂಭತ್ತು ತಿಂಗಳಿಗೆ ಮಗುವಿಗೆ ಜನ್ಮ ಕೊಡುವಳು. ಆಗ ಕುಟುಂಬದ ಎಲ್ಲಾ ಸದಸ್ಯರು ಎಚ್ಚರದಿಂದ ಇದ್ದು ಹೆರಿಗೆಯನ್ನು ಮಾಡಿಸುವರು. ಆ ಸಂದರ್ಭದಲ್ಲಿ ಸೂಲಗಿತ್ತಿಯರು(ಹೆರಿಗೆಯನ್ನು ಮಾಡಿಸುವ ಮಹಿಳೆ) ಸದಾ ಇವರ ಪಕ್ಕದಲ್ಲಿಯೇ ಇರುತ್ತಾರೆ. ಹೆರಿಗೆ ಆಗುವ ಸಂದರ್ಭದಲ್ಲಿ ಇವರಿಗೆ ಧೈರ್ಯವನ್ನು ಹೇಳುವರು. ನೋವು ಕಾಣಿಸಿಕೊಂಡಾಗ ಇವರನ್ನು ಸಂಭಾಳಿಸುವರು. ಇಂತಹ ಸೂಲಗಿತ್ತಿಯ ಪೈಕಿ ಬತ್ತಿ ಕೆಂಚಮ್ಮ ಹಾಗೂ ಮಲ್ಕಪ್ಪನರ ಬಸಮ್ಮ, ಬಟಾರಪ್ಪರ ಯಲ್ಲಮ್ಮ ಹೆಸರುವಾಸಿ. ಇವರು ನುರಿತ ಹೆರಿಗೆ ವೈದ್ಯರಿಗಿಂತ ಕಡಿಮೆ ಇಲ್ಲ. ಎಂತಹ ವಿಷಮ ಪರಿಸ್ಥಿತಿಯಲ್ಲಿ ಸುಸೂತ್ರವಾಗಿ ಹೆರಿಗೆಯನ್ನು ಮಾಡಿಸುವರು. ಗ್ರಾಮದ ಬಹುತೇಕ ಹೆರಿಗೆಗಳನ್ನು ಇವರೇ ಮಾಡಿಸುವುದುಂಟು.

ಹೆರಿಗೆ ಆದ ತಕ್ಷಣ ಮಗುವನ್ನು ತಾಯಿಯಿಂದ ಬೇರ್ಪಡಿಸಿ ಮಗುವನ್ನು ಒಂದು ದೊಡ್ಡ ಮೊರದಲ್ಲಿ ಹಾಕುವರು. ಮಗುವಿನ ಹೊಕ್ಕಳ ಬಳ್ಳಿಯನ್ನು ಬ್ಲೇಡಿನಿಂದ ಬೇರ್ಪಡಿಸುವರು. ತದ ನಂತರದಲ್ಲಿ ಮಗುವಿನ ದೇಹಕ್ಕೆ ಅಂಟಿದ ರಕ್ತವನ್ನು ಶುಭ್ರವಾದ ಬಟ್ಟೆಯಿಂದ ಒರೆಸುವರು. ಮಗುವಿನ ಕಣ್ಣು, ಕಿವಿ, ಬಾಯಿ, ಹೊಕ್ಕಳ ಇತ್ಯಾದಿ ಭಾಗದಲ್ಲಿ ಸ್ವಚ್ಛಗೊಳಿಸುವರು. ಮಗು ಹುಟ್ಟಿದ ತಕ್ಷಣ ಅಳಬೇಕು. ಮಗು ಅಳದಿದ್ದರೆ ಸೂಲಗಿತ್ತಿಯರು ಮಗುವನ್ನು ಅಳುವಂತೆ ಮಾಡುವರು. ನಂತರ ಒಂದು ತಟ್ಟೆಯನ್ನು ತೆಗೆದುಕೊಂಡು ಮಗುವಿನ ಕಿವಿಯಲ್ಲಿ ಜೋರಾಗಿ ತಟ್ಟೆಯನ್ನು ಬಡಿದು ಶಬ್ದಮಾಡುವರು. ಮಗು ಹುಟ್ಟಿದ ಸುದ್ದಿಯನ್ನು ಮೊದಲು ತಂದೆಗೆ ತಿಳಿಸುವರು. ನಂತರದಲ್ಲಿ ಎಲ್ಲಾ ಬಂಧುಗಳಿಗೆ ಈ ವಿಷಯವನ್ನು ತಿಳಿಸುವರು. ನಂತರ ಸೂಲಗಿತ್ತಿಯರು ಮಗುವನ್ನು ಬೆಚ್ಚಗಿನ ನೀರಿನಿಂದ ಮಗುವಿಗೆ ಸ್ನಾನ ಮಾಡಿಸುವರು. ನಂತರ ಅವರೇ ತಮ್ಮ ಬೆರಳಿನಿಂದ ಜೇನುತುಪ್ಪವನ್ನು ಮಗುವಿಗೆ ಕೊಡುವರು. ಬಹುತೇಕ ಬಾಣಂತಿಯರಿಗೆ ಹೆರಿಗೆಯಾದ ನಾಲ್ಕೈದು ದಿನಗಳವರೆಗೆ ಮೊಲೆ ಹಾಲುಗಳು ಉತ್ಪತ್ತಿಯಾಗಿರುವುದಿಲ್ಲ. ಆಗ ಸೂಲಗಿತ್ತಿಯರು ಜೇನುತುಪ್ಪ, ಸಕ್ಕರೆ ಮಿಶ್ರಣದ ನೀರನ್ನು ಮಗುವಿಗೆ ಕೊಡುವಂತೆ ಸಲಹೆ, ಮಾರ್ಗದರ್ಶನವನ್ನು ಕೊಡುವರು.

ಹ್ಯಾರಡಾ ಗ್ರಾಮದಲ್ಲಿ ಗಂಡು ಮಗು ಜನಿಸಿದರೆ ಗ್ರಾಮಸ್ಥರಿಗೆಲ್ಲ ಸಿಹಿಯನ್ನು ಹಂಚುವುದುಂಟು. ಬಡವರು ಸಕ್ಕರೆಯನ್ನು ಹಂಚುವರು. ಸ್ಥಿತಿವಂತರು ಪೇಡಾವನ್ನು ಹಂಚುವುದುಂಟು. ಬಾಣಂತಿಯರು ಊಟದಲ್ಲಿ ಬಹು ಕಟ್ಟು-ನಿಟ್ಟಿನ ಪಥ್ಯವನ್ನು ಮಾಡುವುದುಂಟು. ಖಾರ ಊಟವನ್ನು ಮಾಡುವಂತಿಲ್ಲ. ಹೆಚ್ಚಾಗಿ ನೀರು ಸೇವಿಸುವಂತಿಲ್ಲ, ಏಕೆಂದರೆ ಅದು ಮಗುವಿನ ಆರೋಗ್ಯದ ಮೇಲೆ

ಪರಿಣಾಮವನ್ನುಂಟು ಮಾಡುತ್ತದೆ ಎಂಬ ನಂಬಿಕೆ ಅಚಲವಾಗಿದೆ. ಮಗು ಹುಟ್ಟಿದ ಏಳು ದಿನಕ್ಕೆ ಅಥವಾ ಒಂಭತ್ತನೆಯ ದಿನಕ್ಕೆ ಸೂತಕವನ್ನು ತೆಗೆಯುವುದುಂಟು. ಮನೆಯನ್ನೆಲ್ಲಾ ಸ್ವಚ್ಛ ಮಾಡಿ ಸಗಣಿಯಿಂದ ಸಾರಿಸಿ, ಸುಣ್ಣವನ್ನು ಬಳಿದು, ಮನೆ ದೇವರಿಗೆ ವಿಶೇಷ ಪೂಜೆಯನ್ನು ಮಾಡುವುದುಂಟು. ಇಂತಹ ವಿಶಿಷ್ಟವಾದ ಆಚರಣೆಗಳು ಇಂದಿಗೂ ಹ್ಯಾರಡಾ ಗ್ರಾಮದಲ್ಲಿ ಪ್ರಚಲಿತದಲ್ಲಿವೆ.

ಆದರೆ ನಾಗರಿಕತೆಯು ಬೆಳೆದಂತೆಲ್ಲಾ ಗ್ರಾಮದಲ್ಲಿ ಅಕ್ಷರಸ್ಥರು ಬಂದಂತೆಲ್ಲಾ ಬಹುತೇಕ ಹೆರಿಗೆಗಳು ಇಂದು ಆಸ್ಪತ್ರೆಯಲ್ಲಿ ಆಗುವುದುಂಟು. ಮುಂಚಿತವಾಗಿ ಹೆರಿಗೆಗಾಗಿ ಆಸ್ಪತ್ರೆಗೆ ಸೇರಿ ಹೆರಿಗೆಯಾಗಿ ಹತ್ತರಿಂದ ಹದಿನೈದು ದಿನಗಳ ಕಾಲ ಆಸ್ಪತ್ರೆಯಲ್ಲಿಯೇ ಇದ್ದು ಮಗುವಿನ ಶುಶ್ರೂಷೆ ಮಾಡುತ್ತಾರೆ. ಆದ್ದರಿಂದ ಮೇಲ್ಕಾಣಿಸಿದ ವಿಶಿಷ್ಟ ಆಚರಣೆಗಳು ಇಂದು ಗತಿಸಿ ಹೋಗುತ್ತಿವೆ. ಇದು ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಲಕ್ಷಣ ಎಂದು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

೪.೧.೨ ಮುರ ಚುಚ್ಚುವ ಕಾರ್ಯಕ್ರಮ

ಹುಟ್ಟಿದ ಮಗು ಮೂರು ತಿಂಗಳಾದಾಗ ಮುರ (ಕಿವಿ) ಚುಚ್ಚುವ ಕಾರ್ಯಕ್ರಮ ಏರ್ಪಡಿಸುವರು. ಈ ಕಾರ್ಯವನ್ನು ಅಕ್ಕಸಾಲಿಗರ ಮನೆಯಲ್ಲಿ ಮಾಡುವುದುಂಟು. ಒಂದು ಮೊರದಲ್ಲಿ ಉಲ್ಪಿ(ಅಕ್ಕಿ, ಬೇಳೆ, ಬೆಲ್ಲ, ಒಣಕೊಬ್ಬರಿ, ಅಡಿಕೆ, ಎಲೆ, ಊದುಬತ್ತಿ, ದಕ್ಷಿಣೆ)ಯನ್ನು ತೆಗೆದುಕೊಂಡು ಅಕ್ಕಸಾಲಿಗರ ಮನೆಗೆ ಹೋಗುವರು. ಅಕ್ಕಸಾಲಿಗರು ಮೊದಲು ಉಲ್ಪಿಯನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಬಂಗಾರದಿಂದ ತಯಾರಿಸಿದ ಮುರವನ್ನು ಮೊದಲು ಒಣಕೊಬ್ಬರಿಗೆ ಚುಚ್ಚುವರು. ನಂತರದಲ್ಲಿ ಮಗುವಿಗೆ ನೋವಾಗದಂತೆ ನಿಧಾನವಾಗಿ ಕಿವಿಗೆ ಮುರವನ್ನು ಚುಚ್ಚುವರು. ಮಗುವಿಗೆ ನೋವಾಗಬಾರದು ಎಂದು ಮುರ ಚುಚ್ಚಿದ ಕಿವಿಯ ಭಾಗದಲ್ಲಿ ಅರಿಶಿಣವನ್ನು ತೇಯ್ದು ಹಚ್ಚುವರು. ಆಗ ಮಗುವು ಅಳುವುದನ್ನು ನಿಲ್ಲಿಸುತ್ತದೆ.

ಹೀಗೆ ಅತ್ಯಂತ ವಿಶಿಷ್ಟವಾಗಿ ಹ್ಯಾರಡಾದ ಜನಪದರು ಈ ಮುರ ಚುಚ್ಚುವ ಕಾರ್ಯಕ್ರಮವನ್ನು ನೆರವೇರಿಸುವರು. ಇದನ್ನು ಈಗಲೂ ಗ್ರಾಮದ ಪ್ರತಿಯೊಂದು ಜನಪದರು ಚಾಚೂ ತಪ್ಪದೆ ಮಾಡುವರು.

೪.೧.೩ ನಾಮಕರಣ

ಹ್ಯಾರಡಾ ಗ್ರಾಮದಲ್ಲಿ ಹುಟ್ಟಿದಂತಹ ಮಗುವಿಗೆ ಹೆಸರಿಡುವುದನ್ನು ನಾಮಕರಣ ಕಾರ್ಯಕ್ರಮವೆಂದು ವಿಶೇಷವಾಗಿ ಆಚರಿಸುವುದುಂಟು. ಸಾಮಾನ್ಯವಾಗಿ ಹೆಣ್ಣು ಮಗು ಜನಿಸಿದರೆ ಐದು ತಿಂಗಳಲ್ಲಿ, ಗಂಡು ಮಗು ಜನಿಸಿದರೆ ಆರು ತಿಂಗಳಲ್ಲಿ ಒಂದು ಒಳ್ಳೆಯ ಶುಭ ದಿನವನ್ನು ನೋಡಿಕೊಂಡು ಈ ಕಾರ್ಯಕ್ರಮವನ್ನು ಮಾಡುವುದುಂಟು. ಈ ಕಾರ್ಯಕ್ರಮವು ಮಗುವಿನ ತಂದೆಯ ಮನೆಯಲ್ಲಿ ನಡೆಯುವುದು ಕಡ್ಡಾಯ. ನಾಮಕರಣ ಆಗುವುದಕ್ಕಿಂತ ಮುಂಚೆ ಮನೆಮಂದಿಯಲ್ಲಾ ಮಗುವನ್ನು ತಮ್ಮ ಪ್ರೀತಿಯ ಹೆಸರಿನಿಂದ ಕರೆಯುವುದುಂಟು. ಉದಾ : ಪುಟ್ಟ, ಪುಟ್ಟಿ, ಚಿನ್ನು, ಅಪ್ಪಿ, ಬುಡ್ಡ, ಬುಡ್ಡಿ, ಪಿಂಕಿ, ಚಿಂಟು ಇತ್ಯಾದಿ.

ನಾಮಕರಣ ಕಾರ್ಯಕ್ರಮಕ್ಕೆ ತೊಟ್ಟಿಲು ಕಾರ್ಯಕ್ರಮವೆಂತಲೂ ಕರೆಯುವರು. ಮಗುವಿನ ತಾಯಿಯ ತವರು ಮನೆಯಿಂದ ಸೋದರ ಮಾವ ತೊಟ್ಟಿಲನ್ನು ಹೊತ್ತುಕೊಂಡು ಬರುವನು. ಬಾಗಿಲ ಬಳಿ ಪೂಜೆಯನ್ನು ಮಾಡುವುದರ ಮೂಲಕ ಇವರನ್ನು ಬರಮಾಡಿಕೊಳ್ಳುವರು. ಸಾಮಾನ್ಯವಾಗಿ ಬಡವರು ಮನೆಯ ಒಳಗೆ ಹುಸಿ(ಮನೆಯ ಒಳಗೆ ಅಗಲವಾದ ಖಾಲಿ ಜಾಗ)ಯಲ್ಲಿ ಈ ಕಾರ್ಯಕ್ರಮ ಮಾಡುವುದುಂಟು. ಶ್ರೀಮಂತರು ಮನೆಯ ಮುಂದೆ ಎತ್ತರವಾದ ಮಂಟಪವನ್ನು ಹಾಕಿ ಅಲಂಕೃತಗೊಳಿಸಿ ಅದರ ಮೇಲೆ ಈ ಕಾರ್ಯಕ್ರಮವನ್ನು ಮಾಡುವುದುಂಟು. ಸೋದರ ಮಾವನು ತೊಟ್ಟಿಲಿನ ಜೊತೆ-ಜೊತೆಗೆ ಐದು ಕುಂಚಿಗಿ(ಮಗುವಿನ ತಲೆಗೆ ಹಾಕುವ ಒಂದು ವಸ್ತ್ರ), ಐದು ಅಂಗಿ, ಬೆಳ್ಳಿಯ ತಟ್ಟೆ, ಬೆಳ್ಳಿಯ ಲೋಟ, ಬೆಳ್ಳಿಯ ಉಡುದಾರ(ಮಗುವಿಗೆ ಸೊಂಟಕ್ಕೆ ಕಟ್ಟುವ ದಾರ), ಲಿಂಗದಕಾಯಿ, ಕಡ್ಲಿಬೇಳೆ ಹಾಗೂ ಅಕ್ಕಿಯಿಂದ ಕಟ್ಟಿದ ಐದು ಗಂಟು, ಇವುಗಳನ್ನು ತೊಟ್ಟಿಲಿನ ಐದು ಕಡೆ ಕಟ್ಟುವರು. ತೊಟ್ಟಿಲನ್ನು ಹೂವಿನಿಂದ ಶೃಂಗಾರಗೊಳಿಸುವರು. ಹೆಸರಿಡುವ ಕಾರ್ಯಕ್ರಮವನ್ನು ಮಗುವಿನ ಸೋದರತ್ತೆಯು ನಡೆಸಿಕೊಡುವಳು. ಇವರು ಮೊದಲು ಮನೆ ದೇವರಿಗೆ ಪೂಜೆ ಮಾಡಿ, ಅಕ್ಕಿ ಹಾಗೂ ಬೇಳೆಯಿಂದ ಕಟ್ಟಿದ ಐದು ಗಂಟುಗಳನ್ನು ಬಾಯಲ್ಲಿ ಕಚ್ಚಿಕೊಂಡು, ತಟ್ಟೆಯನ್ನು ಬಾರಿಸುತ್ತಾ, ಪಕ್ಕದಲ್ಲಿರುವ ತೊಟ್ಟಿಲಿನ ಹತ್ತಿರ ಬರುವರು. ಆಗ ಆಕೆಯ ಪಕ್ಕದಲ್ಲಿರುವವರು ನಿಧಾನವಾಗಿ ಬೆನ್ನಿಗೆ ಹೊಡೆಯುವಂತೆ ಮಾಡುವರು.

ನಂತರ ಮಗುವನ್ನು ತೊಟ್ಟಿಲಿಗೆ ಹಾಕಿ ಮೊದಲು ದೇವರ ಹೆಸರನ್ನು ಮಗುವಿಗೆ ಸೋದರತ್ತೆ ಹೆಸರಿಡುವರು. ಉದಾ :- ನಿಂಗಪ್ಪ, ಮೈಲಾರಿ, ಯಲ್ಲಮ್ಮ, ರೇಣುಕಾ, ಚೌಡಮ್ಮ, ಬಸಣ್ಣ, ಮಲ್ಲಿಕಾರ್ಜುನ ಇತ್ಯಾದಿ. ಕೆಲವೊಬ್ಬರು ತಮ್ಮ ಪೂರ್ವಜರ ಹೆಸರನ್ನು ಇಡುವರು. ಯಲ್ಲಪ್ಪ, ಹನುಮಂತ, ಕೋಟೆಪ್ಪ, ನಿಂಗಪ್ಪ ಇತ್ಯಾದಿ. ಹೀಗೆ ಹೆಸರಿಟ್ಟ ಮೇಲೆ ಮಗುವಿಗೆ ಉಡುದಾರ, ಲಿಂಗದಕಾಯಿ, ಹೊಸ ಬಟ್ಟೆಯನ್ನು ತೊಡಿಸಿ ಮಗುವಿಗೆ ಆರತಿಯನ್ನು ಬೆಳಗುವರು. ಮಗುವಿಗೆ ಹಣೆಯ ಮೇಲೆ ಮೂರು ಬಾರಿ ಕುಂಕುಮ, ವಿಭೂತಿ, ಭಂಡಾರ ಹಚ್ಚುವರು. ತೊಟ್ಟಿಲಲ್ಲಿ ಮಗುವನ್ನು ಮೂರು ಬಾರಿ ಇಟ್ಟು ಹೆಸರನ್ನು ಎಲ್ಲರಿಗೂ ಕೇಳುವಂತೆ ಕೂಗುವರು. ಈ ಕಾರ್ಯಕ್ರಮದಲ್ಲಿ ಕುಟುಂಬದ ಸದಸ್ಯರು. ಬಂಧುಗಳು, ಊರಿನ ಬಹುತೇಕ ಗ್ರಾಮಸ್ಥರು, ಪೂಜಾರಿಗಳು ಭಾಗವಹಿಸಿ ಅತ್ಯಂತ ವಿಜೃಂಭಣೆಯಿಂದ ಈ ಕಾರ್ಯಕ್ರಮವನ್ನು ಮಾಡುವುದನ್ನು ನಾವು ಈಗಲೂ ಕಾಣಬಹುದಾಗಿದೆ.

ಹ್ಯಾರಡಾ ಗ್ರಾಮದಲ್ಲಿ ಬಹುತೇಕ ತಮ್ಮ ಪೂರ್ವಜರ ಹೆಸರನ್ನು ಇಡುವ ಪರಿಪಾಠ ಬೆಳೆದು ಬಂದಿದೆ. ಬಹುತೇಕವಾಗಿ ನಿಂಗಪ್ಪ, ನಾಗಮ್ಮ, ಕರಿಯಪ್ಪ, ದುರುಗಪ್ಪ, ಬಸಪ್ಪ, ಯಲ್ಲಪ್ಪ, ಚೌಡವ್ವ, ಮಂಜುನಾಥ, ಕೊಟ್ರೇಶ, ಹನುಮಂತಪ್ಪ, ಹೊನ್ನಮ್ಮ, ಸಿದ್ದಪ್ಪ ಹೀಗೆ ದೈವಾಧಾರಿತ ಹೆಸರುಗಳನ್ನು ಇಟ್ಟುಕೊಂಡ ಬಹುಸಂಖ್ಯಾತ ಜನರನ್ನು ಗ್ರಾಮದಲ್ಲಿ ಕಾಣಬಹುದಾಗಿದೆ. ಆದರೆ ಇತ್ತೀಚಿನ ಪೀಳಿಗೆಯವರು ದೈವಾಧಾರಿತ ಹಾಗೂ ಪೂರ್ವಜರ ಹೆಸರುಗಳನ್ನು ಇಡಲು ಹಿಂಜರಿಯುತ್ತಿದ್ದಾರೆ. ಆಧುನಿಕತೆಗೆ ತಕ್ಕಂತೆ ತಮ್ಮ ಹೆಸರುಗಳೂ ಬಹಳಷ್ಟು ನವೀನ ರೀತಿಯಲ್ಲಿ ಚಾಲ್ತಿಯಲ್ಲಿವೆ. ಉದಾ:-

ವೇದಾಂತ, ನಿತಿನ್, ಹರ್ಷಿತಾ, ಪೃಥ್ವಿ, ವಿಕಾಸ್, ವಿರಾಟ್, ಹೀಗೆ ಆಧುನಿಕ ಹೆಸರುಗಳು ಬಹಳಷ್ಟು ಚಾಲ್ತಿಯಲ್ಲಿವೆ. ಇವೆಲ್ಲವುಗಳನ್ನು ಗಮನಿಸಿದಾಗ ಗ್ರಾಮವು ಹೆಚ್ಚು ಹೆಚ್ಚು ಆಧುನಿಕ ಪ್ರಪಂಚಕ್ಕೆ ತೆರೆದುಕೊಳ್ಳುತ್ತಿದೆ. ಇಂತಹ ನಾಮಕರಣ ಶಾಸ್ತ್ರವನ್ನು ನೋಡಬಹುದಾಗಿದೆ. ನಾಮಕರಣ ಕಾರ್ಯಕ್ರಮವನ್ನು ಹ್ಯಾರಡಾ ಗ್ರಾಮದಲ್ಲಿ ವಿಶಿಷ್ಟವಾಗಿ ಆಚರಿಸುವುದುಂಟು. ಉದಾ :- ಧ್ವನಿವರ್ಧಕಗಳನ್ನು ಕಾರ್ಯಕ್ರಮದಲ್ಲಿ ಬಳಸುವುದು. ಈ ಕಾರ್ಯಕ್ರಮಕ್ಕೆ ಅತಿಥಿಗಳನ್ನು ಆಹ್ವಾನಿಸಲು ಕರೆಯೋಲೆಯನ್ನು ಮುದ್ರಿಸುವುದು. ಕಾರ್ಯಕ್ರಮದ ನಿಮಿತ್ತ ರಸಮಂಜರಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು. ಅತೀ ಆಪ್ತರಿಗೆ ಅಜ್ಞಾತ ಸ್ಥಳದಲ್ಲಿ ಮಾಂಸಾಹಾರ ಊಟದ ವ್ಯವಸ್ಥೆಯನ್ನು ಮಾಡುವರು. ಇಂತಹ ಆಚರಣೆಗಳಿಂದ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿದೆ. ಆದರೂ ಹ್ಯಾರಡಾ ಗ್ರಾಮದ ಜನಪದರು ಶೇ ೮೦ ರಷ್ಟು ಜನರು ಮೂಲ ಆಚರಣೆಯನ್ನು ಬಿಟ್ಟಿಲ್ಲ. ಅದನ್ನು ತಮ್ಮ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕೆಲಸವನ್ನು ಮಾಡುತ್ತಿದ್ದಾರೆ.

೪.೧.೪ ಜವುಳ ಕಾರ್ಯಕ್ರಮ

ಹ್ಯಾರಡಾ ಜನಪದರು ಮಗು ಹುಟ್ಟಿದ ಒಂಭತ್ತು ತಿಂಗಳು, ಹನ್ನೊಂದು ತಿಂಗಳು ಅಥವಾ ಮೂರು ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮಾಡುವುದುಂಟು. ಹುಟ್ಟು ತಲೆಗೂದಲನ್ನು ತೆಗೆಯುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಸಾಮಾನ್ಯವಾಗಿ ಎಲ್ಲಾ ಸ್ತ್ರೀಯರು ಮಗು ಹುಟ್ಟಿದ ಮೇಲೆ ಮಗುವಿನ ಜಡೆಯನ್ನು ತೆಗೆಸಲು ಹರಕೆ ಹೊತ್ತಿರುತ್ತಾರೆ. ಅದರ ಪ್ರಕಾರ ಈ ಕಾರ್ಯಕ್ರಮವನ್ನು ಮಾಡುತ್ತಾರೆ. ಹ್ಯಾರಡಾದಲ್ಲಿ ಸಾಮಾನ್ಯವಾಗಿ ತಮ್ಮ ಇಷ್ಟ ದೈವದ ದೇವರ ಗುಡಿಯ ಮುಂದೆ ಮಾಡುವುದುಂಟು. ಈ ಕಾರ್ಯಕ್ರಮದಲ್ಲಿ ಸೋದರ ಮಾವ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ಈ ಕಾರ್ಯಕ್ರಮದಲ್ಲಿ ತವರು ಮನೆಯವರು ಮಗುವಿಗೆ ಹೊಸ ಬಟ್ಟೆ ಹಾಗೂ ಮಗುವಿನ ತಾಯಿಗೆ ಹೊಸ ಬಟ್ಟೆಯನ್ನು ತಂದು ಉಡಿ ತುಂಬಿ ಕಾರ್ಯಕ್ರಮವನ್ನು ನೆರವೇರಿಸುವರು. ಈ ಸಂದರ್ಭದಲ್ಲಿ ದೇವರ ಗುಡಿಯ ಮುಂದೆ ದೇವರಿಗೆ ವಿಶೇಷವಾದ ಪೂಜೆಯನ್ನು ಮಾಡುವರು. ದೇವರಿಗೆ ವಿವಿಧ ರೀತಿಯ ನೈವೇದ್ಯವನ್ನು ಅರ್ಪಿಸುವರು. ಸೋದರ ಮಾವನಾದವನು ದೇವರ ಗುಡಿಯ ಮುಂದೆ ಕರಿಕಂಬಳಿಯ ನಾಲ್ಕು ಪದರನ್ನು ಹಾಸಿ ಅದರ ಮೇಲೆ ಐದು ಅಕ್ಕಿಯ ಕಾಳುಗಳ ಗುಂಪನ್ನು ಹಾಕುವನು. ಅದರ ಮೇಲೆ ಮಗುವನ್ನು ಕೂರಿಸುತ್ತಾರೆ. ಮಗುವಿಗೆ ಬಲಗೈಯಲ್ಲಿ ವೀಳ್ಯದೆಲೆ ಹಾಗೂ ಹೂವಿನಿಂದ ಕಟ್ಟಿದ ಕಂಕಣವನ್ನು ಕಟ್ಟುತ್ತಾರೆ. ಅಲ್ಲಿ ಭಾಗವಹಿಸಿದ ಎಲ್ಲರಿಗೂ ಕಂಕಣ ಕಟ್ಟುವರು. ಕಂಬಳಿಯ ಮೇಲೆ ಅಡಿಕೆ, ಎಲೆ, ಅರಿಶಿಣ, ಕೊಬ್ಬರಿ, ಉತ್ತತ್ತಿ ಮುಂತಾದ ಐದು ತರಹದ ವಸ್ತುಗಳನ್ನು ಹಾಕುತ್ತಾರೆ. ಕಂಬಳಿಯ ಮೇಲೆ ಇಟ್ಟ ಒಂದು ವೀಳ್ಯದೆಲೆಯನ್ನು ಸೋದರಮಾವ ಆದವನು ತೆಗೆದುಕೊಂಡು ಅದನ್ನು ಅರ್ಧ ಕತ್ತರಿಸಿ ಕತ್ತರಿಯನ್ನಾಗಿ ಮಾಡಿಕೊಂಡು ಮಗುವಿನ ತಲೆಗೂದಲಿಗೆ ಮುಟ್ಟಿಸಿ ನಮಸ್ಕರಿಸಿ ನಂತರ ಮಗುವಿನ ತಲೆಯಲ್ಲಿನ ಐದು ತಲೆಗೂದಲನ್ನು

ಕತ್ತರಿಸುವನು. ಕತ್ತರಿಸಿದ ಐದು ತಲೆಗೂದಲನ್ನು ಹೊಸ ವಸ್ತ್ರದಲ್ಲಿ ಹಾಕಿ ಅದರಲ್ಲಿ ಎಲೆ, ಅಡಿಕೆ, ಕಾಣಿಕೆಯನ್ನು ಹಾಕಿ ಅದನ್ನು ಗಂಟು ಕಟ್ಟಿ ಹರಿಯುವ ನದಿ ಅಥವಾ ಹಳ್ಳದ ನೀರಿಗೆ ಬಿಡುತ್ತಾರೆ.

ಅಲ್ಲಿರುವ ಎಲ್ಲರೂ ಮಗುವಿಗೆ ಹಾಗೂ ದೇವರಿಗೆ ಆರತಿಯನ್ನು ಮಾಡುವರು. ನಂತರ ಅವರವರ ಶಕ್ತ್ಯಾನುಸಾರ ಮಗುವಿಗೆ ಕಾಣಿಕೆಯನ್ನು ಕೊಡುವರು. ಪೂಜಾರಿಯ ಸಲಹೆಯಂತೆ ಎಲ್ಲಾ ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸುವರು. ನಂತರ ಗುಡಿಯ ಮುಂದೆ ಸಿಹಿ ಅಡುಗೆಯನ್ನು ಮಾಡಿ ಎಲ್ಲರೂ ಊಟವನ್ನು ಮಾಡುವರು. ಹ್ಯಾರಡಾ ಗ್ರಾಮದಲ್ಲಿ ಈ ಪದ್ಧತಿಯು ತಲೆತಲಾಂತರದಿಂದ ನಡೆದುಕೊಂಡು ಬಂದಿದೆ. ಈ ಕಾರ್ಯಕ್ರಮ ಆದ ಮೇಲೆ ಮಗುವಿಗೆ ತಲೆಗೂದಲು ಬಂದಾಗಲೆಲ್ಲಾ ಯಾವಾಗ ಬೇಕಾದರೂ ತಲೆಗೂದಲನ್ನು ಕತ್ತರಿಸಿಕೊಂಡು ಬರಬಹುದಾಗಿದೆ.

೪.೧.೫ ಋತುಮತಿ

ಹ್ಯಾರಡಾದ ಜನಪದರು ಈಗಲೂ ಋತುಮತಿ ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದುಂಟು. ಇದನ್ನು ಗ್ರಾಮ್ಯ ಭಾಷೆಯಲ್ಲಿ ದೊಡ್ಡೊಳಾದ್ಲು, ಮೈನೆರೆತಳು ಎಂದು ಹೇಳುವುದುಂಟು. ಮನೆಯಲ್ಲಿರುವ ಪ್ರೌಢಾವಸ್ಥೆಯಲ್ಲಿರುವ ಯುವತಿ ಮೈನೆರೆತಾಗ ಅಥವಾ ಋತುಮತಿಯಾದಾಗ ಸೂತಕವನ್ನು ಬಹಳಷ್ಟು ಜಾಗೃತಿಯಿಂದ ಮಾಡುವುದುಂಟು. ಈ ಕಾರ್ಯಕ್ರಮವನ್ನು ಯುವತಿ ಋತುಮತಿಯಾದಾಗಿನಿಂದ ಐದು ದಿನ, ಒಂಭತ್ತು ದಿನ ಅಥವಾ ಹದಿಮೂರು ದಿನಗಳಲ್ಲಿ ಮಾಡುವುದುಂಟು. ಈ ದಿನಗಳಲ್ಲಿ ಸೂತಕವನ್ನು ಆಚರಿಸುವರು. ಮನೆಯು ಮೈಲಿಗೆಯಾಯಿತೆಂದು ಆ ಮೈಲಿಗೆಯನ್ನು ಕಳೆಯಬೇಕಾದರೆ ಮನೆಯವರು ಹಾಗೂ ಸಂಬಂಧಿಕರು ಮನೆಯನ್ನೆಲ್ಲಾ ಚೊಕ್ಕಟವಾಗಿ ಸ್ವಚ್ಛಗೊಳಿಸಿ, ತಮ್ಮ ಇಷ್ಟ ದೇವರಿಗೆ ಪೂಜೆಯನ್ನು ನೆರವೇರಿಸುವರು. ಶುಭ ಕಾರ್ಯಗಳನ್ನು ಮಾಡುವುದರಲ್ಲಿ ಸೂತಕ ಕಳೆದ ಮೇಲೆ ಶುಭ ಕಾರ್ಯಗಳನ್ನು ಮಾಡುವುದುಂಟು.

ಋತುಮತಿಯಾದ ಯುವತಿಯ ದೇಹದಲ್ಲಿ ಜೈವಿಕ ಬದಲಾವಣೆಯಾಗುವುದು ಸಹಜ ಪ್ರಕ್ರಿಯೆಯಾಗಿದೆ. ಹೊಸ ಜೀವಿಗಳಿಗೆ ಜನ್ಮಕೊಡುವ ಪ್ರಾಯದ ಒಂದು ಹಂತವಾಗಿದೆ. ಹಿಂದಿನ ಕಾಲದಲ್ಲಿ ಗ್ರಾಮದ ಬಹುತೇಕ ಜನಾಂಗದವರು ಬಹು ಕಟ್ಟುನಿಟ್ಟಿನ ನಿಯಮಗಳನ್ನು ಅನುಸರಿಸುತ್ತಿದ್ದರು ಎಂದು ಕ್ಷೇತ್ರ ಕಾರ್ಯಕ್ಕೆ ತೆರಳಿದಾಗ ಗ್ರಾಮಸ್ಥರು ಹೇಳಿದ್ದಾರೆ. "ನಮ್ ತಾಯಿ ದೊಡ್ಡಾಕಿ ಆಗ್ಯಾಳ, ಆಕಿಗೆ ಕೊಬ್ರಿಕಾರ, ಪಾಯ್ಸಗೀಸ ಕೊಡ್ಬೇಕು. ಆಕೀನ ಹೊರಗಡೆ ಕಳಸ್ಬಾರ್ದು ಮನ್ಯಾಗ ಕುಂದ್ರಿಸಿ ದೇಕರೀಕಿ ನೋಡ್ಕ್ಯಬೇಕು" ಎಂದು ಗ್ರಾಮದ ಹಿರಿಯ ಜನಪದ ಮಹಿಳೆ ಹೇಳಿದ್ದುಂಟು. ಯುವತಿಯು ಋತುಮತಿಯಾದಾಗ ಊರಿನ ಹೊರಗಡೆ ಗುಡಿಸಲಿನಲ್ಲಿ ಒಂಟಿಯಾಗಿ ಬಿಡುತ್ತಿದ್ದರು. ಈ ಸಂದರ್ಭದಲ್ಲಿ ಯಾರ ಕಣ್ಣಿಗೂ ಬೀಳದಂತೆ ಯುವತಿಯನ್ನು ಕಾಪಾಡುತ್ತಿದ್ದರು. ಗುಡಿಸಲಿನಲ್ಲಿ ಪ್ರತ್ಯೇಕವಾದ ಊಟದ ತಟ್ಟೆ, ಲೋಟ, ಹಾಸಿಗೆ ವ್ಯವಸ್ಥೆಯನ್ನು ಮಾಡುತ್ತಿದ್ದರು. ಯಾರು ಕೂಡ

ಆಕೆಯ ಹತ್ತಿರ ಸುಳಿಯುತ್ತಿರಲಿಲ್ಲ. ಆಕೆಗೆ ಬೇಕಾಗಿರುವ ಮೂಲಭೂತ ವ್ಯವಸ್ಥೆಯನ್ನು ಮಾಡಿರುತ್ತಿದ್ದರು. ಆದರೆ ಇಂದು ಈ ನಿಯಮಗಳು ಬಹುತೇಕವಾಗಿ ಕಣ್ಮರೆಯಾಗಿವೆ. ನಾಮಕಾವಸ್ತೆ ಎನ್ನುವಂತೆ ಮನೆಯಲ್ಲಿಯೇ ಒಂದು ಕೋಣೆಯಲ್ಲಿ ಯುವತಿಗೆ ಬೇಕಾಗಿರುವ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಆಕೆಯ ತಲೆದಿಂಬಿನ ಪಕ್ಕದಲ್ಲಿ ಕಸಬರಿಗೆಯನ್ನು ಇಟ್ಟಿರುತ್ತಾರೆ. ಏಕೆಂದರೆ ಆಕೆಗೆ ಕೆಟ್ಟ ಕನಸುಗಳು ಬೀಳಬಾರದು ಎಂಬ ನಂಬಿಕೆಯಾಗಿದೆ.

ಋತುಮತಿಯಾದ ಯುವತಿಗೆ ಋತುಮತಿಯಾದ ಮೂರು ದಿನಗಳವರೆಗೆ ವಿವಿಧ ರೀತಿಯ ವಿಶೇಷ ಅಡುಗೆಗಳನ್ನು ಮಾಡಿ ಕೊಡುತ್ತಾರೆ. ಅದರಲ್ಲೂ ವಿಶೇಷವಾಗಿ ಕೊಬ್ಬರಿಕಾರ(ಬೆಲ್ಲ, ಕೊಬ್ಬರಿ, ಉತ್ತತ್ತಿ, ಯಾಲಕ್ಕಿ ಇನ್ನಿತರ ಆಹಾರ ಪದಾರ್ಥಗಳನ್ನು ಕುಟ್ಟಿ ತಯಾರಿಸಿದ ಆಹಾರ)ವನ್ನು ಕೊಡುವರು. ಇದು ಯುವತಿಗೆ ಶಕ್ತಿವರ್ಧಕ ಆಹಾರವಾಗಿದ್ದು, ಹೊಸ ರಕ್ತ ದೇಹದಲ್ಲಿ ಹೆಚ್ಚು-ಹೆಚ್ಚು ವೃದ್ಧಿಯಾಗಿ ಆರೋಗ್ಯ ಉತ್ತಮವಾಗಿರಲಿ ಎಂದು ಇದನ್ನು ಯುವತಿಗೆ ಕೊಡುವರು. ಕೊಬ್ಬರಿಕಾರದ ಜೊತೆಗೆ ಹ್ಯಾರಡಾ ಜನಪದರು ಶಾವಿಗೆ ಪಾಯಸವನ್ನು ವಿಶೇಷವಾಗಿ ತಯಾರಿಸಿ ಕೊಡುವುದುಂಟು.

ನಂತರದಲ್ಲಿ ಐದು ದಿನದಲ್ಲೊ, ಒಂಭತ್ತು ದಿನದಲ್ಲೊ, ಅಥವಾ ಹದಿಮೂರು ದಿನದಲ್ಲೋ ಯುವತಿಯನ್ನು ಎಬ್ಬಿಸುವ ಕಾರ್ಯಕ್ರಮ ಎಂದು ಆಚರಿಸುವುದುಂಟು. ಈ ಸಂದರ್ಭದಲ್ಲಿ ಯುವತಿಗೆ ಅರಿಶಿಣವನ್ನು ಹಚ್ಚಿ ಗಂಗಾ ಪೂಜೆಯನ್ನು ನೆರವೇರಿಸುವರು. ಕುಟುಂಬದ ಸದಸ್ಯರು, ಬಂಧುಗಳು, ಅಕ್ಕ-ಪಕ್ಕದ ಮನೆಯವರು ಮುಂಜಾನೆ ನೀರಿನ ಬಿಂದಿಗೆ ಅಥವಾ ತಂಬಿಗೆಯನ್ನು ತೆಗೆದುಕೊಂಡು ಬಾವಿ, ಅಥವಾ ಬೋರವೆಲ್‌ಗಳಿಗೆ ಪೂಜೆಯನ್ನು ಸಲ್ಲಿಸುವರು. ನಂತರ ಗ್ರಾಮದ ಹೊರವಲಯದಲ್ಲಿ ಮುಳ್ಳಿನ ಗಿಡಕ್ಕೆ ಪೂಜೆಯನ್ನು ಸಲ್ಲಿಸಿ ಆ ಗಿಡವನ್ನು ಕತ್ತರಿಸುವರು. ಏಕೆಂದರೆ ಏನಾದರೂ ದೋಷವಿದ್ದರೆ ಆ ಮುಳ್ಳಿನ ಗಿಡಕ್ಕೆ ಹೋಗಲಿ ಎಂಬ ನಂಬಿಕೆ ಗ್ರಾಮೀಣ ಜನಪದರದ್ದು. ನಂತರದಲ್ಲಿ ಮನೆಗೆ ತೆರಳಿ ಮೈನೆರೆತ ಯುವತಿಗೆ ಅರಿಶಿಣವನ್ನು ಮೈಗೆಲ್ಲಾ ಹಚ್ಚಿ ಬಿಸಿ ನೀರಿನಿಂದ ಆಕೆಗೆ ಸ್ನಾನ ಮಾಡಿಸುವರು. ಆಕೆಯು ಬಿಟ್ಟ ಬಟ್ಟೆಯನ್ನು ಅಗಸರಿಗೆ ಕೊಡುವರು. ಈ ಅಗಸರಿಗೆ ಕಾಣಿಕೆ ಹಾಗೂ ಉಲ್ಪಿಯನ್ನು ಕೊಡುವರು.

ನಂತರ ವಿಶೇಷವಾಗಿ ಅಲಂಕರಿಸಿದ ವೇದಿಕೆಯ ಮೇಲೆ ಯುವತಿಯನ್ನು ಕೂಡಿಸುವರು. ಆಕೆಯನ್ನು ಹೊಸ ಸೀರೆಯಿಂದ ವಿಶೇಷವಾಗಿ ಅಲಂಕರಿಸುವರು. ಮೊದಲ ಸೀರೆಯನ್ನು ತವರು ಮನೆಯವರು ತರುವುದು ವಾಡಿಕೆಯಾಗಿದೆ. ನಂತರ ಸೋದರತ್ತೆಯು ಆಕೆಗೆ ಹಸಿರು ಬಳೆಗಳನ್ನು ತೊಡಿಸಿ, ಎಲೆ, ಅಡಿಕೆ, ಅಕ್ಕಿ, ಬೆಲ್ಲ, ಕೊಬ್ಬರಿ, ಅರಿಶಿಣದಿಂದ ಕೂಡಿದ ಪದಾರ್ಥಗಳನ್ನು ಉಡಿ ತುಂಬುವರು. ನಂತರದಲ್ಲಿ ಸಂಬಂಧಿಕರು, ಗ್ರಾಮಸ್ಥರು ಆರತಿಯನ್ನು ಬೆಳಗಿ ಕಾಣಿಕೆಯನ್ನು ಕೊಟ್ಟು ಸಿಹಿಯೂಟವನ್ನು ಮಾಡುವರು. ಈ ಸಂದಂರ್ಭದಲ್ಲಿ ಗ್ರಾಮೀಣ ಜನಪದ ಮಹಿಳೆಯರು ಸೋಬಾನ ಪದಗಳನ್ನು ಹೇಳುವುದರ ಮೂಲಕ ಎಲ್ಲರನ್ನು ರಂಜಿಸುವರು. ಆದರೆ ಗ್ರಾಮದಲ್ಲಿ

ಇಂತಹ ಸಂಸ್ಕೃತಿ ಬಹುತೇಕವಾಗಿ ಕಣ್ಮರೆಯಾಗುತ್ತದೆ. ಕೇವಲ ನಾಮಕಾವಸ್ತೆಗೆ ಈ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಅಕ್ಷರಸ್ಥ ಕುಟುಂಬಗಳು ಹೆಚ್ಚಾಗಿ ಈ ಕಾರ್ಯಕ್ರಮವನ್ನು ಮಾಡಲು ಇಷ್ಟ ಪಡುವುದಿಲ್ಲ. ಒಂದೇ ದಿನದಲ್ಲಿ ಈ ಕಾರ್ಯಕ್ರಮವನ್ನು ಮಾಡಿ ಮುಗಿಸುವ ಪದ್ದತಿ ಇತ್ತೀಚಿಗೆ ಚಾಲ್ತಿಯಲ್ಲಿದೆ.

೪.೧.೬ ಸಾವು (ಶವಸಂಸ್ಕಾರ ಪದ್ದತಿ)

ಸಾಮಾನ್ಯವಾಗಿ ಹ್ಯಾರಡಾ ಗ್ರಾಮದಲ್ಲಿ ಎಲ್ಲಾ ಸಮುದಾಯದವರು ಸಾವಿನ ಸಂದರ್ಭದಲ್ಲಿ ಒಂದೇ ರೀತಿಯಾದ ಆಚರಣೆಗಳನ್ನು ಮಾಡುತ್ತಾರೆ. ಮುಸ್ಲಿಂ ಸಮುದಾಯದವರಲ್ಲಿ ಸ್ವಲ್ಪ ಭಿನ್ನವಾಗಿ ಆಚರಿಸುವುದುಂಟು. ಮನೆಯಲ್ಲಿ ಸಾವು ಸಂಭವಿಸಿದಾಗ ವಿವಿಧ ಸಂಪ್ರದಾಯದ ಅನುಗುಣವಾಗಿ ಶವಸಂಸ್ಕಾರ ಕ್ರಿಯೆಯನ್ನು ಮಾಡುವುದುಂಟು. ದೇಹದಲ್ಲಿರುವ ಆತ್ಮ ಹೊರ ಹೋದಾಗ ಅದಕ್ಕೆ ಶಾಶ್ವತ ಮುಕ್ತಿಯನ್ನು ದೊರಕಿಸಲು ಇಂತಹ ಸಂಪ್ರದಾಯಗಳನ್ನು ಮಾಡುತ್ತಾರೆ. ಯಾವ ಮನೆಯಲ್ಲಿ ಸಾವು ಆಗಿರುತ್ತದೆಯೋ ಆ ಮನೆಯಲ್ಲಿ ಸೂತಕ ವಾತಾವರಣವಿದ್ದು, ಶೋಕದ ಮಡುವಿನಲ್ಲಿರುತ್ತಾರೆ. ಜೀವ ಹೋಗುತ್ತದೆ ಎನ್ನುವ ಸಮಯದಲ್ಲಿ ಆ ವ್ಯಕ್ತಿಗೆ ಪ್ರೀತಿ ಪಾತ್ರದವರು ಮೂರು ಬಾರಿ ಬಾಯಿಯಲ್ಲಿ ನೀರು ಹಾಕುವುದನ್ನು ಕಾಣಬಹುದು. ಇದನ್ನು ಗ್ರಾಮ್ಯ ಭಾಷೆಯಲ್ಲಿ 'ಗುಟುಗು ನೀರು' ಎಂದು ಕರೆಯುವುದುಂಟು.

ವ್ಯಕ್ತಿಯ ಪ್ರಾಣ ಹೋದ ಮೇಲೆ ವ್ಯಕ್ತಿಯ ಕಣ್ಣುಗಳನ್ನು ಮುಚ್ಚುವರು. ಶವವನ್ನು ಬಿಸಿ ನೀರಿನಿಂದ ಸ್ನಾನ ಮಾಡಿಸಿ ಶುದ್ದಗೊಳಿಸುವರು. ನಂತರ ಶವಕ್ಕೆ ಬಟ್ಟೆ ತೊಡಿಸುವರು. ಕಾಲುಗಳನ್ನು ಮಡಚಿ ಮನೆಯ ಒಂದು ಗೋಡೆಗೆ ಕೂಡಿಸುವರು. ಶವದ ಬಾಯಲ್ಲಿ ತಾಂಬೂಲ ಇಡುವರು. ಶವದ ಹತ್ತಿರ ಆರತಿ, ವಿಭೂತಿ, ಊದುಬತ್ತಿ, ಕರ್ಪೂರ, ಪತ್ರೆ ಎಲೆ, ಕುಂಕುಮ, ವಿವಿಧ ರೀತಿಯ ಹೂ, ಹೂವಿನ ಮಾಲೆಯನ್ನು ಹಾಕುವರು. ಕೆಲವರು ಶವವನ್ನು ಅಂಗಾತ ಮಲಗಿಸಿ ಅದನ್ನು ಸಿಂಗರಿಸುವುದುಂಟು. ನಂತರದಲ್ಲಿ ತಮ್ಮ ಬಂಧುಗಳಿಗೆ, ಆಪ್ತರಿಗೆ ಮರಣ ಹೊಂದಿದ ವಿಷಯವನ್ನು ಹರಿಜನ ಸಮುದಾಯದ ವ್ಯಕ್ತಿಯೊಬ್ಬರು ಊರೂರಿಗೆ ತೆರಳಿ ಹೇಳಿ ಅವರಿಂದ ಕಾಣಿಕೆಯನ್ನು ಪಡೆದುಕೊಂಡು ಹಿಂದಿರುಗುವನು. ರಾತ್ರಿಯ ಸಮಯದಲ್ಲಿ ಶವದ ಮುಂದೆ ಭಜನಾ ಸಂಘದವರು ದೇವಿಯ ಸ್ತೋತ್ರಗಳು, ವ್ಯಕ್ತಿಯ ಮೇಲಿನ ಹಾಡುಗಳು, ಜೀವನದ ಸಾರವನ್ನು ತಿಳಿಯುವ ಹಾಡುಗಳನ್ನು ಹೇಳುತ್ತಾ ರಾತ್ರಿಯನ್ನು ಕಳೆಯುವರು. ಯಾವ ಮನೆಯಲ್ಲಿ ಸಾವು ಸಂಭವಿಸಿರುತ್ತದೆಯೋ ಆ ಮನೆಯಲ್ಲಿ ಅಡುಗೆಯನ್ನು ಮಾಡುವಂತಿಲ್ಲ. ಪಕ್ಕದ ಮನೆಯವರು ಅವರಿಗೆ ಬೇಕಾದ ತಿಂಡಿ, ಕಾಫಿ, ಟೀ, ವ್ಯವಸ್ಥೆಯನ್ನು ಮಾಡಿರುತ್ತಾರೆ.

ಮರುದಿನ ಬೆಳಗ್ಗೆ ಬಂಧುಗಳೆಲ್ಲಾ ಬರುತ್ತಾರೆ. ಬಂದವರು ಹೂವಿನ ಮಾಲೆ, ಎಲೆ, ಅಡಿಕೆ, ಕಾಯಿ, ಊದುಬತ್ತಿ, ಕರ್ಪೂರ ತಂದು ಶವದ ಅಂತಿಮ ದರ್ಶನವನ್ನು ಮಾಡುತ್ತಾರೆ. ಒಂದೊಂದು ಊರಿನ ಬಂಧುಗಳು ಬಂದಾಗ ಹಲಗೆಯ ಮೇಳದವರು ಹಲಗೆಯನ್ನು ಬಾರಿಸುವುದರ ಮೂಲಕ

ಸದ್ದು ಮಾಡುತ್ತಿರುತ್ತಾರೆ. ಸಾಮಾನ್ಯವಾಗಿ ಹ್ಯಾರಡಾ ಗ್ರಾಮದಲ್ಲಿ ಶವಗಳನ್ನು ಹೂಳುವುದು ಮತ್ತು ಸುಡುವುದರ ಮೂಲಕ ಶವ ಸಂಸ್ಕಾರವನ್ನು ಮಾಡುವುದುಂಟು. ಮೇಲ್ವರ್ಗದ ಸಮುದಾಯದವರು ಹೆಣವನ್ನು ಭೂಮಿಯಲ್ಲಿ ಹೂಳುವರು. ಅದಕ್ಕೆಂದೇ ತಮ್ಮ ಜಮೀನಿನಲ್ಲಿ ಗುಣಿಯನ್ನು ತೋಡುವರು. ಶವವನ್ನು ಕುಳಿತ ಸ್ಥಿತಿಯಲ್ಲಿ ವಿಭೂತಿ, ಬಿಲ್ವಪತ್ರಿ ಎಲೆ ಅಥವಾ ಬನ್ನಿ ಪತ್ರಿ, ಹೂವು, ಮಣ್ಣು ಹಾಕಿ ಹೂಳುವರು. ಕಪ್ಪು ಸಮುದಾದವರು (ಕೆಳವರ್ಗ) ಶವವನ್ನು ಸುಡುವ ಪದ್ಧತಿಯನ್ನು ಆಚರಿಸುವುದುಂಟು.

ಚಟ್ಟ ತಯಾರಿಸುವುದು

ಸಾಮಾನ್ಯವಾಗಿ ಹೆಣವನ್ನು ಹೊರಲು ತಯಾರಿಸುವಂತ ಸಾಧನವಾಗಿದೆ. ಆರರಿಂದ ಏಳು ಅಡಿ ಇರುವ ಎರಡು ಬಿದಿರಿನ ಬೊಂಬನ್ನು ತೆಗೆದುಕೊಂಡು ಅವುಗಳನ್ನು ಮೂರರಿಂದ ನಾಲ್ಕು ಅಡಿ ಸಮಾನಾಂತರವಾಗಿ ಇಟ್ಟು ಅವುಗಳ ಮೇಲೆ ಅರ್ಧ ಅಡಿಗೊಂದರಂತೆ ಹರಡಿ, ಆ ಎರಡು ಬೊಂಬುಗಳಿಗೆ ಹಗ್ಗದಿಂದ ಬಿಗಿಯಾಗಿ ಕಟ್ಟುವರು. ಅದರ ಮೇಲೆ ಸತ್ತ ವ್ಯಕ್ತಿಯು ಬಳಸುವ ಮೆತ್ತನೆಯ ಹಾಸಿಗೆ, ದಿಂಬುಗಳನ್ನು ಇಟ್ಟು, ಹಗ್ಗದಿಂದ ಕಟ್ಟುವರು. ಅದರ ಮೇಲೆ ಶವವನ್ನು ಅಂಗಾತ ಮಲಗಿಸಿ ಶವದ ಮೇಲೆ ಬಿಳಿಯ ಬಟ್ಟೆಯನ್ನು ಹೊದಿಸುವರು. ಶವದ ಮೇಲೆ ವಿವಿಧ ರೀತಿಯ ಹೂವುಗಳಿಂದ ಅಲಂಕೃತಗೊಳಿಸುವರು. ಚಟ್ಟದ ನಾಲ್ಕು ಬದಿಯಲ್ಲಿ ಬಾಳೆಹಣ್ಣು, ಮೋಸಂಬಿ ಹಣ್ಣು, ಪೇರಲಹಣ್ಣು, ಸೇಬುಹಣ್ಣುಗಳನ್ನು ಕಟ್ಟುವರು. ಇದಕ್ಕಿಂತ ಪೂರ್ವದಲ್ಲಿ ಮನೆಯಲ್ಲಿ ಶವವನ್ನು ಕೂಡಿಸಿದಾಗ ಪುರುಷರು ಮರಣ ಹೊಂದಿದರೆ ಹೆಣದ ಪಕ್ಕದಲ್ಲಿ ಆತನ ಹೆಂಡತಿಗೆ ಹಸಿರು ಬಳೆಗಳನ್ನು ತೊಡಿಸಿ ಕೂಡಿಸುವರು. ಶವವನ್ನು ಚಟ್ಟಕ್ಕೆ ಹಾಕಿದಾಗ ಅದರ ಹಿಂದೆ ಹೆಂಡತಿ, ಮಕ್ಕಳು, ಬಂಧುಗಳು ಹೆಜ್ಜೆ ಹಾಕುವರು.

ಗ್ರಾಮದಲ್ಲಿ ಇತ್ತೀಚಿಗೆ ಚಟ್ಟ ತಯರಿಸುವಿಕೆಯಲ್ಲಿ ಆಧುನಿಕತೆಯನ್ನು ಕಂಡುಕೊಂಡಿದೆ. ಗ್ರಾಮದ ಎಲ್ಲಾ ಸಮುದಾಯದವರು ಕಬ್ಬಿಣದಿಂದ ಮಾಡಿದ ಡೋಲಿಯ ಚಟ್ಟವನ್ನು ಬಳಸುತ್ತಿದ್ದಾರೆ. ಈ ಡೋಲಿಯನ್ನು ಗ್ರಾಮದ ಹೊರಗಡೆ ಇಟ್ಟಿರುತ್ತಾರೆ. ಗ್ರಾಮದಲ್ಲಿ ಯಾರಾದರೂ ಮರಣ ಹೊಂದಿದಾಗ ಇದನ್ನು ತೆಗೆದುಕೊಂಡು ಬಂದು ವಿವಿಧ ರೀತಿಯ ಬಣ್ಣ ಬಣ್ಣದ ಹಾಳೆಗಳನ್ನು ಹಚ್ಚುವುದರ ಮೂಲಕ ಅಲಂಕಾರಗೊಳಿಸುವರು. ವಿವಿಧ ರೀತಿಯ ಹೂವಿನ ಮಾಲೆಗಳು, ವಿವಿಧ ರೀತಿಯ ಹಣ್ಣುಗಳನ್ನು ಈ ಡೋಲಿಗೆ ಕಟ್ಟುವುದರ ಮೂಲಕ ಸಿಂಗರಿಸುವರು. ಇದರಲ್ಲಿ ಮರಣ ಹೊಂದಿದ ವ್ಯಕ್ತಿಯನ್ನು ಕೂಡಿಸಿಕೊಂಡು ಶವ ಸಂಸ್ಕಾರ ಮುಗಿದ ಮೇಲೆ ಅದಕ್ಕೆ ಅಂಟಿಸಿದ ವಿವಿಧ ರೀತಿಯ ಹಾಳೆಗಳನ್ನು ತೆಗೆದು ಮತ್ತೆ ಊರಿನ ಹೊರಗೆ ಇದನ್ನು ಇಡುವ ಪದ್ದತಿ ಇತ್ತೀಚಿಗೆ ಪ್ರಾರಂಭವಾಗಿದೆ.

ವಿಧಿ-ವಿಧಾನ : ಹೆಣದ ಮುಂದೆ ಹಿರಿಯ ಮಗನಾದವನು ಹೆಗಲ ಮೇಲೆ ಅಥವಾ ತಲೆಯ ಮೇಲೆ ಕಂಬಳಿಯನ್ನು ಹೊದ್ದು ಕೈಯಲ್ಲಿ ಮಡಿಕೆಯಲ್ಲಿ ಬೆಂಕಿ ಕೆಂಡವನ್ನು ಹಾಕಿ ಅದನ್ನು ಹಿಡಿದುಕೊಂಡು ಸಾಗುತ್ತಾರೆ. ಸಾಗುವ ಸಮಯದಲ್ಲಿ ದಾರಿಯುದ್ದಕ್ಕೂ ನವಣೆ, ಕಾಸು(ಚಿಲ್ಲರೆ)

ಎರಚುವರು. ಇದರ ಜೊತೆಗೆ ಮಂಡಕ್ಕಿ, ಹಣ್ಣುಗಳನ್ನು ತೂರುವರು. ಏಕೆಂದರೆ ಸತ್ತ ವ್ಯಕ್ತಿಯು ಪ್ರೇತವಾಗಿ ಬರಬಾರದು. ಒಂದು ವೇಳೆ ಬಂದರೆ ಅವುಗಳನ್ನು ಆರಿಸಿಕೊಂಡು ಬರಲು ಆಗುವುದಿಲ್ಲ. ಆದಾಗ್ಯೂ ಒಂದೊಂದು ಪ್ರೇತಾತ್ಮಗಳು ಬರುವುದುಂಟು. ಆದ್ದರಿಂದ ಕೆಲವು ಹಿರಿಯರು ಶವದ ತಲೆಯ ಮೇಲೆ ಒಂದೆರಡು ಕಬ್ಬಿಣದ ಮೊಳೆಯನ್ನು ಬಡಿಯುತ್ತಿದ್ದರಂತೆ ಎಂದು ಕ್ಷೇತ್ರ ಅಧ್ಯಯನದ ಸಮಯದಲ್ಲಿ ಗ್ರಾಮಸ್ಥರು ಹೇಳಿದ್ದುಂಟು. ಆದರೆ ಇತ್ತೀಚಿಗೆ ಗ್ರಾಮದಲ್ಲಿ ಇಂತಹ ಆಚರಣೆ ಮಾಡುತ್ತಿಲ್ಲ.

ಶವವನ್ನು ಊರಿನ ತುಂಬೆಲ್ಲಾ ಮೆರವಣಿಗೆ ಮಾಡುವರು. ತಮಟೆ ನಾದ, ಸೊನಾಯ ಊದುವುದು, ಪ್ರಮುಖ ಬೀದಿಗಳಲ್ಲಿ ಪಟಾಕಿಗಳನ್ನು ಸಿಡಿಸುತ್ತಾ ಸಾಗುವರು. ಮನೆಯಿಂದ ಶವವನ್ನು ಎತ್ತಿದ ಕೂಡಲೇ ಮನೆಯಲ್ಲಿಯ ಹಿರಿಯ ವ್ಯಕ್ತಿಗಳು ಮನೆಯನ್ನೆಲ್ಲಾ ಕಸಗೂಡಿಸಿ, ನೀರನ್ನು ಚುಮುಕಿಸಿ, ಊದುಬತ್ತಿಯನ್ನು ಹಚ್ಚಿ, ಶವವನ್ನು ಕೂಡಿಸಿದ ಜಾಗದಲ್ಲಿ ಪಣತಿಯಲ್ಲಿ ದೀಪವನ್ನು ಹಚ್ಚಿಡುವರು. ಶವವು ಊರಿನ ಹೊರಗಡೆ ಹೋದ ಮೇಲೆ ಎಡ–ಬಲ ಶಾಸ್ತ್ರವನ್ನು ಮಾಡುವರು. ಹಿಂದೆ ಮತ್ತು ಮುಂದೆ ಶವವನ್ನು ಹೊತ್ತಿರುವವರು ತಮ್ಮ ಸ್ಥಾನವನ್ನು ಬದಲಾವಣೆ ಮಾಡುವರು. ಶವಕ್ಕೆ ಪೂಜೆಯನ್ನು ಮಾಡುವರು. ಪುರುಷ ಹೆಣವಾದಲ್ಲಿ ಆತನ ಹೆಂಡತಿಯ ಬಳೆಗಳನ್ನು ಒಡೆಯುವರು, ಕುಂಕುಮವನ್ನು ಒರೆಸುವರು, ತಾಳಿಯನ್ನು ತೆಗೆಯುವರು ನಂತರ ಶವವನ್ನು ಎತ್ತಿಕೊಂಡು ಶವ ಸಂಸ್ಕಾರ ಸ್ಥಳದಲ್ಲಿ ತರುವರು. ಅಲ್ಲಿ ಶವವನ್ನು ಸುಡುವುದಾದರೆ ಕಟ್ಟಿಗೆಯ ಮೇಲೆ ಶವವನ್ನು ಮಲಗಿಸುವರು. ಹಿರಿಯ ಮಗನ ಹೆಗಲ ಮೇಲೆ ನೀರಿರುವ ಮಡಿಕೆಯನ್ನು ಹೊರಿಸಿ ಮೂರು ಸುತ್ತು ಶವವನ್ನು ಪ್ರದಕ್ಷಿಣೆ ಹಾಕುವನು. ಆಗ ಮತ್ತೊಬ್ಬರು ಆ ಮಡಿಕೆಯನ್ನು ತೂತು ಮಾಡುವುದರ ಮೂಲಕ ನೀರನ್ನು ಖಾಲಿ ಮಾಡುವರು. ಅಲ್ಲಿಂದ ಹಿರಿಯ ಮಗನಾದವನು ಹಿಂತಿರುಗಿ ನೋಡದೆ ಮನೆಗೆ ಬರುವನು. ಅಲ್ಲಿ ಸೇರಿರುವ ಪ್ರತಿಯೊಬ್ಬರೂ ಶವದ ಮೇಲೆ ಹೂವನ್ನು ಹಾಕಿ ಅಂತಿಮವಾಗಿ ಅದಕ್ಕೆ ಅಗ್ನಿ ಸ್ಪರ್ಶವನ್ನು ಮಾಡುವರು. ಹೆಂಡತಿಯು ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಮನೆಗೆ ಕರೆದುಕೊಂಡು ಬರುವರು. ನಂತರ ಶವ ಸಂಸ್ಕಾರಕ್ಕೆ ಬಂದ ಬಂಧುಗಳು, ಆಪ್ತರು ತಮ್ಮ ತಮ್ಮ ಊರಿಗೆ ತೆರಳುವರು. ಅದೇ ಗ್ರಾಮದ ಜನರು ಊರಿನ ಹೊರವಲಯದಲ್ಲಿ ನೀರಿನಲ್ಲಿ ಕೈಕಾಲು ತೊಳೆದುಕೊಂಡು ಮನೆಯ ಹೊರಗಡೆ ಸ್ನಾನವನ್ನು ಮಾಡಿಕೊಂಡು ದೇವರ ಗುಡಿಗೆ ತೆರಳಿ ದೇವರಿಗೆ ನಮಸ್ಕಾರ ಮಾಡಿ ಬರುವರು.

ಶವದ ಮೆರವಣಿಗೆಯು ಎದುರಿಗೆ ಬಂದರೆ ಶುಭ ಸಂಕೇತ. ಆದರೆ ಶವ ಸಂಸ್ಕಾರವಾದ ಮೇಲೆ ಶವಸಂಸ್ಕಾರಕ್ಕೆ ಹೋದ ಜನರನ್ನು ಎದುರುಗೊಳ್ಳಬಾರದು ಹಾಗೂ ಅವರನ್ನು ನೋಡಬಾರದು. ಏಕೆಂದರೆ ಅಶುಭ ಎಂಬ ನಂಬಿಕೆ ಹ್ಯಾರಡಾ ಗ್ರಾಮೀಣ ಜನಪದರಲ್ಲಿ ಒಂದು ನಂಬಿಕೆಯಾಗಿದೆ. ಶವಸಂಸ್ಕಾರವಾದ ಮಾರನೆಯ ದಿನ ಹಿರಿಯ ಮಗನು ಶವಸಂಸ್ಕಾರದ ಬೂದಿಯನ್ನು ತೆಗೆದುಕೊಂಡು ಅದನ್ನು ನದಿಯಲ್ಲಿ ಹರಿಬಿಡುತ್ತಾನೆ. ನಂತರ ಬಂದು ತಲೆಗೂದಲನ್ನು ಕೊಟ್ಟು ಸ್ನಾನ ಮಾಡಿ ದೇವರಿಗೆ ಪೂಜೆಯನ್ನು ಸಲ್ಲಿಸುವರು.

ತಿಥಿಯೂಟ : ಸಾಮಾನ್ಯವಾಗಿ ಎಲ್ಲಾ ಸಮುದಾಯದವರು ಹನ್ನೊಂದು ದಿನಕ್ಕೆ ತಿಥಿಯೂಟವನ್ನು ಹಾಕುತ್ತಾರೆ. ಅಂದರೆ ಸತ್ತ ವ್ಯಕ್ತಿಗೆ ಯಾವ ಯಾವ ತಿನಿಸುಗಳು ಇಷ್ಟವಾಗಿರುತ್ತವೆಯೋ ಅವುಗಳನ್ನು ಇಟ್ಟು ಆತನ ಫೋಟೋವನ್ನು ಇಟ್ಟು ವಿಶೇಷ ಪೂಜೆಯನ್ನು ಮಾಡುವರು. ಬಂಧುಗಳು, ಆಪ್ತರು ಕರ್ಪೂರ, ಊದುಬತ್ತಿ, ಹಣ್ಣು, ಕಾಯಿ, ಎಲೆ, ಅಡಿಕೆಯನ್ನು ತೆಗೆದುಕೊಂಡು ಬಂದು ಪೂಜೆಯನ್ನು ಮಾಡಿ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ಸೇವಿಸುವರು. ಈ ಕಾರ್ಯಕ್ರಮಕ್ಕೆ ದೇವರು ಕಟ್ಟಿಕೊಂಡವರು, ದೇವರು ಹೊತ್ತವರು ಬರುವುದಿಲ್ಲ. ಈ ರೀತಿಯಾಗಿ ಆಚರಿಸುವುದರಿಂದ ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುವರು.

೪.೨ ವಾರ್ಷಿಕಾವರ್ತನ ಆಚರಣೆಗಳು

ಗ್ರಾಮೀಣ ಜನಪದರು ಪ್ರತಿ ವರ್ಷ ಆಚರಿಸುವ ಆಚರಣೆಗಳೇ ವಾರ್ಷಿಕಾವರ್ತನ ಆಚರಣೆಗಳಾಗಿವೆ. ನಾವು ಹರಪ್ಪಾ ನಾಗರಿಕತೆಯಿಂದ ಭಾರತೀಯ ಧಾರ್ಮಿಕ ವಲಯವನ್ನು ಓರೆಗೆ ಹಚ್ಚಿದಾಗ ಹಲವಾರು ವಿಚಾರಗಳು ನಮ್ಮ ಸ್ಮೃತಿ ಪಟಲದ ಮುಂದೆ ಹಾದು ಹೋಗುತ್ತವೆ. ಹರಪ್ಪ ಸಂಸ್ಕೃತಿಯಲ್ಲಿ ಪ್ರಕೃತಿಯ ವಿವಿಧ ವಸ್ತುಗಳನ್ನು ಆರಾಧಿಸುತ್ತಿದ್ದರು. ನದಿ, ಬೆಟ್ಟ, ಮಳೆ, ಸಿಡಿಲು, ಸೂರ್ಯ, ಚಂದ್ರ ಮುಂತಾದ ವಸ್ತುಗಳ ಮೇಲೆ ದೈವಿಕ ಭಾವನೆಯನ್ನು ತಳೆದಿದ್ದರು. ಬರುಬರುತ್ತಾ ಧಾರ್ಮಿಕ ವಲಯವು ಹಲವಾರು ಸ್ಥಿತ್ಯಂತರಗಳಿಗೆ ಒಳಪಟ್ಟು ತಮ್ಮದೇ ಆದ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡರು. ನಮ್ಮ ಪೂರ್ವಜರು ಅಮವಾಸ್ಯೆ, ಹುಣ್ಣಿಮೆಯ ದಿನದಂದು ವಿಶೇಷವಾದ ಪೂಜೆಯನ್ನು ಮಾಡುತ್ತಿದ್ದರು. ಅಂದರೆ ಸೂರ್ಯ ಚಂದ್ರರ ದಿಕ್ಕು ಬದಲಾಗುವ ಪರ್ವ. ಆ ದಿನದಂದು ಪ್ರಕೃತಿಯ ಮೇಲೆ ವಿಶೇಷವಾದ ಪ್ರಭಾವವನ್ನು ಬೀರುವುದುಂಟು. ಆದ್ದರಿಂದ ನಮ್ಮ ಪೂರ್ವಜರಿಗೆ ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನ ವಿಶೇಷವಾಗಿದೆ. ಬರುಬರುತ್ತಾ ಆಚರಣೆ ಹಾಗೂ ನಂಬಿಕೆಗಳು ಧರ್ಮದ ಎರಡು ವಿಶಿಷ್ಠ ಅಂಶಗಳಾದವು. ನಂತರದಲ್ಲಿ ವ್ಯಕ್ತಿಗಳಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆಚರಣೆಗಳು, ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆ, ಸಾಮಾಜಿಕ ಸಂಬಂಧಗಳಿಗೆ ಸಂಬಂಧಿಸಿದ ಆಚರಣೆಗಳು ತನ್ನ ಬದುಕಿಗೆ ಸಂಬಂಧಿಸಿದ ಆಚರಣೆಗಳು ರೂಢಿಗೆ ಬಂದವು.

ಅದರಲ್ಲೂ ವಿಶೇಷವಾಗಿ ಗ್ರಾಮೀಣ ಜನಪದರ ಜೀವನದಲ್ಲಿ ಆಚರಣಾ ಲೋಕದ ಹಂದರವನ್ನೇ ಕಾಣಬಹುದಾಗಿದೆ. ಗ್ರಾಮೀಣ ಜನಪದರು ವರ್ಷ ಪೂರ್ತಿ ದುಡಿದು ಬಿಡುವಿನ ವೇಳೆಯಲ್ಲಿ ತಮ್ಮ ದಣಿವನ್ನು ನಿವಾರಿಸಿಕೊಳ್ಳಲು ತಮ್ಮ ಬಂಧುಗಳು, ಮಕ್ಕಳು, ಆಪ್ತರ ಜೊತೆಗೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳಲು ಆಚರಣಾ ಲೋಕವನ್ನು ಸೃಷ್ಟಿಸಿಕೊಂಡರು. ಗ್ರಾಮೀಣ ಜನಪದರ ವರ್ಷದಲ್ಲಿ ಯಾವ ಹಬ್ಬವನ್ನು ಯಾವ ದಿನದಲ್ಲಿ ಆಚರಿಸಬೇಕು ಎಂದು ನಿರ್ಧರಿಸಿಕೊಂಡು ಪ್ರತಿ ವರ್ಷ ಆ ಹಬ್ಬಗಳನ್ನು ಆಚರಿಸುತ್ತಾರೆ. ಹೀಗೆ ಆಚರಿಸುವುದರ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

೪.೨.೧ ಭೀಮನ ಅಮವಾಸ್ಯೆ

ಈ ಹಬ್ಬವನ್ನು ಆಷಾಢ ಬಹುಳ ಅಮವಾಸ್ಯೆಯ ದಿನದಂದು ಆಚರಿಸುವರು. ಈ ಹಬ್ಬದ ಬಗ್ಗೆ ಕಥೆ ಹೀಗಿದೆ : "ಬಡತನದ ಬೇಗೆಯಲ್ಲಿ ಮುಳುಗಿ ಹೋಗಿದ್ದ ಒಬ್ಬ ಬಡ ಬ್ರಾಹ್ಮಣನು ತನ್ನ ಬಡತನವನ್ನು ನೀಗಿಸುವುದಕ್ಕೊಸ್ಕರ, ಒಬ್ಬ ರಾಜನ ಮಗನು ಸತ್ತಿರಲು, ಆ ಹೆಣಕ್ಕೆ ಮಗಳ ಕೊಟ್ಟು ಮದುವೆಯನ್ನು ಮಾಡಿದನು. ಹೀಗೆ ಶವಸಂಸ್ಕಾರವನ್ನು ಮಾಡಲು ನದಿಯ ತೀರಕ್ಕೆ ತೆಗೆದುಕೊಂಡು ಹೋಗಿ ನದಿಯ ದಡದಲ್ಲಿ ಹೆಣವನ್ನು ಇಟ್ಟು ರೋಧಿಸತೊಡಗುತ್ತಾಳೆ. ಯಾರೂ ಕೂಡ ಈಕೆಯ ಸಹಾಯಕ್ಕೆ ಬರುವುದಿಲ್ಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಆ ಮಹಿಳೆ ತನ್ನ ಅಸಹಾಯಕತೆಯನ್ನು ಹೀಗೆ ವ್ಯಕ್ತಪಡಿಸುವಳು.

ಕಾರೆಂಬೋ ಕತ್ತಲೆ, ಭೋರೆಂಬೋ ಮಳೆ ಹುಯ್ಲು
ಅರಣ್ಯದೊಳಗವನಾ ಇಳಿಸಿದರು
ನಾರಿ ನಿನ್ನರಸನ್ನ ಕಾಯ್ದುಕೊಂಡಿರು ಎಂದು
ಭೋರನೆ ಅಲ್ಲಿಂದ ತೆರಳಿದರು ॥

ಹೀಗೆ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಲೇ ನದಿಯ ದಂಡೆಯ ಮರಳಿನಲ್ಲಿಯೇ ಪಣತಿಯನ್ನು ಮಾಡಿ ಅದರಲ್ಲಿ ನೀರನ್ನೇ ಹಾಕಿ ದೀಪವನ್ನು ಹಚ್ಚುತ್ತಾಳೆ. ನಂತರ ಪರಿ-ಪರಿಯಾಗಿ ಶಿವ-ಪಾರ್ವತಿಯನ್ನು ಪ್ರಾರ್ಥಿಸುತ್ತಾಳೆ. ಆಗ ಶಿವ-ಪಾರ್ವತಿಯರು ಈ ಮಹಿಳೆಯ ರೋಧನವನ್ನು ಕಂಡು ಪ್ರತ್ಯಕ್ಷರಾಗುತ್ತಾರೆ. ಆಗ ಶಿವ-ಪಾರ್ವತಿಯರು ನಿನಗೆ ಏನು ವರಬೇಕು ಎಂದು ಕೇಳಿದಾಗ ತನ್ನ ಪತಿ ದೇವರನ್ನು ಬದುಕಿಸಿಕೊಡಲು ಪ್ರಾರ್ಥಿಸುತ್ತಾಳೆ. ಆಗ ಶಿವ-ಪಾರ್ವತಿಯರು ಸತ್ತ ಗಂಡನನ್ನು ಬದುಕಿಸಿ ಕೊಡುವರು ಎಂಬ ಕಥೆಯನ್ನು ನೋಡಬಹುದಾಗಿದೆ"(ವಾಗೀಶ್ವರಿ ಶಾಸ್ತ್ರಿ : ೧೯೮೩:೧೦). ಇಲ್ಲಿ ಮಹಿಳೆಯು ಪತಿಯೇ ದೈವ, ಸರ್ವಸ್ವ ಎಂಬ ನಿರ್ಮಲ ಮನಸ್ಸಿನಿಂದ ಸ್ವೀಕರಿಸಿದ್ದಾಕ್ಕಾಗಿ ಪತಿವ್ರತೆಯ ಕುರುಹನ್ನು ಕಾಣಬಹುದಾಗಿದೆ. ಅಂದಿನಿಂದ ಎಲ್ಲಾ ಹೆಣ್ಣು ಮಕ್ಕಳು ಪತಿಯ ಶ್ರೇಯೋಭಿವೃದ್ಧಿಗೆ ಭೀಮನ ಅಮವಾಸ್ಯೆಯನ್ನು ಆಚರಿಸುವರು. ಈ ದಿನದಂದು ಹ್ಯಾರಡಾದ ಜನಪದರು ಮಣ್ಣಿನಿಂದ ಮಾಡಿದ ಐದು ಪಣತಿಯ ಕುಡಿಕೆಗಳನ್ನು ತೆಗೆದುಕೊಂಡು ಅದರಲ್ಲಿ ಎಣ್ಣೆ, ಬತ್ತಿಯನ್ನು ಹಾಕಿ ದೀಪವನ್ನು ಹಚ್ಚಿ ಪ್ರತಿ ಮನೆಯ ಬಾಗಿಲುಗಳ ಪಕ್ಕದಲ್ಲಿ ಇರಿಸುವರು. ನಂತರ ವಿಶೇಷವಾದ ಪೂಜೆಯನ್ನು ಮಾಡಿ ಪತಿಯ ಕಾಲಿಗೆರಗಿ ಆಶೀರ್ವಾದವನ್ನು ಪಡೆಯುವರು.

೪.೨.೨ ರಕ್ಷಾ ಬಂಧನ

ಸಾಮಾನ್ಯವಾಗಿ ಈ ಹಬ್ಬವನ್ನು ಶ್ರಾವಣ ಮಾಸದಂದು ಆಚರಿಸುತ್ತಾರೆ. ನಮ್ಮ ಪೂರ್ವಜರು ರಾಜ-ಮಹಾರಾಜರುಗಳ ಆಡಳಿತದ ಅವಧಿಯಲ್ಲಿ ಪತಿಯರು ಯುದ್ಧಕ್ಕೆ ಹೊರಡುವಾಗ ಪತ್ನಿಯರು ತನ್ನ ಪತಿ ಸುರಕ್ಷಿತವಾಗಿ ಗೆದ್ದು ಬರಲಿ ಎಂದು ಪತಿಯ ಮುಂಗೈಗೆ ಶ್ರೀರಕ್ಷೆಯೆಂದು ಕೆಲವು ರಕ್ಷಾ ಎಳೆಗಳನ್ನು ಕಟ್ಟುತ್ತಿದ್ದರು. ಅದು ಬರುಬರುತ್ತಾ ರಕ್ಷಾ ಬಂಧನವಾಯಿತು. ಈ ದಿನದಂದು

ಸೋದರಿಯರು ತಮ್ಮ ಸಹೋದರರಿಗೆ ದಾರವನ್ನು ಕಟ್ಟುವ ಆಚರಣೆ ಬಹು ಮುಖ್ಯವಾದುದು. ಇತ್ತೀಚಿಗೆ ಈ ಆಚರಣೆಯು ಹೆಚ್ಚು ಜನಪ್ರಿಯವಾಗುತ್ತಿದೆ. ಮಾರುಕಟ್ಟೆಗಳಲ್ಲಿ ವಿವಿಧ ರೀತಿಯ ರಾಖಿಗಳು ರಾರಾಜಿಸುತ್ತಿವೆ. ಹ್ಯಾರಡಾ ಜನಪದರೂ ಕೂಡ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಬೇರೆ ಊರಿಗೆ ಮದುವೆ ಮಾಡಿ ಕೊಟ್ಟ ಹೆಣ್ಣು ಮಕ್ಕಳು ತಮ್ಮ ತವರಿಗೆ ಬಂದು ಅಣ್ಣ, ತಮ್ಮಂದಿರಿಗೆ ರಾಖಿಯನ್ನು ಕಟ್ಟುವುದು ಬಹಳ ವಿಶಿಷ್ಟವಾಗಿದೆ.

ಈ ದಿನದಂದು ಉತ್ತರ ದಿಕ್ಕಿಗೆ ಮುಖಮಾಡಿ ಕರಿ ಕಂಬಳಿಯನ್ನು ಹಾಸಿ ಅದರ ಮೇಲೆ ಐದು ಗುಂಪಿನ ಅಕ್ಕಿಯನ್ನು ಹಾಕುವರು. ಅದರ ಮೇಲೆ ಸಹೋದರರನ್ನು ಕೂಡಿಸುವರು. ವೀಳ್ಯೆದೆಲೆ ಹಾಗೂ ಹೂವಿನಿಂದ ಕಟ್ಟಿದ ಕಂಕಣವನ್ನು ಬಲಗೈಗೆ ಕಟ್ಟುವರು. ಹಣೆಗೆ ವಿಭೂತಿ, ಕುಂಕುಮ, ಬಂಢಾರವನ್ನು ಹಚ್ಚುವರು. ಬಲಗೈಗೆ ಚಿತ್ತಾಕರ್ಷಕವಾದ ರಾಖಿಯನ್ನು ಕಟ್ಟಿ ಆರತಿಯನ್ನು ಬೆಳಗಿ ಸಹೋದರರ ಬಾಯಿಗೆ ಸಿಹಿಯನ್ನು ತಿನಿಸುವರು. ಅದಕ್ಕೆ ಪ್ರತಿಯಾಗಿ ಸಹೋದರರು ಸಹೋದರಿಯರಿಗೆ ಸೀರೆ, ಹಣ, ಬಂಗಾರವನ್ನು ಉಡುಗೊರೆಯಾಗಿ ಕೊಡುವರು. ಈ ಸಂಪ್ರದಾಯವು ಇತ್ತೀಚಿಗೆ ಹ್ಯಾರಡಾ ಗ್ರಾಮದಲ್ಲಿ ಜನಪ್ರಿಯವಾಗಿದೆ.

ಮೊದ-ಮೊದಲು ಹ್ಯಾರಡಾ ಗ್ರಾಮದಲ್ಲಿ ಸಾಂಪ್ರದಾಯಿಕ ರಾಖಿಗಳನ್ನು ಕಟ್ಟುತ್ತಿದ್ದರು. ಉಲ್ಲಾಣದಿಂದ ಮಾಡಿದ ವಿವಿಧ ಬಣ್ಣದ ರಾಖಿಗಳನ್ನು ಬಳಸುತ್ತಿದ್ದರು. ಆದರೆ ಇತ್ತೀಚಿಗೆ ಮಾರುಕಟ್ಟೆಯಲ್ಲಿ ವಿವಿಧ ರೀತಿಯ ರಾಖಿಗಳನ್ನು ಕಾಣಬಹುದು. ಪ್ಲಾಸ್ಟಿಕ್ ಹಾಳೆಗಳನ್ನು ವಿವಿಧ ರೀತಿಯಲ್ಲಿ ಕತ್ತರಿಸಿ ಚಿತ್ತಾಕರ್ಷಕವಾಗಿ ನಿರ್ಮಿಸಿದ ರಾಖಿಗಳನ್ನು ಬಳಸುತ್ತಿದ್ದಾರೆ. ಇತ್ತೀಚಿಗೆ ಶ್ರೀಮಂತರು ಬೆಳ್ಳಿ ಹಾಗೂ ಬಂಗಾರದಿಂದ ನಿರ್ಮಿಸಿದ ರಾಖಿಗಳನ್ನು ಬಳಸುವುದನ್ನು ಕಾಣಬಹುದಾಗಿದೆ. ಹೀಗೆ ರಾಖಿಯಲ್ಲಿಯೂ ಕೂಡ ವಿವಿಧ ಸ್ಥಿತ್ಯಂತರವನ್ನು ಕಾಣಬಹುದಾಗಿದೆ.

೪.೨.೩ ನಾಗರ ಪಂಚಮಿ

ನಾವು ವೇದಗಳನ್ನು ಅಧ್ಯಯನ ಮಾಡಿದಾಗ ದ್ರಾವಿಡರು ಹೆಚ್ಚಾಗಿ ನಾಗರ ಹಾವನ್ನು ಪೂಜಿಸುತ್ತಿದ್ದರು. ಆದ್ದರಿಂದ ವೇದಗಳಲ್ಲಿ ಇವರನ್ನು ನಾಗೋಪಾಸಕರು ಎಂದು ಕರೆಯುವುದುಂಟು. ತಮಿಳುನಾಡಿನಲ್ಲಿ ಈಗಲೂ ಕೂಡ 'ಮುರುಗನ್' ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತಾರೆ. ಮುರುಗನ್ ಎಂದರೆ ನಾಗರ ಎಂದರ್ಥ. ಮುರುಗನ್ ಎಂಬ ಹೆಸರಿನ ಹಲವಾರು ವ್ಯಕ್ತಿಗಳನ್ನು ತಮಿಳುನಾಡಿನಲ್ಲಿ ಕಾಣಬಹುದಾಗಿದೆ. ಈ ಹಬ್ಬಕ್ಕೆ ಒಂದು ಕಥೆಯಿದೆ. "ಹಿಂದಿನ ಕಾಲದಲ್ಲಿ ಒಬ್ಬ ಮಹಿಳೆಯು ಹಬ್ಬದ ದಿನದಂದು ಅಣ್ಣನಿಗೆ ಹೂವನ್ನು ತರಲು ಹೇಳುವಳು. ಆಗ ಅಣ್ಣನು ಒಂದು ಪೊದೆಯಲ್ಲಿ ಹೂವನ್ನು ಕೀಳುವಾಗ ನಾಗರ ಹಾವು ಕಡಿದು ಆತ ಮೃತಪಡುವನು. ಆಗ ಆ ಮಹಿಳೆಯು ಶವದ ಮುಂದೆ ಕುಳಿತು ರೋಧಿಸುವಾಗ ನಾಗಪ್ಪ ಪ್ರತ್ಯಕ್ಷವಾಗಿ ಆತನ ಮೈಮೇಲಿನ ವಿಷವನ್ನೆಲ್ಲಾ ಹೀರಿಕೊಂಡು ಆ ವ್ಯಕ್ತಿಯನ್ನು ಬದುಕುಳಿಸಿದ. ಅಂದಿನಿಂದ ನಾಗರಹಾವಿಗೆ ವಿಶೇಷ ಪೂಜೆಯನ್ನು ಮಾಡುವ ಹಬ್ಬ ನಾಗರಪಂಚಮಿಯಾಗಿದೆ"(ವಾಗೀಶ್ವರಿ ಶಾಸ್ತ್ರಿ : ೧೯೮೩:೧೧). ಈ ಹಬ್ಬವು

ಒಡಹುಟ್ಟಿದವರ ಒಂದು ಬಾಂಧವ್ಯದ ಸಂಕೇತವಾಗಿದೆ. ಅಕ್ಕ, ತಮ್ಮ, ಅಕ್ಕ, ತಂಗಿ, ಅಣ್ಣ, ಒಡಹುಟ್ಟಿದವರೆಲ್ಲಾ ಸೇರಿಕೊಂಡು ಪರಸ್ಪರ ಶುಭಾಷಯಗಳನ್ನು ಹೇಳುತ್ತಾ ಅತ್ಯಂತ ವಿಜೃಂಭಣೆಯಿಂದ ಮಾಡುವ ಹಬ್ಬವಾಗಿದೆ.

"ನಾಗರ ಪಂಚಮಿ ನಾಡಿಗೆ ದೊಡ್ಡದು
ನಾಡ-ನಾರಿಯರು ಕೂಡೂವ-ಗೆಳೆತವ್ವ
ನಾಗಪ್ಪ ಗ್ಹಾಲ ಎರೆಯೋಣ"

ಎಂದು ಗ್ರಾಮೀಣ ಜನಪದರು ತಮ್ಮ ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಹ್ಯಾರಡಾ ಜನಪದರ ಅತೀ ಮುಖ್ಯವಾದ ಹಬ್ಬ ನಾಗರ ಪಂಚಮಿ. ಈ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುವರು. ಈ ಹಬ್ಬಕ್ಕೆ ಗಂಡನ ಮನೆಗೆ ಹೋದ ಹೆಣ್ಣು ಮಕ್ಕಳು ತಪ್ಪದೇ ತವರಿಗೆ ಬರುವರು. ಹಬ್ಬ ಆಚರಿಸುವುದಕ್ಕಿಂತ ಪೂರ್ವದಲ್ಲಿ ವಿವಿಧ ರೀತಿಯ ಉಂಡೆಗಳನ್ನು ಕಟ್ಟುವರು. ಎಳ್ಳುಂಡೆ, ಕಡ್ಲಿ ಉಂಡೆ, ಪುಟಾಣಿ ಉಂಡೆ, ಮಂಡಕ್ಕಿ ಉಂಡೆ, ರವೆ ಉಂಡೆ, ಬೇಸನ್ ಉಂಡೆ, ಹುರಕ್ಕಿ ಉಂಡೆ ಹೀಗೆ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ರಾತ್ರಿ ಪೂರ್ತಿ ಎಚ್ಚರವಿದ್ದು ತಯಾರಿಸುವರು. ನಂತರ ಮಾರನೇಯ ದಿನ ಬೇಗ ಎದ್ದು, ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ, ಮನೆ ಮಂದಿಯಲ್ಲಾ ಸ್ನಾನ ಮಾಡುವರು. ಎಲ್ಲರೂ ಹೊಸ ಉಡುಪುಗಳನ್ನು ಧರಿಸುವರು. ಮನೆಯ ಮುಂದೆ ಹೆಣ್ಣು ಮಕ್ಕಳು ವಿವಿಧ ರೀತಿಯ ರಂಗೋಲಿಯನ್ನು ಬಿಡಿಸುವರು. ಪೂಜೆಗಾಗಿ ಅರಿಶಿಣ, ಕುಂಕುಮ, ವಿಭೂತಿ, ಹೂವು, ಪತ್ರೆ, ಅರಳು ತಂಬಿಟ್ಟು, ಕೊಬ್ಬರಿ ನೈವೇದ್ಯವನ್ನು ತಯಾರಿಸುವರು. ಕೆಲವು ಹೆಣ್ಣು ಮಕ್ಕಳು ಬೆಳಗುವ ಹಣತೆಗಳನ್ನು ಮನೆಯ ತುಂಬೆಲ್ಲಾ ಹಚ್ಚುವರು. ಚಿಕ್ಕ ಮಕ್ಕಳು ಒಣ ಕೊಬ್ಬರಿಯನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಕತ್ತರಿಸಿ ಒಂದು ಭಾಗವನ್ನು ಬುಗುರಿಯನ್ನಾಗಿ ಮಾಡಿಕೊಳ್ಳುವರು. ನಾಗರ ಪಂಚಮಿಯಂದು ಗ್ರಾಮದ ಬಹುತೇಕ ಮಕ್ಕಳ ಕೈಯಲ್ಲಿ ಈ ಬುಗುರಿಯನ್ನು ಕಾಣಬಹುದು. ನಂತರ ಪ್ರತಿಯೊಂದು ಮನೆಗಳಲ್ಲಿ ಹದಿನೈದು ದಿನ ಮುಂಚಿತವಾಗಿ ತೆಂಗಿನ ಖಾಲಿ ಚಿಪ್ಪು, ಮಣ್ಣಿನ ಕುಡಿಕೆಗಳಲ್ಲಿ ರಾಗಿ, ಭತ್ತ, ಗೋದಿ, ಜೋಳದ ಬೀಜಗಳನ್ನು ಹಾಕಿ ಸೋಂಪಾಗಿ ಸಸ್ಯಗಳನ್ನಾಗಿ ಬೆಳೆಸಿರುತ್ತಾರೆ.

ಆಗ ಮನೆಯ ಹೆಣ್ಣು ಮಕ್ಕಳು ಪಕ್ಕದ ಮನೆಯ ಗೆಳತಿಯರೆಲ್ಲಾ ಕೂಡಿಕೊಂಡು, ವಿವಿಧ ರೀತಿಯ ಅಲಂಕಾರಗಳನ್ನು ಮಾಡಿಕೊಂಡು ಪೂಜಾ ಸಾಮಾಗ್ರಿಗಳು, ಹಾಲು, ವಿವಿಧ ನೈವೇದ್ಯ ಬೆಳೆಸಿದ ಸಸಿಗಳನ್ನು ತೆಗೆದುಕೊಂಡು ಸಂಗಮೇಶ್ವರ ದೇವಸ್ಥಾನದ ಪಕ್ಕದಲ್ಲಿನ ನಾಗರ ಮೂರ್ತಿಗಳಿಗೆ ವಿಶೇಷವಾದ ಹಾಲಿನ ನೈವೇದ್ಯವನ್ನು ಮಾಡುವರು. ಸಂಭ್ರಮದಿಂದ ಕೊಬ್ಬರಿ ಬಟ್ಟಲಿನಿಂದ ಹಾಲೆರೆಯುವರು. ನಂತರ ಮನೆಗೆ ಹಿಂದಿರುಗಿ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ಸೇವಿಸುವರು. ಸಾಯಂಕಾಲ ಸಮಯದಲ್ಲಿ ಚಿಕ್ಕ-ಚಿಕ್ಕ ಮಕ್ಕಳು ಮನೆಯಲ್ಲಿನ ಜಂತಿಗಳಿಗೆ ಹಗ್ಗವನ್ನು ಕಟ್ಟಿ ಜೋಕಾಲಿ ಆಡುವರು. ಹೆಣ್ಣುಮಕ್ಕಳು, ಯುವಕರು ಊರಿನ ಹೊರವಲಯದಲ್ಲಿ ದೊಡ್ಡ-ದೊಡ್ಡ

ಮರಗಳಿಗೆ ಹಗ್ಗವನ್ನು ಕಟ್ಟಿ ಜೋಕಾಲಿ ಆಡುವರು. ಜೋಕಾಲಿಯಲ್ಲಿ ಒಬ್ಬ ಹೆಣ್ಣು ಮಗಳು ಕೂತರೆ ಇಬ್ಬರು ಹೆಂಗಸರು, ಇಲ್ಲವೇ ಗಂಡಸರು ಜೋರಾಗಿ ತೂಗುವರು. ಕುಳಿತ ಹೆಣ್ಣುಮಕ್ಕಳೂ ಜೀಕಿ ಮೇಲೇರುವರು. ಆಗ ಅವರ ಖುಷಿ ಸ್ವರ್ಗಕ್ಕೆ ಮೂರೇ ಗೇಣು ಉಳಿದಂತೆ ತೋರುತ್ತದೆ. ನಂತರ ಗಂಡಸರು ಜೋಕಾಲಿಯ ಮೇಲೆ ನಿಂತು ತಮ್ಮ ಪ್ರೇಯಸಿಯನ್ನು ನೋಡುತ್ತಾ, ಕೇಕೆಯನ್ನು ಹಾಕುತ್ತಾ ಅತೀ ವೇಗವಾಗಿ ಜೋಕಾಲಿಯನ್ನು ಆಡುವರು. ಹೀಗೆ ತಾವು ಮದುವೆ ಆಗುವ ಹುಡುಗಿಯರು ಇದ್ದರೆ ಸಾಕು ಹುಡುಗರು ಹಗ್ಗವನ್ನು ಹಿಡಿದುಕೊಳ್ಳದೇ ಜೋರಾಗಿ ಜೀಕುವರು. ಇಂತಹ ಸಂದರ್ಭದಲ್ಲಿ ಕೆಳಗೆ ಬಿದ್ದು ಕೈ, ಕಾಲುಗಳನ್ನು ಮುರಿದುಕೊಂಡ ಸಂದರ್ಭಗಳೂ ಉಂಟು.

ನಂತರ ಗ್ರಾಮದ ಯುವಕರ ವಿವಿಧ ಗುಂಪುಗಳು ವಿವಿಧ ರೀತಿಯ ಮೋಜಿನ ಆಟಗಳನ್ನು ಆಡುವುದುಂಟು. ಗೋಲಿ ಆಟ, ಕಲ್ಲಿನ ಗುಂಡನ್ನು ಎತ್ತುವುದು, ಕಣ್ಣನ್ನು ಮುಚ್ಚಿ ಗೊತ್ತಾದ ಸ್ಥಳಕ್ಕೆ ಹೋಗುವುದು, ಲಗ್ಗೆ ಆಟಗಳು ಮುಂತಾದ ಆಟಗಳನ್ನು ಆಡುವುದರ ಮೂಲಕ ಅತ್ಯಂತ ವಿಶಿಷ್ಟವಾಗಿ ಈ ಹಬ್ಬವನ್ನು ಆಚರಿಸುವರು. ಒಡಹುಟ್ಟಿದವರು ಈ ದಿನ ವಿಶೇಷವಾಗಿ ಶುಭಾಷಯವನ್ನು ಕೋರುವರು.

ನಾಗರ ಪಂಚಮಿಯು ಬರುಬರುತ್ತಾ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಇತ್ತೀಚಿಗೆ ಸಸಿಗಳನ್ನು ಹಾಕುವ ಪದ್ಧತಿಯನ್ನು ಕೈಬಿಡಲಾಗಿದೆ. ಪಂಚಮಿಯ ದಿನದಂದು ಆಡುವ ವಿಶೇಷ ಆಟಗಳು ಕೇವಲ ನಾಮಕಾವಸ್ಥೆಗೆ ಸೀಮಿತವಾಗಿವೆ. ಅದರ ಅಬ್ಬರ ಹಾಗೂ ತೀವ್ರತೆಯ ಪ್ರಮಾಣ ಕಡಿಮೆ ಆಗಿರುವುದನ್ನು ಇತ್ತೀಚಿಗೆ ಗಮನಿಸಬಹುದಾಗಿದೆ.

"ಆಡಿನ ಮೊಲೆ ಹಂಗೆ ಜೋಡಿ ನಾವಿಬ್ಬರು
ಆಡಬ್ಯಾಡ ತಂಗಿ ಕದನವ । ಜಗಳಕ
ಜೋಡಿನ ಹಕ್ಕಿ ಅಗಲ್ಯಾವ ॥"

"ಅತ್ತಿಗೆ ಬಸುರಾಗ್ಲಿ ಹತ್ತೆಮ್ಮೆ ಕರೆಯಲಿ
ಅತ್ತೆಮ್ಮ ಎಂದು ಕೂಗಲಿ । ಅಣ್ಣಯ್ಯ
ಹೆಚ್ಚು ಸುಖಿಯಾಗಿ ನೀ ಬಾಳೊ ॥"

"ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೇಲಿರುವ ಕರಕೀಯ । ಕುಡಿ ಹಂಗ
ಹಬ್ಬಲೆ ಅದರ ರಸಬಳ್ಳಿ ॥"

ಈ ರೀತಿಯಾಗಿ ಜನಪದರು ತಮ್ಮ ಹಾಡಿನಲ್ಲಿ ಹಾಡಿ ಹೊಗಳಿದ್ದಾರೆ.

೪.೨.೪ ದೀಪಾವಳಿ

ಈ ಹಬ್ಬವನ್ನು ಸಾಮಾನ್ಯವಾಗಿ ಬೆಳಕಿನ ಹಬ್ಬವೆಂದು ಕರೆಯುವರು. ಹ್ಯಾರಡಾ ಗ್ರಾಮದ ಜನಪದರು ಗ್ರಾಮ್ಯ ಭಾಷೆಯಲ್ಲಿ 'ಹಟ್ಟಿ ಹಬ್ಬ' ಎಂದು ಕರೆಯುವರು. ಮೂಲತಃ ಇದನ್ನು ಐದು ದಿನಗಳ ಕಾಲ ಆಚರಿಸುವುದುಂಟು. ಆದರೆ ಇತ್ತೀಚಿಗೆ ಈ ಹಬ್ಬವನ್ನು ಒಂದು ಅಥವಾ ಎರಡು ದಿನಗಳಲ್ಲಿ ಆಚರಿಸುವರು. ಗ್ರಾಮೀಣ ಜನಪದರಿಗಂತೂ ಈ ಹಬ್ಬ ಹೆಚ್ಚು ಖುಷಿ ಕೊಡುವ ಹಬ್ಬವಾಗಿದೆ. ಏಕೆಂದರೆ ಹೊಲ ಗದ್ದೆಗಳಲ್ಲಿ ಹಚ್ಚ-ಹಸಿರಿನ ಪೈರು ತುಂಬಿರುತ್ತದೆ. ರೈತನ ಶ್ರಮಕ್ಕೆ ಫಲ ನೀಡುವ ಸಮಯವದು. ಹೊಸದಾಗಿ ಮದುವೆಯಾಗಿ ಅಳಿಯನಾದ ವ್ಯಕ್ತಿಗಂತೂ ಈ ಹಬ್ಬ ಅತ್ಯಂತ ಆನಂದದಾಯಕ ದಿನಗಳಾಗಿವೆ. ಉತ್ತರ ಕರ್ನಾಟಕದಲ್ಲಂತೂ ಹಬ್ಬದಲ್ಲಿ ಹೊಸದಾಗಿ ಅಳಿಯರಾದವರಿಗೆ ಈ ದಿನ ವಿಶೇಷವಾದ ಊಟ, ಉಪಚಾರಗಳನ್ನು ಮಾಡುವುದುಂಟು. ಈ ದಿನ ಅಳಿಯನನ್ನು ಕರೆದು ಹೊಸ ಬಟ್ಟೆಗಳನ್ನು ಕೊಡಿಸುವರು. ಕಾಣಿಕೆಯನ್ನು ಕೊಡುವರು. ಈ ದಿನದಲ್ಲಿ ಮನೆಯಲ್ಲಿ ಸಂಭ್ರಮದ ವಾತಾವರಣ ತುಂಬಿರುತ್ತದೆ.

ಹ್ಯಾರಡಾದ ಜನಪದರೆಲ್ಲರೂ ಆ ದಿನ ಮುಂಜಾನೆ ಎದ್ದು ತಮ್ಮ ತಮ್ಮ ಬಚ್ಚಲು ಮನೆ, ಹಂಡೆ, ಕೊಳ ಮುಂತಾದವುಗಳನ್ನು ಶುಚಿಗೊಳಿಸುವರು. ಒಲೆ, ಒಡೇವು ಹೀಗೆ ಇವುಗಳನ್ನು ಸಗಣಿ, ಸುಣ್ಣ, ಕೆಮ್ಮಣ್ಣಿನಿಂದ ಬಳಿಯುವರು. ಮನೆಯ ಗೋಡೆಯ ಮೇಲೆಲ್ಲಾ ವಿಶಿಷ್ಟವಾದ ಚಿತ್ರಗಳನ್ನು ಬಿಡಿಸುವರು. ಮನೆಯ ಮುಂದೆ ರಂಗೋಲಿಯನ್ನು ಹಾಕುವರು. ಸುಣ್ಣದ ನೀರಿನಿಂದ ಪ್ರತಿಯೊಂದು ಬಾಗಿಲಕ್ಕೆ ಸುಣ್ಣದ ನೀರಿನ ಜೋರನ್ನು ಬಿಡುವರು. ಬಾಗಿಲಿನ ಮುಂದೆ ದನ ಕರುಗಳ ಕಾಲಿನ ಪಾದದ ಚಿತ್ರಗಳನ್ನು ಸುಣ್ಣದಿಂದ ಬಿಡಿಸುವರು. ಮತ್ತೊಂದು ವಿಶೇಷವೆಂದರೆ ಸಗಣಿಯಿಂದ ಗುರ್ಜಿಯನ್ನು ಮಾಡಿ ಅದರ ಮೇಲೆ ಉತ್ರಾಣಿ ಕಡ್ಡಿ, ಸ್ಥಳೀಯವಾಗಿ ಸಿಗುವ ಹೊನ್ನಾರ್ಕಿ ಗಿಡದ ಹೂವು, ಬಿಳಿತುಂಬೆ ಗಿಡ (ಇದನ್ನು ಗ್ರಾಮ್ಯ ಭಾಷೆಯಲ್ಲಿ ಹಾಲು_ಮೊಸರು ಎನ್ನುವರು) ಚೆಂಡು ಹೂವು , ಕುಂಕುಮ, ಐದು ಸುತ್ತು ದಾರದ ಎಳೆಗಳನ್ನು ಹಾಕಿ ವಿಶೇಷವಾಗಿ ಅಲಂಕರಿಸಿ ಪ್ರತಿಯೊಂದು ಬಾಗಿಲಿನ ಎರಡು ಬದಿ ಇಡುವರು. ದನ ಕರುಗಳ ಹಟ್ಟಿ, ಜೋಳದ ರಾಶಿ, ಗೊಬ್ಬರದ ರಾಶಿ, ಹಗೇವು, ಹೊಲಗಳಲ್ಲಿ ಇದನ್ನು ಇಟ್ಟು ವಿಶೇಷವಾಗಿ ಪೂಜಿಸುವರು. ಮನೆಯ ತುಂಬೆಲ್ಲಾ ಹೊನ್ನಾರ್ಕಿ ಗಿಡದ ಹೂವುಗಳನ್ನು ಚೆಲ್ಲುವರು. ಅಂದಿನ ದಿನ ಹೋಳಿಗೆ ಊಟ ಸರ್ವೇಸಾಮಾನ್ಯವಾಗಿರುತ್ತದೆ. ಅಂದು ಸಂಜೆಯಾಗುತ್ತಲೇ ಚಿಕ್ಕ ಮಕ್ಕಳು ತಮ್ಮ ತಮ್ಮ ಮನೆಯ ಮುಂದೆ ಪಂಜುಗಳನ್ನು ಹಚ್ಚುವರು. ಲಕ್ಕಿ ಗಿಡದ ಒಣಗಿದ ಕಾಂಡಗಳನ್ನು ಕಟ್ಟಿ ಪಂಜುಗಳನ್ನಾಗಿ ತಯಾರಿಸುವರು. ಎಳ್ಳಿನ ಗಿಡದ ಒಣಗಿದ ಕಾಂಡದ ಪಂಜುಗಳನ್ನು ಬಹುತೇಕವಾಗಿ ಉರಿಸುವರು. ಓಣಿಯ ತುಂಬೆಲ್ಲಾ ಈ ಪಂಜುಗಳನ್ನು ಹಿಡಿದುಕೊಂಡು ಮಕ್ಕಳು ಸಂಭ್ರಮಿಸುವರು.

ಇನ್ನು ಮೂರನೇಯ ದಿನ ಬಲಿ ಪಾಡ್ಯಮಿ ಹಬ್ಬವನ್ನು ಆಚರಿಸುವರು, ಈ ಹಬ್ಬಕ್ಕೆ ತನ್ನದೇ ಆದ ಕಥೆಯನ್ನು ಹೊಂದಿದೆ. "ಮಹಾ ಬಲಶಾಲಿಯಾದ, ಹರಿಯ ಭಕ್ತನೂ ಆಗಿದ್ದ ಬಲಿ

ಚಕ್ರವರ್ತಿಯು ಮಹಾ ಗರ್ವಿಯಾಗಿದ್ದನು. ಹೇಗಾದರು ಮಾಡಿ ಈತನ ದರ್ಪವನ್ನು ಅಡಗಿಸಬೇಕೆಂದು ದೇವತೆಗಳೆಲ್ಲರೂ ನಿಶ್ಚಯ ಮಾಡಿದರು, ದೇವತೆಗಳ ಪ್ರಾರ್ಥನೆಯಂತೆ ವಿಷ್ಣುವು ಕಶ್ಯಪ ಪುತ್ರ 'ವಾಮನ'ನಾಗಿ ಧರೆಯಲ್ಲಿ ಅವತರಿಸಿದನು. ವಾಮನನು ಬಾಲ ಬ್ರಹ್ಮಚಾರಿಯ ವೇಷವನ್ನು ತೊಟ್ಟು ಬಲಿ ಚಕ್ರವರ್ತಿಯು ಯಜ್ಞವನ್ನು ಮಾಡುವ ಸಂದರ್ಭದಲ್ಲಿ ಅರಮನೆಗೆ ಬಂದನು. ಆಗ ಬಲಿ ಚಕ್ರವರ್ತಿಯು ಬಾಲ ಬ್ರಹ್ಮಚಾರಿಯನ್ನು ಬರಮಾಡಿಕೊಂಡು ಏನು ಬೇಕೆಂದು ಕೇಳಿದನು. ಆಗ ಬ್ರಹ್ಮಚಾರಿಯು ನನಗೆ ಏನೂ ಬೇಡ ಕೇವಲ ಮೂರು ಹೆಜ್ಜೆ ಭೂಮಿ ಕೊಟ್ಟರೆ ಸಾಕು ಎಂದನು. ಅಂತಹ ದೊಡ್ಡ ಚಕ್ರವರ್ತಿ ಈ ಬೇಡಿಕೆಯನ್ನು ಈಡೇರಿಸಲು ಇಲ್ಲ ಎಂದಾನೆಯೇ? ಬ್ರಹ್ಮಚಾರಿಯ ಬೇಡಿಕೆಯನ್ನು ಈಡೇರಿಸಲು ಸಿದ್ದನಾದನು. ಚಕ್ರವರ್ತಿಯ ಆದೇಶದಂತೆ ಬ್ರಹ್ಮಚಾರಿಯು ಭೂಮಿ ಹಾಗೂ ಆಕಾಶಕ್ಕೆ ಎರಡು ಹೆಜ್ಜೆಯನ್ನಿಟ್ಟನು. ಇನ್ನೊಂದು ಹೆಜ್ಜೆಯನ್ನು ಎಲ್ಲಿಡಬೇಕೆಂದು ಯೋಚಿಸಿ ಬಲಿಚಕ್ರವರ್ತಿಯ ತಲೆಯ ಮೇಲೆ ಇಟ್ಟನು. ನಂತರ ಚಕ್ರವರ್ತಿಯು ಪಾತಳಕ್ಕೆ ಹೋಗಿ ನಶಿಸಿ ಹೋದನು ಎಂಬ ಕಥೆಯನ್ನು ಕಾಣಬಹುದಾಗಿದೆ"(ವಾಗೀಶ್ವರಿ ಶಾಸ್ತ್ರಿ : ೧೯೮೩:೩೪).

ಮೇಲಿನ ಆಚರಣೆಯಲ್ಲಿ ಮನುಷ್ಯನ ಆಸೆಗೂ ಒಂದು ಮಿತಿ ಇರಬೇಕು ಎಂಬ ಮೌಲಿಕ ಅಂಶವನ್ನು ಒತ್ತಿ ಹೇಳುತ್ತದೆ. ಹ್ಯಾರಡಾದ ಜನಪದರು ಈ ಹಬ್ಬದಲ್ಲಿ ತಮ್ಮ ಜಾನುವಾರುಗಳಿಗೆ ಕಿಚ್ಚವನ್ನು ಹಾಯಿಸುತ್ತಾರೆ. ಏಕೆಂದರೆ ಜಾನುವಾರಗಳ ಗೊರಸುಗಳ ನಡುವೆ ಯಾವುದೇ ರೀತಿಯ ಕ್ರಿಮಿ–ಕೀಟಗಳು ಇರಬಾರದು ಜಾನುವಾರುಗಳ ಆರೋಗ್ಯ ದೃಷ್ಟಿಯಿಂದ ಈ ಆಚರಣೆಯನ್ನು ಮಾಡುತ್ತಾರೆ. ಹಾಗೆಯೇ ಪ್ರತಿಯೊಂದು ಜಾನುವಾರುಗಳಿಗೆ ಗುಲ್ಲನ್ನು ಕೊಡುವರು. ಇದು ಕೂಡ ಆರೋಗ್ಯದ ದೃಷ್ಟಿಯಿಂದ ನಡೆಸಿಕೊಂಡು ಬಂದ ಆಚರಣೆಯಾಗಿದೆ.

೪.೨.೫ ಗೌರಿ ಹಬ್ಬ

ಗೌರಿಹಬ್ಬವು ಹೆಣ್ಣು ಮಕ್ಕಳ ಹಬ್ಬವಾಗಿದೆ. ಗಂಡನ ಮನೆಯಲ್ಲಿರುವ ಹೆಣ್ಣುಮಕ್ಕಳು ಈ ಹಬ್ಬಕ್ಕೆ ತವರಿಗೆ ಬಂದು ಈ ಹಬ್ಬವನ್ನು ಆಚರಿಸುವರು. ಈ ಹಬ್ಬದ ದಿನದಂದು ಸಹೋದರ ಸಹೋದರಿಯರು ಪರಸ್ಪರ ಶುಭಾಷಯವನ್ನು ಹೇಳವರು. ವಿವಿಧ ರೀತಿಯ ಉಡುಗೊರೆಯನ್ನು ವಿನಿಮಯ ಮಾಡಿಕೊಳ್ಳುವರು.

ಹ್ಯಾರಡಾ ಗ್ರಾಮದಲ್ಲಿ ಈ ಹಬ್ಬದ ವಿಶೇಷತೆ ಏನೆಂದರೆ ಗ್ರಾಮದಲ್ಲಿರುವ ಚಿಕ್ಕ ಹೆಣ್ಣುಮಕ್ಕಳು ದಂಡೆ(ಬಣ್ಣದ ಹಾಳೆಯಿಂದ ತಯಾರಿಸಿದ ಒಂದು ಬಗೆಯ ತಲೆಗೆ ಹಾಕಿಕೊಳ್ಳುವ ಅಲಂಕಾರಿಕ ವಸ್ತು)ಯನ್ನು ಹಾಕಿಕೊಂಡು ಪಾತ್ರೆಯಲ್ಲಿ ಸಕ್ಕರೆಯ ಆರತಿಯನ್ನು ಇಟ್ಟುಕೊಂಡು, ದೀಪವನ್ನು ಹಚ್ಚಿಕೊಂಡು ಪ್ರತಿಯೊಂದು ಮನೆಗೆ ಹೋಗಿ,

"ಗೌರಿ ಗೌರಿ ಗಣಗೌರಿ
ವರ್ಷಕ್ಕೊಮ್ಮೆ ಬರ್ತಾಳ... ಬರ್ತಾಳ
ಸಕ್ಕರೆ ಆರತಿ ತರ್ತಾಳ... ತರ್ತಾಳ

ಎಂದು ಹಾಡನ್ನು ಹಾಡುತ್ತಾ ಕಾಣಿಕೆಯನ್ನು ಸ್ವೀಕರಿಸುತ್ತಾ ಹೋಗುವರು. ಹೊಸದಾಗಿ ಮದುವೆಯಾಗಿ ಹೋದ ಹೆಣ್ಣು ಮಗಳು ಇಂದು ತವರಿಗೆ ಬಂದು ಸಹೋದರರಿಂದ ವಿಶೇಷವಾದ ಉಡುಗೊರೆ, ಸೀರೆ, ಬಂಗಾರವನ್ನು ಪಡೆಯುವರು. ಏಕೆಂದರೆ ಮನೆಯ ಮಗಳು ದುಃಖದಲ್ಲಿರಬಾರದು ಆಕೆ ಕಣ್ಣೀರು ಹಾಕಿದರೆ ತವರಿಗೆ ಒಳ್ಳೆಯದು ಆಗದು ಎಂಬುದು ಜನಪದರ ನಂಬಿಕೆಯಾಗಿದೆ. ಆದ್ದರಿಂದ ಈ ಹಬ್ಬವನ್ನು ಹೆಣ್ಣು ಮಕ್ಕಳ ಹಬ್ಬ ಎಂದು ಕರೆಯುವರು.

೪.೨.೬ ಮಕರ ಸಂಕ್ರಾಂತಿ

ಈ ಹಬ್ಬವನ್ನು ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ಆಚರಿಸುವರು. ಈ ಹಬ್ಬದ ದಿನದಿಂದ ಸೂರ್ಯನು ಮಕರರಾಶಿಗೆ ಬಂದು ದಕ್ಷಿಣದಿಂದ ಉತ್ತರಾಭಿಮುಖವಾಗುವನು. ಆದ್ದರಿಂದ ಈ ದಿನವನ್ನು ಮಕರ ಸಂಕ್ರಾಂತಿ ಎಂದು ವಿಶೇಷವಾಗಿ ಆಚರಿಸುವರು. ಹ್ಯಾರಡಾ ಗ್ರಾಮದಲ್ಲಿ ಈ ದಿನದಂದು ಎಲ್ಲರೂ ಎಳ್ಳು-ಬೆಲ್ಲವನ್ನು ಹಂಚಿ ಪರಸ್ಪರ ಶುಭಾಷಯಗಳನ್ನು ಹಂಚುವರು. ಹಿಂದೂಗಳಿಗೆ ಇದು ವರ್ಷದ ಪ್ರಾರಂಭದ ದಿನವೆಂದು ಆಚರಿಸುವರು. ಗ್ರಾಮದ ಬಹುತೇಕ ಕುಟುಂಬಗಳು ಈ ದಿನದಂದು ವಿಶೇಷವಾದ ಸಿಹಿ-ತಿನಿಸುಗಳನ್ನು ತಯಾರಿಸಿಕೊಂಡು ಬಂಡಿಯ ಮೇಲೆ ಹೊಲಕ್ಕೆ ತೆರಳುವರು. ನಂತರ ಹೊಲದಲ್ಲಿ ಪ್ರಕೃತಿಗೆ ವಿಶೇಷವಾಗಿ ಪೂಜೆಯನ್ನು ಸಲ್ಲಿಸುವರು. ನಂತರ ಸೂರ್ಯನಿಗೆ ನಮಸ್ಕರಿಸುವರು. ತಂದಿರುವ ಸಿಹಿ- ಅಡುಗೆಯನ್ನು ಸವಿಯುವರು. ಹೊಲದಲ್ಲಿ ಬೆಳೆದಿರುವ ಕಬ್ಬಿನ ಜಲ್ಲೆಗಳನ್ನು ತಂದು ಅದನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ, ಕಬ್ಬಿನ ಜಲ್ಲೆಯ ತುಂಡು ಹಾಗೂ ಎಳ್ಳನ್ನು ಹಂಚಿ ಪರಸ್ಪರ ಶುಭಾಷಯಗಳನ್ನು ಕೋರುವರು.

ಆದರೆ ಇತ್ತೀಚಿಗೆ ಗ್ರಾಮದಲ್ಲಿ ಹಲವಾರು ಯುವಕರ ಗುಂಪುಗಳು ಹೊಳೆಯ ದಂಡೆ ಅಥವಾ ಪ್ರಸಿದ್ಧ ದೇವಾಲಯಗಳನ್ನು ಭೇಟಿ ಕೊಡುವುದರ ಮೂಲಕ ವಿಶೇಷವಾದ ಪೂಜೆಯನ್ನು ಸಲ್ಲಿಸುವುದರ ಮೂಲಕ ಈ ಹಬ್ಬವನ್ನು ಆಚರಿಸುವರು.

೪.೨.೭ ಶಿವರಾತ್ರಿ

ಶಿವಭಕ್ತರಿಗೆಲ್ಲಾ ಪರಮ ಪವಿತ್ರವಾದ ಹಬ್ಬ ಇದಾಗಿದೆ. ಎಲ್ಲಾ ಶಿವಾಲಯಗಳಲ್ಲಿ ಈ ದಿನದಂದು ಜಾಗರಣೆ, ಅಭಿಷೇಕ, ಪೂಜೆ ನಡೆಯುತ್ತದೆ. ಈ ಹಬ್ಬಕ್ಕೆ ಪುರಾಣದಲ್ಲಿ ಕಥೆಯನ್ನು ಕಾಣಬಹುದಾಗಿದೆ. "ಕ್ಷೀರ ಸಾಗರದಲ್ಲಿ ದೇವಾನುದೇವತೆಗಳು ಹಾಗೂ ರಾಕ್ಷಸರು ಒಂದುಗೂಡಿ ಅಮೃತಕ್ಕಾಗಿ ಮಂದಾರ ಪರ್ವತಕ್ಕೆ ಸರ್ಪರಾಜನನ್ನು ಸುತ್ತಿ ಕಡೆಯುತ್ತಿರುವ ಸಮಯದಲ್ಲಿ ಕಾಮಧೇನು, ಕಲ್ಪವೃಕ್ಷ, ಐರಾವತ, ಆನೆ ಹುಟ್ಟಿದವು. ಇವುಗಳನ್ನು ದೇವತೆಗಳ ದೊರೆಯಾದ ಇಂದ್ರನು ತೆಗೆದುಕೊಂಡನು. ಹೀಗೆ ಕಡೆತವು ಹೆಚ್ಚಾದಂತೆಲ್ಲಾ ಸಮುದ್ರದಿಂದ ವಿಷವು ಉಕ್ಕತೊಡಗಿತು. ವಿಷದಿಂದ ಪ್ರಪಂಚವೆಲ್ಲಾ ವಿಷದ ಜ್ವಾಲೆಯಾಯಿತು. ಇದರಿಂದ ಚಿಂತೆಗೀಡಾದ ದೇವತೆಗಳು ಪರಮೇಶ್ವರನ ಹತ್ತಿರ ಪ್ರಾರ್ಥಿಸಿದರು. ಆಗ ಪರಮೇಶ್ವರನು ವಿಷವನ್ನೆಲ್ಲಾ ನುಂಗಿದನು. ಅಗ ಪರಮೇಶ್ವರನ ಹೆಂಡತಿಯಾದ ಪಾರ್ವತಿಯು ಹೆದರಿ ವಿಷವು ದೇಹದ ಒಳಗೆ ಹೋಗದಂತೆ ಪರಮೇಶ್ವರನ ಕುತ್ತಿಗೆಯನ್ನು ಅದುಮಿ ಹಿಡಿದಳು.

ಆಗ ವಿಷವು ಕುತ್ತಿಗೆಯಲ್ಲಿಯೇ ಉಳಿದುಕೊಂಡಿತು. ಆಗ ಪರಮೇಶ್ವರನು ವಿಷಕಂಠನಾದ. ಈ ವಿಷವನ್ನು ನುಂಗಿದ ಪರಮೇಶ್ವರನ ಮಹಿಮೆಯನ್ನು ಹೊಗುಳುತ್ತಾ ಪರಮೇಶ್ವರನಿಗೆ ವಿಷದಿಂದ ಯಾವುದೇ ಅಪಾಯ ಆಗದಿರಲೆಂದು ಶಿವನನ್ನು ಭಜಿಸುತ್ತಾ ಆ ರಾತ್ರಿಯನ್ನು ಕಳೆಯುವರು. ಪರಮೇಶ್ವರನು ವಿಷವನ್ನು ನುಂಗಿದಾಗ ನಾವು ಯಾವುದೇ ಆಹಾರವನ್ನು ಸ್ವೀಕರಿಸದೇ ಉಪವಾಸವನ್ನು ಮಾಡಿ ಶಿವಧ್ಯಾನವನ್ನು ಮಾಡುವ ಸಂಪ್ರದಾಯ ಬೆಳೆದುಬಂದಿತು"(ವಾಗೀಶ್ವರಿ ಶಾಸ್ತ್ರಿ : ೧೯೮೩:೪೫).

ಹ್ಯಾರಡಾ ಗ್ರಾಮದಲ್ಲಿ ಶಿವರಾತ್ರಿಯನ್ನು ವಿಶೇಷವಾಗಿ ಆಚರಿಸುವುದುಂಟು. ರಾತ್ರಿಯಲ್ಲಿ ಊಟ ಮಾಡದೇ ಶಿವನ ಧ್ಯಾನವನ್ನು ಮಾಡುವುದು ಸರ್ವೇಸಾಮಾನ್ಯ. ಚಿಕ್ಕ ಮಕ್ಕಳಿಗೆ ಊಟವನ್ನು ಕೊಡದೇ ಕೇವಲ ಒಗ್ಗರಣೆ ಮಂಡಕ್ಕಿ ಆಹಾರವನ್ನು ಸ್ವೀಕರಿಸುವುದು ವಿಶೇಷವಾಗಿದೆ. ಪ್ರತಿಯೊಂದು ಮನೆಯಲ್ಲಿ ಟಿ.ವಿ.ಯಲ್ಲಿ ಶಿವನ ಮಹಿಮೆಯನ್ನು ಕುರಿತ ಚಲನಚಿತ್ರಗಳನ್ನು ರಾತ್ರಿಯಲ್ಲಾ ವೀಕ್ಷಿಸುವರು. ಪ್ರಮುಖ ದೇವಾಲಯಗಳಲ್ಲಿ ಭಜನಾ ಕಾರ್ಯಕ್ರಮಗಳನ್ನು ಏರ್ಪಡಿಸುವರು. ಶಿವನ ಮಹಿಮೆಯನ್ನು ಸಾರುವಂತಹ ಹಾಡುಗಳನ್ನು ಹಾಡುವರು. ಪ್ರತಿಯೊಂದು ದೇವಾಲಯದಲ್ಲಿ ವಿಶೇಷವಾದ ಪೂಜೆಯನ್ನು ಏರ್ಪಡಿಸುವರು.

೪.೨.೮ ಯುಗಾದಿ

ಕನ್ನಡಿಗರು ಅತ್ಯಂತ ಸಂಭ್ರಮದಿಂದ ಆಚರಿಸುವ ಹಬ್ಬವಾಗಿದೆ. ಗ್ರಾಮೀಣ ಜನಪದರಿಗಂತೂ ಈ ಹಬ್ಬವು ಸಂಭ್ರಮವನ್ನುಂಟು ಮಾಡುವ ಹಬ್ಬವಾಗಿದೆ. ಏಕೆಂದರೆ ವಸಂತಕಾಲದ ಮೊದಲ ದಿನವೇ ಯುಗಾದಿ ಹಬ್ಬ. ಜೀವನದಲ್ಲಿ ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸಿ ಬಾಳಬೇಕೆಂದು ಸಾರುವುದೇ ಈ ಯುಗಾದಿ ಹಬ್ಬವಾಗಿದೆ. ಕಷ್ಟದ ಕುರುಹು ಆಗಿ ಕಹಿಯನ್ನು ಸುಖದ ಕುರುಹು ಆಗಿ ಬೆಲ್ಲವನ್ನು ತಿನ್ನುವುದರ ಮೂಲಕ ಈ ಹಬ್ಬವನ್ನು ಆಚರಿಸುವರು.

ಈ ದಿನದಂದು ಹ್ಯಾರಡಾ ಜನಪದರು ಮುಂಜಾನೆ ಎದ್ದ ತಕ್ಷಣ ಹೆಣ್ಣು ಮಕ್ಕಳು ಮನೆಯ ಒಳಗಿನಿಂದ ಮನೆಯ ಅಂಗಳದವರೆಗೆ ಸಗಣಿಯಿಂದ ಮನೆಯನ್ನು ಸಾರುವರು. ಮನೆಯ ಮುಂದೆ ವಿಶೇಷವಾದ ರಂಗೋಲಿಯನ್ನು ಹಾಕುವರು. ಮನೆ ಮಂದಿಯಲ್ಲಾ ಅಭ್ಯಂಜನವನ್ನು ಮಾಡುವರು. ತಾಯಂದಿರು ಚಿಕ್ಕ ಮಕ್ಕಳಿಗೆ ಕೊಬ್ಬರಿ ಎಣ್ಣೆಯನ್ನು ಕಿವಿಯಲ್ಲಿ ಬಿಟ್ಟು ತಲೆಗೆ ಹಚ್ಚಿ ಕೈಕಾಲುಗಳಿಗೂ ಎಣ್ಣೆಯನ್ನು ಹಚ್ಚುವರು. ನಂತರದಲ್ಲಿ ಬಿಸಿ ಬಿಸಿಯಾದ ನೀರಿನಲ್ಲಿ ಬೇವಿನ ಮರದ ಹಲವು ಎಲೆಗಳನ್ನು, ಅದರ ಹೂವುಗಳನ್ನು ಮಿಶ್ರಣ ಮಾಡಿಕೊಂಡು ತಲೆಯಿಂದ ನೀರನ್ನು ಸುರಿದುಕೊಂಡು ಅಭ್ಯಂಜನವನ್ನು ಮಾಡಿದ ನಂತರ ಹೊಸ ಉಡುಪುಗಳನ್ನು ಧರಿಸುವರು. ನಂತರ ದೇವರಿಗೆ ವಿಶೇಷವಾದ ಪೂಜೆಯನ್ನು ಮಾಡುವರು. ಹ್ಯಾರಡಾ ಜನಪದರು ತಯಾರಿಸುವ ವಿಶೇಷವಾದ ಅಡುಗೆ ಶ್ಯಾವಿಗೆಯನ್ನು ಬಿಸಿನೀರಿನಲ್ಲಿ ಹಾಕಿ, ಬಸಿದು ಅದರಲ್ಲಿ ಬೆಲ್ಲ ಹಾಗೂ ಬೇವಿನ ಮರದ ಎಲೆಯಿಂದ ತಯಾರಿಸಿದ ಬೇವನ್ನು ಮಿಶ್ರಣ ಮಾಡಿಕೊಂಡು ಊಟವನ್ನು ಮಾಡುವರು. ಹೀಗೆ ಜೀವನದಲ್ಲಿ ಸುಖ-ದುಃಖಗಳನ್ನು ಸ್ವೀಕರಿಸುವ ಗುಣಗಳನ್ನು ದೇವರು ನಮಗೆ ದಯಪಾಲಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುವರು.

ಯುಗಾದಿಯ ಮೂರನೇಯ ದಿನವನ್ನು 'ವರ್ಷದ ತೊಡಕು ದಿನ' ವೆಂದು ಆಚರಿಸುವರು. ಈ ದಿನದಿಂದ ಗ್ರಾಮದ ಜನರೆಲ್ಲರೂ ಸಂತೋಷದಿಂದ ಇರುತ್ತಾರೆ. ಏಕೆಂದರೆ ಈ ದಿನ ಸಂತೋಷದಿಂದಿದ್ದರೆ ವರ್ಷಪೂರ್ತಿ ಸಂತೋಷದಿಂದ ಇರಬಹುದು ಎಂಬುದು ಅವರ ನಂಬಿಕೆಯಾಗಿದೆ.

ಯುಗಾದಿ ಹಬ್ಬವು ಇಲ್ಲಿಯ ಜನಪದರ ಪ್ರಮುಖ ಹಬ್ಬವಾಗಿದ್ದು, ವರ್ಷದ ಆರಂಭದ ದಿನವಾಗಿದೆ. ಈ ಹಬ್ಬವನ್ನು ಆಚರಿಸುವುದರ ಮೂಲಕ ತಮ್ಮ ವರ್ಷದ ಚಟುವಟಿಕೆಗಳನ್ನು ಪ್ರಾರಂಭಿಸುವ ಕಾಲವಾಗಿದೆ. ಹೊಸ ಹುಮ್ಮಸ್ಸು, ಹೊಸ ಜೀವನವನ್ನು ಕಟ್ಟಿಕೊಳ್ಳುವ ಹಬ್ಬವಾಗಿದೆ. ಆದ್ದರಿಂದ ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವರು. ಯುಗಾದಿ ಹಬ್ಬದಂದು ಹ್ಯಾರಡಾ ಜನಪದರು ಕಷ್ಟ-ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಗುಣವನ್ನು ಅಳವಡಿಸಿಕೊಳ್ಳುವ ಹಬ್ಬವಾಗಿದೆ. ಯಾಕೆಂದರೆ ಇಲ್ಲಿಯ ರೈತರ ಜೀವನ ಮಾನ್ಸೂನ್‌ನೊಂದಿಗೆ ಜೂಜಾಟವಿದ್ದಂತೆ. ಕೆಲವೊಂದು ಸಂದರ್ಭದಲ್ಲಿ ಹೊಲಗಳಲ್ಲಿ ಬೆಳಗಳು ಸಮೃದ್ಧಿಯಿಂದ ಬೆಳೆಯುವವು, ಇನ್ನೂ ಕೆಲವೊಂದು ಸಂದರ್ಭಗಳಲ್ಲಿ ಮಳೆ ಬಾರದೇ ಹಾಗೂ ಮಳೆ ಹೆಚ್ಚಾಗಿ ಬಂದು ಬೆಳೆಯೆಲ್ಲಾ ಹಾನಿಯಾಗುವುದು. ಇಂತಹ ಸಂದರ್ಭದಲ್ಲಿ ಸ್ಥಿತಪ್ರಜ್ಞನಾಗಿ ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ದೇವರು ದಯಪಾಲಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ.

೪.೨.೯ ಬಸವ ಜಯಂತಿ

ಈ ದಿನ ಹ್ಯಾರಡಾ ಗ್ರಾಮದಲ್ಲಿ ವೀರಶೈವ ಸಮುದಾಯದವರು ಹಾಗೂ ಇತರೆ ಸಮುದಾಯದವರು ಕೂಡಿಕೊಂಡು ಅತ್ಯಂತ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುವರು. ಬಸವ ಜಯಂತಿ ಆಚರಿಸುವ ಒಂದು ದಿನ ಮುಂಚಿತವಾಗಿ ಬಸವಣ್ಣನವರ ಭಾವಚಿತ್ರವನ್ನು ರಥದಲ್ಲಿ ಇಟ್ಟುಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುವರು. ಡೊಳ್ಳು, ಭಜನೆ, ಕೋಲಾಟ, ನಂದಿಕುಣಿತ, ಸಮಾಳಗಳ ನಾದಗಳೊಂದಿಗೆ ಭವ್ಯ ಮೆರವಣಿಗೆಯನ್ನು ಮಾಡುವರು. ಅಂದು ರಾತ್ರಿ ಸಂಗಮೇಶ್ವರನ ದೇವಸ್ಥಾನದ ಮುಂದೆ ಅಗ್ನಿ ಕುಂಡವನ್ನು ತೆಗೆದು ಅಗ್ನಿಯನ್ನು ಹಾಕುವರು. ಮರುದಿನ ಬೆಳಿಗ್ಗೆ ಬಸವಣ್ಣ ಹಾಗೂ ಸಂಗಮೇಶ್ವರನಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸುವುದರ ಮೂಲಕ ಎಲ್ಲಾ ಭಕ್ತರು ಅಗ್ನಿಯನ್ನು ಹಾಯುವರು. ಇದರಿಂದ ನಮ್ಮ ಇಷ್ಟಾರ್ಥಗಳೆಲ್ಲವೂ ಈಡೇರುವವು ಎಂದು ನಂಬಿಕೆಯಾಗಿದೆ. ನಂತರದಲ್ಲಿ ಬಸವ ಜಯಂತಿಯಂದು ಸಾಮೂಹಿಕ ವಿವಾಹವನ್ನು ಏರ್ಪಡಿಸುತ್ತಾರೆ. ಹಲವಾರು ನವ ದಂಪತಿಗಳು ಈದಿನ ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡುವರು.

೪.೨.೧೦ ಕಾರ ಹುಣ್ಣಿಮೆ

ಈ ಹಬ್ಬವು ವಿಶೇಷವಾಗಿ ಕೃಷಿಕರು ಆಚರಿಸುವ ಹಬ್ಬವಾಗಿದೆ. ವಿಶೇಷವಾಗಿ ಎತ್ತುಗಳಿಗೆ ಶೃಂಗರಿಸುವರು. ಎತ್ತುಗಳ ಕೋಡುಗಳಿಗೆ ಬಣ್ಣವನ್ನು ಬಳಿಯುವರು. ಕೊಡುಗಳಿಗೆ ಕೋಡಂಸು

ಹಾಕಿ, ಅಲಂಕಾರಿಕ ವಸ್ತುಗಳನ್ನು ಕಟ್ಟುವರು. ಕೊರಳಲ್ಲಿ ವಿವಿಧ ರೀತಿಯ ಸರಗಳನ್ನು ಹಾಕುವರು. ಎತ್ತುಗಳ ಮೇಲೆ 'ಜೂಲ' (ಅಲಂಕಾರಿಕ ವಸ್ತು) ಹಾಕುವರು. ಮುಂಗಾಲಿಗೆ ಕರಿ ಉಣ್ಣೆಯಿಂದ ಮಾಡಿದ ನೂಲನ್ನು ಕಟ್ಟುವರು. ನಂತರ ಊರಿನ ಅಗಸಿಯಲ್ಲಿ ಎತ್ತುಗಳನ್ನು ಓಡಲು ಬಿಡುವರು. ಯಾವ ಎತ್ತು ಜೋರಾಗಿ ಓಡಿ ಗುರಿ ಮುಟ್ಟವುದೋ ಆ ಎತ್ತು ಗೆದ್ದಂತೆ. ಪ್ರಥಮ ಬಹುಮಾನಕ್ಕೆ ಇಂತಿಷ್ಟು ನಗದು ಹಣವನ್ನು ಇಟ್ಟಿರುತ್ತಾರೆ. ಈ ರೀತಿಯಾಗಿ ವಿಶಿಷ್ಟವಾಗಿ ಈ ಹಬ್ಬನ್ನು ಆಚರಿಸುವರು. ಆದರೆ ಇತ್ತೀಚಿಗೆ ಹ್ಯಾರಡಾ ಗ್ರಾಮದಲ್ಲಿ ಈ ಹಬ್ಬ ಕಣ್ಮರೆಯಾಗಿದೆ.

೪.೨.೧೧ ಗಣೇಶ ಚತುರ್ಥಿ

ಗಣೇಶ ಚತುರ್ಥಿಯನ್ನು ಭಾರತದಾದ್ಯಂತ ಎಲ್ಲಾ ಧರ್ಮಿಯರು ಆಚರಿಸುವುದುಂಟು. ಅದರಲ್ಲಿ ವಿಶೇಷವಾಗಿ ಹಿಂದೂಗಳಿಗೆ ಇದೊಂದು ವಿಶೇಷವಾದ ಹಬ್ಬವಾಗಿದೆ. ಈ ಹಬ್ಬವನ್ನು ಮಾಘ ಮಾಸದಲ್ಲಿ ಆಚರಿಸುವುದುಂಟು. ಗೌರಿಯ ಮಗ ಗಣೇಶ ತದಿಗೆ ದಿನ ಗೌರಿ ಬಂದರೆ, ಭಾದ್ರಪದ ಶುದ್ಧ ಚೌತಿಯ ದಿನ ಗಣೇಶ ಬರುತ್ತಾನೆ. ಗಣೇಶನು ಎಲ್ಲಾ ದೇವರಿಗಿಂತಲೂ ಶಕ್ತಿ ಶಾಲಿಯಾಗಿರುವನು. ಆನೆಯ ಮುಖವನ್ನು ಹೊಂದಿದ ಗಣೇಶನನ್ನು ಕಂಡರೆ ಚಿಕ್ಕ-ಮಕ್ಕಳಿಂದ ಹಿಡಿದು ಎಲ್ಲರಿಗೂ ಬಹಳಷ್ಟು ಖುಷಿ. ಗಣೇಶನ ಹುಟ್ಟೇ ಒಂದು ವಿಚಿತ್ರ ಪ್ರಸಂಗವಾಗಿದೆ. ಪಾರ್ವತಿಯು ಸ್ನಾನ ಮಾಡಲು ಒಳಗೆ ಹೋಗುವಾಗ ಒಂದು ಮಣ್ಣಿನ ಮೂರ್ತಿಯನ್ನು ಮಾಡಿ ಅದಕ್ಕೆ ಜೀವವನ್ನು ತುಂಬಿ, ನಾನು ಸ್ನಾನ ಮಾಡಿ ಬರುವವರೆಗೂ ಒಳಗಡೆ ಯಾರನ್ನೂ ಬಿಡಬೇಡ ಎಂದು ಆಜ್ಞೆ ಮಾಡಿದಳಂತೆ. ಅದರಂತೆ ಶಿವನು ಮನೆಯ ಒಳಗೆ ಹೋಗಲು ಅದಕ್ಕೆ ಗಣೇಶನು ಸಮ್ಮತಿಸಲಿಲ್ಲವಂತೆ, ಸಿಟ್ಟಿಗೆದ್ದ ಶಿವನು ತನ್ನ ಆಯುಧದಿಂದ ಗಣೇಶನ ರುಂಡವನ್ನು ಕತ್ತರಿಸಿದನು. ಆಗ ಸ್ನಾನ ಮುಗಿಸಿ ಬಂದ ಪಾರ್ವತಿಯು ಗಣೇಶನ ಸ್ಥಿತಿಯನ್ನು ಕಂಡು ಬಹಳಷ್ಟು ರೋಧಿಸಿದಳು. ಹೇಗಾದರು ಮಾಡಿ ನನ್ನ ಮಗನನ್ನು ಉಳಿಸಿಕೊಡಬೇಕೆಂದು ಬೇಡಿಕೊಂಡಳು. ಆಗ ಶಿವನು ತನ್ನ ಧೂತರನ್ನು ಕರೆದು ಉತ್ತರ ದಿಕ್ಕಿಗೆ ಮಲಗಿರುವ ಯಾರ ರುಂಡವಾದರೂ ಕತ್ತರಿಸಿಕೊಂಡು ಬರಲು ಹೇಳಿದನು. ಆಗ ಧೂತರು ಎಷ್ಟೇ ಹುಡುಕಿದರೂ ಉತ್ತರ ದಿಕ್ಕಿನಲ್ಲಿ ಮಲಗಿರುವ ಯಾವ ವ್ಯಕ್ತಿಗಳೂ ಸಿಗಲಿಲ್ಲ. ಆಗ ಉತ್ತರ ದಿಕ್ಕಿನಲ್ಲಿ ಆನೆಯೊಂದು ಮಲಗಿತ್ತು. ಅದರ ರುಂಡವನ್ನೇ ಕತ್ತರಿಸಿ ಶಿವನು ಆ ರುಂಡವನ್ನು ಜೋಡಿಸಿ ಗಣೇಶನನ್ನು ಬದುಕಿಸಿದನಂತೆ. ಅಂದಿನಿಂದ ಶಿವ ಪಾರ್ವತಿಯ ಮುದ್ದಿನ ಮಗನಾಗಿ ಗಣೇಶ ಬೆಳೆದನು.

"ಮೈಯ ಮೃತ್ತಿಕೆಯಲ್ಲಿ ಪುತ್ರನ್ನ ಮಾಡೀ ಅತ್ಯಂತದಿಂದ ಜೀವವ ತುಂಬೀ ಮತ್ಯಾರ ಒಳಗೆಲ್ಲ ಬಿಡಬೇಡವೆನುತಲೇ। ತನ್ನ ಪುತ್ರಿಗೆ ಪಾರ್ವತಿ ಹೇಳದಳೂ॥ ಮಂಗಳಾ। ಜಯಮಂಗಳ।"(ವಾಗೀಶ್ವರಿ ಶಾಸ್ತ್ರೀ : ೧೯೮೩:೨೩) ಎಂಬ ಜನಪದರ ಹಾಡು ಗಣೇಶನ ಹುಟ್ಟಿನ ಬಗ್ಗೆ ತಿಳಿಸುತ್ತದೆ. ಗಣೇಶ ಉತ್ಸವವು ಸಾರ್ವಜನಿಕ ಉತ್ಸವವಾಗಿಯೂ ಬೆಳೆದು ಹಿಂದೂಗಳ ಪವಿತ್ರ ಹಬ್ಬವಾಗಿದೆ. ದಿನಗಟ್ಟಲೇ, ವಾರಗಟ್ಟಲೇ ಉತ್ಸವವನ್ನು ನಡೆಸುವುದುಂಟು. ಹ್ಯಾರಡಾ ಗ್ರಾಮದಲ್ಲಿಯೂ ಸಹ ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದುಂಟು. ಗ್ರಾಮದ ಪ್ರತಿಯೊಂದು ಓಣಿಗಳಲ್ಲಿ ಗಣೇಶನ

ಮೂರ್ತಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಾಮಾನ್ಯವಾಗಿ ಮೂರು ದಿನಗಳವರೆಗೆ ಈ ಹಬ್ಬವನ್ನು ಆಚರಿಸುವುದುಂಟು. ಗಣೇಶನ ಉತ್ಸವದ ಪ್ರಯುಕ್ತ ಹಲವಾರು ರಸಮಂಜರಿ ಕಾರ್ಯಕ್ರಮಗಳು ನಡೆಯುವುದುಂಟು. ನಾಡಿನ ಹೆಸರಾಂತ ವ್ಯಕ್ತಿಗಳನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಕೊಡಿಸುವ ವಾಡಿಕೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಸಣ್ಣ ಮಕ್ಕಳು ಪಟಾಕಿಗಳನ್ನು ಸಿಡಿಸುವುದರ ಮೂಲಕ ಈ ಹಬ್ಬವನ್ನು ವಿಶೇಷವಾಗಿ ಆಚರಿಸುವುದುಂಟು. ಈ ಹಬ್ಬದ ದಿನದಂದು ಗ್ರಾಮದ ಮಹಿಳೆಯರು ಗಣೇಶನಿಗೆಂದೇ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ತಯಾರಿಸುವುದುಂಟು.

ಗ್ರಾಮದ ಮಹಿಳೆಯರು ಶ್ರದ್ಧಾಭಕ್ತಿಯಿಂದ ವಿಶೇಷ ಪೂಜೆಗಳನ್ನು ಮಾಡುವುದುಂಟು. ಗ್ರಾಮದ ಹಲವಾರು ಸಂಘ-ಸಂಸ್ಥೆಗಳಾದ ಪ್ರಜ್ಞಾವಂತ ಯುವ ವೇದಿಕೆ, ಭಗತ್ ಸಿಂಗ್ ತಂಡ, ಸಂಗೊಳ್ಳಿ ರಾಯಣ್ಣ ಯುವಕ ಸಂಘ, ವಾಲ್ಮೀಕಿ ಯುವಕ ಸಂಘಗಳು ವಿಶೇಷವಾಗಿ ಈ ಹಬ್ಬವನ್ನು ಆಚರಿಸುವುದುಂಟು. ಮೂರು ದಿನಗಳವರೆಗೆ ಈ ಹಬ್ಬವನ್ನು ಆಚರಿಸಿ ವಿಸರ್ಜನೆಯ ದಿನ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆಯನ್ನು ಮಾಡುವರು. ಮೊದ ಮೊದಲು ಮಣ್ಣಿನಿಂದ ಮಾಡಿದ ಗಣೇಶನನ್ನು ಪ್ರತಿಷ್ಠಾಪಿಸುತ್ತಿದ್ದರು. ಆದರೆ ಇತ್ತೀಚೆಗೆ ಪಿ.ಓ.ಪಿ. ಯಿಂದ ಮಾಡಿದ ಗಣೇಶನನ್ನು ಪ್ರತಿಷ್ಠಾಪಿಸುತ್ತಾರೆ.

ಹ್ಯಾರಡಾದಲ್ಲಿ ವಿವಿಧ ಆಕಾರದ ಹಾಗೂ ವಿವಿಧ ಅವತಾರದ ಗಣೇಶನನ್ನು ಪ್ರತಿಷ್ಠಾಪಿಸುವರು. ಬೆಟ್ಟದ ಮೇಲೆ ಕುಳಿತಿರುವ ಗಣೇಶ, ಇಲಿಯ ಮೇಲೆ ಕುಳಿತಿರುವ ಗಣೇಶ, ಎದ್ದು ನಿಂತಿರುವ ಗಣೇಶ, ಕಮಲದ ಹೂವಿನ ಮೇಲೆ ಕುಳಿತಿರುವ ಗಣೇಶ ಹೀಗೆ ವಿವಿಧ ಅವತಾರಗಳನ್ನು ಹೊಂದಿರುವ ಗಣೇಶನನ್ನು ಪ್ರತಿಷ್ಠಾಪಿಸುವರು. ಹೀಗೆ ಮೂರು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

೪.೨.೧೨ ವರಮಹಾಲಕ್ಷ್ಮಿ ಹಬ್ಬ

ವರಮಹಾಲಕ್ಷ್ಮಿಯನ್ನು ಸಾಮಾನ್ಯವಾಗಿ ಶ್ರಾವಣ ಮಾಸದಲ್ಲಿ ಆಚರಿಸುವುದುಂಟು. ಮಹಾಲಕ್ಷ್ಮಿ ಎಂದರೆ ಸಂಪತ್ತು. ಸಂಪತ್ತು ಹರಿದು ಬರಲಿ ಎಂಬ ಉದ್ದೇಶದಿಂದ ಈ ಹಬ್ಬವನ್ನು ಆಚರಿಸುವುದುಂಟು. ಮಹಾಲಕ್ಷ್ಮಿಯನ್ನು ವಿಶೇಷವಾಗಿ ತಯಾರಿಸಿದ ಮಂಟಪದ ಒಳಗೆ ಕುಳ್ಳಿರಿಸಿ ವಿವಿಧ ರೀತಿಯ ಅಲಂಕಾರಗಳನ್ನು ಮಾಡುವರು. ಲಕ್ಷ್ಮಿಯ ಮುಂದೆ ನಗದು ಹಣ, ಹೂವು, ಹಣ್ಣುಗಳು, ಕಾಯಿ, ಎಲೆ, ಅಡಿಕೆ, ನಿಂಬೆಹಣ್ಣು ವಿವಿಧ ರೀತಿಯ ತಿನಿಸುಗಳನ್ನಿಟ್ಟು ವಿಶೇಷವಾಗಿ ಪೂಜಿಸುವುದುಂಟು.

ಈ ಸಂದರ್ಭದಲ್ಲಿ ಮಹಿಳೆಯರು ಹೊಸ ಸೀರೆಗಳನ್ನುಟ್ಟುಕೊಂಡು, ತಲೆಯಲ್ಲಿ ಹೂವನ್ನು ಮುಡಿದು ಮೈ ತುಂಬಾ ಬಂಗಾರದ ಆಭರಣಗಳನ್ನು ಹಾಕಿಕೊಂಡು ಭಕ್ತಿಯಿಂದ ಭಾಗ್ಯದ ದೇವತೆಯನ್ನು ಆರಾಧಿಸುವುದುಂಟು. ಭಾಗ್ಯದ ದೇವತೆಯಾದ ಮಹಾಲಕ್ಷ್ಮಿಯ ಪ್ರೀತ್ಯರ್ಥ ಮುತ್ತೈದೆಯವರಿಗೆ ಬಾಗಿನ ಕೊಟ್ಟು ವಿಜೃಂಭಣೆಯಿಂದ ಮಾಡುವ ವ್ರತವಾಗಿದೆ. ಐದು ಬಗೆಯ

ಫಲಗಳನ್ನು (ಪಂಚ ಫಲ), ಪಂಚಪಲ್ಲವ(ಐದು ಬಗೆಯ ಪತ್ರೆಗಳು), ಮಾವು, ಅರಳಿ, ಅತ್ತಿ, ಆಲ ಮತ್ತು ಬಸಿರು)ಗಳನ್ನು ಕಳಶದಲ್ಲಿ ತುಂಬಿ, ಅಕ್ಕಿಯ ಕಾಳುಗಳನ್ನು ಅದರಲ್ಲಿ ಹಾಕಿ ಮಂತ್ರವನ್ನು ಪಠಿಸುವುದರ ಮೂಲಕ ವರಮಹಾಲಕ್ಷ್ಮಿ ಪೂಜೆಯನ್ನು ಮಾಡುವುದುಂಟು. ವಿವಿಧ ರೀತಿಯ ಸಿಹಿ ತಿನಿಸುಗಳನ್ನು ಮಾಡುವುದರ ಮೂಲಕ ಅತ್ಯಂತ ವಿಜೃಂಭಣೆಯಿಂದ ಈ ವ್ರತವನ್ನು ಆಚರಿಸುವುದುಂಟು.

ಹ್ಯಾರಡಾ ಗ್ರಾಮದಲ್ಲಿ ಇದು ಹೆಣ್ಣು ಮಕ್ಕಳ ಹಬ್ಬವಾಗಿದೆ. ಇದನ್ನು ವಿಶೇಷವಾಗಿ ಆಚರಿಸುವದುಂಟು ಈ ಹಬ್ಬವನ್ನು ಆಚರಿಸುವ ಪ್ರಮುಖ ಉದ್ದೇಶ ಭಾಗ್ಯದ ದೇವತೆಯನ್ನು ಬರಮಾಡಿಕೊಳ್ಳುವ ಒಂದು ಹಬ್ಬವಾಗಿದೆ.

೪.೨.೧೩ ನವರಾತ್ರಿ ಹಬ್ಬ

ಈ ಹಬ್ಬವನ್ನು ನಾಡ ಹಬ್ಬವೆಂದು ಕರೆಯುವರು. ವಿಜಯನಗರದ ಅರಸರು ಈ ಹಬ್ಬವನ್ನು ಆಚರಣೆಗೆ ತಂದರು. ಅಶ್ವಯುಜ ಶುದ್ಧ ಪ್ರತಿಪದೆಯ ದಿವಸ ಭುವನೇಶ್ವರಿಯನ್ನು ರಾಜದಾನಿಯ ಪ್ರಮುಖ ಬೀದಿಗಳಲ್ಲಿ ಓಲಗ ಊದುತ್ತಾ ಡೋಲು ಬಾರಿಸುತ್ತಾ ತಂದು ಮಂಟಪದಲ್ಲಿ ಕೂಡಿಸುತ್ತಿದ್ದರು. ಮುಂದೆ ಒಂಭತ್ತು ದಿನಗಳ ಕಾಲ ಆರಾಧಿಸುತ್ತಿದ್ದರು. ವಿಜಯನಗರದ ಶ್ರೀ ಕೃಷ್ಣದೇವರಾಯನ ಕಾಲಕ್ಕೆ ಈ ಹಬ್ಬವನ್ನು ವಿಜಯನಗರದ ಅರಸರು ಈ ಹಬ್ಬವನ್ನು ಆಚರಿಸುವ ಸ್ಥಳಕ್ಕೆ ಮಹಾನವಮಿ ದಿಬ್ಬವೆಂದು ಕರೆಯುತ್ತಿದ್ದರು. ಈಗಲೂ ಈ ದಿಬ್ಬವನ್ನು ಹಂಪೆಯಲ್ಲಿ ಕಾಣಬಹುದಾಗಿದೆ.

ವಿಜಯನಗರದ ಅರಸರ ನಂತರ ಅವರ ಮಾಂಡಲಿಕರಾದ ಮೈಸೂರು ಅರಸರು ಈ ಹಬ್ಬವನ್ನು ಅಂತರಾಷ್ಟ್ರೀಯ ಖ್ಯಾತಿಯನ್ನಾಗಿ ಮಾಡಿದರು. ಜಗತ್ತಿನ ಕಣ್ಮನ ಸೆಳೆಯುವಂತೆ ಮಾಡಿದರು. ಈಗಲೂ ಸಹ ರಾಜ್ಯ ಸರ್ಕಾರಗಳು ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದುಂಟು. ದುರ್ಗಾಷ್ಟಮಿಯ ದಿನದಂದು ದುರ್ಗಾಪೂಜೆ ವಿಶೇಷವಾಗಿ ಜರುಗುವುದುಂಟು. ಮನೆಮನೆಗಳಲ್ಲಿ ದೇವಿಯನ್ನು ಪೂಜಿಸುವರು. ವಿವಿಧ ರೀತಿಯ ಪಾಯಸ, ಸಿಹಿ ತಿನಿಸುಗಳನ್ನು ಮಾಡುವುದರ ಮೂಲಕ ಈ ದಿವಸ ತಮ್ಮ ಸಾಧನ ಸಾಮಗ್ರಿಗಳನ್ನು ಅತ್ಯಂತ ಭಕ್ತಿಯಿಂದ ಪೂಜಿಸುವರು. ಆಯುಧಗಳನ್ನು, ವಾಹನಗಳನ್ನು, ವ್ಯಾಪಾರಸ್ಥರು ವ್ಯಾಪಾರದ ಸಲಕರಣೆಗಳನ್ನು ರೈತಾಪಿ ಜನರು ದಿನನಿತ್ಯ ಉಪಯೋಗಿಸುವ ಕೃಷಿ ಉಪಕರಣಗಳನ್ನು, ಸಂಗೀತಗಾರರು ವಾದ್ಯಗಳನ್ನು ಇಟ್ಟು ಪೂಜಿಸುವ ಪರಿಪಾಠ ಇಂದಿಗೂ ಸಾಗಿ ಬಂದಿದೆ.

ಹ್ಯಾರಡಾದಂತಹ ಪುಟ್ಟ ಗ್ರಾಮದಲ್ಲಿ ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವುದುಂಟು. ಹ್ಯಾರಡಾ ಗ್ರಾಮದಲ್ಲಿ ಎರಡು ದಿನಗಳಲ್ಲಿ ಈ ಆಚರಣೆಯನ್ನು ಮಾಡುವರು. ಹ್ಯಾರಡಾದ ಗ್ರಾಮ್ಯ ಭಾಷೆಯಲ್ಲಿ ಈ ಹಬ್ಬವನ್ನು ಬನ್ನಿ ಮುಡಿಯುವ ಹಬ್ಬ, ಖಂಡೆ ಪೂಜೆ, ಆಯುಧ ಪೂಜೆ, ಎಂದು ಕರೆಯುವರು. ಖಂಡೆ ಪೂಜೆಯ ದಿನದಂದು ಹ್ಯಾರಡಾದ ಸಮಸ್ತ ನಾಗರಿಕರು ತಮ್ಮ ತಮ್ಮ ಮನೆಯಲ್ಲಿ ದಿನನಿತ್ಯ ಬಳಸುವ ಉಪಕರಣಗಳಾದ ಕೊಡಲಿ, ಗುದ್ದಲಿ,

ಕುಡುಗೋಲು, ಕುರ್ಜಿಗಿ, ಬುಟ್ಟಿ, ಹಾರಿಕೋಲು, ಪುಸ್ತಕ, ಖಡ್ಗ ಇತ್ಯಾದಿಗಳನ್ನು ಇಟ್ಟು ಅತ್ಯಂತ ಭಕ್ತಿಯಿಂದ ಪೂಜಿಸುವರು. ಅಂದಿನ ದಿನ ವಿವಿದ ರೀತಿಯ ಪಾಯಸಗಳನ್ನು ತಯಾರಿಸುವರು. ಇತ್ತೀಚಿಗೆ ರೈತರು ತಮ್ಮ ಟ್ರಾಕ್ಟರ್, ಮೋಟಾರ್ ಸೈಕಲ್, ಕಾರು, ರಂಟೆ, ಕುಂಟೆ, ಇತ್ಯಾದಿಗಳನ್ನು ಅತ್ಯಂತ ವಿಜೃಂಭಣೆಯಿಂದ ಪೂಜೆ ಮಾಡುವರು.

ನಂತರ ಮಾರನೇಯ ದಿನದಂದು ಬನ್ನಿ ಮುಡಿಯುವ ಹಬ್ಬವನ್ನು ಆಚರಿಸುವರು. ಗ್ರಾಮದ ಬೆಂಡಿಗೇರಿ ದುರುಗಪ್ಪ ಅವರ ಮನೆಯಿಂದ ಸಾಯಂಕಾಲ ೭.೩೦ ರ ಸುಮಾರಿಗೆ ದುರುಗಮ್ಮನನ್ನು ವಿಶೇಷವಾಗಿ ಪೂಜಿಸುವ ಮೂಲಕ ಚಾಲನೆ ಕೊಡುವರು. ದುರುಗಮ್ಮನನ್ನು ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ವಿಶೇಷವಾದ ಅಲಂಕಾರವನ್ನು ಮಾಡುವರು. ದುರುಗಮ್ಮನನ್ನು ಡೊಳ್ಳು, ಕೋಲಾಟದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುವರು. ಮೆರವಣಿಗೆ ಮುಗಿದ ನಂತರ ಗ್ರಾಮದ ಹೊರವಲಯದಲ್ಲಿರುವ ಹರಪನಹಳ್ಳಿ ರಸ್ತೆಯಲ್ಲಿರುವ ಬೆಂಡಿಗೇರಿ ಹನುಮಂತಪ್ಪ ಅವರ ಹೊಲದ ಬನ್ನಿಮರದ ಹತ್ತಿರ ಕೊಂಡೊಯ್ಯುವರು. ಅಲ್ಲಿ ದುರುಗಮ್ಮ ದೇವಿಗೆ ವಿಶೇಷವಾದ ಪೂಜೆಯನ್ನು ಮಾಡುವರು. ಕಂಬಳಿಯ ಮೇಲೆ ಪಲ್ಲಕ್ಕಿಯನ್ನಿಟ್ಟು ಹೂವು, ಹಣ್ಣು, ಎಲೆ, ಅಡಿಕೆ, ಬನ್ನಿ ಪತ್ರೆಯನ್ನಿಟ್ಟು ಮಂತ್ರಗಳನ್ನು ಉಚ್ಚರಿಸುವುದರ ಮೂಲಕ ವಿಶೇಷ ಪೂಜೆಯನ್ನು ಮಾಡುವರು. ಬನ್ನಿ ಮರಕ್ಕೆ ಪೂಜೆಯನ್ನು ಮಾಡುವುದರ ಮೂಲಕ ಪ್ರತಿಯೊಬ್ಬರು ಬನ್ನಿ ಪತ್ರಿಯನ್ನು ಹರಿದುಕೊಂಡು ಬಂದು ಅದನ್ನು ಕೊಡುವುದರ ಮೂಲಕ ಬನ್ನಿ ತೆಗೆದುಕೊಂಡು ಬಂಗಾರದಂತಹ ಜೀವನ ನಿಮ್ಮದಾಗಲಿ ಎಂದು ಹರಸುವರು. ಬನ್ನಿ ಮರವನ್ನು ಪೂಜಿಸುವದಕ್ಕೆ ಕಾರಣ ಉಂಟು ಎಂದು ಕ್ಷೇತ್ರ ಅಧ್ಯಯನಕ್ಕೆ ತೆರಳಿದ ಸಂದರ್ಭದಲ್ಲಿ ಗ್ರಾಮದ ದುರುಗಪ್ಪನವರು ಹೇಳುವುದುಂಟು. "ಈ ದಿವ್ಸ ಪಾಂಡವರು ಅಜ್ಞಾತವಾಸ ಮುಗಿಸಿಕೊಂಡು ಬರ್ತಾರ, ಅಜ್ಞಾತವಾಸಕ್ಕೆ ಹೋಗೋ ಹೊತ್ನ್ಯಾಗ ಅವ್ರು ಬಿಲ್ಲುಬಾಣಾನ ಬನ್ನಿ ಮರ್ದಗ ಇಟ್ಟು ಹೋಗಿರ್ತಾರ, ಈ ದಿವ್ಸ ಪಾಂಡವರು ಬನ್ನಿ ಮರಕ್ಕೆ ಪೂಜೆ-ಗೀಜೆ ಮಾಡಿ ತಮ್ಮ ಬಿಲ್ಲು-ಬಾಣಾನ ತಗಂಡು ತಮ್ಮ ದೇಶಕ್ಕೆ ಹೊಕ್ಕಾರ" ಎಂದು ಹೇಳುವರು.

ಹೀಗೆ ಇಂದಿಗೂ ಹ್ಯಾರಡಾ ಗ್ರಾಮದಲ್ಲಿ ಈಗಲೂ ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದುಂಟು.

೪.೨.೧೪ ಮೊಹರಂ ಆಚರಣೆ

ಹ್ಯಾರಡಾ ಗ್ರಾಮದ ಜನಪದರೆಲ್ಲರೂ ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಹಬ್ಬವಾಗಿದೆ. ಬಹುತೇಕ ಹಿಂದೂಗಳು ಈ ಹಬ್ಬವನ್ನು ಆಚರಿಸುವರು. ಹ್ಯಾರಡಾದ ಮುಸ್ಲಿಂ ಸಮುದಾಯದವರು ವರ್ಷ, ತಿಂಗಳು ವಾರಗಳಿಗೆ ಚಂದ್ರನೇ ಕಾರಣವೆಂದು ತಿಳಿದು ಅವರ ಹಬ್ಬಗಳ ಆಚರಣೆಯ ದಿನವನ್ನು ನಿರ್ಧರಿಸುವರು. ಅದೇ ರೀತಿಯಾಗಿ ಮೊಹರಂ ಹಬ್ಬದ ದಿನವನ್ನು ನಿರ್ಧರಿಸುವರು. ಹ್ಯಾರಡಾ ಗ್ರಾಮದ ಮುಲ್ಲಾ ಸಾಹೇಬರು ಪಶ್ಚಿಮಾಭಿಮುಖವಾಗಿ ನಿಂತು, ಓದಿಕೆಯನ್ನು ಮಾಡಿ ಅಲೆಗುಣಿಯನ್ನು ತೋಡಲು ಪ್ರಾರಂಭಿಸುವರು. ಇವರು ಐದು ಸಾರೆ ಕಚ್ಚು ಹಾಕುವುದರ ಮೂಲಕ

ಈ ಕಾರ್ಯಕ್ಕೆ ಚಾಲನೆಯನ್ನು ಕೊಡುವರು. ನಂತರ ಗ್ರಾಮದ ಎಲ್ಲಾ ಜನಪದರು ಅಲೆಗುಣಿಯನ್ನು ಕಡಿದು ತಯಾರು ಮಾಡುವರು. ಈ ದಿನದಿಂದ ಅಧಿಕೃತವಾಗಿ ಮೊಹರಂ ಹಬ್ಬ ಪ್ರಾರಂಭವಾಗುತ್ತದೆ. ಮುಸ್ಲಿಂ ಬಾಂಧವರು ಹಾಗೂ ಹಿಂದೂ ಬಾಂಧವರು ಈ ದಿನ ತಮ್ಮ ಮನೆಗೆ ಸುಣ್ಣ ಬಣ್ಣಗಳಿಂದ ಬಳಿದು ಸ್ವಚ್ಚಗೊಳಿಸುವರು.

ಪ್ರತಿಯೊಬ್ಬರು ಹೊಸ ಬಟ್ಟೆಯನ್ನು ಧರಿಸಿ ಹಬ್ಬವನ್ನು ಆಚರಿಸುವರು. ಈ ಹಬ್ಬಕ್ಕೆ ಬಹುತೇಕ ಹಿಂದೂಗಳು ಉಪವಾಸ ವ್ರತವನ್ನು ಕೈಗೊಳ್ಳುವರು. ಬೇಡಿಕೊಂಡವರು ಹಸಲಿ, ಲಾಡಿ, ಗಜರಾ ಧರಿಸಿ ಫಕೀರರಾಗುವರು. ಗ್ರಾಮದ ಯುವಕರು ಹುಲಿ ವೇಷವನ್ನು ಹಾಕುವರು. ಬಣ್ಣಗಳಿಂದ ಮೈಮೇಲೆಲ್ಲಾ ಚಿತ್ರಗಳನ್ನು ಬಿಡಿಸಿಕೊಂಡು, ಹುಲಿ ನೃತ್ಯವನ್ನು ಮಾಡುವುದು ಸರ್ವೇಸಾಮಾನ್ಯವಾಗಿದೆ. ಫಕೀರರಾದವರು ಹಾಗೂ ಹುಲಿ ವೇಷವನ್ನು ಧರಿಸುವವರು ಗ್ರಾಮದ ಪ್ರತಿಯೊಂದು ಮನೆ ಮನೆಗಳಿಗೆ ತೆರಳಿ ಬಿಕ್ಷಾಟನೆಯನ್ನು ಮಾಡುತ್ತಾ, ದವಸ ಧಾನ್ಯಗಳನ್ನು ಸಂಗ್ರಹಿಸುವರು.

ಇನ್ನು ದೇವರನ್ನು ಕೂಡಿಸುವ ಡೋಲಿಗಳನ್ನು ಬಿದಿರು, ತೇಗದ ಕಟ್ಟಿಗೆ, ಶುಭ್ರವಾದ ಅರಿವೆ, ರಂಗು ರಂಗಿನ ಹಾಳೆಗಳಿಂದ ಅಲಂಕರಿಸುವರು. ಈ ಡೋಲಿಗಳಲ್ಲಿ ಒಂದು ಕಳಸದ ಡೋಲಿ, ಐದು ಕಳಸದ ಡೋಲಿ, ಸವಾರಿ ಡೋಲಿ, ಅರಿವಿ ಡೋಲಿ, ಪಲ್ಲಕ್ಕಿ ಡೋಲಿ ಇತ್ಯಾದಿ ಪ್ರಕಾರಗಳನ್ನು ನೋಡಬಹುದಾಗಿದೆ. ಈ ಡೋಲಿಗಳಲ್ಲಿ ಒಂದು, ಎರಡು, ಮೂರು, ನಾಲ್ಕು ಹಾಗೂ ಐದು ಬೆರಳಿನ 'ರಾಗಲ್' ಅರ್ಧಚಂದ್ರಾಕೃತಿಗಳ ದೇವರುಗಳನ್ನಿಟ್ಟು ಅಲಂಕಾರಗೊಳಿಸುವರು. ಈ ದೇವರುಗಳನ್ನು ಬೇಡಿಕೊಂಡವರು ಉಡುಗೊರೆಯಾಗಿ ಕೊಡುವರು. ಇವುಗಳು ಉಕ್ಕು, ಹಿತ್ತಾಳೆ, ತಾಮ್ರ, ಕಂಚು, ಬೆಳ್ಳಿಯ ಪಂಚಲೋಹಗಳಿಂದ ಮಾಡಿದವುಗಳಾಗಿರುತ್ತವೆ. ಈ ದೇವರುಗಳು ಕರ್ಬಲಾ ಕಾಳಗದಲ್ಲಿ ಹುತಾತ್ಮರಾದ ವ್ಯಕ್ತಿಗಳ ಸಂಕೇತವೆಂದು ಗ್ರಾಮ ನಿವಾಸಿಗಳ ಅಭಿಪ್ರಾಯವಾಗಿದೆ.

ಈ ಹಬ್ಬದಲ್ಲಿ ಖತಲ್ ರಾತ್ರಿ ಎಂಬುದನ್ನು ಆಚರಿಸುವರು. ಈ ದಿನದಂದು ದೇವರಿಗೆ ಗ್ರಾಮದ ಎಲ್ಲಾ ಜನಪದರು ಮಾಂದ್ಲಿ, ಕಡುಬು, ಸಕ್ಕರೆ, ಬೆಲ್ಲ, ಮಂಡಕ್ಕಿ, ಊದುಬತ್ತಿಯ ಎಡೆಯನ್ನು ಕೊಡುವರು. ಬೇಡಿಕೊಂಡವರು ಅಲೆಗುಣಿಗೆ ಉಪ್ಪು ಹಾಗೂ ಒಣಗಿದ ಕಟ್ಟಿಗೆಯನ್ನು ಬೆಂಕಿಗೆ ಆಹುತಿಯನ್ನು ಕೊಡುವರು. ಈ ಖತಲ್ ರಾತ್ರಿಯಂದು ಗ್ರಾಮದ ಕಲಾವಿದರಾದ ಚಮನ್ ಸಾಹೇಬ್, ಶರೀಫ್ ಸಾಹೇಬ್, ಪಟ್ಟೇದ ಹನುಮಂತಪ್ಪ ಮುಂತಾದವರು ರಿವಾಯತ್ ಪದಗಳನ್ನು ಹೇಳುವುದರಲ್ಲಿ ಪ್ರಸಿದ್ದರಾದವರು. ಇವರು ವೃತ್ತಾಕಾರವಾಗಿ ನಿಂತುಕೊಂಡು ನೃತ್ಯವನ್ನು ಮಾಡುತ್ತಾ ರಿವಾಯತ್ ಪದಗಳು, ಸವಾಲ್ ಜವಾಬ್ ಪದಗಳನ್ನು ಅತ್ಯಂತ ಮನಮೋಹಕವಾಗಿ ಹಾಡುವರು. ಗ್ರಾಮದ ಎಲ್ಲಾ ಜನಪದರು ಕೋಲಾಟ, ಡೊಳ್ಳಿನ ಹಾಡುಗಳು, ಹಲಗೆ ವಾದ್ಯಗಳ ಕಲೆಯನ್ನು ಪ್ರದರ್ಶಿಸುವರು.

ಈ ದಿನ ರಾತ್ರಿ ಗ್ರಾಮದ ಮಹಿಳೆಯರೆಲ್ಲರು ಸಕ್ಕರೆಯನ್ನು ವಿಶೇಷವಾಗಿ ಸಮರ್ಪಿಸುವರು. ತೆಂಗಿನಕಾಯಿ, ಕೊಬ್ಬರಿ, ನಿಂಬೆಹಣ್ಣು, ಉತ್ತತ್ತಿ, ಕಲ್ಲುಸಕ್ಕರೆಯನ್ನು ದೇವರಿಗೆ ಸಮರ್ಪಿಸುವರು.

ದೇವರ ಗುಡಿಯಲ್ಲಿ ಮುಲ್ಲಾ ಸಾಹೇಬರು ಓದಿಕೆಯನ್ನು ಮಾಡುವರು. ದೇವರು ಎಲ್ಲರಿಗೂ ಆರೋಗ್ಯ, ಐಶ್ವರ್ಯ, ಸಿರಿ-ಸಂಪತ್ತನ್ನು ಕೊಡಲಿ ಎಂದು ಓದಿಕೆ ಮಾಡುವರು. ರಾತ್ರಿಯಿಡೀ ಗ್ರಾಮದ ಯುವಕರು, ಹಿರಿಯರು, ಚಿಕ್ಕಮಕ್ಕಳು ನೃತ್ಯವನ್ನು ಮಾಡುತ್ತಾ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುವರು.

ನಂತರ ಮಾರನೇಯ ದಿನ ಬೆಳಗ್ಗೆ ದೇವರು ಅಲೆಗುಣಿಯ ಕೆಂಡವನ್ನು ಹಾಯುವುದು. ಕೆಂಡ ಹಾಯುವುದರಿಂದ ಇಷ್ಟಾರ್ಥಗಳು ಸಿದ್ದಿಸುವವು ಎಂದು ಇಲ್ಲಿಯ ಜನಪದರ ಅಪಾರ ನಂಬಿಕೆಯಾಗಿದೆ. ಡೋಲಿಯನ್ನು ಹೊತ್ತುಕೊಂಡು ಗ್ರಾಮದ ವಿವಿಧ ಬೀದಿಗಳಲ್ಲಿ ಸಂಚರಿಸುವರು. ಎಲ್ಲರೂ ಗುಂಪುಗೂಡಿ "ಕೆಂವಸಲ್ ಭಾಂವಸಲ್" ಎಂದು ಕೂಗುತ್ತಾ ನೃತ್ಯವನ್ನು ಮಾಡುವರು. ನಂತರ ಡೋಲಿಯನ್ನು ಹ್ಯಾರಡಾದ ಪ್ರಮುಖ ಸ್ಥಳವಾದ ಜಂಡಾ ಕಟ್ಟೆಯ ಮೇಲೆ ಕೂಡಿಸುವರು. ಇಲ್ಲಿ ವಿವಿಧ ರೀತಿಯ ಪೂಜೆಗಳನ್ನು ಸಲ್ಲಿಸುವರು. ಇಲ್ಲಿ ಡೋಲಿ ಹೊತ್ತವರ ಮೈಯಲ್ಲಿ ದೇವರು ಬರುವುದು ಸರ್ವೇಸಾಮಾನ್ಯವಾಗಿದೆ. ನಂತರ ಸಾಯಂಕಾಲ ಮೂರು ಗಂಟೆಗೆ ಅಲೆಗುಣಿಯನ್ನು ಮುಚ್ಚುವರು. ಅದರ ಮೇಲೆ ಬಾರಿಗಿಡದ ಕಂಟೆಯನ್ನು ಚುಚ್ಚುವರು. ನಂತರ ದೇವರು ಐದು ಗಂಟೆಗೆ ಡೋಲಿಯನ್ನು ಹೊತ್ತುಕೊಂಡು ಕೆರೆಗೆ ಹೋಗುವರು. ಹೀಗೆ ಡೋಲಿಯನ್ನು ಹೊತ್ತುಕೊಂಡವರ ಪಾದಗಳಿಗೆ ನೀರು ಸುರುವಿ ಭಕ್ತರು ನಮಿಸುವರು. ಫಕೀರರಾದವರು ಲಾಡಿ, ಹಸಲಿ, ಗಜರಾಗಳನ್ನು ಬಿಚ್ಚಿ ಡೋಲಿಯೊಳಗೆ ಹಾಕುವರು. ದಾರಿಯುದ್ದಕ್ಕೂ ಗ್ರಾಮದ ಮಹಿಳೆಯರು ಡೋಲಿಗೆ ಮಂಡಕ್ಕಿ ಹಾಗೂ ಬೆಲ್ಲವನ್ನು ಹಾಕುವರು. ಡೋಲಿಯ ಮುಂದೆ ಭಕ್ತರು ನೃತ್ಯವನ್ನು ಮಾಡುವರು. ೪-೫ ಜನರು ಕೈ ಕೈ ಹಿಡಿದು ವೃತ್ತಾಕಾರವಾಗಿ ಸುತ್ತುತ್ತಾ ರಿವಾಯತ್ ಪದಗಳನ್ನು ಹಾಡುವರು. ಈ ರಿವಾಯತ್ ಪದಗಳನ್ನು ಮುಂದೆ ಇಬ್ಬರು ಹೇಳಿದರೆ, ಹಿಂದೆ ಕೊನೆಯ ಸಾಲುಗಳನ್ನು ಉಳಿದವರು ಹೇಳುವರು. ಹೆಜ್ಜೆಕುಣಿತ, ಹಲಗಿನಾದ, ಕೋಲಾಟ, ಡೊಳ್ಳು ಬಾರಿಸುತ್ತಾ ಕೆರೆಗೆ ಹೋಗುವರು. ಅಲ್ಲಿ ದೇವರನ್ನು ಶುಭ್ರವಾದ ನೀರಿನಲ್ಲಿ ಮುಖ ತೊಳೆದು ಡೋಲಿಯನ್ನು ಬಿಳಿ ವಸ್ತ್ರದಿಂದ ಸುತ್ತಿಡುವರು. ನಂತರ ಎಲ್ಲರೂ ಆಲ್ ವಿದಾಯಾ ಆದ್ ವಿದಾಷಾ ಎಂದು ಹೇಳುತ್ತಾ ತಮ್ಮ-ತಮ್ಮ ಮನೆಗೆ ತೆರಳುವರು. ಮುಸ್ಲಿಂ ಬಾಂಧವರು ತಮ್ಮ ಮನೆಯಲ್ಲಿ ಚೊಂಗ್ಯಾವನ್ನು ತಯಾರಿಸಿ ಅಕ್ಕ-ಪಕ್ಕದ ಮನೆಗಳಿಗೆ ಕೊಟ್ಟು ಸಂಭ್ರಮಿಸುವರು.

ಹೀಗೆ ಹ್ಯಾರಡಾದಲ್ಲಿ ಈ ಮೊಹರಂ ಹಬ್ಬವನ್ನು ಧರ್ಮ ಬೇಧವಿಲ್ಲದೇ ಎಲ್ಲರೂ ಆಚರಿಸುವರು. ಈ ಮೊಹರಂ ಹಬ್ಬವು ವಿವಿಧ ಧರ್ಮಗಳ ಭಾವೈಕ್ಯದ ಸಂಕೇತವಾಗಿದೆ.

೪.೩. ನಂಬಿಕೆ-ವಿಧಿ-ನಿಷೇಧಗಳು

ನಂಬಿಕೆ ಎಂದರೆ ಒಂದು ಹೇಳಿಕೆಯ ಬಗ್ಗೆ ಮಾನಸಿಕ ಒಪ್ಪಗೆಯಾಗಿದೆ. ಈ ನಂಬಿಕೆಯನ್ನು ಮಾನವನು ಅನಾದಿ ಕಾಲದಿಂದಲೂ ತೋರುವ ಪ್ರವೃತ್ತಿಯಾಗಿದೆ. ಮಾನವನ ಅಸ್ತಿತ್ವಕ್ಕೆ ನಂಬಿಕೆಗಳೇ ಮೂಲ ಕಾರಣವಾಗಿದೆ. ಮಾನವನಿಗೆ ನನ್ನದು, ನಾನು, ನನ್ನವರು, ನನ್ನ ಬಳಗ ಎಂಬ ನಂಬಿಕೆ ಹುಟ್ಟಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದ್ದಾನೆ. "ಪರಂಪರಾಗತವಾದ ಹಾಗೂ ಎಲ್ಲಾ

ಕಾಲಗಳಲ್ಲಿಯೂ ಪುನರಾವರ್ತಿತವಾದ ಸಾಮೂಹಿಕ ಮನ್ನಣೆಯನ್ನು ದೊರಕಿಸಿಕೊಂಡ ಕಾರ್ಯಕಾರಣ ಹಾಗೂ ಭಾವ ಪ್ರಧಾನವಾದ ಜೀವಂತ ಪಳಿಯುಳಿಕೆಗಳೇ ಜನಪದ ನಂಬಿಕೆಗಳು" (ನಗುವಿನಹಳ್ಳಿ ಪಿ.ರತ್ನ : ೧೯೯೨:೨೫) According to standard Dictionary Of Folklore, Methology and legend Vol 2 : "Traditionally accepted concept, often of a cause and effect relationship, past, present and future accepted as a result of repeated and collective observation of finally of faith".

ಪ್ರತಿಯೊಂದು ಆಚರಣೆಗಳು ತನ್ನದೇ ಆದ ನಂಬಿಕೆಗಳನ್ನು ಇಟ್ಟುಕೊಂಡು ಬಂದಿವೆ. ಪ್ರತಿಯೊಂದು ನಂಬಿಕೆಗಳು ಭಯ ಹಾಗೂ ಭಾವನಾತ್ಮಕ ನೆಲೆಗಟ್ಟಿನಲ್ಲಿ ಹುಟ್ಟಿರುವಂತಹುಗಳು. ಜನಪದರಿಗೆ ನಂಬಿಕೆಗಳೇ ಜೀವಾಳವಾಗಿವೆ. ನಂಬಿಕೆಯಿಂದ ತನ್ನ ಸಮಾಜದ ಅಸ್ಮಿತೆಯನ್ನು ಕಾಪಾಡಿಕೊಂಡು ಮಾನವನು ಬರುತ್ತಿದ್ದಾನೆ. ಪ್ರತಿಯೊಂದು ನಂಬಿಕೆಯು ಮಾನವನ ಮನಸ್ಸಿನ ಒಪ್ಪಿತ ಭಾವನೆಯಾಗಿದೆ. ಈ ಒಪ್ಪಿತ ಭಾವನೆಯಿಂದ ಸಂಪ್ರದಾಯಗಳು ಹುಟ್ಟಿಕೊಂಡಿವೆ. ಮಾನವನ ಬದುಕಿಗೂ, ನಂಬಿಕೆಗೂ ಬಿಡಿಸಲಾಗದ ಸಂಬಂಧವಿದೆ.

ಹ್ಯಾರಡಾ ಗ್ರಾಮದಲ್ಲಿ ನಂಬಿಕೆಗಳು ವ್ಯಕ್ತಿಗಳ ಮೇಲೆ ನೇರವಾದ ಸಂಬಂಧವನ್ನಿಟ್ಟುಕೊಂಡಿವೆ. ಗ್ರಾಮದ ಪ್ರತಿಯೊಂದು ಕುಟುಂಬಗಳು ಯಾವುದೆ ಕಾರ್ಯಗಳನ್ನು ಮಾಡಿದರೂ ಶಾಸ್ತ್ರ ಪಂಚಾಂಗವನ್ನು ನಂಬುತ್ತಾರೆ. ಮಕ್ಕಳ ನಾಮಕರಣ, ಮದುವೆ. ಪೂಜೆ ಮುಂತಾದವುಗಳನ್ನು ಪಂಚಾಂಗವನ್ನು ನೋಡಿಯೇ ನಿಶ್ಚಯಿಸುತ್ತಾರೆ. ಪ್ರತಿಯೊಂದು ಶುಭ ಕಾರ್ಯಗಳಿಗೆ ನಂಬಿಕೆಯೇ ಮೂಲ ಆಧಾರವಾಗಿದೆ.

ನಂಬಿಕೆ–ವಿಧಿ–ನಿಷೇಧಗಳು

೧ ಈಶಾನ್ಯ ದಿಕ್ಕಿನಲ್ಲಿ ಮಿಂಚಿದರೆ ಮಳೆಯಾಗುತ್ತದೆ.

೨ ಕೊಡತಿ ಹುಳು ಕಾಣಿಸಿಕೊಂಡರೆ ಮಳೆಯಾಗುತ್ತದೆ.

೩ ಕಾಮನಬಿಲ್ಲು ಮೂಡಿದರೆ ಮಳೆಯಾಗುವುದಿಲ್ಲ.

೪ ಊಟದ ತಟ್ಟೆಯನ್ನು ಕಾಲಲ್ಲಿ ಒದೆಯಬಾರದು ಮತ್ತು ದಾಟಬಾರದು ಇದರಿಂದ ಹೊಟ್ಟೆ ನೋವು ಬರುವುದು.

೫ ಊಟದ ತುತ್ತನ್ನು ತೂಕ ಮಾಡಬಾರದು.

೬ ನೆಲಕ್ಕೆ ಕೈಯೂರಿ ಊಟ ಮಾಡಬಾರದು.

೭ ಅಮವಾಸ್ಯೆ ದಿನ ದೆವ್ವಗಳ ಸಂಚಾರ ಹೆಚ್ಚು.

೮ ಹುಣಸೆ ಮರದಲ್ಲಿ ದೆವ್ವಗಳು ಹೆಚ್ಚು.

೯ ದೇವರ ದೀಪವನ್ನು ಒಂದೇ ಸಾರಿಗೆ ಆರಿಸಬಾರದು, ಮೂರನೇ ಸಾರಿಗೆ ಆರಿಸಬೇಕು.

೧೦ ವರ್ಷಕ್ಕೊಂದು ಹಬ್ಬದಲ್ಲಿ ಮಕ್ಕಳನ್ನು ಹೊಡೆಯಬಾರದು, ವರ್ಷಪೂರ್ತಿ ಅದೇ ಪುನರಾವರ್ತಿಸುತ್ತದೆ.

೧೧ ತೊಲೆ ಅಡಿಯಲ್ಲಿ ಮಲಗಬಾರದು, ಕೆಟ್ಟ ಕನಸು ಬೀಳುತ್ತದೆ.

೧೨ ಸಂಜೆಯಾದ ಮೇಲೆ ಮನೆಯ ಬಾಗಿಲು ಮುಚ್ಚಬಾರದು ಕಾರಣ ಮನೆಯ ಲಕ್ಷ್ಮಿ ಹೊರಗೆ ಹೊಗುತ್ತಾಳೆ.

೧೩ ಮಂಗಳವಾರ ಮಗಳನ್ನು ಗಂಡನ ಮನೆಗೆ ಕಳುಹಿಸಬಾರದು.

೧೪ ಶುಕ್ರವಾರ ಸೊಸೆಯನ್ನು ಕಳುಹಿಸಬಾರದು.

೧೫ ಹುಟ್ಟಿದ ದಿನದಲ್ಲಿ ತಲೆ ಬೋಳಿಸಬಾರದು.

೧೬ ಹಸ್ತದಲ್ಲಿ ಗರುಡ ಇದ್ದರೆ ಹಾವು ಕಚ್ಚುವುದಿಲ್ಲ.

೧೭ ಇರುವೆ ಗೂಡಿಗೆ ಅಕ್ಕಿ ಹಾಕಿದರೆ ಅದೃಷ್ಟ ಬರುತ್ತದೆ.

೧೮ ನಡುರಾತ್ರಿಯಲ್ಲಿ ನಾಯಿಗಳು ಕೂಗಬಾರದು.

೧೯ ಹುಂಜ ಬಾಗಿಲ ಮೇಲೆ ನಿಂತು ಕೂಗಬಾರದು.

೨೦ ಗೂಬೆ ರಾತ್ರಿಯ ವೇಳೆ ಮನೆಯ ಮೇಲೆ ಕೂಗಬಾರದು.

೨೧ ಪ್ರಯಾಣ ಮಾಡುವಾಗ ಹಾವು ಎಡದಿಂದ ಬಲಕ್ಕೆ ಬಂದರೆ ಒಳ್ಳೆಯದು.

೨೨ ಹಲ್ಲಿ ಬಲದಿಂದ ತೊಲೆಯ ಮೇಲೆ ನುಡಿದರೆ ಶುಭವಾಗುವುದು.

೨೩ ನರಿ ಆಗ್ನೇಯ ದಿಕ್ಕಿನಲ್ಲಿ ಕೂಗಿದರೆ ಅಶುಭ.

೨೪ ಎಳ್ಳು ಮತ್ತು ಕುಂಬಳಕಾಯಿ ತೆಗೆದುಕೊಳ್ಳುವಾಗ ದುಡ್ಡು ಕೊಟ್ಟು ತೆಗೆದುಕೊಳ್ಳಬೇಕು.

ಅಧ್ಯಾಯ–೫

ಹ್ಯಾರಡ ಗ್ರಾಮದ ಸ್ಥಿತಿಗತಿಗಳು

ಶಿಕ್ಷಣವು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಜೋಪಾನವಾಗಿ ಕಾಪಾಡುವ ಹೊಣೆಯನ್ನು ಹೊಂದಿದೆ. ಈ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯು ಜನಪದರ ಅನುಭವ, ಸಂಪ್ರದಾಯ, ಪದ್ಧತಿಗಳು, ಮೌಲ್ಯಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇವುಗಳ ಜೊತೆ ಜೊತೆಗೆ ಸಾಮಾಜಿಕ ಅರಿವು ನಿರ್ಮಿಸುವ ಪಾತ್ರವೂ ಶಿಕ್ಷಣದ್ದಾಗಿದೆ. ಸಮಾಜವು ಇಂತಹ ಶೈಕ್ಷಣಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ತನ್ನದೇ ಆದ ಕೆಲವು ಶಿಕ್ಷಣದ ಅನೌಪಚಾರಿಕ ಮತ್ತು ಔಪಚಾರಿಕ ಪ್ರಾತಿನಿಧಿಕ ಸಂಸ್ಥೆಗಳನ್ನು ಹುಟ್ಟುಹಾಕಿತು. ಅವುಗಳೆಂದರೆ ಗುರುಕುಲ, ಮದರಸ,ಚರ್ಚ್ , ಶಾಲೆ, ಕಾಲೇಜು ಇತ್ಯಾದಿ.

ಪ್ರಾಚೀನ ಕಾಲದಲ್ಲಿ ಶಿಕ್ಷಣವನ್ನು ಗುರುವಿನ ಬಳಿಗೆ ಹೋಗಿ ಕಲಿಯಬೇಕಿತ್ತು. ಈಗಿನಂತೆ ಶಿಕ್ಷಣದ ಮತ್ತು ಶಾಸನಬದ್ದ ಪ್ರಾತಿನಿಧಿಕ ಸಂಸ್ಥೆಗಳು ಇರಲಿಲ್ಲ. ಗುರುಕುಲ ಮತ್ತು ಆಶ್ರಮಗಳಲ್ಲಿ ಶಿಕ್ಷಣ ದೊರೆಯುತ್ತಿತ್ತು. ಆಶ್ರಮದ ವರಾಂಡದಲ್ಲಿ ಮರದ ಕೆಳಗೆ ಶಿಕ್ಷಣದ ಪ್ರಸಾರ ಸಾಗುತಿತ್ತು. ಇಂತಹ ಶಿಕ್ಷಣ ಕೇವಲ ರಾಜ ಮಹಾರಾಜರುಗಳ ಮಕ್ಕಳಾದ ರಾಜಕುಮಾರರಿಗೆ ಮೀಸಲಾಗಿತ್ತು. ಆಸ್ಥಾನದ ಪ್ರತಿಷ್ಠಿತ ವ್ಯಕ್ತಿಗಳ ಮಕ್ಕಳಿಗೆ ದೊರಕುತ್ತಿತ್ತು. ಶಿಕ್ಷಣವು ಸಾರ್ವತ್ರಿಕವಾಗಿರಲಿಲ್ಲ. ಇಲ್ಲಿ ಋಷಿ ಮುನಿಗಳು ಮೌಖಿಕವಾಗಿ ವೇದ, ಶಾಸ್ತ್ರ, ಪುರಾಣ, ಬಾಯಿಲೆಕ್ಕ ಮುಂತಾದವುಗಳನ್ನು ಕಲಿಸುತ್ತಾ ಅಕ್ಷರಭ್ಯಾಸವನ್ನು ಕೈಗಳ ಬೆರಳಿನಿಂದ ಮರಳಿನ ಮೇಲೆ ಬರೆಯುವ, ತೀಡುವ ಪದ್ಧತಿ ರೂಢಿಯಲ್ಲಿತ್ತು. ಗುರುಗಳ ಸೇವೆಯನ್ನು ಮಾಡುತ್ತಾ ಶಿಷ್ಯರ ಬೌದ್ಧಿಕ ಮಟ್ಟವನ್ನು ವಿಸ್ತರಿಸುವ ಪದ್ಧತಿ ಇತ್ತು. ತದನಂತರದಲ್ಲಿ ಶಿಕ್ಷಣದ ಪದ್ಧತಿ ಬದಲಾಯಿತು. ರಾಜರುಗಳು ಅರಮನೆಗೆ ಋಷಿ–ಮುನಿಗಳಿಗೆ ಆಮಂತ್ರಣವನ್ನು ಕೊಟ್ಟು ಅರಮನೆಯಲ್ಲಿಯೇ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿದರು. ಇಲ್ಲಿ ಗುರುಗಳು ಪ್ರಾದೇಶಿಕ ಬಂಧಿಯಾಗಿ ರಾಜ–ಮಹಾರಾಜರುಗಳ ಮರ್ಜಿನಲ್ಲಿ ಶಿಕ್ಷಣವನ್ನು ಕೊಡುವ ಕೆಲಸದಲ್ಲಿ ನಿರತರಾದರು. ಇದು ಪ್ರಾಚೀನ ಭಾರತದಲ್ಲಿ ಶಿಕ್ಷಣ ನಡೆದುಬಂದ ಬಗೆ.

ಬ್ರಿಟೀಷರ ಕಾಲಾವಧಿಯಲ್ಲಿ ದೇಶೀಯ ಶಿಕ್ಷಣದ ಮೇಲೆ ಹಲವಾರು ಬದಲಾವಣೆಗಳು ಆದವು. ಇವರು ಹಲವಾರು ಆಯೋಗಗಳನ್ನು ನೇಮಿಸಿ ಅವುಗಳು ಕೊಟ್ಟ ವರದಿಯ ಅನುಸಾರ ಪ್ರಾಥಮಿಕ ಶಿಕ್ಷಣವನ್ನು ಪ್ರಚುರ ಪಡಿಸಿದರು. ಈ ಆಯೋಗದ ಬಹುಪಾಲು ಶಿಫಾರಸ್ಸುಗಳು ಇಡೀ ದೇಶಾದ್ಯಂತ ಜಾರಿಯಲ್ಲಿ ಬಂದಿತು. ವಿಶೇಷವಾಗಿ ಪ್ರಾಥಮಿಕ ಶಿಕ್ಷಣವನ್ನು ಪ್ರಸರಿಸುವ ಒಂದು ಮಹಾನ್ ಉದ್ದೇಶವನ್ನು ಹೊಂದವು. ಇದರ ಫಲವಾಗಿ ರಾಷ್ಟ್ರಾದ್ಯಾಂತ ಬಹುತೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಪ್ರಾರಂಭವಾದವು ಅದರಂತೆಯೇ ಹೈದರಾಬಾದ್ ಪ್ರಾಂತ್ಯ ಕೊಡಗು ಪ್ರಾಂತ್ಯ, ಮುಂಬೈ ಪ್ರಾಂತ್ಯಗಳ ಬಹುತೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಉದಯವಾದವು. ಆಂದ್ರದ ಗಡಿರೇಖೆಯನ್ನು ಹೊಂದಿಕೊಂಡ ಬಳ್ಳಾರಿಯಲ್ಲಿ ಹಲವಾರು ಪ್ರಾಥಮಿಕ ಶಾಲೆಗಳು ಪ್ರಾರಂಭವಾದವು.

೫.೧ ಶೈಕ್ಷಣಿಕ ಸ್ಥಿತಿಗತಿಗಳು

ಹ್ಯಾರಡ ಗ್ರಾಮವು ತನ್ನದೇ ಆದ ಚಾರಿತ್ರಿಕ ಹಿನ್ನಲೆಯನ್ನು ಹೊಂದಿದೆ. ಮೊದಲಿನಿಂದಲೂ ಗ್ರಾಮದಲ್ಲಿ ಮೇಲುವರ್ಗದ ಜನರ ಆಳ್ವಿಕೆ, ದಬ್ಬಾಳಿಕೆ ಜೋರಾಗಿತ್ತು. ಜನರು ಸುಶಿಕ್ಷಿತರಾಗಿರಲಿಲ್ಲ. ಜೀತದಾಳಿನಂತೆ ಮೇಲು ವರ್ಗದ ಸಮುದಾಯದ ಕಪಿ ಮುಷ್ಠಿಯಲ್ಲಿ ಮುಳುಗಿ ಹೋಗಿದ್ದರು. ಗ್ರಾಮದಲ್ಲಿ ಶಿಕ್ಷಣ ಪ್ರೇಮಿಗಳಾದ ಹಿರೇಮಠದ ಶಿವರುದ್ರಯ್ಯನವರು ಹ್ಯಾರಡ ಗ್ರಾಮಕ್ಕೆ ಮೊಟ್ಟ ಮೊದಲ ಶಿಕ್ಷಣ ಪ್ರಸಾರ ಮಾಡಿದ ಮಹಾನ್ ವ್ಯಕ್ತಿಗಳು. ಹ್ಯಾರಡ ಗ್ರಾಮದ ಮೊಟ್ಟ ಮೊದಲ ಸಂಬಳ ರಹಿತ ಶಿಕ್ಷಕರೆಂದರೆ ಹಿರೇಮಠದ ಶಿವರುದ್ರಯ್ಯನವರು. ಸ್ವತಃ ತಮ್ಮ ಮನೆಯನ್ನೇ ಶಾಲೆಯನ್ನಾಗಿ ಮಾಡಿ ಶಿಕ್ಷಣದ ಬೀಜವನ್ನು ಬಿತ್ತಿದ ವ್ಯಕ್ತಿ. ಅಂದಿನ ಕಾಲದ ಮೇಲುವರ್ಗದ ದಬ್ಬಾಳಿಕೆ, ಮೂಢನಂಬಿಕೆ, ಕಂದಾಚಾರ ಇವುಗಳಿಗೆ ಹೆದರದೇ ಸೆಡ್ಡು ಹೊಡೆದು ಗ್ರಾಮದಲ್ಲಿ ಶಿಕ್ಷಣ ಕ್ರಾಂತಿಯನ್ನು ಎಬ್ಬಿಸಿದರು.

ಶಿವರುದ್ರಯ್ಯ ಅವರ ಸಂಕ್ಷಿಪ್ತ ಪರಿಚಯ

ಹಿರೇಮಠದ ಶಿವರುದ್ರಯ್ಯನವರು ಸುಮಾರು ಏಳು ತಲೆಮಾರಿನ ಕುಟುಂಬ. ಇವರ ಪೂರ್ವಜರು ಯಲಬುರ್ಗದಿಂದ ಹ್ಯಾರಡ ಗ್ರಾಮಕ್ಕೆ ವ್ಯಾಪಾರಕ್ಕೆಂದು ಬಂದವರು. ಹೀಗೆ ಯಲಬುರ್ಗಾದಿಂದ ಬಂದ ಶಿವರುದ್ರಯ್ಯನವರು ಹ್ಯಾರಡದಲ್ಲಿ ಒಂದು ಮಠವನ್ನು ಪಟ್ಟಚರಂತರ ಸಮಕ್ಷಮದಲ್ಲಿ ಸ್ಥಾಪಿಸಿದರು. ನಂತರ ಹ್ಯಾರಡಾದಿಂದ ಎರಡು ತಲೆಮಾರುಗಳು ಮುಂಡರಗಿ ಮತ್ತು ಬಾಗಳಿ ಗ್ರಾಮಕ್ಕೆ ವಲಸೆ ಹೋದರು. ಒಂದು ತಲೆಮಾರು ಹ್ಯಾರಡಾದ ಮೂಲ ಮಠದ ಮನೆಯಲ್ಲಿಯೇ ವಾಸವನ್ನು ಮುಂದುವರೆಸಿದರು. ಶಿವರುದ್ರಯ್ಯನವರ ತಂದೆಯವರಾದ ಕೊಟ್ರಯ್ಯನವರು ಜಂಗಮ ವೃತ್ತಿಯನ್ನು ಆಯ್ದುಕೊಂಡು ಮೂಲ ಮಠದ ಮನೆಯಲ್ಲಿಯೇ ವೇದ, ಸಂಸ್ಕೃತ, ಜ್ಯೋತಿಷ್ಯ ಶಾಸ್ತ್ರವನ್ನು ಭಕ್ತರ ಮನೆ ಮನೆಗೆ ತೆರಳಿ ಹೇಳುತ್ತಾ ಪೂಜಾ ಕಾರ್ಯಕ್ರಮ ಮಾಡುತ್ತಾ ಸಾಗಿದ್ದರು. ಕೊಟ್ರಯ್ಯನವರಿಗೆ ಎರಡು ಜನ ಗಂಡು ಮಕ್ಕಳು. ಮೊದಲನೆಯವರು ಶಿವರುದ್ರಯ್ಯನವರು. ಕೊಟ್ರಯ್ಯನವರಿಗೆ ಇಬ್ಬರು ಹೆಂಡಂದಿರು ಗುರು ಸಿದ್ದಮ್ಮ, ಸಿದ್ರಾಮಮ್ಮ.

ಶಿವರುದ್ರಯ್ಯನವರು ಬಾಲ್ಯದ ವಿದ್ಯಾಭ್ಯಾಸವನ್ನು ಮನೆಯಲ್ಲಿಯೇ ತಂದೆಯಿಂದ ಪಡೆದರು. ಮುಂದೆ ಜೋತಿಷ್ಯ ಶಾಸ್ತ್ರವನ್ನು ಕಲಿಯಲು ಹರಪನಹಳ್ಳಿಗೆ ತೆರಳಿ ಜೋತಿಷ್ಯ ಶಾಸ್ತ್ರ, ವೇದಶಾಸ್ತ್ರ, ಸಂಸ್ಕೃತ, ಕಲಿತು ಗ್ರಾಮಕ್ಕೆ ಹಿಂದಿರುಗಿದರು. ಗ್ರಾಮಕ್ಕೆ ಬಂದ ಶಿವರುದ್ರಯ್ಯನವರು ಸಮಾಜದ ಅನಿಷ್ಟ ಪದ್ದತಿಗಳನ್ನು ನೋಡಿ ಬೇಸತ್ತು ಸಮಾಜ ಬದಲಾವಣೆಗೆ ಏನಾದರೂ ಮಾಡಬೇಕೆಂಬ ಮಹಾದಾಸೆಯಿಂದ ಸ್ವಯಂ ಪ್ರೇರಣೆಯಿಂದ ಜನರನ್ನು ಸುಧಾರಿಸಲು ಪ್ರಯತ್ನಸಿದರು. ಜನರನ್ನು ಸುಧಾರಿಸಲು ಸಿದ್ದ ಪರಿಹಾರವೆಂದರೆ ಶಿಕ್ಷಣ ಜ್ಞಾನ ಮುಖ್ಯವೆಂದು ಅರಿತ ಅವರು ತಮ್ಮ ಮನೆಯಲ್ಲಿಯೇ "ಗುರುಕುಲ" ಶಿಕ್ಷಣ ಕೊಡಲು ಪ್ರಾರಂಭಿಸಿದರು. ಮಕ್ಕಳಿಂದ ಯಾವುದೇ ಫೀಜನ್ನು ತೆಗೆದುಕೊಳ್ಳದೇ ಉಚಿತ ಶಿಕ್ಷಣವನ್ನು ಕೊಟ್ಟ ಗ್ರಾಮದ ಮೊದಲ ವ್ಯಕ್ತಿ ಶಿವರುದ್ರಯ್ಯನವರು. ಹಳಗನ್ನಡ, ಸಂಸ್ಕೃತ, ಶ್ಲೋಕ, ತತ್ವಬೋಧನೆ, ಪಂಚಾಂಗ ಪಠಣ, ಬುದ್ದ, ಬಸವ, ಏಸು, ಗುರುನಾನಕ್, ಪೈಗಂಬರ್, ಸಾಕ್ರಟೀಸ್, ಐನ್ ಸ್ಟೀನ್ ಮುಂತಾದ ದಾರ್ಶನಿಕರ ಬಗ್ಗೆ ಮಾಹಿತಿಗಳನ್ನು ನೀಡುತ್ತಾ ಮಕ್ಕಳಿಗೆ ಶಿಕ್ಷಣವನ್ನು ನೀಡಿದರು. ಸೋಮೇಶ್ವರ ಶತಕ, ಶಿವಭಕ್ತಿಸಾರ, ನಿಜಲಿಂಗ, ಗೆಜ್ಜೆ ಗಣಿತ ಮುಂತಾದ ಕೃತಿಗಳ ಪರಿಚಯವನ್ನು ಮಾಡಿಕೊಡಲಾಗುತ್ತಿತ್ತು. ಗ್ರಾಮದಲ್ಲಿ ಶಾಲೆಯನ್ನು ತೆರೆಯಲು ನೇರವಾಗಿ ದೆಹಲಿ ಬ್ರಿಟೀಷ್ ಸರ್ಕಾರಕ್ಕೆ ಪತ್ರವನ್ನು ಬರೆದರು. ಆ ಪತ್ರದಿಂದ ಅಂದಿನ ಬ್ರಿಟೀಷ್ ಸರ್ಕಾರವು ಮುಂಬೈ ಸರ್ಕಾರಕ್ಕೆ ಸೂಚನೆ ನೀಡಿತು. ತದ ನಂತರದಲ್ಲಿ ಕ್ರಿ.ಶ. ೧೯೧೩ ರಲ್ಲಿ ಬ್ರಿಟೀಷ್ ಅಧಿಕಾರಿಗಳು ಗ್ರಾಮಕ್ಕೆ ಬಂದು ಶಿವರುದ್ರಯ್ಯನವರ ಕಾರ್ಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಕ್ರಿ.ಶ ೧೯೧೪ ರಲ್ಲಿ ಪ್ರಾಥಮಿಕ ಶಾಲೆಯನ್ನು ಅಧಿಕೃತವಾಗಿ ಪ್ರಾರಂಭಿಸಲಾಯಿತು.

೧೯೧೪ ರಿಂದ ೧೯೭೮ ರವರೆಗೆ ತಮ್ಮ ಮನೆಯಲ್ಲಿಯೇ ಶಿಕ್ಷಣವನ್ನು ಕೊಟ್ಟರು. ೧೮೮೯ ರಲ್ಲಿ ಜನಿಸಿದ ಶಿವರುದ್ರಯ್ಯನವರು ೧೯೬೮ ರಲ್ಲಿ ಕಾಲವಾದರು. ಇವರಿಗೆ ೩ ಜನ ಗಂಡು ಮಕ್ಕಳು ೭ ಜನ ಹೆಣ್ಣು ಮಕ್ಕಳಿದ್ದರು. ಎಲ್ಲರಿಗೂ ಉತ್ತಮ ಶಿಕ್ಷಣವನ್ನು ಕೊಡಿಸಿದರು. ಇವರ ಮಗನಾದ ಹೇಮಯ್ಯ ಹಿರೇಮಠ ಇವರು ಇದೇ ಶಾಲೆಯಲ್ಲಿ ಪ್ರಭಾರಿ ಮುಖ್ಯ ಗುರುಗಳಾಗಿ ಕಾರ್ಯನಿರ್ವಹಿಸಿದರು. ಹಾಗೆಯೇ ಇವರ ಸಂತತಿಯ ಮೊಮ್ಮಗನಾದ ಎಚ್.ಎಂ. ಕೊಟ್ರಯ್ಯನವರು ಈಗಲೂ ಸಹ ಇದೇ ಶಾಲೆಯಲ್ಲಿ ಪ್ರಭಾರಿ ಮುಖ್ಯ ಶಿಕ್ಷಕರಾಗಿ ಹಾಗೂ ಪ್ರಸ್ತುತ ಸಹ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶಿವರುದ್ರಯ್ಯನವರು ಮೊಟ್ಟಮೊದಲ ಸಂಬಳ ರಹಿತ ಶಿಕ್ಷಕರಾದರೆ, ನಂತರದಲ್ಲಿ ಕ್ರಿ.ಶ. ೧೯೧೪ ರಲ್ಲಿ ಕೂಡ್ಲಯ್ಯ ಎಂಬುವವರು ಮುಖ್ಯ ಶಿಕ್ಷಕರಾಗಿ ಈ ಶಾಲೆಗೆ ನೇಮಕವಾದರು. ಈ ಶಾಲೆಯಲ್ಲಿ ಕಾರ್ಯನಿರ್ವಹಿಸಿದ ಮುಖ್ಯಶಿಕ್ಷಕರು

೧) ಕೂಡ್ಲಯ್ಯ – ೧೯೧೪ ರಿಂದ ೧೯೨೨

೨) ಬಿ. ಶಿವಲಿಂಗಪ್ಪ – ೧೯೨೨ ರಿಂದ ೧೯೨೩

೩) ಕೃಷ್ಣಭಟ್ಟಗೋಸಾಯಿ – ೧೯೨೩ ರಿಂದ ೧೯೨೪

೪) ಜಿ. ವೀರಣ್ಣ – ೧೯೨೪ ರಿಂದ ೧೯೩೮

೫) ಗುರುಲಿಂಗಪ್ಪ – ೧೯೩೮ ರಿಂದ ೧೯೪೧

೬) ಕೆ. ಕೊಟ್ರಯ್ಯ – ೧೯೪೧ ರಿಂದ ೧೯೫೪

೭) ಎಂ.ಎಸ್.ಬಿದ್ದಪ್ಪ – ೧೯೫೪ ರಿಂದ ೧೯೬೬

೮) ಟಿ.ಕೊಟ್ರಯ್ಯ – ೧೯೬೬ ರಿಂದ ೧೯೭೦

೯) ಬಿ. ವೀರಾಚಾರ್ಯ – ೧೯೭೦ ರಿಂದ ೧೯೭೧

೧೦) ಸೂರ್ಯನಾರಾಯಣ – ೧೯೭೧ ರಿಂದ ೧೯೭೨ (ಪ್ರಥಮ ಪದವಿ ಮುಖ್ಯಗುರುಗಳು)

೧೧) ಬಿ.ವೀರಾಚಾರ್ಯ – ೧೯೭೨ ರಿಂದ ೧೯೭೪

೧೨) ಎಸ್.ಕೆ. ಬಸವರಾಜ – ೧೯೭೪ ರಿಂದ ೧೯೭೯

೧೩) ಬಿ.ವೀರಾಚಾರ್ಯ – ೧೯೭೯ ರಿಂದ ೧೯೮೦

೧೪) ಕೆ. ರಂಗನಗೌಡ್ರು – ೧೯೮೦ ರಿಂದ ೧೯೮೦ ಡಿಸೆಂಬರ್.

೧೫) ಎನ್. ನಾಗರಾಜ – ೧೯೮೦ ರಿಂದ ೧೯೮೩

೧೬) ಹೆಚ್.ಎಂ. ಹೇಮಯ್ಯ – ೧೯೮೩ ರಿಂದ ೧೯೮೭

೧೭) ಹೆಚ್.ನಾಗಪ್ಪ – ೧೯೮೭ ರಿಂದ ೧೯೮೮

೧೮) ಹೆಚ್.ಎಂ.ಹೇಮಯ್ಯ – ೧೯೮೮ ರಿಂದ ೧೯೯೨

೧೯) ಎನ್.ವಿಶ್ವನಾಥ – ೧೯೯೨ ರಿಂದ ೧೯೯೨ ಅಗಸ್ಟ–೧೩.

೨೦) ಹೆಚ್.ಸಣ್ಣಪ್ಪ – ೧೯೯೨ ಅಗಸ್ಟ–೨೨ ರಿಂದ ೧೯೯೪

೨೧) ಎನ್.ವಿಶ್ವನಾಥ – ೧೯೯೪ ನವಂಬರ್ ರಿಂದ ೧೯೯೫

೨೨) ಹೆಚ್.ಸಣ್ಣಪ್ಪ – ೧೯೯೫ ರಿಂದ ೨೦೦೨

೨೩) ಹೆಚ್.ಬಿ.ಅಡವಿ – ೨೦೦೨ ರಿಂದ ೨೦೦೩

೨೪) ಎ.ಆರ್. ಮಸೂತಿ – ೨೦೦೩ ರಿಂದ ೨೦೦೪

೨೫) ಹೆಚ್.ಬಿ.ಅಡವಿ – ೨೦೦೪ ರಿಂದ ೨೦೦೭

೨೬) ಕೆ. ಶಿವಾನಂದಪ್ಪ – ೨೦೦೭ ರಿಂದ ೨೦೦೮

೨೭) ಹೆಚ್.ಬಿ.ಅಡವಿ – ೨೦೦೮ ರಿಂದ ೨೦೦೯

೨೮) ಕೆ.ಸಿದ್ದಪ್ಪ – ೨೦೦೯ ರಿಂದ ೨೦೦೯ ಜೂನ್

೨೯) ಬಿ. ಹಾಲೇಶ್ – ೨೦೦೯ ರಿಂದ ೨೦೧೦

೩೦) ಹೆಚ್.ಎಂ. ಕೊಟ್ರಯ್ಯ – ೨೦೧೦ ರಿಂದ ೨೦೧೩

೩೧) ಎ.ಹನುಮಂತನಾಯ್ಕ – ೨೦೧೩ ರಿಂದ ಪ್ರಸ್ತುತ.

ಹೀಗೆ ಪ್ರಾರಂಭವಾದ ಹ್ಯಾರಡ ಶಾಲೆಯು ಊರಿನವರ ಅಪಾರವಾದ ಸಹಕಾರ ಮತ್ತು ಕಾಳಜಿಯಿಂದಾಗಿ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಲೇ ಬಂದಿತು. ಊರಿನವರು ಶಾಲೆಗೆ

ಬೇಕಾದ ಖುರ್ಚಿ, ಛೇರ್, ಟೇಬಲ್ ಮತ್ತು ಬೆಂಚ್‌ಗಳನ್ನು ದಾನವನ್ನಾಗಿ ಕೊಡುತ್ತಲೇ ಬಂದಿದ್ದಾರೆ. ಶಾಲೆಯಲ್ಲಿ ಕಲಿಸಿದ ಗುರುಗಳು ಸಹ ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಲೇ ಬಂದಿದ್ದಾರೆ. ಅದಕ್ಕೆ ಸಂಬಂಧ ಪಟ್ಟಂತೆ ದಿನಾಂಕ ೨೭-೦೯-೧೯೫೧, ೨೬-೦೪-೧೯೫೩, ಹಾಗೂ ೨೩-೦೯-೧೯೫೩ ರಲ್ಲಿ ಶಾಲೆಗೆ ಭೇಟಿ ನೀಡಿದ ಹಿರಿಯ ಅಧಿಕಾರಿಗಳ ವರದಿಗಳು ಆಧಾರವಾಗುತ್ತವೆ. ೨೦-೦೯-೧೯೫೧ ರಲ್ಲಿ ಶಾಲೆಗೆ ಭೇಟಿ ನೀಡಿದ ಶ್ರೀ ಎ. ಶಾಂತವೀರಯ್ಯ ಜಿಲ್ಲಾ ಬೋರ್ಡಿನ ಜಿಲ್ಲಾಧಿಕಾರಿ ಅವರು ನೀಡಿರುವ ವರದಿಯು ಈ ರೀತಿಯಾಗಿದೆ. "ಮುಖ್ಯೋಪಾಧ್ಯಾಯರು ಹಾಜರಿದ್ದಾರೆ. ಇನ್ನಿಬ್ಬರು ಕ್ಯಾಜ್ಯುಯಲ್ ರಜಾ ತೆಗೆದುಕೊಂಡಂತೆ ತಿಳಿಯುತ್ತದೆ. ಶಾಲೆಗೆ ಕಟ್ಟಿಗೆಯ ಸಾಮಾನುಗಳನ್ನು ಗ್ರಾಮದವರೇ ಕೊಟ್ಟಿರುವುದು ಸಂತೋಷದ ಸಂಗತಿ. ತೋಟವು ಚೆನ್ನಾಗಿದೆ. ಮುಖ್ಯೋಪಾಧ್ಯಾಯರಾದ ಕೊಟ್ರಯ್ಯನವರು ಶಾಲೆಗಾಗಿ ನಿಸ್ಸೀಮ ಕಳಕಳಿಯಿಂದ ಕೆಲಸ ಮಾಡಿರುವುದು ಸಂತೋಷ. ಈ ಶಾಲೆಯು ಉತ್ತರೋತ್ತರ ವೃದ್ಧಿಹೊಂದಿ ಹೈಯರ್ ಎಲಿಮೆಂಟರಿ ಶಾಲೆಯಾಗಲೆಂದು ಹಾರೈಸುತ್ತೇನೆ" ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ದಿನಾಂಕ ೨೬-೦೪-೧೯೫೩ ರಂದು ಶಾಲೆಯನ್ನು ವೀಕ್ಷಿಸಿದ ಶ್ರೀ ಎಂ. ಕೃಷ್ಣಮೂರ್ತಿ ಅಸಿಸ್ಟೆಂಟ್ ಜಿಯಾಲಾಜಿಸ್ಟ್, ಜಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ ಅವರು ತಮ್ಮ ವರದಿಯಲ್ಲಿ ಈ ರೀತಿ ಹೇಳಿದ್ದಾರೆ. "Working of the school is impressive, due to the united efforts of the teachers, As the viillage is a poor and backward One. It is desirable to strart a "poor boys hostel" for which local Co-Operation will be forth coming school would also be apgraded to a higher elementary school" (ಶಾಲೆಯಲ್ಲಿ ಮಾಡಿದ ಕೆಲಸಗಳು ಬಹಳಷ್ಟು ಮಾದರಿಯಾಗಿವೆ. ಇದು ಎಲ್ಲಾ ಶಿಕ್ಷಕರ ಒಗ್ಗಟ್ಟಿನ ಪ್ರಯತ್ನವಾಗಿದೆ. ಗ್ರಾಮವು ಬಡತನದಿಂದ ಹಿಂದುಳಿದ ವರ್ಗಗಳನ್ನು ಹೊಂದಿದೆ. ಆದ್ದರಿಂದ ಬಡ ಬಾಲಕರ ಹಾಸ್ಟಲ್ ಅನ್ನು ಪ್ರಾರಂಭಿಸುವುದು ಅಪೇಕ್ಷಣೀಯವಾಗಿದೆ. ಇದಕ್ಕಾಗಿ ಸ್ಥಳೀಯ ಸಹಕಾರವು ಮುಂದೆ ಬಂದು, ಮುಂಬರುವ ದಿನಮಾನಗಳಲ್ಲಿ ಈ ಶಾಲೆಯು ಉನ್ನತ ಎಲಿಮೆಂಟರಿ ಶಾಲೆಯಾಗಿ ನವೀಕರಿಸಬೇಕಾಗಿದೆ)

ದಿನಾಂಕ ೨೩-೦೯-೧೯೫೩ ರಂದು ಶಾಲೆಗೆ ಭೇಟಿ ನೀಡಿದ ಶ್ರೀ ಕೆ. ವೆಂಕೋಬರಾವ್ ಸಂಘಟನೆಕಾರರು ಥಿಯೋಸಾಫಿಕಲ್ ಗ್ರಾಮೀಣ ವಲಯ, ಕೂಡ್ಲಿಗಿ ಅವರು ಈ ರೀತಿ ಅಭಿಪ್ರಾಯ ಪಡುತ್ತಾರೆ. "The Students Were deep with their lessions. The teacher were active with emotions with students. There are 21 scheduled caste students. The head master is requested to apply to Harijan welfare officer to apply for mid-day meal grant. The parents committe has been informed the advantage of new scheme. The headmaster is requested to start night school from 01-10-1953 to remove illitery in the backward classes" (ಮಕ್ಕಳೆಲ್ಲರೂ ತಮ್ಮ ಪಾಠದ ಕಡೆಗೆ ಬಹಳ ಗಮನಹರಿಸಿದ್ದರು. ಶಿಕ್ಷಕರು ಚಟುವಟಿಕೆಯಿಂದ ಭಾವನಾತ್ಮಕವಾಗಿ ತಮ್ಮ ಮಕ್ಕಳೊಂದಿಗೆ ವ್ಯವಹರಿಸುತ್ತಿದ್ದರು. ಇಲ್ಲಿ ೨೧ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿದ್ದಾರೆ. ಮುಖ್ಯೋಪಾಧ್ಯಾಯರು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಮಧ್ಯಾಹ್ನದ

ಬಿಸಿಯೂಟ ಅನುದಾನಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಈ ಹೊಸ ಪ್ರಯೋಜನವನ್ನು ಪೋಷಕರ ಸಮಿತಿಗೆ ತಿಳಿಸಲಾಗಿದೆ. ಹಿಂದುಳಿದ ವರ್ಗಗಳ ಅನಕ್ಷರತೆಯನ್ನು ತೊಡೆದು ಹಾಕಲು ೧-೧೦-೧೯೫೩ ರಿಂದ ರಾತ್ರಿ ಶಾಲೆಯನ್ನು ಪ್ರಾರಂಭಿಸಲು ಮುಖ್ಯಗುರುಗಳು ಕೋರಿದ್ದಾರೆ).

ದಿನಾಂಕ ೨೮-೦೭-೧೯೫೧ ರಲ್ಲಿ ಭೇಟಿ ನೀಡಿದ ಶ್ರೀ ಗೋಪಾಲ ಆಚಾರ್ ಡಿಸ್ಟ್ರಿಕ್ ಬೋರ್ಡ್ ಎಜ್ಯುಕೇಷನ್ ಆಫೀಸರ್ ಬಳ್ಳಾರಿ ಅವರು ಈ ಊರಿನ ದಾನಿಗಳು ಹಾಗೂ ಶಿಕ್ಷಕರ ಬಗೆಗೆ ಈ ರೀತಿ ಹೇಳಿದ್ದಾರೆ. "The H.M and his staff deserve to be congragulated for their unitied efforts in securing donation of articles like photos of leaders, furnitures etc. from the villagers. The management is deeply greatfull to all the doners. All the donated articles which are of permanent nature should be entered in the stock register of the school" (ಗ್ರಾಮದಿಂದ ನಾಯಕರ ಫೋಟೋಗಳು, ಪೀಠೋಪಕರಣಗಳು ಇತ್ಯಾದಿ ದೇಣಿಗೆಯನ್ನು ಪಡೆದುಕೊಳ್ಳುವಲ್ಲಿ ಮುಖ್ಯಗುರುಗಳ ಹಾಗೂ ಶಿಕ್ಷಕರ ಪ್ರಯತ್ನ ಇಲ್ಲಿ ಶ್ಲಾಘನೀಯವಾದುದು. ಶಾಲಾ ನಿರ್ವಹಣೆಯ ಸಮಿತಿ ಎಲ್ಲಾ ದಾನಿಗಳಿಗೆ ಕೃತಜ್ಞವಾಗಿದೆ. ದಾನಿಗಳು ಕೊಟ್ಟಂತಹ ಎಲ್ಲಾ ವಸ್ತುಗಳನ್ನು ಶಾಲೆಯ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಲು ತಿಳಿಸಿದೆ)

ದಿನಾಂಕ ೧೨-೦೭-೧೯೭೧ ರಲ್ಲಿ ಶಾಲೆಯನ್ನು ತಪಾಸಣೆ ಮಾಡಿದ ಅಧಿಕಾರಿಗಳು ಈ ರೀತಿ ಅಭಿಪ್ರಾಯ ಪಡುತ್ತಾರೆ. "I visited this school and feel glad to seen the pupil and the teachers. Teachers are young and energetic and they are good it requires all sorts of encouragement" (ನಾನು ಶಾಲೆಗೆ ಭೇಟಿ ಕೊಟ್ಟಾಗ ಇಲ್ಲಿಯ ಮಕ್ಕಳು ಹಾಗೂ ಶಿಕ್ಷಕರನ್ನು ನೋಡಿ ಸಂತೋಷ ಪಟ್ಟಿದ್ದೇನೆ. ಶಿಕ್ಷಕರು ಯುವಕರು ಹಾಗೂ ಶಕ್ತಿಯುತವಾಗಿದ್ದು. ಎಲ್ಲಾ ರೀತಿಯ ಪ್ರೋತ್ಸಾಹಕ್ಕೆ ಅರ್ಹರಾಗಿದ್ದಾರೆ) ಎಂದು ಹೇಳಿದ್ದಾರೆ.

ಮೊದಲಿನಿಂದಲೂ ಊರಿನ ಜನರು ಶಾಲೆಯ ಮೇಲೆ ಅಪಾರವಾದ ಪ್ರೀತಿಯನ್ನು ಹೊಂದಿದ್ದರು. ಶಾಲೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದ್ದರು. ಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕೆ ಶಾಲೆಯ ಮೂಲಭೂತ ಪರಿಕರಗಳನ್ನು ದಾನವಾಗಿ ಕೊಡುವುದು ಒಂದು ಪರಿಪಾಠವಾಗಿತ್ತು. ಅದರಂತೆಯೇ ಗ್ರಾಮದ ಹಲವಾರು ವ್ಯಕ್ತಿಗಳು ದಾನವಾಗಿ ಭೂಮಿಯನ್ನು ೨೬-೦೮-೫೫ ರಂದು ಅಂದಿನ ತಹಶೀಲ್ದಾರ್ ಹಡಗಲಿ ಮತ್ತು ತಾಲೂಕಿನ ವಿದ್ಯಾಧಿಕಾರಿಗಳ ಸಮಕ್ಷಮದಲ್ಲಿ ಕೊಟ್ಟಿದ್ದಾರೆ.

ಕ್ರಸಂ	ದಾನಿಗಳ ಹೆಸರು	ಸ.ನಂ	ಎಕರೆ/ಸೆಂಟ್ಸ
೦೧	ಕೆ. ಪದ್ಮಪ್ಪ (ಅಡವಿ)	೨೮೭	೧೦ ಎಕರೆ
೦೨	ಭಾವಿ ನಿಂಗಪ್ಪ (ಜವುಳ)	೨೫೫	೯೮ ಸೆಂಟ್ಸ್
೦೩	ಎಸ್. ಪಂಚಪ್ಪ (ಅಡವಿ)	೩೨೦	೫ ಎಕರೆ
೦೪	ಹೆಚ್. ಭೀಮಪ್ಪ (ಅಡವಿ)	೩೨೦	೫ ಎಕರೆ

೦೫	ಕೆ.ಚನ್ನಬಸಪ್ಪ (ಅಡವಿ)	೩೨೦	೫ ಎಕರೆ
೦೬	ಆರ್. ಸೋಮನಗೌಡ (ಅಡವಿ)	೩೧೪	೫ ಎಕರೆ
೦೭	ಹೆಚ್. ಬಸಪ್ಪ (ಅಡವಿ)	೨೯೪	೨ ಎಕರೆ

ಒಟ್ಟು ೩೨.೯೮ ಸೆಂಟ್ಸ್

ಮೇಲಿನ ದಾನವಾಗಿ ಪಡೆದಿರುವ ೩೨ ಎಕರೆ ೯೮ ಸೆಂಟ್ಸ ಭೂಮಿಯು ಪ್ರಸ್ತುತ ಶಾಲೆಯ ಹೆಸರಿನಲ್ಲಿ ನೋಂದಣಿಯಾಗಿರುವುದಿಲ್ಲ. ಇದರಲ್ಲಿ ಕೇವಲ ೩ ಎಕರೆ ಮಾತ್ರ ಹಡಗಲಿ ತಹಶೀಲ್ದಾರರು, ಜಿಲ್ಲಾ ಡೆಪ್ಯೂಟಿಕಮಿಷನರ್ ಹೆಸರಿಗೆ ಮಾತ್ರ ನೋಂದಣಿಯಾಗಿರುತ್ತದೆ.

ಅದರಂತೆಯೇ ೧೯೬೨ ರಲ್ಲಿ School Beterment committee ಯು ಅಸ್ತಿತ್ವದಲ್ಲಿ ಬಂದಿತು. ಈ ಕಮಿಟಿಯು ೨೩-೦೬-೧೯೬೨ ರಲ್ಲಿ ಅಸ್ತಿತ್ವದಲ್ಲಿ ಬಂದಿತು. ಅದರ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರು ಕೆಳಕಂಡಂತಿದೆ.

೧) ಲಕ್ಕಪ್ನರ ಸಿದ್ದಪ್ಪ - ಅಧ್ಯಕ್ಷ
೨) ಬನ್ನಿಮಟ್ಟಿ ಬಿದ್ದಪ್ಪ - ಉಪಾಧ್ಯಕ್ಷ
೩) ಭಾವಿ ಚನ್ನಬಸಪ್ಪ - ಸದಸ್ಯರು
೪) ಭಾವಿ ನಿಂಗಪ್ಪ - ಸದಸ್ಯರು
೫) ಹರ್ವಿ ಸಿದ್ದಪ್ಪ - ಸದಸ್ಯರು
೬) ಎಂ. ಹನುಮಪ್ಪ - ಸದಸ್ಯರು
೭) ಶ್ರೀಮತಿ ಟಿ. ನೀಲಮ್ಮ - ಸದಸ್ಯರು
೮) ಎಂ.ಎಸ್. ಬಿದ್ದಪ್ಪ - ಕಾರ್ಯದರ್ಶಿ

ಈ ಕಮಿಟಿಯು ತಾಲೂಕಿನಲ್ಲಿಯೇ ಉತ್ತಮ "School Beterment committee" ಎಂದು "ರೂಲಿಂಗ್ ಷೀಲ್ಡ್ ಪ್ರಶಸ್ತಿ"ಯನ್ನು ಪಡೆದುಕೊಂಡಿತು. ಈ ಕಮಿಟಿಯ ಮೂಲಕ ಶಾಲೆಗೆ ಬೇಕಾದ ಭೌತಿಕ ಪರಿಕರಗಳು ಮತ್ತು ಆರ್ಥಿಕ ಸಹಾಯವನ್ನು ಮಾಡುತ್ತಾ ಬಂದಿತು. ಈ ಕಮಿಟಿಯು ೧೯೬೮ ರವರೆಗೆ ತನ್ನ ಕಾರ್ಯವನ್ನು ಮಾಡಿತು. ತದನಂತರದಲ್ಲಿ ದಿನಾಂಕ ೧೯-೦೭-೧೯೬೮ರಲ್ಲಿ ಹೊಸದಾಗಿ SBC ಯು ನೇಮಕಗೊಂಡಿತು.

೧) ಆನಿಶೆಟ್ರ ವೀರಪ್ಪ - ಅಧ್ಯಕ್ಷ
೨) ಕೊರ್ಲಹಳ್ಳಿ ವಸಂತಪ್ಪ - ಸದಸ್ಯರು
೩) ಮುದ್ದಿ ನಿಂಗಪ್ಪ - ಸದಸ್ಯರು
೪) ಹಿರೇಮಠದ ಶಿವರುದ್ರಯ್ಯ - ಸದಸ್ಯರು
೫) ಲಕ್ಕಪ್ನರ ಡಿಳ್ಳೆಪ್ಪ - ಸದಸ್ಯರು
೬) ಗುಡ್ಡಾಣಿ ಮಲ್ಲಪ್ಪ - ಸದಸ್ಯರು

೭) ಬೇವಿನಕಟ್ಟಿ ಪಕ್ಕೀರಮ್ಮ - ಸದಸ್ಯರು

೮) ಟಿ. ಕೊಟ್ರಬಸಪ್ಪ - ಕಾರ್ಯದರ್ಶಿ

ಇಲ್ಲಿಯವರೆಗೆ ಶಾಲೆಗೆ ಉತ್ತಮವಾದ ಕಟ್ಟಡವಿರಲಿಲ್ಲ. ಬಾಡಿಗೆ ಮನೆಯಲ್ಲಿಯೇ ಶಾಲೆಯು ನಡೆಯುತ್ತಿತ್ತು. ಇದನ್ನು ಮನಗಂಡಿದ್ದ ಕಮಿಟಿಯು ಅಂದಿನ ಮೈಸೂರು ಸರಕಾರದ ವಿದ್ಯಾಖಾತೆಯ ಉಪಸಚಿವರಾದ ಸನ್ಮಾನ್ಯ ಎಂ.ಎನ್. ಕೊಟ್ರಬಸಯ್ಯ ಸೋಗಿ ಅವರಿಗೆ ಮನವಿ ಪತ್ರವನ್ನು ಕೊಡುವುದರ ಮೂಲಕ ಹೊಸ ಕಟ್ಟಡವನ್ನು ಮಂಜೂರು ಮಾಡಲು ಯಶಸ್ವಿಯಾದರು. ಅದರಂತೆಯೇ ೨೨-೦೭-೧೯೬೮ ರಂದು ಹೊಸ ಕಟ್ಟಡಕ್ಕೆ ಶಂಖುಸ್ಥಾಪನೆ ಮಾಡಿದರು. ಶಂಖುಸ್ಥಾಪನೆಯಾದ ದಿನದಿಂದ ೧೯೭೭ ರವರೆಗೆ ಶಾಲೆಯ ಕಟ್ಟಡ ನಿರ್ಮಾಣಗೊಳ್ಳಲಿಲ್ಲ. ಅದಕ್ಕೆ ಪ್ರಮುಖವಾದ ಕಾರಣ ಬನ್ನಿಮಟ್ಟಿ ಬಿದ್ದಪ್ಪ, ನಾಗನಗೌಡರ ರಾಜಕೀಯ ಗುದ್ದಾಟದಿಂದ ಎಂದು ಹಿರಿಯರು ಹೇಳುತ್ತಾರೆ. ಅಂದಿನ ಕಮಿಟಿಯ ಅಧ್ಯಕ್ಷರಾದ ಆನಿಶೆಟ್ರ ವೀರಪ್ಪನವರು ಊರಿನ ಪ್ರಮುಖ ವ್ಯಕ್ತಿಗಳನ್ನು ಒಂದು ಗೂಡಿಸಿ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡಲು ನಿಶ್ಚಯಿಸಿದರು. ಅಂದಿನ ಕಮಿಟಿಯ ಅಧ್ಯಕ್ಷರಾದ ಆನಿಶೆಟ್ರ ವೀರಪ್ಪನವರು, ಮುಖ್ಯ ಗುರುಗಳಾದ ಎಸ್.ಕೆ.ಬಸವರಾಜ, ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೊ.ಜಯಪ್ಪ ಅವರ ಅವಿರತ ಪ್ರಯತ್ನದಿಂದಾಗಿ ನೂತನ ಶಾಲಾ ಕಟ್ಟಡಗಳು ನಿರ್ಮಾಣವಾದವು. ಈ ಮೂರು ವ್ಯಕ್ತಿಗಳು ಸರ್ಕಾರದ ಒಂದು ಪೈಸೆಯೂ ಪೋಲಾಗದಂತೆ ಮತ್ತಿಕಟ್ಟಿಗೆಯ ಜಂತಿಗಳನ್ನು ತಂದು ಶಾಲಾ ಕಟ್ಟಡ ನಿರ್ಮಾಣವನ್ನು ಮಾಡಿದರು. ಇದರ ಜೊತೆಗೆ ಶ್ರೀ ವಿಶ್ವೇಶ್ವರಯ್ಯ ರೈತ ಯುವಕ ಮಂಡಳಿಯವರು ಶ್ರಮಿಸಿದರು. ಈ ಕಟ್ಟಡ ನಿರ್ಮಾಣಕ್ಕೆ ಹಲವಾರು ದಾನಿಗಳು ಸಹಾಯ ಮಾಡಿದರು. ಅದರಲ್ಲಿ ಪ್ರಮುಖರೆಂದರೆ,

೧) ಎ. ವೀರಪ್ಪ - ೧೩೦೫ ರೂ

೨) ಪಾಟೀಲ್ ನಾಗನಗೌಡ - ೧೩೦೫ ರೂ

೩) ಬಿ. ಶಿವನಗೌಡರು - ೧೩೦೫ ರೂ

೪) ಚಕ್ರಸಾಲಿ ವೀರಪ್ಪ - ೧೩೦೫ ರೂ

೫) ಸಂಗಮೇಶ್ವರ ನಾಟ್ಯಕಲಾಸಂಘ - ೮೦೫ ರೂ

೬) ೧೯೭೭-೭೮ ನೇ ಸಾಲಿನ ಶಿಕ್ಷಕ ವೃಂದ- ೫೦೧ ರೂ

೭) ಹೆಬ್ಬಾರಿ ಯಲ್ಲಪ್ಪ ಧ್ವಜಕಂಬ ನಿರ್ಮಾಣಕ್ಕೆ- ೩೦೫ ರೂ

ಮೇಲಿನ ದಾನಿಗಳಿಂದ ಹಾಗೂ ಸರ್ಕಾರದ ಅನುದಾನದಿಂದ ಈ ಶಾಲೆಯು ದಿನಾಂಕ ೦೧-೧೧-೧೯೭೭ ರಲ್ಲಿ ಉದ್ಘಾಟನೆಯಾಯಿತು. ಅಂದಿನ ಕರ್ನಾಟಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ನಿರ್ದೇಶಕರಾದ ಶ್ರೀ. ಕೆ. ಮಲ್ಲಪ್ಪ ಎಂ.ಕಾಂ. ಎಂ.ಎ. ಎಂ.ಎಡ್. ಅವರ ಅಮೃತ ಹಸ್ತದಿಂದ ಉದ್ಘಾಟನೆಯಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಿ. ಅಂದಾನಪ್ಪನವರು ಬಿ.ಎ. ಎಲ್.ಎಲ್.ಬಿ ವಿಧಾನಸಭಾ ಸದಸ್ಯರು, ಹಡಗಲಿ ಇವರು ವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ಶ್ರೀ ಕೆ. ನೀಲಕಂಠಪ್ಪ ವಕೀಲರು, ಹಡಗಲಿ. ಟಿ. ಕುರುಗೋಡಪ್ಪ ಕ್ಷೇತ್ರಾಭಿವೃದ್ಧಿ

ಅಧಿಕಾರಿಗಳು ಹಡಗಲಿ, ಸಜ್ಜನ್ ಅಹ್ಮದ್, ಕೆ.ಎ.ಎಸ್. ತಹಶೀಲ್ದಾರರು ಹಡಗಲಿ. ಹೋ. ಜಯಪ್ಪ –ಸಹಾಯಕ ಶಿಕ್ಷಣಾಧಿಕಾರಿಗಳು ಹಡಗಲಿ. ಟಿ. ಮಲ್ಲಿಕಾರ್ಜುನ ಗೌಡ್ರು ತಪಾಸಣಾಧಿಕಾರಿಗಳು ಹಡಗಲಿ. ಹಾಗೂ ಕಮಿಟಿಯ ಅಧ್ಯಕ್ಷರು, ಸದಸ್ಯರು ಗ್ರಾಮದ ಗಣ್ಯ ವ್ಯಕ್ತಿಗಳು ಎಲ್ಲರೂ ಸೇರಿ ಶಾಲಾ ಕಟ್ಟಡವನ್ನು ಉದ್ಘಾಟನೆ ಮಾಡಿದರು. ಹೀಗೆ ಐದು ತರಗತಿ ಕೋಣೆಗಳು ಉದ್ಘಾಟನೆಗೊಂಡವು. ಇದಾದ ನಂತರ ಹೆಚ್ಚುವರಿಯಾಗಿ ಇನ್ನೂ ೩ ತರಗತಿ ಕೋಣೆಗಳನ್ನು ನಿರ್ಮಿಸುವ ಅಗತ್ಯತೆ ಕಂಡುಬಂದಿತು. ಆಗ ಗ್ರಾಮದ ಕೆಳಕಂಡ ದಾನಿಗಳು ಮುಂದೆ ಬಂದರು.

೧) ಈ. ಕೆಂಚಪ್ಪ ಶಿಕ್ಷಕರು.

೨) ಶ್ರೀ ಕೆ. ಭೂಪಾಲಪ್ಪ ಮತ್ತು ಕೆ. ಸುಕುಮಾರಪ್ಪ

೩) ಬಸಪ್ಪನವರ ದ್ಯಾಮಮ್ಮ

ಇದರ ಜೊತೆಗೆ ಅಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾದ ಲಕ್ಕಪ್ನರ ಡಿಳ್ಳೆಪ್ಪ ಅವರ ಪರಿಶ್ರಮದಿಂದ ನೂತನ ಕಟ್ಟಡಗಳು ನಿರ್ಮಾಣಗೊಂಡವು. ಈ ನೂತನ ಕಟ್ಟಡಗಳಿಗೆ ಭೂದಾನವನ್ನು ಕೊಟ್ಟವರು ತುರುಕಾಣಿ ಬಸವಣ್ಯಪ್ಪನವರ ಪುತ್ರರಾದ ಶ್ರೀ ಶಿವಾನಂದಪ್ಪ, ಬಸವರಾಜಪ್ಪ ಗುರುಪಾದಪ್ಪ. ಈ ನೂತನ ಕಟ್ಟಡಗಳಿಗೆ ವಿಧ್ಯುಚ್ಛಕ್ತಿ ದೊರಕಿಸಿಕೊಟ್ಟವರು ಹೆಚ್.ಸಣ್ಣಪ್ಪ ಶಿಕ್ಷಕರು. ಈ ನೂತನವಾಗಿ ನಿರ್ಮಾಣಗೊಂಡ ಮೂರು ಕೋಣೆಗಳ ಉದ್ಘಾಟನೆಯನ್ನು ೦೯–೧೨–೧೯೭೮ ರಲ್ಲಿ ಮಾಡಲಾಯಿತು. ಅಂದಿನ ಕರ್ನಾಟಕ ರಾಜ್ಯ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ನಿರ್ದೇಶಕರಾದ ಕೆ. ಮಲ್ಲಪ್ಪನವರ ಅಮೃತ ಹಸ್ತದಿಂದ ಉದ್ಘಾಟನೆ ಮಾಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂದಿನ ಹಡಗಲಿ ವಿಧಾನಸಭಾ ಸದಸ್ಯರಾದ ಕೋಗಳಿ ಬಸವನಗೌಡರು ವಹಿಸಿದ್ದರು. ವಿಶೇಷ ಆಹ್ವಾನಿತರಾಗಿ,

೧) ಬಿ. ಲಂಕೆಪ್ಪ	–	ಹಡಗಲಿ ಕ್ಷೇತ್ರಾಭಿವೃದ್ಧಿ ಮಂಡಳಿ ಅಧ್ಯಕ್ಷರು
೨) ಕೆ. ನೀಲಕಂಠಪ್ಪ	–	ವಕೀಲರು ಹಡಗಲಿ
೩) ಟಿ.ಕುರುಗೋಡಪ್ಪ	–	ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಡಗಲಿ
೪) ದಶರಥರಾವ್ ಸೋಳಂಕಿ	–	ತಹಶೀಲ್ದಾರರು ಹಡಗಲಿ
೫) ಹೋ. ಜಯಪ್ಪ	–	ಸಹಾಯಕ ಶಿಕ್ಷಣಾಧಿಕಾರಿಗಳು ಹಡಗಲಿ
೬) ಟಿ. ಮಲ್ಲಿಕಾರ್ಜುನಗೌಡ	–	ಶಾಲಾ ತಪಾಸಣಾಧಿಕಾರಿ ಹಡಗಲಿ

೧೯೭೪ ರಲ್ಲಿ ಈ ಶಾಲೆಗೆ ಮುಖ್ಯಗುರುಗಳಾಗಿ ಶ್ರೀ ಎಸ್.ಕೆ. ಬಸವರಾಜ ಅವರು ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಅವರು ಶಾಲೆಗೆ ಬೌದ್ಧಿಕವಾಗಿ ಹಾಗೂ ಭೌತಿಕವಾಗಿ ಸಲ್ಲಿಸಿದ ಸೇವೆಯು ಸ್ಮರಣಾರ್ಥವಾದುದು. ಮೊದಲ ಐದು ಹೊಸ ಕಟ್ಟಡಗಳನ್ನು ಇವರೇ ಕಟ್ಟಿಸಿದರು. ಅವರ ಎಡೆಬಿಡದ ಸೇವೆಯಿಂದಾಗಿ ಈಗಿರುವ ಈ ಶಾಲೆಯ ಎರಡು ಹೊಸ ಕಟ್ಟಡಗಳು ೧೯೭೭–೭೮ ರ ಸಾಲಿನಲ್ಲಿ ನಿರ್ಮಾಣಗೊಂಡವು. ಈ ಕಟ್ಟಡವನ್ನು ನಿರ್ಮಿಸಲು ಎಸ್. ಕೆ. ಬಸವರಾಜು

ಅವರಿಗೆ ಸಾಥ್ ನೀಡಿದವರು ಆಗಿನ ಬಿ.ಇ.ಓ. ಆಗಿದ್ದ ಹೋ. ಜಯಪ್ಪ ಅವರು. ಆ ಸಂದರ್ಭದಲ್ಲಿ ಪಾದರಸದಂತೆ ಓಡಾಡಿ ಅಚ್ಚುಕಟ್ಟಾಗಿ ಕಟ್ಟಿಸಿದ ಕಟ್ಟಡಗಳು ಈಗಲೂ ಸಾಕ್ಷಿಯಾಗಿವೆ. ಕಟ್ಟಡಗಳಿಗೆ ಸರಕಾರದ ಅನುದಾನ ಪಡೆಯುವ ಜೊತೆಗೆ ಪ್ರತಿ ಕಟ್ಟಡಕ್ಕೆ ಊರಿನ ದಾನಿಗಳಿಂದ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ನಿರ್ಮಾಣ ಮಾಡಿದರು. ಹೀಗೆ ಗ್ರಾಮದ ಈ ಶಾಲೆಯು ಪ್ರಾರಂಭದಿಂದಲೂ ಹಲವಾರು ತೊಂದರೆಗಳನ್ನು ಅನುಭವಿಸಿದ್ದರೂ, ಪ್ರಾರಂಭವಾದಾಗಿನಿಂದಲೂ ಪಾಠ-ಪ್ರವಚನದ ಜೊತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಬೇಕಾಗಿರುವ ಮಗ್ಗಿ ಪಠಣ, ಗಾದೆಗಳ ಕಲಿಕೆ ಮತ್ತು ಅರ್ಥ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೆಗಳು ಮುಂತಾದವುಗಳನ್ನು ಕಲಿಸುವ ಮೂಲಕ ಶೈಕ್ಷಣಿಕ ಅಭಿವೃದ್ಧಿಯಲ್ಲಿ ತಾಲೂಕಿನಲ್ಲಿಯೇ ಮೊದಲನೇಯ ಸ್ಥಾನದಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಬಹು ಮುಖ್ಯ ಕಾರಣಕರ್ತರಾದ ಶಿಕ್ಷಕ ವೃಂದದವರನ್ನು ನೆನೆಯಲೇ ಬೇಕಾಗುತ್ತದೆ. ಪ್ರಾರಂಭದಿಂದಲೂ ಉತ್ತಮ ಗುಣಮಟ್ಟದ ಅಧ್ಯಾಪಕರುಗಳು ನಮ್ಮೂರಿನ ಶಾಲೆಗೆ ಬಂದು ಹೋಗಿದ್ದರು. ಸಾಕ್ಷಿ ಎಂಬಂತೆ ಪ್ರತಿ ವರ್ಷ ನಡೆದ ಶಾಲಾ ತಪಾಸಣಾ ವರದಿಗಳು ಸಾಕ್ಷಿಯಾಗಿವೆ.

ಹ್ಯಾರಡ ಗ್ರಾಮದಲ್ಲಿ ಒಂದು ನಿಟ್ಟಿನಲ್ಲಿ ಶಿಕ್ಷಣದ ಮಟ್ಟ ಮೊದಲಿಗಿಂತಲೂ ಈಗ ಗಣಕೀಕೃತಗೊಂಡಿದೆ. ಮೊದಲಿಗೆ ಕೇವಲ ಉಳ್ಳವರ ಪಾಲಾಗಿದ್ದ ಶಿಕ್ಷಣ ಹಂತ ಹಂತವಾಗಿ ಸಾರ್ವತ್ರೀಕರಣಗೊಂಡು ಸಮಾಜದ ಕಟ್ಟಕಡೆಯ ವ್ಯಕ್ತಿಗಳು ಸಹ ಶಿಕ್ಷಣವನ್ನು ಪಡೆದಿದ್ದಾರೆ. ಇದಕ್ಕೆ ಸಾಕ್ಷಿಯೆಂಬಂತೆ ಗ್ರಾಮದಲ್ಲಿ ಸುಮಾರು ೧೬೨ ಜನ ಸರ್ಕಾರಿ ನೌಕರಿಯನ್ನು ಪಡೆದುಕೊಂಡಿದ್ದಾರೆ. ಇಂಜನಿಯರ್, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಪೋಲೀಸ್ ಅಧಿಕಾರಿಗಳು, ನಿರ್ವಾಹಕರು, ಶಿಕ್ಷಕರು, ಉಪನ್ಯಾಸಕರು, ವೈದ್ಯರು, ಮಿಲಿಟರಿ, ಗ್ರಾಮಲೆಕ್ಕಾಧಿಕಾರಿಗಳು, ಬ್ಯಾಂಕ್ ಉದ್ಯೋಗಿಗಳು, ನರ್ಸ್ ಮುಂತಾದ ಪ್ರಮುಖ ಹುದ್ದೆಯಲ್ಲಿದ್ದಾರೆ. ಒಬ್ಬ ವ್ಯಕ್ತಿಗೆ ಶಿಕ್ಷಣವನ್ನು ಕೊಟ್ಟಾಗ ಆ ವ್ಯಕ್ತಿಯು ಹೇಗೆ ಪರಿವರ್ತನೆಯಾಗುತ್ತಾನೆ ಎಂಬುದಕ್ಕೆ ಸಾಕ್ಷಿ ಈ ಗ್ರಾಮವಾಗಿದೆ. ಇಷ್ಟೆಲ್ಲಾ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯೆಂಬಂತೆ ಗ್ರಾಮದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ, ಸರ್ಕಾರಿ ಪ್ರೌಢ ಶಾಲೆಯ ರಜತ ಮಹೋತ್ಸವ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡ ಪ್ಲಾಟ್ ದಶಮಾನೋತ್ಸವವನ್ನು ದಿನಾಂಕ ೧೩-೦೨-೨೦೧೪ ಮತ್ತು ೧೪-೦೨-೨೦೧೪ ರಂದು ಹ್ಯಾರಡ ಗ್ರಾಮದ ಶಾಲೆಗಳ ಮಹೋತ್ಸವವನ್ನು ಆಚರಿಸಿದ್ದು ಅತ್ಯಂತ ಅವಿಸ್ಮರಣೀಯವಾಗಿದೆ. ಎರಡು ದಿನಗಳ ಕಾಲ ನಾಡಿನ ಹೆಸರಾಂತ ವಿದ್ವಾಂಸರು, ಗಣ್ಯರು, ಊರಿನ ಗ್ರಾಮಸ್ಥರು, ಈ ಶಾಲೆಗಳ ಹಳೆಯ ವಿದ್ಯಾರ್ಥಿಗಳು ಸೇರಿ ಅತ್ಯಂತ ಸಂಭ್ರಮದಿಂದ ಸಾಹಿತ್ಯದ ಸುಧೆಯನ್ನು ಹರಿಸಿದ್ದು ಚರಿತ್ರಾರ್ಹವಾಗಿದೆ.

ರಜತ ಮಹೋತ್ಸವವನ್ನು ಆಚರಿಸಿಕೊಂಡ ಪ್ರೌಢಶಾಲೆಯೂ ಸಹ ಪ್ರಾರಂಭದಲ್ಲಿ ಗ್ರಾಮದವರ ಒತ್ತಾಸೆಯೇ ಆಗಿದೆ. ಜಿಲ್ಲಾ ಪಂಚಾಯತಿಯವರು ನಿವೇಶನವನ್ನು ನೀಡುವುದರ ಮೂಲಕ ಸರ್ಕಾರದ

ಅನುದಾನದಲ್ಲಿ ಅದರ ಜೊತೆಗೆ ಗ್ರಾಮದ ಹಲವಾರು ಮುಖಂಡರಾದ ಸುಮಾರು ೨೭ ಕ್ಕಿಂತ ಹೆಚ್ಚು ದಾನಿಗಳು ದೇಣಿಗೆಯನ್ನು ಕೊಟ್ಟಿದ್ದಾರೆ. ಬಿ. ಶಿವನಗೌಡ್ರು, ಕರ್ಜಗಿ ನಿಂಗಪ್ಪ, ಮುದ್ದಿ ನಿಂಗಪ್ಪ, ರಾಮಪ್ಪ ಬೇವಿನಕಟ್ಟಿ, ಜಿ. ಕೆಂಚಪ್ಪ, ಬಣಕಾರ ಶಿದ್ಲಿಂಗಪ್ಪ, ಹರವಿ ಕುರುವತ್ತೆಪ್ಪ ಇನ್ನೂ ಮುಂತಾದ ದಾನಿಗಳನ್ನು ಹೆಸರಿಸಬಹುದಾಗಿದೆ. ಶಾಲೆ ನಿರ್ಮಾಣ ಆಗಿ ೨೫ ವರ್ಷಗಳು ಗತಿಸಿದ ನಂತರ ಶಾಲಾ ನಿವೇಶನದ ಸಮಸ್ಯೆಯನ್ನು ಜಿಲ್ಲಾ ಉಪನಿರ್ದೇಶಕರಾದ ವೀರಣ್ಣ. ಎಸ್.ಜಟ್ಟಿ ಉಪವಿಭಾಗಾಧಿಕಾರಿಗಳಾದ ಬಿ. ಸುನೀಲ್ ಕುಮಾರ್. ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಮಂಜುನಾಥ ಬೇವಿನಕಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ. ಕೊಟ್ರೇಶ್, ಉಚ್ಚೆಂಗಿ ಕೆಂಚಪ್ಪ, ಹರ್ವಿ ಪ್ರಕಾಶ, ಮುದ್ದಿ ನಿಂಗಪ್ಪ, ಹೊನ್ನಮ್ಮನವರ ಶಾಂತಪ್ಪ, ಗ್ರಾಮದ ಪ್ರೌಢಶಾಲೆ ಶಿಕ್ಷಕರಾದ ಚಂದ್ರಪ್ಪ ಸುಣಗಾರ್ ಹಾಗೂ ಊರಿನ ಪ್ರಮುಖರು ಪರಿಹರಿಸಿದ್ದಾರೆ. ಈ ಶಾಲೆಯ ಮಕ್ಕಳು ಸ್ವ-ಇಚ್ಛೆಯಿಂದ ಹಾಗೂ ಶ್ರದ್ದೆಯಿಂದ ಓದುತ್ತಿದ್ದಾರೆ. ಈ ಶಾಲೆಯಲ್ಲಿ ಅತೀ ಹೆಚ್ಚಾಗಿ ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತಮವಾದ ಶೈಕ್ಷಣಿಕ ವಾತಾವರಣ ಇಲ್ಲಿದೆ.

ಅದೇ ರೀತಿಯಾಗಿ ದಶಮಾನೋತ್ಸವವನ್ನು ಆಚರಿಸಿಕೊಂಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡ ಪ್ಲಾಟ್ ಶಾಲೆಗೆ ದಿ॥ ಶ್ರೀಮತಿ ಕಾಡಮ್ಮ ಬೇವಿನಕಟ್ಟಿ ಅವರ ಮಕ್ಕಳಾದ ಶ್ರೀ ರಾಮಪ್ಪ ಬೇವಿನಕಟ್ಟಿ ಮತ್ತು ಡಾ.ಮಂಜುನಾಥ ಬೇವಿನಕಟ್ಟಿ ಪ್ರಾಧ್ಯಾಪಕರು ಕನ್ನಡ ವಿಶ್ವವಿದ್ಯಾಲಯ ಹಂಪಿ ಅವರು ತಾಯಿಯ ಸ್ಮರಣಾರ್ಥ ಭೂಮಿಯನ್ನು ಕೊಟ್ಟಿರುತ್ತಾರೆ. ಶಾಲೆಯನ್ನು ಜಿಲ್ಲಾ ಪಂಚಾಯತಿಯಿಂದ ನಿರ್ಮಿಸಲಾಗಿದೆ. ಶಾಲೆಯಲ್ಲಿ ಬಹುತೇಕವಾಗಿ ಎಸ್.ಟಿ ಸಮುದಾಯದ ವಿದ್ಯಾರ್ಥಿಗಳ ದಾಖಲಾತಿ ಜಾಸ್ತಿಯಾಗಿದೆ. ಇಲ್ಲಿರುವ ಮಕ್ಕಳು ಸಹ ಬಹಳ ಆಸಕ್ತಿಯಿಂದ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಹೀಗೆ ಮೂರು ಶಾಲೆಗಳು ಹ್ಯಾರಡ ಗ್ರಾಮದ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಿದ್ದಲ್ಲದೇ ರಾಜ್ಯ ಮಟ್ಟದಲ್ಲಿಯೇ ಗುರುತಿಸಿಕೊಳ್ಳುವಂತೆ ಮಾಡಿವೆ.

ಕೋಷ್ಟಕ-೧

ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡಾದ ವಿವಿಧ ವರ್ಷಗಳ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ಸಂಖ್ಯೆ

ಶೈಕ್ಷಣಿಕ ವರ್ಷ	**ದಾಖಲಾತಿ**	**ಹಾಜರಾತಿ**
೨೦೦೮-೨೦೦೯	೫೩೬	೫೩೬
೨೦೦೯-೨೦೧೦	೫೦೩	೫೦೩
೨೦೧೦-೨೦೧೧	೪೪೯	೪೪೯
೨೦೧೧-೨೦೧೨	೪೪೩	೪೪೩

೨೦೧೨-೨೦೧೩	೩೬೫	೩೬೫
೨೦೧೩-೨೦೧೪	೩೩೮	೩೩೮
೨೦೧೪-೨೦೧೫	೩೨೪	೩೨೪
೨೦೧೫-೨೦೧೬	೩೦೯	೩೦೯
೨೦೧೬-೨೦೧೭	೩೨೫	೩೨೫
೨೦೧೭-೨೦೧೮	೩೩೯	೩೩೯

ಮೇಲಿನ ಕೋಷ್ಟಕದಲ್ಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಈ ಶಾಲೆಗೆ ಅತೀ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಅವಲೋಕಿಸಬಹುದು. ಬರುಬರುತ್ತಾ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿ ೨೦೧೭-೨೦೧೮ ರಿಂದ ದಾಖಲಾತಿ ಹೆಚ್ಚಿರುವುದನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಇನ್ನೊಂದು ಸರ್ಕಾರಿ ಶಾಲೆಯು ಪ್ರಾರಂಭವಾಗಿದ್ದರಿಂದ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಯಿತು. ಮತ್ತೆ ಬರುಬರುತ್ತಾ ವಿದ್ಯಾರ್ಥಿಗಳ ಸಂಖ್ಯೆಯ ಗಣನೀಯವಾಗಿ ಹೆಚ್ಚಿಗೆಯಾಯಿತು. ಏಕೆಂದರೆ ಗ್ರಾಮದ ಜನರ ಸಹಕಾರದಿಂದ, ಗ್ರಾಮ ಪಂಚಾಯತಿಯ ಸಹಕಾರದಿಂದ, ಸರ್ಕಾರದ ಸಹಕಾರದಿಂದ ವಿವಿಧ ರೀತಿಯ ಶೈಕ್ಷಣಿಕ ಯೋಜನೆಗಳನ್ನು ಪ್ರಾರಂಭಿಸಿದ್ದರಿಂದ, ಅದರ ಫಲವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಏರತೊಡಗಿತು. ಈ ಶಾಲೆಯಲ್ಲಿ ವಿವಿಧ ರೀತಿಯ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಪ್ರಾರಂಭವಾಗಿ ಶಾಲೆಯು ಆಧುನಿಕ ಸ್ಪರ್ಶವನ್ನು ಪಡೆದುಕೊಂಡಿತು. ಶಾಲೆಯಲ್ಲಿ ಆಧುನಿಕ ಉಪಕರಣಗಳಾದ Projector, Smart Class, English Corner Room, Science Corner Room ಗಳು ಪ್ರಾರಂಭವಾಗಿ ವಿದ್ಯಾರ್ಥಿಗಳಿಗೆ ಅವಶ್ಯವಾಗಿ ಬೇಕಾಗುವ ಕಲಿಕೆಗೆ ಪೂರಕವಾಗುವ ವಾತಾವರಣವನ್ನು ಕಲ್ಪಿಸಲಾಯಿತು. ಈ ಶಾಲೆಯು ಸತತವಾಗಿ ಎರಡು ಬಾರಿ ಜಿಲ್ಲೆಯಲ್ಲಿಯೇ "ಉತ್ತಮ ಹಸಿರು ಶಾಲೆ" ಪ್ರಶಸ್ತಿಯನ್ನು ಪಡೆದುಕೊಂಡಿತು. Inspire award ನಲ್ಲಿ ರಾಜ್ಯಮಟ್ಟದಲ್ಲಿ ಈ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು, ಆಟೋಟಗಳಲ್ಲಿ ಜಿಲ್ಲಾ ಹಂತದಲ್ಲಿ ಸ್ಪರ್ಧೆ ಮಾಡಿದರು. ಅತ್ಯಂತ ಅನುಭವಿ ಶಿಕ್ಷಕ ವರ್ಗ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿತು. ಇದೆಲ್ಲದರ ಪರಿಣಾಮವಾಗಿ ಶಾಲೆಯು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು.

ಕೋಷ್ಟಕ-೨

ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡಾದ ೨೦೧೮-೧೯ ನೇ ಸಾಲಿನ ೧ ರಿಂದ ೭ ನೇ ತರಗತಿಯವರೆಗಿನ ವಿವಿಧ ಸಮುದಾಯದ ವಿದ್ಯಾರ್ಥಿಗಳು

	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ		
ತರಗತಿ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧ ನೇ	೦೬	೦೧	೦೭	೦೬	೦೧	೦೭	೧೩	೧೦	೧೩
೨ ನೇ	೦೪	೦೫	೦೯	೦೪	೦೫	೦೯	೧೪	೧೭	೩೧
೩ ನೇ	೦೩	೦೨	೦೫	೦೩	೦೨	೦೫	೧೫	೧೧	೨೬
೪ ನೇ	೦೭	೦೨	೦೯	೦೭	೦೨	೦೯	೧೬	೨೪	೪೦
೫ ನೇ	೦೩	೦೧	೦೪	೦೩	೦೧	೦೪	೧೬	೧೭	೩೩
೬ ನೇ	೦೪	೦೧	೦೫	೦೪	೦೧	೦೫	೨೪	೨೧	೪೫
೭ ನೇ	೦೪	೦೮	೧೨	೦೮	೦೪	೧೨	೨೬	೧೯	೪೫
ಒಟ್ಟು	೩೧	೨೦	೫೧	೩೧	೨೦	೫೧	೧೨೧	೧೧೬	೨೩೭

ಮೇಲಿನ ಕೋಷ್ಟಕದಲ್ಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ದಾಖಲಾತಿಯು ಗಣನೀಯ ಪ್ರಮಾಣದಲ್ಲಿ ಏರುತ್ತಿರುವುದನ್ನು ಕಾಣಬಹುದಾಗಿದೆ.

ಈ ಸಮುದಾಯದ ಪೋಷಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸುವಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಗ್ರಾಮದಲ್ಲಿ ಇತರೆ ಸಮುದಾಯದ ಜನರು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ಅವರೂ ಸಹ ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಿಸುವಲ್ಲಿ ಸಫಲರಾಗುತ್ತಿದ್ದಾರೆ.

ಕೋಷ್ಟಕ–೩

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡ ಪ್ಲಾಟ್ ನ ವಿವಿಧ ವರ್ಷಗಳ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ಸಂಖ್ಯೆ

ಶೈಕ್ಷಣಿಕ ವರ್ಷ	ದಾಖಲಾತಿ	ಹಾಜರಾತಿ
೨೦೦೮–೨೦೦೯	೬೦	೬೦
೨೦೦೯–೨೦೧೦	೯೩	೯೩
೨೦೧೦–೨೦೧೧	೧೦೨	೧೦೨
೨೦೧೧–೨೦೧೨	೧೩೧	೧೩೧
೨೦೧೨–೨೦೧೩	೧೪೩	೧೪೩
೨೦೧೩–೨೦೧೪	೧೨೨	೧೨೨

೨೦೧೪-೨೦೧೫	೧೭೮	೧೭೮
೨೦೧೫-೨೦೧೬	೧೬೩	೧೬೩
೨೦೧೬-೨೦೧೭	೧೫೮	೧೫೮
೨೦೧೭-೨೦೧೮	೧೪೧	೧೪೧

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡಾ ಪ್ಲಾಟ್ ೨೦೦೭-೨೦೦೮ ನೇ ಸಾಲಿನಲ್ಲಿ ಶಾಲೆಯು ಪ್ರಾರಂಭವಾಯಿತು. ಪ್ರಾರಂಭದಲ್ಲಿ ೧ ರಿಂದ ೫ ನೇ ತರಗತಿಯವರೆಗೆ ಇದ್ದು ನಂತರದ ದಿನಮಾನಗಳಲ್ಲಿ ಶಾಲೆಯು ಉನ್ನತೀಕರಣಗೊಂಡು ೧ ರಿಂದ ೭ ನೇ ತರಗತಿಯವರೆಗೆ ವಿಸ್ತರಿಸಲ್ಪಟ್ಟಿತು. ಗ್ರಾಮದಲ್ಲಿ ಜನಸಂಖ್ಯೆಯ ಪ್ರಮಾಣವು ಹೆಚ್ಚಿದಂತೆಲ್ಲಾ ಅದಕ್ಕೆ ಅನುಗುಣವಾಗಿ ಶಿಕ್ಷಣವನ್ನು ಒದಗಿಸಲು ಹೊಸದಾಗಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಈ ಶಾಲೆಯಲ್ಲಿಯೂ ಸಹ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಯಿತು. ಈ ಶಾಲೆಯಲ್ಲಿ ಮೂಲಭೂತ ವ್ಯವಸ್ಥೆಯನ್ನು ಕಲ್ಪಿಸಿದ ನಂತರ ಶಾಲೆಯು ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿತು.

ಕೋಷ್ಟಕ-೪

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹ್ಯಾರಡ ಪ್ಲಾಟ್ ನ ೨೦೧೮-೧೯ ನೇ ಸಾಲಿನ ೧ ರಿಂದ ೭ ನೇ ತರಗತಿಯವರೆಗಿನ ವಿವಿಧ ಸಮುದಾಯದ ವಿದ್ಯಾರ್ಥಿಗಳು

	ಪರಿಶಿಷ್ಟ ಜಾತಿ			**ಪರಿಶಿಷ್ಟ ಪಂಗಡ**			**ಇತರೆ**		
ತರಗತಿ	**ಗಂಡು**	**ಹೆಣ್ಣು**	**ಒಟ್ಟು**	**ಗಂಡು**	**ಹೆಣ್ಣು**	**ಒಟ್ಟು**	**ಗಂಡು**	**ಹೆಣ್ಣು**	**ಒಟ್ಟು**
೧ ನೇ	–	–	–	೦೨	೦೩	೦೫	೦೪	೧೧	೧೫
೨ ನೇ	–	–	–	೦೨	೦೪	೦೬	೦೫	೦೯	೧೪
೩ ನೇ	–	–	–	೦೪	೦೩	೦೭	೧೧	೦೬	೧೭
೪ ನೇ	–	–	–	೦೨	೦೩	೦೫	೧೧	೦೭	೧೮
೫ ನೇ	–	–	–	೦೧	೦೧	೦೨	೦೬	೦೫	೧೧
೬ ನೇ	–	–	–	೦೪	೦೧	೦೫	೦೪	೦೭	೧೧
೭ ನೇ	–	–	–	೦೧	೦೫	೦೬	೦೯	೧೧	೨೦
ಒಟ್ಟು	–	–	–	**೧೬**	**೨೦**	**೩೬**	**೪೯**	**೫೬**	**೧೦೫**

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ವಿಶೇಷವಾಗಿ ಹೆಣ್ಣು ಮಕ್ಕಳ ಸಂಖ್ಯೆಯು ಗಣನೀಯವಾಗಿ ಹೆಚ್ಚಿರುವುದನ್ನು ಕಾಣಬಹುದಾಗಿದೆ. ಗ್ರಾಮದ ಜನರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಾಗಿ ಒತ್ತನ್ನು ಕೊಟ್ಟಿದ್ದಾರೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಹೆಚ್ಚಿರುವುದನ್ನು ಗಮನಿಸಬಹುದಾಗಿದೆ. ಬಹುತೇಕ

ವಿದ್ಯಾರ್ಥಿಗಳನ್ನು ಗಮನಿಸಿದಾಗ ವಿದ್ಯಾಭ್ಯಾಸದಲ್ಲಿ ಅತೀ ಹೆಚ್ಚು ಚುರುಕಾಗಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಆಟದಲ್ಲಿಯೂ ಸಹ ಈ ವಿದ್ಯಾರ್ಥಿಗಳು ಮುಂಚೂಣಿಯಲ್ಲಿರುವುದನ್ನು ಕಾಣಬಹುದಾಗಿದೆ.

ಈ ಶಾಲೆಯೂ ಸಹ ಉತ್ತಮ ಗುಣಮಟ್ಟದ ಶಾಲಾ ಪರಿಸರವನ್ನು ಹೊಂದಿದೆ. ಶಾಲೆಯು ಎಲ್ಲಾ ಪರಿಸರವನ್ನು ಹೊಂದಿದ್ದು ಶಾಲೆಯ ಎಲ್ಲಾ ಶಿಕ್ಷಕರು ಅತ್ಯಂತ ಕ್ರಿಯಾಶೀಲತೆಯಿಂದ ಕಾರ್ಯವನ್ನು ಮಾಡುತ್ತಿದ್ದಾರೆ. ಉತ್ತಮ ಭೌತಿಕ ಪರಿಸರವನ್ನು ಒದಗಿಸಲಾಗಿದೆ. ಶಾಲೆಯು ಹಲವಾರು ವಿನೂತನ ಕಾರ್ಯಕ್ರಮಗಳ ಮೂಲಕ ಗಮನ ಸೆಳೆಯುತ್ತಿದ್ದು, ಉತ್ತಮ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದರಲ್ಲಿ ಯಶಸ್ವಿಯಾಗಿದೆ.

ಶಿಕ್ಷಣವು ಇಂದಿನ ನಾಗರಿಕ ಜಗತ್ತಿನಲ್ಲಿ ಸಾಮಾಜಿಕ ಏಣಿ ಶ್ರೇಣಿಯಲ್ಲಿ ಅತ್ಯುನ್ನತ ಸ್ತರಕ್ಕೆ ಏರಲು ಇರುವಂತಹ ಪ್ರಭಾವಿಯಾದ ಅಸ್ತ್ರವಾಗಿದೆ. ನಮ್ಮ ಹಿಂದೂ ಸಮಾಜದಲ್ಲಿ ವ್ಯಕ್ತಿಯನ್ನು ಮೊದಲು ಆತನ ಅಂತಸ್ತನ್ನು ಹುಟ್ಟಿನಿಂದಲೇ ನಿರ್ಧರಿಸುತ್ತಿದ್ದರಿಂದ ಅನಿವಾರ್ಯವಾಗಿ ಆತನು ತನ್ನ ಸಮುದಾಯದ ಸಾಂಪ್ರದಾಯಿಕ ಕುಲಕಸುಬನ್ನೇ ಮುಂದುವರೆಸಬೇಕಾಗಿತ್ತು. ತನ್ನ ಸಮಾಜದಲ್ಲಿ ಆತನಿಗೆ ಬದಲಾವಣೆಗೆ ಅವಕಾಶವಿರಲಿಲ್ಲ, ಅದರಲ್ಲಿ ವಿಶೇಷವಾಗಿ ಅತ್ಯಂತ ಕೆಳಸ್ತರದಲ್ಲಿರುವ ಅಸ್ಪೃಶ್ಯ ಸಮುದಾಯಗಳ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಯಾವಾಗ ಭಾರತದಲ್ಲಿ ಬ್ರಿಟೀಷರ ಆಳ್ವಿಕೆ ಪ್ರಾರಂಭವಾಯಿತೋ ಸ್ವಲ್ಪ ಮಟ್ಟಿನ ಏಕರೂಪದ ಸಾಮಾಜಿಕ ವ್ಯವಸ್ಥೆಗೆ ಅವರು ಅಡಿಪಾಯವನ್ನು ಹಾಕಿದರು. ಸ್ವಾತಂತ್ರ್ಯ ನಂತರದ ಕಾಲಾವಧಿಯಲ್ಲಿ ಸಂವಿಧಾನವು ನೀಡಿದ ವಿಶೇಷ ಅವಕಾಶಗಳಿಂದಾಗಿ ಸಮಾಜದ ಅತ್ಯಂತ ಕೆಳ ಸಮುದಾಯಗಳ ಸಾಮಾಜಿಕ ಚಲನೆಯನ್ನು ನಾವು ಗಮನಿಸಬಹುದಾಗಿದೆ. ಸಂವಿಧಾನದಲ್ಲಿ ಎಲ್ಲಾ ಸಮುದಾಯದವರಿಗೆ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿದ್ದರ ಪರಿಣಾಮವಾಗಿ ಸಾಮಾಜಿಕ ಬದಲಾವಣೆಯನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಅನಾದಿ ಕಾಲದಿಂದಲೂ ಸಹ ಗ್ರಾಮದ ಬಹುತೇಕ ಜನರು ತಮ್ಮ ಸಮುದಾಯದ ಸಾಂಪ್ರದಾಯಿಕ ಉಪ ಕಸುಬನ್ನು ಅವಲಂಬಿಸಿದ್ದರು. ೧೯೧೦ಳ ರ ಶಕೆ ಪ್ರಾರಂಭವಾದಾಗ ಸ್ವಲ್ಪ ಮಟ್ಟಿನ ಸಾಮಾಜಿಕ ಚಲನೆಯನ್ನು ಕಾಣಬಹುದಾಗಿದೆ. ಸಾಮಾಜಿಕ ಚಲನೆಯೆಂಬುದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಂದು ಅಂತಸ್ತಿನಿಂದ ಅಥವಾ ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಚಲಿಸುವ ಪ್ರಕ್ರಿಯೆಯಾಗಿದೆ. ಗ್ರಾಮದಲ್ಲಿ ಶಿಕ್ಷಣವನ್ನು ಪಡೆದ ವ್ಯಕ್ತಿಗಳ ವೈಚಾರಿಕ ಬದಲಾವಣೆಯನ್ನು ಕಾಣಬಹುದು. ಅಂದರೆ ಗ್ರಾಮದಲ್ಲಿ ಶಿಕ್ಷಣವು ಸಾಮಾಜಿಕ ಚಲನೆಯನ್ನು ತಂದಿತು. ಇದರಿಂದ ಗ್ರಾಮದ ಬಹುತೇಕ ಜನರು ಸುಶಿಕ್ಷಿತರಾಗಿ ಸಾಮಾಜಿಕ ಬದಲಾವಣೆಗಳು ಆದವು. ಮೊದಲಿನಿಂದಲೂ ಗ್ರಾಮದಲ್ಲಿ ಉಳ್ಳವರು ತಮ್ಮ ಪ್ರಭಾವವನ್ನು ಹೊಂದಿದ್ದರು. ಇತರೆ ಹಿಂದುಳಿದ ಸಮುದಾಯದವರು ಎಲ್ಲಾ

ಕ್ಷೇತ್ರಗಳಿಂದ ವಿಮುಖರಾಗಿದ್ದರು. ೧೯೫೦ ರಿಂದ ೧೯೮೦ರ ದಶಕದಲ್ಲಿ ಗ್ರಾಮದಲ್ಲಿ ಅಮೂಲಾಗ್ರವಾದ ಬದಲಾವಣೆಯನ್ನು ಕಾಣಬಹುದಾಗಿದೆ. ೧೯೭೦ ರ ದಶಕದಲ್ಲಿ ಗ್ರಾಮದ ಹಿಂದುಳಿದ ಸಮುದಾಯದವರಿಗೂ ಮೇಲ್ವರ್ಗದ ಸಮುದಾಯದವರಿಗೂ ಹಲವಾರು ಸಂಘರ್ಷಗಳನ್ನು ನಾವಿಲ್ಲಿ ಕಾಣಬಹುದು.

ಹಿಂದುಳಿದ ಸಮುದಾಯಗಳಲ್ಲಿ ತಮ್ಮ ಹಕ್ಕು ಭಾದ್ಯತೆಗಳ ಬಗ್ಗೆ ಅವರಲ್ಲಿ ಅರಿವು ಉಂಟಾಯಿತು. ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ಸಂಘಟಿತರಾದರು. ಮೇಲ್ವರ್ಗದ ದಬ್ಬಾಳಿಕೆಯನ್ನು ಪ್ರಶ್ನಿಸುವ ಮನೋಭಾವನ್ನು ಬೆಳೆಸಿಕೊಂಡರು. ಅದರಲ್ಲಿ ವಿಶೇಷವಾಗಿ ಸಾಂವಿಧಾನಿಕ ಅವಕಾಶಗಳನ್ನು ಬಳಸಿಕೊಂಡು ತಮ್ಮ ಸಮುದಾಯಗಳ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಿಕೊಂಡರು. ೧೯೫೦ ಕ್ಕಿಂತ ಪೂರ್ವದಲ್ಲಿ ಗ್ರಾಮದ ಹಿಂದುಳಿದ ಬಹುತೇಕ ಸಮುದಾಯಗಳು ತಮ್ಮ ಕುಲಕಸುಬಿನ ಜೊತೆಗೆ ಭೂರಹಿತ ಕೃಷಿ ಕಾರ್ಮಿಕರಾಗಿ ಮತ್ತು ಗೇಣಿದಾರರಾಗಿ ದುಡಿಯುತ್ತಿದ್ದರು. ತದ ನಂತರದಲ್ಲಿ ೧೯೮೦ ರ ದಶಕದಿಂದೀಚೆಗೆ ಹಿಂದುಳಿದ ಸಮುದಾಯಗಳು ಸ್ವಂತ ಭೂಮಿಯನ್ನು ಹೊಂದತೊಡಗಿದರು. ಇದರಿಂದ ಸ್ವಲ್ಪ ಆರ್ಥಿಕ ಸುಧಾರಣೆಯನ್ನು ಕಾಣಬಹುದಾಗಿದೆ. ಗ್ರಾಮದ ಎಲ್ಲಾ ಸಮುದಾಯದ ಮಕ್ಕಳು ವಿದ್ಯಾಭ್ಯಾಸದಲ್ಲಿ ತೊಡಗಿದ್ದರ ಪರಿಣಾಮವಾಗಿ ಗ್ರಾಮದಲ್ಲಿ ಭೌದ್ಧಿಕ ಕ್ರಾಂತಿಯುಂಟಾಗಿ ಹಿಂದುಳಿದ ಬಹುತೇಕ ಸಮುದಾಯದವರು ಇಂದು ಸರ್ಕಾರಿ ನೌಕರಿಯಲ್ಲಿದ್ದಾರೆ. ಗ್ರಾಮದಲ್ಲಿ ಬಹುತೇಕ ಸಮುದಾಯದ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದು, ಉನ್ನತ ಶಿಕ್ಷಣ ಕೈಗೊಳ್ಳುವಾಗ ಭಾಷಾ ಮಾಧ್ಯಮದ ಕೊರತೆಯಿಂದಾಗಿ ಅವರು ಅರ್ಧದಲ್ಲಿಯೇ ಶಿಕ್ಷಣವನ್ನು ಮೊಟಕುಗೊಳಿಸಿ ಮಧ್ಯಮ ದರ್ಜೆಯ ಉದ್ಯೋಗಗಳಿಗೆ ತೃಪ್ತಿಪಟ್ಟುಕೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಅಂದರೆ ಮೊದಲನೇಯ ತಲೆಮಾರಿನ ಜನರು ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿಲ್ಲ. ಎರಡನೇಯ ಮತ್ತು ಮೂರನೇಯ ತಲೆಮಾರಿನ ಅನೇಕರು ಉನ್ನತ ವ್ಯಾಸಂಗವನ್ನು ಪಡೆಯಲು ಆಸಕ್ತಿಯನ್ನು ತೋರುತ್ತಿದ್ದಾರೆ. ಸರ್ಕಾರದ ಹಲವಾರು ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಹಲವಾರು ಸರ್ಕಾರಿ ನೌಕರಿಯನ್ನು ಮಾಡುತ್ತಿದ್ದಾರೆ. ವಿವಿಧ ಸಮುದಾಯದ ಸರ್ಕಾರಿ ನೌಕರರು ಕೆಳಕಂಡತಿದೆ.

ಸಮುದಾಯಗಳು	ಶಿಕ್ಷಕರು	ಪೋಲೀಸ್	ಗ್ರಾಮ ಲೆಕ್ಕಾಧಿಕಾರಿ	ನಿರ್ವಾಹಕರು	ಆರೋಗ್ಯ ಇಲಾಖೆ	ಬ್ಯಾಂಕ	ಪ್ರಾಧ್ಯಾಪಕರು/ ಉಪನ್ಯಾಸಕರು	ಇಂಜನಿಯರ್	ಕೆ.ಇ.ಬಿ.	ಮಿಲಿಟರಿ	ಗ್ರಾಮೀಣಾಭಿವೃದ್ಧಿ	ಇತರೆ
ಕುರುಬ	೨೫	೬	೮	೧೩	೩	೨	–	೧	–	೧	೧	೧
ಲಿಂಗಾಯತ	೮	೫	೧	೫	೪	೧	೨	೨	೧	೧	–	೫
ವಾಲ್ಮೀಕಿ	೮	೧	೮	೩	೨	–	೧	–	–	–	–	–
ಹರಿಜನ	೧	–	೨	–	–	–	–	–	–	–	–	–
ಕಮ್ಮಾರ	೧	೧	–	–	–	–	–	–	–	–	–	–
ಕುಂಬಾರ	೧	೧	–	–	೧	–	–	–	–	–	–	–
ಬಡಿಗೇರ	೧	–	–	–	೨	–	–	–	–	–	೧	–
ಗೊಲ್ಲ	೨	೧	–	೪	೧	–	–	–	–	–	–	–
ಅಗಸ	೧	–	–	–	–	–	–	–	–	–	–	–
ಪಿಂಜಾರ	೨	೨	೧	೧	–	–	–	–	–	–	–	–
ಬಾರ್ಕಿ	೩	೧	೧	೨	–	–	–	–	–	–	–	–
ಜಂಗಮ	೩	–	–	–	–	–	೧	–	–	–	–	–
ಬಣಜಿಗ	೧	–	–	–	–	–	–	–	–	–	–	–
ಜೈನ್	೧	–	–	೨	–	–	–	–	–	–	–	–

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ವಿವಿಧ ಸಮುದಾಯದವರ ವಿವಿಧ ಸರ್ಕಾರಿ ಹುದ್ದೆಗಳ ವಿವರಗಳನ್ನು ಕಾಣಬಹುದಾಗಿದೆ. ಒಂದು ಸಮೂಹಕ್ಕೆ, ಸಮುದಾಯಕ್ಕೆ ಶಿಕ್ಷಣವನ್ನು ಒದಗಿಸಿದರೆ ಹೇಗೆ ಹಂತ ಹಂತವಾಗಿ ಬದಲಾವಣೆಯ ಪರ್ವವನ್ನು ಕಾಣಬಹುದು ಎಂಬುದಕ್ಕೆ ಮೇಲಿನ ಅಂಕಿಅಂಶಗಳೆ ಇದಕ್ಕೆ ಸಾಕ್ಷಿಯಾಗಿವೆ. ಹಿಂದುಳಿದ ಸಮುದಾಯಗಳ ಬಹುತೇಕ ವಿದ್ಯಾರ್ಥಿಗಳು ಇಂದು ಸರ್ಕಾರಿ ನೌಕರಿಗಳನ್ನು ಪಡೆದು ಆರ್ಥಿಕ ಸ್ವಾವಲಂಬನೆಯನ್ನು ಹೊಂದಿದ್ದಾರೆ.

ಗ್ರಾಮದ ಎಲ್ಲಾ ಸಮುದಾಯಗಳ ಜನರು ಶೇಕಡಾ ೮೦ ರಷ್ಟು ಸುಶಿಕ್ಷಿತರಾಗುತ್ತಿದ್ದಾರೆ. ಅತೀ ವೇಗದಲ್ಲಿ ಸಾಮಾಜಿಕ ಚಲನೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಇದರ ಮುಖೇನ ಸಮಾಜದ ಮುಖ್ಯ ವಾಹಿನಿಗೆ ಎಲ್ಲಾ ಸಮುದಾಯದವರು ಬರಲು ಶಿಕ್ಷಣ ಎಂಬುದು ಬಹಳಷ್ಟು ಪರಿಣಾಮವನ್ನು ಬೀರಿದೆ. ಮುಂದುವರೆದು ಗ್ರಾಮದಲ್ಲಿ ಹೆಚ್ಚು ಹೆಚ್ಚು ಜನರು ಇಂಗ್ಲೀಷ್ ಮಾಧ್ಯಮದ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸಲು ಪ್ರಾರಂಭಿಸಿದ್ದಾರೆ.

೫.೨ ಆರ್ಥಿಕ ಸ್ಥಿತಿಗತಿ

ಅಭಿವೃದ್ದಿ ಹೊಂದದೇ ಇರುವ ಮತ್ತು ಅಭಿವೃದ್ದಿಶೀಲ ದೇಶಗಳಲ್ಲಿ ಗ್ರಾಮೀಣ ಅರ್ಥವ್ಯವಸ್ಥೆಯು ಅನೇಕ ಸಮಸ್ಯೆಗಳಿಂದ ನರಳುತ್ತಿವೆ. ಭಾರತದ ಗ್ರಾಮೀಣ ಆರ್ಥಿಕತೆಯನ್ನು ನಾವು ಉದಾಹರಣೆಗೆ ತೆಗೆದುಕೊಂಡಾಗ ಹಲವಾರು ಸಮಸ್ಯೆಗಳನ್ನು ಕಾಣುತ್ತೇವೆ. ಋತುಮಾನದ ನಿರುದ್ಯೋಗ. ಕೃಷಿಯಲ್ಲಿ ಬಂಡವಾಳ ಹೂಡಿಕೆಯ ಕೊರತೆ, ಗುಡಿಕೈಗಾರಿಕೆಗಳ ಅಳಿವು, ಕೃಷಿ ಉತ್ಪನ್ನಗಳಿಗೆ ಯೋಗ್ಯವಾದ ಬೆಲೆ ಸಿಗದೇ ಇರುವುದು, ಸರಿಯಾದ ಮಾರುಕಟ್ಟೆ ಸಿಗದೇ ಇರುವುದು ಇವು ಗ್ರಾಮೀಣ ಅರ್ಥವ್ಯವಸ್ಥೆಯನ್ನು ಭಾದಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿದೆ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಗ್ರಾಮೀಣ ಆರ್ಥಿಕ ವ್ಯವಸ್ಥೆಯು ಹಲವಾರು ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳಬೇಕಾದ ಅನಿವಾರ್ಯತೆ ಇದೆ, ಕೇವಲ ಬೇಸಾಯವನ್ನೇ ನಂಬಿಕೊಂಡು ಜನರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದಾಗಲಿ, ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವುದಾಗಲಿ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರು ವೈವಿದ್ಯಮಯ ಚಟುವಟಿಕೆಗಳನ್ನು ಪ್ರಾರಂಭಿಸುವುದು ಯೋಗ್ಯವಾಗಿದೆ.

ಹ್ಯಾರಡ ಗ್ರಾಮವು ಕೃಷಿಯನ್ನೇ ತನ್ನ ಪ್ರಧಾನ ವೃತ್ತಿಯನ್ನಾಗಿ ಅನುಸರಿಸುತ್ತಿದೆ. ಕೃಷಿಯೇ ಈ ಜನರ ಜೀವಾಳವಾಗಿದೆ. ಪ್ರಮುಖವಾಗಿ ಹ್ಯಾರಡ ಗ್ರಾಮವು ಸಾಂಪ್ರದಾಯಿಕ ಕೃಷಿಯನ್ನೆ ನೆಚ್ಚಿಕೊಂಡಿದೆ. ಹ್ಯಾರಡ ಗ್ರಾಮವು ಅಪಾರವಾದ ಭೂ ಸಂಪತ್ತನ್ನು ಹೊಂದಿದ ಗ್ರಾಮವಾಗಿದೆ. ಸುತ್ತ-ಮುತ್ತಲಿನ ಗ್ರಾಮಗಳಲ್ಲಿಯೇ ಫಲವತ್ತಾದ ಭೂಮಿಯನ್ನು ಹೊಂದಿದ ಗ್ರಾಮವಾಗಿದೆ. ಪಕ್ಕದಲ್ಲಿಯೇ ಹೇರಳವಾದ ಅರಣ್ಯವಿರುವುದರಿಂದ ಗ್ರಾಮಸ್ಥರು ಹೆಚ್ಚಾಗಿ ಮಳೆಯಾಶ್ರಿತ ಕೃಷಿಯನ್ನು ಅವಲಂಬಿಸಿದ್ದಾರೆ. ಗ್ರಾಮದಲ್ಲಿ ೪ ಕೆರೆಗಳಿದ್ದು, ಈ ಕೆರೆಗಳು ಜಾನುವಾರುಗಳಿಗೆ ಕುಡಿಯುವ ನೀರಿಗೆ ಸೀಮಿತವಾಗಿವೆ. ಹಿಂದಿನ ಕಾಲದಲ್ಲಿ ಎರಡು ಕೆರೆಗಳಾದ ಮಲಿಯಮ್ಮನ ಕೆರೆ, ಹೊಸಕೆರೆಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರು. ಆದರೆ ಇತ್ತೀಚಿಗೆ ಮಳೆಯ ಅಭಾವದಿಂದ ಅವುಗಳು ನೀರಿನಿಂದ ಭರ್ತಿಯಾಗುವುದು ಬಹುತೇಕ ಕಡಿಮೆಯಾಗಿದೆ.

ಹ್ಯಾರಡ ಗ್ರಾಮದ ಕೃಷಿ ನೀರಾವರಿಯ ಇನ್ನೊಂದು ವಿಶೇಷವೆಂದರೆ ಅತೀ ಹೆಚ್ಚು ಬೋರ್‌ವೆಲ್‌ಗಳನ್ನು ಬಳಸುತ್ತಿದ್ದಾರೆ. ಹಡಗಲಿ ತಾಲ್ಲೂಕಿನಲ್ಲಿಯೇ ಅತೀ ಹೆಚ್ಚು ಬೋರ್‌ವೆಲ್‌ಗಳನ್ನು ಬಳಸುತ್ತಿದ್ದಾರೆ. ಸುಮಾರು ೫೦೦ಕ್ಕಿಂತಲೂ ಹೆಚ್ಚು ಬೋರ್‌ವೆಲ್‌ಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಆದ್ದರಿಂದ ಭೂಮಿಯ ಅಂತರ್‌ಜಲದ ಮಟ್ಟ ಕಳವಳಕಾರಿ ರೀತಿಯಲ್ಲಿ ಕುಸಿಯತ್ತಿದೆ. ಸುಮಾರು ೧೦೦೦ ಅಡಿ ಭೂಮಿಯನ್ನು ಕೊರೆದರು ಅಂತರ್ ಜಲವು ನಮಗೆ ಸಿಗದೇ ಇರುವ ಪರಿಸ್ಥಿತಿ ಉಂಟಾಗಿದೆ. ಆದರೆ ಇತ್ತೀಚಿಗೆ ತುಂಗಾಭದ್ರ ನದಿಯಿಂದ ಹೊಸಕೆರೆ, ಮಲಿಯಮ್ಮನ ಕೆರೆಗೆ ನೀರು ತುಂಬಿಸುವ ಕಾರ್ಯ ಸರ್ಕಾರದಿಂದ ಆಗಿದೆ. ಇದು ಕೊಂಚ ಮಟ್ಟಿಗೆ ಅಂತರ್ ಜಲದ ಮಟ್ಟ ಸುಧಾರಿಸಲು ಕಾರಣವಾಗಿದೆ ಎಂದು ಹೇಳಬಹುದು.

ಸಾಂಪ್ರದಾಯಿಕ ಕೃಷಿ ಪದ್ಧತಿ

ಹ್ಯಾರಡ ಗ್ರಾಮವು ಮೊದಲಿನಿಂದಲೂ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಬಂದಿದೆ. ಕೃಷಿಯಲ್ಲಿ ಸಾಂಪ್ರದಾಯಿಕ ಪರಿಕರಗಳನ್ನು ಬಳಸುತ್ತಿದ್ದಾರೆ. ಆದರೆ ಇತ್ತೀಚಿಗೆ ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸುವ ಪದ್ದತಿ ಜಾರಿಯಲ್ಲಿದೆ. ಇದು ಆಧುನಿಕತೆಯ ಪ್ರಭಾವಕ್ಕೆ ಈ ಗ್ರಾಮವು ಒಗ್ಗಿಕೊಳ್ಳುವ ಲಕ್ಷಣಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಗ್ರಾಮವು ಉದಯಿಸಿದ ಕಾಲಾವಧಿಯಿಂದಲೂ ಇಲ್ಲಿ ಕೃಷಿಯನ್ನೇ ಮೂಲ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ಸಾಗಿಸುವಂತಹ ಪದ್ದತಿ ಇದೆ. ಗ್ರಾಮದಲ್ಲಿ ಪ್ರಾರಂಭದ ದಿನಗಳಲ್ಲಿ ಕೃಷಿ ಭೂಮಿಯು ಕಡಿಮೆ ಇದ್ದು. ಎಲ್ಲಿ ನೀರಿನ ತಾಣವಿರುತ್ತೋ ಅಲ್ಲಿ ಭತ್ತವನ್ನು ಬೆಳೆದು ಆಹಾರಕ್ಕೋಸ್ಕರ ಶೇಖರಣೆ ಮಾಡುತ್ತಿದ್ದರು. ಬರುಬರುತ್ತಾ ಗ್ರಾಮವು ತನ್ನ ವಿಸ್ತಾರ ಪಡೆದುಕೊಳ್ಳುತ್ತಿದ್ದಂತೆಯೇ, ಕೃಷಿ ಭೂಮಿಯ ವಿಸ್ತಾರವು ಹೆಚ್ಚುತ್ತಾ ಹೋಯಿತು. ಪಕ್ಕದ ಅರಣ್ಯವನ್ನು ಕಡಿದು ಕೃಷಿಗೆ ಯೋಗ್ಯವಾದ ಭೂಮಿಯನ್ನು ಸೃಷ್ಟಿಸಿಕೊಂಡರು. ಈಗಲೂ ಹ್ಯಾರಡ ಗ್ರಾಮದಲ್ಲಿ ಸಾಂಪ್ರದಾಯಿಕ ಕೃಷಿಯನ್ನು ಕಾಣಬಹುದಾಗಿದೆ. ಈ ಸಾಂಪ್ರದಾಯಿಕ ಕೃಷಿಯಲ್ಲಿ ಬಳಸಲ್ಪಡುವ ಕೃಷಿ ಉಪಕರಣಗಳು ಹೀಗಿವೆ;

೦೧ ಕುಂಟೆ: ಇದು ಮರದ ಕಟ್ಟಿಗೆಯಿಂದ ತಯಾರಿಸಿದ ಸಾಧನವಾಗಿದೆ. ಸಾಮಾನ್ಯವಾಗಿ ಇದನ್ನು ಆಸಿನ ಮರ, ಕರಿ ಜಾಲಿಯ ಮರದಿಂದ ತಯಾರಿಸುತ್ತಾರೆ. ಹ್ಯಾರಡಾದ ಸಾಂಪ್ರದಾಯಿಕ ಕೃಷಿಯಲ್ಲಿ ಬಳಸುವ ಪ್ರಮುಖವಾದ ಸಾಧನವಾಗಿದೆ. ಕುಂಟೆಯನ್ನು ಬೆಳೆಗಳ ಮಧ್ಯೆ ಬೆಳೆಯುವ ಅನಾವಶ್ಯಕ ಕಳೆಯನ್ನು ಹರಗಲು, ಭೂಮಿಯನ್ನು ಬಿತ್ತಲೂ, ಹಸನು ಮಾಡಲು ಪ್ರಮುಖವಾಗಿ ಬಳಸುತ್ತಾರೆ. ಇದರಲ್ಲಿ ಹಲವಾರು ವಿಧಗಳನ್ನು ನಾವು ಕಾಣಬಹುದಾಗಿದೆ. ಬಳಗುಂಟಿ:– ಬೀಜವನ್ನು ಬಿತ್ತಿದ ನಂತರ ಬೀಜದ ಸಾಲುಗಳನ್ನು ಮುಚ್ಚಲು, ಹಾಗೂ ಬಿತ್ತನೆ ಮಾಡಿದ ೩ ದಿನಗಳ ನಂತರ ಬೀಜವು ಸುಲಭವಾಗಿ ಮೊಳಕೆಯೊಡೆಯಲು, ಭೂಮಿಯನ್ನು ಮೆದು ಮಾಡಲು ಉಪಯೋಗಿಸುವರು. ಸಾಮಾನ್ಯವಾಗಿ ಇದು ೫ ಅಡಿ ಉದ್ದವನ್ನು ಹೊಂದಿರುತ್ತದೆ. ಅಡ್ನಾಡಿಗುಂಟಿ:– ಬೀಜವನ್ನು ಬಿತ್ತಿ ಬೀಜವು ಮೊಳಕೆಯೊಡೆದು ಒಂದು ಅಡಿ ಸಸಿ ಆದ ಮೇಲೆ ಸಸಿಗಳ ಸಾಲುಗಳ

ಮಧ್ಯೆ ಇರುವ ಅನವಶ್ಯಕ ಕಳೆಯನ್ನು ಕೀಳಲು ಇದನ್ನು ಉಪಯೋಗಿಸುವರು. ಇದು ಸಾಮಾನ್ಯವಾಗಿ ೧.೧/೨ ಅಡಿ ಉದ್ದವನ್ನು ಹೊಂದಿರುತ್ತದೆ. ಕಿರುಗುಂಟಿ :- ಇದು ಸಹಿತ ಬೆಳೆದ ಸಸಿಗಳ ಮಧ್ಯೆ ಇರುವ ಅನವಶ್ಯಕ ಕಳೆಯನ್ನು ಕೀಳಲು ಬಳಸುವ ಸಾಧನವಾಗಿದೆ. ಇದು ಸಾಮಾನ್ಯವಾಗಿ ಒಂದು ಅಡಿ ಉದ್ದವನ್ನು ಹೊಂದಿರುತ್ತದೆ. ಎಡೆಗುಂಟಿ :- ಬೆಳೆದ ಸಸಿಗಳ ಪಕ್ಕದಲ್ಲಿ ಅನವಶ್ಯಕ ಕಳೆಗಳನ್ನು ಅರುಗು ಹಿಡಿಯಲಿಕ್ಕೆ ಹಾಗೂ ಸಾಲಿನ ಬೀದಿಯಲ್ಲಿ ಬೆಳೆದ ಕಳೆಯನ್ನು ಕೀಳಲಿಕ್ಕೆ ಉಪಯೋಗಿಸುವ ಸಾಧನವಾಗಿದೆ. ಇದು ಸಾಮಾನ್ಯವಾಗಿ ೧ ಅಡಿ ಉದ್ದವನ್ನು ಹೊಂದಿರುತ್ತದೆ. ಹತ್ತಿಗುಂಟೆ:- ಈ ಸಾಧನವು ಎರಡು ಸಾಲಿನ ಮಧ್ಯ (ಬೀದಿ) ದಲ್ಲಿ ಬೆಳೆದ ಅನವಶ್ಯಕ ಕಳೆಯನ್ನು ಕೀಳಲಿಕ್ಕೆ ಬಳಸುವ ಸಾಧನವಾಗಿದೆ. ಚೌಟುಗುಂಟೆ : ಪ್ರಮುಖವಾಗಿ ಈ ಸಾಧವನ್ನು ಜೋಳದ ಹೊಲದಲ್ಲಿ ಉಪಯೋಗಿಸುವರು. ಸಸಿಗಳ ಬುಡಕ್ಕೆ ಹೆಚ್ಚಾಗಿ ಮಣ್ಣು ಬೀಳಲು (ಓಡು ಕಟ್ಟುವುದು) ಉಪಯೋಗಿಸುವರು. ಸಾಮಾನ್ಯವಾಗಿ ಇದು ಒಂದು ಅಡಿ ಉದ್ದವನ್ನು ಹೊಂದಿರುತ್ತದೆ.

ಮೇಲಿನ ಎಲ್ಲಾ ಉಪಕರಣಗಳು ಇಂದು ಬಹುತೇಕ ಸ್ಥಿತ್ಯಂತರಗಳನ್ನು ಕಂಡಿವೆ. ಮೊದಲು ಕಟ್ಟಿಗೆಯಿಂದ ಮಾಡಿದ ಕುಂಟೆಗಳನ್ನು ಉಪಯೋಗಿಸುತ್ತಿದ್ದರು. ಆದರೆ ಗ್ರಾಮವು ಯಾಂತ್ರೀಕರಣಗೊಳ್ಳುತ್ತಿದ್ದಂತೆಯೇ ಕಬ್ಬಿಣದಿಂದ ಮಾಡಿದ ಕುಂಟೆಗಳನ್ನು ಉಪಯೋಗಿಸುತ್ತಿದ್ದಾರೆ. ಬೀಜಗಳನ್ನು ಬಿತ್ತನೆ ಮಾಡುವಾಗಲೇ ಪೌಡರ್ ರೀತಿಯ ಕಳೆನಾಶಕಗಳನ್ನು ಸಿಂಪಡಿಸುತ್ತಾರೆ. ಅನಾವಶ್ಯಕ ಕಳೆಯು ಹುಟ್ಟುವುದಿಲ್ಲ, ಒಂದು ವೇಳೆ ಹುಟ್ಟಿದರೆ ಆಕ್ಸಿ ಗೊಲ್ಡ್, ತಂಗಾಸೂಪರ್ ಹಾಗೂ ಅಂಟು ಇವುಗಳನ್ನು ನೀರಿನಲ್ಲಿ ಮಿಶ್ರಣಮಾಡಿ ಸಿಂಪಡಿಸುವುದರಿಂದ ಕಳೆ ಸುಟ್ಟು ಹೋಗುತ್ತದೆ. ಆದ್ದರಿಂದ ಇತ್ತೀಚಿಗೆ ಈ ಕುಂಟೆಗಳ ಬಳಕೆ ಬಹಳಷ್ಟು ಕ್ಷೀಣಿಸುತ್ತದೆ. ಬಿತ್ತಿದ ಬೀಜ ಮೊಳಕೆಯೊಡೆದು ಹತ್ತು ದಿನ ಆದ ಮೇಲೆ ಸಾಲುಗಳನ್ನು ಮಾಡಲು ಮಾತ್ರ ಈ ಕುಂಟೆಗಳನ್ನು ಉಪಯೋಗಿಸುವ ಪರಿಪಾಠ ಇತ್ತೀಚಿಗೆ ಹುಟ್ಟಿಕೊಂಡಿದೆ.

೦೨ ಕುಡ ಮತ್ತು ತಾಳು : ಈ ಸಾಧನಗಳು ಎಲ್ಲಾ ಕುಂಟೆಗಳ ಜೊತೆ ಜೊತೆಗೆ ಬಳಸುವ ಕಬ್ಬಿಣದ ಸಾಧಗಳಾಗಿವೆ. ಕುಡ: ಆಯಾ ಕುಂಟೆಯ ಉದ್ದಕ್ಕೆ ಸರಿ ಹೊಂದುವ ಅಳತೆಯನ್ನು ಹೊಂದಿರುತ್ತವೆ. ಕಬ್ಬಿಣದಿಂದ ತಯಾರಿಸಿದ ಸಾಧನವಾಗಿದೆ. ಅನಾವಶ್ಯಕ ಕಳೆಗಳ ಬೇರುಗಳು ಸರಾಗವಾಗಿ ಕತ್ತರಿಸುವಂತೆ ಚೂಪಾದ ಮೊನಚನ್ನು ಹೊಂದಿರುತ್ತದೆ. ಇದು ಆಯಾ ಕುಂಟೆಯ ಉದ್ದವನ್ನು ಹೊಂದಿದ್ದು, ಅಗಲ ಸುಮಾರು ೩-೪ ಇಂಚು ಹೊಂದಿದ್ದು, ತಾಳಿಗೆ ಸಿಕ್ಕಿಸಲು ಎರಡು ಕಿವಿಗಳನ್ನು ಹೊಂದಿರುತ್ತವೆ. ತಾಳು:- ಇವುಗಳು ಕುಂಟೆಯ ಜೊತೆ-ಜೊತೆಗೆ ಉಪಯೋಗಿಸುವ ಕಬ್ಬಿಣದ ಸಾಧನವಾಗಿದೆ. ಕುಂಟೆಗೆ ಹಾಗೂ ಕುಡಕ್ಕೆ ಸಂಪರ್ಕ ಕಲ್ಪಿಸಿ ಕಳೆಗಳನ್ನು ಕೀಳಲು ಸಹಾಯಕಾರಿಯಾಗಿದೆ. ಸಾಮಾನ್ಯವಾಗಿ ಎಲ್ಲಾ ತಾಳುಗಳೂ ೧.೧/೨ ಉದ್ದವನ್ನು ಹೊಂದಿರುತ್ತದೆ. ಮೇಲಿನ ಸಾಂಪ್ರದಾಯಕ ಉಪಕರಣಗಳು ಅನವಶ್ಯಕ ಕಳೆಯನ್ನು ಕತ್ತರಿಸುವಂತೆ ಉಪಯೋಗಿಸುವುದುಂಟು. ಆದರೆ ಇತ್ತೀಚಿಗೆ ಬಹುತೇಕ ಕಳೆನಾಶಕದಿಂದ ಕಳೆಯನ್ನು ನಾಶಮಾಡುವುದರಿಂದ ಇದರ ಬಳಕೆ ಬಹಳಷ್ಟು ಕ್ಷೀಣವಾಗಿದೆ.

೦೩ ಕೂರಿಗೆ : ಇದು ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಸಾಮಾನ್ಯವಾಗಿ ಇದನ್ನು ಕರಿಜಾಲಿಯ ಮರದಿಂದ ನಿರ್ಮಿಸಲಾಗಿರುತ್ತದೆ. ೩.೧/೨ ಅಡಿ ಉದ್ದವನ್ನು ಹೊಂದಿದ್ದು, ಇದಕ್ಕೆ ೩ ತೂತುಗಳನ್ನು ಹೊಂದಿದ್ದು, ಈ ತಾಳುಗಳ ಮದ್ಯದಲ್ಲಿ ೩ ತೂತುಗಳನ್ನು ಕೊರೆಯಲಾಗಿದ್ದು, ಬಿತ್ತಿದ ಬೀಜ ನೇರವಾಗಿ ಭೂಮಿಯ ಒಳಗೆ ಹೋಗಲು ವ್ಯವಸ್ಥೆ ಮಾಡಲಾಗಿರುತ್ತದೆ. ಪ್ರತಿಯೊಂದು ತಾಳುಗಳು ೧.೧/೨ ಅಡಿ ಉದ್ದವನ್ನು ಹೊಂದಿದ್ದು, ತಾಳುಗಳ ಮುಂಬಾಗದಲ್ಲಿ ಕಬ್ಬಿಣದ ಚೂಪಾದ ಮೊಳೆಯನ್ನು ಅಳವಡಿಸಿರುತ್ತಾರೆ. ಇದು ಸರಾಗವಾಗಿ ಭೂಮಿಯನ್ನು ಸೀಳಿಕೊಂಡು ಹೋಗುತ್ತದೆ. ಕೂರಿಗೆಯನ್ನು ಬೀಜಗಳನ್ನು ಬಿತ್ತನೆ ಮಾಡಲು ಉಪಯೋಗಿಸುವರು.

ಕೂರಿಗೆಯೂ ತನ್ನ ಬದಲಾವಣೆಯನ್ನು ಕಂಡುಕೊಂಡಿದೆ. ಮೊದಲು ಕೂರಿಗೆಯ ಬಟ್ಟಲಿಗೆ ಬಿದಿರಿನ ಕೊಳವೆಗಳನ್ನು ಬಳಸುತ್ತಿದ್ದರು. ನಂತರದ ದಿನಮಾನಗಳಲ್ಲಿ ಕಬ್ಬಿಣದ ಕೊಳವೆಗಳನ್ನು ಕಾಣಬಹುದಾಗಿದೆ. ಆದರೆ ಇತ್ತೀಚಿಗೆ ಬಹುತೇಕ ರೈತರು ಕೂರಿಗೆಯಿಂದ ಬೀಜವನ್ನು ಬಿತ್ತನೆ ಮಾಡುವುದನ್ನು ಕೈಬಿಟ್ಟಿದ್ದಾರೆ. ಅದರ ಬದಲಾಗಿ ಟ್ರಾಕ್ಟರ್ ಮೂಲಕ ಬಿತ್ತನೆ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಟ್ರಾಕ್ಟರ್‌ಗಳಿಗೆ ನಡುಕಟ್ಟಿನ ಬಿತ್ತನೆ ಮಿಷನ್‌ಗಳನ್ನು ಅಳವಡಿಸಿಕೊಂಡು ಬಿತ್ತನೆಯನ್ನು ಮಾಡುತ್ತಿದ್ದಾರೆ. ಇವುಗಳಿಗೆ ಗ್ರಾಮ್ಯ ಭಾಷೆಯಲ್ಲಿ 'ನಡುಕಟ್ಟಿನ ಕೂರಿಗೆ' ಎಂದು ಕರೆಯುವರು. ಈ ಕೂರಿಗೆಗೆ ಒಮ್ಮೆಗೇ ಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ತುಂಬುವರು. ಯಾರ ಸಹಾಯವಿಲ್ಲದೇ ಸುಮಾರು ಒಂದು ಎಕರೆ ಹೊಲವನ್ನು ಬಿತ್ತನೆ ಮಾಡುವುದು. ನಂತರದಲ್ಲಿ ಮೊದಲಿನ ರೀತಿಯಲ್ಲಿ ಬೀಜ ಮತ್ತು ಗೊಬ್ಬರಗಳನ್ನು ಭರ್ತಿ ಮಾಡಿ ಅತೀ ಕಡಿಮೆ ಅವಧಿಯಲ್ಲಿ ಬಿತ್ತನೆಯನ್ನು ಮಾಡುವರು. ಹೀಗೆ ಕೂರಿಗೆಯ ಸ್ಥಳದಲ್ಲಿ ಇಂದು ನಡುಕಟ್ಟಿನ ಕೂರಿಗೆಯು ಹೆಚ್ಚು ಪ್ರವರ್ಧಮಾನಕ್ಕೆ ಬಂದಿರುವುದನ್ನು ನಾವಿಲ್ಲಿ ನೋಡಬಹುದಾಗಿದೆ.

೦೪ ಕೂರಿಗೆ ಬಟ್ಟಲು : ಇದು ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಸಾಮಾನ್ಯವಾಗಿ ಇದನ್ನು ಕರಿಜಾಲಿ ಮರ ಅಥವಾ ಬೋಚಿಮರದಿಂದ ನಿರ್ಮಿಸಿರುತ್ತಾರೆ. ಇದನ್ನು ಬೀಜವನ್ನು ಬಿತ್ತನೆ ಮಾಡಲು ಕೂರಿಗೆಯೊಂದಿಗೆ ಬಳಸುವರು. ಇದು ಬಟ್ಟಲು ಆಕೃತಿಯಲ್ಲಿದ್ದು, ಸುತ್ತಳತೆ ೪ ಅಡಿ ಇರುತ್ತದೆ. ಈ ಬಟ್ಟಲಿಗೆ ಮೂರು ತೂತುಗಳಿದ್ದು, ಈ ತೂತುಗಳಿಗೆ ೩ ಬಿದಿರಿನ ಕೊಳವೆಗಳನ್ನು ಜೋಡಿಸುರುತ್ತಾರೆ. ಈ ಬಿದಿರಿನ ಕೊಳವೆಗಳು ಕೂರಿಗೆಯ ತಾಳುಗಳ ತೂತಿಗೆ ಸಂಪರ್ಕ ಕಲ್ಪಿಸಿರುತ್ತವೆ. ಬಿತ್ತನೆ ಮಾಡುವ ಬೀಜಗಳು ಸರಾಗವಾಗಿ ಭೂಮಿಯೊಳಗೆ ಹೋಗಲು ಇದನ್ನು ಉಪಯೋಗಿಸುವರು. ಈ ಬಟ್ಟಲನ್ನು ಕಟ್ಟಲು ೩೦ ಅಡಿ ಸಣ್ಣ ದಪ್ಪದ ಹಗ್ಗವನ್ನು ಉಪಯೋಗಿಸುವರು. ಈ ಹಗ್ಗವನ್ನು ಕುಂಟೆಯ ಎರಡೂ ಈಸುಗಳಿಗೆ ಹಾಗೂ ಮೇಳೆಗೆ ಕಟ್ಟಿರುತ್ತಾರೆ.

೦೫ ರೂಣಗಲ್ಲು : ಗಟ್ಟಿಯಾದ ಕಲ್ಲಿನಿಂದ ನಿರ್ಮಿಸಿದ ವಸ್ತುವಾಗಿದೆ. ಸುಮಾರು ೧೫೦ ಕೆ.ಜಿ. ತೂಕವನ್ನು ಹೊಂದಿರುತ್ತದೆ. ಇದು ಸಿಲಿಂಡರ್ ಆಕೃತಿಯಲ್ಲಿರುತ್ತದೆ. ಇದರ ಉದ್ದ ೩ ಅಡಿ, ಸುತ್ತಳತೆ ೨.೧/೨ ಅಡಿ ಹೊಂದಿರುತ್ತದೆ. ಈ ಸಾಧನವನ್ನು ಜೋಳ, ರಾಗಿ, ನವಣೆಯನ್ನು

ಒಕ್ಕಣೆ ಮಾಡಲು ಉಪಯೋಗಿಸುವರು. ರೂಣಗಲ್ಲಿನ ಹಾರಿಗೆ :-ರೂಣಗಲ್ಲಿನ ಎರಡು ಬದುಗಳಲ್ಲಿ ನಟ್ಟನಡುವೆ ೧/೨ ಅಡಿ ಉದ್ದದ ಕಬ್ಬಿಣದ ಅಚ್ಚನ್ನು ತಯಾರಿಸುವರು. ಇದನ್ನು ರೂಣಗಲ್ಲಿನ ಹಾರಿಗೆ ಎಂದು ಕರೆಯುವರು. ರೂಣಗಲ್ಲಿನ ಅಡಿಗೆ : ರೂಣಗಲ್ಲಿನ ಅಚ್ಚಿಗೆ ಹೊಂದಿಕೊಂಡಂತೆ ಕಟ್ಟಿಗೆಯಿಂದ ತಯಾರಿಸಿದ ವಸ್ತುವಾಗಿದೆ. ರೂಣಗಲ್ಲಿನ ಹೀಚು : ೧೫ ಅಡಿಯ ಹಗ್ಗಕ್ಕೆ ರೂಣಗಲ್ಲು ಮುಂದಕ್ಕೆ ಹಿಂದಕ್ಕೆ ಚಲಿಸಲು ಮಾಡಿರುವ ಸಾಧನವಾಗಿದೆ.

ಬಹು ಪುರಾತನ ಕಾಲದಿಂದಲೂ ಕೃಷಿ ಉತ್ಪನ್ನಗಳ ಒಕ್ಕಣಿ ಕಾರ್ಯದಲ್ಲಿ ರೂಣಗಲ್ಲಿನ ಪಾತ್ರ ಬಹು ಮುಖ್ಯವಾದದು. ಜೋಳ, ರಾಗಿ, ನವಣಿ, ತೊಗರೆಗಳನ್ನು ಬೇರ್ಪಡಿಸಲು ಉಪಯೋಗಿಸುತ್ತಿದ್ದರು. ಎತ್ತುಗಳನ್ನು ಹೂಡಿಕೊಂಡು ಅದಕ್ಕೆ ರೂಣಗಲ್ಲನ್ನು ಕಟ್ಟಿ ಬೆಳೆಗಳ ಮೇಲೆ ಅಡ್ಡಾಡಿಸುವುದರಿಂದ ಒಕ್ಕಣಿ ಮಾಡುತ್ತಿದ್ದರು. ಆದರೆ ಇಂದು ಈ ಸಂಸ್ಕೃತಿ ಕಣ್ಮರೆಯಾಗುತ್ತಿದೆ. ಒಕ್ಕಣೆ ಮಾಡುವ ಯಾಂತ್ರೀಕೃತ ಮಿಷನ್‌ಗಳು ಇಂದು ಬಹಳಷ್ಟು ಪ್ರಚಲಿತದಲ್ಲಿವೆ. ಜೋಳ, ರಾಗಿ, ತೊಗರಿ, ನವಣೆಗಳನ್ನು ಒಕ್ಕಣೆ ಮಾಡಲು ಮಿಷನ್‌ಗಳನ್ನು ಬಳಸುತ್ತಿದ್ದಾರೆ. ಗ್ರಾಮ್ಯ ಭಾಷೆಯಲ್ಲಿ ಈ ಮಿಷನ್‌ಗಳಿಗೆ "ಜೀನು" ಎಂದು ಕರೆಯುವರು.

೦೬. ಕುಕ್ಕಿ : ಇದು ಕರಿಮೆಂಟಿನ ಬಳ್ಳಿ ಹಾಗೂ ಕುಕ್ಕಿ ಬಳ್ಳಿಯಿಂದ ಇದನ್ನು ತಯಾರಿಸುವರು. ಪೈರು ತುಂಬಿದ ಹೊಲ-ಗದ್ದೆಗಳಲ್ಲಿ ಎತ್ತುಗಳು ಕೆಲಸ ಮಾಡುವಾಗ ಬೆಳೆದ ಪೈರನ್ನು ತಿನ್ನಬಾರದು ಎಂದು ಎತ್ತುಗಳ ಬಾಯಿಗೆ ಕಟ್ಟುವ ಒಂದು ಸಾಧನವಾಗಿದೆ. ಇಂತಹ ಕುಕ್ಕಿಯನ್ನು ಮಾಡುವುದರಲ್ಲಿ ಹ್ಯಾರಡಾದ ಬೂದನೂರು ಬಸಪ್ಪ ನಿಸ್ಸೀಮರು. ಈಗಲೂ ಈತನ ವಾಸಸ್ಥಳವನ್ನು ಕುಕ್ಕಿಹಳ್ಳಿ ಎಂದು ಕರೆಯುವುದುಂಟು.

ಆದರೆ ಇತ್ತೀಚಿನ ದಿನಮಾನಗಳಲ್ಲಿ ಕರಿಮೆಂಟಿನ ಬಳ್ಳಿ ಹಾಗೂ ದಾಗಡಿ(ಕುಕ್ಕಿ)ಬಳ್ಳಿಯಿಂದ ತಯಾರಿಸದ ಕುಕ್ಕೆಗಳು ಬಹುತೇಕ ಕಣ್ಮರೆಯಾಗುತ್ತಿವೆ. ವಿಧ-ವಿಧವಾದ ಕುಕ್ಕಿಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ. ಪ್ಲಾಸ್ಟಿಕ್ ದಾರಗಳಿಂದ ತಯಾರಿಸಿದ ವಿವಿಧ ಆಕಾರದ ಕುಕ್ಕಿಗಳನ್ನು ಕಾಣಬಹುದು. ಈ ಕುಕ್ಕಿಗಳು ಬಹಳ ದಿನಗಳವರೆಗೆ ತಾಳಿಕೆ ಬರುವುದನ್ನು ಕಾಣಬಹುದು. ಆದ್ದರಿಂದ ಬಹುತೇಕ ರೈತರು ಇಂತಹ ಕುಕ್ಕಿಗಳನ್ನು ಬಳಸುವುದುಂಟು.

೦೭. ಬಾರಕೋಲು : ಈ ಸಾಧನವನ್ನು ಕೆಲಸ ಮಾಡುವ ಸಮಯದಲ್ಲಿ ಎತ್ತಗಳು ಚುರುಕಾಗಿ ಕೆಲಸ ಮಾಡಲು, ಎತ್ತುಗಳನ್ನು ಹದ್ದುಬಸ್ತಿನಲ್ಲಿಡಲು, ಎತ್ತನ್ನು ಹೊಡೆಯಲು ಬಳಸುವ ಸಾಧನವಾಗಿದೆ. ಇದನ್ನು ಬಿದಿರಿನಿಂದ ಮಾಡಿದ ೧.೧/೨ ಉದ್ದ ಗುಣುಪು(ಕೋಲು) ತಯಾರಿಸಿ ಕಟ್ಟಿರುತ್ತಾರೆ. ಹಗ್ಗದ ಅಂಚು ಚೂಪಾಗಿದ್ದು ಎತ್ತುಗಳಿಗೆ ಚುರುಕು ಮುಟ್ಟಿಸುವ ಸಾಧನವಾಗಿದೆ.

ಇತ್ತೀಚಿಗೆ ಬಾರಕೋಲು ಹಲವಾರು ಬದಲಾವಣೆಯನ್ನು ಕಂಡಿದೆ, ಮೊದಲು ಗುಣುಪಿಗೆ ಬಿದಿರಿನ ಕೋಲನ್ನು ಉಪಯೋಗಿಸುತ್ತಿದ್ದರು. ಇತ್ತೀಚಿಗೆ ಅಲ್ಯುಮಿಲಿಯಂ ಗುಣುಪನ್ನು ಉಪಯೋಗಿಸುತ್ತಿದ್ದಾರೆ. ಬಾರಕೋಲಿನಲ್ಲಿ ಪ್ರಮುಖವಾಗಿ ಮೂರು ಭಾಗಗಳನ್ನು ಕಾಣಬಹುದು

ಗುಣುಪು(ಕೊಲು), ಕೊಳಭಾರ, ಗಂಟು (ಉಲ್ಲಾಣದಿಂದ ಮಾಡಿದ್ದು), ಹಾಗೂ ಕುರಿಚೆಟ್ಟು(ಕುಡಿ) ಇವುಗಳನ್ನು ವಿವಿಧ ರೀತಿಯ ಆಕಾರಗಳಿಂದ ಅಲಂಕೃತಗೊಳಿಸುವರು. ಇಂತಹ ಬಾರಕೋಲು ಇಂದು ಮಾರುಕಟ್ಟೆಗಳಲ್ಲಿ ರಾರಾಜಿಸುತ್ತಿವೆ.

೦೮ ಶೆಡ್ಡಿ : ಈ ಸಾಧನವನ್ನು ಕೂರಿಗೆಯ ಹಿಂದೆ ಅಕ್ಕಡಿ ಸಾಲುಗಳನ್ನು ಹಾಕಲು ಉಪಯೋಗಿಸುವರು. ಸಾಮಾನ್ಯವಾಗಿ ಇದನ್ನು ಬಿದಿರಿನ ಬೊಂಬಿನಿಂದ ತಯಾರಿಸತ್ತಾರೆ. ೩ಅಡಿ ಉದ್ದದ ಬೊಂಬಿಗೆ ಕಾಳುಗಳನ್ನು ಹಾಕಲು ಬುಕ್ (ಬಟ್ಟಲು ಆಕಾರದ ಸಾಧನ)ನ್ನು ಜೋಡಿಸಿರುತ್ತಾರೆ. ಈ ಶೆಡ್ಡಿಯನ್ನು ಹಿಡಿದುಕೊಳ್ಳಲು ಈ ಬುಕ್‌ನಲ್ಲಿ ಸಣ್ಣದಾದ ಹಿಡಿಕೆಯನ್ನು ಮಾಡಿರುತ್ತಾರೆ. ಇದರ ಸಹಾಯದಿಂದ ದ್ವಿದಳ ಧಾನ್ಯಗಳ ಅಕ್ಕಡಿ ಸಾಲುಗಳನ್ನು ಹಾಕುವರು.

೦೯ ಬ್ಯಾಕೋಲು : ಇದು ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಸಾಮಾನ್ಯವಾಗಿ ದಿಂಡಲು ಮರ, ಆಸಿನಮರದಿಂದ ಇದನ್ನು ತಯಾರಿಸುವರು. ಎಲ್ಲಾ ತರಹದ ಕುಂಟೆಯನ್ನು ಬಳಸುವಾಗ ಇದನ್ನು ಉಪಯೋಗಿಸುವರು. ಸಸಿಗಳ ಮಧ್ಯದಲ್ಲಿ ಕುಂಟಿಯು ಸಾಗಲು ಉಪಯೋಗಿಸುವರು. ವಾಹನ ಚಲಾಯಿಸುವಾಗ ಸ್ಟೇರಿಂಗ್ ಹೇಗೆ ದಾರಿಯಲ್ಲೇ ಚಲಿಸಲು ಸಹಾಯ ಮಾಡುತ್ತದೆಯೋ, ಅದೇ ರೀತಿಯಲ್ಲಿ ಸಸಿಗಳ ಮಧ್ಯೆ ಕುಂಟಿಯು ಸಾಗಲು ಇದು ಸಹಾಯಕಾರಿಯಾಗಿದೆ.

ಈ ಸಾಧನವು ಸ್ಟೇರಿಂಗ್ ರೀತಿಯಲ್ಲಿ ಕೆಲಸ ಮಾಡುವುದಲ್ಲದೇ ಕುಂಟಿಯ ಮಧ್ಯೆ ಸಿಕ್ಕಿಕೊಂಡಿರುವ ಮಣ್ಣನ್ನು ತೆಗೆಯಲೂ ಸಹ ಬಳಸುವರು. ಆಗೊಮ್ಮೆ ಈಗೊಮ್ಮೆ ಎತ್ತುಗಳನ್ನು ಚುರುಕುಗೊಳಿಸಲೂ ಸಹ ಉಪಯೋಗಿಸುವರು. ಇತ್ತೀಚಿಗೆ ಬ್ಯಾಕೋಲಿನ ಹಿಡಿಕೆಯನ್ನು ಕಬ್ಬಿಣದಿಂದ ಮಾಡಿರುತ್ತಾರೆ. ಏಕೆಂದರೆ ಕುಂಟೆಯನ್ನು ಒತ್ತಿ ಹಿಡಿದಾಗ ಅಂಗೈಗೆ ನೋವಾಗುವುದು. ಕಬ್ಬಿಣದ ಹಿಡಿಕೆಯಿಂದ ಅಂಗೈ ನೋವು ಬಾರದಿರುವಂತೆ ನೋಡಿಕೊಳ್ಳಬಹುದು. ಇಂತಹ ಬ್ಯಾಕೋಲುಗಳನ್ನು ಬಹುತೇಕ ರೈತರು ಬಳಸುತ್ತಿದ್ದಾರೆ.

೧೦ ಪಟಗಾಣೆ : ಇದನ್ನು ಸಾಮಾನ್ಯವಾಗಿ ಚರ್ಮದಿಂದ ತಯಾರಿಸುವರು. ವಿಶೇಷವಾಗಿ ಎಮ್ಮೆಯ ಚರ್ಮದಿಂದ ಇದನ್ನು ಮಾಡುವುದುಂಟು. ಈ ಸಾಧನವನ್ನು ನೊಗವನ್ನು ಎತ್ತುಗಳ ಹೆಗಲಿಗೆ ಕಟ್ಟಲು ಬಳಸುವವರು.

ಇತ್ತೀಚಿಗೆ ಪಟಗಾಣೆ ಬಹುತೇಕವಾಗಿ ತನ್ನ ಬದಲಾವಣೆಯನ್ನು ಕಂಡಿದೆ. ರಬ್ಬರ್‌ನಿಂದ ಮಾಡಿದ ವಿಧ-ವಿಧವಾದ ಪಟಗಾಣಿ ಇಂದು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ. ಪ್ರಾಣಿಗಳ ಚರ್ಮದಿಂದ ಮಾಡುವ ಪಟಗಾಣೆ ಇಂದು ಕಣ್ಮರೆಯಾಗುತ್ತಿವೆ. ಇಂತಹ ಪಟಗಾಣೆಗಳನ್ನು ಮಾಡುವವರೂ ಇಂದು ಬಹುತೇಕ ಕ್ಷೀಣವಾಗಿದ್ದಾರೆ. ಹಳ್ಳಿಗಳಲ್ಲಿ ಸತ್ತ ಪ್ರಾಣಿಗಳನ್ನು ಹೊತ್ತೊಯ್ದು ಚರ್ಮವನ್ನು ಬೇರ್ಪಡಿಸಿ ಈ ಉಪಕರಣವನ್ನು ತಯಾರಿಸುತ್ತಿದ್ದರು. ಆದರೆ ಇಂತಹ ಸಂಸ್ಕೃತಿ ಗ್ರಾಮದಲ್ಲಿ ಕಣ್ಮರೆಯಾಗಿದೆ.

೧೧ ನೊಗ : ಇದು ಕಟ್ಟಿಗೆಯಿಂದ ತಯಾರಿಸಿದ ಸಾಧನಾಗಿದೆ. ಸಾಮಾನ್ಯವಾಗಿ ಹುಗುರವಾದ ಮಳಿಗಿನ ಮರದಿಂದ ಇದನ್ನು ತಯಾರಿಸವುದುಂಟು. ಈ ನೊಗವನ್ನು ಎಲ್ಲಾ ರಂಟೆ ಮತ್ತು ಕುಂಟೆಯಲ್ಲಿ ಇದನ್ನು ಬಳಸುವುದುಂಟು. ಇದರಲ್ಲಿ ಹಲವಾರು ವಿಧಗಳನ್ನು ಕಾಣಬಹುದಾಗಿದೆ. ರಂಟಿನೊಗ :- ಇದನ್ನು ಮಳಿಗಿನ ಮರದಿಂದ ನಿರ್ಮಿಸಿರುತ್ತಾರೆ. ಇದನ್ನು ಹೊಲವನ್ನು ಉಳಿಮೆ ಮಾಡುವ ರಂಟೆಯೊಂದಿಗೆ ಉಪಯೋಗಿಸುವರು. ಇದು ಸಮಾರು ೫ ಅಡಿ ಉದ್ದವನ್ನು ಹೊಂದಿರುತ್ತದೆ.

ಮುಗ್ಗರಿಗಿ ನೊಗ : ಈ ಸಾಧನವನ್ನು ಸಾಮಾನ್ಯವಾಗಿ ಮಳಿಗೆ ಮರ ಮತ್ತು ತ್ಯಾಗದ ಮರದಿಂದ ತಯಾರಿಸುತ್ತಾರೆ. ಇದನ್ನು ಹೊಲವನ್ನು ಹರಗಲಿಕ್ಕೆ, ಹಸನು ಮಾಡಲಿಕ್ಕೆ ಹೆಗ್ಗುಂಟಿ ಜೊತೆಗೆ ಉಪಯೋಗಿಸುವರು. ಇದು ಸಾಮಾನ್ಯವಾಗಿ ೭ ಅಡಿ ಉದ್ದವನ್ನು ಹೊಂದಿರುತ್ತದೆ. ಹರ್ತಿನೊಗ ;- ಈ ಸಾಧನವನ್ನು ಸಾಮಾನ್ಯವಾಗಿ ಮಳಿಗೆ ಮರದಿಂದ ತಯಾರಿಸುವರು. ಬಿತ್ತಿದ ಬೀಜಗಳ ಸಾಲುಗಳನ್ನು ಮುಚ್ಚಲು ಬಳುಗುಂಟಿಗೆಯೊಡನೆ ಇದನ್ನು ಉಪಯೋಗಿಸುವರು. ಇದು ಸಾಮಾನ್ಯವಾಗಿ ೯ ಅಡಿ ಉದ್ದವನ್ನು ಹೊಂದಿರುತ್ತದೆ. ಮೂರುಕುಂಟಿನೊಗ :- ಇದನ್ನು ಸಾಮಾನ್ಯವಾಗಿ ಬಿದಿರಿನ ಬೊಂಬಿನಿಂದ ತಯಾರಿಸುತ್ತಾರೆ. ಎಡೆಕುಂಟೆಯೊಂದಿಗೆ ಇದನ್ನು ಬಳಸುವರು. ಇದು ಸುಮಾರು ೧೧ ಅಡಿ ಉದ್ದವನ್ನು ಹೊಂದಿರುತ್ತದೆ. ನಾಲ್ಕುಕುಂಟಿನೊಗ :- ಇದನ್ನು ಬಿದಿರಿನ ಬೊಂಬಿನಿಂದ ತಯಾರಿಸುತ್ತಾರೆ. ಸಾಮಾನ್ಯವಾಗಿ ಇದನ್ನು ಎಡೆಕುಂಟೆಯೊಂದಿಗೆ ಬಳಸುವರು. ಸುಮಾರು ೧೫ ಅಡಿ ಉದ್ದವನ್ನು ಹೊಂದಿರುತ್ತದೆ.

೧೨ ಹಗೇವು : ಸುಗ್ಗಿಯ ಕಾಲದಲ್ಲಿ ಧಾನ್ಯಗಳನ್ನು ಸಂಗ್ರಹಿಸಿ ಸುರಕ್ಷಿತವಾಗಿ ಇಡುವ ಒಂದು ಸ್ಥಳವಾಗಿದೆ. ಇದು ಎತ್ತರವಾದ ಪ್ರದೇಶದಲ್ಲಿ ನೀರು ಬಾರದೇ ಇರುವ ಸ್ಥಳದಲ್ಲಿ ಭೂಮಿಯ ಒಳಗಡೆ ೧೦ ಅಡಿ ಆಳವನ್ನು ಹೊಂದಿರುತ್ತದೆ. ತಳಭಾಗ ವೃತ್ತಾಕಾರದಲ್ಲಿ ಇದ್ದು, ಮೇಲಕ್ಕೆ ಬಂದಂತೆಲ್ಲಾ ವಿಸ್ತಾರ ಕಡಿಮೆಯಾಗಿರುತ್ತದೆ. ತಳಭಾಗದಲ್ಲಿ ಧಾನ್ಯಗಳ ಜರುಗು, ಸುಂಕ, ಅದರ ಮೇಲೆ ತೊಟ್ಟು ಹಾಕಿರುತ್ತಾರೆ. ಗೋಡೆಯ ಸುತ್ತಲೂ ಪೆಂಟೆ (ಜೋಳದ ಸೊಪ್ಪಿನಿಂದ ತಯಾರಿಸಿದ ವಸ್ತು) ಯನ್ನು ಸುತ್ತುವರು. ಸುಮಾರು ೬೦ ಕ್ವಿಂಟಾಲ್ ಧಾನ್ಯವನ್ನು ಸುರಕ್ಷಿತವಾಗಿ ಇದರಲ್ಲಿ ಶೇಖರಣೆ ಮಾಡಬಹುದಾಗಿದೆ. ಹಗೇವು ಮೇಲ್ಭಾಗವನ್ನು ಬಾಯಿದಂಡೆ ಎಂದು ಕರೆಯುವರು. ಇದು ಚೌಕಾಕಾರವಾಗಿದ್ದು, ೨ ಅಡಿ ಉದ್ದ ಮತ್ತು ಅಗಲವನ್ನು ಹೊಂದಿದೆ. ಬಾಯಿಗಲ್ಲು (ಹಗೇವು ಮುಚ್ಚಲು ಬಳಸುವ ಚೌಕಾಕಾರದ ಕಲ್ಲು) ಉಪಯೋಗಿಸುವರು.

ಇಂತಹ ಹಗೇವು ಗ್ರಾಮದ ಪ್ರಮುಖ ಅಗಸಿ(ಬೀದಿ)ಗಳಲ್ಲಿ ಇರುವುದನ್ನು ಕಾಣುತ್ತೇವೆ. ಆದರೆ ಇತ್ತೀಚಿಗೆ ಹಗೇವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಬಹುತೇಕ ಹಗೇವುಗಳ ತಳ ಭಾಗದಲ್ಲಿ ನೀರು ಜಿನುಗುತ್ತಿರುವುದರಿಂದ ಧಾನ್ಯಗಳು ಹಾಳಾಗುತ್ತಿವೆ. ಆದ್ದರಿಂದ ರೈತರು ಹಗೇವುಗಳ ಬಳಕೆಯನ್ನು ಬಹುತೇಕವಾಗಿ ಕಡಿಮೆ ಮಾಡಿದ್ದಾರೆ. ಆದರೆ ಹಗೇವುಗಳಿಗೆ ಪೂರಕವಾಗಿ ದಾನ್ಯಗಳನ್ನು ಶೇಖರಿಸಲು ದೊಡ್ಡ-ದೊಡ್ಡ ಚೀಲಗಳನ್ನು, ಬ್ಯಾರಲ್‌ಗಳು, ಒಡೇವುಗಳನ್ನು ಬಳಸುತ್ತಿದ್ದಾರೆ. ಅತೀ ಹೆಚ್ಚು ಧಾನ್ಯಗಳು

ಬಂದರೆ ಗೋದಾಮುಗಳಲ್ಲಿ ರೈತರು ಶೇಖರಿಸುತ್ತಿದ್ದಾರೆ. ದಿನನಿತ್ಯದ ಧಾನ್ಯಗಳನ್ನು ಬಳಸಲು ಚೀಲಗಳು ಹಾಗೂ ಬ್ಯಾರೆಲ್‌ಗಳನ್ನು ಬಳಸುತ್ತಿದ್ದಾರೆ.

೧೩ ಬಂಡಿ :ಈ ಸಾಧನವನ್ನು ಹೊಲ ಗದ್ದೆಗಳಲ್ಲಿ ಬೆಳೆದ ಫಸಲನ್ನು ಕಣಕ್ಕೆ ಸಾಗಿಸಲು ಕಟ್ಟಿಗೆಯಿಂದ ಮಾಡಿದ ಒಂದು ವಾಹನವಾಗಿದೆ. ಇದನ್ನು ಸಾಮಾನುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಗಳಿಗೆ ಸಾಗಿಸಲು ಬಳಸುವರು. ಇದನ್ನು ಸಾಮಾನ್ಯವಾಗಿ ಕರಿಜಾಲಿಮರ, ಆಸಿನ ಮರದಿಂದ ತಯಾರಿಸಿರುತ್ತಾರೆ. ಇದು ಆಯತಾಕಾರದ ೧೦ ಅಡಿ ಉದ್ದದ ೩.೧/೨ ಅಗಲವನ್ನು ಹೊಂದಿದ್ದು, ಇದಕ್ಕೆ ಎರಡು ಗಾಲಿ(ಚಕ್ರ) ಯನ್ನು ಅಳವಡಿಸಿರುತ್ತಾರೆ.

ಇತ್ತೀಚಿಗೆ ಬಂಡಿಯ ಬಳಕೆ ಬಹುತೇಕ ಕಡಿಮೆಯಾಗಿದೆ. ಬಂಡಿಯ ರೂಪಾಂತರ ಟಯರ್ ಬಂಡಿಯಾಗಿದೆ. ಟಯರ್ ಬಂಡಿಯ ರೂಪಾಂತರ ಟ್ರ್ಯಾಕ್ಟರ್‌ಗಳಾಗಿವೆ. ಗ್ರಾಮದಲ್ಲಿ ಬಹುತೇಕವಾಗಿ ಟ್ರ್ಯಾಕ್ಟರ್‌ಗಳನ್ನು ಬಳಸುತ್ತಿದ್ದಾರೆ. ಹೊಲಗಳಿಂದ ಕೃಷಿಯ ಉತ್ಪನ್ನಗಳನ್ನು ಸಾಗಿಸಲು ಬಹುತೇಕ ಟ್ರ್ಯಾಕ್ಟರ್‌ಗಳನ್ನು ಬಳಸುವುದುಂಟು. ಈ ಟ್ರ್ಯಾಕ್ಟರ್‌ಗಳು ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸವನ್ನು ಮಾಡುವ ಸಾಮರ್ಥ್ಯವಿರುವುದರಿಂದ ಬಹುತೇಕ ರೈತರು ಬಂಡಿಗಳ ಬದಲಾಗಿ ಟ್ರ್ಯಾಕ್ಟರ್‌ಗಳನ್ನು ಬಳಸುತ್ತಿದ್ದಾರೆ. ಈ ಬಂಡಿಯಲ್ಲಿ ಹಲವಾರು ಭಾಗಗಳನ್ನು ಕಾಣಬಹುದಾಗಿದೆ.

ಕಣುಗ : ಇದು ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಸುಮಾರು ೧೦ ಕಣುಗಳನ್ನು ಬಂಡಿಯು ಹೊಂದಿರುತ್ತದೆ ೩.೧/೨ ಅಡಿ ಉದ್ದವನ್ನು ಹೊಂದಿದ್ದು. ಬಂಡಿಯ ಅಂಚುಗಳಲ್ಲಿ ತೂತುಗಳನ್ನು ಮಾಡಿ ಇವುಗಳನ್ನು ನೆಟ್ಟಿರುತ್ತಾರೆ. ಇವುಗಳ ಉಪಯೋಗವೆಂದರೆ. ಬಂಡಿಯಲ್ಲಿ ತುಂಬಿದ ಸಾಮಾನುಗಳು ಹಾಗೂ ಪೈರಿನ ತೆನೆಗಳು ಚೆಲ್ಲಬಾರದು ಎಂದು ಇಟ್ಟಿರುತ್ತಾರೆ.

ಇತ್ತೀಚಿಗೆ ಕಣುಗಗಳನ್ನು ಕಬ್ಬಿಣದಿಂದ ಮಾಡಿ ಬಳಸುತ್ತಿದ್ದಾರೆ. ಸಾಮಾನ್ಯವಾಗಿ ಕಣುಗಗಳನ್ನು ಬಿದಿರಿನ ಕಟ್ಟಿಗೆ, ಮಳಿಗಿನ ಕಟ್ಟಿಗೆಯಿಂದ ತಯಾರಿಸುತ್ತಿದ್ದರು. ಇವುಗಳು ಬೇಗ ನಶಿಸಿ ಹೋಗುವುದರಿಂದ ಕಬ್ಬಿಣದಿಂದ ಮಾಡಿದ ಕಣುಗಗಳನ್ನು ಉಪಯೋಗಿಸುವುದನ್ನು ನಾವಿಲ್ಲಿ ಕಾಣಬಹುದು.

ತಟ್ಟಿ : ಇದನ್ನು ಸಾಮಾನ್ಯವಾಗಿ ಲೆಕ್ಕಿಯ ಗಿಡಗಳಿಂದ ಹೆಣೆದಿರುತ್ತಾರೆ. ಇದು ಸಾಮಾನ್ಯವಾಗಿ ೧೦ ಅಡಿ ಉದ್ದ ೩ ಅಡಿ ಎತ್ತರವನ್ನು ಹೊಂದಿರುತ್ತದೆ. ಬಂಡಿಯ ಎರಡೂ ಕಡೆ ಕಣುಗಕ್ಕೆ ತಾಗಿಕೊಂಡಿರುತ್ತವೆ. ಈಚಲು ಗಿಡದಿಂದ ಹೆಣೆದ ತಟ್ಟಿಗಳನ್ನು ಬಳಸುವುದನ್ನು ಕಾಣಬಹುದಾಗಿದೆ. ಇತ್ತೀಚಿಗೆ ತಟ್ಟಿಯ ಬದಲಾಗಿ ಅಲ್ಯುಮಿಲಿಯಂ ತಗಡುಗಳನ್ನು ಬಳಸುತ್ತಿದ್ದಾರೆ. ಈ ತಗಡುಗಳು ಧೀರ್ಘಕಾಲದವರೆಗೆ ತಾಳಿಕೆಯ ಗುಣವನ್ನು ಹೊಂದಿರುತ್ತವೆ. ಈ ತಗಡುಗಳನ್ನು ಕಣುಗಕ್ಕೆ ಸಣ್ಣ ತಂತಿಗಳಿಂದ ಭದ್ರವಾಗಿ ಕಟ್ಟಿ ಉಪಯೋಗಿಸುವುದನ್ನು ಇತ್ತೀಚಿಗೆ ಕಾಣಬಹುದಾಗಿದೆ. ಹೀಗೆ ತಟ್ಟಿಯೂ ಕೂಡ ರೂಪಾಂತರಗೊಂಡಿರುವುದನ್ನು ಕಾಣಬಹುದಾಗಿದೆ.

ಬಂಡಿಯ ಗಾಲಿ (ಚಕ್ರ) : ಬಂಡಿಯು ಸರಾಗವಾಗಿ ಚಲಿಸಲು ಎರಡು ಗಾಲಿ (ಚಕ್ರ) ಯನ್ನು ಅಳವಡಿಸಲಾಗಿರುತ್ತದೆ. ಪ್ರತಿಯೊಂದು ಗಾಲಿಯು ಕಟ್ಟಿಗೆಯಿಂದ ಮಾಡಿದ ೭ ಹಲ್ಲುಗಳನ್ನು ಹೊಂದಿರುತ್ತದೆ.

ಹಳಿ : ಎರಡು ಚಕ್ರಕ್ಕೆ ಅದರ ಅಳತೆಗನುಗುಣವಾಗಿ ೧೦ ಅಡಿ ಸುತ್ತಳತೆಯ ೩ ಇಂಚು ಅಗಲದ ಕಬ್ಬಿಣದ ಪಟ್ಟಿಯನ್ನು ಅಳವಡಿಸಿರುತ್ತಾರೆ. ಹಳಿಯ ಚಕ್ರವು ಬೇಗ ಸವೆಯದಂತೆ ನೋಡಿಕೊಳ್ಳುವ ಒಂದು ಕಬ್ಬಿಣದ ಸಾಧನವಾಗಿದೆ. ಈ ಹಳಿಯನ್ನು ಗ್ರಾಮದ ಕಮ್ಮಾರ ಸಮುದಾಯದವರು ಹಾಕುವುದುಂಟು. ಕಮ್ಮಾರ ಮಾನಪ್ಪಜ್ಜ ಅವರು ಹರಳು ಹುರಿದಂತೆ ಕ್ಷಣಾರ್ಧದಲ್ಲಿ ಹಳಿಯನ್ನು ಬಿಚ್ಚಿ ಕಾಯಿಸಿ ಹಾಕುವ ಕಾಯಕದಲ್ಲಿ ನಿಪುಣರಾಗಿದ್ದಾರೆ. ಸಗಣಿಯಿಂದ ಮಾಡಿದ ಕುರುಳಿನಿಂದ ಈ ಹಳಿಯನ್ನು ಕೆಂಪಗೆ ಕಾಯಿಸಿ ಅದನ್ನು ಚಕ್ರಕ್ಕೆ ಹಾಕುವ ಪದ್ದತಿ ಅನಾದಿ ಕಾಲದಿಂದಲೂ ಬಂದಿದೆ. ಚಕ್ರದ ಹಲ್ಲುಗಳು ಅಸ್ತವ್ಯಸ್ತಗೊಂಡಾಗ ಈ ಹಳಿಯನ್ನು ಬಿಚ್ಚಿ ಹಾಕುವುದುಂಟು. ಇದೊಂದು ಪ್ರಯಾಸದಾಯಕ ಕೆಲಸವಾಗಿದೆ. ಆದರೆ ಇತ್ತೀಚಿಗೆ ರೈತರು ಕಬ್ಬಿಣದ ಹಳಿಯ ಬದಲಾಗಿ ಚಕ್ರಕ್ಕೆ ರಬ್ಬರನ್ನು ಬಳಸುತ್ತಿದ್ದಾರೆ. ಮೂರು ಇಂಚು ಅಗಲದ ದಪ್ಪನೆಯ ರಬ್ಬರ್ ಪಟ್ಟಿಯನ್ನು ಕಾಣಬಹುದಾಗಿದೆ. ಇದು ಬೇಗನೇ ಸವೆಯದೇ ದೀರ್ಘಕಾಲದವರೆಗೆ ತಾಳಿಕೆಯ ಗುಣವನ್ನು ಹೊಂದಿದೆ.

ಚಕ್ರ(ಗಾಲಿ)ದ ಗಟ್ಟ : ಇದನ್ನು ಗಟ್ಟಿಯಾದ ಕಬ್ಬಿಣದಿಂದ ಮಾಡಿರುತ್ತಾರೆ. ೧.೧/೨ ಸುತ್ತಳತೆ ಹೊಂದಿದೆ.

ಕೀಲ : ಬಂಡಿಯ ಗಾಲಿಗಳು ಆಚೆ-ಈಚೆ ಹೋಗದಂತೆ ಬಂಧಿಸುವ ಕಬ್ಬಿಣದಿಂದ ಮಾಡಿದ ಸಾಧನವಾಗಿದೆ. ಇದು ಸಾಮಾನ್ಯವಾಗಿ ೧.೧/೨ ಅಡಿ ಉದ್ದವನ್ನು ಹೊಂದಿರುತ್ತದೆ.

ಹೆರಗುಡಿಕೆ : ಬಂಡಿಯ ಚಕ್ರವು ಸರಾಗವಾಗಿ ತಿರುಗಲು, ಚಲಿಸಲು ಕೀಲೆಣ್ಣೆ, ಔಡಲೆಣ್ಣೆಯಿಂದ ತಯಾರಿಸಿದ ಎಣ್ಣೆಯನ್ನು ಹಾಕುವ ಒಂದು ಡಬ್ಬದ ವಸ್ತುವಾಗಿದೆ.

೧೪ ಕುರ್ಚಿಗಿ : ಕಬ್ಬಿಣದಿಂದ ಮಾಡಿದ ಸಾಧನವಾಗಿದೆ. ಇದನ್ನು ಬೆಳೆಗಳ ಮಧ್ಯದಲ್ಲಿ ಬೆಳೆದಿರುವ ಅನಾವಶ್ಯಕ ಕಳೆಯನ್ನು ಕೀಳಲಿಕ್ಕೆ ಉಪಯೋಗಿಸುವರು. ಇದರ ಹಿಡಿಕೆಯು ೪ ಅಡಿ ಉದ್ದವನ್ನು ಹೊಂದಿರುತ್ತದೆ. ಕಬ್ಬಿಣದಿಂದ ಮಾಡಿದ ೧.೧/೪ ಅಡಿ ಉದ್ದದ ವಸ್ತುವಾಗಿದೆ. ಇದರಲ್ಲಿ ೨ ವಿಧಗಳನ್ನು ಕಾಣಬಹುದಾಗಿದೆ.

ಕುಡ ಕೆತ್ತುವ ಕುರ್ಚಿಗಿ : ಈ ಕುರ್ಚಿಗಿಯನ್ನು ಕುಂಟೆಗೆ ಜೋಡಿಸಿರುವ ಕುಡಕ್ಕೆ ಮೆತ್ತಿಕೊಂಡಿರುವ ಮಣ್ಣನ್ನು ಕೆತ್ತಲು ಉಪಯೋಗಿಸುವರು. ಇದು ಸಾಮಾನ್ಯವಾಗಿ ೧.೧/೨ ಅಡಿ ಉದ್ದವನ್ನು ಹೊಂದಿರುತ್ತದೆ.

ಕಳೆ ಕೀಳುವ ಕುರ್ಚಿಗಿ : ಇದನ್ನು ಬೆಳೆಗಳ ಮಧ್ಯದಲ್ಲಿ ಅನಾವಶ್ಯಕವಾಗಿ ಬೆಳೆದಿರುವ ಕಳೆಯನ್ನು ಕೀಳಲು ಉಪಯೋಗಿಸುವರು. ಇದು ಸಾಮಾನ್ಯವಾಗಿ ೧.೧/೪ ಅಡಿ ಉದ್ದವನ್ನು ಹೊಂದಿರುತ್ತದೆ.

ಕುರ್ಚಿಗಿ ಸಲಕರಣೆಯನ್ನು ಕೃಷಿಯಲ್ಲಿ ವ್ಯಾಪಕವಾಗಿ ಬಳಸುವುದನ್ನು ಕಾಣಬಹುದು. ಪ್ರತಿಯೊಂದು ಕೃಷಿ ಚಟುವಟಿಕೆಯಲ್ಲಿ ಇದರ ಪಾತ್ರ ಬಹುಮುಖ್ಯವಾದುದು. ಕಬ್ಬಿಣದಿಂದ ಮಾಡಿದ್ದು, ಇದರ ಹಿಡಿಕೆಯನ್ನು ಕಟ್ಟಿಗೆಯ ಮರದ ತುಂಡಿನಿಂದ ಮಾಡಿರುತ್ತಾರೆ. ಕುರ್ಚಿಗಿ ಮೊಂಡಾದಾಗ ಕುಲುಮೆಯಲ್ಲಿ ಅದನ್ನು ಚೂಪಾಗಿ ಮಾಡುವರು. ಕುರ್ಚಿಗಿಯ ಹಿಡಿಕೆಯು ಒಡೆಯುವ ಸಂಭವ ಹೆಚ್ಚು. ಆದ್ದರಿಂದ ಇತ್ತೀಚಿನ ರೈತರು ಕುರ್ಚಿಗೆಯಲ್ಲಿಯೂ ರೂಪಾಂತರವನ್ನು ಕಂಡುಕೊಂಡಿದ್ದಾರೆ. ಕುರ್ಚಿಗೆಯ ಹಿಡಿಕೆಯ ರಬ್ಬರ್ ಹಾಗು ಫೈಬರ್‌ನಿಂದ ತಯಾರಿಸುವುದನ್ನು ಇತ್ತೀಚಿಗೆ ಕಾಣಬಹುದಾಗಿದೆ. ಕುರ್ಚಿಗಿಯ ಮೂಲ ಆಕಾರದಲ್ಲಿಯೂ ಹಲವಾರು ಬದಲಾವಣೆಯನ್ನು ಕಾಣಬಹುದಾಗಿದೆ.

೧೫ ಕುಡುಗೋಲು : ಕಬ್ಬಿಣದ ಅರಗಿನಿಂದ ಮಾಡಿದ ಸಾಧನವಾಗಿದೆ. ಕುರ್ಚಿಗಿಯ ಹೋಲಿಕೆಯನ್ನು ಹೊಂದಿದ್ದು, ಸ್ವಲ್ಪ ಭಿನ್ನತೆಯನ್ನು ಹೊಂದಿದೆ. ಇದರ ಹಿಡಿಕೆಯು ೪ ಅಡಿ ಕಟ್ಟಿಗೆಯ ತುಂಡಿನಿಂದ ಮಾಡಿದ ವಸ್ತುವಾಗಿದೆ. ಸಾಮಾನ್ಯವಾಗಿ ಈ ಸಾಧನವನ್ನು ಪೈರನ್ನು ಕೊಯ್ಯಲು ಉಪಯೋಗಿಸುವರು. ಇದರಲ್ಲಿ ೨ ವಿಧಗಳನ್ನು ಕಾಣಬಹುದಾಗಿದೆ.

ದೊಡ್ಡ ಕುಡುಗೋಲು : ತೊಗರಿ, ದೊಡ್ಡ ಸೊಪ್ಪಿಯನ್ನು ಕೊಯ್ಯಲು ಉಪಯೋಗಿಸುವರು

ಸೊಪ್ಪಿ ತೆನೆ ಕೊಯ್ಯುವ ಕುಡುಗೋಲು : ಸಾಮಾನ್ಯವಾಗಿ ಇದನ್ನು ಜೋಳ, ರಾಗಿ, ನವಣೆ ಕೊಯ್ಯಲು ಉಪಯೋಗಿಸುವರು.

೧೬ ಬರ್ಲ್ಲು : ಬಂದರಕಿ ಗಿಡದಿಂದ ಹಾಗೂ ತೊಗರಿ ಗಿಡದ ಒಣಗಿದ ಕಡ್ಡಿಗಳಿಂದ ಇದನ್ನು ತಯಾರಿಸುವರು. ದನದಕೊಟ್ಟಿಗೆಯಲ್ಲಿ ಸಗಣಿಯನ್ನು ಸ್ವಚ್ಚಗೊಳಿಸಲು, ಕಣದಲ್ಲಿ ಒಕ್ಕಣಿಕೆ ಮಾಡಲು ಇದನ್ನು ಉಪಯೋಗಿಸುವರು. ಬರ್ಲಿಗೆ ಗ್ರಾಂಥಿಕ ಬಾಷೆಯಲ್ಲಿ ಪೊರಕೆ ಎಂದು ಕರೆಯುವರು. ಹ್ಯಾರಡಾ ಗ್ರಾಮದ ಪ್ರತಿಯೊಬ್ಬ ರೈತರ ಮನೆಯಲ್ಲಿ ಐದರಿಂದ ಹತ್ತು ಬರ್ಲು ಇರುವುದನ್ನು ಕಾಣುತ್ತೇವೆ. ಒಕ್ಕಣೆ ಮಾಡುವಂತಹ ಸಂದರ್ಭದಲ್ಲಂತೂ ಇದರ ಪಾತ್ರ ಬಹುಮುಖ್ಯವಾದುದು. ಮುಂಜಾನೆ ಎದ್ದ ತಕ್ಷಣ ಎತ್ತು, ಎಮ್ಮೆ, ಆಕಳುಗಳ ಸಗಣಿಯನ್ನು ಗುಡಿಸಲು ದಿನ ನಿತ್ಯವೂ ಬಳಕೆ ಮಾಡುವರು. ಮೊದಮೊದಲು ಸ್ಥಳೀಯವಾಗಿ ಸಿಗುವ ಬಂದರಕಿ ಗಿಡದಿಂದ ಇದನ್ನು ತಯಾರಿಸುತ್ತಿದ್ದರು. ತದ ನಂತರದಲ್ಲಿ ತೊಗರಿ ಗಿಡದ ಒಣ ಕಡ್ಡಿಯಿಂದ ತಯಾರಿಸುತ್ತಿದ್ದರು. ಆದರೆ ಇತ್ತೀಚಿಗೆ ಮಾರುಕಟ್ಟೆಯಲ್ಲಿ ವಿಧ-ವಿಧವಾದ ಪೊರಕೆಯನ್ನು ಕಾಣಬಹುದಾಗಿದೆ. ಪೊರಕೆಯ ಕೈಹಿಡಿಕೆಯು ಪ್ಲಾಸ್ಟಿಕ್‌ನಿಂದ ಮಾಡಿದ್ದು ನವೀನ ಮಾದರಿಯ ಪೊರಕೆಗಳು ಮಾರುಕಟ್ಟೆಯಲ್ಲಿ ಪ್ರಚಲಿತದಲ್ಲಿವೆ. ಹೀಗೆ ಪೋರಕೆಯು ರೂಪಾಂತರಗೊಂಡಿರುವುದನ್ನು ಕಾಣಬಹುದು.

೧೭ ಬಣವೆ : ಜಾನುವಾರುಗಳಿಗೆ ಬಳಸುವ ಆಹಾರ ಸಾಮಾಗ್ರಿಗಳ ಸಂಗ್ರಹವಾಗಿದೆ. ಸುಗ್ಗಿಯ ಕಾಲದಲ್ಲಿ ಹೊಲದಲ್ಲಿ ಬೆಳೆದ ಪೈರನ್ನು ಕೊಯ್ದು ಕಣದಲ್ಲಿ ಒಕ್ಕಣಿಕೆ ಮಾಡಿ ಧಾನ್ಯಗಳನ್ನು ಬೇರ್ಪಡಿಸಿ ಅದರಿಂದ ಬಂದ ಹುಲ್ಲು, ಸೊಪ್ಪಿ ಇವುಗಳನ್ನು ವ್ಯವಸ್ಥಿತವಾಗಿ ಜೋಡಿಸಿ

ಗುಡ್ಡೆಯಾಕಾರದಲ್ಲಿ ಹಾಕಿದ ಆಕಾರವೇ ಬಣವೆಯಾಗಿದೆ. ಬಣವೆಯಲ್ಲಿ ಹಲವಾರು ವಿಧಗಳನ್ನು ಕಾಣಬಹುದಾಗಿದೆ.

ಕಡ್ಲಿ ಬಣವೆ : ಶೇಂಗದ ಹೊಟ್ಟನ್ನು ಒಂದು ಕಡೆ ವ್ಯವಸ್ಥಿತವಾಗಿ ಜೋಡಿಸಿದ ಆಕಾರವೇ ಕಡ್ಲಿ ಬಣವೆ. ಇದು ಸಾಮಾನ್ಯವಾಗಿ ೧೫ ಅಡಿ ಉದ್ದ ೫ ಅಡಿ ಅಗಲ, ೧೦ ಅಡಿ ಎತ್ತರವನ್ನು ಹೊಂದಿರುತ್ತದೆ.

ಸೊಪ್ಪಿ ಬಣವೆ : ಜೋಳದ ದೊಂಟಿ (ಕಾಂಡ)ನಿಂದ ತಯಾರಿಸಿದ ಬಣವಿಯೇ ಸೊಪ್ಪಿ ಬಣವಿ. ಇದು ೧೫ ಅಡಿ ಉದ್ದ ೫ ಅಡಿ ಅಗಲ ೧೦ಅಡಿ ಎತ್ತರವನ್ನು ಹೊಂದಿರುತ್ತದೆ.

ರಾಗಿ ಹುಲ್ಲಿನ ಬಣವೆ : ರಾಗಿಯ ಗಿಡದ ಕಾಂಡದಿಂದ ತಯಾರಿಸಿದ ಬಣವಿಯೇ ರಾಗಿ ಹುಲ್ಲಿನ ಬಣವಿ. ಇದು ೧೫ ಅಡಿ ಉದ್ದ ೫ ಅಡಿ ಅಗಲ ೧೦ಅಡಿ ಎತ್ತರವನ್ನು ಹೊಂದಿರುತ್ತದೆ.

ಬಣವೆಗಳು ಜಾನುವಾರುಗಳ ಆಹಾರದ ಖಜಾನೆಗಳು ಎಂದರೆ ಅತಿಶಯೋಕ್ತಿಯಲ್ಲ. ಪ್ರಾಣಿಗಳಿಗೆ ಬೇಕಾಗುವ ಅಗತ್ಯ ಆಹಾರ ಸಾಮಾಗ್ರಿಯ ಆಗರವಾಗಿದೆ. ಹ್ಯಾರಡಾ ಗ್ರಾಮದಲ್ಲಿ ಎಲ್ಲಾ ರೈತರು ತಮ್ಮ-ತಮ್ಮ ಕಣಗಳಲ್ಲಿ ಬಣವೆಗಳನ್ನು ನಿರ್ಮಿಸುವರು. ಕಣದ ಎತ್ತರದ ಪ್ರದೇಶದಲ್ಲಿ ಇದನ್ನು ನಿರ್ಮಿಸುವುದುಂಟು. ಯಾಕೆಂದರೆ ಮಳೆಗಾಲದಲ್ಲಿ ಮಳೆಯ ನೀರು ಹರಿದು ಬಂದು ಮೇವು ಕೆಡಬಾರದು ಎಂಬ ಉದ್ದೇಶದಿಂದ ಎತ್ತರ ಪ್ರದೇಶದಲ್ಲಿ ಬಣವಿಯನ್ನು ನಿರ್ಮಿಸುವರು.

ಬಣವೆಯನ್ನು ಒಟ್ಟುವಾಗ(ನಿರ್ಮಿಸುವಾಗ) ಅದರ ಅಡಿಪಾಯವನ್ನು ಭದ್ರಪಡಿಸುವರು. ಅಡಿಪಾಯಕ್ಕೆ ತೊಗರಿನ ಪಿಳ್ಳೆ(ತೊಗರಿನ ಕಡ್ಡಿ)ಗಳನ್ನು ಹಾಕಿ, ಅದರ ಮೇಲೆ ಜೋಳದ ಸೊಪ್ಪಿಯನ್ನು ಹಾಕಿ, ಸುಲಭವಾಗಿ ಅದರಡಿ ನೀರು ಬಸಿಯದಂತೆ(ಹರಿಯುವುದು) ನೋಡಿಕೊಳ್ಳುವರು. ನಂತರದಲ್ಲಿ ಅದನ್ನು ಗುಡ್ಡೆಯಾಕಾರದಲ್ಲಿ ಹಾಕುತ್ತಾ ಅದನ್ನು ತುಳಿಯುತ್ತಾ ವ್ಯವಸ್ಥಿತವಾಗಿ ಬಣವೆಯನ್ನು ನಿರ್ಮಿಸುವರು. ಬಣವೆಯನ್ನು ನಿರ್ಮಿಸಿದ ನಂತರ ಬಣವೆಯ ಮೇಲೆ ಬಿದ್ದ ಮಳೆ ನೀರು ಸುಲಭವಾಗಿ ಜಾರುವಂತೆ ಜೋಳದ ಜರುಗು(ಜೋಳದ ಕಾಳಿನ ಮೇಲಿನ ಸಿಪ್ಪೆ)ನ್ನು ಹಾಕುವರು. ಇದರಿಂದ ಬಣವೆಯ ಒಳಗೆ ಮಳೆ ನೀರು ಹೋಗದಂತೆ ರಕ್ಷಿಸುವರು. ಮಳೆಗಾಲದಲ್ಲಿ ಜೋರಾದ ಗಾಳಿಗೆ ಬಣವೆಗಳು ಹಾರಿ ಹೋಗದಂತೆ ಎರಡು ಮಗ್ಗಲುಗಳಲ್ಲಿ ಮರದ ದಿಮ್ಮೆ(ಕಾಂಡ) ಗಳನ್ನು ಕಟ್ಟಿ ಹಾಕುವರು. ಜೋರಾದ ಗಾಳಿಗೆ ಇವುಗಳು ಬಣವೆಯ ಹೊಟ್ಟನ್ನು ಕಾಪಾಡುವವು. ಆದರೆ ಇತ್ತೀಚಿಗೆ ಬಣವೆಗೆ ಪ್ಲಾಸ್ಟಿಕ್ ಹಾಳೆಗಳನ್ನು ಹೊದಿಸುವುದನ್ನು ಕಾಣಬಹುದಾಗಿದೆ. ಇದರಿಂದ ಬಣವೆಯ ಮೇಲೆ ಬಿದ್ದ ನೀರು ಸುಲಭವಾಗಿ ಹರಿದು ಹೋಗುವುದು.

೧೮ ನೆರೆಕೋಲು : ಈ ಸಾಧನವು ಬಣವಿಯಲ್ಲಿರುವ ಮೇವನ್ನು ಹಿರಿಯಲು ಉಪಯೋಗಿಸುವರು. ಇದನ್ನು ಬಿದಿರಿನ ಕಟ್ಟಿಗೆಯಿಂದ ಮಾಡಿರುತ್ತಾರೆ. ಕಟ್ಟಿಗೆಯ ಒಂದು ತುದಿಯಲ್ಲಿ ಮುಕ್ಕಾಲು ಅಡಿ ಕಬ್ಬಿಣದ ಒಂಕಿಯನ್ನು ಹೊಂದಿರುತ್ತದೆ.ಇತ್ತೀಚಿಗೆ ನೆರೆಕೋಲು ರೂಪಾಂತರವನ್ನು ಕಂಡಿದೆ. ಕಟ್ಟಿಗೆಯ ತುದಿಯು ಒಂದೇ ವಂಕಿಯನ್ನು ಹೊಂದಿರುತ್ತಿತ್ತು. ಆದರೆ ಇತ್ತೀಚಿಗೆ ಐದಾರು

ವಂಕಿಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಈ ಮುಖಾಂತರ ನವೀನ ರೀತಿಯ ನೆರೆಕೋಲನ್ನು ಇಂದು ನಾವುಗಳು ಕಾಣಬಹುದಾಗಿದೆ.

೧೯ ಈಸು : ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಸಾಮಾನ್ಯವಾಗಿ ಆಸಿನ ಕಟ್ಟಿಗೆ, ನೀಲಗಿರಿ ಕಟ್ಟಿಗೆ ಹಾಗೂ ಬಿದಿರಿನ ಸಣ್ಣ ಬೊಂಬಿನಿಂದ ತಯಾರಿಸಿರುತ್ತಾರೆ. ಈ ಸಾಧನವು ನೊಗ ಮತ್ತು ಕುಂಟೆಗೆ ಸಂಪರ್ಕವನ್ನು ಸಾಧಿಸಿ ಭೂಮಿಯನ್ನು ಹಸನು ಮಾಡಲು ಸಹಾಯಕಾರಿಯಾಗಿದೆ. ಪ್ರತಿಯೊಂದು ಕುಂಟೆ ಮತ್ತು ರಂಟೆಗೆ ಎರಡೆರಡು ಈಸನ್ನು ಹೊಂದಿರುತ್ತದೆ.

ರಂಟಿ ಈಸು	:	೮. ಅಡಿ ಉದ್ದವನ್ನು ಹೊಂದಿರುತ್ತದೆ.
ಹೆಗ್ಗುಂಟಿ ಈಸು	:	೮ ಅಡಿ ಉದ್ದವನ್ನು ಹೊಂದಿರುತ್ತದೆ.
ಬಳಗುಂಟಿ ಈಸು	:	೮ ಅಡಿ ಉದ್ದವನ್ನು ಹೊಂದಿರುತ್ತದೆ.
ಅಡ್ನಾಡಿ ಕುಂಟಿ ಈಸು	:	೭ ಅಡಿ ಉದ್ದವನ್ನು ಹೊಂದಿರುತ್ತದೆ.
ಎಡೆಕುಂಟಿ ಈಸು	:	೭ ಅಡಿ ಉದ್ದವನ್ನು ಹೊಂದಿರುತ್ತದೆ.
ಹತ್ತುಗುಂಟಿ ಈಸು	:	೭ ಅಡಿ ಉದ್ದವನ್ನು ಹೊಂದಿರುತ್ತದೆ.
ಚೌಟುಗುಂಟಿ ಈಸು	:	೭ ಅಡಿ ಉದ್ದವನ್ನು ಹೊಂದಿರುತ್ತದೆ.

೨೦ ಅಟ್ಟ : ಈ ಸಾಧನವನ್ನು ಕಟ್ಟಿಗೆಯಿಂದ ಮಾಡಿರುತ್ತಾರೆ. ಇದನ್ನು ಪ್ರಮುಖವಾಗಿ ಕಣದಲ್ಲಿ ಧಾನ್ಯವನ್ನು ಗಾಳಿಗೆ ತೂರಲು ಉಪಯೋಗಿಸುವರು. ಇದು ೩ ಅಡಿ ಉದ್ದ ೨ ಅಡಿ ಅಗಲವಾದ ಹಲಗೆಯನ್ನು ಹೊಂದಿದ್ದು, ಒಂದು ಕಡೆ ೨ ತೂತುಗಳನ್ನು ಹೊಂದಿದ್ದು, ಇನ್ನೊಂದು ಕಡೆ ಒಂದು ತೂತನ್ನು ಹೊಂದಿದ್ದು, ಈ ತೂತುಗಳಿಗೆ ೪ ಅಡಿ ಉದ್ದದ ೩ ಕೋಲುಗಳನ್ನು ಜೋಡಿಸಿರುತ್ತಾರೆ. ಇದರ ಮೇಲೆ ನಿಂತುಕೊಂಡು ಗಾಳಿಗೆ ಧಾನ್ಯವನ್ನು ತೂರುವರು. ಆದರೆ ಇತ್ತೀಚಿಗೆ ಅಟ್ಟಕ್ಕೆ ಬದಲಾಗಿ ದೊಡ್ಡ-ದೊಡ್ಡ ಕಬ್ಬಿಣದ ಬ್ಯಾರಲ್‌ಗಳನ್ನು ಬಳಸಿ, ಅದರ ಮೇಲೆ ನಿಂತು ಧಾನ್ಯಗಳನ್ನು ತೂರುವ ಪದ್ಧತಿಯನ್ನು ಕಾಣಬಹುದಾಗಿದೆ. ಇದರಿಂದ ಅಟ್ಟದ ಬಳಕೆಯ ಪದ್ಧತಿಯು ಕಣ್ಮರೆಯಾಗುತ್ತಿದೆ.

೨೧ ಮೇಳಿ : ರಂಟೆ ಮತ್ತು ಕುಂಟೆಗಳನ್ನು ಹಿಡಿದುಕೊಳ್ಳಲು ಹಾಗೂ ಭೂಮಿಯೊಳಗೆ ಒತ್ತಲು (ತಳ್ಳಲು) ಉಪಯೋಗಿಸುವ ಒಂದು ಸಾಧನವಾಗಿದೆ. ಕಟ್ಟಿಗೆಯಿಂದ ಮಾಡಿದ ಒಂದು ಸಾಧನವಾಗಿದೆ. ಇದರಲ್ಲಿ ಹಲವಾರು ವಿಧಗಳನ್ನು ಕಾಣಬಹುದು. ಸಾಮಾನ್ಯವಾಗಿ ಎಲ್ಲಾ ವಿಧದ ಮೇಳಿಗಳು ೨.೧/೨ ಅಡಿ ಉದ್ದವನ್ನು ಹೊಂದಿರುತ್ತವೆ. ರಂಟಿ ಮೇಳಿ, ಹೆಗ್ಗುಂಟಿ ಮೇಳಿ, ಬಳಗುಂಟಿ ಮೇಳಿ, ಕಿರುಗಂಟಿ ಮೇಳಿ, ಹತ್ತಿಗುಂಟಿ ಮೇಳಿ, ಎಡೆಗುಂಟಿ ಮೇಳಿ, ಚೌಟುಗುಂಟಿ ಮೇಳಿ ವಿವಿಧ ಬಗೆಗಳನ್ನು ಕಾಣಬಹುದು. ಈ ಉಪಕರಣವನ್ನು ಮಳಿಗಿನ ಮರದಿಂದ ತಯಾರಿಸುತ್ತಾರೆ.

೨೨ ಕವಣಿ : ಈ ಸಾಧನವನ್ನು ಹೊಲಗದ್ದೆಗಳಲ್ಲಿ ಪೈರಿನ ತೆನೆಗಳು ಹುಲುಸಾಗಿ ಬೆಳೆದಿದ್ದು, ಈ ತೆನೆಯಲ್ಲಿನ ಕಾಳುಗಳನ್ನು ತಿನ್ನಲು ಹಕ್ಕಿ-ಪಕ್ಷಿಗಳು ಬರುತ್ತವೆ, ಆ ಹಕ್ಕಿ-ಪಕ್ಷಿಗಳನ್ನು ಹೊಲದಿಂದ

ಓಡಿಸಲು ಈ ಸಾಧನವನ್ನು ಉಪಯೋಗಿಸುವರು. ಇದನ್ನು ರಗಸಬಳ್ಳಿಯ ಗಿಡದ ನಾರಿನಿಂದ ತಯಾರಿಸುವರು. ಇದು ಸಾಮಾನ್ಯವಾಗಿ ೨.೧/೨ ಉದ್ದವನ್ನು ಹೊಂದಿರುತ್ತದೆ. ಈ ಕವಣಿಯಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಇಟ್ಟು ಹಕ್ಕಿ-ಪಕ್ಷಿಗಳನ್ನು ಹೊಡೆಯಲು ಉಪಯೋಗಿಸುವರು.

ಆದರೆ ಇತ್ತೀಚಿಗೆ ಪಕ್ಷಿಗಳನ್ನು ಓಡಿಸಲು ಕವಣೆಯನ್ನು ಬಳಸುವ ಪದ್ಧತಿ ಕಣ್ಮರೆಯಾಗಿದೆ. ಅದರ ಬದಲಾಗಿ ಸಣ್ಣ-ಸಣ್ಣ ತಗಡಿನ ಡಬ್ಬಗಳಲ್ಲಿ ಸಣ್ಣ ಸಣ್ಣ ಕಲ್ಲುಗಳ ಹರಳುಗಳನ್ನು ಹಾಕಿ, ಅದನ್ನು ಅಲ್ಲಾಡಿಸುವುದರ ಮೂಲಕ ಶಬ್ದವನ್ನು ಮಾಡಿ ಪಕ್ಷಿಗಳನ್ನು ಓಡಿಹೋಗುವಂತೆ ಮಾಡುತ್ತಿದ್ದಾರೆ.

೨೩ ಮಿಣಿ : ಇದನ್ನು ರಗಸಬಳ್ಳಿ ಗಿಡದ ನಾರಿನಿಂದ ಮಾಡಿದ ಹಗ್ಗಗಳನ್ನು ಮಿಣಿ ಎಂದು ಕರೆಯುವರು. ಈ ಸಾಧನವನ್ನು ರಂಟೆ, ಈಸು, ಮೇಳಿಗಳನ್ನು ಬಿಗಿಯಾಗಿ ಕಟ್ಟಲು ಉಪಯೋಗಿಸುವರು. ಇದರಲ್ಲಿ ಹಲವಾರು ವಿಧಗಳನ್ನು ಕಾಣಬಹುದಾಗಿದೆ. ರಂಟಮಿಣಿ, ಹೆಗ್ಗುಂಟಿ ಮಿಣಿ, ಬಳಗುಂಟಿ ಮಿಣಿ, ಕಿರುಗುಂಟಿ ಮಿಣಿ, ಹತ್ತಿಗುಂಟಿ ಮಿಣಿ, ಎಡೆಗುಂಟಿ ಮಿಣಿ ಎಂಬ ವಿಧಗಳನ್ನು ಕಾಣಬಹುದು.

೨೪ ನೊಗಸುತ್ತು : ಇದನ್ನು ವಿಶೇಷವಾಗಿ ಚರ್ಮದಿಂದ ತಯಾರಿಸಿರುತ್ತಾರೆ. ಇದು ಹಗ್ಗದ ರೂಪದಲ್ಲಿ ಇರುತ್ತದೆ. ಈ ಸಾಧನವು ನೊಗ ಮತ್ತು ಕುಂಟೆಯ ಈಸುಗಳನ್ನು ಬಿಗಿಯಾಗಿ ಕಟ್ಟಿ ಕೆಲಸವನ್ನು ಮಾಡಲು ಸಹಾಯಕಾರಿಯಾಗುತ್ತದೆ.

ಚರ್ಮದಿಂದ ನೊಗಸುತ್ತನ್ನು ತಯಾರಿಸುವವರ ಸಂಖ್ಯೆ ಕಡಿಮೆ ಆಗಿದೆ. ಈ ನೊಗಸುತ್ತನ್ನು ತಯಾರಿಸುವವರು ಹರಿಜನ ಸಮುದಾಯದವರು. ಆದರೆ ಇಂದು ಚರ್ಮದ ನೊಗಸುತ್ತಿನ ತಯಾರಿಕೆ ಕಣ್ಮರೆಯಾಗುತ್ತಿದೆ. ಅದರ ಬದಲಾಗಿ ಪ್ಲಾಸ್ಟಿಕ್‌ನಿಂದ ಹಾಗೂ ರಬ್ಬರ್‌ನಿಂದ ತಯಾರಿಸಿದ ನೊಗಸುತ್ತುಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಬಹುತೇಕ ಇಂತಹ ನೊಗಸುತ್ತನ್ನು ರೈತರು ಬಳಸುತ್ತಿದ್ದಾರೆ.

೨೫ ಕೊಡಲಿ : ಈ ಸಾಧನವನ್ನು ಕಟ್ಟಿಗೆಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಮಾಡಲು ಉಪಯೋಗಿಸುವರು. ಇದನ್ನು ಕಬ್ಬಿಣದಿಂದ ತಯಾರಿಸುವರು. ಮುಕ್ಕಾಲು ಅಡಿ ಉದ್ದ ೧/೨ ಅಡಿ ಅಗಲವನ್ನು ಹೊಂದಿದ್ದು, ಇದರ ಮೊನಚು ಚೂಪಾಗಿ ಹರಿತದಿಂದ ಕೂಡಿರುತ್ತದೆ. ಇದನ್ನು ಹಿಡಿದುಕೊಳ್ಳಲು ಹಿಡಿಕೆಯನ್ನು ಕಾವು ಎಂದು ಕರೆಯುವರು. ಇದು ಸುಮಾರು ೩ ಅಡಿ ಉದ್ದವನ್ನು ಹೊಂದಿರುತ್ತದೆ.

ಕೊಡಲಿಯಲ್ಲಿ ಹಲವು ವಿಧಗಳನ್ನು ಕಾಣಬಹುದು. ಚಪ್ಪಗೊಡ್ಲಿ(ಸಣ್ಣ ರೆಂಬೆ-ಕೊಂಬೆ ತುಂಡರಿಸಲು), ದೊಡ್ಡ ಕೊಡ್ಲಿ(ಕಟ್ಟಿಗೆಯನ್ನು ಸೀಳಲು), ಗಂಡುಗೊಡಲಿ(ಹರೆಮರಿಯನ್ನು ಕತ್ತರಿಸಲು) ಇಂತಹ ಕೊಡಲಿಗಳನ್ನು ವಿಶೇಷವಾಗಿ ಕಮ್ಮಾರ ಸಮುದಾಯದವರು ತಯಾರಿಸುವರು. ಈಗಲೂ ಕೂಡ ಇಂತಹ ಕೊಡಲಿಗಳನ್ನು ಹ್ಯಾರಡಾ ಗ್ರಾಮದಲ್ಲಿ ಬಳಸುವರು. ಅದರಲ್ಲೂ ವಿಶೇಷವಾಗಿ

ಕುರಿಕಾಯುವ ಕುರುಬ ಸಮುದಾಯದವರು ಕುರಿಗಳ ಮೇವಿಗಾಗಿ ಚಪ್ಪಗೊಡ್ಲಿಯನ್ನು ಬಳಸುವುದನ್ನು ಕಾಣಬಹುದು.

೨೬ ಮೇವಿನ ಕತ್ತರಿ : ಇದನ್ನು ವಿಶೇಷವಾಗಿ ಜೋಳದ ಸೊಪ್ಪಿಯನ್ನು ಕತ್ತರಿಸಲು ಉಪಯೋಗಿಸುವರು. ಇದನ್ನು ಕಬ್ಬಿಣದಿಂದ ಮಾಡಿರುತ್ತಾರೆ. ೪ ಅಡಿ ಉದ್ದ, ಮುಕ್ಕಾಲು ಅಡಿ ಅಗಲ ಕಟ್ಟಿಗೆಯ ಮಣಿಗೆ ಇದನ್ನು ಜೋಡಿಸಿರುತ್ತಾರೆ. ಅದರ ಮೇಲೆ ೪.೧/೨ ಅಡಿ ಉದ್ದದ ಹಾರೆಯನ್ನು ಉಪಯೋಗಿಸಿ. ಸುಲಭವಾಗಿ ಜೋಳ, ಮೆಕ್ಕೆಜೋಳ ಸೊಪ್ಪೆಯನ್ನು ತುಂಡರಿಸಲು ಸಹಾಯಕಾರಿಯಾಗಿದೆ.

ಗ್ರಾಮದಲ್ಲಿ ಇತ್ತೀಚಿಗೆ ಇದರ ಬಳಕೆಯು ಕಣ್ಮರೆಯಾಗುತ್ತಿದೆ. ಅದರ ಬದಲಾಗಿ ಮೇವನ್ನು ಕತ್ತರಿಸುವ ಯಾಂತ್ರೀಕೃತ ಮಿಷನ್‌ಗಳನ್ನು ಬಳಸುತ್ತಿದ್ದಾರೆ. ಈ ಮಿಷನ್‌ಗಳನ್ನು ಕೃಷಿ ಇಲಾಖೆಯು ರಿಯಾಯತಿ ದರದಲ್ಲಿ ರೈತರಿಗೆ ಸರಬರಾಜು ಮಾಡುತ್ತಿದೆ. ಆದ್ದರಿಂದ ಬಹುತೇಕ ರೈತರು ಈ ಮಿಷನ್‌ಗಳನ್ನು ಬಳಸುತ್ತಿದ್ದಾರೆ.

೨೭ ಮೇವು ಗೂಣು : ಜಾನುವಾರುಗಳಿಗೆ ತುಂಡರಿಸಿದ ಮೇವನ್ನು ಸಂಗ್ರಹಿಸುವ ಒಂದು ಸ್ಥಳವಾಗಿದೆ. ಇದು ಸಾಮಾನ್ಯವಾಗಿ ೩.೧/೨ ಅಡಿ ಉದ್ದ ಮತ್ತು ಅಗಲವನ್ನು ಹೊಂದಿರುತ್ತದೆ.

ಗ್ರಾಮದಲ್ಲಿ ಹಿಂದಿನಿಂದಲೂ ಇದನ್ನು ಉಪಯೋಗಿಸುತ್ತಿದ್ದರು. ರೈತರು ಮುಂಜಾನೆ ಎದ್ದ ತಕ್ಷಣ ಜಾನುವಾರುಗಳಿಗೆ ಬೇಕಾದ ಹೊಟ್ಟು, ಜೋಳದ ಸೊಪ್ಪಿ, ಮೆಕ್ಕೆಜೋಳದ ರವುದಿ(ಮೆಕ್ಕೆಜೋಳದ ಮೇಲಿನ ಸಿಪ್ಪೆ)ಯನ್ನು ಬಣವೆಯಿಂದ ಹಿರಿದು ಮೇವು ಗೂಣಿನಲ್ಲಿ ಸಂಗ್ರಹಿಸುತ್ತಿದ್ದರು. ಈಗಲೂ ಸಹ ಹ್ಯಾರಡಾ ಜನಪದರು ಮೇವು ಗೂಣನ್ನು ಬಳಸುತ್ತಿದ್ದಾರೆ. ಮೇವುಗೂಣುಗಳು ಜಾನುವಾರುಗಳಿಗೆ ಆಹಾರವನ್ನು ಸಂಗ್ರಹಿಸಿಡುವ ಖಜಾನೆಗಳು ಎಂದರೆ ಅತಿಶಯೋಕ್ತಿಯಲ್ಲ.

೨೮ ಗ್ವಾಂಧ್ಲಿ : ಇದನ್ನು ಕಡ್ಡಾಯವಾಗಿ ಪೂರ್ವ-ಪಶ್ಚಿಮವಾಗಿ ನಿರ್ಮಿಸಿರುತ್ತಾರೆ. ಜಾನುವಾರುಗಳು ಮೇವನ್ನು ತಿನ್ನಲು ಇರುವ ಸ್ಥಳವಾಗಿದೆ. ಸಾಮಾನ್ಯವಾಗಿ ೩ ಅಡಿ ಎತ್ತರ ೨.೧/೨ ಅಡಿ ಅಗಲವನ್ನು ಹೊಂದಿದೆ.

ಪ್ರತಿಯೊಂದು ಜಾನುವರುಗಳಿಗೆ ಮೇವನ್ನು ತಿನ್ನಲು ಈ ಸ್ಥಳವನ್ನು ಉಪಯೋಗಿಸುವರು. ಗ್ವಾಂಧ್ಲಿಗೆ ಜಾನುವಾರುಗಳನ್ನು ಕಟ್ಟಲು ಐದ್ಯೆದು ಅಡಿಗೊಂದರಂತೆ ಕಬ್ಬಿಣದ ಬಳೆಗಳನ್ನು ಗ್ವಾಂಧ್ಲಿಯ ಗೋಡೆಗೆ ಅಳವಡಿಸಿರುತ್ತಾರೆ. ಇವುಗಳಿಗೆ ಜಾನುವಾರುಗಳನ್ನು ಕಟ್ಟುವರು. ಹ್ಯಾರಡಾದ ಪ್ರತಿಯೊಂದು ರೈತರು ತಮ್ಮ-ತಮ್ಮ ದನದ ಕೊಟ್ಟಿಗೆಯಲ್ಲಿ ಗ್ವಾಂಧ್ಲಿಯನ್ನು ನಿರ್ಮಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

೨೯ ಸಲಿಕೆ : ಈ ಸಾಧನವನ್ನು ಪ್ರಮುಖವಾಗಿ ಭೂಮಿಯಲ್ಲಿನ ಮಣ್ಣನ್ನು ತೆಗೆಯಲು ಉಪಯೋಗಿಸುವರು. ಒಂದು ಅಡಿ ಉದ್ದ ಅಗಲವನ್ನು ಹೊಂದಿದ್ದು, ಇದರ ಹಿಡಿಕೆಯು ಸುಮಾರು ೩ ಅಡಿ ಉದ್ದವನ್ನು ಹೊಂದಿರುತ್ತದೆ.

ಮೊದಮೊದಲು ಸಲಿಕೆಯ ಕಾವನ್ನು(ಹಿಡಿಕೆಯನ್ನು) ಕಟ್ಟಿಗೆಯಿಂದ ನಿರ್ಮಿಸುತ್ತಿದ್ದರು. ಇತ್ತೀಚಿಗೆ ಫೈಬರ್‌ನಿಂದ ನಿರ್ಮಿಸಿದ ಸಲಿಕೆಯ ಕಾವನ್ನು ಉಪಯೋಗಿಸುತ್ತಿದ್ದಾರೆ. ಇದು ದೀರ್ಘ ಕಾಲದವರೆಗೆ ತಾಳಿಕೆಯ ಗುಣವನ್ನು ಹೊಂದಿರುತ್ತದೆ. ಸಲಿಕೆಯಲ್ಲಿ ವಿವಿಧ ಆಕಾರಗಳನ್ನು ಕಾಣಬಹುದು. ಹೊಲ ಗದ್ದೆಗಳಿಗೆ ನೀರನ್ನು ಹಾಯಿಸಲು ಚಿಕ್ಕ ಗಾತ್ರದ ಸಲಿಕೆಯನ್ನು ಉಪಯೋಗಿಸುವರು. ಮಣ್ಣನ್ನು ತೆಗೆಯಲು ಹಾಗೂ ತುಂಬಲು ಅಗಲವಾದ ಸಲಿಕೆಯನ್ನು ಬಳಸುವುದನ್ನು ಹ್ಯಾರಡಾ ಗ್ರಾಮದಲ್ಲಿ ಕಾಣಬಹುದಾಗಿದೆ.

೩೦ ಶೆಳ್ಳಿ ಹೊಡಿಯೋ ಬರ್ಲು : ಈ ಸಾಧನವನ್ನು ನವಣೆ ಹುಲ್ಲಿನಿಂದ ತಯಾರಿಸಿರುತ್ತಾರೆ. ಇದು ಸುಮಾರು ೨ ಅಡಿ ಉದ್ದವನ್ನು ಹೊಂದಿದ್ದು, ವಿಶೇಷವಾಗಿ ಧಾನ್ಯಗಳ ರಾಶಿಯ ಮೇಲಿನ ಕಸ, ಕಡ್ಡಿಯನ್ನು ಗುಡಿಸಲು ಉಪಯೋಗಿಸುವರು. ಈ ಬರ್ಲನ್ನು ವಿಶೇಷವಾಗಿ ಒಕ್ಕಣೆ ಮಾಡುವಾಗ ಮಾತ್ರ ಬಳಸುವರು. ಧಾನ್ಯಗಳನ್ನು ಗುಡ್ಡೆಯಾಕಾರದಲ್ಲಿ ರಾಶಿಯನ್ನು ಹಾಕಿದಾಗ ಅದರ ಮೇಲಿರುವ ಕಸ–ಕಡ್ಡಿಯನ್ನು ಸ್ವಚ್ಚಗೊಳಿಸಲು ಬಳಸುವರು. ಈ ಬರ್ಲನ್ನು ಇತರೆ ಕೆಲಸಗಳಿಗೆ ಬಳಸುವುದಿಲ್ಲ.

೩೧ ಗುರ್ಜಿ : ಇದನ್ನು ಜಾನುವಾರುಗಳ ಹಸಿ ಸಗಣೆಯಿಂದ ಮಾಡಿರುತ್ತಾರೆ. ವಿಶೇಷವಾಗಿ ಧಾನ್ಯವನ್ನು ಒಕ್ಕಣೆ ಮಾಡುವಾಗ ತಯಾರಿಸುವರು. ಸ್ವಲ್ಪ ಸಗಣಿಯನ್ನು ತೆಗೆದುಕೊಂಡು ಅದನ್ನು ದುಂಡಗೆ ಮಾಡಿ ಅದರ ಮೇಲೆ ಎತ್ತಿನ ಬಾಲದ ಒಂದು ಕೂದಲನ್ನು ಸಿಗಿಸಿ (ಇಟ್ಟು) ಅದಕ್ಕೆ ಹೂವನ್ನು ಇಟ್ಟು ಕುಂಕುಮ, ಭಂಡಾರದಿಂದ ಅದನ್ನು ಸಿಂಗರಿಸಿರುತ್ತಾರೆ. ರಾಶಿಯಲ್ಲಿ ಇದನ್ನು ಇಟ್ಟು ಪೂಜೆ ಮಾಡುವರು. ಈ ಗುರ್ಜಿಗೆ ಸ್ವಲ್ಪ ಧಾನ್ಯದ ಕಾಳುಗಳನ್ನು ಮೀಸಲಿಡುವರು. ಈ ಧಾನ್ಯವನ್ನು ಮನೆಯಲ್ಲಿರುವ ಅಕ್ಕ ಅಥವಾ ತಂಗಿಯರು ತೆಗೆದುಕೊಂಡು ಹೋಗುವ ಪದ್ದತಿಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಈ ಗುರ್ಜಿಯು ಸ್ತ್ರೀ ದೈವದ ಸಂಕೇತವಾಗಿದೆ. ಇಲ್ಲಿಯ ಜನಪದರು ಇದನ್ನು ಭೂಮಿ ತಾಯಿಗೆ ಹೋಲಿಸುವರು. ಇದನ್ನು ಪೂಜೆ ಮಾಡುವುದರಿಂದ ಇನ್ನೂ ಹೆಚ್ಚಿನ ಬೆಳೆಯು ಹುಲುಸಾಗಿ ಬೆಳೆಯುವುದು ಎಂಬುದು ಅಪಾರವಾದ ನಂಬಿಕೆಯಾಗಿದೆ. ಗುರ್ಜಿಗೆ ಮೀಸಲಿಟ್ಟ ಜೋಳಗಳನ್ನು "ಬೂದನ ಜೋಳ" ಎಂದು ಕರೆಯುವರು. ಈ ಜೋಳವನ್ನು ಮನೆಯ ಅಕ್ಕ–ತಂಗಿಯರಿಗೆ ಕೊಡುವರು. ಅದರಂತೆಯೇ ರಾಶಿಯ ಪಕ್ಕದಲ್ಲಿ ಬರ್ಲು, ಸಲಿಕೆ, ಗ್ವಾರೆ, ಗುರ್ಜಿ, ಬುಟ್ಟಿ ಮುಂತಾದ ಕೃಷಿ ಉಪಕರಣಗಳನ್ನು ಇಟ್ಟು ಹೆಣ್ಣು ಮಕ್ಕಳಿಂದ ವಿಶೇಷವಾಗಿ ಪೂಜೆ ಮಾಡಿಸುವರು. ಇದರಿಂದ ಭೂಮಿ ತಾಯಿಯು ಶಾಂತವಾಗುವಳು ಎಂದು ಇಲ್ಲಿಯ ಜನಪದರು ನಂಬಿದ್ದಾರೆ.

೩೨ ಗೊಟ್ಟ : ಇದು ಬಿದಿರಿನ ಸಣ್ಣ ಬೊಂಬಿನಿಂದ ಮಾಡಿದ ಸಾಧನವಾಗಿದೆ. ಇದನ್ನು ಜಾನುವಾರುಗಳಿಗೆ ಬಾಯಲ್ಲಿ ಔಷಧಿಯನ್ನು ಹಾಕಲು, ಕಾರು ಹುಣ್ಣಿಮೆಯ ದಿನ ಮೊಟ್ಟೆಯನ್ನು ಒಡೆದು ಅದರಲ್ಲಿ ಹಾಕಿ ಬಾಯಲ್ಲಿ ಹಾಕಲು ಉಪಯೋಗಿಸುವರು. ಹ್ಯಾರಡದ ಜನಪದರು ವೈದ್ಯ–ವಿದ್ಯೆಯಲ್ಲಿ ಪರಿಣಿತಿಯನ್ನು ಪಡೆದವರು. ತಮ್ಮ ಜಾನುವಾರುಗಳಿಗೆ ಖಾಯಿಲೆಗಳು ಬಂದಾಗ

ಸ್ಥಳೀಯ ಗಿಡಮೂಲಿಕೆಗಳಿಂದ ಔಷಧಿಯನ್ನು ತಯಾರಿಸಿ, ಗೊಟ್ಟದ ಮೂಲಕ ಜಾನುವಾರುಗಳ ಬಾಯಿಂದ ದೇಹಕ್ಕೆ ಹಾಕುವರು. ಇದರಿಂದ ಎಷ್ಟೋ ಖಾಯಿಲೆಗಳನ್ನು ವಾಸಿ ಮಾಡುವರು. ಆದ್ದರಿಂದ ಈ ಗೊಟ್ಟವನ್ನು ಈಗಲೂ ಬಳಸುತ್ತಿದ್ದಾರೆ.

೩೩ ನೀರಿನ ಬಾನಿ : ಜಾನುವಾರುಗಳಿಗೆ ನೀರು ಕುಡಿಯಲಿಕ್ಕೆ ನೀರು ಸಂಗ್ರಹ ಮಾಡುವ ಒಂದು ಸ್ಥಳವಾಗಿದೆ. ಇದು ಸಾಮಾನ್ಯವಾಗಿ ೫ ಅಡಿ ಉದ್ದ, ೩ ಅಡಿ ಎತ್ತರವನ್ನು ಹೊಂದಿರುತ್ತದೆ. ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮುಸುರಿಯನ್ನು ಸಂಗ್ರಹಿಸಲು ನೀರಿನ ಬಾನಿಯನ್ನು ಉಪಯೋಗಿಸುವರು. ತಮ್ಮ ತಮ್ಮ ಕಣದಲ್ಲಿ ರೈತರು ಈಗಲೂ ಬಳಸುತ್ತಿದ್ದಾರೆ. ಮೊದಮೊದಲು ನಾಲ್ಕು ಮಸಗಲ್ಲುಗಳನ್ನು ಬಳಸಿ ಅಂಚುಗಳಿಗೆ ನೀರು ಹೋಗದಂತೆ ಸಿಮೆಂಟ್‌ನ್ನು ಹಚ್ಚಿ ನೀರನ್ನು ಸಂಗ್ರಹಿಸುತ್ತಿದ್ದರು. ಬರುಬರುತ್ತಾ ದುಂಡಾಗಿರುವ ಕೊಳದ ಆಕಾರದ ಸಿಮೆಂಟಿನಿಂದ ಮಾಡಿದ ಬಾನಿಗಳನ್ನು ಉಪಯೋಗಿಸುತ್ತಿದ್ದರು. ಆದರೆ ಇತ್ತೀಚಿಗೆ ರೈತರು ಬಹುತೇಕವಾಗಿ ರಬ್ಬರ್ ಹಾಗೂ ಫೈಬರ್‌ನಿಂದ ತಯಾರಿಸಿದ ಬ್ಯಾರೆಲ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಇನ್ನೂ ಮುಂದುವರೆದು ನೀರಿನ ಹೌಸ್‌ನ್ನು ಗಾರೆ ಮತ್ತು ಸಿಮೆಂಟಿನಿಂದ ನಿರ್ಮಿಸಿ, ಅದನ್ನು ನೀರು ಸಂಗ್ರಹಿಸಲು ಉಪಯೋಗಿಸುತ್ತಿದ್ದಾರೆ. ಇದನ್ನು ಗ್ರಾಮ್ಯ ಭಾಷೆಯಲ್ಲಿ "ನೀರಿನ ಸಂಪ್" ಎಂದು ಕರೆಯುವರು.

೩೪ ದೋಟಿ : ಈ ಸಾಧನವನ್ನು ಎತ್ತರವಾದ ಮರಗಳ ರೆಂಬೆ-ಕೊಂಬೆಗಳನ್ನು ಸವರಲು ಉಪಯೋಗಿಸುವರು. ಸಾಮಾನ್ಯವಾಗಿ ೧೦ ಅಡಿ ಉದ್ದದ ಬಿದಿರಿನ ಕಟ್ಟಿಗೆಗೆ ಒಂದು ತುದಿಯಲ್ಲಿ ಹರಿತವಾದ ಕುಡುಗೋಲನ್ನು ಅಳವಡಿಸಿರುತ್ತಾರೆ. ಇದು ರೆಂಬೆ ಕೊಂಬೆಗಳನ್ನು ಸವರಲು ಸಹಕಾರಿಯಾಗಿದೆ.

ಹೆಚ್ಚಾಗಿ ಈ ಸಾಧನವನ್ನು ಕುರಿ ಕಾಯುವ ಕುರುಬರು ಉಪಯೋಗಿಸುವರು. ಕುರಿಗಳಿಗೆ ಬೇಕಾಗುವ ಸೊಪ್ಪನ್ನು ಮರದ ಕೆಳಗೆ ನಿಂತು ದೋಟಿಯ ಸಹಾಯದಿಂದ ಕತ್ತರಿಸಿ ಕುರಿಗಳಿಗೆ ಬೇಕಾಗುವ ಮೇವನ್ನು ಸಂಗ್ರಹಿಸಲು ಈ ಸಾಧನವನ್ನು ಬಳಸುವರು.

೩೫ ತತ್ರಾಣಿ : ಮಣ್ಣಿನಿಂದ ಮಾಡಿದ ವಸ್ತುವಾಗಿದೆ. ಹೊಲ-ಗದ್ದೆಗಳಲ್ಲಿ ರೈತರು ಕೆಲಸವನ್ನು ಮಾಡುತ್ತಿರುವಾಗ ಕುಡಿಯುವ ನೀರನ್ನು ಸಂಗ್ರಹಿಸುವ ಒಂದು ಸಾಧನವಾಗಿದೆ. ಈ ತತ್ರಾಣಿಯು ಫ್ರಿಜ್‌ನ ರೂಪದಲ್ಲಿ ಕೆಲಸವನ್ನು ಮಾಡುತ್ತದೆ. ತತ್ರಾಣಿಯಲ್ಲಿರುವ ನೀರು ಬಹಳ ತಂಪಾಗಿರುತ್ತದೆ. ಬಿಸಿಲಿನಲ್ಲಿಟ್ಟರೂ ಸಹ ತನ್ನ ಸ್ಥಿತಿಸ್ಥಾಪಕತ್ವದ ಗುಣದಿಂದ ನೀರನ್ನು ತಂಪಾಗಿರಿಸುತ್ತದೆ. ಇಂದಿಗೂ ಕೂಡ ಹ್ಯಾರಡಾ ಗ್ರಾಮದಲ್ಲಿ ತತ್ರಾಣಿಯನ್ನು ಬಳಸುವುದನ್ನು ಕಾಣಬಹುದಾಗಿದೆ. ಈ ತತ್ರಾಣಿಯನ್ನು ಕುಂಬಾರರು ಮಡಿಕೆಯಿಂದ ವಿಶೇಷವಾಗಿ ತಯಾರಿಸುತ್ತಾರೆ. ಆದರೆ ಇತ್ತೀಚಿಗೆ ಇದರ ವ್ಯಾಪಕ ಬಳಕೆ ಕ್ಷೀಣವಾಗುತ್ತಿದೆ. ಯಾಕೆಂದರೆ ಇದು ಬಹಳ ತೂಕವನ್ನು ಹೊಂದಿರುತ್ತದೆ. ಹೊಲಗಳಿಗೆ ತೆಗೆದುಕೊಂಡು ಹೋಗಲು ತ್ರಾಸದಾಯಕವಾಗಿದೆ. ಆದ್ದರಿಂದ ಇದರ ಬಳಕೆ ಬಹುತೇಕ ಕ್ಷೀಣವಾಗಿದೆ. ಇದರ ಬದಲಾಗಿ ಬಿಸಿಲೇರಿ ಬಾಟಲ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಇದನ್ನು ಸುಲಭವಾಗಿ ಕೊಂಡೊಯ್ಯಬಹುದು.

೩೬ ಎತ್ತಿನ ಜೂಲ : ಕಾರ ಹುಣ್ಣಿಮೆಯ ದಿನ, ಹಬ್ಬ-ಹರಿದಿನಗಳಲ್ಲಿ ಎತ್ತಿನ ಮೇಲೆ ಹಾಕುವ ಅಲಂಕಾರ ವಸ್ತುವಾಗಿದೆ. ಇದನ್ನು ಮಗ್ಗದಿಂದ ಹೆಣೆದು ಅಲಂಕಾರಿಕ ವಸ್ತುಗಳಿಂದ ಸಿಂಗರಿಸುತ್ತಾರೆ. ಎತ್ತುಗಳನ್ನು ಸಿಂಗರಿಸಲು ಇದನ್ನು ಬಳಸುವರು.

ಎತ್ತಿನ ಜೂಲವನ್ನು ವಿಶೇಷ ಸಂದರ್ಭಗಳಲ್ಲಿ ಬಳಸುವರು. ಎತ್ತುಗಳನ್ನು ಅಲಂಕಾರಗೊಳಿಸಲು ಬಟ್ಟೆ ಹಾಗೂ ವಿವಿಧ ರೀತಿಯ ಬಣ್ಣಗಳ ದಾರದಿಂಗ ಕಸೂತಿ ಮಾಡಿದ ವಸ್ತುವಾಗಿದೆ. ಜಾತ್ರೆಗೆ ಬಂಡಿಯನ್ನು ಕಟ್ಟಿಕೊಂಡು ಹೋಗುವ ಸಂದರ್ಭ, ಹಬ್ಬ ಹರಿದಿನಗಳಲ್ಲಿ ಹಾಗೂ ಒಕ್ಕಣಿ ಮಾಡಿದ ಧಾನ್ಯಗಳನ್ನು ಬಂಡಿಯ ಮೂಲಕ ಹಗೇವಿಗೆ ಸಾಗಿಸುವ ಸಂದರ್ಭದಲ್ಲಿ ಎತ್ತಿಗೆ ಜೂಲವನ್ನು ಹಾಕಿ ವಿಶೇಷವಾಗಿ ಅಲಂಕೃತಗೊಳಿಸುವರು. ಎತ್ತುಗಳು ಸುಂದರವಾಗಿ ಕಾಣಲು ಈ ಜೂಲವನ್ನು ಬಳಸುವರು.

ಈ ವಸ್ತುವನ್ನು ಹಬ್ಬ-ಹರಿದಿನಗಳಲ್ಲಿ ಇಲ್ಲಿಯ ಜನಪದರು ಬಳಸುವರು. ವಿಧ-ವಿಧವಾದ ಬಣ್ಣ-ಬಣ್ಣದ ಚಿತ್ತಾರಗಳಿಂದ ಸಿಂಗರಿಸಿರುತ್ತಾರೆ. ವಿವಿಧ ರೀತಿಯ ಅಲಂಕಾರಿಕ ವಸ್ತುಗಳಾದ ಗುಂಡು, ಮಣಿ, ಹಾರಗಳನ್ನು ಇದರಲ್ಲಿ ಅಳವಡಿಸಿರುತ್ತಾರೆ. ಇನ್ನು ಕೆಲವು ಸಂದರ್ಭದಲ್ಲಿ ಎತ್ತುಗಳ ರಕ್ಷಣೆಗೋಸ್ಕರ ಈ ವಸ್ತುವನ್ನು ಬಳಸುವರು.

೩೭ ಗ್ವಾರಿ : ಕಟ್ಟಿಗೆಯಿಂದ ಮಾಡಿದ ಸಾಧನವಾಗಿದೆ. ಕಣದಲ್ಲಿ ಕಾಳುಗಳನ್ನು ರಾಶಿ ಮಾಡಲು ಉಪಯೋಗಿಸುವರು. ೫ ಅಡಿ ಉದ್ದದ ಬಿದಿರಿನ ಸಣ್ಣದಾದ ಹಿಡಿಕೆಯನ್ನು ಹೊಂದಿದ್ದು, ೧ ಅಡಿ ಉದ್ದ ೧.೧/೨ ಅಡಿ ಅಗಲವಾದ ಅಲಗನ್ನು ಹೊಂದಿರುತ್ತದೆ. ಸುಲಭವಾಗಿ ಇದರಿಂದ ಕಾಳುಗಳನ್ನು ರಾಶಿಯನ್ನಾಗಿ ಮಾಡಬಹುದಾಗಿದೆ.

ಒಕ್ಕಣೆ ಮಾಡುವ ಸಂದರ್ಭದಲ್ಲಿ ಈ ಸಾಧನವನ್ನು ವಿಶೇಷವಾಗಿ ಬಳಸುವರು. ಜೋಳದ ಕಾಳು, ಮೆಕ್ಕೆಜೋಳ, ತೊಗರಿ, ನವಣೆ, ರಾಗಿ, ಶೇಂಗಾ ಮುಂತಾದ ಧಾನ್ಯಗಳನ್ನು ಸುಲಭವಾಗಿ ಹರಡಲು ಹಾಗೂ ರಾಶಿ ಮಾಡಲು ಬಳಸುವ ಒಂದು ಸಾಧನವಾಗಿದೆ. ಮೊದ-ಮೊದಲು ಸಂಪೂರ್ಣವಾಗಿ ಕಟ್ಟಿಗೆಯಿಂದ ತಯಾರಿಸಿದ ಗ್ವಾರಿಗಳನ್ನು ಕಾಣುತ್ತಿದ್ದೆವು. ಇವು ಬಹುಬೇಗ ಸವೆದು ಹೋಗುವುದರಿಂದ ರೈತರು ಇತ್ತೀಚಿಗೆ ಕಬ್ಬಿಣದಿಂದ ಮಾಡಿದ ಗ್ವಾರಿಯನ್ನು ಬಳಸುವುದನ್ನು ನಾವಿಲ್ಲಿ ಕಾಣಬಹುದು.

೩೮ ಕೊಡಂಸು : ಎತ್ತುಗಳ ಕೋಡಿನ ತುದಿಗೆ ಹಾಕುವ ಒಂದು ಸಾಧನವಾಗಿದೆ. ಇದನ್ನು ಸಾಮಾನ್ಯವಾಗಿ ಹಿತ್ತಾಳೆಯಿಂದ ತಯಾರಿಸಿರುತ್ತಾರೆ. ಎತ್ತುಗಳು ಸಾಮಾನ್ಯವಾಗಿ ಕೋಡುಗಳಿಂದ ಮನುಷ್ಯರನ್ನು ಚುಚ್ಚಲು ಬರುತ್ತವೆ. ಆಗ ಕೋಡು ಚುಚ್ಚದಿರಲಿ ಎಂದು ಇದನ್ನು ಕೋಡಿನ ತುದಿಯಲ್ಲಿ ಅಳವಡಿಸಿರುತ್ತಾರೆ. ಇನ್ನು ವಿಶೇಷ ಸಂದರ್ಭಗಳಲ್ಲಿ ಬಳಸುವುದುಂಟು. ಜಾತ್ರೆ, ಹಬ್ಬ-ಹರಿದಿನ, ಒಕ್ಕಣೆ ಮಾಡುವ ಸಂದರ್ಭದಲ್ಲಿ ಎತ್ತುಗಳ ಕೋಡುಗಳು ಸುಂದರವಾಗಿ ಕಾಣಲು ಇದನ್ನು ಬಳಸುವರು. ವಿವಿಧ ರೀತಿಯ ಕೋಡಂಸುಗಳನ್ನು ಹಾಕಿ ವಿವಿಧ ಆಕಾರದ

ಗೊಂಡೇವು(ಉಲ್ಲಾಣದಿಂದ ತಯಾರಿಸಿದ ಅಲಂಕಾರಿಕ ವಸ್ತು) ಗಳನ್ನು ಕಟ್ಟಿ ಸಿಂಗರಿಸಲು ಈ ಕೋಡಂಸನ್ನು ಬಳಸುವರು.

೩೯ ಜಂತುಗುಂಟಿ : ಕಣದಲ್ಲಿ ಧಾನ್ಯಗಳ ತೆನೆಗಳನ್ನು ಹರಡಲು ಹಾಗೂ ರಾಶಿಯನ್ನಾಗಿ ಮಾಡಲು ಬಳಸುವ ಸಾಧನವಾಗಿದೆ. ಕಟ್ಟಿಗೆಯಿಂದ ಮಾಡಿದ ಹಿಡಿಕೆಯನ್ನು ಹೊಂದಿದ್ದು, ಕಬ್ಬಿಣದಿಂದ ಮಾಡಿದ ಸುಮಾರು ೫ ಹಲ್ಲುಗಳನ್ನು ಹೊಂದಿದ ಸಾಧನವಾಗಿದೆ.

ಮೊದಮೊದಲು ಸಂಪೂರ್ಣವಾಗಿ ಕಟ್ಟಿಗೆಯಿಂದ ಈ ಸಾಧನವನ್ನು ತಯಾರಿಸುತ್ತಿದ್ದರು. ಇದು ಬೇಗನೇ ಸವೆದು ಹೋಗುವುದರಿಂದ ಜಂತುಗುಂಟಿಯನ್ನು ಕಬ್ಬಿಣದಿಂದ ತಯಾರಿಸುತ್ತಿದ್ದಾರೆ. ಅದರಲ್ಲಿ ವಿಶೇಷವಾಗಿ ಜಂತುಗುಂಟಿಯ ಹಲ್ಲುಗಳನ್ನು ಕಬ್ಬಿಣದಿಂದ ತಯಾರಿಸುತ್ತಾರೆ. ಕಬ್ಬಿಣದಿಂದ ತಯಾರಿಸಿದ ಜಂತುಗುಂಟಿ ದೀರ್ಘಕಾಲದವರೆಗೆ ತಾಳಿಕೆಯ ಗುಣವನ್ನು ಹೊಂದಿರುತ್ತದೆ. ಆದ್ದರಿಂದ ಇತ್ತೀಚಿಗೆ ರೈತರು ಬಹುತೇಕವಾಗಿ ಕಬ್ಬಿಣದ ಜಂತುಗುಂಟಿಯನ್ನು ಬಳಸುತ್ತಿದ್ದಾರೆ.

೪೦ ಮುಗದಾಣ : ಎತ್ತುಗಳನ್ನು ಹದ್ದುಬಸ್ತಿನಲ್ಲಿಡಲು ಇದನ್ನು ಉಪಯೋಗಿಸುವರು. ಎತ್ತುಗಳ ಮೂಗಿನಲ್ಲಿ ಸಣ್ಣದಾದ ರಂಧ್ರವನ್ನು ಮಾಡಿ ಅದರಲ್ಲಿ ಸಣ್ಣ ಗಾತ್ರದ ಹಗ್ಗವನ್ನು ಜೋಡಿಸಿ ಉದ್ದನೆಯ ಹಗ್ಗಕ್ಕೆ ಸಂಪರ್ಕಿಸಿರುತ್ತಾರೆ. ಈ ಹಗ್ಗವನ್ನು ಜಗ್ಗಿದಾಗ ಎತ್ತುಗಳು ಹದ್ದುಬಸ್ತಿನಲ್ಲಿ ಬರುತ್ತವೆ.

ಎತ್ತುಗಳಿಗಲ್ಲದೇ ಕೋಣ, ಎಮ್ಮೆ, ಆಕಳಿಗೆ ಹಾಗೂ ಹೋರಿಗಳಿಗೆ ಈ ಸಾಧನವನ್ನು ಬಳಸುವರು. ಜಾನುವಾರುಗಳು ಎರಡು ವರ್ಷ ತುಂಬುವುದರೊಳಗಾಗಿ ಈ ಮುಗದಾಣವನ್ನು ಹಾಕುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಮುಗದಾಣವನ್ನು ಹಾಕುವುದರಿಂದ ಸುಲಭವಾಗಿ ಪ್ರಾಣಿಗಳನ್ನು ನಿಯಂತ್ರಿಸಬಹುದು.

೪೧ ನಾಲು : ಎತ್ತುಗಳ ಕಾಲಿನ ಗೊರಸುಗಳಿಗೆ ಸಣ್ಣ ಸಣ್ಣ ಮೊಳೆಗಳಿಂದ ಜೋಡಿಸಿರುವ ಕಬ್ಬಿಣದ ತುಂಡಾಗಿದೆ. ಇದನ್ನು ಎತ್ತುಗಳ ಗೊರಸಿನ ಸುರಕ್ಷತೆಗಾಗಿ ಜೋಡಿಸಿರುತ್ತಾರೆ. ಗ್ರಾಮದ ಎತ್ತಿನ ಗೊರಸುಗಳಿಗೆ ಪ್ರತಿ ಸೋಮವಾರ ನಾಲುಗಳನ್ನು ಜೋಡಿಸುವ ಕೆಲಸ ಸರ್ವೇಸಾಮಾನ್ಯವಾಗಿದೆ. ಸಂಗಮೇಶ್ವರ ಗುಡಿಯ ಹತ್ತಿರ ಇರುವ ಬೇವಿನ ಮರದ ಕೆಳಗೆ ಹಾಗೂ ಗ್ರಾಮದ ಇನ್ನಿತರ ವಿಶಾಲವಾದ ಬೀದಿಗಳಲ್ಲಿ ನಾಲನ್ನು ಕಟ್ಟುವರು. ಎತ್ತುಗಳ ನಾಲ್ಕು ಕಾಲುಗಳನ್ನು ಕಟ್ಟಿ ಎತ್ತನ್ನು ಮಲಗಿಸಿ ಕಬ್ಬಿಣದ ನಾಲನ್ನು ತೆಗೆದುಕೊಂಡು ಸಣ್ಣ-ಸಣ್ಣ ಚೂರು ಮಳೆಗಳನ್ನು ಬಳಸಿ ನಾಲನ್ನು ಕಟ್ಟುವರು. "ಎರಡು ಎತ್ತಿನ ನಾಲ್ ಕಟ್ಟಾಕ ೧೦೦೦ ರೂಪಾರಿ ಕೊಡಬೇಕ್ರಿ ಶಿವ" ಎಂದು ಗ್ರಾಮದ ಜನಪದರಾದ ಕೊಂಬಳಿ ಹನುಮಂತಪ್ಪ ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಹೇಳಿದ್ದುಂಟು. ಹ್ಯಾರಡಾ ಗ್ರಾಮದಲ್ಲಿ ಎತ್ತುಗಳಿಗೆ ಮಾತ್ರ ನಾಲುಗಳನ್ನು ಕಟ್ಟುವುದುಂಟು. ಎತ್ತುಗಳು ಹೆಚ್ಚಾಗಿ ಹೊಲದಲ್ಲಿ ಕಲ್ಲು, ಮುಳ್ಳುಗಳ ಮಧ್ಯೆ ಓಡಾಡುವುದರಿಂದ ನಾಲನ್ನು ಕಟ್ಟಿಸುವರು. ಒಟ್ಟಾರೆಯಾಗಿ ಈ ನಾಲು ಎತ್ತಿನ ಪಾದರಕ್ಷೆ ರೂಪದಲ್ಲಿ ಕೆಲಸ ನಿರ್ವಹಿಸುವುದು.

೪೨ ಮಕಡ : ಎತ್ತುಗಳನ್ನು ಹದ್ದುಬಸ್ತಿನಲ್ಲಿಡಲು ಮುಖಕ್ಕೆ ಜೋಡಿಸಿರುವ ಹಗ್ಗದಿಂದ ಮಾಡಿರುವ ವಸ್ತುವಾಗಿದೆ. ಈ ಸಾಧನವನ್ನು ಮುಗುದಾಣ ಹಾಕದೇ ಇರುವ ಚಿಕ್ಕ ಜಾನುವಾರುಗಳ ಮುಖಕ್ಕೆ ಹಾಕುವರು. ಸಣ್ಣ ಎಮ್ಮೆ, ಆಕಳು, ಕೋಣ, ಹೋರಿಗೆ ಮಕಡವನ್ನು ಹಾಕುವರು. ಹಗ್ಗದಿಂದ ತಯಾರಿಸಿದ ಮಕಡವನ್ನು ಹ್ಯಾರಡಾ ಗ್ರಾಮದಲ್ಲಿ ಉಪಯೋಗಿಸುವುದನ್ನು ಕಾಣಬಹುದಾಗಿದೆ. ಚಿಕ್ಕ ಜಾನುವಾರುಗಳನ್ನು ಹದ್ದುಬಸ್ತಿನಲ್ಲಿಡಲು ಈ ಸಾಧನವನ್ನು ಉಪಯೋಗಿಸುವರು.

೪೩ ಹಗುಡ : ಎತ್ತುಗಳ ಕೊರಳಿಗೆ ಕಟ್ಟುವ ಹಗ್ಗದಿಂದ ಮಾಡಿದ ವಸ್ತುವಾಗಿದೆ. ಎತ್ತನ್ನು ಹದ್ದುಬಸ್ತಿನಲ್ಲಿಡಲು ಇದು ಸಹಾಯಕಾರಿಯಾಗಿದೆ. ಹ್ಯಾರಡಾ ಗ್ರಾಮದಲ್ಲಿ ಸ್ಥಳೀಯವಾಗಿ ಸಿಗುವ ರಗಸಬಳ್ಳಿಯ ಗಿಡದ ನಾರಿನಿಂದ ಈ ಹಗುಡವನ್ನು ತಯಾರಿಸುವರು. ರಗಸಬಳ್ಳಿಯನ್ನು ಮೂರ್ನಾಲ್ಕು ದಿನಗಳವರೆಗೆ ನೀರಿನಲ್ಲಿ ಕೊಳೆಯಿಸಿ ಆಮೇಲೆ ಅದರಿಂದ ಬರುವ ನಾರನ್ನು ಹಗ್ಗವನ್ನಾಗಿ ಹೊಸೆಯುವರು. ಇದರಿಂದ ಹಗಡವನ್ನು ತಯಾರಿಸುವರು. ಇದು ಬಹಳಷ್ಟು ಪ್ರಯಾಸದಾಯಕ ಕೆಲಸವಾಗಿದ್ದು, ರೈತರು ಇತ್ತೀಚಿಗೆ ರಗಸಬಳ್ಳಿಯಿಂದ ತಯಾರಿಸಿದ ಹಗುಡವನ್ನು ಬಳಸುವ ಕ್ರಮ ಕ್ಷೀಣವಾಗಿವೆ. ಅದರ ಬದಲಾಗಿ ಇಂದು ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್‌ನಿಂದ ತಯಾರಿಸಿದ ವಿವಿಧ ರೀತಿಯ ಹಗುಡಗಳನ್ನು ರೈತರು ಬಳಸುತ್ತಿದ್ದಾರೆ.

೪೪ ಒಡೇವು : ಮನೆಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸಿಡಲು ಮಣ್ಣಿನಿಂದ ಮಾಡಿದ ವಸ್ತುವಾಗಿದೆ. ಮನೆಗಳಲ್ಲಿ ಜೋಳ, ರಾಗಿ, ನವಣೆ ಹಾಗೂ ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿಡುವ ಒಂದು ಸಾಧನವಾಗಿದೆ. ಕುಂಬಾರರು ಮಣ್ಣಿನಿಂದ ಒಡೇವನ್ನು ತಯಾರಿಸುವುದನ್ನು ನೋಡಬಹುದು. ಆದರೆ ಇತ್ತೀಚಿಗೆ ಇದರ ಬಳಕೆಯು ಕಣ್ಮರೆಯಾಗಿದೆ. ಏಕೆಂದರೆ ಒಡೇವು ಬಹುಬೇಗ ಒಡೆದು ನಶಿಸಿ ಹೋಗುವುದರಿಂದ ಇತ್ತೀಚಿಗೆ ರೈತರು ಪೂರವಾಗಿ ರಬ್ಬರ್ ಬ್ಯಾರೆಲ್‌ಗಳನ್ನು ಬಳಸುತ್ತಿದ್ದಾರೆ. ಗ್ರಾಮದ ಪೂರ್ವಜರು ವ್ಯಾಪಕವಾಗಿ ಈ ಸಾಧನವನ್ನು ಬಳಸುತ್ತಿದ್ದರು.

೪೫ ಗುದ್ದಲಿ : ನೆಲವನ್ನು ಅಗೆಯಲು ಬಳಸುವ ಒಂದು ಸಾಧನವಾಗಿದೆ. ಇದರ ಹಿಡಿಕೆಯನ್ನು ಕಟ್ಟಿಗೆಯಿಂದ ತಯಾರಿಸಿದ್ದು, ಗುದ್ದಲಿಯು ಎರಡು ಚೂಪಾದ ಮೊನೆಯನ್ನು ಹೊಂದಿರುತ್ತದೆ. ಇದನ್ನು ಕಬ್ಬಿಣದಿಂದ ತಯಾರಿಸಿರುತ್ತಾರೆ.

ಗುದ್ದಲಿಗೆ ಮೊದಲು ಕಟ್ಟಿಗೆಯ ಕಾವ (ಹಿಡಿಕೆ)ನ್ನು ಉಪಯೋಗಿಸುತ್ತಿದ್ದರು. ಆದರೆ ಇತ್ತೀಚಿಗೆ ಫೈಬರ್‌ನ ಕಾವನ್ನು ಬಳಸುವುದನ್ನು ಕಾಣಬಹುದಾಗಿದೆ. ಈ ರೀತಿಯಾಗಿ ಗುದ್ದಲಿಯೂ ಸಹ ತನ್ನ ರೂಪಾಂತವನ್ನು ಕಂಡುಕೊಂಡಿದೆ.

೪೬ ಬುಟ್ಟಿ(ಪುಟ್ಟಿ) : ಇದನ್ನು ಈಚಲು ಗಿಡದಿಂದ ತಯಾರಿಸಿರುತ್ತಾರೆ. ಈಚಲು ಮರದ ರೆಂಬೆಗಳನ್ನು (ಕಡ್ಡಿಗಳನ್ನು) ಒಂದರ ಮೇಲೊಂದು ಹೆಣೆದು ಅರ್ಧ ಗೋಲಾಕಾರದಲ್ಲಿ ನಿರ್ಮಿಸಿರುತ್ತಾರೆ. ಇದನ್ನು ಎತ್ತುಗಳ ಸಗಣೆಯನ್ನು ತುಂಬಲು, ಧಾನ್ಯಗಳ ತೆನೆಗಳನ್ನು ತುಂಬಲು ಬಳಸುವರು.

ಪುಟ್ಟಿಯಲ್ಲಿ ಹಲವಾರು ವಿಧಗಳನ್ನು ಕಾಣಬಹುದು. ಕಲ್ಲುಪುಟ್ಟಿ(ಕಲ್ಲುಗಳನ್ನು ತುಂಬಲು), ಸಗಣಿ ಪುಟ್ಟಿ(ಸಗಣಿಯನ್ನು ತುಂಬಲು), ಜಲ್ಲಿ(ದನಕರುಗಳ ಹೊಟ್ಟನ್ನು ತುಂಬಲು) ಆದರೆ ಇತ್ತೀಚಿಗೆ ಗ್ರಾಮದಲ್ಲಿ ಸಾಂಪ್ರದಾಯಿಕ ಪುಟ್ಟಿಗಳು ಕ್ರಮೇಣವಾಗಿ ಕಣ್ಮರೆಯಾಗುತ್ತಿವೆ. ಅದರ ಬದಲಾಗಿ ಪ್ಲಾಸ್ಟಿಕ್ ಹಾಗೂ ಫೈಬರ್‌ನಿಂದ ನಿರ್ಮಿತವಾಗಿರುವ ಪುಟ್ಟಿಗಳನ್ನು ಕಾಣಬಹುದು. ಮಾರುಕಟ್ಟೆಯಲ್ಲಿ ವಿವಿಧ ಆಕಾರದ ಪುಟ್ಟಿಗಳನ್ನು ಕಾಣಬಹುದು. ಆದ್ದರಿಂದ ಬಹುತೇಕ ರೈತರು ಮಾರುಕಟ್ಟೆಯ ಪುಟ್ಟಿಗಳನ್ನು ಬಳಸುತ್ತಿದ್ದಾರೆ.

ಹ್ಯಾರಡಾದ ಸಾಂಪ್ರದಾಯಿಕ ಕೃಷಿಯ ಭೂಮಿಯಲ್ಲಿ ಬೆಳೆಯುವ ಅನವಶ್ಯಕ ಬೆಳೆಯಾದ ಕಳೆಗಳ ಹೆಸರುಗಳು ಕೆಳಕಂಡಂತಿವೆ:-

ಸಾಂಪ್ರದಾಯಿಕ ಕೃಷಿಯಲ್ಲಿ ಕಳೆಗಳ ಬಾಧೆ ರೈತರನ್ನು ಅತೀ ಹೆಚ್ಚು ಕಾಡುತ್ತವೆ. ಬೆಳೆಗಳ ಮಧ್ಯೆ ಅನವಶ್ಯಕ ಕಳೆಗಳು ಬೆಳೆಯುವುದರಿಂದ ಕೃಷಿ ಉತ್ಪನ್ನವು ಕಡಿಮೆ ಆಗಿ ಆರ್ಥಿಕ ಮುಗ್ಗಟ್ಟಿಗೆ ಕಾರಣವಾಗುತ್ತವೆ. ಹ್ಯಾರಡಾದ ಭೂಮಿಯಲ್ಲಿ ಅನವಶ್ಯಕವಾಗಿ ಬೆಳೆಯುವ ಕಳೆಗಳು ಯಾವುವೆಂದರೆ ಜೇಕು, ಕರಿಕಿ, ಉತ್ತರಾಣಿ, ಗುಬ್ಬಿಹುಲ್ಲು, ಗಂಟಿಗೆ ಹುಲ್ಲು, ನರಿಬಾಲದ ಹಲ್ಲು, ಚಿಂಪಿಗಿ ಹುಲ್ಲು, ಇಟಗಾಣಿ, ಕೋಲಾಣಿ, ಕಾಂಗ್ರೆಸ್ ಗಿಡ (ಪಾರ್ಥೇನೀಯಂ), ಮೆಂತೆ, ಗೊರ್ಜಿ ಕಸ, ಹರ್ವಿ ಸೊಪ್ಪು, ತುಂಬಿ ಕಸ, ಸೀಮೆ ಎಣ್ಣೆಗಿಡ, ಹಾದರಗಿತ್ತಿ ಮುಳ್ಳು, ನಗ್ನಿ ಮುಳ್ಳು, ಬಳ್ಳಾರಿ ಜಾಲಿ, ಹುಚ್ಚೆಲಿ ಗಿಡ, ಹದಗಳ್ಳಿ ಗಿಡ, ತೊಂಡಿ ಗಿಡ, ವಿಷಸೌತೆ ಬಳ್ಳಿ, ಮೆಕ್ಕಿ ಬಳ್ಳಿ, ತೊನಸಿ ಗಿಡ, ಪುಟ್ಲೆ ಪುರುಕಿ ಹುಲ್ಲು, ಅಂಟ್ಲ ಪುರುಕಿ ಹುಲ್ಲು, ಅರೆದೆಲೆ ಮುಳ್ಳು, ತೊಗರಸೆ ಸೊಪ್ಪು, ಬ್ರಹ್ಮದಂಡೆ ಗಿಡ, ಹಾಲು-ಮೊಸರು ಗಿಡ, ಬಾಲಿ ಹುಲ್ಲು, ಜಬುಲು ಹುಲ್ಲು, ಕಣಿಗಿ ಹುಲ್ಲು, ಹಾಪು, ಉಪ್ಪು ಜಮಿಲು ಹುಲ್ಲು, ಕಾಗಿಕಾಯಿ ಗಿಡ, ಗೊಬ್ಬರ ಗಿಡ, ಒಳಮುಚುಗ-ಹೊರಮುಚುಗ ಗಿಡ, ಚುರ್ಚಿ ಗಿಡ, ಹಕ್ಕರಿಕಿ ಸೊಪ್ಪು, ಬುಳ್ಳು ಬುಳ್ಳು ಸೊಪ್ಪು(ತಿಕಾಣಿ ಸೊಪ್ಪು), ಗೊಳಗೊಳಕಿ ಗಿಡ, ಕರೆ ಉತ್ರಾಣಿ, ಕಾಚಿಕಡ್ಡಿ ಹುಲ್ಲು, ಬೋಚಿಗಿಡ, ಉಗ್ನಿ ಬಳ್ಳಿ, ಕರಿಮೆಂಟಿನ ಬಳ್ಳಿ, ಮಾಲಿಂಗನ ಬಳ್ಳಿ, ರಕ್ಕಸ ಬಳ್ಳಿ, ದೊಮಾರಿ ಗಿಡ, ಹುಲಿ ಗಿಡ, ಹಾಲಿ ಸೊಪ್ಪು, ತುರುಬು ಸೊಪ್ಪು, ಕಕ್ಕಿ ಗಿಡ, ಎಕ್ಕಿ ಗಿಡ, ಕಾಡು ತೆನೆ ಹುಲ್ಲು, ಕುರುಡು ಗುರಾಳು, ರತ್ನ ಜಾಲಿ ಗಿಡ, ಲೆಕ್ಕಿ ಗಿಡ, ನೀರಬಾನಿ ಗಿಡ, ಕಿರಕ್ ಸಾಲಿ ಸೊಪ್ಪು, ಪುಂಡಿ ಸೊಪ್ಪು ಹೀಗೆ ವಿವಿಧ ರೀತಿಯ ಕಳೆಗಳು ರೈತರನ್ನು ಬಾಧಿಸುತ್ತಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಸಾಂಪ್ರದಾಯಿಕ ಪರಿಕರಗಳಾದ ಕುಂಟೆಗಳ ಮೂಲಕ, ಕುರ್ಚಿಗಳ ಮೂಲಕ ದೈಹಿಕ ಶ್ರಮದಿಂದ ಕಳೆಯನ್ನು ಕೀಳುವ ಪದ್ಧತಿಯನ್ನು ಕಾಣಬಹುದಾಗಿದೆ.

ಹ್ಯಾರಡಾದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಶೇ.೫೦% ಆಧುನಿಕತೆಯ ಪ್ರಭಾವಕ್ಕೆ ಒಳಗಾಗುತ್ತಿದೆ. ಇನ್ನೂ ಶೇ. ೫೦ ರಷ್ಟು ಜನರು ಸಾಂಪ್ರದಾಯಿಕ ಕೃಷಿಯನ್ನೇ ನಂಬಿದ್ದಾರೆ. ಇತ್ತೀಚಿನ ದಿನಮಾನಗಳಲ್ಲಿ ಸ್ವಲ್ಪ ಸಾಂಪ್ರದಾಯಿಕ ಕೃಷಿಯು ಹಲವಾರು ಸ್ಥಿತ್ಯಂತರಗಳಿಗೆ ಒಳಪಟ್ಟು ಬದಲಾವಣೆಯನ್ನು ಕಾಣುತ್ತಿದೆ. ಕೃಷಿಯು ಸ್ವಲ್ಪ ಮಟ್ಟಿಗೆ

ಯಾಂತ್ರೀಕರಣವಾಗುತ್ತಿರುವುದನ್ನು ನಾವಿಲ್ಲಿ ಕಾಣಬಹುದು. ಕೂರಿಗೆಯ ಬದಲಾಗಿ ಸುಧಾರಿಸಿದ ಬಿತ್ತುವ ಯಂತ್ರಗಳನ್ನು ಬಳಸುತ್ತಿದ್ದಾರೆ. ರಂಟೆ–ಕುಂಟೆಯ ಬದಲಾಗಿ ಟ್ರ್ಯಾಕ್ಟರ್ ಬಳಸುತ್ತಿದ್ದಾರೆ. ಒಕ್ಕಣೆ ಮಾಡಲು ರೂಣಗಲ್ಲಿನ ಬದಲಾಗಿ ಸುಧಾರಿತ ವಾಹನಗಳನ್ನು ಬಳಸುತ್ತಿದ್ದಾರೆ. ಕಳೆಯನ್ನು ಕೀಳುವ ಕುರ್ಚಿಯ ಬದಲಾಗಿ ಕಳೆನಾಶಕ ಔಷಧಿಯನ್ನು ಸಿಂಪಡಿಸುವ ಮೂಲಕ ಕಳೆಯನ್ನು ಕೀಳಲಾಗುತ್ತಿದೆ. ಮೇವು ಕತ್ತರಿಸುವ ಕತ್ತರಿಯ ಬದಲಾಗಿ ಮೇವನ್ನು ತುಂಡು ತುಂಡಾಗಿ ಕತ್ತರಿಸಿ ಮಿಷನ್‌ನ್ನು ಬಳಸುತ್ತಿದ್ದಾರೆ. ತತ್ರಾಣಿ ಬದಲಾಗಿ ಪ್ಲಾಸ್ಟಿಕ್ ನೀರಿನ ಕ್ಯಾನ್ ಬಳಸುತ್ತಿದ್ದಾರೆ. ನೆಲವನ್ನು ಅಗೆಯುವ ಹಾರಿಕೋಲು, ಗುದ್ದಲಿ ಬದಲಾಗಿ ಜೆ.ಸಿ.ಬಿ. ಯಂತ್ರವನ್ನು ಬಳಸುತ್ತಿದ್ದಾರೆ. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹ್ಯಾರಡ ಗ್ರಾಮದ ಸಾಂಪ್ರದಾಯಿಕ ಕೃಷಿಯಿಂದ ಯಾಂತ್ರೀಕೃತ ಕೃಷಿಯತ್ತ ಸಾಗುತ್ತಿದೆ. ಅಧುನಿಕತೆಯ ಸೊಗಡನ್ನು ಅನುಸರಿಸುತ್ತಿದೆ ಎಂದು ನಿರ್ಣಯಿಸಬಹುದು. ಹಂತ ಹಂತವಾಗಿ ಕೃಷಿಯ ಪದ್ದತಿಯು ಪಲ್ಲಟಗೊಳ್ಳುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಹ್ಯಾರಡಾದಲ್ಲಿ ಬಳಸುವ ಅಳತೆ ಮಾಪನಗಳು

ನಮ್ಮ ಪೂರ್ವಜರ ಅವಧಿಯಲ್ಲಿ ಅವರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಲವಾರು ವಿವಿಧ ಚಟುವಟಿಕೆಗಳನ್ನು ರೂಢಿಸಿಕೊಂಡಿದ್ದರು. ದಿನನಿತ್ಯದ ಜೀವನದಲ್ಲಿ ಕೊಡು–ಕೊಳ್ಳುವುದರಲ್ಲಿ ಹೀಗೆ ಹಲವಾರು ಸ್ತರಗಳಲ್ಲಿ ತಮ್ಮದೇ ಆದ ರೀತಿ–ರಿವಾಜುಗಳನ್ನು ರೂಢಿಸಿಕೊಂಡಿದ್ದರು. ಈಗಿನ ತರಹ ಆ ದಿನಗಳಲ್ಲಿ ನಾಣ್ಯಗಳ ಚಲಾವಣೆ ಇರಲಿಲ್ಲ. ವಸ್ತುಗಳ ವಿನಿಮಯವನ್ನು ಮಾಡಿಕೊಳ್ಳುವುದರ ಮೂಲಕ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಕಾಲ ಬದಲಾದಂತೆ ವಸ್ತುಗಳನ್ನು ಒಂದು ನಿರ್ದಿಷ್ಠ ಮಾಪನದಲ್ಲಿ ಅಳೆಯುವ ಪದ್ಧತಿಯು ರೂಢಿಯಲ್ಲಿ ಬಂತು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಜೀವನ ಶೈಲಿಯ ವಿವಿಧ ಸ್ತರಗಳಲ್ಲಿ ಹಲವಾರು ಮಾಪನಗಳನ್ನು ಕಾಣಬಹುದಾಗಿದೆ. ಎಲ್ಲರಿಗೂ ಸರಿಹೊಂದುವ ಸರ್ವ ಸಮ್ಮತವಾದ ಮಾಪನಗಳನ್ನು ಬಳಸುವುದುಂಟು ಅವುಗಳಲ್ಲಿ ಪ್ರಮುಖವಾದವುಗಳು.

೦೧ ಸೇರು : ಈಗಲೂ ಹ್ಯಾರಡ ಗ್ರಾಮದಲ್ಲಿ ಧಾನ್ಯಗಳನ್ನು ಅಳೆಯಲು ಈ ಸಾಧನವನ್ನು ಉಪಯೋಗಿಸುವುದುಂಟು. ಈ ಅಳತೆ ಮಾಪನವು ಸರಿ ಸುಮಾರು ೧ ಕೆ.ಜಿ.ಯ ಧಾನ್ಯಗಳನ್ನು ತುಂಬಿಸಬಹುದು. ೧೦೦ ಸೇರುಗಳ ಅಳತೆಯು ೧ ಕ್ವಿಂಟಾಲ್‌ಗೆ ಸಮವಾಗುವುದು. ಹ್ಯಾರಡದಲ್ಲಿ ಈಗಲೂ ಸಹ ಧಾನ್ಯಗಳಾದ ಬೇಳೆ, ತೊಗರಿ, ಅಲಸಂದಿ, ಹೆಸರು, ಜೋಳ, ರಾಗಿ, ನವಣೆ ಎಲ್ಲವನ್ನು ಇದರಿಂದಲೇ ಅಳತೆ ಮಾಡುವುದುಂಟು. ಈ ಸಾಧನವು ಹ್ಯಾರಡ ಗ್ರಾಮದ ಜನತೆಯಲ್ಲಿ ಅತೀ ಪವಿತ್ರವಾದುದು. ಧಾರ್ಮಿಕವಾದ ವಿವಿಧ ಆಚರಣೆಗಳಲ್ಲಿ ಈ ಸಾಧನವನ್ನು ಬಳಸುವುದುಂಟು.

ಈ ಸಾಧನವನ್ನು ತಗಡಿನಿಂದ ತಯಾರಿಸುವರು. ಸ್ಥಳೀಯ ದಿನಸಿ ವ್ಯಾಪಾರಿಗಳು, ಹಿಟ್ಟಿನ ಗಿರಣಿಗಳಲ್ಲಿ, ಕೃಷಿ ಕುಟುಂಬಗಳು, ಸುಣ್ಣ ಮಾರುವವರು, ಧಾನ್ಯಗಳನ್ನು ಅಳೆದು ಮಾರುವವರು, ಸಂತೆಯಲ್ಲಿ, ವಿಶೇಷವಾಗಿ ಮದುವೆಯ ಸಂದರ್ಭದಲ್ಲಿ ಪೂಜೆಗಾಗಿ ಬಳಸುವರು. ಈ ಸಾಧನವನ್ನು ಅನುಗ್ರಹ ದೇವತೆ ಎಂದು ಗ್ರಾಮೀಣ ಜನಪದರು ನಂಬಿದ್ದಾರೆ. ಈ ಸಾಧನವನ್ನು ದೈವತ್ವದ ಎತ್ತರದಲ್ಲಿ ಪೂಜಿಸುವುದುಂಟು.

೦೨ ಅರಕಲ್ಲು : ಈ ಸಾಧನವನ್ನು ಕಡಿಮೆ ಧಾನ್ಯಗಳನ್ನು ಅಳತೆ ಮಾಡುವಾಗ ಈ ಸಾಧನವನ್ನು ಉಪಯೋಗಿಸುವುದುಂಟು. ನಾಲ್ಕು ಅರಕಲ್ಲುಗಳು ಒಂದು ಸೇರಿಗೆ ಸಮವಾಗಿದೆ. ಈ ಮಾಪನವನ್ನು ಹೆಚ್ಚಾಗಿ ದ್ವಿದಳ ಧಾನ್ಯಗಳನ್ನು ಅಳೆಯಲು ಬಳಸುವುದುಂಟು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಈ ಸಾಧನವು ಕಣ್ಮರೆಯಾಗಿದೆ.

ಈ ಸಾಧನವನ್ನೂ ಸಹ ಇಲ್ಲಿಯ ಜನಪದರು ಪವಿತ್ರ ಭಾವನೆಯಿಂದ ಕಾಣುತ್ತಿದ್ದಾರೆ. ವಿವಿಧ ಧಾರ್ಮಿಕ ಆಚರಣೆಗಳಲ್ಲಿ ಇದನ್ನು ಪೂಜಿಸುವರು. ಇದನ್ನು ದೈವತ್ವದ ಎತ್ತರದಲ್ಲಿಟ್ಟು ಪೂಜಿಸುವ ಪದ್ಧತಿಯನ್ನು ನಾವಿಲ್ಲಿ ಕಾಣಬಹುದಾಗಿದೆ.

೦೩ ಚಟಾಕ : ಅತಿ ಕಡಿಮೆ ವಸ್ತುಗಳನ್ನು ಅಳತೆ ಮಾಡಲು ಉಪಯೋಗಿಸುವರು. ಮೊದಮೊದಲು ಅಲ್ಯೂಮಿನಿಯಂನಿಂದ ತಯಾರಿಸಿದ ಚಟಾಕನ್ನು ಉಪಯೋಗಿಸುತ್ತಿದ್ದರು. ಆದರೆ ಇತ್ತೀಚಿಗೆ ಬಹುತೇಕವಾಗಿ ಎಲ್ಲರ ಮನೆಯಲ್ಲಿ ಪ್ಲಾಸ್ಟಿಕ್ ಹಾಗೂ ಫೈಬರ್‌ನಿಂದ ಮಾಡಿದ ಚಟಾಕನ್ನು ನೋಡಬಹುದು.

೦೪ ಇಂಚು : ಉದ್ದವನ್ನು ಅಳೆಯುವ ಮಾಪನದಲ್ಲಿ ಅತ್ಯಂತ ಕಡಿಮೆ ಉದ್ದವನ್ನು ಅಳೆಯುವ ಮಾಪನ ಎಂದರೆ ಇಂಚು. ಇದನ್ನು ಹೆಚ್ಚಾಗಿ ಬಡಿಗಿತನ, ವೆಲ್ಡಿಂಗ್ ಮಾಡುವ ಕೆಲಸಗಳಲ್ಲಿ ಬಳಸುವುದುಂಟು. ಹಾಗೂ ಮೊಳೆಗಳನ್ನು ಖರೀದಿಸುವಾಗ ಇಷ್ಟು ಇಂಚಿನ ಮೊಳೆಗಳು ಎಂದು ಗುರ್ತಿಸಲು ಈ ಸಾಧನವನ್ನು ಬಳಸುವುದುಂಟು.

ಹೊಲಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಿದಾಗ ಇಂತಿಷ್ಟು ಇಂಚು ನೀರು ಬಂದಿತು ಎಂದು ಹೇಳುವುದುಂಟು. ಬಂದ ನೀರನ್ನು ಇಂಚಿನಿಂದ ಅಳತೆ ಮಾಡುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

೦೫ ಚೋಟುದ್ದ : ಹೆಬ್ಬೆರಳು ಮತ್ತು ತೋರುಬೆರಳಿನ ನಡುವಿನ ಅಂತರವನ್ನು ಚೋಟುದ್ದ ಎಂದು ಕರೆಯುವರು. ಈ ಸಾಧನವನ್ನು ಅಂದಾಜು ಗಣನೆಯನ್ನು ಮಾಡುವಾಗ ಹೆಚ್ಚಾಗಿ ಬಳಸುವುದುಂಟು. ಈಗಲೂ ಕೂಡ ಹ್ಯಾರಡ ಗ್ರಾಮದಲ್ಲಿ ಈ ಅಳತೆಯು ಬಳಕೆಯಲ್ಲಿದೆ.

೦೬ ಗೇಣುದ್ದ : ಹೆಬ್ಬೆರಳು ಮತ್ತು ಕಿರುಬೆರಳುಗಳ ಮಧ್ಯದ ಅಂತರವನ್ನು ಗೇಣುದ್ದ ಎಂದು ಕರೆಯುವುದುಂಟು. ಇದು ಕೂಡ ಗ್ರಾಮೀಣ ಭಾಗದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಒಂದು ಅಳತೆ ಸಾಧನವಾಗಿದೆ.

೦೭ ಮೊಳ : ಬೆರಳಿನಿಂದ ಮೊಣಕೈವರೆಗೆ ನಡುವಿನ ಅಂತರವನ್ನು ಮೊಳ ಎಂದು ಕರೆಯುವರು. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಹೂವಿನ ಮಾಲೆಗಳನ್ನು ಅಳೆಯಲು ಬಹುತೇಕ ಉಪಯೋಗಿಸುವರು.

೦೮ ಅರ್ಧಮಾರು : ಬೆರಳಿನಿಂದ ಭುಜದವರೆಗೆ ನಡುವಿನ ಅಂತರವನ್ನು ಅರ್ಧಮಾರು ಎಂದು ಕರೆಯುವರು. ಈ ಮಾಪನವನ್ನು ಹೂವಿನ ವ್ಯಾಪಾರದಲ್ಲಿ ಬಹುತೇಕವಾಗಿ ಬಳಸುವುದುಂಟು.

೦೯ ಮಾರುದ್ದ : ಎರಡು ಕೈಗಳನ್ನು ಅಡ್ಡಲಾಗಿ ಮಾಡಿ ಒಂದು ಕೈ ಬೆರಳಿನಿಂದ ಇನ್ನೊಂದು ಕೈಬೆರಳಿನ ನಡುವೆ ಇರುವ ಅಂತರವನ್ನು ಮಾರುದ್ದ ಎಂದು ಕರೆಯುವರು.

೧೦ ಅಡಿ : ಇದು ಇತ್ತೀಚಿಗೆ ಹೆಚ್ಚು ಪ್ರಚಲಿತದಲ್ಲಿರುವ ಮಾಪನವಾಗಿದೆ. ಎರಡು ಕೈಗಳನ್ನು ಮುಷ್ಠಿ ಮಾಡಿ ಎರಡು ಹೆಬ್ಬೆರಳುಗಳನ್ನು ಚಾಚಿದಾಗ ಉಂಟಾಗುವ ಅಂತರವನ್ನು ಅಡಿ ಎಂದು ಕರೆಯುವರು.

೧೧ ಮಣ : ಇದು ಕೆ.ಜಿ. ಯಲ್ಲಿ ಅಳತೆ ಮಾಡುವ ಒಂದು ಸಾಧನವಾಗಿದೆ. ಒಂದು ಮಣ ೧೩ ಕೆ.ಜಿ.ಗೆ ಸಮನಾಗಿರುತ್ತದೆ. ಇದನ್ನು ಹೆಚ್ಚಾಗಿ ಆಳುಗಳು ಹತ್ತಿಯನ್ನು ಬಿಡಿಸಿಕೊಂಡು ಬಂದಾಗ ಅವುಗಳನ್ನು ತೂಗುವಾಗ ಮಣದ ಲೆಕ್ಕದಲ್ಲಿ ತೂಗುವರು. ಈಗಲೂ ಈ ಅಳತೆಯ ಸಾಧನವು ಹ್ಯಾರಡದಲ್ಲಿ ಚಾಲ್ತಿಯಲ್ಲಿದೆ.

ಮೇಲಿನ ಎಲ್ಲಾ ಅಳತೆ ಮಾಪನಗಳನ್ನು ಹ್ಯಾರಡಾ ಜನಪದರು ಬಳಸುವರು. ಅದರಲ್ಲಿ ವಿಶೇಷವಾಗಿ ಕೃಷಿಕರು ಕೃಷಿಯಲ್ಲಿ ವ್ಯಾಪಕವಾಗಿ ಬಳಸುವುದುಂಟು. ಇಲ್ಲಿಯ ಬಹುತೇಕ ಅಳತೆ ಮಾಪನಗಳನ್ನು ಹ್ಯಾರಡಾ ಜನಪದರು ಪವಿತ್ರ ಭಾವನೆಯಿಂದ ಕಾಣುವರು. ಖಂಡಾಪೂಜೆ(ಆಯುಧ ಪೂಜೆ) ದಿನದಂದು ಅಳತೆ ಮಾಪನಗಳನ್ನು ವಿಶೇಷವಾಗಿ ಪೂಜಿಸುವರು. ಆ ಸಮಯದಲ್ಲಿ ಇವುಗಳನ್ನು ಶುಭ್ರವಾದ ನೀರಿನಿಂದ ತೊಳೆದು ಸ್ವಚ್ಛಗೊಳಿಸಿ, ಜಗುಲಿಯ ಮೇಲಿಟ್ಟು ಕುಂಕುಮ, ಭಂಡಾರ, ವಿಭೂತಿ, ಊದುಬತ್ತಿ ಹಚ್ಚಿ ನೈವೇದ್ಯವನ್ನು ಕೊಡುವುದರ ಮೂಲಕ ದೈವಿಕ ಮನೋಭಾವನೆಯನ್ನು ನಾವಿಲ್ಲಿ ಕಾಣಬಹುದು. ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ಹಲವಾರು ಬದಲಾವಣೆಗಳನ್ನು ಕಾಣಬಹುದು. ಮೊದ ಮೊದಲು ಅಡಿಯನ್ನು ಕೈಯಿಂದ ಅಳೆಯುತ್ತಿದ್ದರು. ಅದರ ಬದಲಾಗಿ ಟೇಪಿನ ಮೂಲಕ ಅಳೆಯುವುದನ್ನು ನಾವೀಗ ಕಾಣಬಹುದು. ಹೀಗೆ ನಾವೀನ್ಯ ಮಾದರಿಯ ಮಾಪನಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಿವೆ.

* ಹೈನುಗಾರಿಕೆ : ಮಾನವನು ತನ್ನ ಜೊತೆ-ಜೊತೆಗೆ ಜಾನುವಾರಗಳನ್ನು ಸಾಕಿ ಅವುಗಳನ್ನು ಪೋಷಿಸಿಕೊಂಡು ಬಂದ ಇತಿಹಾಸವನ್ನು ನಾವು ಕಾಣಬಹುದು. ಸಿಂಧೂ ನದಿಯ ನಾಗರಿಕತೆಯಲ್ಲಿಯೂ ಸಹ ಮನುಷ್ಯನು ತನ್ನ ಜೊತೆಗೆ ಪ್ರಾಣಿಗಳನ್ನು ಸಾಕಿದ್ದನು ಎಂದು ತಿಳಿಯಬಹುದು. ಮನುಷ್ಯನು ಪ್ರಾಣಿಗಳನ್ನು ಸಾಕುವ ಉದ್ದೇಶ ಮಾಂಸಕ್ಕಾಗಿ, ಹಾಲಿನ ಉತ್ಪನ್ನಕ್ಕಾಗಿ, ಉಣ್ಣೆಗಾಗಿ ಹೀಗೆ ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರವಾಗಿ ಪ್ರಾಣಿಗಳನ್ನು ಸಾಕತೊಡಗಿದನು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಜಾನುವಾರುಗಳ ಉದ್ದಿಮೆಯು ಹೆಚ್ಚು ಪ್ರಗತಿಯಲ್ಲಿರುವುದನ್ನು ನಾವುಗಳು ಕಾಣಬಹುದಾಗಿದೆ. ಪ್ರಾಣಿಗಳ ಉದ್ದಿಮೆಯ ಜೊತೆ ಜೊತೆಗೆ ಹೈನುಗಾರಿಕೆಯು ಹೆಚ್ಚು ಪ್ರಚಲಿತದಲ್ಲಿರುವ ಒಂದು ಉದ್ಯಮವಾಗಿದೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಹಾಲಿನ ಉತ್ಪನ್ನಗಳನ್ನು ತಯಾರಿಸುವ ರಾಷ್ಟ್ರ ಭಾರತ. ಭಾರತದಲ್ಲಿ ಪ್ರತಿ ವರ್ಷ ೧೫೫ ದಶಲಕ್ಷ ಟನ್ನುಗಳಷ್ಟು ಹಾಲಿನ ಉತ್ಪಾದನೆ ಆಗುತ್ತದೆ.

ಇತ್ತೀಚಿನ ದಿನಮಾನಗಳಲ್ಲಿ ಗ್ರಾಮಗಳಲ್ಲಿ ಇದೊಂದು ದೊಡ್ಡ ಉದ್ದಿಮೆಯಾಗಿ ಬೆಳೆಯುತ್ತದೆ. ಕೇವಲ ಕೃಷಿಯನ್ನು ನಂಬಿಕೊಂಡು ಕೈಸುಟ್ಟುಕೊಂಡ ರೈತರಿಗೆ ಇದೊಂದು ವರದಾನವಾಗಿದೆ.

ಹೈನುಗಾರಿಕೆಗೆ ಸರ್ಕಾರದಿಂದ ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ರೈತರು ಆರ್ಥಿಕವಾಗಿ ಸದೃಡರಾಗಲು ಇದೊಂದು ಊರುಗೋಲಾಗಿದೆ ಎಂದು ಹೇಳಬಹುದು. ಹ್ಯಾರಡ ಗ್ರಾಮವು ಇತ್ತೀಚಿಗೆ ಹೈನುಗಾರಿಕೆಯನ್ನು ಒಂದು ಉದ್ದಿಮೆಯ ರೂಪದಲ್ಲಿ ಪ್ರಾರಂಬಿಸಿದೆ. ಗ್ರಾಮದಲ್ಲಿ ಜಾನುವಾರುಗಳ ಬಹು ಸಂಖ್ಯೆಯನ್ನು ಕಾಣಬಹುದುದಾಗಿದೆ.

ಕ್ರ. ಸಂ.	ಜಾನುವಾರುಗಳ ಹೆಸರು	ಸಂಖ್ಯೆ
೧	ಆಕಳು ಮತ್ತು ಎತ್ತು	೧೨೭೬
೨	ಎಮ್ಮೆ	೪೧೮
೩	ಕುರಿ	೧೭೪೫೩
೪	ಮೇಕೆ	೧೪೪೨

ಇದು ಹ್ಯಾರಡ ಗ್ರಾಮದ ಒಟ್ಟು ಜಾನುವಾರುಗಳ ಸಂಖ್ಯೆಯಾಗಿದೆ. ಹ್ಯಾರಡ ಗ್ರಾಮದಲ್ಲಿ ಹಾಲು ಉತ್ಪಾದಕ ಸಹಕಾರಿ ಸಂಘವನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ಹ್ಯಾರಡಾದ ಹಾಲನ್ನು ಖರೀದಿಸಲಾಗುತ್ತದೆ. ಹ್ಯಾರಡಾ ಗ್ರಾಮದಲ್ಲಿ ದಿನನಿತ್ಯ ೩೪೦ ಲೀಟರ್ ಹಾಲು ಉತ್ಪಾದನೆಯಾಗುವುದನ್ನು ನಾವಿಲ್ಲಿ ಕಾಣಬಹುದುದಾಗಿದೆ. ದಿನನಿತ್ಯ ೫೦-೬೦ ಹಸುಗಳು ಹಾಲನ್ನು ಕೊಡುತ್ತವೆ. ಈ ಉದ್ದಿಮೆ ರೈತರನ್ನು ಸ್ವಲ್ಪ ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಿವೆ. ಸಾಂಪ್ರದಾಯಿಕ ಕೃಷಿಯ ಜೊತೆ-ಜೊತೆಗೆ ರೈತರಿಗೆ ಉತ್ತಮ ಗುಣಮಟ್ಟದ ಕೊಟ್ಟಿಗೆಯ ಗೊಬ್ಬರವು ತಯಾರಾಗುತ್ತದೆ. ಇದು ಬೆಳೆಗಳಿಗೆ ಅತೀ ಅವಶ್ಯಕವಾಗಿ ಬೇಕಾಗುವ ಗೊಬ್ಬರವಾಗಿದ್ದು, ಕೃಷಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನವನ್ನು ತೆಗೆಯಬಹುದಾಗಿದೆ.

ಹ್ಯಾರಡಾ ಗ್ರಾಮದಲ್ಲಿ ಎಲ್ಲಾ ಸಮುದಾಯದವರು ಹೈನುಗಾರಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಎಮ್ಮೆಯ ಹಾಲು, ಆಕಳಿನ ಹಾಲು, ಇತ್ತೀಚಿಗೆ ಜೆರ್ಸಿ ಆಕಳಿನ ಹಾಲನ್ನು ಯಥೇಚ್ಛವಾಗಿ ಉತ್ಪಾದಿಸಲಾಗುತ್ತಿದೆ. ಹಾಲಿನ ಉತ್ಪಾದನೆ ಹೆಚ್ಚು-ಹೆಚ್ಚು ಬರಲು ಹಸಿರು ಮೇವನ್ನು ಬೆಳೆಯುತ್ತಿದ್ದಾರೆ. ಅದಕ್ಕಾಗಿಯೇ ಕೃಷಿ ಇಲಾಖೆಯಿಂದ ಸುಧಾರಿತ ಬೀಜಗಳನ್ನು ತಂದು ಬಿತ್ತನೆ ಮಾಡಿ ಹಸಿರು ಮೇವನ್ನು ಬಳಸುತ್ತಿದ್ದಾರೆ. ಇದರ ಜೊತೆ-ಜೊತೆಗೆ ಹಾಲು ಹೆಚ್ಚು ಬರಲು ವಿವಿಧ ರೀತಿಯ ಬೂಸಾಗಳನ್ನು ಕೊಡಲಾಗುತ್ತಿದೆ. ಎಲ್ಲಾ ರೀತಿಯ ದ್ವಿದಳ ಧಾನ್ಯಗಳ ನುಚ್ಚು, ಶೇಂಗಾ ಹಿಂಡಿಯನ್ನು ಜಾನುವಾರುಗಳಿಗೆ ಕೊಡುವುದರ ಮೂಲಕ ಅತೀ ಹೆಚ್ಚಿನ ಹಾಲಿನ ಉತ್ಪಾದನೆಯನ್ನು ತಯಾರಿಸಲಾಗುತ್ತಿದೆ.

ಮಾನವನ ಆದಿಮ ಚರಿತ್ರೆಯನ್ನು ಅಭ್ಯಾಸಿಸಿದಾಗ, ಆತನು ಅಲೆಮಾರಿ ಜೀವನದ ನಂತರ ಒಂದೆಡೆ ಸ್ಥಿರವಾದ ಜೀವನವನ್ನು ಕಂಡುಕೊಂಡ ಮೇಲೆ ಕೃಷಿಯು ಮೂಲ ವೃತ್ತಿಯಾಗಿ ರೂಪ ತಳೆಯಿತು. ಕಾಡನ್ನು ಕೃಷಿ ಭೂಮಿಯಾಗಿ ಪರಿವರ್ತನೆಯನ್ನಾಗಿ ಮಾಡಿ ತನ್ನ ಮೂಲ ಭೂತ ಅವಶ್ಯಕತೆಗಳನ್ನು ಈಡೇರಿಸತೊಡಗಿದನು. ಹೀಗೆ ಗ್ರಾಮ ಸಮುದಾಯಗಳು ಹುಟ್ಟಿಕೊಂಡವು. ಇದರ ಮುಖಾಂತರವಾಗಿ ಮಾನವನ ಸಂಬಂಧಗಳು, ಸಾಂಸ್ಕೃತಿಕ ಜೀವನ, ಸಾಮಾಜಿಕ ರೀತಿ

ನೀತಿಗಳು ಹುಟ್ಟಿಕೊಂಡವು. ಹೀಗೆ ಕೃಷಿಯನ್ನೇ ತನ್ನ ಆರ್ಥಿಕತೆಯ ಮೂಲವನ್ನಾಗಿ ಮಾನವ ಮಾಡಿಕೊಂಡನು. ಈಗಲೂ ಸಹ ಬಹುತೇಕ ಗ್ರಾಮಗಳು ಕೃಷಿಯನ್ನೇ ತನ್ನ ಆರ್ಥಿಕತೆಯ ಮೂಲಗಳನ್ನಾಗಿ ಮಾಡಿಕೊಂಡಿವೆ.

ಆಧುನಿಕತೆಯ ಪರಿಣಾಮದಿಂದ ಗ್ರಾಮಗಳು ಕೃಷಿಯಲ್ಲಿ ನಾವೀನ್ಯತೆಯನ್ನು ಕಂಡುಕೊಂಡು ಹೆಚ್ಚು-ಹೆಚ್ಚು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತಿವೆ. ಕೃಷಿಯೇತರ ಚಟುಚಟಿಕೆಗಳಿಂದ ಅತೀ ಹೆಚ್ಚು ಲಾಭವನ್ನು ಪಡೆಯುತ್ತಿವೆ. ಹ್ಯಾರಡಾ ಗ್ರಾಮವು ಇದಕ್ಕೆ ಹೊರತಾಗಿಲ್ಲ, ಮೊದ-ಮೊದಲು ಸಾಂಪ್ರದಾಯಿಕ ಕೃಷಿ ಚಟುವಟಿಕೆಗಳನ್ನು ಹೊಂದಿದ್ದ ಗ್ರಾಮ ಬಹುತೇಕವಾಗಿ ವೈಜ್ಞಾನಿಕ ಆಧಾರಿತ ಕೃಷಿ ವ್ಯವಸ್ಥೆಯನ್ನು ಅನುಸರಿಸುತ್ತಿದೆ. ಇದಕ್ಕೆ ಕಾರಣ ಕೃಷಿ ಕ್ಷೇತ್ರಕ್ಕೆ ಬಹುತೇಕ ಅಕ್ಷರಸ್ಥ ವ್ಯಕ್ತಿಗಳು ಬರುತ್ತಿದ್ದಾರೆ. ವೈಜ್ಞಾನಿಕ ಬೇಸಾಯದ ಮುಖಾಂತರವಾಗಿ ಹೆಚ್ಚು ಹೆಚ್ಚು ಆದಾಯವನ್ನು ಗಳಿಸುತ್ತಿದ್ದಾರೆ. ಇದರ ಜೊತೆ-ಜೊತೆಗೆ ಹೈನುಗಾರಿಕೆ, ವ್ಯಾಪಾರ, ಸಣ್ಣ ಕೈಗಾರಿಗಳು ಬಹುತೇಕವಾಗಿ ಗ್ರಾಮದ ಆರ್ಥಿಕ ವ್ಯವಸ್ಥೆಯನ್ನು ಸುಧಾರಣೆಗೆ ತರುತ್ತಿವೆ. ಪದವಿ ಹಂತದ ವ್ಯಕ್ತಿಗಳು ಕೃಷಿಗೆ ಪಾದಾರ್ಪಣೆ ಮಾಡುವುದರ ಮೂಲಕ ಸರ್ಕಾರದ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಆರ್ಥಿಕ ಸ್ವಾವಲಂಭನೆಯನ್ನು ಪಡೆಯುತ್ತಿದ್ದಾರೆ. ಅದರಲ್ಲಿ ಹಿಂದುಳಿದ ಸಮುದಾಯಗಳು ತಮ್ಮ ಕೋಟಾದಲ್ಲಿ ಬರುವ ಬಹುತೇಕ ಸರ್ಕಾರಿ ಸೌಲಭ್ಯಗಳನ್ನು ಸಮರ್ಥವಾಗಿ ಬಳಸುತ್ತಿದ್ದಾರೆ. ೧೯೮೦ ರ ದಶಕದಲ್ಲಿ ಗ್ರಾಮದಲ್ಲಿ ಸ್ಟೇಟ್ ಬ್ಯಾಂಕ್ ಸ್ಥಾಪನೆಯಾಗುವುದರ ಮೂಲಕ ಜನರಿಗೆ ಇನ್ನೂ ಹೆಚ್ಚು ಆರ್ಥಿಕ ಸೌಲಭ್ಯಗಳು ಸಿಗತೊಡಗಿದವು. ಆಗ ಅಕ್ಷರಸ್ಥರ ಸಂಖ್ಯೆ ಕಡಿಮೆ ಇದ್ದರಿಂದ ಬ್ಯಾಂಕಿನ ವಹಿವಾಟು ಕಡಿಮೆ ಇತ್ತು. ಆದರೆ ಪ್ರಸ್ತುತ ದಿನಮಾನಗಳಲ್ಲಿ ಬುದ್ದಿವಂತ ಪೀಳಿಗೆಯು ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಳಸುತ್ತಿದ್ದಾರೆ. ಅದರಲ್ಲೂ ಜನಧನ್ ಎಂಬ ಸರ್ಕಾರಿ ಯೋಜನೆಯಡಿ ಪ್ರತಿಯೊಬ್ಬರು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವುದರ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಡುತ್ತಿದ್ದಾರೆ. ಗ್ರಾಮದಲ್ಲಿ ಬಹುತೇಕರು ಸುಶಿಕ್ಷತರಾಗಿದ್ದರಿಂದ Paytm, ಆನ್ ಲೈನ್ ಬ್ಯಾಂಕಿಂಗ್, ATM ಮುಂತಾದ ನವೀನ ಮಾದರಿಯ ವ್ಯವಸ್ಥೆಗೆ ಒಳಪಡುತ್ತಿದ್ದಾರೆ. ಈ ಎಲ್ಲಾ ಕ್ರಾಂತಿಕಾರಕ ಹೆಜ್ಜೆಗಳು ಗ್ರಾಮದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರಿಂದ ಹೇಳಬಹುದು.

ಇವುಗಳಲ್ಲದೆ ಗ್ರಾಮದಲ್ಲಿ ಇತ್ತೀಚಿಗೆ ಧರ್ಮಸ್ಥಳದ ಗ್ರಾಮಾಭಿವೃದ್ದಿ ಯೋಜನೆಯಡಿ ಹಲವಾರು ಸಂಘಗಳು ಸ್ಥಾಪನೆಯಾಗಿದ್ದು, ಅಪಾರ ಪ್ರಮಾಣದ ಆರ್ಥಿಕ ಚಟುವಟಿಕೆಗಳು ವಿಸ್ತರಿಸಲು ಕಾರಣವಾಗಿವೆ. ಗ್ರಾಮದಲ್ಲಿ ಸುಮಾರು ೬೭ ಸಂಘಗಳು ತಲೆಎತ್ತಿವೆ. ಸುಶಿಕ್ಷಿತ ಸಮುದಾಯವು ಇದರ ಉಪಯೋಗವನ್ನು ಸಮರ್ಥವಾಗಿ ಬಳಸುತ್ತಿವೆ. ಇದರ ಮುಖೇನ ಆರ್ಥಿಕ ಸ್ವಾವಲಂಭನೆಯನ್ನು ಹೊಂದುತ್ತಿದ್ದಾರೆ. ಹೀಗೆ ಗ್ರಾಮಕ್ಕೆ ಉತ್ತಮವಾದ ಶಿಕ್ಷಣವು ದೊರೆತಿದ್ದರಿಂದ ತಮ್ಮ ಆರ್ಥಿಕ ಸ್ವಾವಲಂಭನೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ.

೫.೩ ರಾಜಕೀಯ ಸ್ಥಿತಿಗತಿಗಳು

ಹ್ಯಾರಡ ಗ್ರಾಮದ ಸ್ಥಳೀಯ ರಾಜಕೀಯ ಸ್ಥಿತಿಗತಿಗಳು

ಭಾರತದ ಪ್ರತಿಯೊಂದು ಗ್ರಾಮಗಳು ತನ್ನದೇ ಆದ ರಾಜಕೀಯ ಇತಿಹಾಸವನ್ನು ಹೊಂದಿವೆ. ಇದಕ್ಕೆ ಹ್ಯಾರಡಾ ಗ್ರಾಮವು ಹೊರತಾಗಿಲ್ಲ. ಹ್ಯಾರಡಾ ಗ್ರಾಮವು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕಟ್ಟಕಡೆಯ ಗ್ರಾಮವಾಗಿದ್ದರೂ ಸಹ ತನ್ನದೇ ಆದ ರಾಜಕೀಯ ಸ್ಥಿತ್ಯಂತರಗಳನ್ನು ಹೊಂದಿದೆ. ನಾವು ಕರ್ನಾಟಕದ ಬಹುತೇಕ ಹಳ್ಳಿಗಳ ಅಧ್ಯಯನವನ್ನು ಕೈಗೊಂಡಾಗ ಹಳ್ಳಿಗಳ ಮೂಲ ಪುರುಷರು ಹಿಂದುಳಿದ ವರ್ಗಗಳ ಸಮುದಾಯದವರು. ಆಗಿನ ಕಾಲದಲ್ಲಿ ಹರಪನಹಳ್ಳಿಯ ಪಾಳೆಗಾರರ ಆಡಳಿತಕ್ಕೆ ಹ್ಯಾರಡ ಗ್ರಾಮವು ಒಳಪಟ್ಟಿತ್ತು. ಆದರೂ ಅಂದಿನ ಕಾಲದಲ್ಲಿ ರಾಜಕೀಯ ಪ್ರಜ್ಞೆ ಮುಚ್ಚಿದ ಬಾಗಿಲು ಆಗಿತ್ತು. ಗ್ರಾಮದ ಬಹುತೇಕ ಜನರು ಹೊಲ-ಗದ್ದೆಗಳಲ್ಲಿ ಕೃಷಿಯನ್ನು ಮಾಡುತ್ತಾ ಜೀವನವನ್ನು ಸಾಗಿಸುತ್ತಿದ್ದರು. ಸುಮಾರು ೧೦೦೦ ವರ್ಷಗಳ ಇತಿಹಾಸವನ್ನು ಹೊಂದಿದ ಹ್ಯಾರಡ ಗ್ರಾಮದ ಬಹುತೇಕ ಜನರು ಅಲೆಮಾರಿಗಳ ರೀತಿಯಲ್ಲಿ ಜೀವನವನ್ನು ನಡಸುವಂತಹ ಸ್ಥಿತಿಯನ್ನು ಹೊಂದಿದ್ದರು. ತಗ್ಗುಗಳು ಇದ್ದ ಹತ್ತಿರ ಅಲ್ಪ ಸ್ವಲ್ಪ ಭತ್ತವನ್ನು ಹಾಕುವುದು, ಅದರಿಂದ ಬಂದ ಆಹಾರ ಧಾನ್ಯವನ್ನು ಸಂಗ್ರಹಿಸುವುದು. ಇದು ಅವರ ಕಾಯಕ ಆಗಿತ್ತು. ಬಹುತೇಕ ಗ್ರಾಮದ ಜನರು ಲಂಗೋಟಿ ಹಾಕುವ ಪದ್ಧತಿಯನ್ನು ಹೊಂದಿದ್ದರು. ಅದರಲ್ಲಿ ಸ್ಥಿತಿವಂತರಿದ್ದವರು ಪೂರ್ಣ ಪ್ರಮಾಣದ ಉಡುಗೆಯನ್ನು ತೊಡುತ್ತಿದ್ದರು. ಸಾಮಾನುಗಳನ್ನು ಸಾಗಿಸಲು ಕತ್ತೆ ಮತ್ತು ಕೋಣಗಳನ್ನು ಬಳಸುತ್ತಿದ್ದರು. ರಾಜಕೀಯದ ವಾಸನೆಯೂ ಸಹ ಇವರ ಹತ್ತಿರ ಸುಳಿದಾಡುತ್ತಿರಲಿಲ್ಲ. ಹ್ಯಾರಡಾ ಗ್ರಾಮವನ್ನು ಆಳಿದ ಕಟ್ಟಕಡೆಯ ಹರಪನಹಳ್ಳಿಯ ಪಾಳೆಗಾರರ ಪ್ರತಿನಿಧಿ ಹನುಮಂತ ನಾಯಕ ಎಂಬುವನಾಗಿದ್ದನು. ಮೊದಲು ಗ್ರಾಮದಲ್ಲಿ ಸ್ಥಳೀಯವಾಗಿ ಆಡಳಿತದ ಚುಕ್ಕಾಣಿ ಹಿಡಿದವರು ಅಂದಿನ ಕಾಲದಲ್ಲಿ ಜೈನರು ಆಗಿದ್ದರು. ಮೊದಲು ಗ್ರಾಮಕ್ಕೆ ಜೈನ ಸಂತತಿ ಪ್ರಾರಂಭವಾಗಿದ್ದು ಬುಜ್ಜಪ್ಪ ಎಂಬ ಮನೆತನದವರಿಂದ ಇವರು ಹಡಗಲಿ ತಾಲೂಕಿನ ಮಾಗಳ ಗ್ರಾಮದಿಂದ ಉಪ್ಪನ್ನು ಮಾರುವುದಕ್ಕೋಸ್ಕರವಾಗಿ ಹ್ಯಾರಡಾ ಗ್ರಾಮಕ್ಕೆ ವಲಸೆ ಬಂದವರಾಗಿದ್ದರು. ತದ ನಂತರದಲ್ಲಿ ಮುರಾರಿ ಆದಿ ರಾಜಪ್ಪನವರ ಪೂರ್ವಜರು ಉಪ್ಪನ್ನು ಮಾರಲು ಹ್ಯಾರಡ ಗ್ರಾಮಕ್ಕೆ ಬಂದವರು. ಇವರು ಅತ್ಯಂತ ಉತ್ಕೃಷ್ಟ ಉಪ್ಪನ್ನು ಕಡಿಮೆ ರಿಯಾಯತಿ ದರದಲ್ಲಿ ಮಾರುತ್ತಿದ್ದರು. ಹೀಗೆ ಹ್ಯಾರಡದಲ್ಲಿಯೇ ಮುರಾರಿ ಆದಿ ರಾಜಪ್ಪನವರ ಪೂರ್ವಜರು ನೆಲೆಯೂರಿದರು. ಉಪ್ಪನ್ನು ಮಾರುವುದರ ಜೊತೆ-ಜೊತೆಗೆ ಗ್ರಾಮದಲ್ಲಿ ಏನಾದರೂ ಲೆಕ್ಕ-ಪತ್ರಗಳನ್ನು ಬಿಡಿಸಲು, ಬರೆಯಲು ಇವರು ನೆರವಾಗುತ್ತಿದ್ದರು. ಹೀಗೆ ಉಪ್ಪಿನ ವ್ಯಾಪಾರದ ಜೊತೆ-ಜೊತೆಗೆ ಗ್ರಾಮದಲ್ಲಿ ಬೆಳೆದ ಭತ್ತ, ಹತ್ತಿ, ಜೋಳ ಮುಂತಾದವುಗಳನ್ನು ಖರೀದಿಸಿ ರಾಣೆಬೆನ್ನೂರು ಹಾಗೂ ಹಾವೇರಿ ಪಟ್ಟಣಗಳಿಗೆ ಸಾಗಿಸಿ ಅಪಾರವಾದ ಲಾಭವನ್ನು ಪಡೆಯತೊಡಗಿದರು. ಹೀಗೆ ಆರ್ಥಿಕವಾಗಿ ಬಹಳಷ್ಟು ಬಲಯುತವಾಗುತ್ತಾ ಸಾಗಿದರು. ತದನಂತರದಲ್ಲಿ ಬ್ರಿಟೀಷರ ಆಗಮನದಿಂದ ಪಾಳೆಗಾರರ ಆಡಳಿತವು ಕೊನೆಗೊಂಡು ಬ್ರಿಟೀಷ್ ಪಾರುಪತ್ಯ ಪ್ರಾರಂಭವಾಯಿತು. ಮುರಾರಿ ಆದಿ ರಾಜಪ್ಪನವರ ಪೂರ್ವಜರು

ಬ್ರಿಟೀಷರೊಂದಿಗೆ ಒಳ್ಳೆಯ ಸಂಬಂಧವನ್ನಿಟ್ಟುಕೊಂಡಿದ್ದರು. ಅವರ ಕಾಲಾವಧಿಯಲ್ಲಿ ಸಂಪೂರ್ಣವಾಗಿ ಹ್ಯಾರಡಾದ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು.

ಆದಿರಾಜಪ್ಪನವರ ಪೂರ್ವಜರು ಬ್ರಿಟೀಷರಿಗೆ ತೆರಿಗೆಗಳನ್ನು ಕಟ್ಟುವುದರ ಮೂಲಕ ಗ್ರಾಮದ ಬಹುತೇಕ ಜಮೀನನ್ನು ಪಡೆದುಕೊಂಡರು. ಮೊಟ್ಟ ಮೊದಲು ಗ್ರಾಮದಲ್ಲಿ ರಾಜಕೀಯವಾಗಿ ಪ್ರವೇಶ ಮಾಡಿದವರು ಜೈನ ಧಾರ್ಮಿಯರು ಎಂದು ಹೇಳಬಹುದು. ಇವರು ತಮ್ಮದೇ ಆದ ರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಂಡು ಹ್ಯಾರಡಾ ಗ್ರಾಮದಲ್ಲಿ ಸಂದೀರ್ಘವಾಗಿ ಆಡಳಿತವನ್ನು ನಡೆಸಿದರು. ತದನಂತರದಲ್ಲಿ ಇತರೆ ಧರ್ಮಿಯರಾದ ಲಿಂಗಾಯಿತರು ಹ್ಯಾರಡಾಕ್ಕೆ ವಲಸೆ ಬಂದರು. ಇವರು ಬರುವುದಕ್ಕೆ ಮೂಲ ಕಾರಣ ಹ್ಯಾರಡಾ ಗ್ರಾಮದಲ್ಲಿ ಕೃಷಿಗೆ ಯೋಗ್ಯವಾದ ಅಪಾರ ಭೂಮಿ ಇರುವುದರಿಂದ ವಲಸೆ ಬಂದರು. ಬಹುತೇಕ ಈ ಸಮುದಾಯದವರು ಪಕ್ಕದ ಗ್ರಾಮವಾದ ಹರ್ವಿಯಿಂದ ವಲಸೆ ಬಂದವರಾಗಿದ್ದು ಈಗಲೂ ಕೂಡ ಹರ್ವಿ ಜನಾಂಗದ ಮನೆತನವನ್ನು ಈ ಗ್ರಾಮದಲ್ಲಿ ಕಾಣಬಹುದಾಗಿದೆ. ಇವರು ಸಹ ಹಂತ-ಹಂತವಾಗಿ ಕೃಷಿಯನ್ನು ಮಾಡುತ್ತಾ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಂಡರು.

ನಾವು ಭಾರತದ ಬಹುತೇಕ ಗ್ರಾಮದ ಇತಿಹಾಸವನ್ನು ಸಿಂಹಾವಲೋಕನ ಮಾಡಿದಾಗ ಕಂಡುಬರುವ ಪ್ರಮುಖ ಅಂಶಗಳೆಂದರೆ ಗ್ರಾಮದ ಮೂಲ ಪುರುಷರು ಹಿಂದುಳಿದ ವರ್ಗದವರಾಗಿದ್ದು, ಇವರೇ ಬಹು ಸಂಖ್ಯಾತರಾಗಿದ್ದರು. ಇವರು ರಾಜಕೀಯದ ಯಾವುದೇ ಸ್ಥಾನಗಳಲ್ಲಿ ಇರುತ್ತಿರಲಿಲ್ಲ. ಆದರೆ ಬೆರಳೆಣಿಕೆಯಷ್ಟು ಉನ್ನತ ವರ್ಗದವರಿದ್ದು ಇವರು ಸಂಪೂರ್ಣವಾಗಿ ಗ್ರಾಮದ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಹ್ಯಾರಡ ಗ್ರಾಮವು ಸಹ ಅಂದಿನ ಕಾಲದಲ್ಲಿ ಕುರುಬ, ನಾಯಕ, ಗೊಲ್ಲ, ಮಡಿವಾಳ, ಕಮ್ಮಾರ, ಮಾದಿಗ, ಬಡಿಗ ಇವರು ಈ ಗ್ರಾಮದ ಮೂಲ ಪುರುಷರಾಗಿದ್ದರು. ಇವರಿಗೆ ರಾಜಕೀಯದ ಪ್ರವೇಶ ನಿಷಿದ್ಧವಾಗಿತ್ತು. ತದನಂತರದಲ್ಲಿ ನಾಗರಿಕತೆಯ ಪ್ರಭಾವ ಹೆಚ್ಚಿದಂತೆಲ್ಲಾ ಜನರು ಸುಶಿಕ್ಷಿತರಾಗುತ್ತಾ ಬಂದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳೂ ಸಹ ರಾಜಕೀಯದಲ್ಲಿ ಬಂದರು.

ಗ್ರಾಮವು ಮೊದಲಿಂದಲೂ ಉಚ್ಚ ವರ್ಗದವರ ಹಿಡಿತದಲ್ಲಿತ್ತು. ಗ್ರಾಮದ ಸಂಪೂರ್ಣ ಆಡಳಿತವನ್ನು ಅವರೇ ನಿರ್ವಹಿಸುತ್ತಿದ್ದರು. ಮುರಾರಿ ಆದಿ ರಾಜಪ್ಪನವರು ಅಸ್ತಂಗತವಾದ ನಂತರ ಮೊಟ್ಟಮೊದಲಿಗೆ ಗ್ರಾಮದ ಅಧಿಕಾರದ ಚುಕ್ಕಾಣಿ ಹಿಡಿದದ್ದು ಹಿಂದುಳಿದ ವರ್ಗದವರಾದ ಬಾವಿ ನಿಂಗಪ್ಪನವರು. ಇವರು ಅಂದಿನ ಕಾಲಾವಧಿಯಲ್ಲಿ ನೇರವಾಗಿ ಮದ್ರಾಸ್‌ನಿಂದ ಕಬ್ಬಿಣದ ವ್ಯವಹಾರವನ್ನು ನಡೆಸುತ್ತಿದ್ದರು. ರಾಜ್ಯದ ಬಹುತೇಕ ಮೂಲೆ-ಮೂಲೆಗಳಲ್ಲಿ ಕಬ್ಬಿಣದ ವ್ಯವಹಾರವನ್ನು ನಡೆಸುತ್ತಿದ್ದರು. ಹೀಗೆ ಆರ್ಥಿಕವಾಗಿ ಅತ್ಯಂತ ಬಲಿಷ್ಠವಾಗುತ್ತಾ ಬಹುತೇಕ ರಾಜಕೀಯದ ಚುಕ್ಕಾಣಿಯನ್ನು ಹಿಡಿದಿದ್ದರು. ಇವರು ಹಿಂದುಳಿದ ಕುಟುಂಬದಿಂದ ಬಂದಿದ್ದವರಾಗಿದ್ದರೂ ಸಹ ಬಹುತೇಕವಾಗಿ ಜೈನ ಧರ್ಮಿಯರ ಆಚಾರ-ವಿಚಾರ, ಮನೋಭಾವ ಇವರಲ್ಲಿ ಎರಕ ಹೊಯ್ದಂತಿತ್ತು. ಮುರಾರಿ ಆದಿರಾಜಪ್ಪನವರ ರಾಜಕೀಯ ಪಡಸಾಲೆಯಲ್ಲಿ ಬಾವಿ ನಿಂಗಪ್ಪನವರು ಕಾಣಿಸಿಕೊಂಡಿದ್ದರು. ಆದ್ದರಿಂದ ಅವರ ರಾಜಕೀಯ ಇಚ್ಛಾಶಕ್ತಿ ಇವರಲ್ಲಿ ವರ್ಗಾವಣೆಯಾದಂತಿದೆ.

ಬಾವಿ ನಿಂಗಪ್ಪನವರು ಕಾಲವಾದ ನಂತರ ರಾಜಕೀಯ ಪ್ರವೇಶ ಮಾಡಿದ ಪ್ರಭಾವಿ ವ್ಯಕ್ತಿಗಳು ಎಂದರೆ ಲಕ್ಕಪ್ಪನರ ಸಿದ್ದಪ್ಪ, ಬನ್ನಿಮಟ್ಟಿ ಬಿದ್ದಪ್ಪ, ಕೊರ್ಲಹಳ್ಳಿ ಭೂಪಾಲಪ್ಪ ಮತ್ತು ಆನಿಶೆಟ್ರ ವೀರಪ್ಪನವರು. ೧೯೬೦ ರ ದಶಕದಲ್ಲಿ ಲಕ್ಕಪ್ಪನರ ಸಿದ್ದಪ್ಪನವರು VILLAGE PANCHAYAT CHAIRMEN ಆಗಿ ರಾಜಕೀಯ ಪ್ರವೇಶವನ್ನು ಕಂಡರು. ಈ ಕಾಲಾವಧಿಯಲ್ಲಿ ನಡೆದಂತಹ ಜಾತಿ ಸಂಘರ್ಷಗಳು ಮತ್ತೆ ಯಾವ ಕಾಲಾವಧಿಯಲ್ಲಿ ನಡೆದಿಲ್ಲ. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಗ್ರಾಮ ಪಂಚಾಯತಿಯ ಸದಸ್ಯರ ಆಯ್ಕೆಯಲ್ಲಿ ಕೈ ಎತ್ತುವುದರ ಮೂಲಕ ಆಯ್ಕೆಯಾಗುತ್ತಿದ್ದರು. ಆಗ ಸಮುದಾಯ ಸಂಘರ್ಷಗಳು ಹೆಚ್ಚಿದವು. ೧೯೭೮ ರಲ್ಲಿ ಹಿಂದುಳಿದ ವರ್ಗದವರಿಗೆ ಹಾಗೂ ಮೇಲ್ವರ್ಗದವರಿಗೆ ಆದ ಸಮುದಾಯಗಳ ಸಂಘರ್ಷವನ್ನು ನಾವಿಲ್ಲಿ ನೋಡಬಹುದು. ಇದರಲ್ಲಿ ಹಲವಾರು ದೊಂಬಿ, ಗಲಾಟೆ ನಡೆದು ಕೋರ್ಟಿನ ಮೆಟ್ಟಿಲೇರಿದ ಸಂಗತಿಗಳನ್ನು ಕಾಣಬಹುದಾಗಿದೆ. ಈ ಸಮುದಾಯ ಸಂಘರ್ಷಗಳು ನಡೆದ ನಂತರ ಹಿಂದುಳಿದ ವರ್ಗಗಳಲ್ಲಿ ಒಂದು ಜಾಗೃತಿ ಉದಯವಾಯಿತು. ನಮ್ಮ ಹಕ್ಕುಗಳು ಮತ್ತು ಬಾದ್ಯತೆಗಳ ಬಗ್ಗೆ ನಾವೆಲ್ಲಾ ಒಂದಾಗಬೇಕೆಂಬ ತುಡಿತ ಇವರಲ್ಲಿ ಕಾಣಿಸಿಕೊಂಡಿತು. ನಾವು ನಮ್ಮವರು ಎಂಬ ಮನೋಭಾವ ಇವರಲ್ಲಿ ಮೂಡತೊಡಗಿತು. ವಾಲ್ಮೀಕಿ ಮತ್ತು ಕುರುಬ ಸಮುದಾಯಗಳಲ್ಲಿ ಸಣ್ಣ ಪುಟ್ಟ ವೈಷಮ್ಯಗಳು ಇದ್ದರೂ ಸಹ ಅವುಗಳು ಕ್ಷಣಿಕವಾಗಿದ್ದವು. ಅಂತಿಮವಾಗಿ ವಾಲ್ಮೀಕಿ ಮತ್ತು ಕುರುಬ ಸಮುದಾಯದವರು ರಾಜಕೀಯ ಸ್ಥಿರತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಯಶಸ್ವಿಯಾದರು.

ಬಹುತೇಕ ಗ್ರಾಮಗಳ ಉಗಮದಲ್ಲಿ ತಮ್ಮ ಮೂಲ ವೃತ್ತಿಯಲ್ಲಿ ನಿರತರಾಗಿದ್ದು, ತದ ನಂತರದಲ್ಲಿ ಹಂತ–ಹಂತವಾಗಿ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸುಧಾರಣೆಗೊಳ್ಳುತ್ತಾ ಹಲವಾರು ಸಂಘರ್ಷಗಳ ನಡುವೆಯೂ ರಾಜಕೀಯ ಐಕ್ಯತೆಯನ್ನು ಸಾಧಿಸಿಕೊಂಡು ಬರುವುದನ್ನು ನೋಡಬಹುದಾಗಿದೆ. ಹ್ಯಾರಡ ಗ್ರಾಮವು ಸಹ ಹಲವಾರು ಸಂಘರ್ಷದ ನಡುವೆಯೂ ರಾಜಕೀಯ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ೧೯೭೦ ರ ದಶಕದ ನಂತರದಲ್ಲಿ ರಾಜಕೀಯ ಐಕ್ಯತೆಯನ್ನು ಸಾಧಿಸುವಲ್ಲಿ ಈ ಗ್ರಾಮವು ಯಶಸ್ವಿಯಾಯಿತು. ೧೯೭೦ ರ ದಶಕದಲ್ಲಿ ಗ್ರಾಮದ ಹಲವಾರು ಜನರು ಅಲ್ಪ ಸ್ವಲ್ಪ ಅಕ್ಷರಸ್ಥರಾಗುತ್ತಾ ಬಂದರು. ಇದಕ್ಕೆ ಪ್ರಮುಖವಾದ ಕಾರಣ ಈ ಗ್ರಾಮಕ್ಕೆ ೧೯೧೩ ರಲ್ಲಿ ಶಾಲೆಯು ಪ್ರಾರಂಭಗೊಂಡು ಅಕ್ಷರದ ಬೀಜವನ್ನು ಬಿತ್ತುತ್ತಾ ಬಂದಿತ್ತು. ೧೯೭೦ ರ ದಶಕದ ವೇಳೆಗೆ ಹೆಮ್ಮರವಾಗುತ್ತಾ ಬೆಳದು ಬಂದಿತು. ಒಂದು ಗ್ರಾಮವು ತನ್ನೆಲ್ಲಾ ಅಭಿವೃದ್ಧಿಯನ್ನು ಕಾಣಬೇಕಾದರೆ ಸ್ಥಿರ ಸರ್ಕಾರವು ಅತ್ಯುತ್ತಮ ಆಡಳಿತವನ್ನು ಕೊಟ್ಟಾಗ ಮಾತ್ರ ಎಂದು ಹೇಳಬಹುದು.

ತದನಂತರದಲ್ಲಿ ರಾಜಕೀಯ ಸ್ಥಿರತೆಯನ್ನು ಕಾಪಾಡಿಕೊಂಡು ಬಂದವರು ಲಕ್ಕಪ್ಪನರ ಸಿದ್ದಪ್ಪ, ಬನ್ನಿಮಟ್ಟಿ ಬಿದ್ದಪ್ಪ, ಆನಿಶೆಟ್ರ ವೀರಪ್ಪನವರು. ಆನಿಶೆಟ್ರ ವೀರಪ್ಪನವರ ಕಾಲಾವಧಿಯಲ್ಲಿಯೇ ಗ್ರಾಮಕ್ಕೊಂದು ಸುಸಜ್ಜಿತವಾದ ಶಾಲಾ ಕಟ್ಟಡ ನಿರ್ಮಾಣವಾಯಿತು. ಪ್ರಸಿದ್ದ ಶಿಕ್ಷಣವೇತನ ಪ್ರಕಾರ "ಒಂದು ದೇವಾಲಯವನ್ನು ನಿರ್ಮಾಣ ಮಾಡಿದರೆ ಸಾವಿರಾರು ಬಿಕ್ಷುಕರು ಹುಟ್ಟುತ್ತಾರೆ. ಆದರೆ ಒಂದು ಶಾಲೆ, ಗ್ರಂಥಾಲಯ ತೆರೆದರೆ ಸಾವಿರಾರು ವಿದ್ವಾಂಸರು ಹುಟ್ಟುತ್ತಾರೆ." ಎಂಬುದು ಈ

ಗ್ರಾಮಕ್ಕೆ ಅಕ್ಷರಶಃ ಸರಿ ಹೊಂದುತ್ತದೆ. ಅಂದಿನ VILLAGE PANCHAYAT CHAIRMEN ಆದ ಆನಿಶೆಟ್ರ ವೀರಪ್ಪನವರು ರಾಜಕೀಯ ಐಕ್ಯತೆಯನ್ನು ಕಾಪಾಡುವುದರ ಜೊತೆ ಜೊತೆಗೆ SCHOOL BETERMENT COMMITEE ಅಧ್ಯಕ್ಷರಾಗಿ ಶಾಲೆಗೆ ಬೇಕಾದ ಮೂಲಭೂತ ಪರಿಕರಗಳನ್ನು ಒದಗಿಸುವುದರ ಮೂಲಕ ಶಿಕ್ಷಣ ಪ್ರಸಾರಕ್ಕೆ ಶ್ರಮಿಸಿದರು.

೧೯೮೦ರ ದಶಕದ ನಂತರ ಹೊಸ ಪೀಳಿಗೆಯ ಸುಣಗಾರ ಹನುಮಂತಪ್ಪನವರು ವಾಲ್ಮೀಕಿ ಸಮುದಾಯದಿಂದ ಪ್ರಪ್ರಥಮವಾಗಿ ಪಂಚಾಯತಿಯ ರಾಜಕೀಯ ಪ್ರವೇಶವನ್ನು ಮಾಡಿದರು. ಲಕ್ಕಪ್ನರ ಡಿಳ್ಳೆಪ್ಪ, ಉಚ್ಚಂಗಿ ಕೆಂಚಪ್ಪನವರು ರಾಜಕೀಯ ಪಡಸಾಲೆಯಲ್ಲಿ ಕಾಣಿಸಿಕೊಂಡರು. ತದನಂತರದಲ್ಲಿ ಬೇವಿನಕಟ್ಟಿ ಬಸವರಾಜಪ್ಪ, ಬೇವಿನಕಟ್ಟಿ ರಾಮಪ್ಪ ರಾಜಕೀಯ ಸ್ಥರಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡರು. ಲಕ್ಕಪ್ನರ ಡಿಳ್ಯಪ್ಪ ಅವರು ತಾಲೂಕು ಅಭಿವೃದ್ಧಿ ಬೊರ್ಡ್‌ನ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ಹಿಂದುಳಿದ ವರ್ಗಕ್ಕೊಂದು ಪ್ರಾಧ್ಯಾನ್ಯತೆ ದೊರೆಯಿತು. ಇದು ಅಂದಿನ ಕಾಲದಲ್ಲಿ ರಾಜಕೀಯ ಸಂಚಲನವನ್ನುಂಟು ಮಾಡಿತು. ನಂತರದಲ್ಲಿ ಮಂಡಲಪಂಚಾಯಿತಿ ಉದಯವಾಯಿತು ಮೊಟ್ಟಮೊದಲ ಬಾರಿಗೆ ಹ್ಯಾರಡಾದಿಂದ ಐದು ಜನ ಸದಸ್ಯರು ಆಯ್ಕೆಯಾದರು. ಅದರಲ್ಲಿ ಉಚ್ಚಂಗಿ ಕೆಚ್ಚಪ್ಪ, ಬೇವಿನಕಟ್ಟಿ ರಾಮಪ್ಪ, ಮಾದಿಗರ ಮಾಯಪ್ಪ, ಗದುಗಿನ ಯಲ್ಲಮ್ಮ ಹಾಗೂ ಪಿಟ್ಟೇರ ಗಂಗಮ್ಮ ಆಯ್ಕೆಯಾದರು. ಈ ಮಂಡಲ ಪಂಚಾಯಿತಿಗೆ ಪ್ರಪ್ರಥಮವಾಗಿ ಉಚ್ಚಂಗಿ ಕೆಂಚಪ್ಪ ಅಧ್ಯಕ್ಷರಾದರು. ತದನಂತರದಲ್ಲಿ ಮಂಡಲ ಪಂಚಾಯತಿಯು ರದ್ದಾಗಿ ಗ್ರಾಮ ಪಂಚಾಯತಿಗಳು ಉದಯವಾದವು. ಮೊಟ್ಟಮೊದಲಾಗಿ ೧೯೯೪-೨೦೦೪ ರ ವರೆಗೆ ಉಚ್ಚಂಗಿ ಕೆಂಚಪ್ಪನವರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗುವ ಮೂಲಕ ಸುದೀರ್ಘವಾಗಿ ರಾಜಕೀಯ ಪಡಸಾಲೆಯಲ್ಲಿ ಕಾಣಿಸಿಕೊಂಡರು. ತದನಂತರದಲ್ಲಿ ಪ್ರಪ್ರಥವಾಗಿ ಉಚ್ಚಂಗಿ ಕಾವ್ಯ ಅವರು ತಾಲೂಕ ಪಂಚಾಯತಿಯ ಅಧ್ಯಕ್ಷರಾಗುವುದರ ಮೂಲಕ ಮಹಿಳಾ ಪ್ರತಿನಿಧಿಯನ್ನು ಹ್ಯಾರಡಾ ಗ್ರಾಮವು ಕೊಡುಗೆಯಾಗಿ ಕೊಟ್ಟಿತು. ತದನಂತರದಲ್ಲಿ ತಾಲ್ಲೂಕು ಪಂಚಾಯತಿಯ ಸದ್ಯರಾಗಿ ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಹರ್ವಿ ಪ್ರಕಾಶ್ ಅವರು ಹ್ಯಾರಡಾ ಗ್ರಾಮದ ರಾಜಕೀಯ ಸ್ಥಿರತೆ ಮತ್ತು ಬದ್ದತೆಯನ್ನು ತಾಲೂಕು ಮಟ್ಟಕ್ಕೆ ಕೊಂಡೊಯ್ಯುವುದರಲ್ಲಿ ಸಫಲರಾದರು ಎಂದು ಹೇಳಬಹುದು. ಇತ್ತೀಚಿಗೆ ತಾಲೂಕು ಪಂಚಾಯತಿ ಸದಸ್ಯರಾಗಿ ಆಯ್ಕೆಯಾದ ಚುಚ್ಚೇಗೇರಿ ಪಕ್ಕೀರಮ್ಮ ಅವರು ಹ್ಯಾರಡಾದ ಮಹಿಳಾ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗ್ರಾಮ ಪಂಚಾಯತಿ ಉದಯವಾದ ನಂತರ ಆಳ್ವಿಕೆ ನಡೆಸಿದ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳು

ಕ್ರಸಂ.	ಹೆಸರು	ವರ್ಷ	ಜಾತಿ
೧	ಉಚ್ಚಂಗಿ ಕೆಂಚಪ್ಪ	೧೯೯೪-೨೦೦೦	ಕುರುಬ
೨	ಉಚ್ಚಂಗಿ ಕೆಂಚಪ್ಪ	೨೦೦೦-೨೦೦೨	ಕುರುಬ
೩	ಶಿದ್ಲಿಂಗಪ್ಪ ಬಣಕಾರ	೨೦೦೨-೨೦೦೩	ಲಿಂಗಾಯತ

೪	ದೇಗೇರಿ ಗಂಗಮ್ಮ	೨೦೦೩-೨೦೦೪	ಎಸ್.ಸಿ
೫	ಗೋಣೆಮ್ಮನವರ ಗಂಗಮ್ಮ ಗಂಡ ಚಂದ್ರಪ್ಪ	೨೦೦೪-೨೦೦೬	ಎಸ್.ಸಿ.
೬	ಅಡವಿ ಲೋಕಪ್ಪ	೨೦೦೬-೨೦೧೦	ಕುರುಬ
೭	ಮಲ್ಲಪ್ಪ ಅಂಗಡಿ	೨೦೧೦-೨೦೧೩	ಕುರುಬ
೮	ಸಣ್ಣೀಲಪ್ಪನರ ರತ್ನಮ್ಮ	೨೦೧೩-೨೦೧೪	ಕುರುಬ
೯	ಬರಡಿ ನಾಗಮ್ಮ	೨೦೧೪-೨೦೧೫	ಕುರುಬ
೧೦	ಪಡುಗದ ಕನ್ನಮ್ಮ	೨೦೧೫-೨೦೧೬	ಕುರುಬ
೧೧	ಹೊನ್ನಮ್ಮ ಕುದಿರಾಳ	೨೦೧೬-೨೦೧೮	ಕುರುಬ
೧೨	ಭೀಮಕ್ಕನವರ ದುರುಗಮ್ಮ	೨೦೧೮-೨೦೨೦	ಎಸ್.ಸಿ.

ಪ್ರಸ್ತುತ ಹ್ಯಾರಡ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರು ಮತ್ತು ಸದಸ್ಯರ ಹೆಸರುಗಳು

ಕ್ರಸಂ.	ಹೆಸರು	ವಾರ್ಡ್ ಹೆಸರು	ಲಿಂಗ	ಆಯ್ಕೆಯಾದ ವಿಧ	ಪದನಾಮ
೧	ಕುದರಿಹಾಳ್ ಹೊನ್ನಮ್ಮ ಗಂಡ ಕುದರಿಹಾಳ್ ನಿಂಗಪ್ಪ	೦೧- ಹ್ಯಾರಡ	ಮಹಿಳೆ	ಇತರೆ	ಸದಸ್ಯರು
೨	ಬಾಹುಬಲಿ ಕೊರ್ಲಹಳ್ಳಿ ತಂದೆ ಅನಂತಪ್ಪ	೦೪- ಹ್ಯಾರಡ	ಪುರುಷ	ಇತರೆ	ಸದಸ್ಯರು
೩	ಬಣಕಾರ ಸಂಗಪ್ಪ ತಂದೆ ಸಿದ್ದಲಿಂಗಪ್ಪ	೦೨- ಹ್ಯಾರಡ	ಪುರುಷ	ಇತರೆ	ಸದಸ್ಯರು
೪	ಪಾರ್ವತೆವ್ವ ಬಾರ್ಕಿ ಗಂಡ ನಿಂಗಪ್ಪ	೦೧- ಹ್ಯಾರಡ	ಮಹಿಳೆ	ಸಾಮಾನ್ಯ	ಸದಸ್ಯರು
೫	ಬೆಣ್ಣಿಹಳ್ಳಿ ಪ್ರಕಾಶ ತಂದೆ ಶೇಖಪ್ಪ	೦೪- ಹ್ಯಾರಡ	ಪುರುಷ	ಸಾಮಾನ್ಯ	ಉಪಾಧ್ಯಕ್ಷರು
೬	ಮಹೇಶ್ ಎಲ್ ತಂದೆ ಡಿಳ್ಯಪ್ಪ	೦೧- ಹ್ಯಾರಡ	ಪುರುಷ	ಸಾಮಾನ್ಯ	ಸದಸ್ಯರು
೭	ಕನ್ನಮ್ಮ ಪಡುಗದ ಗಂಡ ಕುರುವತ್ತೆಪ್ಪ	೦೪- ಹ್ಯಾರಡ	ಮಹಿಳೆ	ಇತರೆ	ಸದಸ್ಯರು
೮	ಬರಡಿ ನಾಗರಾಜ ತಂದೆ ಮಲ್ಲಪ್ಪ	೦೩- ಹ್ಯಾರಡ	ಪುರುಷ	ಇತರೆ	ಸದಸ್ಯರು
೯	ಚಿಗರಿ ಗಿರಿಜಾ ಗಂಡ ಮಹೇಶಪ್ಪ	೦೨- ಹ್ಯಾರಡ	ಮಹಿಳೆ	ಎಸ್.ಟಿ	ಸದಸ್ಯರು

೧೦	ಭೀಮಕ್ಕನವರ ದುರುಗವ್ವ ಗಂಡ ಹಿರಿಯಪ್ಪ	೦೩-	ಹ್ಯಾರಡ	ಮಹಿಳೆ	ಎಸ್.ಸಿ	ಅಧ್ಯಕ್ಷರು
೧೧	ಬೇವಿನಕಟ್ಟಿ ಚಿನ್ನಮ್ಮ ಗಂಡ ಬಸವರಾಜಪ್ಪ	೦೧-	ಹ್ಯಾರಡ	ಮಹಿಳೆ	ಸಾಮಾನ್ಯ	ಸದಸ್ಯರು

ರಾಜಕೀಯ ವ್ಯಕ್ತಿಗಳ ದೇಣಿಗೆ : ಹ್ಯಾರಡಾ ಗ್ರಾಮದಲ್ಲಿರುವ ಜನಪದರು ಮೊದಲಿನಿಂದಲೂ ಅಪಾರವಾದ ದೇಣಿಗೆಯನ್ನು ಕೊಟ್ಟಿರುವುದನ್ನು ನೋಡಬಹುದು. ಅದರಲ್ಲೂ ವಿಶೇಷವಾಗಿ ರಾಜಕೀಯ ವ್ಯಕ್ತಿಗಳು ಅಪಾರವಾದ ದೇಣಿಗೆಯನ್ನು ಕೊಟ್ಟಿರುವುದನ್ನು ನಾವಿಲ್ಲಿ ಕಾಣಬಹುದು. ಗ್ರಾಮದ ವಿಶೇಷ ಸಂದರ್ಭಗಳಾದ ಜಾತ್ರೆ, ಹಬ್ಬ-ಹರಿದಿನಗಳು, ಪರುವು, ಕಾರ್ತಿಕೋತ್ಸವ, ಗ್ರಾಮೀಣ ಕ್ರೀಡಾಕೂಟಗಳು ಜರುಗುವ ಸಂದರ್ಭಗಳಲ್ಲಿ, ಶಾಲಾ ವಾರ್ಷಿಕೋತ್ಸವ, ಶಾಲಾ ಕ್ರೀಡಾಕೂಟದ ಸಂದರ್ಭದಲ್ಲಿ ನಗದು ಹಾಗೂ ವಸ್ತುಗಳ ರೂಪದಲ್ಲಿ ಅಪಾರವಾದ ದೇಣಿಗೆಯನ್ನು ಕೊಡುವರು. ಸರ್ಕಾರಿ ಶಾಲೆಗಳಲ್ಲಿ ಹಲವಾರು ವ್ಯಕ್ತಿಗಳು ಮುದ್ದತಿ ಠೇವಣಿಗಳನ್ನು ಇಡುವುದರ ಮೂಲಕ ಮಕ್ಕಳ ಕಲಿಕೆಗೆ ಪೂರಕ ವಾತಾವರಣವನ್ನು ಸೃಷ್ಟಿಸಿದ್ದಾರೆ. ಗ್ರಾಮದಲ್ಲಿ ವಿಶೇಷವಾಗಿ ಜರುಗುವ ಪುರಾಣ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಅನ್ನ ಸಂತರ್ಪಣೆ ಮಾಡುವುದನ್ನು ಕಾಣಬಹುದು. ಈ ರೀತಿಯಾಗಿ ದೇಣಿಗೆಯನ್ನು ಕೊಡುವುದರ ಮೂಲಕ ಗ್ರಾಮದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಹೀಗೆ ನಾವು ಸಮಾಜಕ್ಕಾಗಿ, ಸಮಾಜ ನಮಗೋಸ್ಕರ ಎಂಬ ಸಹಕಾರ ತತ್ವದಡಿ ಒಬ್ಬರಿಗೊಬ್ಬರು ಕೊಡು-ಕೊಳ್ಳುವಿಕೆಯ ಗುಣವನ್ನು ವಿಶೇಷವಾಗಿ ಅರಿಯಬಹುದಾಗಿದೆ. ತಮ್ಮ ರಾಜಕೀಯದ ಬಿಡುವಿಲ್ಲದ ಸಮಯದಲ್ಲಿಯೂ ಸಹ ಎಲ್ಲರೂ ಪಕ್ಷಬೇಧ ಮರೆತು ಸಾಂಘಿಕವಾಗಿ ಕೆಲಸ ಮಾಡುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಎಲ್ಲಾ ಸಮುದಾಯದ ರಾಜಕೀಯ ನಾಯಕರೂ ಎಲ್ಲಾ ಸಮುದಾಯದ ಧಾರ್ಮಿಕ ಆಚರಣೆಗಳಿಗೆ ತಮ್ಮ ತಮ್ಮ ಶಕ್ತ್ಯಾನುಸಾರ ದೇಣಿಗೆಯನ್ನು ಕೊಟ್ಟಿರುವುದನ್ನು ಗಮನಿಸಬಹುದು. ಇದರ ಮುಖೇನ ಗ್ರಾಮೀಣ ಬದುಕಿನ ಸಹಕಾರ ತತ್ವವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಇದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಹ್ಯಾರಡಾದ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳು : ಹ್ಯಾರಡಾ ಗ್ರಾಮದಲ್ಲಿ ವಿವಿಧ ಪಕ್ಷಗಳ ವಿವಿಧ ರಾಜಕೀಯ ಮುಖಂಡರುಗಳನ್ನು ಕಾಣಬಹುದು. ಹರ್ವಿ ಪ್ರಕಾಶ್, ಬರಡಿ ನಾಗರಾಜ, ಕೊರ್ಲಹಳ್ಳಿ ಬಾಹುಬಲಿ, ಬಣಕಾರ ಸಂಗಪ್ಪ, ಚಿಗರಿ ಮಹೇಶ, ಭೀಮಕ್ಕನವರ ಬಸವರಾಜ, ಬೇವಿನಕಟ್ಟಿ ಚಿನ್ನಮ್ಮ, ಕುದರಿಹಾಳ್ ಹೊನ್ನಮ್ಮ, ಚುಚ್ಚಿಗೇರಿ ಪಕ್ಕೀರಮ್ಮ, ವಜ್ಜೀರಪ್ಪನ ಪಕ್ಕೀರಪ್ಪ, ಬೇವಿನಕಟ್ಟಿ ರಾಮಣ್ಣ, ಸಣ್ಣೀಲಪ್ಪನ ಹನುಮಂತಪ್ಪ, ಕುಂಚೂರು ಅಂಜಿನಪ್ಪ, ಕುಂಚೂರು ಸಿದ್ದಪ್ಪ, ಅಂಗಡಿ ಮಲ್ಲಪ್ಪ, ಗೋಣೆಮ್ಮನವರ ಚಂದ್ರಪ್ಪ, ಹರ್ವಿ ಸಿದ್ದಪ್ಪ, ಪುಗಸೆಟ್ಟಿ ಹನುಮಂತಪ್ಪ, ಹರ್ವಿ ನಾಗರಾಜ, ಕಮ್ಮಾರ ತೋಟಪ್ಪ, ಮುದ್ದಿ ನಿಂಗಪ್ಪ, ಕುಂಬಾರ ಸಂಗಪ್ಪ, ಕುಂಬಾರ ಚನ್ನಪ್ಪ, ಬಣಕಾರ ಸಿದ್ದಪ್ಪ, ಸುಣಗಾರ ಬಸವಕುಮಾರ, ನಾಯಕರ ಕೊಟ್ರೇಶಪ್ಪ, ಹಡಗಲಿ ಬಸವರಾಜ, ಮೈಲಾರ ಸಂಗಪ್ಪ, ಹರ್ವಿ ಶಿವರುದ್ರಪ್ಪ, ಕುರುವತ್ತಿ ಬಸಪ್ಪ ಇತ್ಯಾದಿ ವ್ಯಕ್ತಿಗಳನ್ನು ಹೆಸರಿಸಬಹುದು.

ಪ್ರಸ್ತುತ ಹ್ಯಾರಡಾ ಗ್ರಾಮ ಪಂಚಾಯತಿಯು ಕಾಂಗ್ರೆಸ್ ಪಕ್ಷದ ಬಹುಮತದೊಂದಿಗೆ ಆಡಳಿತವನ್ನು ನಡೆಸುತ್ತಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಇತರೆ ಪಕ್ಷದ ಸದಸ್ಯರು ಬಹುಮತ ಪಕ್ಷದ ಸದಸ್ಯರಿಗೆ ಎಲ್ಲಾ ರೀತಿಯ ಸಲಹೆ, ಸಹಕಾರವನ್ನು ಕೊಡುತ್ತಿದ್ದಾರೆ. ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಅನ್ಯೋನ್ಯವಾಗಿದ್ದು, ಗ್ರಾಮದ ಅಭಿವೃದ್ದಿ ಕೆಲಸಗಳನ್ನು ಎಲ್ಲರೂ ಒಟ್ಟಿಗೆ ಕೂಡಿಕೊಂಡು ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿಯ ಯಾವೊಬ್ಬ ಸದಸ್ಯರೂ ಜಗಳ, ಕಚ್ಚಾಟವನ್ನು ಹೊಂದದೇ ಪರಸ್ಪರ ಅನ್ಯೋನ್ಯವಾಗಿದ್ದಾರೆ.

ಹ್ಯಾರಡಾ ಗ್ರಾಮದ ಚುನಾವಣಾ ಪ್ರಕ್ರಿಯೆ :ಗ್ರಾಮ ಪಂಚಾಯತಿಯ ಚುನಾವಣೆಗಳು ಸರ್ಕಾರದ ಸಾಮಾನ್ಯ ಹಾಗೂ ವಿಶೇಷ ಆದೇಶಗಳಿಗೆ ಒಳಪಟ್ಟು, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಚುನಾವಣಾ ಅಧಿಸೂಚನೆಯನ್ನು ಘೋಷಿಸುವರು. ಈ ಸ್ಥಳೀಯ ಚುನಾವಣೆಗಳು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳ ಅಡಿಯಲ್ಲಿ ನಡೆಯದೇ ಮುಕ್ತ ಚಿಹ್ನೆಗಳ ಅಡಿಯಲ್ಲಿ ಚುನಾವಣೆಗಳು ನಡೆಯುತ್ತವೆ. ಚುನಾವಣೆಗೆ ಸ್ಪರ್ಧಿಸಿದ ವ್ಯಕ್ತಿಯು ಚುನಾವಣಾ ಆಯೋಗ ನೀಡಿದ ಚಿಹ್ನೆಯಡಿಯಲ್ಲಿ ಚುನಾವಣೆಯನ್ನು ಎದುರಿಸಬೇಕು. ಚುನಾವಣೆಗೆ ನಿಲ್ಲುವ ವ್ಯಕ್ತಿಯು ಯಾವ ವಾರ್ಡನಲ್ಲಿ ಸ್ಪರ್ದೆಗೆ ನಿಲ್ಲುತ್ತಾನೆಯೋ, ಆ ವಾರ್ಡ್‌ನ ಮತದಾರ ಪಟ್ಟಿಯಲ್ಲಿ ಹೆಸರಿರಬೇಕು. ಸರ್ಕಾರದ ನಿಯಮಾವಳಿ ಹಾಗೂ ಮೀಸಲಾತಿಗೆ ಅನುಗುಣವಾಗಿ ಚುನಾವಣೆಯನ್ನು ಎದುರಿಸಬೇಕು. ಆ ವಾರ್ಡ್‌ನ ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗಳು ಅದೇ ವಾರ್ಡಿನಲ್ಲಿ ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹಾಕುವ ಹಕ್ಕನ್ನು ಹೊಂದಿರುತ್ತಾನೆ. ಒಬ್ಬ ವ್ಯಕ್ತಿಯು ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡುವಂತಿಲ್ಲ. ಇಂತಹ ಚುನಾವಣೆಗಳು ಮೊದಲಿಗೆ ಕೈ ಎತ್ತುವ ಮೂಲಕ ನಂತರದಲ್ಲಿ ಮತ ಪತ್ರ ಬಳಸುವುದರ ಮೂಲಕ, ತದನಂತರದಲ್ಲಿ ಇತ್ತೀಚಿಗೆ ಮತದಾನ ಯಂತ್ರಗಳನ್ನು ಬಳಸುವುದರ ಮೂಲಕ ಚುನಾವಣೆಗಳು ನಡೆಯುತ್ತಿವೆ. ಪ್ರಸ್ತುತ ಹ್ಯಾರಡಾ ಗ್ರಾಮ ಪಂಚಾಯತಿಯು ನಾಲ್ಕು ವಾರ್ಡ್‌ಗಳನ್ನು ಹೊಂದಿದ್ದು, ಹನ್ನೊಂದು ಸದಸ್ಯರುಗಳನ್ನು ಹೊಂದಿದೆ. ಒಂದನೇಯ ವಾರ್ಡಿನಲ್ಲಿ ನಾಲ್ಕು ಸದಸ್ಯರು, ಎರಡನೇ ವಾರ್ಡಿನಲ್ಲಿ ಎರಡು ಸದಸ್ಯರು, ಮೂರನೇ ವಾರ್ಡಿನಲ್ಲಿ ಎರಡು ಸದಸ್ಯರು, ನಾಲ್ಕನೇ ವಾರ್ಡಿನಲ್ಲಿ ಮೂರು ಸದಸ್ಯರುಗಳನ್ನು ಹೊಂದಿದೆ.

ಗ್ರಾಮ ಸಭೆ ಹಾಗೂ ವಾರ್ಡ್ ಸಭೆ : ಹ್ಯಾರಡಾದ ಎಲ್ಲಾ ಸದಸ್ಯರು ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಗ್ರಾಮ ಸಭೆ, ವಾರ್ಡ್ ಸಭೆಗಳನ್ನು ನಡೆಸುವುದರ ಮೂಲಕ ಗ್ರಾಮದ ಕುಂದು ಕೊರತೆಗಳಿಗೆ ಪರಿಹಾರಗಳನ್ನು ಕಂಡುಕೊಂಡಿದ್ದಾರೆ. ಸ್ಥಳೀಯ ಆಡಳಿತದಲ್ಲಿ ಗ್ರಾಮ ಸಭೆಯು ಬಹು ಮುಖ್ಯವಾದುದು. ಗ್ರಾಮ ಪಂಚಾಯತಿಯು ಅನುಷ್ಠಾನಗೊಳಿಸುವ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಸ್ಕೀಮುಗಳನ್ನು ಅನುಷ್ಠಾನ ತರುವಲ್ಲಿ ಗ್ರಾಮ ಸಭೆಯು ಪ್ರಮುಖವಾದುದು. ಈ ಸಭೆಯಲ್ಲಿ ಗ್ರಾಮದ ಎಲ್ಲಾ ಜನರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಇಂತಹ ಗ್ರಾಮಸಭೆಗಳು ಹ್ಯಾರಡಾದಲ್ಲಿ

ನಡೆಯುತ್ತವೆ. ಗ್ರಾಮ ಸಭೆ ಇದ್ದಾಗ ಊರಲ್ಲಿ ಡಂಗೂರ ಹಾಕುವುದರ ಮೂಲಕ ಇದರ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ. ಪ್ರತಿ ಆರು ತಿಂಗಳಿಗೆ ಗ್ರಾಮ ಸಭೆಗಳು ನಡೆಯುತ್ತವೆ. ಈ ಗ್ರಾಮ ಸಭೆಗಳಲ್ಲಿ ಗ್ರಾಮದ ಸಮಾಜೋ-ಆರ್ಥಿಕ ದತ್ತಾಂಶಗಳನ್ನು ಸಂಗ್ರಹಿಸುವರು. ಬೀದಿ ದೀಪಗಳು, ನೀರಿನ ಸಮಸ್ಯೆ, ಗ್ರಾಮದ ನೈರ್ಮಲ್ಯೀಕರಣದ ಬಗ್ಗೆ, ಸರ್ಕಾರದ ಸ್ಕೀಮುಗಳ ಬಗ್ಗೆ, ಸಮಗ್ರವಾಗಿ ಚರ್ಚಿಸಿ ಕೊರತೆಗಳನ್ನು ಗುರ್ತಿಸಿ ಪರಿಹಾರಗಳನ್ನು ಸೂಚಿಸುವರು.

ವಿವಿಧ ವರ್ಗಗಳಿಗೆ ಕೊಡಮಾಡುವ ಆಶ್ರಯ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಮಾಡುವರು. ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳನ್ನು ಸರ್ಕಾರದ ವಿವಿಧ ಯೋಜನೆಗಳಿಗೆ ಶಿಫಾರಸ್ಸು ಮಾಡುವರು. ವಿಕಲಚೇತನರಿಗೆ ಸಿಗಬಹುದಾದಂತಹ ವಿಶೇಷ ಸೌಲಭ್ಯಗಳನ್ನು ಅರ್ಹ ವ್ಯಕ್ತಿಗಳಿಗೆ ಕೊಡುವಂತೆ ಶಿಫಾರಸ್ಸು ಮಾಡುವರು. ಗ್ರಾಮದ ಯೋಜನಾ ವೆಚ್ಚದ ವಿವರಗಳನ್ನು ಮತ್ತು ಪ್ರತಿಯೊಂದು ಕೆಲಸ ಕಾರ್ಯಕ್ಕೆ ನಿಧಿಗಳ ಹಂಚಿಕೆಯನ್ನು ಹಾಗೂ ಗ್ರಾಮದಲ್ಲಿ ಕಾರ್ಯಗತಗೊಳಿಸಬೇಕಾಗಿರುವ ಕಾಮಗಾರಿಗಳ ಅಂದಾಜನ್ನು ಪಟ್ಟಿ ಮಾಡುವರು. ಹಿಂದಿನ ವರ್ಷದ ಆರ್ಥಿಕ ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು ಈ ಸಭೆಯಲ್ಲಿ ಮಂಡಿಸುವರು. ಗ್ರಾಮದ ಜಮಾ-ಬಂದಿ ಕಾರ್ಯಕ್ರಮದಲ್ಲಿ ಇದರ ಬಗ್ಗೆ ವಿಶೇಷವಾಗಿ ಚರ್ಚಿಸುವರು. ಪ್ರತಿಯೊಂದು ವಾರ್ಡ್ ಸಭೆಯಲ್ಲಿ ಅನುಮೋದಿಸಿದ ವಿಷಯಗಳನ್ನು 'ರ್‍ಯಾಂಕಿಂಗ್' ಆಧಾರದ ಮೇಲೆ ಗ್ರಾಮಸಭೆಯಲ್ಲಿ ಅನುಮೋದಿಸುವರು.

ಅದೇ ರೀತಿಯಲ್ಲಿ ಪ್ರತಿಯೊಂದು ವಾರ್ಡಿನಲ್ಲಿ ವಾರ್ಡ್ ಸಭೆಗಳನ್ನು ಏರ್ಪಡಿಸಲಾಗುತ್ತಿದೆ. ಆಯಾ ವಾರ್ಡಿನ ಸದಸ್ಯರು ಈ ವಾರ್ಡ್ ಸಭೆಯ ಅಧ್ಯಕ್ಷತೆಯನ್ನು ವಹಿಸಿರುತ್ತಾರೆ. ಆ ವಾರ್ಡಿನ ಎಲ್ಲಾ ಮತದಾರರು ಕೂಡಿಕೊಂಡು ತಮ್ಮ ವಾರ್ಡಿನಲ್ಲಿ ಇರಬಹುದಾದ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳುವರು. ತಮ್ಮ ವಾರ್ಡಿನ ನೀರಿನ ಸಮಸ್ಯೆ, ವಿದ್ಯುತ್‌ನ ಸಮಸ್ಯೆ, ನೈರ್ಮಲ್ಯೀಕರಣದ ಸಮಸ್ಯೆ ಹಾಗೂ ಸರ್ಕಾರದ ಇತರ ಯೋಜನೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸುವರು. ಈ ರೀತಿಯಾಗಿ ಹ್ಯಾರಡಾ ಗ್ರಾಮ ಪಂಚಾಯತಿಯಲ್ಲಿ ಸಕಾಲಕ್ಕೆ ಗ್ರಾಮ ಸಭೆ ಹಾಗೂ ವಾರ್ಡ್ ಸಭೆಗಳು ನಡೆಯುತ್ತಿವೆ.

ಸ್ಥಳೀಯ ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯಗಳು : ಪ್ರಸ್ತುತ ಹ್ಯಾರಡಾ ಗ್ರಾಮವು ೪,೧೨೬ ಜನಸಂಖ್ಯೆಯನ್ನು ಹೊಂದಿದ್ದು, ಒಟ್ಟು ೯೯೧ ಕುಟುಂಬಗಳನ್ನು ಹೊಂದಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ೯೫ ಕುಟುಂಬಗಳು, ಪರಿಶಿಷ್ಟ ಪಂಗಡದ ೧೪೫ ಕುಟುಂಬಗಳು, ಅಲ್ಪ ಸಂಖ್ಯಾತರ ೨೦ ಕುಟುಂಬಗಳನ್ನು ಕಾಣಬಹುದು. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೩,೮೯೮ ಚ.ಕಿ.ಮೀ. ಹೊಂದಿದೆ. ಗ್ರಾಮದಲ್ಲಿ ಶೇ ೮೫ ರಷ್ಟು ಸಾಕ್ಷರತೆಯನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮ ಪಂಚಾಯತಿಯ ವತಿಯಿಂದ ಹಲವಾರು ಅಭಿವೃಧ್ಧಿ ಕಾರ್ಯಗಳನ್ನು ನಾವು ಕಾಣಬಹುದಾಗಿದೆ. ಇಂದು ಗ್ರಾಮವು ಎಲ್ಲಾ ರಂಗಗಳಲ್ಲಿ ಅಭಿವೃದ್ದಿಯ ಲಯವನ್ನು ಕಂಡುಕೊಂಡಿದೆ. ಇದಕ್ಕೆಲ್ಲಾ ಪ್ರಮುಖ ಕಾರಣ ಗ್ರಾಮ ಪಂಚಾಯತಿಯ ಅಭಿವೃದ್ದಿ ಕಾರ್ಯಕ್ರಮಗಳು. ಗ್ರಾಮದಲ್ಲಿ

ಎಲ್ಲಾ ಮೂಲಭೂತ ಅವಶ್ಯಕತೆಗಳು ದೊರೆತಿವೆ. ಗ್ರಾಮದ ಪ್ರತಿಯೊಂದು ರಸ್ತೆಗಳು ಸಿ.ಸಿ. ರಸ್ತೆಗಳಾಗಿವೆ. ಶೌಚಾಲಯ, ಬೀದಿ ದೀಪ, ನೀರಿನ ವ್ಯವಸ್ಥೆ, ಚರಂಡಿ, ನೈರ್ಮಲ್ಯ ಹೀಗೆ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡಿದೆ.

ಶೌಚಾಲಯ ನಿರ್ಮಾಣ : ಗ್ರಾಮದಲ್ಲಿ ಒಟ್ಟು ೯೯೧ ಕುಟುಂಬಗಳಿದ್ದು, ಗ್ರಾಮ ಪಂಚಾಯತಿ ವತಿಯಿಂದ ಬಹುತೇಕ ಎಲ್ಲಾ ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡಿವೆ. ಗ್ರಾಮ ಪಂಚಾಯತಿಯಿಂದ ಒಂದು ಶೌಚಾಲಯವನ್ನು ನಿರ್ಮಿಸಿಕೊಳ್ಳುವುದಕ್ಕೆ ೧೫,೦೦೦ ರೂಪಾಯಿಗಳನ್ನು ಪ್ರೋತ್ಸಾಹದಾಯಕ ಹಣವನ್ನಾಗಿ ಕೊಡುತ್ತಿದೆ. ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ೪೭೫ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಇನ್ನುಳಿದ ಶೌಚಾಲಯಗಳನ್ನು ವಿವಿಧ ಯೋಜನೆಯಡಿ ನಿರ್ಮಿಸಿ, ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಮಾಡಿದ್ದಾರೆ. ಶೌಚಾಲಯಗಳನ್ನು ಬಳಸುವ ಬಗ್ಗೆ ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದಾರೆ. ನಾಟಕ, ಹಾಡು, ಕಾರ್ಯಾಗಾರಗಳನ್ನು ಏರ್ಪಡಿಸುವುದರ ಮೂಲಕ ಜನರಲ್ಲಿ ಹೆಚ್ಚು ಜಾಗೃತಿಯನ್ನು ಮೂಡಿಸಿ ಇದರಲ್ಲಿ ಸಫಲರಾಗಿದ್ದಾರೆ. ಈ ಎಲ್ಲಾ ಪ್ರಯತ್ನದಿಂದಾಗಿ ಹ್ಯಾರಡ ಗ್ರಾಮ ಪಂಚಾಯತಿಗೆ ೨೦೧೮-೧೯ ನೇ ಸಾಲಿನಲ್ಲಿ ನೈರ್ಮಲ್ಯ ಪ್ರಶಸ್ತಿಯು ಲಭಿಸಿದೆ. ಇದು ನಮ್ಮ ಗ್ರಾಮದ ಹೆಮ್ಮೆಯ ವಿಷಯವಾಗಿದೆ. ಪಂಚಾಯತಿಯಲ್ಲಿರುವ ಸಿಬ್ಬಂಧಿ ಜನಪ್ರತಿನಿಧಿಗಳ ಅವಿರತ ಶ್ರಮದಿಂದಾಗಿ ಈ ಪ್ರಶಸ್ತಿಯು ಲಭಿಸಿ ಅಭಿವೃದ್ಧಿಯ ಪರ್ವವನ್ನು ಕಂಡಿದೆ.

ತೆರಿಗೆ ಸಂಗ್ರಹ : ಒಂದು ಗ್ರಾಮವು ಅಭಿವೃದ್ಧಿಯ ಲಯವನ್ನು ಕಂಡುಕೊಳ್ಳಬೇಕಾದರೆ ಸರ್ಕಾರದ ಯೋಜನೆಗಳ ಜೊತೆಗೆ ವಿಶೇಷವಾಗಿ ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಮರ್ಪಕವಾಗಿ ಬಳಸಬೇಕು. ಅದರಂತೆಯೇ ಗ್ರಾಮದಲ್ಲಿ ಪಂಚಾಯತಿಯ ಸಿಬ್ಬಂದಿಗಳು ನೀರಿನ ತೆರಿಗೆ, ಕಟ್ಟಡ ತೆರಿಗೆ, ಪಂಚಾಯಿತಿಯ ಮಳಿಗೆಗಳಿಂದ ಬಂದ ಬಾಡಿಗೆ, ದಂಡದ ಬಾಕಿ ಹೀಗೆ ವಿವಿಧ ಮೂಲಗಳಿಂದ ಆದಾಯವನ್ನು ಸಂಗ್ರಹಿಸಿ ಅಭಿವೃಧ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ೨೦೧೮-೧೯ ನೇ ಸಾಲಿನಲ್ಲಿ ಒಟ್ಟು ಪಂಚಾಯಿತಿಯ ಒಟ್ಟು ತೆರಿಗೆ ಬೇಡಿಕೆ ರೂ. ೮,೩೪,೭೫೫ ಆಗಿದ್ದು, ಇದರಲ್ಲಿ ವಸೂಲಾತಿ ರೂ. ೬,೮೩,೭೯ನ್ನು ವಸೂಲಿ ಮಾಡುವುದರ ಮೂಲಕ ಶೇ.೭೨ ರಷ್ಟು ಪ್ರಗತಿಯನ್ನು ಸಾಧಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ವಿದ್ಯಾರ್ಥಿ ಹಾಗೂ ಕ್ರೀಡಾಪಟುಗಳಿಗೆ ಸಹಾಯ ಧನ: ಗ್ರಾಮದಲ್ಲಿ ಹೆಚ್ಚು ಕ್ರೀಡಾಪಟುಗಳನ್ನು ಕಾಣಬಹುದು. ಅದರಲ್ಲಿ ವಿಶೇಷವಾಗಿ ಥ್ರೋಬಾಲ್‌ನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳನ್ನು ಕಾಣಬಹುದು. ಮೊದಲಿನಿಂದಲೂ ಕ್ರೀಡಾಪಟುಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಅಪಾರ ಧನ ಸಹಾಯವನ್ನು ಕೊಟ್ಟಿರುವುದು ಹೆಮ್ಮೆಯ ಸಂಗತಿಯಾಗಿದೆ. ಇತ್ತೀಚಿಗೆ ನೇಪಾಳದಲ್ಲಿ ನಡೆದ ಅಂತರಾಷ್ಟೀಯ ಥ್ರೋಬಾಲ್ ಕ್ರೀಡಾಕೂಟದಲ್ಲಿ ಐದು ಕ್ರೀಡಾಪಟುಗಳು ಭಾಗವಹಿಸಿದ್ದರು. ಅವರಿಗೆ ವಿಶೇಷವಾದ ಧನ ಸಹಾಯವನ್ನು ಮಾಡಿದ ಕೀರ್ತಿ ನಮ್ಮ ಹೆಮ್ಮೆಯ ಹ್ಯಾರಡಾ ಗ್ರಾಮ ಪಂಚಾಯಿತಿ. ಗ್ರಾಮದಲ್ಲಿ ಮೂರು ಸರ್ಕಾರಿ ಶಾಲೆಗಳು ಇದ್ದು, ಪ್ರತಿ ವರ್ಷ

ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವರು. ಇದರ ಸಂಪೂರ್ಣ ವೆಚ್ಚವನ್ನು ಗ್ರಾಮ ಪಂಚಾಯಿತಿಯು ಭರಿಸುವುದು.

ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಳಿಗೆ ಸಂಬಂದಿಸಿದಂತೆ ಪೂರಕ ವಾತಾವರಣವನ್ನು ಸೃಷ್ಟಿಸಿದೆ. ಪ್ರತಿಯೊಂದು ಶಾಲೆಯ ವಿದ್ಯಾರ್ಥಿಗಳಿಗೆ ಹೈಟೆಕ್ ಶೌಚಾಲಯವನ್ನು ನಿರ್ಮಿಸಿ ಕೊಟ್ಟಿದ್ದಾರೆ. ಶಾಲೆಗೆ ಶಾಲಾ ಕಾಂಪೌಂಡನ್ನು ನಿರ್ಮಿಸಿದ್ದಾರೆ. ಶಾಲೆಗಳಿಗೆ ಬೇಕಾಗುವ ನೀರಿನ ವ್ಯವಸ್ಥೆ, ಗ್ರಂಥಾಲಯಗಳಿಗೆ ಬೇಕಾಗುವ ಪುಸ್ತಕಗಳ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸಲಾಗಿದೆ.

ವಸತಿ ಯೋಜನೆಗಳು : ಗ್ರಾಮದಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ, ಬಡವರಿಗೆ, ನಿರ್ಗತಿಕರಿಗೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ, ಅಲ್ಪ ಸಂಖ್ಯಾತರಿಗೆ ಸರ್ಕಾರದ ವಿವಿಧ ಸ್ಕೀಮುಗಳಿಂದ ಬಂದ ಯೋಜನೆಯಡಿ ಆಶ್ರಯ ಮನೆಗಳನ್ನು ಲಾಟರಿ ಮೂಲಕ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಹಂಚಲಾಗುತ್ತಿದೆ. ಬಹುತೇಕ ಎಲ್ಲಾ ಸಮುದಾಯಗಳಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರ ಮೂಲಕ ಗುಡಿಸಲು ಮುಕ್ತ ಗ್ರಾಮವನ್ನಾಗಿ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಇಂದಿರಾ ಆವಾಸ್ ಯೋಜನೆಯಡಿ ಆಶ್ರಯ ಮನೆಗಳನ್ನು ನಿರ್ಮಿಸಲಾಗುತ್ತಿದೆ.

೧೪ನೇ ಹಣಕಾಸು ಯೋಜನೆ ಸಮರ್ಪಕ ಬಳಕೆ : ಸರ್ಕಾರದ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ತಯಾರಿಸಿ ಒಂದನೇ ಹಾಗೂ ಎರಡನೇ ಕಂತಿನ ಅನುದಾನವನ್ನು ಸಮರ್ಪಕ ಕಾಮಗಾರಿಗಳನ್ನು ಅನುಷ್ಠಾನ ಮಾಡಿ Pria Software ಮೂಲಕ ಹಣ ಪಾವತಿಯನ್ನು ಮಾಡಲಾಗಿದೆ. ಇದರ ಜೊತೆ-ಜೊತೆಗೆ ನಿರ್ವಹಣೆ ಕಾರ್ಯಗಳನ್ನು ಮಾಡಲಾಗಿದೆ.

ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ ಹಾಗೂ ನೈರ್ಮಲ್ಯ ವ್ಯವಸ್ಥೆ : ಗ್ರಾಮಗಳಲ್ಲಿ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು, ಬೀದಿ ದೀಪ ವ್ಯವಸ್ಥೆ ಪ್ರಮುಖವಾದುದು. ಹ್ಯಾರಡಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಿದೆ ಹಾಗೂ ೭೨೦ ವೈಯಕ್ತಿಕ ನಳಗಳ ಸಂಪರ್ಕವನ್ನು ನೀಡಿದ್ದು, ಎರಡು ಓವರ್ ಹೆಡ್ ಟ್ಯಾಂಕರ್‌ಗಳ ಮೂಲಕ ನೀರಿನ ಪೂರೈಕೆ ಮಾಡಲಾಗುತ್ತಿದೆ. ಗ್ರಾಮದ ಮುಖ್ಯ ಬೀದಿಗಳಲ್ಲಿ ಹೈ ಮಾಸ್ ಲೈಟ್‌ಗಳನ್ನು ಅಳವಡಿಸಿದೆ. ಗ್ರಾಮದ ಚರಂಡಿಗಳನ್ನು ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡಲು ಎರಡು ಜನ ಸ್ವೀಪರ್‌ಗಳನ್ನು ನೇಮಿಸಲಾಗಿದೆ.

"ನಿಮ್ಮ ಸಮಸ್ಯೆ ನಮ್ಮ ಪರಿಹಾರ" Whatsapp Group ರಚನೆ: ಆಧುನಿಕ ಸಂಪರ್ಕ ಜಾಲತಾಣವಾದ Whatsapp ಬಳಸಿಕೊಂಡು "ನಿಮ್ಮ ಸಮಸ್ಯೆ ನಮ್ಮ ಪರಿಹಾರ" ಎಂಬ Whatsapp Groupನ್ನು ಗ್ರಾಮ ಪಂಚಾಯತಿ ವತಿಯಿಂದ ತೆರೆಯಲಾಗಿದೆ. ಈ Whatsapp Groupಗೆ ಗ್ರಾಮದ ಪ್ರತಿಯೊಬ್ಬ ಸದಸ್ಯರು ತಮ್ಮ ಯಾವುದೇ ಕುಂದುಕೊರತೆಗಳನ್ನು ಅದರ ಫೋಟೋದೊಂದಿಗೆ ಹಂಚಿಕೊಳ್ಳುವರು. ಇದಕ್ಕೆ ಪ್ರತಿಯಾಗಿ ಗ್ರಾಮ ಪಂಚಾಯಿತಿಯ ಸಿಬ್ಬಂದಿಯವರು ಸಮಸ್ಯೆ ಇದ್ದ ಸ್ಥಳಕ್ಕೆ ಖುದ್ದಾಗಿ ಬಂದು ಪರಿಶೀಲಿಸಿ ಸ್ಥಳದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ.

ಸಕಾಲ ಸೇವೆಯ ವ್ಯವಸ್ಥೆ : ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ದೂರವಾಣಿ ಮೂಲಕ ಹಾಗೂ ಲಿಖಿತ ಅರ್ಜಿಗಳ ಮೂಲಕ ಬಂದ ಕುಂದು ಕೊರತೆಗಳನ್ನು ಸಕಾಲ ಸೇವೆಯ ತಂತ್ರಾಂಶದಲ್ಲಿ ಇಂದೀಕರಿಸಿ ನಿಗದಿತ ಅವಧಿಯಲ್ಲಿ ಸೇವೆಯನ್ನು ನೀಡುತ್ತಿದ್ದಾರೆ.

"DIGITAL VILLAGE" ಸೇವೆಯ ವ್ಯವಸ್ಥೆ : MGREGA ಕೂಲಿ ಕಾರ್ಮಿಕರಿಗೆ ಒದಗಿಸಿದ ಮಾಹಿತಿಯನ್ನು ಹಾಗೂ ಕೆಲಸಕ್ಕೆ ಹಣ ಪಾವತಿಸಿದ ಮಾಹಿತಿಯನ್ನು ತಮ್ಮ ಫೋನಿನಲ್ಲಿ ನೋಡಿಕೊಂಡು ಹಣ ಸಂದಾಯವಾದ ಮಾಹಿತಿಯನ್ನು ಪಡೆಯುತ್ತಿದ್ದಾರೆ. ಹೀಗೆ ಮೂಲ ಸೌಕರ್ಯ, ಕಂದಾಯ ವಸೂಲಿ, ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗಿದೆ.

ನರೇಗಾ ಯೋಜನೆ ಹಾಗೂ ಅನುದಾನ ಸದ್ಬಳಕೆಗೆ ಗಾಂಧಿ ಗ್ರಾಮ ಪುರಸ್ಕಾರದ ಗರಿ : ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಶೇ. ೬೦ ರಷ್ಟು ಜಲ ಸಂರಕ್ಷಣೆ, ಕಾಮಗಾರಿಗಳಾದ ಕೆರೆ ಹೂಳು ತೆಗೆಯುವುದು, ಗೋಕಟ್ಟೆ ನಿರ್ಮಾಣ, ಜಾನುವಾರುಗಳ ತೊಟ್ಟಿ ನಿರ್ಮಾಣ, ರೈತರ ಜಮೀನಿನಲ್ಲಿ ಕೃಷಿ ಹೊಂಡ, ಬದು ನಿರ್ಮಾಣ, ಗ್ರಾಮದಲ್ಲಿ ಸಿ.ಸಿ. ರಸ್ತೆಗಳ ನಿರ್ಮಾಣ, ಶಾಲಾ ಕಾಂಪೌಂಡ್ ಮತ್ತು ಆಟದ ಮೈದಾನ ನಿರ್ಮಾಣ, ಚರಂಡಿಗಳ ರಿಪೇರಿಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ ೨೦೧೮-೧೯ ನೇ ಸಾಲಿನಲ್ಲಿ ೭೦,೦೬೭ ಮಾನವ ದಿನಗಳ ಗುರಿ ಇದ್ದು, ೮೫,೬೩೪ ಶೇ. ೧೨೨ ರಷ್ಟು ಮಾನವ ದಿನಗಳನ್ನು ನಿರ್ಮಿಸಿ, ಗುರಿ ಮೀರಿದ ಸಾಧನೆಯನ್ನು ಮಾಡಲಾಗಿದೆ. ಈ ಎಲ್ಲಾ ಸಾಧನೆಗಳನ್ನು ಸರ್ಕಾರ ಗುರ್ತಿಸಿ ೨೦೧೬-೧೭ ಹಾಗೂ ೨೦೧೯-೨೦ ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಹ್ಯಾರಡಾ ಗ್ರಾಮ ಪಂಚಾಯಿತಿಗೆ ದೊರೆತಿದೆ. ಇದು ನಮ್ಮ ನಿಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿದೆ. ಕಳೆದ ಐದು ವರ್ಷಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಅಂಕಿ ಅಂಶಗಳನ್ನು ಕೆಳಕಂಡ ಕೋಷ್ಟಕದಲ್ಲಿ ಕಾಣಬಹುದು.

1 Job Card

Total No. Of Job Card issued	996
Total No. Of Workers	2,165
Total No. Of Active Job Cards	951
Total No. Of Active Workers	2,048
(i) SC worker against active workers[%]	4.69
(ii) ST worker against active workers[%]	9.28

II Progress	**FY** 20-2021	**FY** 19-2020	**FY** 18-2019	**FY** 17-2018	**FY** 16-2017
Approved Labour Budget	0	0	0 0	0	0
Person days Generated so far	5,550	93,314	85,634	63,822	43,328
% of Tatal LB	0	0	0	0	0
% as per Proportionate LB					
SC person days % as of total person days	1.41	4.68	4.64	5.22	5.82
ST person days % as of total person days	13.57	10.35	9.79	10.45	13.18
Women Person days out of Total (%)	46.92	47.95	47.91	48.03	49.38
Average days of employ ment provided per house hold	24.89	100.55	97.87	78.7	70
Average Wage rate per day per person(Rs.)	275.14	218.69	235.52	36.16	227.14
Total No of HHs comp leted 100 days of Wage Employment	0	517	506	205	151
Totat Households Worked	223	928	875	811	619
Total Individual Worked	444	2,007	1,943	1,812	1,410
Differently abled persons worked	4	5	2	3	2
III Works					
Number of GPs with NIL exp	0	0	0	0	0
Total no. of Works Takenup(New+Spill Over)	185	313	341	148	177
Number Of Ongoing Works	182	160	135	83	27

Number Of completed Works	3	153	206	65	150
% Of NRM Expenditure (public+Individual)	81.59	76.1	91.88	89.16	82.09
% of Category B Works	52.43	61.02	63.05	17.57	47.46
IV Financial Progress					
Total Exp (Rs. In Lakhs.)	18.82	230.89	291.94	217.21	147.96
Wages(Rs. In Lakhs)	18.82	165.76	193.45	148.35	99.32
Material and skilled Wages (Rs. In Lakhs)	0	65.14	98.5	68.85	48.64
Material(%)	0	28.21	3374	31.7	32.87
Total Adm Expenditure (Rs. In Lakhs)	0	0	0	0	0
Admin Exp(%)	0	0	0	0	0
Average Cost per Day per person(In Rs.)	276.4	398.97	321.57	349.68	340.38
% Of Total Expenditure through EFMS	100	100	94.65	100	100
% payments generated within 15 days	100	100	88.7	99.26	93.88

(ಆಧಾರ, ಗ್ರಾಮ ಪಂಚಾಯತಿ ಕಾರ್ಯಾಲಯ. ಹ್ಯಾರಡ)

ಹೀಗೆ ಮೇಲ್ಕಂಡ ಕೋಷ್ಟಕದಿಂದ ಗ್ರಾಮ ಪಂಚಾಯತಿಯು ಸಾಧಿಸಿದ ಅಭಿವೃದ್ಧಿಯನ್ನು ಕಾಣಬಹುದಾಗಿದೆ.

ಭಾರತೀಯ ಹಿಂದೂ ಸಮಾಜದಲ್ಲಿ ಅನಾಧಿಕಾಲದಿಂದಲೂ ಕೆಳಸ್ಥರದ ಸಮುದಾಯಗಳಿಗೆ ರಾಜಕೀಯ ಮುಚ್ಚಿದ ಬಾಗಿಲಾಗಿತ್ತು. ಕೆಳಸ್ಥರದ ಸಮುದಾಯಗಳಿಗೆ ಸೈನ್ಯದಲ್ಲಿ, ರಾಜಕೀಯದಲ್ಲಿ ಅವಕಾಶಗಳಿರಲಿಲ್ಲ, ರಾಜ್ಯ ಕಟ್ಟುವಂತಿರಲಿಲ್ಲ, ದೇಶಕ್ಕಾಗಿ ಹೋರಾಡುವಂತಿರಲಿಲ್ಲ, ಕೇವಲ ಮೇಲು ಸಮುದಾಯವರು ಮಾತ್ರ ಎಲ್ಲಾ ಅರ್ಹತೆಗಳನ್ನು ಪಡೆದಿದ್ದರು. ಅದರಲ್ಲಿ ಗ್ರಾಮೀಣ ಪ್ರದೇಶದಲ್ಲಂತೂ ಈ ವಾತಾವರಣ ಇನ್ನಷ್ಟು ಗಂಭೀರವಾಗಿತ್ತು. ಕೆಳಸ್ಥರದ ಸಮುದಾಯಗಳಿಗೆ ದೈವಿಕ ಬಣ್ಣ ಬಳಿಯುವುದರ ಮೂಲಕ ಈ ಜನ್ಮದಲ್ಲಿ ನೀಚಕುಲದಲ್ಲಿ ಹುಟ್ಟಿದವರು ಮುಂದಿನ ಜನ್ಮದಲ್ಲಿ ಒಳ್ಳೆಯ ಕುಲದಲ್ಲಿ ಹುಟ್ಟುವರು. ಮುಂದಿನ ಜನ್ಮದಲ್ಲಿ ಒಳ್ಳೆಯ ಸ್ಥಾನಮಾನವು ಸಿಗುವವು ಎಂಬ ಅರ್ಥರಹಿತ ನಂಬಿಕೆಗಳು ಸಮಾಜದಲ್ಲಿ ಬೇರೂರಿದ್ದವು. ತಮ್ಮ ರಾಜಕೀಯ ಅಸ್ಮಿಯತೆಯನ್ನೇ ಪ್ರಶ್ನಿಸಲಾರದಂತಹ ಪರಿಸ್ಥಿತಿಗೆ ಬಂದು ತಲುಪಿದ್ದರು. ಒಂದು ಸಮುದಾಯ ಮಾಡುವ ಕಸುಬನ್ನು ಬೇರೆ ಸಮುದಾಯ ಮಾಡದಂತೆ ನಿಷೇಧ ಹೇರಲಾಗಿತ್ತು. ಕೇವಲ ಅದೀನ ಉದ್ಯೋಗಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದರು. ಬೀದಿ ಮತ್ತು ಚರಂಡಿ ಗುಡಿಸುವುದು, ಸತ್ತ ಪ್ರಾಣಿಗಳನ್ನು

ಸಾಗಿಸುವುದು, ಚರ್ಮ ಸುಲಿದು ಹದಮಾಡಿ ಪಾದರಕ್ಷೆ ಮಾಡುವುದು, ತಮಟೆ, ಮೊದಲಾದ ಚರ್ಮ ವಾದ್ಯಗಳನ್ನು ನುಡಿಸುವುದು ಇವು ತಲೆತಲಾಂತರಗಳಿಂದ ಬಂದ ವೃತ್ತಿಗಳಾಗಿದ್ದವು. ಯಾವುದೇ ರೀತಿಯ ರಾಜಕೀಯ ಕ್ಷೇತ್ರಗಳನ್ನು ಅಲಂಕರಿಸದಂತೆ ನಿಷಿದ್ದ ಹೇರಲಾಗಿತ್ತು. ಮೇಲು ಸಮುದಾಯದವರು ಹಾಕಿದ್ದ ಲಕ್ಷ್ಮಣ ರೇಖೆಯನ್ನು ದಾಟಿದರೆ ಹಲವಾರು ಕಠಿಣ ಶಿಕ್ಷೆಗಳನ್ನು ಕೊಡುತ್ತಿದ್ದರು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ರಾಜಕೀಯ ಲವಲೇಷವು ಸುಳಿದಾಡುತ್ತಿರಲಿಲ್ಲ. ಯಾವಾಗ ಬ್ರಿಟೀಷರು ಬಂದರೋ ಅಲ್ಪಸ್ವಲ್ಪ ಸಮಾಜದಲ್ಲಿ ಬದಲಾವಣೆಗಳು ಕಂಡುಬಂದವು. ಏಕರೂಪದ ಆಡಳಿತದ ವ್ಯವಸ್ಥೆಯಿಂದ ಕೊಂಚ ರಾಜಕೀಯ ಸ್ಥಿತ್ಯಂತರ ಆಗತೊಡಗಿತು. ಹ್ಯಾರಡಾದ ಚಿತ್ರಣ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮೊದಲಿನಿಂದಲೂ ಮೇಲು ಸಮುದಾಯದವರು ರಾಜಕೀಯ ಕದಂಬ ಬಾಹುಗಳನ್ನು ವಿಸ್ತರಿಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಪರಿಸ್ಥಿತಿಯು ಅತ್ಯಂತ ಗಂಭೀರವಾಗಿತ್ತು. ಉಳ್ಳವರ ಜಮೀನಿನಲ್ಲಿ ದುಡಿದು ಅಲ್ಪಸ್ವಲ್ಪ ಆಹಾರ ಪದಾರ್ಥಗಳನ್ನು ಪಡೆದು ಜೀವನವನ್ನು ಸಾಗಿಸುವಂತಹ ಪದ್ಧತಿ ಬಹಳ ದಿನಗಳಿಂದ ನಡೆದು ಬಂದಿತು. ಆದರೆ ೧೯೧ಳ ರಲ್ಲಿ ಗ್ರಾಮದಲ್ಲಿ ಶಾಲೆಯು ಪ್ರಾರಂಭವಾಗುವುದರ ಮೂಲಕ ಹೊಸ ಶಕೆಯು ಪ್ರಾರಂಭವಾಯಿತು. ಶಾಲೆ ಪ್ರಾರಂಭದಿಂದ ಇಂದಿಗೂ ಅತ್ಯಂತ ಅನುಭವಿ ಶಿಕ್ಷಕ ವರ್ಗ ಸೇವೆ ಸಲ್ಲಿಸಿದ್ದರಿಂದ ಜನರಲ್ಲಿ ಬೌದ್ಧಿಕ ಬದಲಾವಣೆಯಾಗತೊಡಗಿತು. ಜನರು ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಕೊಂಚ ಆಲೋಚಿಸುವಂತೆ ಮಾಡಿತು. ನಮ್ಮ ಹಕ್ಕನ್ನು ಪಡೆಯಲು ಶಿಕ್ಷಣ , ಸಂಘಟನೆ, ಹೋರಾಟ ಒಂದೇ ಮಾರ್ಗವಾಗಿದೆ ಎಂದು ಮನಗಂಡರು. ಇದರ ಮುಖಾಂತರ ತಮ್ಮ ಮೇಲೆ ಆಗುವ ದಬ್ಬಾಳಿಕೆಗಳನ್ನು ವಿರೋಧಿಸುವ, ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಂಡರು. ತಮ್ಮದೇ ಆದ ಒತ್ತಡ ಗುಂಪುಗಳನ್ನು ರಚಿಸಿಕೊಂಡು ಉಳ್ಳವರಿಗೆ ಒಂದು ಸಂದೇಶವನ್ನು ರವಾನಿಸುವ ಹಂತಕ್ಕೆ ಬಂದರು. ಅದರಲ್ಲಿ ೧೯೮೦ರ ದಶಕದಲ್ಲಿ ಅಮೂಲಾಗ್ರವಾದ ಬದಲಾವಣೆಯನ್ನು ಕಾಣಬಹುದಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ಸ್ಥಳೀಯ ಆಡಳಿತದಲ್ಲಿ ಹೆಚ್ಚು ಹೆಚ್ಚು ಅಲಕ್ಷಿತ ಸಮುದಾಯದ ವ್ಯಕ್ತಿಗಳು ಬರತೊಡಗಿದರು. ಇದರ ಮಧ್ಯೆ ಸಮುದಾಯ ಸಂಘರ್ಷಗಳು ನಡೆದು ಒಂದು ತಾರ್ಕಿಕ ಅಂತ್ಯಕ್ಕೆ ಬಂದು ತಲುಪಿದ್ದವು. ೧೯೮೦ ರ ದಶಕದ ನಂತರ ಗ್ರಾಮದಲ್ಲಿ ಹಲವಾರು ಕೆಳಸ್ಥರದ ಮುಖಂಡರುಗಳು ಹುಟ್ಟಿಕೊಂಡರು. ಇವರು ನ್ಯಾಯದ ಪರ, ಪ್ರತಿಭಟನೆಯ ಧ್ವನಿ ಇಲ್ಲದವರ ಪರ, ಧಮನಿತರ ಪರ ಪ್ರತಿನಿಧಿಸುವ ಮೂಲಕ ರಾಜಕೀಯ ಅಸ್ಮಿತೆಯನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾದರು. ಭಾವಿ ನಿಂಗಪ್ಪ, ಲಕ್ಕಪ್ಪನರ ಸಿದ್ದಪ್ಪ ಇವರಿಂದ ಹಿಡಿದು ಇಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಭೀಮಕ್ಕನವರ ಫಕ್ಕಿರಮ್ಮ ಅವರವರೆಗೆ ಹಲವಾರು ರಾಜಕೀಯ ಸ್ಥಿತ್ಯಂತರಗಳು ಸಾಗಿ ಗ್ರಾಮದಲ್ಲಿ ಪ್ರಭಲವಾದ ಏಕೀಕೃತ ರಾಜಕೀಯ ಸ್ಥಿರತೆಯನ್ನು ಕಾಪಾಡಿಕೊಂಡು ಬಂದರು. ಪ್ರಸ್ತುತ ತಾಲೂಕು ಪಂಚಾಯಿತಿ ಸದಸ್ಯಿಣಿಯಾದ ಚುಚ್ಚಿಗೇರಿ ಪಕ್ಕೀರಮ್ಮನವರು ತಾಲೂಕು ಮಟ್ಟದಲ್ಲಿ ಹ್ಯಾರಡಾದ ಘನತೆಯನ್ನು ಕಾಪಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಹೀಗೆ ಒಂದು ಕುಗ್ರಾಮಕ್ಕೆ ಶಿಕ್ಷಣವನ್ನು ಕೊಟ್ಟರೆ ಹೇಗೆ ಹಂತ ಹಂತವಾಗಿ ಅದು ಬೆಳೆದು ರಾಜಕೀಯ ಸ್ಥಿರತೆಯನ್ನು ಹೊಂದುತ್ತದೆ ಎಂಬುದಕ್ಕೆ ಹ್ಯಾರಡಾ ಗ್ರಾಮವೇ ಸಾಕ್ಷಿಯಾಗಿದೆ. ೧೯೧೪ ರಲ್ಲಿ ಶಿಕ್ಷಣ ಎಂಬ ಬೀಜವನ್ನು ಬಿತ್ತಿ ೧೦೦ ವರ್ಷದ ನಂತರ ಗ್ರಾಮವು ಹೇಗೆ ಬೆಳೆಯಿತು, ಅಭ್ಯುದಯವನ್ನು ಹೊಂದಿತು ಎಂಬುದಕ್ಕೆ ಹ್ಯಾರಡಾ ಗ್ರಾಮವು ಜೀವಂತ ನಿದರ್ಶನವಾಗಿದೆ.

ಸಾಂಸ್ಕೃತಿಕ ಪರಿಣಾಮ : ಸಾಮಾನ್ಯವಾಗಿ ಗ್ರಾಮವೆಂದರೆ ಹಲವಾರು ಸಂಸ್ಕೃತಿ ಆಚರಣೆ, ಸಂಪ್ರದಾಯಗಳ ದೊಡ್ಡ ಆಗರಗಳೇ ಆಗಿವೆ. ಅಲ್ಲಿಯೇ ಸಾಮಾಜಿಕ ಸಂಬಂಧ, ಅಲ್ಲಿ ವ್ಯಕ್ತಿ ಸ್ವಾಮ್ಯತೆಗಿಂತ ಸಮಷ್ಟಿಯ ಸ್ವಾಮ್ಯತೆಯನ್ನು ಕಾಣಬಹುದು. ಒಂದು ಸಮುದಾಯ ಇನ್ನೊಂದು ಸಮುದಾಯದೊಂದಿಗೆ ಅನ್ಯೋನ್ಯವಾದ ಸಂಬಂಧವನ್ನು ಇಟ್ಟುಕೊಂಡು ಅನಾಧಿಕಾಲದಿಂದಲೂ ಸಾಂಘಿಕ ಜೀವನವನ್ನು ನಡೆಸಿಕೊಂಡು ಬರುವ ಪದ್ಧತಿಯನ್ನು ಕಾಣುತ್ತೇವೆ. ಪ್ರತಿಯೊಂದು ಗ್ರಾಮಗಳು ಕನಿಷ್ಟ ೧೦೦ ವರ್ಷವಾದರೂ ತನ್ನ ಭವ್ಯ ಪರಂಪರೆಯನ್ನು ಹೊಂದಿರುತ್ತವೆ. ಹೀಗೆ ಉಗಮಗೊಂಡ ಹಲವಾರು ಗ್ರಾಮಗಳು ಭೌತಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ವಿಶಿಷ್ಟವಾದ ಪದ್ದತಿ, ಪರಂಪರೆಯನ್ನು ಹೊಂದಿರುತ್ತವೆ. ಈ ಪರಂಪರೆಯಿಂದ ನಾವೆಲ್ಲರೂ ಒಟ್ಟಾಗಿ ಇದ್ದು ಸಾಮೂಹಿಕ ಐಕ್ಯತೆಯಿಂದ ಬಾಳುತ್ತಿದ್ದೇವೆ ಎಂಬ ಸಂದೇಶವನ್ನು ಗ್ರಾಮಗಳು ಸಾರುತ್ತಿವೆ. ಹ್ಯಾರಡಾ ಗ್ರಾಮವು ಕೂಡ ವಿಶಿಷ್ಟವಾದ ಪರಂಪರೆಯನ್ನು ಹೊಂದಿದೆ. ಸಾಂಸ್ಕೃತಿಕವಾಗಿ ವಿವಿಧ ಆಯಾಮಗಳನ್ನು ಕಂಡುಕೊಂಡು ಸೃಜನಶೀಲ ಮನಸ್ಸುಗಳ ಜನಪದರನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಗ್ರಾಮದ ಹಬ್ಬ, ಜಾತ್ರೆ, ಉತ್ಸವ, ಸಂಪ್ರದಾಯ, ಆಚರಣೆಗಳು ಗ್ರಾಮದಲ್ಲಿ ವಿಶೇಷವಾಗಿ ಮಳೆಯ ಆಚರಣೆಗಳು, ಮದುವೆ ಆಚರಣೆಗಳು, ಊರ ದೈವಗಳ ಆಚರಣೆಗಳು, ಸಾವಿಗೆ ಸಂಬಂಧಿಸಿದ ಆಚರಣೆಗಳು, ಯುಗಾದಿ, ದೀಪಾವಳಿ, ಆಷಾಡ, ಗಣೇಶ ಉತ್ಸವ, ಶಿವರಾತ್ರಿ, ಮಲಿಯಮ್ಮನ ಜಾತ್ರೆ ಮತ್ತು ಪರುವು, ಸಂಕ್ರಾಂತಿ, ಬಸವಜಯಂತಿ, ದೇವರು ಮಾಡುವುದು, ಮೊಹರಂ(ಪೀರ್ಲ)ಹಬ್ಬ, ಹಸಿರು ಮರಿ ಹಬ್ಬ, ದೊಡ್ಡವರ ಹಬ್ಬ (ಪೂರ್ವಿಕರ ಹಬ್ಬ) ಮುಂತಾದ ಆಚರಣೆಗಳಲ್ಲಿ ಗ್ರಾಮವು ಸಾಂಸ್ಕೃತಿಕ ಲೋಕಕ್ಕೆ ತನ್ನನ್ನು ತಾನು ಪರಿಚಯಿಸುತ್ತದೆ. ಅದರಲ್ಲೂ ವಿಶೇಷವಾಗಿ ಮದುವೆಯ ಸಮಯದಲ್ಲಿ ಮದುವೆಯ ಮಾತುಕತೆ, ನಿಶ್ಚಿತಾರ್ಥ, ಇಳೇವು ಒಡೆಯುವುದು, ಲಗ್ನಕಟ್ಟಿಸುವುದು, ಹಾಲುಗಂಬ– ಹಸಿರುಗಂಬ ಶಾಸ್ತ್ರ, ಮದುಮಕ್ಕಳನ್ನು ಮಾಡುವ ಶಾಸ್ತ್ರ(ನೀರು ಹುಯ್ಯುವ ಶಾಸ್ತ್ರ) ಬೀಗರನ್ನು ಎದುರುಗೊಳ್ಳುವುದು, ಐತನ್ನಕ್ಕೆ ಇಡುವುದು, ಕೇಲು ತರುವುದು, ದಂಡಿ ಬಾಸಿಂಗ ತರುವುದು, ಸುರಿಗೆ ಶಾಸ್ತ್ರ, ತಾಳಿಯ ಶಾಸ್ತ್ರ ಮುಂತಾದವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹ್ಯಾರಡಾ ಗ್ರಾಮವು ತನ್ನದೇ ಆದ ಆಚರಣಾ ಲೋಕವನ್ನು ಹೊಂದಿದೆ.

ಇದು ಅನಾದಿಕಾಲದಿಂದಲೂ ನಡೆದುಕೊಂಡು ಬಂದಂತ ಪದ್ಧತಿಯಾಗಿದೆ. ಆದರೆ ಗ್ರಾಮದಲ್ಲಿ ಹೆಚ್ಚು ಹೆಚ್ಚು ಜನರು ಸುಶಿಕ್ಷಿತರಾಗುತ್ತಿದ್ದಂತಯೇ ಇಂತಹ ಆಚರಣೆಯ ಬೇರುಗಳು ಸಡಿಲಗೊಳ್ಳತೊಡಗಿವೆ. ಇಂತಹ ಮದುವೆಯ ಆಚರಣೆಗಳು ಕಣ್ಮರೆಯಾಗುತ್ತಾ ನಗರ ಕೇಂದ್ರಗಳಾಗಿವೆ. ಗ್ರಾಮದಲ್ಲಿ ಸುಮಾರು ೩ ತಿಂಗಳ ಮುಂಚಿತವಾಗಿ ಮದುವೆ ತಯಾರಿ ನಡೆಯುತ್ತಿತ್ತು. ಆದರೆ

ಇಂದು ಮದುವೆಗಳು ಒಂದೇ ದಿನದಲ್ಲಿ ಛತ್ರದಲ್ಲಿ ನಡೆದು ಹೋಗುತ್ತಿವೆ. ಗ್ರಾಮದಲ್ಲಿ ಹಿಂದಿನ ದಿನಮಾನಗಳಲ್ಲಿ ಮಗಳ ಮದುವೆ ಮಾಡಿಕೊಡುವಾಗ ಗಂಡಿನ ಮನೆಯ ಸಂಸ್ಕೃತಿ, ಅಂತಸ್ತು, ಗಂಡಿನ ಗುಣಾವಗುಣಗಳನ್ನು ಸಂಪೂರ್ಣವಾಗಿ ತೂಗಿ, ಅಳೆದು ಮಗಳನ್ನು ಕೊಡುತ್ತಿದ್ದರು. ಆದರೆ ಇಂದು ಗಂಡು ಸರ್ಕಾರಿ ನೌಕರಿಯನ್ನು ಮಾಡುತ್ತಿದ್ದರೆ ಸಾಕು ಸಾಕಷ್ಟು ವರದಕ್ಷಿಣೆಯನ್ನು ಕೊಟ್ಟು ಮದುವೆ ಮಾಡಿ ಕೊಡುವ ಪರಿಪಾಠವನ್ನು ನಾವಿಲ್ಲಿ ಕಾಣಬಹುದಾಗಿದೆ. ತನ್ನ ಸಣ್ಣಪುಟ್ಟ ತುಂಡು ಜಮೀನನ್ನಾದರು ಮಾರಿ ಮಗಳಿಗೆ ಮದುವೆಯನ್ನು ಮಾಡಿ ಕೊಡುವ ಪರಿಪಾಠವನ್ನು ನೋಡುತ್ತಿದ್ದೇವೆ. ಇತ್ತೀಚಿಗೆ ಗ್ರಾಮದಲ್ಲಿ ಇನ್ನೊಂದು ಬಗೆಯ ಪದ್ಧತಿ ಬೆಳೆಯ ತೊಡಗಿದೆ. ಅದು ಅಂತರ್ಜಾತಿ ವಿವಾಹ. ಗ್ರಾಮವೆಂದರೆ ಸಾಮಾನ್ಯವಾಗಿ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಹಲವಾರು ನಿಷಿದ್ಧಗಳನ್ನು ಹೇರಿರುತ್ತಾರೆ. ಆದರೆ ಸುಶಿಕ್ಷಿತ ಮಹಿಳೆಯರು ಇದನ್ನು ತಡೆದು ಅಂತರ್ಜಾತಿ ವಿವಾಹಗಳು ಇತ್ತೀಚಿಗೆ ಚಾಲ್ತಿಯಲ್ಲಿವೆ. ಮೇಲಿನ ಎಲ್ಲಾ ಘಟನೆಗಳು ಶಿಕ್ಷಣದಿಂದ ಆದ ವಿವಿಧ ಬಗೆಯ ಸ್ಥಿತ್ಯಂತರಗಳಾಗಿವೆ.

ಇನ್ನೂ ಗ್ರಾಮದಲ್ಲಿ ದೈವಗಳ ಆಚರಣಾ ಲೋಕವನ್ನು ನಾವುಗಳು ನೋಡುವುದಾದರೆ ನಾವು ಚಿಕ್ಕವರಿರುವಾಗ ಗ್ರಾಮದಲ್ಲಿ ಬಹುತೇಕ ಹೆಣ್ಣು ಮಕ್ಕಳಿಗೆ ದೆವ್ವ ಬಡಿದುಕೊಳ್ಳುವ ಪರಿಪಾಠವಿತ್ತು. ದೆವ್ವ ಬಡಿದವರನ್ನು ಮುಂದೆ ಕೂರಿಸಿಕೊಂಡು ನೀನು ಯಾರು? ಎಲ್ಲಿಂದ ಬಂದಿರುವೆ? ಯಾಕೆ ಬಂದಿರುವೆ? ಎಷ್ಟು ದಿನ ಆಯಿತು ಬಂದು ? ಹೀಗೆ ದೆವ್ವ ಬಡಿದವರ ಕೂದಲನ್ನು ಹಿಡಿದುಕೊಂಡು ಆಕೆಗೆ ನಾನಾ ಶಿಕ್ಷೆಯನ್ನು ಕೊಡುವ ದೃಶ್ಯಗಳು ಸಾಮಾನ್ಯವಾಗಿದ್ದವು. ಆದರೆ ಇತ್ತೀಚಿಗೆ ಇಂತಹ ದೃಶ್ಯಗಳು ಅತ್ಯಂತ ವಿರಳವಾಗಿವೆ. ಅಂದರೆ ಗ್ರಾಮದಲ್ಲಿ ಹೆಚ್ಚು ಹೆಚ್ಚು ಸುಶಿಕ್ಷಿತರಾದಂತೆ ಇಂತಹ ಘಟನಾವಳಿಗಳು ಕಡಿಮೆ ಆಗುತ್ತಿವೆ. ನಾವುಗಳು ಚಿಕ್ಕವರಿರುವಾಗ ಕೊಳ್ಳಿದೆವ್ವಗಳ ಹಾವಳಿ ಹೆಚ್ಚಾಗಿದ್ದವು. ರಾತ್ರಿಯಾದರೆ ಸಾಕು ಇವುಗಳ ತೀವ್ರತೆ ಹೆಚ್ಚಾಗಿರುತ್ತಿತ್ತು. ಕೊಳ್ಳಿದೆವ್ವವೆಂದರೆ ಸತ್ತ ಪ್ರಾಣಿಗಳ ದೇಹದ ಎಲುಬುಗಳ ಮಧ್ಯದಲ್ಲಿ ರಂಜಕವು ಇರುವುದರಿಂದ ಅದು ಗಾಳಿಯೊಂದಿಗೆ ವರ್ತಿಸಿ ಬೆಂಕಿ ಕಿಡಿಗಳನ್ನು ಕಾಣಬಹುದು. ಆದರೆ ಇತ್ತೀಚಿಗೆ ಇದರ ಮಹತ್ವವು ಕಡಿಮೆಯಾಗಿದೆ. ಇನ್ನೂ ಆಚರಣೆಗಳು ಬಹುತೇಕ ಕಣ್ಮರೆಯಾಗುತ್ತಿವೆ. ಗ್ರಾಮದ ದೈವಗಳ ಜಾತ್ರೆ, ಉತ್ಸವ ಮುಂತಾದವುಗಳು ನೆಪಕ್ಕೆ ಮಾತ್ರ ಆಚರಿಸಿಕೊಳ್ಳುವಂತಹ ಪರಿಸ್ಥಿತಿಯೂ ಇಂದು ಒದಗಿಬಂದಿದೆ.

ಗ್ರಾಮವು ಅಪಾರವಾದ ಜನಪದ ಕಲೆಗಳ ಆಗರವಾಗಿದೆ. ಅನಾದಿ ಕಾಲದಿಂದಲೂ ಕೋಲಾಟ, ಡೊಳ್ಳು, ಭಜನೆ ಮುಂತಾದವುಗಳನ್ನು ಮುಂದುವರೆಸಿಕೊಂಡು ಬಂದಿದೆ. ಆದರೆ ನಾಗರಿಕತೆಯ ಪ್ರಭಾವದಿಂದ ಆಧುನಿಕತೆಯ ನೆಪದಲ್ಲಿ ಇಂತಹ ಅಪರೂಪದ ಕಲೆಗಳು ಸದ್ದಿಲ್ಲದಂತೆಯೆ ಮಾಯವಾಗುತ್ತಿವೆ. ಸುಶಿಕ್ಷಿತ ವ್ಯಕ್ತಿಗಳು ಇದಕ್ಕೆ ಒಗ್ಗಿಕೊಳ್ಳದೆ ಇರುವ ಪರಿಸ್ಥಿತಿಯನ್ನು ಗ್ರಾಮದಲ್ಲಿ ಕಾಣಬಹುದಾಗಿದೆ. ಗ್ರಾಮವು ಉಡುಗೆ ತೊಡುಗೆಯಲ್ಲಿಯೂ ಅಮೂಲಾಗ್ರವಾದ ಬದಲಾವಣೆಯನ್ನು ಕಾಣಬಹುದಾಗಿದೆ. ಇಂದಿನ ಕಾಲದಲ್ಲಿ ಮಹಿಳೆಯರು ಗಟ್ಟಿಸೀರೆಯನ್ನುಟ್ಟು ಕುಪ್ಪಸವನ್ನು ತೊಟ್ಟು ಹಣೆಯ ತುಂಬ ದೊಡ್ಡದಾಗಿ ದುಂಡಾಗಿ ಕುಂಕುಮ ಇಟ್ಟುಕೊಂಡು ಕಚ್ಚೆಯನ್ನು ಹಾಕಿಕೊಂಡು

ತಲೆಯ ಮೇಲೆ ಸೆರಗನ್ನು ಹಾಕಿ ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಪ್ಯಾಂಟ್, ಶರ್ಟ್, ಟೀ ಶರ್ಟ್, ಮೈಸೂರು ಸಿಲ್ಕ್, ನೈಲಾನ್, ಪಾಲಿಸ್ಟಾರ್ ಸೀರೆಗಳ ಭರಾಟೆಯನ್ನು ಕಾಣಬಹುದಾಗಿದೆ. ಇನ್ನು ಗ್ರಾಮವು ಆಹಾರ ಪದ್ದತಿಯಲ್ಲಿಯೂ ಸಹ ಹಲವಾರು ಬದಲಾವಣೆಗಳನ್ನು ಕಂಡುಕೊಂಡಿದೆ. ಇವೆಲ್ಲವೂ ಬದಲಾದ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ.

ಹೀಗೆ ಹ್ಯಾರಡಾ ಗ್ರಾಮವು ಸುಮಾರು ವರ್ಷಗಳಿಂದ ಪಡೆದ ಶಿಕ್ಷಣದ ಪರಿಣಾಮದಿಂದ ಹಲವಾರು ಬದಲಾವಣೆಗಳನ್ನು, ಸ್ಥಿತ್ಯಂತರಗಳನ್ನು ಕಂಡಿದೆ. ಮುಂದಿನ ದಿನಮಾನಗಳಲ್ಲಿಯೂ ಪರಿವರ್ತನೆಯ ಬದಲಾವಣೆಯ ಶಕೆ ಮುಂದುವರೆಯುವ ಲಕ್ಷಣಗಳು ಕಂಡುಬರುತ್ತಿವೆ.

ಅಧ್ಯಾಯ-೬

ಹ್ಯಾರಡಾ ಗ್ರಾಮದ ದೈವಗಳು

ಜನಪದರು ಮಹಾನ್ ದೈವಭಕ್ತರು. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುವಿನಲ್ಲಿ ದೈವತ್ವವನ್ನು ಕಾಣುವರು. ಪ್ರಕೃತಿಯಲ್ಲಿರುವ ಗಾಳಿ, ಮಳೆ, ಮರ, ಗಿಡ, ಬಳ್ಳಿ, ಗುಡುಗು, ಸಿಡಿಲು ಮುಂತಾದವುಗಳಲ್ಲಿ ದೇವರ ಸ್ವರೂಪವನ್ನು ಕಾಣುವರು. ಜೀವನದ ಪ್ರತಿ ಹೆಜ್ಜೆಯನ್ನು ಪ್ರಕೃತಿಯೊಂದಿಗೆ ಕಳೆಯುವುದರಿಂದ ಪ್ರಕೃತಿಯಲ್ಲಿ ಅತಿಮಾನುಷ ಶಕ್ತಿ ಇದೆ ಎಂದು ನಂಬಿದವರು. ಪ್ರಕೃತಿಯ ಪ್ರತಿ ವಸ್ತುವು ದೇವರ ರೂಪದಲ್ಲಿ ಕಂಡವು. ಪ್ರಕೃತಿಯಲ್ಲಿನ ಅತಿಮಾನುಷ ಶಕ್ತಿಯನ್ನು ಒಲಿಸಿಕೊಳ್ಳಲು ದೈವಗಳನ್ನು ಸೃಷ್ಠಿ ಮಾಡಿದರು. ಆ ದೈವಗಳಿಗೆ ವಿಶಿಷ್ಟ ರೀತಿಯ ಪೂಜೆ, ಹಬ್ಬ, ಜಾತ್ರೆಯಂತಹ ಆಚರಣೆಗಳನ್ನು ಜಾರಿಗೆ ತಂದರು. ಯಾರು ಕೈಕೊಟ್ಟರೂ ದೇವರು ನಮ್ಮನ್ನು ಬಿಡುವುದಿಲ್ಲ ಎಂಬ ನಂಬಿಕೆ ಪ್ರಭಲವಾಗಿತ್ತು. ತಮ್ಮ ದಿನನಿತ್ಯದ ಕಾಯಕದಲ್ಲಿ ದೈವವನ್ನು ನಂಬುತ್ತಾರೆ.

ಸಾಮಾನ್ಯವಾದ ಒಂದು ಸ್ಥಳ, ವಸ್ತುವನ್ನು ದೈವತ್ವದ ಎತ್ತರಕ್ಕೆ ಕೂರಿಸಿ ಪವಿತ್ರ ಸ್ಥಳವನ್ನಾಗಿ ರೂಪಿಸುವ ಶಕ್ತಿ ಗ್ರಾಮೀಣ ಜನಪದರಿಗಿದೆ. ಜನಪದರು ಸಾಮಾಜಿಕ ನ್ಯಾಯ ವ್ಯವಸ್ಥೆಯ ಹರಿಕಾರರಾದರು. ಶತ-ಶತಮಾನಗಳಿಂದ ಪುರುಷ ಪ್ರಧಾನ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಸ್ತ್ರೀಯನ್ನು ಸಮಾಜದ ಮುಖ್ಯವಾಹಿನಿಗೆ ತಂದರು. ಸಮಾಜದಿಂದ ತಿರಸ್ಕರಿಸಲ್ಪಟ್ಟ ಸ್ತ್ರೀಯ ಹಿಂದೆ ಶಕ್ತಿ ಇದೆ ಎಂದು ಸ್ತ್ರೀಗೆ ದೈವರೂಪ ಕೊಟ್ಟು ಪೂಜಿಸಿದ ಹಿರಿಮೆ ಈ ಜನಪದರದ್ದು. ಹೆಣ್ಣನ್ನು ಶೋಷಿಸುವ ವ್ಯವಸ್ಥೆಗೆ ಹೆಣ್ಣೆ ನಿಜವಾದ ಶಕ್ತಿದೇವತೆ ಎಂದು ತೋರಿಸಿಕೊಟ್ಟರು. ಸಮಾಜದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಜನಪದರ ಬಾಳಲ್ಲಿ ಸ್ತ್ರೀ ಜನಪದ ದೈವಗಳು ಹೆಚ್ಚು. ಅವುಗಳು ಬಹಳಷ್ಟು ಶಕ್ತಿಶಾಲಿ. ಅವುಗಳನ್ನು ಆರಾಧಿಸುವುದರಿಂದ ನಮ್ಮ ಕಷ್ಟಕಾರ್ಪಣ್ಯ ದೂರವಾಗುತ್ತವೆ ಎಂದು ನಂಬಿದ್ದರು. ಅದಕ್ಕಾಗಿ ಹಲವಾರು ಆಚರಣೆ ಮತ್ತು ಸಂಪ್ರದಾಯಗಳನ್ನು ತಂದರು. ಇದರ ಮೂಲಕ ದೇವರನ್ನು ಶಾಂತಿ ಮಾಡುವ ಕೆಲಸವನ್ನು ಮಾಡಿದರು. ಅವುಗಳಿಗೆ ಬಲಿಕೊಡುವುದು, ಜಾತ್ರೆ ಮಾಡುವುದು ವಿವಿಧ ಸಂಪ್ರದಾಯಗಳನ್ನು ಹುಟ್ಟುಹಾಕಿದರು. ಆದ್ದರಿಂದ ಜನಪದ ಹೆಣ್ಣು ದೈವಗಳಿಗೆ ಹೆಚ್ಚು ಒಲವನ್ನು ಕೊಟ್ಟರು. ಇಂದು

ಬಹುತೇಕ ಗ್ರಾಮದೇವತೆಗಳು ಹೆಣ್ಣು ಜನಪದ ದೈವಗಳೇ ಆಗಿವೆ. ಕರಿಯಮ್ಮ, ಯಲ್ಲಮ್ಮ, ಮಾರೆಮ್ಮ, ಕಾಳಮ್ಮ, ಹುಲಿಗೆಮ್ಮ, ಉಚ್ಚಂಗೆಮ್ಮ, ದ್ಯಾಮಮ್ಮ, ಮಲಿಯಮ್ಮ ಹೀಗೆ ಹಲವಾರು ಹೆಣ್ಣು ಜನಪದ ದೈವಗಳನ್ನು ಹೆಸರಿಸಬಹುದಾಗಿದೆ. ಹಾಗೆಯೇ ಹನುಮಂತ, ಬೀರಪ್ಪ, ಕಲ್ಲೇಶ್ವರ, ಭರಮಪ್ಪ, ಮೈಲಾರಲಿಂಗ, ಕಾಲಭೈರವ, ಜೋಕುಮಾರಸ್ವಾಮಿ ಎಂಬ ಮೊದಲಾದ ಗಂಡು ದೈವಗಳನ್ನು ಪೂಜಿಸುವರು.

ಜನಪದರು ದೈವಗಳೊಂದಿಗೆ ಮಾಟ, ಮಂತ್ರಗಳಿಗೆ ಹೆಚ್ಚು ಒತ್ತನ್ನು ಕೊಡುತ್ತಿದ್ದರು. ಇವುಗಳನ್ನು ಹೆಚ್ಚಾಗಿ ದೆವ್ವಗಳನ್ನು ಒಲಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದರು. ದೈವಗಳನ್ನು ನಂಬುವಷ್ಟೇ ದೆವ್ವಗಳನ್ನು ಜನಪದರು ನಂಬುತ್ತಿದ್ದರು. ಕೆಲವೊಂದು ಸಲ ದೆವ್ವಗಳು ಮೈಮೇಲೆ ಬಂದಾಗ ದೈವಗಳ ಮೊರೆ ಹೋಗುತ್ತಿದ್ದರು. ಮನುಷ್ಯ ಕೇಂದ್ರಿತ ಸಂಸ್ಕೃತಿಗೆ ಮಾರುಹೋಗದೇ ಜೀವಸಂಕುಲ ಕೇಂದ್ರಿತ ಸಂಸ್ಕೃತಿಯನ್ನು ಹರಡಲು ಕಾರಣರಾಗಿದ್ದಾರೆ. ಪ್ರಕೃತಿಯ ಪ್ರತಿಯೊಂದು ಜೀವಿಗಳಲ್ಲಿ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡಿರುತ್ತಾರೆ.

ಹ್ಯಾರಡಾ ಗ್ರಾಮದಲ್ಲಿ ಮೊದಲಿನಿಂದಲೂ ಜನಪದ ದೈವಗಳಿಗೆ ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಗ್ರಾಮದಲ್ಲಿ ಸ್ತ್ರೀ ಹಾಗೂ ಪುರುಷ ದೈವಗಳನ್ನು ಕಾಣಬಹುದಾಗಿದೆ. ಹ್ಯಾರಡಾದ ಜನಪದರು ಮೊದಲಿನಿಂದಲೂ ಗ್ರಾಮೀಣ ದೈವಗಳೊಂದಿಗೆ ಅನಿವಾಭಾವ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಇವುಗಳ ಮುಖೇನ ತಮ್ಮ ಕಷ್ಟಗಳನ್ನು ಬಗೆಹರಿಸಿಕೊಳ್ಳುವ ಪದ್ಧತಿಯನ್ನು ಕಾಣಬಹುದಾಗಿದೆ. ಹ್ಯಾರಡಾದ ಜನಪದರು ತಮ್ಮ ದೈವಗಳನ್ನು ಒಲಿಸಿಕೊಳ್ಳಲು ಹಲವಾರು ಆಚರಣೆಗಳನ್ನು ಮಾಡುವುದನ್ನು ಕಾಣಬಹುದು. ಬಲಿಕೊಡುವುದು, ಜಾತ್ರೆ ಹಾಗೂ ಉತ್ಸವವನ್ನು ಮಾಡುವುದು. ಹ್ಯಾರಡಾದಲ್ಲಿ ಬಹುತೇಕ ಸ್ತ್ರೀ ಜನಪದ ದೈವಗಳನ್ನು ಕಾಣಬಹುದಾಗಿದೆ. ಗ್ರಾಮದ ದೇವತೆಯಾಗಿ ಮಲಿಯಮ್ಮ ದೇವತೆಯನ್ನು ಆರಾಧಿಸುವ ಪದ್ಧತಿಯನ್ನು ಕಾಣಬಹುದಾಗಿದೆ. ಈ ಮಲಿಯಮ್ಮ ಗ್ರಾಮದೇವತೆಯು ಗ್ರಾಮದ ಎಲ್ಲಾ ಸಮುದಾಯಗಳಿಗೆ ಜನಪ್ರಿಯ ಸ್ತ್ರೀ ದೈವವಾಗಿದೆ. ಎಲ್ಲಾ ಸಮುದಾಯದವರು ಕೂಡಿ ಈ ದೇವತೆಯ ಜಾತ್ರೆಯನ್ನು ಮಾಡುವುದುಂಟು. ಹ್ಯಾರಡಾದ ಮಲಿಯಮ್ಮ ಸ್ತ್ರೀ ಜನಪದ ದೈವವಾಗಿದೆ. ಈ ದೇವತೆಯು ದುಷ್ಟ ಶಕ್ತಿಗಳಿಂದ, ಬರಗಾಲದಿಂದ ನಮ್ಮನ್ನು ಕಾಪಾಡಿ ಗ್ರಾಮಕ್ಕೆ ಮಳೆ, ಬೆಳೆಯನ್ನು ಕರುಣಿಸುವಳು ಎಂದು ನಂಬಿದ್ದಾರೆ.

ಅದರಂತೆಯೇ ಪುರುಷ ಜನಪದ ದೈವಗಳಿಗೇನು ಕಡಿಮೆ ಇಲ್ಲ. ಹನುಮಂತ, ಸಂಗಮೇಶ್ವರ, ಬೀರಲಿಂಗೇಶ್ವರ, ಭರಮಪ್ಪ, ಕಲ್ಲೇಶ್ವರ, ಮೈಲಾರ ಲಿಂಗೇಶ್ವರ ಮುಂತಾದ ಪುರುಷ ದೈವಗಳನ್ನು ಆಚರಿಸುವ ಪದ್ಧತಿಯನ್ನು ಕಾಣಬಹುದಾಗಿದೆ. ಹೀಗೆ ಸ್ತ್ರೀ ಹಾಗೂ ಪುರುಷ ದೈವಗಳನ್ನು ಆರಾಧಿಸುವ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಮೆರೆದಿದ್ದಾರೆ. ಇವುಗಳ ಮೂಲಕ ತಮ್ಮ ಧಾರ್ಮಿಕ ಬದುಕನ್ನು ಕಟ್ಟಿಕೊಂಡಿದ್ದಾರೆ.

೬.೧ ಮಲಿಯಮ್ಮ ದೇವಿ

ಮಲಿಯಮ್ಮ ದೇವತೆಯು ಹ್ಯಾರಡಾದ ಗ್ರಾಮ ದೇವತೆಯಾಗಿದೆ. ಈ ದೇವಿಯು ಗ್ರಾಮದ ಎಲ್ಲಾ ಕೋಮಿನ ದೇವತೆಯಾಗಿದ್ದಾಳೆ. ಇದು ಊರಿನಿಂದ ಉತ್ತರಕ್ಕಿದ್ದು ಒಂದು ಕಿಲೋಮೀಟರ್ ದೂರದಲ್ಲಿದೆ. ಈ ದೇವಾಲಯವು ಮೊದಲು ಹಳೆಯದಾದ ಕಟ್ಟಡವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಗ್ರಾಮದ ಎಲ್ಲಾ ಜನಪದರು ತಮ್ಮ ಸ್ವಂತ ದುಡ್ಡಿನಿಂದ ಸುಂದರವಾದ ದೇವಾಲಯವನ್ನು ನಿರ್ಮಿಸಿದ್ದಾರೆ.

ದೇವಾಲಯದ ಭೌತಿಕ ಸ್ಥಿತಿ: ನೂತನವಾಗಿ ನಿರ್ಮಾಣವಾಗಿರುವ ಈ ದೇವಾಲಯವು ಒಂಭತ್ತು ಅಂಕಣವನ್ನು ಹೊಂದಿದೆ. ಗೋಪುರ ಅದರ ಜೊತೆಗೆ ಕಳಸವನ್ನು ಹೊಂದಿದೆ. ದೇವಾಲಯವು ೧೫ ಅಡಿ ಎತ್ತರ, ೨೦ ಅಡಿ ಅಗಲ, ೩೦ ಅಡಿ ಉದ್ದವನ್ನು ಹೊಂದಿದೆ. ಈ ದೇವಾಲಯವು ಸುಂದರವಾದ ಆಧುನಿಕ ಶೈಲಿಯ ಗೋಪುರವನ್ನು ಹೊಂದಿದ್ದು. ಗೋಪುರದ ತುಂಬೆಲ್ಲಾ ಗ್ರಾಮದ ಸ್ತ್ರೀ ಜನಪದ ದೈವಗಳ ಮೂರ್ತಿಗಳನ್ನು ಕಾಣಬಹುದಾಗಿದೆ. ದೇವಾಲಯದ ಬಾಗಿಲುಗಳ ಇಕ್ಕೆಲುಗಳ ಕುಂಬಿಯ ಮೇಲೆ ಎರಡು ಸಿಂಹಗಳನ್ನು ಕಾಣಬಹುದು. ಗೋಪುರದ ಎಡಗಡೆ ಕೊರವಂಜಿ ದೇವತೆ, ಗಿಣಿ ಶಾಸ್ತ್ರವನ್ನು ಹೇಳುವ ದೇವತೆ, ಆದಿಶಕ್ತಿಯನ್ನು ಕಾಣಬಹುದು. ಗೋಪುರದ ಬಲಗಡೆ ದುರ್ಗಾದೇವಿ, ಕಾಳಿಕಾಂಬೆ, ದೇವತೆಗಳನ್ನು ಕಾಣಬಹುದು. ಅದರ ಮಧ್ಯದಲ್ಲಿ ಲಕ್ಷ್ಮಿಯನ್ನು ಕಾಣಬಹುದು. ಹುತ್ತದಲ್ಲಿ ಮಲಿಯಮ್ಮ ದೇವಿ ಕುಳಿತು ಆಕೆಯ ಮೇಲೆ ಹಸು ಹಾಲು ಕರೆಯುವ ಮೂರ್ತಿಯನ್ನು ಕಾಣಬಹುದು ಮತ್ತು ಮೂಕಾಂಬಿಕೆ ದೇವಿಯ ಮೂರ್ತಿಯನ್ನು ಕಾಣಬಹುದು.

ಗೋಪುರದ ಹಿಂದೆ ಹುಲುಸನ್ನು ಹೊಡೆಯುವ ಮಾಯಮ್ಮ ದೇವಿಯ ಮೂರ್ತಿಯನ್ನು ಕಾಣಬಹುದು. ಮತ್ತೆ ಹುಲುಸನ್ನು ಹೊತ್ತಿರುವ ಇಬ್ಬರು ವ್ಯಕ್ತಿಗಳ ಮೂರ್ತಿಯನ್ನು ಕಾಣಬಹುದು. ಇನ್ನು ದೇವಿಯ ಗರ್ಭಗುಡಿಯಲ್ಲಿ ಮೂರ್ತಿ ಇದೆ. ಇದರ ಜೊತೆಗೆ ದೇವಿಯ ಮೂಲ ವಿಗ್ರಹ ಇದೆ. ಇದು ಕಾಡು ಕಲ್ಲಾಗಿದ್ದು ಸುಮಾರು ೪ ಅಡಿ ಎತ್ತರವಾಗಿದ್ದು, ತಳಭಾಗದಲ್ಲಿ ಒಂದು ಅಡಿ ಅಗಲವಾಗಿದ್ದು, ಮೇಲಕ್ಕೆ ಹೋದಂತೆಲ್ಲಾ ಗಾತ್ರ ಕಡಿಮೆ ಆಗಿ ಒಟ್ಟಾರೆಯಾಗಿ ತ್ರಿಕೋನಾಕಾರದ ಮೂರ್ತಿಯಾಗಿದೆ.

ಇದರ ಪಕ್ಕದಲ್ಲಿಯೇ ಒಂದು ಕೆರೆ ಇದೆ. ಇದನ್ನು ಹಿರೇಕೆರೆ ಅಥವಾ ಮಲಿಯಮ್ಮನ ಕೆರೆ ಎಂದು ಹೇಳುವರು. ದೇವಾಲಯದ ಮುಂದೆ ಮಲಿಯಮ್ಮ ದೇವಿಯ ಪಾದುಕೆಯನ್ನು ಕಾಣಬಹುದಾಗಿದೆ. ದೇವಾಲಯದ ಎದುರಿಗೆ ದೀಪದ ಕಂಬವಿದೆ. ಇದು ಆಧುನಿಕ ಶೈಲಿಯನ್ನು ಹೊಂದಿದ್ದು ೧೩ ಅಡಿ ಎತ್ತರವನ್ನು ಹೊಂದಿದೆ.

ದೇವಾಲಯದ ಮುಂದೆ ವಿಶಾಲವಾದ ಜಾಗವಿದ್ದು ಅದರಲ್ಲಿ ಆಲದ ಮರ, ಬೇವಿನಮರ ಮುಂತಾದ ಮರ-ಗಿಡಗಳನ್ನು ಹೊಂದಿದೆ. ದೇವಾಲಯಕ್ಕೆ ಬಂದ ಭಕ್ತರಿಗೆ ನೆರಳನ್ನು ನೀಡುತ್ತದೆ. ದೇವಾಲಯದ ಮುಂದೆ ಸ್ವಲ್ಪ ದೂರದಲ್ಲಿ ಗುಡ್ಡವನ್ನು ಕಾಣುತ್ತೇವೆ. ಇದನ್ನು ಹ್ಯಾರಡ ಜನಪದರು 'ಹೊತ್ತಿಗುಡ್ಡ' ಅಥವಾ ಗಾಗುರಿ ಗುಡ್ಡ ಎಂದು ಕರೆಯುವರು. ದೇವಾಲಯದ ಹಿಂದೆ ಗದ್ದೆಗಳನ್ನು ಕಾಣಬಹುದು. ಈ ಗದ್ದೆಗಳು ಕೆರೆಯಿಂದ ನೀರನ್ನು ಪಡೆದು ಸದಾ ಹಚ್ಚ-ಹಸಿರಿನಿ ಪೈರಿನಿಂದ ಕಂಗೊಳಿಸುತ್ತಿವೆ. ದೇವಾಲಯದ ಗರ್ಭಗುಡಿಯಲ್ಲಿ ಮೂಲ ವಿಗ್ರಹದ ಜೊತೆಗೆ ಜೀವ ಪ್ರತಿಷ್ಠಾಪನೆಯನ್ನು ಮಾಡಿದ ಮಲಿಯಮ್ಮನ ವಿಗ್ರಹವನ್ನು ಕೆತ್ತಲಾಗಿದೆ. ಈ ಮೂರ್ತಿಯು ಉಗ್ರ ಸ್ವರೂಪವನ್ನು ಪಡೆಯದೇ ಶಾಂತಮೂರ್ತಿಯಾಗಿದೆ. ಈ ಮೂರ್ತಿಯನ್ನು ಕಪ್ಪು ಶಿಲೆಯಿಂದ ಮಾಡಲಾಗಿದೆ. ದೇವತೆಯು ನಾಲ್ಕು ಕೈಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಅಭಯಹಸ್ತ, ಮತ್ತೆರಡು ಕೈಯಲ್ಲಿ ಧಾನ್ಯವನ್ನು ಹಿಡಿದಿರುವುದು ಕಂಡುಬರುತ್ತದೆ. ಇದರ ಕೆಳಗೆ ಕೋಣನ ಚಿತ್ರವನ್ನು ಕಾಣಬಹುದಾಗಿದೆ. ದೇವಿಯ ಎರಡೂ ಬದಿಯಲ್ಲಿ ತೂಗು ದೀಪಗಳನ್ನು ಕಾಣಬಹುದು. ಆಯಾತಾಕಾರದ ಜಗುಲಿಯ ಮೇಲೆ ಮೂಲ ವಿಗ್ರಹ ಹಾಗೂ ಪ್ರತಿಷ್ಠಾಪನಾ ವಿಗ್ರಹವನ್ನು ಇಡಲಾಗಿದೆ. ಅದಲ್ಲದೆ ಗ್ರಾಮದ ವಿವಿಧ ಸ್ತ್ರೀ ದೈವಗಳ ಚಿಕ್ಕ-ಚಿಕ್ಕ ಮೂರ್ತಿಗಳನ್ನು ಕಾಣಬಹುದು. ದೇವತೆಯ ಮೂಲ ವಿಗ್ರಹಕ್ಕೆ ಹಾಗೂ ಪ್ರತಿಷ್ಠಾಪನೆಯಾದ ವಿಗ್ರಹಕ್ಕೆ ಪೂಜೆ, ಅಭಿಷೇಕ ಕಾರ್ಯಕ್ರಮಗಳು ನಡೆಯುತ್ತವೆ. ಅಭಿಷೇಕದ ಜಲ ಹೊರಗಡೆ ಹೋಗಲು ವ್ಯವಸ್ಥೆ ಮಾಡಲಾಗಿದೆ. ಮೂಲ ವಿಗ್ರಹವನ್ನು ಹಸಿರು ಸೀರೆಯಿಂದ ಸುತ್ತಿ, ಹಸಿರು ಬಳೆಗಳಿಂದ ಸದಾ ಅಲಂಕರಿಸಿರುತ್ತಾರೆ.

ಗರ್ಭಗುಡಿಯಲ್ಲಿ ಪೂಜೆಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿರಲಾಗಿರುತ್ತದೆ. ಗರ್ಭಗುಡಿಯಲ್ಲಿ ದೇವಿಯ ಮುಂದೆ ಸದಾ ದೀಪಗಳ ಬೆಳಕನ್ನು ಕಾಣಬಹುದಾಗಿದೆ. ಮಲಿಯಮ್ಮ ದೇವತೆಯು ಸಮೃದ್ಧಿಯನ್ನು ಕರುಣಿಸುವ ದೈವವಾಗಿದೆ. ಈಕೆಯನ್ನು ಅನುಗ್ರಹ ದೇವತೆ ಎಂದು ಕರೆಯುವರು.

ದೇವತೆಯ ಹಿನ್ನೆಲೆಗಿರುವ ಐತಿಹ್ಯಗಳು

ಐತಿಹ್ಯ-೧: "ಹ್ಯಾರಡ ಗ್ರಾಮಕ್ಕೆ ಒಂದು ಬಾರಿ ಭೀಕರ ಬರಗಾಲ ಬಂದು ಮಳೆ ಇಲ್ಲದೆ ದನಕರುಗಳಿಗೆ ಆಹಾರವಿಲ್ಲದೇ ಬಹಳ ಕಷ್ಟವಾಯಿತು. ಕುರುಬ ಸಮುದಾಯದ ವ್ಯಕ್ತಿಯೊಬ್ಬ ದೂರದ ಮಲೆನಾಡಿನಿಂದ ದನಕರುಗಳಿಗೆ ಬಂಡಿಯಲ್ಲಿ ಭತ್ತದ ಹುಲ್ಲನ್ನು ಹೇರಿಕೊಂಡು ಬರುವಾಗ ಗಾಡಿಗೆ ತುಂಬಾ ಹಿಂಭಾರವಾಗಿ ಎತ್ತುಗಳಿಗೆ ಗಾಡಿಯನ್ನು ಎಳೆಯುವುದು ತುಂಬಾ ಕಷ್ಟವಾಯಿತು. ಆದ್ದರಿಂದ ಆ ಯುವಕನು ಗಾಡಿಯನ್ನು ನಿಲ್ಲಿಸಿ ದಾರಿಯ ಪಕ್ಕದಲ್ಲಿರುವ ಕಲ್ಲನ್ನು ಬಂಡಿಯ ಮುಂಭಾಗದಲ್ಲಿ ಇಟ್ಟನು. ಗ್ರಾಮವು ಇನ್ನು ಸ್ವಲ್ಪ ದೂರ ಇದೆ ಎನ್ನುವಾಗ ಗಾಡಿಯು ಮುಂಭಾರವಾಗಿ ಎತ್ತುಗಳು ಗಾಡಿಯನ್ನು ಎಳೆಯದೇ ನಿಂತವು. ಆಗ ಆ ಯವಕನು ಗಾಡಿಯಲ್ಲಿ ಹಾಕಿದ್ದ ಕಲ್ಲನ್ನು

ಅಲ್ಲಿಯೇ ಇಟ್ಟು ಸಮಭಾರ ಮಾಡಿಕೊಂಡು ಬಂದನು. ಸ್ವಲ್ಪ ದಿನಗಳು ಗತಿಸಿದ ನಂತರ ಒಂದು ದಿನ ಊರ ಪ್ರಮುಖರ ಕನಸಿನಲ್ಲಿ ದೇವತೆಯು "ನಾನು ಮಲೆನಾಡಿನಿಂದ ಇಲ್ಲಿಗೆ ಬಂದು ನಾಲ್ಕೈದು ದಿನಗಳಾಗಿವೆ, ನನಗೆ ದೇವಾಲಯವನ್ನು ಕಟ್ಟಿಸಿ ಜಾತ್ರೆ ಮಾಡಿ ಬಲಿಕೊಡಿರಿ" ಎಂದು ಹೇಳಿದಳಂತೆ. ಬೆಳಗ್ಗೆ ಊರ ಪ್ರಮುಖರೆಲ್ಲಾ ಸೇರಿಕೊಂಡು ತಮ್ಮ ಕನಸಿನಲ್ಲಿ ಬಂದದ್ದು ದೇವತೆಯೆಂದು ತಿಳಿದು ಅದಕ್ಕೆ ಊರಿನವರು ಕೂಡಿ ದೇವಸ್ಥಾನ ಕಟ್ಟಿಸಿ ಜಾತ್ರೆ ಮಾಡಲು ಪ್ರಾರಂಭಿಸಿದರಂತೆ.

ಐತಿಹ್ಯ-೨ : ಗ್ರಾಮದಲ್ಲಿ ಬ್ರಾಹ್ಮಣರ ಹುಡುಗನೊಬ್ಬ ಪರದೇಶ(ಬೇರೆ ರಾಜ್ಯ)ಕ್ಕೆ ಓದಲು ಹೋದಾಗ ಅವನು ಅಲ್ಲಿಯ ಹುಡುಗಿಯನ್ನು ಮದುವೆಯಾಗಿ ಬಂದನು. ಆಗ ಹುಡುಗನ ತಂದೆ ಅವರು ಬಂದಾಗ ರಾತ್ರಿ ಊಟಕ್ಕೆ ಹೋಳಿಗೆಯನ್ನು ಮಾಡಿಸಿದ್ದರು. ಊಟ ಮಾಡುತ್ತಿದ್ದಾಗ ಬ್ರಾಹ್ಮಣ ಹುಡುಗನ ಹೆಂಡತಿಯು ಹೋಳಿಗೆಯನ್ನು ಉದ್ದೇಶಿಸಿ ಇದೇನು ಕೋಣನ ನಾಲಿಗೆ ಇದ್ದ ಹಾಗಿದೆಯಲ್ಲ ಎಂದಳು. ಅದನ್ನು ಕೇಳಿಸಿಕೊಂಡು ಮಲಗಿದ್ದ ಬ್ರಾಹ್ಮಣ ತಂದೆಯು ಬೆಳಗ್ಗೆ ಊರ ಜನರನ್ನೆಲ್ಲಾ ಕರೆಸಿ ತನಗೆ ಕನಸಿನಲ್ಲಿ ಒಂದು ದೇವತೆಯು ಬಂದು ಜಾತ್ರೆ ಮಾಡಿಸಿ ಅಂದಳು. ಅಲ್ಲದೆ ಒಬ್ಬನೇ ಮಗನಿದ್ದ ಅವನ ಹೆಂಡತಿ ಮತ್ತು ಮಗುವನ್ನು ಬಲಿಕೊಡಬೇಕೆಂದು ಕೇಳಿದ್ದಾಳೆ ಎಂದು ಸುಳ್ಳು ಹೇಳಿದನು. ಆಗ ಊರಿನವರು ಬಲಿಗೆ ಯಾರನ್ನು ಕೊಡುವುದು ಎಂದು ಕೇಳಿದಾಗ ನನ್ನ ಮಗನ ಹೆಂಡತಿ ಇದ್ದಾಳೆ, ಅವಳನ್ನೇ ಕೊಡೋಣ ಎಂದು ಹೇಳಿದನು. ಊರ ಜನರು ಮುಂದಿನ ಜಾತ್ರೆಗೆ ಎಂದು ಕೇಳಿದಾಗ, ಮುಂದಿನ ಜಾತ್ರೆಗೆ ಒಂದು ಕೋಣವನ್ನು ಮತ್ತು ಅದರ ಜೊತೆಗೆ ಹರೆಮರಿಯನ್ನು ಕೊಟ್ಟರಾಗುತ್ತದೆ ಎಂದು ಹೇಳಿದನು. ಆಗ ಜನರು ಒಪ್ಪಿಕೊಂಡು ಜಾತ್ರೆಯನ್ನು ಮಾಡಿದರು. ಅದೇ ಮುಂದುವರೆದುಕೊಂಡು ಬಂದಿದೆ ಎಂದು ಹೇಳುತ್ತಾರೆ.

ಮೇಲಿನ ಎರಡೂ ಐತಿಹ್ಯಗಳನ್ನು ನೋಡಲಾಗಿ ಮೊದಲನೆಯ ಕಥೆಯಲ್ಲಿ "ಗ್ರಾಮದ ಜನರು ಬರದ ಬವಣೆಗೆ ಸಿಕ್ಕು ಆಹಾರವಿಲ್ಲದಂತೆ ಪರಿತಪಿಸುವಾಗ ಸಹಜವಾಗಿಯೇ ದೇವಿಯ ಮೊರೆ ಹೋಗುವುದನ್ನು ಕಾಣಬಹುದಾಗಿದೆ. ಇದು ಪ್ರತಿಯೊಬ್ಬ ಜನಪದರ ಸಹಜ ಪ್ರಕ್ರಿಯೆಯಾಗಿದೆ. ತಮ್ಮ ಬವಣೆಗಳನ್ನು ನೀಗಿಸುವ, ತಮಗೆ ಆಸರೆಯಾಗಿ ನಿಲ್ಲುವ ದೇವತೆಯನ್ನು ಪಡೆಯುವುದು ಇತಿಹಾಸದುದ್ದಕ್ಕೂ ಸಹಜ ಪ್ರಕ್ರಿಯೆಯಾಗಿದೆ. "ಒಂದು ಕಾಡು ಕಲ್ಲಿನಲ್ಲಿ ಅವರು ಮಲಿಯಮ್ಮನನ್ನು ಆರೋಪಿಸಿದ್ದು ಹಳ್ಳಿಗರಿಗೆ ಜಗತ್ತಿನ ಸಕಲ ಚರಾಚರಗಳು ದೇವತಾ ಸ್ವರೂಪಗಳೇ, ನೆರಳು ನೀಡುವ ಮರ, ನೀರು ಉಣಿಸುವ ನದಿ, ಅಚಲವಾದ ಕಲ್ಲು, ಅನ್ನ ನೀಡುವ ಹಸಿರು, ವ್ಯವಸಾಯಕ್ಕೆ ಸಹಾಯವಾಗುವ ಜಾನುವಾರುಗಳು ಹೀಗೆ ಎಲ್ಲವೂ ಮಹಿಮಾ ಪೂರ್ಣವಾದುವೇ. ಮಲೆನಾಡಿನಿಂದ ಬಂದ ಕಲ್ಲು ಸಹಜವಾಗಿ ಆಗ ತಲ್ಲಣದಲ್ಲಿದ್ದ ಜನರಿಗೆ ಭರವಸೆಯ ಆಸರೆಯಾಯಿತು. ಸಮೃದ್ಧಿಯ ದೇವತೆಯಾಗಿ ಪ್ರತಿಷ್ಠಾಪಿಸಲ್ಪಟ್ಟಿತು" (ಡಾ.ಮಂಜುನಾಥ ಬೇವಿನಕಟ್ಟಿ).

ಇನ್ನು ಎರಡನೆಯ ಕಥೆಯಲ್ಲಿ ಸಮುದಾಯದ ಶ್ರೇಣೀಕೃತ ವ್ಯವಸ್ಥೆಯಲ್ಲಿನ ಇನ್ನೊಂದು ಮುಖವನ್ನು ಕಾಣಬಹುದು. ಹುಡುಗ ಬ್ರಾಹ್ಮಣ ಸಮುದಾಯದ ಯುವಕನಾಗಿ ಹುಡುಗಿಯು ಕೆಳವರ್ಗದವಳಾಗಿದ್ದು, ಅವರ ತಂದೆ ಸಹಿಸದೇ ಅವಳನ್ನು ಬಲಿ ಕೊಡುವ ಆತನ ಮನೋಭಾವ ಅಂದಿನ ಪುರೋಹಿತಶಾಹಿ ವರ್ಗದ ಕ್ರೂರತೆಯನ್ನು ಕಾಣಬಹುದಾಗಿದೆ. ನಾವು ಇತಿಹಾಸದುದ್ದಕ್ಕೂ ನೋಡಿದಾಗ ವೈದಿಕ ಸಂಸ್ಕೃತಿಯ ಪ್ರಸರಣದ ಕಾಲಾವಧಿಯಲ್ಲಿ ಯಜ್ಞಯಾಗಾದಿಗಳಿಗೆ ನರಬಲಿಯನ್ನು ಅದರಲ್ಲೂ ವಿಶೇಷವಾಗಿ ದುರ್ಬಲರಾಗಿರುವ ಕೆಳವರ್ಗದ ಜನರನ್ನು ಬಲಿಕೊಡುವುದು ಸಾಮಾನ್ಯವಾಗಿತ್ತು. ನಂತರದಲ್ಲಿ ಪ್ರಾಣಿಗಳನ್ನು ಬಲಿಕೊಡಲಾಯಿತು. ತದನಂತರದಲ್ಲಿ ಕೇವಲ ಮುಡಿಕೊಡುವ ವ್ಯವಸ್ಥೆ ಮುಂದುವರೆಯಿತು. "ಈ ರೀತಿಯ ಕಥೆಗಳು ವರ್ಣಸಂಕರ ಏರ್ಪಡಬಾರದೆಂದು ಅನುಲೋಮ ವಿವಾಹಗಳಿಗೆ ನಿರೋಧಕವಾಗಿ ಚಾಲ್ತಿಗೊಳಿಸಲ್ಪಟ್ಟವುಗಳಿರಬೇಕು. ಅಂದರೆ ಶಿಕ್ಷೆಯ ಸಂಕೇತವಾಗಿ ಐತಿಹ್ಯವು, ನಿರೋಧನೆಯ ಸಂಕೇತವಾಗಿ ದೇವತೆಯು ಇವೆ. ಬ್ರಾಹ್ಮಣ ಹುಡುಗನೊಬ್ಬ ಬೇರೆ ನಾಡಿನಿಂದ ಅಸ್ಪೃಶ್ಯರು ಸಮುದಾಯದವಳೊಬ್ಬಳನ್ನು ಮದುವೆಯಾಗಿ ಬರುವುದು, ಅದನ್ನು ಸಹಿಸದ ಅವರ ತಂದೆ, ಆ ಹೆಂಡತಿ ಮತ್ತು ಮೊಮ್ಮಗನನ್ನು ಬಲಿ ಕೊಡುವುದು ಈ ಕಥೆಯ ಸಾರಾಂಶ. ಈ ಕಥೆಯಿಂದ ತಿಳಿಯುವುದೇನೆಂದರೆ ಹಿಂದೂ ಧರ್ಮದ ಶ್ರೇಣಿಯ ಮೇಲ್ವರ್ಗಗಳು ಕೆಳಸಮುದಾಯದ ವಿವಾಹವೊಂದನ್ನು ಸಹಿಸಲಾರದೆ ಅವರನ್ನು ಬಲಿಕೊಟ್ಟು ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿದ್ದಾರೆ". (ಡಾ. ಮಂಜುನಾಥ ಬೇವಿನಕಟ್ಟಿ)".

ಮಲಿಯಮ್ಮನ ಜಾತ್ರೆ: ಗ್ರಾಮದಲ್ಲಿ ಮಳೆ ಬೆಳೆಗಳು ಚೆನ್ನಾಗಿ ಆಗಿ ಜನರೆಲ್ಲರೂ ಸಂತೃಪ್ತಿಯಿಂದ ಜೀವನ ನಡೆಸುವ ಉದ್ದೇಶದಿಂದ ಜಾತ್ರೆಯನ್ನು ಆಚರಿಸುವರು. ಗ್ರಾಮಕ್ಕೆ ಯಾವುದೇ ರೀತಿಯ ಮಾರಣಾಂತಿಕ ಕಾಯಿಲೆಗಳು ಬರದಿರಲು, ಬೆಳೆಗಳು ಸಮೃದ್ಧಿಯಿಂದ ಬರಲು ಜಾತ್ರೆಯನ್ನು ಆಚರಿಸುವುದು ಪ್ರಮುಖ ಉದ್ದೇಶವಾಗಿದೆ. ಈ ಜಾತ್ರೆಯು ಸಾಮಾನ್ಯವಾಗಿ ಡಿಸೆಂಬರ್ ಅಥವಾ ಜನವರಿ ತಿಂಗಳಿನಲ್ಲಿ ನಡೆಯುವುದುಂಟು. ಜಾತ್ರೆಯು ಮೂರು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ ಗ್ರಾಮಕ್ಕೆ ಸಮೃದ್ಧವಾದ ಮಳೆ, ಬೆಳೆ ಬಂದಿದ್ದರೆ ವರ್ಷಕ್ಕೊಮ್ಮೆ ಸಹ ಮಾಡುವರು.

ಜಾತ್ರೆಯ ಪೂರ್ವಭಾವಿ ಹಂತಗಳು: ಗ್ರಾಮದ ಜನರೆಲ್ಲರೂ ಮಳೆ ಬೆಳೆಯಿಂದ ಸಮೃದ್ಧರಾಗಿದ್ದಾಗ ಜಾತ್ರೆಯನ್ನು ಮಾಡುವುದು ಎಂದು ನಿಶ್ಚಯಿಸುವರು. ನಂತರ ಊರಿನ ಪ್ರಮುಖರು ಹರಿಜನರಿಗೆ ಜೋಡು ಹಲಗೆಯೊಂದಿಗೆ ಡಂಗೂರ ಸಾರಲು ಹೇಳುವರು. ಅವರು ಗ್ರಾಮದ ಪ್ರಮುಖ ಬೀದಿಗಳಲ್ಲಿ "ಮಲಿಯಮ್ಮನ ಜಾತ್ರೆ ಬಗ್ಗೆ ಮಾತನಾಡಲು ಎಲ್ಲರೂ ಚೌಡಿಕಟ್ಟೆಗೆ ಬರ್ಬೋ" ಎಂದು ಜೋರಾಗಿ ಹೇಳುತ್ತಾ ಸಾಗುವರು. ಆಗ ಗ್ರಾಮದಲ್ಲಿರುವ ಎಲ್ಲಾ ಸಮುದಾಯದವರು, ಹಿರಿಯರು ಕೂಡುವರು. ಆಗ ಹಿರಿಯರೆಲ್ಲರೂ ಜಾತ್ರೆಯನ್ನು ಮಾಡುವುದರ ಬಗ್ಗೆ ಪ್ರತಿಯೊಂದು ಮನೆಯವರು ಎಷ್ಟೆಷ್ಟು ದೇಣಿಗೆಯನ್ನು ಕೊಡಬೇಕೆಂದು ನಿಶ್ಚಯಿಸುವರು.

ಸಾಮಾನ್ಯವಾಗಿ ಹ್ಯಾರಡ ಗ್ರಾಮದಲ್ಲಿ ಗಳೇವು ಆಧಾರದ ಮೇಲೆ ಇಂತಿಷ್ಟು ದೇಣಿಗೆ ಎಂದು ನಿರ್ಧರಿಸುವರು. ಸಾಮಾನ್ಯವಾಗಿ ಒಂದು ಗಳೇವಿಗೆ ೫೦೦ ರೂ, ಟ್ರ್ಯಾಕ್ಟರ್ ಇದ್ದವರಿಗೆ ೧೫೦೦ ರೂ, ಕೂಲಿಕಾರ್ಮಿಕರಿಗೆ ೨೦೦ ರೂ ನಿಗದಿ ಮಾಡುವರು. ನಂತರದಲ್ಲಿ ಜಾತ್ರೆಯನ್ನು ಡಿಸೆಂಬರ್ ಕೊನೆಯ ವಾರದಲ್ಲಿ ಅಥವಾ ಜನವರಿ ಮೊದಲನೇ ವಾರದಲ್ಲಿ ನಡೆಸಲು ತಿರ್ಮಾನಿಸುವರು. ನಂತರ ಹರಿಜನರಿಗೆ ಜೋಡು ಹಲಿಗೆಯ ಮುಖಾಂತರ ಹೇಳಲು ಸೂಚಿಸುವರು. ಅಂದಿನಿಂದ ಜಾತ್ರೆಗೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳುವರು. ಗ್ರಾಮದ ಪ್ರತಿಯೊಂದು ಮನೆಯ ಹೊರಗೋಡೆಗಳನ್ನು ಕೆಸರಿನಿಂದ ಮೆತ್ತುವರು ಹಾಗೂ ಸುಣ್ಣ-ಬಣ್ಣಗಳಿಂದ ಅಲಂಕಾರಗೊಳಿಸುವರು. ಜಾತ್ರೆಯ ಸಮಯದಲ್ಲಿ ರೊಟ್ಟಿಯನ್ನು ಸುಡಬಾರದು ಎಂಬ ನಿಯಮವಿರುವುದರಿಂದ ಅಂದಿನಿಂದದೇ ರೊಟ್ಟಿಯನ್ನು ಸುಟ್ಟು ಸಂಗ್ರಹಿಸಿಡುವರು. ಜಾತ್ರೆಗೆ ಬೇಕಾಗುವ ಗುರಾಳು ಚಟ್ನಿ, ಕಡ್ಲಿ ಚಟ್ನಿ,ಉಪ್ಪಿನಕಾಯಿ, ಮಾಂದ್ಲಿ, ಕಾರದ ಪುಡಿಗಳನ್ನು ಕುಟ್ಟಿ ತಯಾರಿಸಿಕೊಳ್ಳುವರು. ಬೇರೆ ಬೇರೆ ಊರುಗಳಲ್ಲಿರುವ ತಮ್ಮ ಬೀಗರನ್ನು ಜಾತ್ರೆಗೆ ಆಮಂತ್ರಿಸುವರು. ಮನೆಯಲ್ಲಿರುವ ಎಲ್ಲಾ ಪುರುಷ, ಸ್ತ್ರೀ, ಮಕ್ಕಳಿಗೆ ಹೊಸ ಹೊಸ ಬಟ್ಟೆಗಳನ್ನು ಖರೀದಿಸುವರು. ಜಾತ್ರೆಗೆ ಬೇಕಾಗುವ ಅಕ್ಕಿ, ಬೇಳೆ, ಜೋಳ, ಎಣ್ಣೆ, ಹಿಟ್ಟು ತರಕಾರಿಗಳು ಮುಂತಾದವುಗಳನ್ನು ಮುಂಚಿತವಾಗಿಯೇ ಸಂಗ್ರಹಿಸಿಟ್ಟುಕೊಳ್ಳುವರು. ಮನೆಯ ಒಳಗೆ ಹಾಗೂ ಹೊರಗೆ ಸುಣ್ಣಗಳಿಂದ ಅಲಂಕರಿಸಿ ವಿಧ ವಿಧವಾದ ಚಿತ್ತಾರಗಳನ್ನು ಬಿಡಿಸುವರು.

ಇನ್ನು ಊರಿನ ಪ್ರಮುಖ ಬೀದಿಗಳನ್ನು ಅಲಂಕರಿಸುವರು. ಇಡೀ ಊರನ್ನು ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸುವರು. ಗ್ರಾಮದ ಎಲ್ಲಾ ದೈವಗಳ ದೇವಾಲಯಗಳಿಗೆ ಸುಣ್ಣದಿಂದ ಅಲಂಕೃತಗೊಳಿಸಿ ವಿದ್ಯುತ್ ದೀಪಗಳನ್ನು ಹಚ್ಚುವರು. ಗ್ರಾಮದಲ್ಲಿರುವ ಸಣ್ಣ ಪುಟ್ಟ ರಸ್ತೆಗಳನ್ನು ರಿಪೇರಿ ಮಾಡಿಸುವರು. ಚರಂಡಿಗಳನ್ನು ರಿಪೇರಿ ಮಾಡಿಸುವರು. ಪ್ರತಿಯೊಂದು ಸಮುದಾಯಗಳೂ ಸಹ ತಮ್ಮ ತಮ್ಮ ಕೆಲಸಗಳನ್ನು ಚಾಚೂ ತಪ್ಪದೇ ನಿರ್ವಹಿಸಬೇಕೆಂದು ಸೂಚಿಸುವರು. ಸಂಪೂರ್ಣವಾಗಿ ಜಾತ್ರೆಯ ಉಸ್ತುವಾರಿಯನ್ನು ಗ್ರಾಮದ ಬಣಕಾರ, ಹಿರಿಯರು ಇತ್ತೀಚೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು ನಿರ್ವಹಿಸುವರು. ಇವರು ಗ್ರಾಮದ ಪ್ರತಿಯೊಂದು ಮನೆಗಳಿಗೆ ತೆರಳಿ ದೇಣಿಗೆಯನ್ನು ಸಂಗ್ರಹಿಸುವರು. ಜಾತ್ರೆಯ ಉಸ್ತುವಾರಿಯನ್ನು ಹೊಂದಿದವರು ಜಾತ್ರೆಗೆ ಮುಂಚಿತವಾಗಿ ಜಾತ್ರೆಗೆ ಬೇಕಾಗಿರುವ ಅಗತ್ಯ ಸಾಮಗ್ರಿಗಳನ್ನು ಕೊಂಡುಕೊಂಡು ಬರುವರು.

ಜಾತ್ರೆಯು ಇನ್ನು ಐದು ದಿನಗಳು ಇರುವಾಗ ಕೋಣವನ್ನು ಹಿಡಿದು ಅಂಕೆಗೆ ಹಾಕುವರು. ಯಾಕೆಂದರೆ ಇಷ್ಟು ದಿನಗಳ ಕಾಲ ಎಲ್ಲಿ ಬೇಕೆಂದರಲ್ಲಿ ಚೆನ್ನಾಗಿ ತಿಂದು ಬಲಿಷ್ಠವಾದ ಕೋಣವನ್ನು ಕಟ್ಟಿ ಹಾಕಿ ಅದರ ಸೊಕ್ಕನ್ನು ಪಳಗಿಸುವುದು ಇದರ ಉದ್ದೇಶ. ಅದಕ್ಕಾಗಿ ಐದು ದಿನಗಳ ಕಾಲ ಅದಕ್ಕೆ ಆಹಾರವನ್ನು ಕೊಡದೇ ಕೇವಲ ಸುಣ್ಣದ ನೀರನ್ನು ಮಾತ್ರ ಕೊಡುವರು. ಇದರಿಂದ ಅದರ ಕೊಬ್ಬನ್ನು ಕರಗಿಸಬಹುದಾಗಿದೆ. ಈ ಕೋಣವನ್ನು ಅಂಕೆಗೆ ಹಾಕುವ ಜವಾಬ್ದಾರಿಯನ್ನು ಹರಿಜನರು ವಹಿಸುವರು.

ಜಾತ್ರೆಯ ವಿಧಿ-ವಿಧಾನ : ಬಾರಿಕರ ಮನೆಯಲ್ಲಿ ಅಂದರೆ ಗಟ್ಟಿ ಮನೆಯಲ್ಲಿ ದೇವತೆಯ ಮೂರ್ತಿಯು ಇರುತ್ತದೆ. ಮಂಗಳವಾರ ಪೆಟ್ಟಿಗೆಯಿಂದ ದೇವತೆಯ ಮೂರ್ತಿಯನ್ನು ತೆಗೆದು ದೇವಿಯನ್ನು ನೀರಿನಿಂದ ತೊಳೆದು ಅಲಂಕಾರಗೊಳಿಸುವರು. ನಂತರದಲ್ಲಿ ದೇವಿಗೆ ಉಡಿತುಂಬುವರು. ಊರಿನ ಎಲ್ಲಾ ಹೆಣ್ಣುಮಕ್ಕಳು ಬಂದು ಪೂಜೆಯನ್ನು ಮಾಡುವರು. ಮಕ್ಕಳು ಆಗದೇ ಇದ್ದ ಸ್ತ್ರೀಯರು ಬಂದು ಇಲ್ಲಿ ಉಡಿ ತುಂಬಿಕೊಂಡರೆ ಮಕ್ಕಳು ಆಗುವ ಒಂದು ಪ್ರತೀತಿಯನ್ನು ಕಾಣಬಹುದಾಗಿದೆ. ಆಮೇಲೆ ಪೋತರಾಜನನ್ನು ಅವರ ಮನೆಯಿಂದ ಗಟ್ಟಿ ಮನೆಗೆ ಮೆರವಣಿಗೆಯಿಂದ ಕರೆತರುವರು. ಈತನು ಒಂಭತ್ತು ದಿನಗಳ ಕಾಲ ಒಪ್ಪತ್ತಿರುವನು. ಪೋತರಾಜನನ್ನು ಗಟ್ಟಿ ಮನೆಗೆ ಕರೆತಂದು ನಂತರದಲ್ಲಿ ಕುಂಬಾರ ಮನೆಯಿಂದ ಕೇಲನ್ನು ಹಾಗೂ ಬಡಿಗೇರ ಮನೆಯಿಂದ ಮರದ ಮಕ್ಕಳನ್ನು ಮೆರವಣಿಗೆಯ ಮುಖಾಂತರವಾಗಿ ಗಟ್ಟಿ ಮನೆಗೆ ಕರೆತರುವರು.

ರಾತ್ರಿ ಹನ್ನೆರಡು ಗಂಟೆಯ ನಂತರ ದೇವಿಯನ್ನು ವಿಜೃಂಭಣೆಯಿಂದ ಮೆರವಣಿಗೆ ಹೊರಡಿಸುವರು. ಗಟ್ಟಿ ಮನೆಯಿಂದ ದೇವಿಯ ಉತ್ಸವ ಮೂರ್ತಿಯನ್ನು ಹೊರ ತರುವರು. ಹೊರಗಡೆ ಬಂದ ತಕ್ಷಣ ದೇವಿಯ ಮುಂದೆ ಒಂದು ಹರೆಮರಿಯನ್ನು ಕಡಿಯುವರು. ಈ ಹರೆಮರಿಯನ್ನು ಸಂಬಂಧಿಸಿದ ಆಯಗಾರರಿಗೆ ಕೊಡುವರು. ದೇವಿಯ ಪಕ್ಕದಲ್ಲಿ ಬಾರಿಕೇರ ವಂಶಸ್ಥರು ಕಣುಕದ ದೀಪವನ್ನು ಹೊರುವರು. ಅಗಲವಾದ ತಟ್ಟೆಯಲ್ಲಿ ಕಣುಕವನ್ನು ಹಾಕಿ ಅದನ್ನು ಗುಣಿ ಮಾಡಿ ಅದರಲ್ಲಿ ಎಣ್ಣೆಯನ್ನು ಹಾಕಿ ಹತ್ತಿ ಬಟ್ಟೆಯನ್ನು ಭತ್ತಿಯನ್ನಾಗಿ ಮಾಡಿದ ದೀಪವಾಗಿದೆ. ಇದನ್ನು ಈ ವಂಶಸ್ಥರೇ ಹೊರುವರು. ಗಟ್ಟಿ ಮನೆಯಿಂದ ಕೋಟೆಯ ಬಾಗಿಲ ಹತ್ತಿರ ದೇವತೆಯು ಬಂದಾಗ ಇನ್ನೊಂದು ಹರೆಮರಿಯನ್ನು ಕಡಿಯುವರು. ನಂತರ ದೇವಿಯು ಚೌಡಿಕಟ್ಟೆಗೆ ಬರುವಳು. ಅಲ್ಲಿ ಡೊಳ್ಳಿನವರು, ಕೋಲಾಟದವರು, ಸೊನಾಯ ಬಾರಿಸುವವರು, ಹಲಗೆ ಬಾರಿಸುವವರು ಮುಂತಾದವರು ತಮ್ಮ ಕಲೆಯನ್ನು ಪ್ರದರ್ಶನ ಮಾಡುತ್ತಾ ದೇವಿಯೊಂದಿಗೆ ಹೆಜ್ಜೆ ಹಾಕುವರು. ನಂತರ ಕೋಣವನ್ನು ಹಿಡಿದುಕೊಂಡು ಬರುವರು.

ನಿಧಾನವಾಗಿ ದೇವಿಯು ಪ್ರಮುಖ ಬೀದಿಗಳಲ್ಲಿ ಚಲಿಸುವಳು. ಬೇವಿನಕಟ್ಟೆಗೆ ಬಂದಾಗ ಮತ್ತೊಂದು ಹರೆಮರಿಯನ್ನು ಕಡಿಯುವರು. ಬೇವಿನ ಕಟ್ಟೆಯಲ್ಲಿ ಮದ್ದು-ಪಟಾಕಿಗಳನ್ನು ಸುಡುವರು. ಚಿತ್ತಾರದಿಂದ ಕೂಡಿರುವ ಮದ್ದು-ಗುಂಡುಗಳನ್ನು ಸುಡುವರು. ನಂತರದಲ್ಲಿ ಹಾಗೆಯೇ ದೇವಿಯು ಚಲಿಸುವಳು. ಚಿಕ್ಕ ಮಲಿಯಮ್ಮನ ಹತ್ತಿರ ಬಂದಾಗ ಮತ್ತೊಂದು ಹರೆಮರಿಯನ್ನು ಕಡಿಯುವರು. ಅಲ್ಲಿಂದ ಗುಡಿಯವರೆಗೆ ಯಾವುದೇ ಮೆರವಣಿಗೆ ಇರುವುದಿಲ್ಲ. ನಿಧಾನವಾಗಿ ದೇವಿಯನ್ನು ಹೊತ್ತುಕೊಂಡು ದೇವಸ್ಥಾನದ ಹತ್ತಿರ ಬರುವರು. ದೇವಿಯನ್ನು ದೇವಾಲಯದ ಮುಂದೆ ಚಪ್ಪರದ ಅಡಿಯಲ್ಲಿ ಜಗುಲಿಯ ಮೇಲೆ ಕುಳ್ಳಿರಿಸುವರು. ಕೋಣವನ್ನು ಮೂರು ಬಾರಿ ದೇವಾಲಯದ ಸುತ್ತ ಪ್ರದಕ್ಷಿಣೆ ಮಾಡಿಸುವರು. ದೇವಿಗೆ ವಿವಿಧ ರೀತಿಯ ಪೂಜಾ ಕೈಂಕರ್ಯಗಳು ನಡೆಯುವವು. ಗ್ರಾಮದ

ಎಲ್ಲಾ ಜನಪದರು ದೇವಿಗೆ ಎಡೆಯನ್ನು ಸಮರ್ಪಿಸುವರು. ನಂತರದಲ್ಲಿ ಒಪ್ಪತ್ತು ಇದ್ದವರು ಒಪ್ಪತ್ತು ಬಿಡುವರು. ದೇವಸ್ಥಾನದ ಹತ್ತಿರ ಚೌತಕಟ್ಟೆ ಇದೆ. ಅಲ್ಲಿ ಒಪ್ಪತ್ತು ಇದ್ದವರು ಬೇರೆ ಊರಿನಿಂದ ಬಂದವರಿಗೆ ಮಾಂಸಾಹಾರ ಹಾಗೂ ಸಸ್ಯಾಹಾರದ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಬೆಳಿಗ್ಗೆ ಸೂರ್ಯ ಉದಯ ಆಗುವುದಕ್ಕಿಂತ ಪೂರ್ವದಲ್ಲಿ ದೇವಿಯ ಮುಂಭಾಗದಲ್ಲಿ ಹರಿಜನರು ಕೋಣವನ್ನು ಮಲಗಿಸಿ ರೆಂಪಿಗೆಯಿಂದ ಶಿರವನ್ನು ಕಡಿಯುವರು. ಕೋಣವನ್ನು ಕಡಿಯುವ ಸಮಯದಲ್ಲಿ ಬೇರೆ ಊರಿನವರಿಗೆ ಇಲ್ಲಿ ಪ್ರವೇಶವಿರುವುದಿಲ್ಲ. ರಕ್ತವನ್ನು ತುಳಿಯದಂತೆ ಅದಕ್ಕೆ ಮಣ್ಣನ್ನು ಹಾಕುವರು. ಬಲಿಯಾದ ಕೋಣದ ಬಲಗಾಲನ್ನು ತುಂಡರಿಸಿ ಕೋಣನ ಬಾಯಲ್ಲಿ ಇಡುವರು. ಇದರಿಂದ ದೇವತೆಯು ಶಾಂತವಾಗುತ್ತಾಳೆ ಎಂಬುದು ಹ್ಯಾರಡಾ ಜನಪದರ ನಂಬಿಕೆಯಾಗಿದೆ. ದೇವಿಯ ಎದುರುಗಡೆ ಕೋಣದ ತಲೆಯನ್ನು ಇಡುವರು. ನಂತರ ಕೋಣದ ತಲೆಯ ಮೇಲೆ ಪಣತಿಯನ್ನು ಇಟ್ಟು ಹಣತೆಯನ್ನು ಹಚ್ಚಿ ಇಡುವರು. ಕೋಣವು ಬಲಿಯಾದ ನಂತರ ಉತ್ಸವ ಮೂರ್ತಿಯ ಮೂಗುತಿ, ಬಳೆಯನ್ನು ತೆಗೆಯುವರು.

ಬಹುತೇಕ ಹಳ್ಳಿಗಳಲ್ಲಿ ಗಂಡ ಮರಣ ಹೊಂದಿದಾಗ ಆತನ ಹೆಂಡತಿಯ ಮೂಗುತಿ, ಬಳೆಯನ್ನು ತೆಗೆಯುವುದುಂಟು. ಗಂಡ ಮರಣ ಹೊಂದಿದಾಗ ಆ ಶವದ ಎಡಗಡೆಗೆ ಹೆಂಡತಿಯನ್ನು ಕೂಡಿಸಿ, ಹಸಿರು ಬಳೆಗಳನ್ನು ಹಾಕಿ, ಕುಂಕುಮ ಹಚ್ಚಿ ವಿಶೇಷವಾದ ಶೃಂಗಾರವನ್ನು ಮಾಡುವರು. ಹೆಣವನ್ನು ಮೆರವಣಿಗೆಯ ಮೂಲಕ ಅಂತ್ಯ ಸಂಸ್ಕಾರದ ಸ್ಥಳದ ಹತ್ತಿರ ಹೆಂಡತಿಯ ಮೂಗುತಿ, ಬಳೆ, ತಾಳಿಯನ್ನು ತೆಗೆಯುವರು. ಹಣೆಯ ಮೇಲಿನ ಕುಂಕುಮವನ್ನು ತೆಗೆಯುವರು. ಅಂದಿನಿಂದ ಆಕೆಗೆ ವಿಧವೆಯ ಪಟ್ಟವನ್ನು ಕಟ್ಟುವರು. ಅದೇ ರೀತಿಯಾಗಿ ಕೋಣವನ್ನು ಕಳೆದುಕೊಂಡ ಮಲಿಯಮ್ಮಳು ವಿಧವೆಯಾಗುವಳು. ಆದ್ದರಿಂದ ಆಕೆಯ ಬಳೆ, ಮೂಗುತಿಯನ್ನು ತೆಗೆಯುವರು. ಇದು ಹಳ್ಳಿಗಳಲ್ಲಿ ಆಚರಿಸಿಕೊಂಡು ಬಂದ ಸಂಪ್ರದಾಯವಾಗಿದೆ.

ಇಂದಿಗೂ ಸಹ ಈ ಸಂಪ್ರದಾಯವನ್ನು ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಗಂಡ ಸತ್ತ ಮಹಿಳೆ ಮತ್ತೊಂದು ಮದುವೆ ಆಗುವ ಹಾಗಿಲ್ಲ. ಸಮಾಜದಲ್ಲಿ ಆಕೆಯನ್ನು ಅನುಕಂಪದಿಂದ ನೋಡುತ್ತಾರೆ. ಯಾವುದೇ ಶುಭ ಸಂದರ್ಭದಲ್ಲಿ ಆಕೆ ಭಾಗವಹಿಸುವ ಹಾಗಿಲ್ಲ. ಈ ಸಂಪ್ರದಾಯವನ್ನು ಹ್ಯಾರಡಾ ಜನಪದರು ಮಲಿಯಮ್ಮನ ಆಚರಣೆಯಲ್ಲೂ ಕಂಡುಕೊಂಡಿದ್ದಾರೆ. ಆದ್ದರಿಂದ ಜನಪದರ ನಿಜ ಜೀವನ ಹಾಗೂ ಆಚರಣೆಗಳು ಒಂದೇಯಾಗಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಬಲಿಯಾದ ಕೋಣದ ಹೊಟ್ಟೆಯನ್ನು ಬಗೆದು ಯಕೃತ್ತನ್ನು ತೆಗೆಯುವರು. ಅದನ್ನು ಬೇಯಿಸಿದ ಜೋಳದೊಂದಿಗೆ ಮಿಶ್ರಣ ಮಾಡಿ ಒಂದು ಪುಟ್ಟಿಯಲ್ಲಿ ಹಾಕಿ ಹರಿಜನರ ಮಹಿಳೆಯಾದ ಮಾಯಮ್ಮ ಕಚ್ಚೆಯನ್ನು ಹಾಕಿ ತಲೆಕೂದಲನ್ನು ಹರಡಿಕೊಂಡು ಪುಟ್ಟಿಯನ್ನು ಹೊತ್ತುಕೊಂಡು ಅವಳ ಜೊತೆಗೆ

ಕೆಲವು ಗಂಡಸರು ವಿವಿಧ ರೀತಿಯ ಹತಾರಗಳಾದ ಕೊಡಲಿ, ಕುಡುಗೋಲು, ಗಂಡುಗೊಡಲಿ ಹಿಡಿದುಕೊಂಡು ಆಕೆಯ ಹಿಂದೆ ಓಡುವರು. ಊರಿನ ಸುತ್ತ-ಮುತ್ತಲಿನ ಹೊಲಗದ್ದೆ, ಊರಿನ ಪಕ್ಕದಲ್ಲಿರುವ ಹೊಲಗದ್ದೆಗಳಿಗೆ ಹುಲ್ಸನ್ನು ಹೊಡೆಯುವರು. ಈ ಹುಲ್ಸನ್ನು ಮುಗಿಸಿಕೊಂಡು ಬರುವವರೆಗೂ ದೇವಸ್ಥಾನದಿಂದ ಯಾರು ಊರಿಗೆ ಬರುವಂತಿಲ್ಲ. ಹುಲ್ಸು ಹೊಡೆಯುವ ವ್ಯಕ್ತಿಗಳ ಗುಂಪು ಬಂದ ಮೇಲೆ ಜನರು ಊರಿಗೆ ತೆರಳಬಹುದು. ಆಗ ಎಲ್ಲರೂ ತಮ್ಮ-ತಮ್ಮ ಮನೆಗಳಿಗೆ ಹಿಂತಿರುಗುವರು.

ಹುಲ್ಸನ್ನು ತೆಗೆದುಕೊಂಡು ಊರಿನ ಸುತ್ತಲೂ ಹಾಗೂ ಹೊಲಗದ್ದೆಗಳಲ್ಲಿ ಹಾಕುವುದಕ್ಕೆ ಪ್ರಮುಖ ಉದ್ದೇಶವೇನೆಂದರೆ, ಹೊಲಗದ್ದೆಗಳು ಹುಲುಸಾಗಿ ಬೆಳೆಯಲಿ, ಮಳೆ ಬೆಳೆಗಳು ಚೆನ್ನಾಗಿ ಬೆಳೆಯಲಿ ಎನ್ನುವ ಉದ್ದೇಶದಿಂದ. ಹಾಗೆಯೇ ಊರಿನ ಸುತ್ತ-ಮುತ್ತೆಲ್ಲಾ ಹಾಕುವ ಉದ್ದೇಶವೆಂದರೆ ಗ್ರಾಮಕ್ಕೆ ಯಾವುದೇ ರೀತಿಯ ಅಡಚಣೆಗಳು ಬರದೇ, ಸಾಂಕ್ರಾಮಿಕ ರೋಗಗಳು ಗ್ರಾಮಕ್ಕೆ ನುಸುಳದಂತೆ ದೇವಿಯ ಸೀಮಾ ರೇಖೆಯಾಗಿದೆ. ಗ್ರಾಮದ ಪ್ರತಿಯೊಬ್ಬರೂ ಹುಲ್ಸನ್ನು ತೆಗೆದುಕೊಂಡು ಬಂದು ತಮ್ಮ ತಮ್ಮ ಜಮೀನಿನಲ್ಲಿ ಹುಗಿಯುವರು. ಕಾರಣ ಬೆಳೆಯು ಹುಲುಸಾಗಿ ಬರಲಿ ಎಂದು. ಅದೇ ರೀತಿ ಈ ಹುಲ್ಸನ್ನು ಬೇರೆ ಗ್ರಾಮದವರು ತೆಗೆದುಕೊಂಡು ಹೋಗುವಂತಿಲ್ಲ. ಒಂದು ವೇಳೆ ಯಾರಾದರು ತೆಗೆದುಕೊಂಡರೆ ಗ್ರಾಮಸ್ಥರು ಅವರನ್ನು ಶಿಕ್ಷೆಗೆ ಒಳಪಡಿಸುವರು. ಬೇರೆ ಗ್ರಾಮದವರು ಹುಲ್ಸನ್ನು ತೆಗೆದುಕೊಂಡು ಹೋಗುವುದಕ್ಕೆ ಯಾಕೆ ನಿಷಿದ್ಧವೆಂದರೆ, ಗ್ರಾಮದ ಐಶ್ವರ್ಯ, ಸಮೃದ್ಧಿ ಬೇರೆ ಗ್ರಾಮಕ್ಕೆ ಹೋಗುತ್ತದೆ, ಎಂಬ ನಂಬಿಕೆ ಇಲ್ಲಿಯ ಗ್ರಾಮಸ್ಥರದ್ದು.

ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು ನಂತರ ಮತ್ತೆ ದೇವಸ್ಥಾನಕ್ಕೆ ತೆರಳಲು ಸಿದ್ಧರಾಗುವರು. ಎತ್ತಿನ ಗಾಡಿಯನ್ನು ಹೂಡಿಕೊಂಡು ಎತ್ತುಗಳನ್ನು ಬಣ್ಣಗಳಿಂದ, ರಿಬ್ಬನ್‌ಗಳಿಂದ, ಜೂಲದಿಂದ ಸಿಂಗರಿಸಿಕೊಂಡು ಎತ್ತಿನ ಗಾಡಿಯಲ್ಲಿ ಹೂಡಿಕೊಂಡು ದೇವಸ್ಥಾನಕ್ಕೆ ತೆರಳುವರು. ಕೆಲವರು ಟ್ರಾಕ್ಟರ್, ಕಾರು, ಮೋಟಾರು ಬೈಕ್, ಸೈಕಲ್ ಹೀಗೆ ವಿವಿಧ ರೀತಿಯ ವಾಹನಗಳಲ್ಲಿ ಹತ್ತಿಕೊಂಡು ದೇವಸ್ಥಾನದ ಬಳಿಗೆ ಬರುವರು. ಆಗ ಗ್ರಾಮದ ಎಲ್ಲಾ ಜನಪದರು ದೇವಿಯನ್ನು ಭಕ್ತಿಯಿಂದ ನಮಿಸುವರು. ಪೂಜೆಯನ್ನು ಸಲ್ಲಿಸುವರು. ವಿವಿಧ ರೀತಿಯ ಬೇಡಿಕೆಯನ್ನು ದೇವಿಯ ಮುಂದೆ ಬೇಡಿಕೊಳ್ಳುವರು. ದೇವಿಯ ಪಕ್ಕದಲ್ಲಿ ಅಸಾದಿಗಳು ನೃತ್ಯವನ್ನು ಮಾಡುತ್ತಾ, ಹಾಡುತ್ತಾ, ಹಾಸ್ಯ ಚಟಾಕಿಗಳನ್ನು ಮಾಡುತ್ತಾ ಬಂದಿರುವ ಜನರಿಗೆ ಮನೋರಂಜನೆಯನ್ನು ಕೊಡುವರು.

ಸರಿಯಾಗಿ ಸಾಯಂಕಾಲ ೫ ರಿಂದ ೬ ಗಂಟೆಯ ಒಳಗೆ ಪೋತರಾಜನು ಹರೆಮರಿಯನ್ನು ದೇವಸ್ಥಾನ ಮುಂದೆ ಹಾಗೂ ಹಿಂದಿರುವ ಗುಡ್ಡದಲ್ಲಿ ಹುಡುಕುವ ಕಾರ್ಯಕ್ರಮವಿರುತ್ತದೆ. ಈ ಆಚರಣೆಯನ್ನು ಮಾಡುವ ಗುಡ್ಡವನ್ನು ಈಗಲೂ 'ಗಾಗುರಿಮಲ್ಡಿ' ಎಂದು ಕರೆಯುವರು. ಈ

ಗಾಗುರಿ ಮಲ್ಡಿಯಲ್ಲಿ ಗಾಗುರಿಯನ್ನು ಹುಡುಕುವ ಪ್ರಮುಖ ಉದ್ದೇಶವೇನೆಂದರೆ ಮಲಿಯಮ್ಮನ ಮೇಲಿನ ಭಕ್ತಿಯ ಪರಾಕಾಷ್ಠೆಯನ್ನು ನಾವುಗಳು ಕಾಣಬಹುದಾಗಿದೆ. ಈ ಪೋತರಾಜನ ಚಾಕರಿಯು ವಂಶಪಾರ್ಯಂಪರವಾಗದೇ, ವಿವಿಧ ವಂಶಸ್ಥರು ಇದನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಪ್ರಸ್ತುತ ಪೋತರಾಜನ ಚಾಕರಿಯನ್ನು ಬತ್ತಿ ಕೆಂಚಪ್ಪ ಅವರು ನಡೆಸಿಕೊಂಡು ಬರುತ್ತಿದ್ದಾರೆ. ಮೊದಲು ಪೋತರಾಜನ ಚಾಕರಿಯನ್ನು ಬೇವಿನಕಟ್ಟಿ ವಂಶಸ್ಥರು, ಗುಮಾನಿ ವಂಶಸ್ಥರು ಹಾಗೂ ಮಸಲವಾಡ ವಂಶಸ್ಥರು ನಡೆಸಿಕೊಂಡು ಬಂದಿದ್ದರು. ಪೋತರಾಜನು ಜಾತ್ರೆಯ ಡಂಗೂರವನ್ನು ಸಾರಿದ ನಂತರ ಸತತವಾಗಿ ಹಾಲು, ಹಣ್ಣುಗಳನ್ನು ಸ್ವೀಕರಿಸುತ್ತಾ ಬರಿಗಾಲಲ್ಲಿ ಇರುವನು. ಕೋಣವನ್ನು ಅಂಕೆಗೆ ಹಾಕಿದ ನಂತರ ಮೈಗೆ ಅರಿಶಿಣವನ್ನು ಬಳಿದುಕೊಂಡು ಚಾಟಿಯನ್ನು ಸದಾ ತನ್ನ ಬಳಿ ಇಟ್ಟುಕೊಂಡು, ಕಟ್ಟುನಿಟ್ಟಿನ ವ್ರತಾಚರಣೆಯನ್ನು ಮಾಡುವನು.

ಕುರುಬ ಸಮುದಾಯದ ವ್ಯಕ್ತಿಯೊಬ್ಬ ಹರೆಮರಿಯನ್ನು ಗುಡ್ಡದಲ್ಲಿ ಬಚ್ಚಿಟ್ಟುಕೊಂಡಿರುವನು. ಆ ಮರಿಯನ್ನು ಪೋತರಾಜನು ದೇವಿಯ ಅನುಗ್ರಹದಿಂದ ಹುಡುಕಿಕೊಂಡು ಬರುವನು. ಚಾವಟಿಯಿಂದ ಗರ್ಜಿಸುತ್ತಾ ಗುಡ್ಡದ ತುಂಬೆಲ್ಲಾ ಹುಡುಕಾಡಿ ಮರಿಯನ್ನು ಹುಡುಕಿಕೊಂಡು ಬರುವನು. ಇದಕ್ಕೆ ಹಲಗೆವಾದ್ಯ ಸಾಥ್ ಕೊಡುತ್ತದೆ. ಹರೆಮರಿಯನ್ನು ತೆಗೆದುಕೊಂಡು ಬಂದು ಮರಿಯ ನಾಲಿಗೆಯನ್ನು ಹಲ್ಲಿನಿಂದ ಸ್ವಲ್ಪ ಭಾಗ ಕಿತ್ತು ದೇವಿಯ ಪಕ್ಕದಲ್ಲಿ ಜೀವಂತವಾಗಿ ಹುಗಿಯುವರು. ಈ ಕಾರ್ಯಕ್ರಮದಲ್ಲಿ ಪೋತರಾಜನಿಗೆ ವಿಶಿಷ್ಟ ಸ್ಥಾನವಿದೆ. ಈತನ ಹಿನ್ನಲೆ, ಹುಟ್ಟು ಇತರ ವಿಷಯಗಳ ಬಗ್ಗೆ ಲಭ್ಯವಿಲ್ಲ. ಡಿ.ಡಿ. ಕೋಸಾಂಬಿರವರ ಪ್ರಕಾರ " ಈ ಪೋತರಾಜ ವಸಹಾತುಶಾಹಿ ಜನರ ನಟರಾಜನ ಸೋದರ ಸಂಬಂಧಿಯಿರಬೇಕು ಎಂದು ಕಾಣುತ್ತದೆ. ಸ್ವತಃ ನಟರಾಜ ಹಾಗೂ ತಾಂಡವ ನೃತ್ಯಗಳೆರಡೂ ಬುಡಕಟ್ಟು ಮಾಂತ್ರಿಕ ಅರ್ಚಕನ ಸುಧಾರಿತ ರೂಪಗಳೆಂದು ಹೇಳುತ್ತಾರೆ. ನರ್ತನ, ಪೂಜೆಯ ಆದಿಯ ವಿಧಾನಗಳಲ್ಲೊಂದು. ಕಾಯಿಲೆವಾಸಿ ಮಾಡಲೇಬೇಕಾದಾಗ, ಫಲವತ್ತತೆ ತರಬೇಕೆಂದಾಗ, ಬುಡಕಟ್ಟುಗಳಲ್ಲಿ ಅರ್ಚಕನು ಮಾಂತ್ರಿಕ ಶಕ್ತಿಯನ್ನು ಆವಾಹಿಸಿಕೊಂಡು ನರ್ತಿಸುತ್ತಿದ್ದನಂತೆ, ಕೇಡಿನ ಶಕ್ತಿಗಳ ನಿಗ್ರಹಕ್ಕೂ ಇದೇ ವಿಧಾನ. ಬಹುಶಃ ಗ್ರಾಮದೇವತೆಗಳ ಜಾತ್ರೆಗಳಲ್ಲಿ ಉಳಿದಿರುವ ಪೋತರಾಜನ ಮೂಲ ಅಷ್ಟು ಪುರಾತನ ಬೇರಿನಿಂದ ಬಂದಿರಬಹುದೇ ? ಪೋತರಾಜ ಸಿಗಿಯುವ ಮೇಕೆ ಮರಿಯು ಕೇಡಿನ ಮೂರ್ತ ಪ್ರತೀಕವಾಗಿರಬಹುದೇ? ಎಂಬುದರ ಬಗೆಗೆ ಆಲೋಚಿಸಬೇಕಾಗಿದೆ". ಎಂದು ಅಭಿಪ್ರಾಯ ಪಟ್ಟಿದ್ದಾರೆ.

ನಂತರ ಗ್ರಾಮದ ಪ್ರತಿಯೊಬ್ಬರು ಹುಲ್ಲನ್ನು ತೆಗೆದುಕೊಂಡು ಹೋಗಿ ತಮ್ಮ ಹೊಲಗದ್ದೆಯಲ್ಲಿ ಹೂಳುವರು. ಇದರಿಂದ ಹೊಲಗದ್ದೆಗಳಲ್ಲಿ ಸಮೃದ್ಧವಾದ ಫಸಲು ಬರುವುದು ಎಂದು ನಂಬುವರು. ದೇವಿಯ ಉತ್ಸವ ಮೂರ್ತಿಗೆ ಉಡಿಯನ್ನು ತುಂಬಿಕೊಂಡು ಬರುವರು. ಮೊದಲು ಬೇವಿನಕಟ್ಟೆಯ ಮೇಲೆ ದೇವಿಯನ್ನು ಕೂಡಿಸುವರು. ನಂತರ ಚೌಡಿಕಟ್ಟೆಯಲ್ಲಿ ಆಕೆಯನ್ನು ಕೂಡಿಸುವರು. ಅಲ್ಲಿಯೂ

ಸಹ ಅಸಾದಿಗಳು ಜನರಿಗೆ ಮನೋರಂಜನೆಯನ್ನು ಒದಗಿಸುವರು. ಅಂದಿನ ರಾತ್ರಿ ಗ್ರಾಮದ ಯುವಕರು ನಾಟಕವನ್ನು ಪ್ರದರ್ಶಿಸುವರು. ಮಾರನೆಯ ದಿನದಲ್ಲಿ ದೇವಿಯ ಮುಂದೆ ವಿವಿಧ ರೀತಿಯ ಮನೋರಂಜನಾ ಕಾರ್ಯಕ್ರಮಗಳು ಜರುಗುವವು. ಚೌಡಿಕಟ್ಟೆಯಿಂದ ಬೇವಿನಕಟ್ಟೆಯವರೆಗೂ ಸಾಮಾನುಗಳ ಅಂಗಡಿಗಳು, ಬಳೆಯ ಅಂಗಡಿಗಳು ಇರುವವು. ಕುಟುಂಬದ ಸದಸ್ಯರೆಲ್ಲರೂ ಕೂಡಿಕೊಂಡು ತಮಗೆ ಪ್ರಿಯವಾದ ವಸ್ತುಗಳನ್ನು ಕೊಂಡುಕೊಳ್ಳುವರು. ಬಂದ ಬೀಗರುಗಳಿಗೆ ಮಂಡಕ್ಕಿ, ಬೆಂಡು, ಬೆತ್ತಾಸ್ಸು, ದಾಣಿಯನ್ನು ಕೊಡಿಸುವರು.

ಸಾಯಂಕಾಲ ದೇವತೆಯು ಗಟ್ಟಿಯ ಮನೆಗೆ ಬರುವಳು. ಅಲ್ಲಿ ದೇವತೆಯ ಮೇಲಿನ ಎಲ್ಲಾ ಆಭರಣಗಳನ್ನು ತೆಗೆಯುವರು. ಮೊದಲಿನ ಹಾಗೆ ಪೆಟ್ಟಿಗೆಯಲ್ಲಿ ಭದ್ರವಾಗಿ ಇಡುವರು. ನಂತರದಲ್ಲಿ ಬೇಡಿಕೊಂಡವರು ಮುಂದಿನ ಜಾತ್ರೆಗೆ ಕೋಣವನ್ನು ಬಿಡುವರು. ಇದು ಸಣ್ಣ ಕರುವಾಗಿದ್ದು ಎರಡು ವರ್ಷದ ಕೋಣವನ್ನು ಬಿಡುವರು. ಇದಕ್ಕೆ ಪೂಜೆಯನ್ನು ಮಾಡಿ ಅಧಿಕೃತವಾಗಿ ಕೋಣವನ್ನು ಬಿಡುವರು.

ಜಾತ್ರೆಯು ಮುಗಿದು ಮೂರು ದಿನಗಳವರೆಗೆ ಮಲಿಯಮ್ಮನ ದೇವಸ್ಥಾನದ ಹತ್ತಿರ ಯಾರು ಹೋಗುವಂತಿಲ್ಲ. ಕಾರಣ ಆಗ ದೇವಿಯು ದೇವಾಲಯದ ಹೊರಗೆ ತನ್ನ ಮಕ್ಕಳೊಂದಿಗೆ ಏಕಾಂತದಲ್ಲಿರುತ್ತಾಳೆ ಎಂಬ ನಂಬಿಕೆ. ಆಕಸ್ಮಾತ್ ಯಾರಾದರೂ ಹೋದರೆ ನೆತ್ತರು ಕಾರಿ ಸಾಯುವರು ಎಂದು ನಂಬಿರುವರು. ಆದರಂತೆಯೇ ಐತಿಹ್ಯವೊಂದು ಚಾಲ್ತಿಯಲ್ಲಿದೆ. ಅದೇನೆಂದರೆ ಬೇರೆ ಊರಿನ ವ್ಯಕ್ತಿಯೊಬ್ಬ ಜಾತ್ರೆ ಮುಗಿದು ಮೂರು ದಿನಗಳ ಒಳಗೆ ದೇವಸ್ಥಾನದ ಹತ್ತಿರ ಗೊತ್ತಿಲ್ಲದೇ ಹೋಗುವನು. ಆಗ ದೇವತೆಯು ಶಾಂತಿಯಿಂದ " ಮಗನೇ ನೀನು ಗೊತ್ತಿಲ್ಲದೆ ಹಾಗೆ ಬಂದಿರುವೆ, ಆದ್ದರಿಂದ ನೀನು ಹಿಂದಕ್ಕೆ ತಿರುಗಿನೋಡದೇ ಹೋಗು " ಎಂದು ಆದೇಶಿಸುತ್ತಾಳೆ. ಆದರೆ ಆ ವ್ಯಕ್ತಿ ಹೋಗುವಾಗ ಕುತೂಹಲ ತಾಳಲಾರದೇ ಹಿಂತಿರುಗಿ ನೋಡಿದನು. ಆಗ ದೇವಿಯ ಉಗ್ರ ಸ್ವರೂಪ ನೋಡಿ ವ್ಯಕ್ತಿಯು ಅಲ್ಲಿಯೇ ನೆತ್ತರು ಹರಿದು ಸಾಯುವನು. ಈಗಲೂ ಕೂಡ ಈ ಪ್ರದೇಶವನ್ನು ಹ್ಯಾರಡಾದ ಜನಪದರು "ನೆತ್ತರು ಕಟ್ಟೆ" ಎಂದು ಕರೆಯವರು

ಜಾತ್ರೆಯಲ್ಲಿ ವಿವಿಧ ಸಮುದಾಯಗಳ ಕಾರ್ಯಗಳು : ಹ್ಯಾರಡಾ ಗ್ರಾಮದಲ್ಲಿ ಮಲಿಯಮ್ಮನ ಜಾತ್ರೆಯಲ್ಲಿ ವಿವಿಧ ಸಮುದಾಯಗಳು ವಿವಿಧ ರೀತಿಯ ಕಾರ್ಯಗಳನ್ನು ವಹಿಸಿಕೊಳ್ಳುವರು. ತಮಗೆ ವಹಿಸಿದ ಕಾರ್ಯವನ್ನು ಚಾಚು ತಪ್ಪದೇ ಮಾಡುವರು. ಅವುಗಳಲ್ಲಿ ವಿವಿಧ ಸಮುದಾಯಗಳ ಕಾರ್ಯಗಳು ಕೆಳಕಂಡತಿವೆ.

೦೧ ಕುರುಬ ಸಮುದಾಯ : ಹ್ಯಾರಡಾ ಗ್ರಾಮದಲ್ಲಿ ಬಹುಸಂಖ್ಯಾತರಾದ ಕುರುಬರು ಜಾತ್ರೆಯಲ್ಲಿ ತಮಗೆ ವಹಿಸಿದ ಕಾರ್ಯವನ್ನು ಚಾಚು ತಪ್ಪದೇ ಮಾಡುವರು. ಇವರು ತಮ್ಮಲ್ಲಿಯೇ ಒಬ್ಬರನ್ನು ಕುರುಬಗೌಡನಾಗಿ ಆಯ್ಕೆ ಮಾಡಿಕೊಳ್ಳುವರು. ಇವರ ಸಮುದಾಯದಲ್ಲಿ ಈತನ ಮಾತೇ

ಅಂತಿಮವಾಗಿರುತ್ತದೆ. ಈತನ ನಿರ್ಧಾರಗಳಿಗೆ ಎಲ್ಲರೂ ಬದ್ಧರಾಗಿರುತ್ತಾರೆ. ಜಾತ್ರೆಯಲ್ಲಿ ಕಡಿಯುವ ಹರೆಮರಿಗಳನ್ನು ಒದಗಿಸುವುದು ಹಾಗೂ ಜಾತ್ರೆ ಮುಗಿದ ಮೇಲೆ ನೂತನವಾಗಿ ಕೋಣವನ್ನು ಬಿಡುವುದು ಈ ಸಮುದಾಯದವರ ಕರ್ತವ್ಯವಾಗಿರುತ್ತದೆ.

೦೨ ವಾಲ್ಮೀಕಿ ಸಮುದಾಯ: ಜಾತ್ರೆಯಲ್ಲಿ ಈ ಸಮುದಾಯದವರ ಪಾತ್ರ ಬಹುಮುಖ್ಯವಾದುದು. ಮಲಿಯಮ್ಮ ದೇವತೆಯನ್ನು ಪೂಜಿಸುವುದು ಈ ಸಮುದಾಯದವರು. ಈ ಸಮುದಾಯದವರೆ ಪೂಜಾರಿಯಾಗುವುದು. ಹಬ್ಬ-ಹರಿದಿನಗಳಲ್ಲಿ ವಿಶೇಷ ಸಂದರ್ಭದಲ್ಲಿ ಈ ಸಮುದಾಯದವರು ಪೂಜಾ ಕೈಂಕರ್ಯವನ್ನು ಮಾಡುವರು. ಅದರಂತೆಯೇ ಈ ಸಮುದಾಯದ ವತಿಯಿಂದ ಪೋತರಾಜನನ್ನು ನೇಮಿಸುವರು. ಈತ ಹುಟ್ಟಿನಿಂದ ಮದುವೆಯಾಗದೇ ವಿವಿಧ ವ್ರತಾಚರಣೆಯನ್ನು ಮಾಡುವನು. ಹಾಗೂ ಈ ಸಮುದಾಯದವರೇ ಹರೆಮರಿಗಳನ್ನು ಕಡಿಯುವರು. ಹಾಗೂ ಜಾತ್ರೆಯಲ್ಲಿ ವಿವಿಧ ಹತಾರಗಳಾದ ಕೊಡಲಿ, ಕುಡುಗೋಲು, ಗಂಡುಗೊಡಲಿಯನ್ನು ಹಿಡಿದು ಪ್ರದರ್ಶಿಸುವುದು ಈ ಸಮುದಾಯದವರೇ ಆಗಿದ್ದಾರೆ. ಹುಲ್ಸನ್ನು ಹೊಡೆಯುವ ಮಹಿಳೆಯ ಹಿಂದೆ ಈ ಸಮುದಾಯದ ಯುವ ಜನರೇ ಇರುವರು. ಒಟ್ಟಾರೆಯಾಗಿ ದೇವಸ್ಥಾನದ ಪೂಜೆ, ಸುಣ್ಣಬಣ್ಣಗಳಿಂದ ಅಲಂಕರಿಸುವುದು ಈ ಸಮುದಾಯದವರೇ ಆಗಿದ್ದಾರೆ.

೦೩ ಹರಿಜನ ಸಮುದಾಯ : ಈ ಸಮುದಾಯದವರು ಜಾತ್ರೆಯ ಪ್ರತಿಯೊಂದು ಸೂಚನೆಗಳನ್ನು ಹಲಗೆಯ ಮೂಲಕ ಗ್ರಾಮದಲ್ಲಿ ಡಂಗೂರ ಸಾರುವುದು. ಕೋಣವನ್ನು ಹಿಡಿದು ಅದನ್ನು ಅಂಕೆಗೆ ಹಾಕುವುದು, ಉತ್ಸವ ಮೂರ್ತಿಯು ಹೋಗುವಾಗ ಅದರ ಮುಂದೆ ಕೋಣವನ್ನು ಹಿಡಿದುಕೊಂಡು ಹೋಗುವುದು, ಕೋಣವನ್ನು ಕಡಿಯುವುದು, ಹುಲ್ಸನ್ನು ಗ್ರಾಮದ ಹೊಲಗದ್ದೆಗಳಿಗೆ ಚೆಲ್ಲುವುದು ಹೀಗೆ ಪ್ರಮುಖ ಕಾರ್ಯವನ್ನು ಈ ಸಮುದಾಯದವರು ನಿರ್ವಹಿಸುವರು.

೦೪ ಗಂಗಾಮತಸ್ಥ ಸಮುದಾಯ : ಕಟ್ಟಿಗೆಯಿಂದ ತಯಾರಿಸಿದ ಉತ್ಸವ ಮೂರ್ತಿಯನ್ನು ಕಾಪಾಡುವುದು ಈ ಸಮುದಾಯದ ಪ್ರಮುಖ ಕರ್ತವ್ಯವಾಗಿದೆ. ಗಟ್ಟಿ ಮನೆಯಿಂದ ದೇವತೆಯನ್ನು ಹೊತ್ತುಕೊಂಡು ಬರುವುದು, ಜಾತ್ರೆ ಮುಗಿದ ನಂತರ ಗಟ್ಟಿಮನೆಯಲ್ಲಿ ಉತ್ಸವ ಮೂರ್ತಿಯನ್ನು ಭದ್ರವಾಗಿ ಪೆಟ್ಟಿಗೆಯಲ್ಲಿ ಕಾಪಾಡುವುದು, ದೇವಿಯ ಮುಂಭಾಗದಲ್ಲಿ ಕಾಯಿಕೋಲನ್ನು ಹಿಡಿಯುವುದು, ರಾತ್ರಿಯ ಸಮಯದಲ್ಲಿ ದೇವಿಯ ಮುಂಭಾಗದಲ್ಲಿ ಗ್ಯಾಸನ್ನು ಹೊರುವುದು. ಗಟ್ಟಿ ಮನೆ ಹಾಗೂ ಚೌಡಿಕಟ್ಟೆಯಲ್ಲಿ ದೇವರಿಗೆ ಚಪ್ಪರವನ್ನು ಹಾಕುವುದು ಈ ಸಮುದಾಯದವರ ಪ್ರಮುಖ ಕರ್ತವ್ಯವಾಗಿದೆ.

೦೫ ಮಡಿವಾಳ ಸಮುದಾಯ : ಜಾತ್ರೆಯ ಸಮಯದಲ್ಲಿ ದೇವತೆಯ ಮೆರವಣಿಗೆಯು ಹೊರಡುವಾಗ ಗಟ್ಟಿಮನೆಯಿಂದ ದೇವತೆಯನ್ನು ಹೊತ್ತುಕೊಂಡವರಿಗೆ ಹಾಗೂ ಪೋತರಾಜನಿಗೆ ಮಡಿಬಟ್ಟೆಯನ್ನು ಹಾಕುತ್ತಾ ತಮ್ಮ ಸೇವೆಯನ್ನು ಮಾಡುವರು.

೦೬ ಕುಂಬಾರ ಸಮುದಾಯ : ಜಾತ್ರೆಯ ಸಮಯದಲ್ಲಿ ಪ್ರಮುಖವಾಗಿ ಬೇಕಾಗಿರುವ ಕೇಲನ್ನು ಈ ಸಮುದಾಯದವರು ಒದಗಿಸುವರು. ಹಾಗೆಯೇ ಮೂರ್ತಿಯನ್ನು ಸಹ ಈ

ಸಮುದಾಯದವರು ನೋಡಿಕೊಳ್ಳುವರು. ಈ ಸಮುದಾಯದ ದಳಪತಿಯಾದ ಸಂಗಪ್ಪ ಅವರು ಜಾತ್ರೆ ಮುಗಿಯುವವರೆಗೂ ಪ್ರತಿಯೊಂದು ಹಂತದಲ್ಲಿಯೂ ತಮ್ಮ ಸೇವೆಯನ್ನು ಮಾಡುವರು. ಜಾತ್ರೆಯ ಸಂದರ್ಭದಲ್ಲಿ ಊರಲ್ಲಿ ದೇಣಿಗೆಯನ್ನು ಸಂಗ್ರಹಿಸುವುದು. ಜಾತ್ರೆಗೆ ಬೇಕಾಗಿರುವ ವಸ್ತುಗಳನ್ನು ಸಂಗ್ರಹಿಸುವುದು, ಜಾತ್ರೆಗೆ ಬಂದ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರತಿಯೊಂದು ಕಾರ್ಯದಲ್ಲಿ ಭಾಗವಹಿಸುವುದರ ಮೂಲಕ ಜಾತ್ರೆಯು ಯಶಸ್ವಿಯಾಗಲು ಹಗಲಿರುಳೂ ಶ್ರಮಿಸುವರು.

೦೭ ಬಡಿಗೇರ ಸಮುದಾಯ : ಜಾತ್ರೆಯ ಸಮಯದಲ್ಲಿ ಕಟ್ಟಿಗೆಯಿಂದ ಉತ್ಸವ ಮೂರ್ತಿಯನ್ನು ತಯಾರಿಸುವವರು ಈ ಸಮುದಾಯದವರು. ಈ ಮೂರ್ತಿಗೆ ಬಣ್ಣವನ್ನು ಬಳಿಯುವುದು, ಸಿಂಗರಿಸುವುದು ಹಾಗೂ ದೇವತೆಯ ಮಕ್ಕಳನ್ನು ಸಹ ಈ ಸಮುದಾಯವರು ಕಟ್ಟಿಗೆಯಿಂದ ಮಾಡಿ ಕೊಡುವರು. ಮಲಿಯಮ್ಮನ ಮೂರ್ತಿಯನ್ನು ಕಾಪಾಡುವುದು ಈ ಸಮುದಾಯದ ಪ್ರಮುಖ ಕರ್ತವ್ಯವಾಗಿದ್ದು, ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಸಿಂಗರಿಸುವುದು, ಸೀರೆಯನ್ನು ತೊಡಿಸುವುದು, ಹಸಿರು ಬಳೆಗಳನ್ನು ತೊಡಿಸಿ ಅತ್ಯಂತ ಆಕರ್ಷಕವಾಗಿ ಸಿಂಗರಿಸುವುದು ಈ ಸಮುದಾಯದವರು.

೦೮ ಲಿಂಗಾಯತ ಸಮುದಾಯ : ಲಿಂಗಾಯತ ಸಮುದಾಯದ ಬಣಕಾರ ವಂಶಸ್ಥರು ಜಾತ್ರೆಯ ಪ್ರತಿಯೊಂದು ಉಸ್ತುವಾರಿಯನ್ನು ನೋಡಿಕೊಳ್ಳುವರು. ಜಾತ್ರೆಯ ಸಮಯದಲ್ಲಿ ಯಾವುದೇ ರೀತಿಯ ಕೊರತೆಗಳು, ಗಲಾಟೆಗಳು ಆಗದಂತೆ ನೋಡಿಕೊಳ್ಳುವರು. ಮಲಿಯಮ್ಮಳು ನಮ್ಮ ಮನೆಯ ಮಗಳು ಎಂದು ಇವರು ನಂಬಿದವರು. ಆದ್ದರಿಂದ ಮನೆಯ ಮಗಳ ಕಾರ್ಯಕ್ರಮವನ್ನು ಹೇಗೆ ಮಾಡುವರೋ ಅದೇ ರೀತಿಯಿಂದ ಕ್ರಿಯಾಶೀಲರಾಗಿ ಪ್ರತಿಯೊಂದು ಕೆಲಸದ ಮೇಲುಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ. ಜಾತ್ರೆಯ ಪ್ರತಿಯೊಂದು ಹಂತದಲ್ಲಿ ಈ ಸಮುದಾಯದವರ ಪಾತ್ರ ಬಹುಮುಖ್ಯವಾದುದು. ಜಾತ್ರೆಗೆ ಡಂಗೂರ ಸಾರಿದಾಗಿನಿಂದ ಹಿಡಿದು ಜಾತ್ರೆ ಮುಗಿಯುವವರೆಗೂ ಪ್ರತಿಯೊಂದು ಜವಾಬ್ದಾರಿಯನ್ನು ಯಶಸ್ವಿಯಾಗಿ ಪೂರೈಸುವರು.

೬.೨ ಸಂಗಮೇಶ್ವರ

ಈ ದೇವಾಲಯವು ಆಧುನಿಕ ಶೈಲಿಯನ್ನು ಹೊಂದಿದ್ದು. ೯ ಅಂಕಣವನ್ನು ಹೊಂದಿದೆ. ಈ ದೇವಾಲಯವು ೪೫ ಅಡಿ ಉದ್ದ ೩೦ ಅಡಿ ಅಗಲ ಹೊಂದಿದೆ. ದೇವಾಲಯದ ಇಕ್ಕೆಲುಗಳಲ್ಲಿ ೨ ದೀಪದ ಗೂಣನ್ನು ಹೊಂದಿದ್ದು, ದೇವಾಲಯದ ಗೋಡೆಗಳಲ್ಲಿ ಸುಮಾರು ೮ ದೀಪದ ಗೂಣನ್ನು ಹೊಂದಿದೆ. ಗರ್ಭಗುಡಿಯು ೧೧ ಅಡಿ ಉದ್ದ ೧೧ ಅಡಿ ಅಗಲ ಹೊಂದಿದೆ. ಗರ್ಭಗುಡಿಯ ಒಳಗೆ ಈಶ್ವರ ದೇವರು, ಗಣೇಶ, ಬಸವಣ್ಣ ಹಾಗೂ ಲಿಂಗವನ್ನು ಹೊಂದಿದೆ. ದೇವರ ಇಕ್ಕೆಲುಗಳಲ್ಲಿ ೨ ದೀಪದ ಉಯ್ಯಾಲೆಗಳನ್ನು ಕಾಣಬಹುದು.

ದೇವಾಲಯದ ಮುಂಭಾಗದಲ್ಲಿ ಎರಡು ಬೇವಿನ ಮರಗಳನ್ನು ಹೊಂದಿದ್ದು ಆ ಮರಗಳ ಸುತ್ತಲೂ ಕಟ್ಟೆಯನ್ನು ಕಟ್ಟಲಾಗಿದೆ. ಈಗಲೂ ಇದನ್ನು ಬೇವಿನಕಟ್ಟಿ ಎಂದು ಕರೆಯುವರು. ಈ ದೇವಾಲಯದ ಪಕ್ಕದಲ್ಲಿ ಬೇವಿನಕಟ್ಟಿ ವಂಶಸ್ಥರು ಕಂಡು ಬಂದಿದ್ದು, ಬಹುಶಃ ಈ ಬೇವಿನಕಟ್ಟೆಯಿಂದ ಅವರನ್ನು ಬೇವಿನಕಟ್ಟಿ ವಂಶಸ್ಥರು ಎಂದು ಕರೆಯುತ್ತಿರಬೇಕು. ಈ ಬೇವಿನಕಟ್ಟೆಯು ೧೦೦ ಅಡಿ ಉದ್ದ ೬೦ ಅಡಿ ಅಗಲ ಹೊಂದಿದೆ. ಈ ದೇವಾಲಯದ ಪಕ್ಕದಲ್ಲಿ ವಿಶಾಲವಾದ ಪೌಳಿಯನ್ನು ಕಾಣಬಹುದು. ಇನ್ನೂ ಕೂಡ ಈ ದೇವಾಲಯವು ಸುಸ್ಥಿತಿಯಲ್ಲಿದೆ. ಸಂಗಮೇಶ್ವರ ಪೌಳಿಯಲ್ಲಿ ದೇವರಿಗೆ ಸಂಬಂಧಿಸಿದ ಉತ್ಸವ, ಪರುವು ಆದಾಗ ಇಲ್ಲಿ ಅನ್ನ ಸಂತರ್ಪಣೆ ಕಾರ್ಯಕ್ರಮ ನೆರವೇರುವುದು. ಸಂಗಮೇಶ್ವರನ ಪೂಜೆಗೆ ಬೇಕಾಗುವ ಪತ್ರಿ, ಬನ್ನಿಯನ್ನು ಈ ಪೌಳಿಯಿಂದ ಪಡೆಯುವರು

ಸಂಗಮೇಶ್ವರನ ಉಚಯ್ಯ ಮೆರವಣಿಗೆ : ಬಸವ ಜಯಂತಿಯ ಪ್ರಯುಕ್ತ ಈ ಕಾರ್ಯಕ್ರಮವನ್ನು ನೆರವೇರಿಸುವರು. ದೊಡ್ಡ ಬಂಡಿಯ ಮುಖಾಂತರವಾಗಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವರು. ದೊಡ್ಡ ಬಂಡಿಗೆ ೪ ಜೊತೆ, ೮ ಜೊತೆ, ೨೧ ಜೊತೆ, ಜೊಡೆತ್ತುಗಳನ್ನು ಹೂಡುವರು. ಎತ್ತುಗಳನ್ನು ಜೂಲ, ಕೊಡಂಸು ಬಣ್ಣಗಳಿಂದ ಸಿಂಗರಿಸುವರು. ಈ ಎತ್ತುಗಳ ಮುಖಾಂತರವಾಗಿ ಉಚಯ್ಯವನ್ನು ಎಳೆಸುವರು. ಬಸವಣ್ಣನವರ ಭಾವಚಿತ್ರವನ್ನು ದೊಡ್ಡ ಬಂಡಿಯಲ್ಲಿ ಇಟ್ಟು ಊರಿನ ತುಂಬಾ ಮೆರವಣಿಗೆಯನ್ನು ಮಾಡುವರು. ಪುರುವಂತಿಕೆ, ನಂದಿಕೋಲು, ಡೊಳ್ಳು, ಕೋಲಾಟ ವಿವಿಧ ಕಲಾಮೇಳದೊಂದಿಗೆ ಈ ಕಾರ್ಯಕ್ರಮವು ನೆರವೇರುವುದು.

ಬಹುತೇಕ ಈ ಕಾರ್ಯಕ್ರಮವನ್ನು ಲಿಂಗಾಯತ ಸಮುದಾಯದವರ ಸಾರಥ್ಯದಲ್ಲಿ ನಡೆಯುತ್ತದೆ. ಇದಕ್ಕೆ ಇತರೆ ಸಮುದಾಯದವರು ಸಾಥ್ ಕೊಡುವರು. ಈ ಉಚ್ಚಯ್ಯದ ರಥವು ಸಂಪೂರ್ಣವಾಗಿ ಕಟ್ಟಿಗೆಯಿಂದ ನಿರ್ಮಾಣ ಮಾಡಿದ್ದು, ಎರಡು ಗಾಲಿಯನ್ನು, ನೊಗ, ಪಕ್ಕದಲ್ಲಿ ಕಣುಗಗಳಿಂದ ಕೂಡಿದ್ದು, ವಿವಿಧ ಅಲಂಕಾರಿಕ ವಸ್ತುಗಳಿಂದ ಸಿಂಗರಿಸುವರು. ವಿವಿಧ ರೀತಿಯ ಪಟಗಳು, ಹೂವುಗಳು, ನಿಶಾನೆಗಳು, ಹಾಗು ವಿವಿಧ ಬಣ್ಣಗಳನ್ನು ಬಳಿದು ಅಲಂಕೃತಗೊಳಿಸಿ ಈ ರಥವನ್ನು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡುವುದುಂಟು.

ಈ ಉಚ್ಚಯ್ಯವನ್ನು ಎಳೆಯಲು ಗ್ರಾಮದ ಎಲ್ಲಾ ಸಮುದಾಯಗಳ ಎತ್ತುಗಳನ್ನು ಸಿಂಗರಿಸಿಕೊಂಡು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲಾ ಸಮುದಾಯದವರು ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವರು.

ಈ ಉಚ್ಚಯ್ಯ ಮೆರವಣಿಗೆಯನ್ನು ಮಾಡುವ ಪ್ರಮುಖ ಉದ್ದೇಶವೇನೆಂದರೆ, ಸಂಗಮೇಶ್ವರನನ್ನು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡುವುದರಿಂದ ದೇವರು ಸಂಪ್ರೀತಿಯಾಗಿ ನಮ್ಮೆಲ್ಲರನ್ನು ಸಲುಹುವನು ಎಂಬ ಅಪಾರ ನಂಬಿಕೆಯನ್ನು ಇಲ್ಲಿಯ ಜನಪದರು ಹೊಂದಿದ್ದಾರೆ.

ಸಂಗಮೇಶ್ವರನ ಅಗ್ನಿ(ಕೆಂಡ) ಹಾಯುವ ಕಾರ್ಯಕ್ರಮ : ಸಂಗಮೇಶ್ವರ ದೇವಸ್ಥಾನದ ಮುಂದುಗಡೆ ೩೦ ಅಡಿ ಉದ್ದ, ೬ ಅಡಿ ಅಗಲ ೩ ಅಡಿ ಆಳವಾದ ಅಗ್ನಿಯನ್ನು ತೋಡುವರು. ಗ್ರಾಮದ ಹಿರಿಯ ಪುರುವಂತರಾದ ಬಣಗಾರ ಈರಣ್ಣ ಪೂಜಾ ಕಾರ್ಯಕ್ರಮವನ್ನು ಮಾಡಿ ಗುದ್ದಲಿ ಪೂಜೆಯನ್ನು ಮಾಡುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆಯನ್ನು ಕೊಡುವರು. ಅಗ್ನಿಯ ಗುಣಿಯನ್ನು ಗ್ರಾಮದ ಜನಪದರೆಲ್ಲರೂ ಸೇರಿ ತೋಡುವರು, ತದನಂತರದಲ್ಲಿ ಅಗ್ನಿಯ ಗುಣಿಯ ಎರಡೂ ಬದಿಯಲ್ಲಿ ಮಣ್ಣನ್ನು ಸಮತಟ್ಟಾಗಿ ಮಾಡಿ ವಿಧ-ವಿಧವಾದ ಬಣ್ಣದಿಂದ ಸಿಂಗರಿಸುವರು. ಅಗ್ನಿ ಸ್ಪರ್ಶ ಆದ ಮೇಲೆ ಯಾವುದೇ ಪ್ರಾಣಿಗಳು ಅಲ್ಲಿ ಬರದಂತೆ ಸುತ್ತಲೂ ಹಗ್ಗದಿಂದ ಭದ್ರತೆಯನ್ನು ಒದಗಿಸುವರು. ಸರಿಯಾಗಿ ರಾತ್ರಿ ಹನ್ನೆರಡು ಮುವ್ವತ್ತರ ಸುಮಾರಿಗೆ ಅಗ್ನಿ ಸ್ಪರ್ಶವನ್ನು ಮಾಡುವರು. ಹೆಚ್ಚಾಗಿ ಬನ್ನಿಯ ಮರದ ಕಟ್ಟಿಗೆಯಿಂದ ಅಗ್ನಿಯ ಚಾಲನೆಯನ್ನು ಕೊಡುವರು. ರಾತ್ರಿಯಿಡೀ ದೊಡ್ಡ-ದೊಡ್ಡ ಕಟ್ಟಿಗೆಯಿಂದ ಅಗ್ನಿಯನ್ನು ಹಚ್ಚಿ ಕೆಂಡವಾಗಿ ಮಾರ್ಪಡಿಸುವರು.

ಅಗ್ನಿ ತೋಡುವ ಕಾರ್ಯಕ್ರಮದಲ್ಲಿ ಗ್ರಾಮದ ಎಲ್ಲಾ ಸಮುದಾಯದವರು ಭಾಗವಹಿಸುವರು. ರಾತ್ರಿ ಇಡೀ ಇದನ್ನು ಜೋಪಾನವಾಗಿ ಕಾಯುವರು. ಕೆಂಡ ಹಾಯುವುದು ಕೇವಲ ಲಿಂಗಾಯತ ಸಮುದಾಯದವರು. ಕೆಳವರ್ಗದ ಸಮುದಾಯದವರು ಕೆಂಡ ಹಾಯುವುದು ನಿಷಿದ್ಧ ಎಂಬುದು ಕಟ್ಟಾಜ್ಞೆ ಏನೂ ಇಲ್ಲ, ಆದರೆ ಕೆಳ ವರ್ಗದ ಜನಪದರು ನಾವು ಕಪ್ಪು ಕಡಿಗಳನ್ನು ತಿನ್ನುವವರು ಸಂಗಮೇಶ್ವರನ ಕೆಂಡ ಹಾಯುವುದೆಂದರೆ ಮಡಿಯಿಂದ ಇರಬೇಕು, ಎಂಬ ನಂಬಿಕೆಯಿಂದ ಯಾವೊಬ್ಬ ಕೆಳವರ್ಗದ ವ್ಯಕ್ತಿಗಳು ಕೆಂಡ ಹಾಯುವುದಿಲ್ಲ. ಕೆಂಡ ಹಾಯುವುದರ ಪ್ರಮುಖ ಉದ್ದೇಶ ಸಂಗಮೇಶ್ವರನ ಭಕ್ತಿಯ ಪರಾಕಾಷ್ಟೆಯನ್ನು ಮೆರೆಯುವುದಾಗಿದೆ. ಹಾಗೂ ಅಗ್ನಿಯನ್ನು ಹಾಯುವುದರಿಂದ ಕುಟುಂಬಕ್ಕೂ, ಗ್ರಾಮಕ್ಕೂ ಮಳೆ-ಬೆಳೆ ಸಂಪತ್ತನ್ನು ಸಂಗಮೇಶ್ವರನು ಕರುಣಿಸಲಿ ಎಂಬ ಅಪಾರ ನಂಬಿಕೆಯನ್ನು ಇಲ್ಲಿಯ ಜನಪದರು ಹೊಂದಿದ್ದಾರೆ.

ನಂದಿಕೋಲು ಕುಣಿತ : ನಂದಿಕೋಲು ಕುಣಿತವು ಶೈವ ಸಂಪ್ರದಾಯಕ್ಕೆ ಸೇರಿದ ಗಂಡುಕಲೆ, ಈ ಕುಣಿತವು ಹ್ಯಾರಡಾದಲ್ಲಿ ಅಚ್ಚುಮೆಚ್ಚು. ಅಗ್ನಿ ಹಾಯುವುದಕ್ಕಿಂತ ಮುಂಚೆ ಪುರವಂತಿಕೆಯ ಜೊತೆಗೆ ಊರಿನ ಪ್ರಮುಖ ಬೀದಿಯಲ್ಲಿ ಈ ಪ್ರದರ್ಶನವನ್ನು ಕಾಣಬಹುದಾಗಿದೆ. ಈ ಕುಣಿತದ ಹುಟ್ಟಿನ ಹಿಂದೆ ದಕ್ಷಯಜ್ಞಕ್ಕೆ ಸಂಬಂಧಿಸಿದ ಪುರಾಣವಿದೆ. "ದಕ್ಷಯಜ್ಞವನ್ನು ಧ್ವಂಸ ಮಾಡಿದ ವೀರಭದ್ರನಿಗೆ, ದಕ್ಷನ ಪರಿವಾರವು ಶಿವಭಕ್ತ ಗಣಗಳೆಂದು ತಿಳಿದುಬಂದು, ತಾನು ಸಂಹರಿಸಿದ ಅವರುಗಳಿಗೆಲ್ಲಾ ಮುಕ್ತಿಯನ್ನು ದೊರಕಿಸಬೇಕೆಂದು ಯೋಚಿಸಿ, ವ್ಯಾಸಮುನಿಯ ತೋಳನ್ನು ಕೋಲನ್ನಾಗಿ ಮಾಡಿ ಅದಕ್ಕೆ ಶಿವನ ವಾಹನವಾದ ನಂದಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಋಷಿಗಳ ರುಂಡಗಳನ್ನು ಹಾರಗಳನ್ನಾಗಿ ಮಾಡಿ ನಂದಿಕೋಲಿಗೆ ತೊಡಿಸಿ, ಮಹಾದ್ವಾರದಲ್ಲಿದ್ದ ಸಿಂಹದ ಚರ್ಮವನ್ನು ಸುಲಿದು ಧ್ವಜ ಮಾಡಿ ನಂದಿ ಕೋಲಿನ ತುದಿಗೆ ಕಟ್ಟಿ, ಆ ಧ್ವಜವನ್ನು

ಮುಂದು ಮಾಡಿಕೊಂಡು ವಿಜಯಘೋಷದೊಂದಿಗೆ ಕೈಲಾಸಕ್ಕೆ ತೆರಳಿದನೆಂದು ಪ್ರತೀತಿ". (ಡಾ. ಚಿ.ಸಿ. ನಿಂಗಣ್ಣ : ೨೦೧೨: ೫೮೪)

ಸುಮಾರು ಹದಿನಾರು ಹದಿನೆಂಟು ಮೊಳ ಎತ್ತರವಿರುವ ನಂದಿಕೋಲಾಗಿದೆ. ಒಂದು ಆಳು ಎರಡೂ ಕೈಗಳಿಂದ ತಬ್ಬಿ ಹಿಡಿಯಬಹುದಾದಷ್ಟು ದಪ್ಪ ಇರುವ ಬಿದಿರಿನ ಬೊಂಬು. ಒಂದಕ್ಕೆ ಹಿತ್ತಾಳೆಯ ಬಿರಡೆಗಳ ಮಧ್ಯೆ ಬರುವಂತೆ ಹಿತ್ತಾಳೆಯ ಗಗ್ಗರಗಳು ಮತ್ತು ಕುಚ್ಚಿನ ತಟ್ಟೆಗಳನ್ನು ಸೇರಿಸಿರುತ್ತಾರೆ. ಬೊಂಬಿನ ತುತ್ತ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಕಿರುಛತ್ರಿಯನ್ನು ಅಳವಡಿಸಿದ್ದು, ಈ ಛತ್ರಿಯ ಮೇಲು ಭಾಗದಲ್ಲಿ ಕಳಶ ಇರುತ್ತದೆ. ಕಳಸದ ತುದಿಯನ್ನು ಅಲಂಕರಿಸಿರುತ್ತಾರೆ. ಬಿದಿರಿನ ಬೊಂಬಿನ ಬುಡದಿಂದ ಸುಮಾರು ಏಳೆಂಟು ಅಡಿ ಎತ್ತರದಲ್ಲಿ ಸಣ್ಣ ಹಲಗೆಯೊಂದನ್ನು ಅಳವಡಿಸಿದ್ದು, ಆ ಹಲಗೆಯ ಮೇಲೆ ಬೆಳ್ಳಿಯ ಕವಚ ತೊಡಿಸಿದ ಸಣ್ಣ ಆಕೃತಿಯ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಿರುತ್ತಾರೆ. ಕಂಬದ ತುದಿಗೆ ಕಾವಿ ಬಣ್ಣದ ಬಟ್ಟೆಯ ಧ್ವಜ ಕಟ್ಟಿರುತ್ತಾರೆ. ಹೀಗೆ ಬಿರಡೆ, ಗಗ್ಗರ, ತಟ್ಟೆ, ಕುಚ್ಚು, ಧ್ವಜ, ಬಸವಣ್ಣನಿಂದ ಅಲಂಕೃತಗೊಂಡ ಬಿದಿರಿನ ಬೊಂಬೇ ನಂದಿಕೋಲು.

ಅಲಂಕರಿಸಿದ ನಂದಿಧ್ವಜವನ್ನು ಹೊತ್ತು ಕುಣಿಯುವ ಕಲಾವಿದರು ಕಚ್ಚೆ, ಪಂಜೆ, ಕಸೆ ಅಂಗಿ, ತಲೆಗೆ ಪೇಟ ಇಲ್ಲವೇ ರುಮಾಲು, ಹಣೆಗೆ ವಿಭೂತಿ ಧರಿಸಿರುತ್ತಾರೆ. ಸಾಕಷ್ಟು ಎತ್ತರದ ಹಾಗೂ ಭಾರವಾದ ನಂದಿಧ್ವಜವು ಆಯ ತಪ್ಪದಂತೆ ಹಿಡಿದುಕೊಳ್ಳಲು ಬೆನ್ನಿನ ಪಾರ್ಶ್ವಕ್ಕೆ ಬರುವಂತೆ "ನೆವಾರ" ಎಂಬ ಬಟ್ಟೆ ಚೀಲವನ್ನು ಹೆಗಲಿಗೆ ತೂಗು ಹಾಕಿಕೊಂಡಿದ್ದು, ಆ ಚೀಲದ ಒಳಗೆ ನಂದಿಧ್ವಜದ ಬುಡವನ್ನು ಇಟ್ಟು ಎರಡೂ ಕೈಗಳಿಂದ ಭದ್ರವಾಗಿ ಹಿಡಿದುಕೊಂಡು ಕುಣಿಯುತ್ತಾರೆ. ಕೆಲವೊಮ್ಮೆ ಎರಡು ಹಗ್ಗಗಳನ್ನು ಧ್ವಜದ ಮಧ್ಯ ಭಾಗದಲ್ಲಿ ಕಟ್ಟಿ ಆಚೀಚೆ ಒಬ್ಬೊಬ್ಬರು ಹಿಡಿದು ನಿಯಂತ್ರಿಸುವರು.

ಪುರುವಂತಿಕೆ ಕುಣಿತ : ಹ್ಯಾರಡಾ ಗ್ರಾಮದಲ್ಲಿ ಬಸವ ಜಯಂತಿ ಹಬ್ಬದಂದು ಪುರುವಂತಿಕೆ ಕುಣಿತವು ಅನಾದಿಕಾಲದಿಂದಲೂ ಚಾಲ್ತಿಯಲ್ಲಿದೆ. ಗ್ರಾಮದ ಬಣಗಾರ ಈರಪ್ಪ ಅವರನ್ನು ಹಿರಿಯ ಪುರುವಂತರು ಎಂದು ಕರೆಯುವರು. ಮೊದಲು ಅಗ್ನಿಗೆ ಬೆಂಕಿಯ ಸ್ಪರ್ಶ ಮಾಡುವವರು ಇವರೇ. ಮೊದಲು ಅಗ್ನಿಯ ಕೆಂಡ ಹಾಕುವವರೂ ಇವರೇ, ಹಿರಿಯ ಪುರುವಂತರ ಜೊತೆಗೆ ಇತರೆ ಪುರುವಂತರು ಒಡಪುಗಳನ್ನು ಹೇಳುವುದರ ಮೂಲಕ ಈ ಕಲೆಯನ್ನು ಪ್ರದರ್ಶಿಸುವರು. "ಇವರನ್ನು ವೀರಭದ್ರನ ಅವತಾರಿಗಳೆಂದು ಕರೆಯುವರು. ಇವರು ಕಾವಿ ಬಣ್ಣದ ಧೋತರವುಟ್ಟು ವೀರಗಚ್ಚೆ ಹಾಕುವರು. ಅದೇ ಬಣ್ಣದ ಅಂಗಿ, ಪಟಗಾ ಸುತ್ತುವರು. ಸೊಂಟಕ್ಕೆ ನಡಕಟ್ಟು ಕಟ್ಟಿ, ಮೈ ಮೇಲೆ ಗಲೀಫ ವಸ್ತ್ರ ಹಾಕಿಕೊಳ್ಳುವರು, ಕೈ, ಕೊರಳು, ಕಿವಿಗಳಲ್ಲಿ ವಿವಿಧ ರೀತಿಯ ವಸ್ತುಗಳನ್ನು ಹಾಕಿಕೊಂಡು ಹಣೆಯಲ್ಲಿ ವಿಭೂತಿ ಧರಿಸಿ ಕೈಯಲ್ಲಿ ಖಡ್ಗ ಹಿಡಿದಿರುತ್ತಾರೆ. ಮೊಳಕಾಲುಗಳಿಗೆ ಹಿತ್ತಾಳೆಯ

ಜಲಗು, ಕಾಲಿಗೆ ಗಗ್ಗರ, ಗೆಜ್ಜೆ, ಬಲಗೈಯಲ್ಲಿ ಬಿಚ್ಚುಗತ್ತಿ, ಎಡಗೈಯಲ್ಲಿ ವೀರಭದ್ರನ ತ್ರಿಶೂಲ, ಹಿಂದೆಲೆಗೆ ಬಿಳಿಯ ಚೌರಿ ಮುಂದೆಲೆಗೆ ವೈಭವೋಪೇತ ಕಿರೀಟ, ಎದೆಯ ಮೇಲೆ ತೀರ್ಥದರ್ಪಣ ಕೊರಳಲ್ಲಿ ರುದ್ರಾಕ್ಷಿಸರ ಧರಿಸಿಕೊಂಡು ವೀರಾವೇಶದಿಂದ ಕತ್ತಿಯನ್ನು ಝಳಪಿಸುತ್ತಾ ಸಮಾಳ ವಾದ್ಯಗಳ ಕಿವಿಗಡಚಿಕ್ಕುವ ಸದ್ದಿಗೆ ತಕ್ಕಂತೆ ಕುಣಿಯುವ ಕಲಾವಿದರನ್ನು ಕಂಡಾಗ ಎಂತಹ ಗಂಡೆದೆಯು ತುಸು ಅಲುಗಾಡುತ್ತದೆ."(ಡಾ. ಚಿ.ಸಿ. ನಿಂಗಣ್ಣ : ೨೦೧೨ : ೪೯೬)

ಶತ್ರು ಸಂಹಾರಕ್ಕೆ ಹೊರಟ ವೀರಯೋಧರಂತೆ ಪ್ರತಿಕ್ಷಣದಲ್ಲಿಯೂ ಮುನ್ನುಗ್ಗುವ ಚಲನೆಯನ್ನು ಈ ಕುಣಿತದಲ್ಲಿ ಕಾಣಬಹುದು. ಮಧ್ಯೆ ಮಧ್ಯೆ ಕುಣಿತ ನಿಲ್ಲಿಸಿ ಒಡಬುಗಳನ್ನು ಪ್ರಾಸಬದ್ಧವಾಗಿ, ಭಾವಪೂರ್ಣವಾಗಿ ನಿರೂಪಣೆ ಮಾಡುವುದು ನೋಡುಗರ ಮನಸೂರೆಗೊಳ್ಳುವುದು. ಒಡಬು ಹೇಳುವಾಗ ಪ್ರತೀ ಕೊನೆಯಲ್ಲಿ "ಖಡೆ ಖಡೆ" ಎಂದು ಹೇಳುತ್ತಾ ಸಮಾಳದವರು ತೀವ್ರಗತಿಯಲ್ಲಿ ಸಮಾಳ ನುಡಿಸಿ ಕಲಾವಿದರನ್ನು ಮತ್ತೆ ಬಿರುಸಿನ ಗತಿಯ ಕುಣಿತಕ್ಕೆ ಅಣಿ ಮಾಡುತ್ತಾರೆ. ಒಡಬು ಹೇಳುವಾಗ ಕಲಾವಿದನು ಕಣ್ಣಗಳನ್ನು ಹೊರಳಿಸುವುದು, ನಾಲಿಗೆಯನ್ನು ಹೊರಗೆ ಹಿರಿಯುವುದು, ಕೈಗಳನ್ನು ಮೇಲಕ್ಕೆ ಕೆಳಕ್ಕೆ ಬೀಸುವುದು ಅತ್ಯಂತ ಮನಮೋಹಕವಾದುದು.

ಈ ರೀತಿಯಾಗಿ ಒಡಬುಗಳನ್ನು ಹೇಳುತ್ತಾ ಊರಿನ ಪ್ರಮುಖ ಬೀದಿಗಳಲ್ಲಿ ಸಾಗುವರು. ಸಂಗಮೇಶ್ವರನ ದೇವಸ್ಥಾನದ ಹತ್ತಿರ ಬಂದಾಗ ಬಾಳೆಗಂಬವನ್ನು ಖಡ್ಗದಿಂದ ಸಂಹರಿಸುವುದರ ಮೂಲಕ ದುಷ್ಟಶಕ್ತಿಯನ್ನು ಸಂಹರಿಸುವರು. ನಂತರ ಗಂಗಾಮಾತೆಗೆ ಪೂಜೆಯನ್ನು ಸಲ್ಲಿಸಿ ಕೆಂಡವನ್ನು ಹಾಯುವರು. ಮೊದಲು ಹಿರಿಯ ಪುರುವಂತರು ಕೆಂಡವನ್ನು ಹಾಯ್ದು ನಂತರ ಉಳಿದ ಪುರುವಂತರು ಕೆಂಡ ಹಾಯುವರು. ನಂತರದಲ್ಲಿ ಜನಸಾಮಾನ್ಯರು ಕೆಂಡ ಹಾಯುವರು. ಅವರು ಹೇಳುವ ಒಂದು ಒಡಪು ಕೆಳಕಂಡತಿದೆ.

ಘನ

ಭಳಿರೇ, ಅಹಹಹಾ ರುದ್ರಾ, ಶ್ರೀ ಗಂಗಾಧರಾ,
ಗೌರೀವರಾ ಮಂಗಳಕರ, ತಿಂಗಳಧರಾ!
ಅಂದಿಗೆ ವೈರಿಗಳಿಗೆ ಯಮಗಂಡನಾದಂಡ ಶ್ರೀ ಶರ
ಭೇಶ್ವರನೇ ಬಹುಪರಾಕ್.

ಅಹಹಹಾ ರುದ್ರಾ, ಬ್ರಹ್ಮನು ಘನವೆಂತೆಂಬಿರಿ ಬ್ರಹ್ಮನು ಘನವಲ್ಲ
ಬ್ರಹ್ಮನು ಕಮಲದಲ್ಲಿ ಪುಟ್ಟಿದ ಕಮಲವು ಘನವೆಂತೆಂಬಿರಿ
ಕಮಲವು ಘನವಲ್ಲ, ಕೆಸರಿನಲ್ಲಿ ಪುಟ್ಟಿತು.(ಬಣಗಾರ ದೇವರಾಜ. ಪುರುವಂತರು.)

ಹೀಗೆ ಹ್ಯಾರಡಾದಲ್ಲಿ ಪುರುವಂತರು ವಿವಿದ ದೈವಗಳ ಮೇಲೆ, ಮಾನವನ ಜೀವನದ ಕ್ರಮದ ಮೇಲೆ, ಮೋಕ್ಷವನ್ನು ಹೇಗೆ ಪಡೆಯಬೇಕು ಎಂಬುದರ ಬಗ್ಗೆ ವಡಪುಗಳನ್ನು ಹೇಳುತ್ತಾ, ನೃತ್ಯವನ್ನು ಮಾಡುತ್ತಾ ಅನಾದಿಕಾಲದಿಂದಲೂ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

೬.೩ ಹನುಮಂತ

ಈ ದೇವಾಲಯವು ಊರ ಹೊರಗಿದೆ (ಈಗ ಊರ ಮಧ್ಯದಲ್ಲಿದೆ). ಇದು ಹರಪನಹಳ್ಳಿಯ ಪಾಳೆಗಾರರ ಕುಲದೈವವಾಗಿತ್ತು. ಈ ದೇವಾಲಯವು ೩೫ ಅಡಿ ಉದ್ದ, ೨೫ ಅಡಿ ಅಗಲವನ್ನು ಹೊಂದಿದೆ. ಗರ್ಭಗುಡಿಯು ೫ ಅಡಿ ಉದ್ದ, ೫ ಅಡಿ ಅಗಲವನ್ನು ಹೊಂದಿದೆ. ಗರ್ಭಗುಡಿಯ ಒಳಗಡೆ ಆಂಜನೇಯನ ಮೂರ್ತಿ ಇದ್ದು, ೩ ಅಡಿ ಎತ್ತರ ೧.೫ ಅಡಿ ಅಗಲ ಹೊಂದಿದೆ. ಈ ಮೂರ್ತಿಯನ್ನು ಕರಿಯ ಕಲ್ಲಿನಿಂದ ಕೆತ್ತಲಾಗಿದ್ದು, ಕಲಾನೈಪುಣ್ಯತೆಯಿಂದ ಕೂಡಿದ ಮೂರ್ತಿಯಾಗಿದೆ. ಆಂಜನೇಯನ ನಿಂತಿರುವ ಚಿತ್ರಣವನ್ನು ಕಾಣಬಹುದಾಗಿದೆ. ಈ ದೇವಾಲಯವು ಆಗಿನ ಕಾಲದಲ್ಲಿ ಊರ ಹೊರಗಡೆ ಇದ್ದು, ಇದರ ಪ್ರತಿಷ್ಠೆಯು ಅಕ್ಕ-ಪಕ್ಕದ ಗ್ರಾಮಗಳಿಗೆ ಹಬ್ಬಿತ್ತು. ಆದ್ದರಿಂದ ಪಕ್ಕದ ಗ್ರಾಮದ ಗಿರಿಯಾಪುರದ ಜನರು ಮೂಲ ಮೂರ್ತಿಯನ್ನು ರಾತ್ರೋರಾತ್ರಿ ಹೊತ್ತುಕೊಂಡು ಹೋಗಿ ಅಲ್ಲಿ ಪ್ರತಿಷ್ಠಾಪಿಸಿದರು ಎಂದು ಹ್ಯಾರಡಾ ಜನಪದರು ಹೇಳುವರು. ಈಗಲೂ ಗಿರಿಯಾಪುರದ ಆಂಜನೇಯನನ್ನು ಹ್ಯಾರಡಾದ ಆಂಜನೇಯ ಎಂದು ಕರೆಯುವರು.

ಮೊದಲು ಈ ದೈವವನ್ನು ಯಾದವ ಕುಲದವರು ಪೂಜಿಸುತ್ತಿದ್ದರು. ಪಾಳೇಗಾರರು ಇವರಿಗೆ ದತ್ತಿ, ದಾನಗಳನ್ನು ಕೊಟ್ಟು ಪೂಜಾ ಕೈಂಕರ್ಯವನ್ನು ನೆರವೇರಿಸಲು ಆದೇಶವಿತ್ತಿದ್ದರು. ತದ ನಂತರದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಜಂಗಮ ಸಮುದಾಯದವರು ಪ್ರಸ್ತುತ ಪೂಜೆಯನ್ನು ಮಾಡುವರು. ಈ ದೈವಕ್ಕೆ ಸಂಬಂಧಿಸಿದಂತೆ ಪೂಜಾರಿಗಳಾಗಿ ಬಾರಿಕರು ಸಮುದಾಯದವರು ಸಾಗುವಳಿ ಹಕ್ಕನ್ನು ಹೊಂದಿದ್ದಾರೆ.

ದೇವಾಲಯವು ಅಟವಾಳಿಗೆ (ಮಣ್ಣಿನಿಂದ ಮೇಲು ಹೊದಿಕೆ)ಯನ್ನು ಹೊಂದಿದ್ದು, ದೇವಾಲಯದ ಒಳಗೆ ಗೋಡೆಯ ಮೇಲೆ ಬಲಗಡೆ ಪಾರ್ವತಿ, ಪರಮೇಶ್ವರ ಚಿತ್ರವಿದೆ. ಎಡಗಡೆ ಆದಿಶಕ್ತಿಯ ಚಿತ್ರವಿದೆ. ಅದರ ಪಕ್ಕದಲ್ಲಿ ಜೈನ ಧರ್ಮದ ತೀರ್ಥಂಕರನ ಚಿತ್ರಣವಿದೆ. ಇದು ಹಿಂದೂ, ಜೈನ ಧರ್ಮಗಳ ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ. ದೇವಾಲಯದ ಮುಂದೆ ಕಬ್ಬಿಣದ ಹಂದರ ಹೊಂದಿದ್ದು, ೨೫ ಅಡಿ ಉದ್ದ, ೨೦ ಅಡಿ ಅಗಲವನ್ನು ಹೊಂದಿದೆ. ದೇವಾಲಯದ ಮುಂದೆ ಕಬ್ಬಿಣದಿಂದ ಮಾಡಿದ ದೀಪದ ಕಂಬವಿದೆ. ಈ ಕಂಬದಲ್ಲಿ ರಾಮನ ಮೂರ್ತಿಯನ್ನು ಕಾಣಬಹುದು. ನಂತರ ದೇವಾಲಯದ ಮುಂದೆ ಓಕಳಿ ಗುಣಿಯನ್ನು ಕಾಣಬಹುದು. ಇದು ೫ ಅಡಿ ಉದ್ದ, ೧೫ ಅಡಿ ಅಗಲವನ್ನು ಹೊಂದಿದೆ. ಇಂದಿಗೂ ಈ ದೇವಾಲಯ ಸುಸ್ಥಿತಿಯಲ್ಲಿದೆ. ಪ್ರತಿ ವರ್ಷ ಯುಗಾದಿಯ ಸಂದರ್ಭದಲ್ಲಿ ತೇರನ್ನು ಎಳೆದು ಓಕುಳಿಯನ್ನು ಆಡುವರು.

ತೇರನ್ನು ಎಳೆಯುವುದು: ಯುಗಾದಿ ದಿನದಂದು ಆಂಜನೇಯನ ತೇರನ್ನು ಎಳೆಯಲಾಗುವುದು. ಈ ರಥವು ೧೦ ಅಡಿ ಉದ್ದ, ೧೫ ಅಡಿ ಎತ್ತರವನ್ನು ಹೊಂದಿದ್ದು, ಸಂಪೂರ್ಣವಾಗಿ ಕಟ್ಟಿಗೆಯಿಂದ ತಯಾರಿಸಿದ ರಥವಾಗಿದೆ. ನಾಲ್ಕು ಗಾಲಿಯನ್ನು ಹೊಂದಿದೆ. ರಥೋತ್ಸವದ ಸಮಯದಲ್ಲಿ ರಥವನ್ನು ವಿವಿಧ ರೀತಿಯ ಬಟ್ಟೆಗಳಿಂದ ಸಿಂಗರಿಸುವರು. ವಿವಿಧ ರೀತಿಯ ಪಟಗಳ(ನಿಶಾನೆ)ನ್ನು ಉಪಯೋಗಿಸುವರು. ರಥವನ್ನು ಆಂಜನೇಯನ ದೇವಸ್ಥಾನದಿಂದ ೧೦೦ ಮೀಟರ್‌ವರೆಗೆ ಭಕ್ತರು ಎಳೆದುಕೊಂಡು ಹೋಗುವರು. ರಥದ ಕಳಸಕ್ಕೆ ಬಾಳೆಹಣ್ಣಿನಿಂದ ಹೊಡೆಯುವರು. ಬಾಳೆಹಣ್ಣು ಕಳಸಕ್ಕೆ ತಗುಲಿದರೆ ತಾವು ಅಂದುಕೊಂಡ ಕೆಲಸ ನೆರವೇರುವುದು ಎನ್ನುವುದು ಹ್ಯಾರಡಾ ಜನಪದರ ನಂಬಿಕೆಯಾಗಿದೆ. ರಥದ ನಾಲ್ಕು ಗಾಲಿಗಳಿಗೆ ತೆಂಗಿನ ಕಾಯಿಯಿಂದ ಹೊಡೆಯುವರು. ನಂತರದಲ್ಲಿ ಆಂಜನೇಯನ ಪಟವನ್ನು(ನಿಶಾನೆ) ಹರಾಜಿನಲ್ಲಿ ಕೂಗುವರು. ಯಾರು ಅತೀ ಹೆಚ್ಚು ಬೆಲೆಗೆ ಹರಾಜು ಕೂಗುವರೋ ಅವರ ಮನೆಗೆ ಆಂಜನೇಯನ ನಿಶಾನೆಯು ಹೋಗುವುದು.

ಮೇಲಿನ ಆಚರಣೆಗಳಾದ ತೇರಿನ ಕಳಸಕ್ಕೆ ಬಾಳೆಹಣ್ಣಿನಿಂದ ಹೊಡೆಯುವುದು, ರಥದ ಗಾಲಿಗೆ ತೆಂಗಿನ ಕಾಯಿಗಳನ್ನು ಒಡೆಯುವುದು, ನಿಶಾನೆಯನ್ನು ಹರಾಜಿನಲ್ಲಿ ಕೂಗವುದು ಇವೆಲ್ಲವೂ ಇಲ್ಲಿಯ ಜನಪದರ ಭಕ್ತಿಯ ಪರಾಕಾಷ್ಠೆಯಾಗಿದೆ. ಈ ಆಚರಣೆಗಳನ್ನು ಮಾಡುವುದರಿಂದ ಹನುಮಂತನು ನಮಗೆ ಭಾಗ್ಯವನ್ನು ಕರುಣಿಸುವನು ಎಂಬುದು ಇಲ್ಲಿಯ ಜನಪದರ ನಂಬಿಕೆಯಾಗಿದೆ. ಇದರ ಮುಖೇನ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ಬಹೆಹರಿಸಿಕೊಳ್ಳುವ ಪದ್ಧತಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ.

ಓಕಳಿ ಆಡುವುದು: ಆಂಜನೇಯನ ದೇವಾಲಯದ ಮುಂದೆ ೧೫ ಅಡಿ ಅಗಲ, ೧೫ ಅಡಿ ಉದ್ದ, ೧೦ ಅಡಿ ಆಳದ ಓಕಳಿ ಗುಣಿಯನ್ನು ಕಾಣಬಹುದಾಗಿದೆ. ಓಕಳಿ ಆಡುವ ಕಾರ್ಯಕ್ರಮವನ್ನು ಗ್ರಾಮದ ಬಾರಿಕೇರ ಸಮುದಾಯದವರು ನಿರ್ವಹಿಸುವರು. ಇವರು ಓಕಳಿಗೆ ನೀರನ್ನು ತುಂಬಿ ಹಂದರವನ್ನು ಹಾಕುವರು. ಹಂದರ ಮೇಲ್ಭಾಗದಲ್ಲಿ ೯ ಅಂತರಗಾಯಿ (ತೆಂಗಿನಕಾಯಿ) ಯನ್ನು ಕಟ್ಟಿರುವರು. ಓಕಳಿ ಆಡುವ ಸಮಯದಲ್ಲಿ ಹ್ಯಾರಡಾದ ಜನಪದರು ಹಾರಿ ತೆಂಗಿನಕಾಯಿಯನ್ನು ಕಿತ್ತುಕೊಂಡು ಪರಸ್ಪರ ಬಣ್ಣವನ್ನು ಎರಚುತ್ತಾ ಖುಷಿಪಡುವರು.

ಓಕಳಿಯನ್ನು ಆಡುವುದರ ಪ್ರಮುಖ ಉದ್ದೇಶ ಪರಸ್ಪರ ಸಂತೋಷವನ್ನು ಹಂಚಿಕೊಳ್ಳುವುದಾಗಿದೆ. ಈ ದಿನ ಗ್ರಾಮದ ಎಲ್ಲಾ ಜನಪದರು ಪರಸ್ಪರ ಬಣ್ಣವನ್ನು ಹಚ್ಚಿಕೊಳ್ಳುವುದರ ಮೂಲಕ ಸಂತೋಷವನ್ನು ಹಂಚಿಕೊಳ್ಳುವ ಸಮಯವಾಗಿದೆ. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲಾ ವಯೋಮಾನದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು.

೬.೪ ಕೇರಿಯ ದುರುಗಮ್ಮ

ಈ ದೇವಾಲಯವು ಇಂದಿಗೂ ಸುಸ್ಥಿತಿಯಲ್ಲಿದೆ. ಗರ್ಭಗುಡಿಯು ೫ ಅಡಿ ಉದ್ದ, ೬ ಅಡಿ

ಅಗಲ ಹೊಂದಿದೆ. ದೇವಾಲಯವು ಅಟವಾಳಿಗೆಯನ್ನು ಹೊಂದಿದ್ದು, ೧೧ ಅಡಿ ಅಗಲ, ೫ ಅಡಿ ಅಗಲವನ್ನು ಹೊಂದಿದೆ. ದೇವಿಯ ಮೂರ್ತಿಯನ್ನು ಕಟ್ಟಿಗೆಯಿಂದ ನಿರ್ಮಾಣಮಾಡಿದ್ದು, ಕಲಾ ನೈಪುಣ್ಯತೆಯಿಂದ ಕೂಡಿದೆ. ೩ ಅಡಿ ಎತ್ತರ, ೨ ಅಡಿ ಅಗಲವನ್ನು ಹೊಂದಿದ್ದು, ದೇವಾಲಯದ ಮುಂದೆ ಪಾದಗಟ್ಟೆಯನ್ನು ಹೊಂದಿದೆ. ಈ ಪಾದಗಟ್ಟೆಯು ೨.೫ ಅಡಿ ಅಗಲ, ೨ ಅಡಿ ಉದ್ದ ಹೊಂದಿದೆ. ಈ ದೇವತೆಯನ್ನು ಹೆಚ್ಚಾಗಿ ಹರಿಜನ ಸಮುದಾಯದವರು ಆರಾಧಿಸುತ್ತಿದ್ದಾರೆ.

ಕರ್ನಾಟಕದ ಗ್ರಾಮಗಳ ಅಧ್ಯಯನ ಕೈಗೊಂಡಾಗ ಬಹುತೇಕವಾಗಿ ಕೋಟೆಗಳು ಇರುವ ಗ್ರಾಮದಲ್ಲಿ ದುರುಗಮ್ಮ ದೇವತೆಯನ್ನು ಕಾಣಬಹುದಾಗಿದೆ. ಗ್ರಾಮಗಳಲ್ಲಿ ನೆಲೆಯೂರುವುದಕ್ಕಿಂತ ಮೊದಲು ಈಕೆಯು ಗುಡ್ಡ ಗುಹೆಗಳು ಹಾಗೂ ಶಾಕ್ತ ಪಂಥದವರ ದೇವತೆಯಾಗಿದ್ದಳು. ರಾಜ ಮಹಾರಾಜರುಗಳು ತಮ್ಮ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸತೊಡಗಿದರು. ಆಗ ರಾಜ ಪುರೋಹಿತರ ಸಲಹೆ ಮೇರೆಗೆ ಕೋಟೆಯನ್ನು ರಕ್ಷಿಸುವುದಕ್ಕೋಸ್ಕರವಾಗಿ ಕೋಟೆಯ ಮುಂದೆ ಈ ದೇವತೆಯನ್ನು ಪ್ರತಿಷ್ಠಾಪಿಸಿದರು. ಅದರಂತೆಯೇ ಹ್ಯಾರಡ ಗ್ರಾಮದಲ್ಲಿ ಸಹ ಈ ದೇವತೆಯನ್ನು ಪ್ರತಿಷ್ಠಾಪಿಸಿರಬೇಕು. ಕಾಡಿನಲ್ಲಿ ಈ ದೇವತೆಯು ವಾಸಿಸುತ್ತಿರುವುದರಿಂದ ಹೆಚ್ಚಾಗಿ ಬುಡಕಟ್ಟು ಸಮುದಾಯದವರು ಈ ದೇವತೆಯನ್ನು ಆರಾಧಿಸುವುದುಂಟು. ಅದರಂತೆಯೇ ಈ ದೇವತೆಯನ್ನು ಹ್ಯಾರಡಾದಲ್ಲಿ ಬಹುತೇಕವಾಗಿ ಹರಿಜನ ಸಮುದಾಯದವರು ಆರಾಧಿಸುತ್ತಿದ್ದಾರೆ.

ಹ್ಯಾರಡ ಗ್ರಾಮದಲ್ಲಿ ಯುಗಾದಿ, ಪಂಚಮಿ, ದೀಪಾವಳಿ ಸಮಯದಂದು ದುರುಗಮ್ಮನ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಗ್ರಾಮದ ಪ್ರತಿಯೊಂದು ಓಣಿಗಳಲ್ಲಿ ಈಕೆಯ ಮೆರವಣಿಗೆ ನಡೆಯುತ್ತದೆ. ಆ ಸಮಯದಲ್ಲಿ ಹರಿಜನ ಸಮುದಾಯದವರು ಹಾಡುಗಳನ್ನು ಹೇಳುತ್ತಾ ಹಲಗೆಯ ವಾದ್ಯಗಳೊಂದಿಗೆ ಪಲ್ಲಕ್ಕಿಯಲ್ಲಿ ದೇವತೆಯನ್ನು ಮೆರವಣಿಗೆ ಮಾಡುವುದುಂಟು. ಆಗ ಗ್ರಾಮದ ಪ್ರತಿಯೊಂದು ಕುಟುಂಬದವರು ಅಕ್ಕಿ, ಬೇಳೆ, ಬೆಲ್ಲವನ್ನು ದೇವಿಗೆ ಸಮರ್ಪಿಸಿ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುವುದುಂಟು. ದೇವಿಯ ಪಲ್ಲಕ್ಕಿಯು ಹೊರಡುವಾಗ ಯಾರ ಮನೆಯ ಮುಂದೆ ನಿಲ್ಲುವುದೋ ಅವರು ದೇವಿಗೆ ಗೊಂಗಡಿಯನ್ನು ಹಾಕಿ ದೇವತೆಯನ್ನು ಬರಮಾಡಿಕೊಂಡು ದೇವಿಯ ಇಷ್ಟಾರ್ಥಗಳನ್ನು ಪೂರೈಸುತ್ತಾರೆ. ಹೀಗೆ ದೇವತೆಯ ಇಷ್ಟಾರ್ಥವನ್ನು ಪೂರೈಸುವುದರಿಂದ ತಮ್ಮ ಕುಟುಂಬಕ್ಕೆ ದೇವಿಯು ಒಳಿತನ್ನು ಮಾಡುವಳೆಂದು ಹ್ಯಾರಡಾದ ಜನಪದರು ನಂಬಿರುವರು. ಇನ್ನು ಕಾರ್ತಿಕ ಮಾಸದಲ್ಲಿ ದೇವಾಲಯದ ತುಂಬೆಲ್ಲಾ ದೀಪಗಳನ್ನು ಬೆಳಗಿಸುವುದರ ಮೂಲಕ ಕಾರ್ತಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವರು. ದುರುಗಮ್ಮ ದೇವತೆಯನ್ನು ಕೇವಲ ಹರಿಜನ ಸಮುದಾಯದವರಲ್ಲದೇ ಗ್ರಾಮದ ಎಲ್ಲಾ ಸಮುದಾಯದವರು ಆರಾಧಿಸುವುದುಂಟು.

೬.೫ ಬೀರಲಿಂಗೇಶ್ವರ

ಈ ದೇವಾಲಯವು ಮೊದಲು ಹಳೆಯ ದೇವಾಲಯವನ್ನು ಹೊಂದಿತ್ತು, ಆದರೆ ಇತ್ತೀಚೆಗೆ

ಗ್ರಾಮದಲ್ಲಿ ಎಲ್ಲಾ ಜನಪದರು ತಮ್ಮ ಸ್ವಂತ ಹಣದಿಂದ ಈ ದೇವಾಲಯನ್ನು ನಿರ್ಮಿಸಿದ್ದಾರೆ. ಈ ದೇವಾಲಯವು ಕರೂರು ಕಲ್ಲಿನಿಂದ ನಿರ್ಮಾಣಮಾಡಿದ್ದು, ೯ ಅಂಕಣವನ್ನು ಹೊಂದಿದೆ. ೫ ಅಡಿ ಅಗಲ, ೬ ಅಡಿ ಅಗಲವನ್ನು ಹೊಂದಿದೆ. ಗರ್ಭ ಗುಡಿಯಲ್ಲಿ ಗದ್ದುಗೆಯನ್ನು ಕಾಣಬಹುದು. ಇದು ೭ ಅಡಿ ಅಗಲ, ೨ ಅಡಿ ಉದ್ದವಿದೆ. ಗದ್ದುಗೆಯ ಮೇಲೆ ಬೀರಲಿಂಗೇಶ್ವರನ ಮೂರ್ತಿ ಇದೆ. ದೇವಾಲಯದ ಮುಂದೆ ದೀಪದ ಕಂಬವಿದ್ದು, ೨೦ ಅಡಿ ಎತ್ತರವನ್ನು ಹೊಂದಿದೆ. ಇದರ ಪಕ್ಕದಲ್ಲಿ ೫ ಅಡಿ ಉದ್ದ, ೬ ಅಡಿ ಅಗಲವಾದ ಚೌಡೇಶ್ವರಿಯ ಗದ್ದುಗೆಯನ್ನು ಕಾಣಬಹುದು. ಚೌಡಮ್ಮ ದೇವತೆಯು ಬೀರಲಿಂಗೇಶ್ವರನ ತಂಗಿಯೆಂದು ಹ್ಯಾರಡಾ ಜನಪದರು ನಂಬಿದ್ದಾರೆ. ಬೀರಲಿಂಗೇಶ್ವರನಿಗೆ ಇಬ್ಬರು ಸಹೋದರರು ಕರಿಯಪ್ಪ ಮತ್ತು ಡಿಳ್ಳೆಪ್ಪ. ಬೀರಲಿಂಗೇಶ್ವರನ ಸೇವೆಯನ್ನು ಮಾಡುವವನು ಮಾಳಿಂಗರಾಯ ಎಂಬುದು ಪ್ರತೀತಿ ಇದೆ.

ಗರ್ಭಗುಡಿಯಲ್ಲಿರುವ ಗದ್ದುಗೆಯ ಮೇಲೆ ಆನೆ, ಒಂಟೆ, ಕುದುರೆ, ಬೆತ್ತ, ಅಲಗು (ಕಬ್ಬಿಣದ ಸಲಾಕೆ)ಯನ್ನು ಕಾಣಬಹುದಾಗಿದೆ. ಭಕ್ತರು ಅಲಗನ್ನು ತೆಗೆದುಕೊಂಡು ದೇವಾಲಯದ ಮುಂದೆ ಕುಣಿಯುತ್ತಾ ಎದೆಗೆ ಹೊಡೆದುಕೊಳ್ಳುವುದರ ಮೂಲಕ ತಮ್ಮ ಭಕ್ತಿ ಪರಾಕಾಷ್ಠೆಯನ್ನು ಸಮರ್ಪಿಸುವರು. ಹ್ಯಾರಡಾ ಗ್ರಾಮದಲ್ಲಿ ಈ ದೈವವನ್ನು ಹೆಚ್ಚಾಗಿ ಕುರುಬರು ಆರಾಧಿಸುವುದುಂಟು. ಬೀರೇಶ್ವರ ಕುರುಬರ ಆರಾಧ್ಯ ದೈವ ಮತ್ತು ಕುಲದೈವವೂ ಹೌದು. ಬೀರಲಿಂಗೇಶ್ವರ ಮೂಲತಃ ಶುದ್ಧ ಸಸ್ಯಹಾರಿ ದೇವರು. ಆದರೆ ಆತನನ್ನು ಆರಾಧಿಸುವ ಆರಾಧಕರು ಪ್ರಾಣಿ ಬಲಿ ಕೊಡುವ ಸಂಪ್ರದಾಯವನ್ನು ಹುಟ್ಟುಹಾಕಿದರು. ಹ್ಯಾರಡಾ ಗ್ರಾಮದ ಕುರುಬ ಸಮುದಾಯದವರು ಬೀರಲಿಂಗೇಶ್ವರನನ್ನು ತಮ್ಮ ಕುಲದೈವವಾಗಿ ಸ್ವೀಕರಿಸಿ ಈತನ ಆರಾಧನೆ ಮಾಡುವುದನ್ನು ಕಾಣಬಹುದಾಗಿದೆ. ಬೀರಲಿಂಗೇಶ್ವರನ ಪರುವು ಮತ್ತು ಕಾರ್ತಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಬೀರಲಿಂಗೇಶ್ವರನ ರಕ್ಷಣೆಗೆಂದೇ ಈ ದೇವಾಲಯದಲ್ಲಿ ಏಳು ಹೆಡಯ ಸರ್ಪವಿದೆ ಎಂದು ಹ್ಯಾರಡಾ ಜನಪದರು ಹೇಳುವರು. ಯಾರಾದರೂ ದುಷ್ಟ ವ್ಯಕ್ತಿಗಳು ದೇವಾಲಯದ ಹತ್ತಿರ ಬಂದರೆ ಅವರಿಗೆ ಮಾತ್ರ ಕಾಣಿಸುತ್ತದೆ ಎಂದು ಗ್ರಾಮದ ಕೆಲ ಮುಖಂಡರು ಹೇಳುವುದುಂಟು. ಈ ಸರ್ಪವು ಬೀರಲಿಂಗೇಶ್ವರನನ್ನು ಸದಾ ರಕ್ಷಿಸುತ್ತದೆ ಎಂದು ಹ್ಯಾರಡಾ ಜನಪದರು ನಂಬಿದ್ದಾರೆ.

೬.೬ ಕಾಳಮ್ಮ

ಈ ದೇವಾಲಯವು ಅತ್ಯಂತ ಹಳೆಯದಾಗಿದ್ದು ಅಟವಾಳಿಗೆಯನ್ನು ಹೊಂದಿದೆ. ೧೧ ಅಡಿ ಅಗಲ ೬ ಅಡಿ ಉದ್ದ ಹೊಂದಿದೆ. ದೇವಿಯ ಗದ್ದುಗೆಯ ಮೇಲೆ ಮೂರ್ತಿಯು ೨ ಅಡಿ ಎತ್ತರ ೧.೫ ಅಡಿ ಅಗಲ ಹೊಂದಿದೆ. ದೇವಾಲಯದ ಮುಂದೆ ಕಟ್ಟೆಯನ್ನು ಹೊಂದಿದ್ದು, ೫ ಅಡಿ ಉದ್ದ ೧೬ ಅಡಿ ಅಗಲ ಹೊಂದಿದೆ. ಪ್ರತಿ ವರ್ಷವೂ ದೇವಿಯ ರಥವನ್ನು ಎಳೆಯುವುದನ್ನು ಕಾಣಬಹುದಾಗಿದೆ.

ಇತಿಹಾಸವನ್ನು ನಾವು ಗಮನಿಸಿದಾಗ ಹೆಚ್ಚಾಗಿ ಬುಡಕಟ್ಟು ಸಮುದಾಯದವರು ಈ ದೇವತೆಯನ್ನು ಆರಾಧಿಸುವುದುಂಟು. ಪಾಂಚಾಳ ಸಮುದಾಯದ ಉದ್ಯೋಗದ ದೈವ ಕಾಳಮ್ಮ ಎಂದು ನಂಬಲಾಗಿದೆ. ಕಾಳಮ್ಮ ಕುರಿತು W.T.E ಪ್ರಕಾರ "Parvati is more strikingly aboriginal than siva himself, She appears in marey different form. As kali she is a blood thirsty goddess wearing a necklace as skulls and dancing on the bodies of her fallen enemies. Another name commonly said to be incarnation of Kali or Durga and so the wives of siva" ಎಂದಿದ್ದಾರೆ.

ಹ್ಯಾರಡಾದಲ್ಲಿ ಹೆಚ್ಚಾಗಿ ಈ ದೇವತೆಯನ್ನು ಕಮ್ಮಾರ, ಬಡಿಗಿತನ ಮಾಡುವ ಸಮುದಾಯದವರು ಆರಾಧಿಸುವುದುಂಟು. ಪ್ರತಿ ಯುಗಾದಿಗೆ ರಥೋತ್ಸವವನ್ನು ನಡೆಸುವರು. ರಥವು ಸಂಪೂರ್ಣವಾಗಿ ದೇಶೀಯವಾಗಿ ನಿರ್ಮಿಸಿದ್ದು, ಕಟ್ಟಿಗೆಯಿಂದ ನಿರ್ಮಿಸಿದ ನಾಲ್ಕು ಗಾಲಿಗಳನ್ನು ಹೊಂದಿದ್ದು, ಎತ್ತರ ೨೦ ಅಡಿಯನ್ನು ಹೊಂದಿದೆ. ಅಗಲ ೬ ಅಡಿ, ಉದ್ದ ೬ ಅಡಿಯನ್ನು ಹೊಂದಿದೆ. ರಥವನ್ನು ಎಳೆಯಲು ಸುಮಾರು ೩೦ ಅಡಿ ಉದ್ದದ ಹಗ್ಗವನ್ನು ಹೊಂದಿದೆ. ಗ್ರಾಮದ ಎಲ್ಲಾ ಸಮುದಾಯದವರು ಈ ರಥೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವುದುಂಟು. ಜನಪದ ಮೇಳಗಳಾದ ಡೊಳ್ಳು ಕುಣಿತ, ಕೋಲಾಟ, ಭಜನೆ, ಹಲಗೆ ಮೇಳ ಮುಂತಾದ ಜನಪದ ಮೇಳಗಳು ಭಾಗವಹಿಸುವುದರ ಮೂಲಕ ತಮ್ಮ ಕಲೆಯನ್ನು ಅನಾವರಣಗೊಳಿಸುವರು. ಸುಮಾರು ೨೦೦ ಮೀಟರ್ ದೂರದವರೆಗೂ ತೇರನ್ನು ಎಳೆಯಲಾಗುವುದು. ಮಾರ್ಗದುದ್ದಕ್ಕೂ ತೇರಿನ ಕಳಸಕ್ಕೆ ಬಾಳೆಹಣ್ಣಿನಿಂದ ಹೊಡೆಯುವುದುಂಟು. ತಮ್ಮ ಇಷ್ಟಾರ್ಥಗಳು ಸಿದ್ದಿಸಲೆಂದು ಗ್ರಾಮದ ಎಲ್ಲಾ ಸಮುದಾಯದವರು ಭಾಗವಹಿಸುವರು.

ತೇರನ್ನು ಎಳೆದ ಮರುದಿನ ಓಕಳಿ ಕಾರ್ಯಕ್ರಮವು ನಡೆಯುವುದು. ಹಲಗೆ ವಾದ್ಯದೊಂದಿಗೆ ಸಂಗಮೇಶ್ವರನ ಕೆರೆಯಿಂದ ನೀರನ್ನು ತಂದು ಪರಸ್ಪರ ಬಣ್ಣವನ್ನು ಎರಚುವುದರ ಮೂಲಕ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದುಂಟು. ಈ ಸಂದರ್ಭದಲ್ಲಿ ಕಾಯಿಯನ್ನು ಹರಿಯುವ ಕಾರ್ಯಕ್ರಮ, ದೇವಿಯ ನಿಶಾನೆಯನ್ನು ಹಿಡಿಯುವ ಕಾರ್ಯಕ್ರಮ ಅತ್ಯಂತ ಮನೋಹರಕಾರಿಯಾಗಿರುತ್ತದೆ.

೬.೭ ಭರ್ಮಪ್ಪ

ಈ ದೇವಾಲಯವು ಮಲಿಯಮ್ಮ ದೇವಿಯ ದೇವಸ್ಥಾನದ ಅನತಿ ದೂರದಲ್ಲಿದೆ. ಈ ದೇವಾಲಯವನ್ನು ಇತ್ತೀಚಿಗೆ ನವೀಕರಿಸಲಾಗದೆ. ೧೧ ಅಡಿ ಉದ್ದ ೧೧ ಅಡಿ ಅಗಲವನ್ನು ಹೊಂದಿದ ದೇವಾಲಯವಾಗಿದೆ. ದೇವಾಲಯದ ಒಳಗಡೆ ಗದ್ದುಗೆಯನ್ನು ಹೊಂದಿದೆ. ಈ ಗದ್ದುಗೆಯು ೫ ಅಡಿ ಅಗಲ ೨ ಅಡಿ ಉದ್ದವನ್ನು ಹೊಂದಿದೆ. ಗದ್ದುಗೆಯ ಮೇಲೆ ೫ ಬ್ರಹ್ಮದೇವರುಗಳನ್ನು ಕಾಣಬಹುದಾಗಿದೆ. ಈ ದೇವರೆಲ್ಲರೂ ಅಣ್ಣ ತಮ್ಮಂದಿರು ಎಂಬುದು ಗ್ರಾಮಸ್ಥರ ನಂಬಿಕೆಯಾಗಿದೆ. ಗದ್ದುಗೆಯ ಇಕ್ಕೆಲುಗಳಲ್ಲಿ ಎರಡು ದೀಪದ ಉಯ್ಯಾಲೆಗಳನ್ನು ಕಾಣಬಹುದಾಗಿದೆ.

೬.೮ ಯಲ್ಲಮ್ಮ ದೇವಿ

ಇಲ್ಲಿ ೨೫ ಅಡಿ ಅಗಲ ೨೦ ಅಡಿ ಉದ್ದವಾದ ಕಟ್ಟೆಯನ್ನು ಕಟ್ಟಲಾಗಿದೆ. ಕಟ್ಟೆಯ ಮೇಲೆ ಸಣ್ಣದಾದ ದೇವಾಲಯವನ್ನು ಕಟ್ಟಲಾಗಿದ್ದು, ಅಲ್ಲಿ ಯಲ್ಲಮ್ಮನ ಮೂರ್ತಿಯನ್ನು ಪ್ರಾಣ ಪ್ರತಿಷ್ಠಾಪನೆ ಮಾಡಲಾಗಿದೆ. ಈ ಮೂರ್ತಿಯು ೧೫ ಅಡಿ ಎತ್ತರವನ್ನು ಹೊಂದಿದೆ. ಅಂದಿನ ಕಾಲದಲ್ಲಿ ದೂರದ ಸವದತ್ತಿಗೆ ಹೋಗಿ ಯಲ್ಲಮ್ಮನ ದರ್ಶನವನ್ನು ಪಡೆಯುವುದು ದುಸ್ತರವಾಗಿತ್ತು. ಆದ್ದರಿಂದ ಗ್ರಾಮದ ಜನಪದರು ಸವದತ್ತಿ ಯಲ್ಲಮ್ಮನ ಮೂರ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ ಎಂದು ಜನಪದರ ಹೇಳಿಕೆಯಾಗಿದೆ. ಸವದತ್ತಿ ಯಲ್ಲಮ್ಮನಿಗೆ ಯಾವ ರೀತಿ ಪೂಜಾ ವಿಧಿ-ವಿಧಾನಗಳು ನಡೆಯುತ್ತವೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ನಡೆಯುತ್ತಿವೆ.

"ಎಲ್ಲರ ದೇವತೆ ಯಲ್ಲಮ್ಮನನ್ನು ಸಮಾಜದ ಬೇರೆ ಬೇರೆ ವರ್ಗದ ಜನರು ಭಿನ್ನ ಭಿನ್ನ ಹೆಸರುಗಳಿಂದ ಪೂಜಿಸುತ್ತಿದ್ದಾರೆ. ಬ್ರಾಹ್ಮಣರು ರೇಣುಕಾ, ವೀರಶೈವರು ಸತ್ಯಕ್ಕ, ಜೈನರು ಪದ್ಮಾವತಿ, ನಿಮ್ನ ವರ್ಗದವರು ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿ ಎಂದು ಎಲ್ಲಮ್ಮನನ್ನು ಭಿನ್ನ ಭಿನ್ನ ಹೆಸರುಗಳಿಂದ ಕರೆದು ಪೂಜಿಸುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಈಕೆ ಮೂಲದಲ್ಲಿ ಸೀಮೆಯ ದೇವತೆ. ಮೊದಲು ಬುಡಕಟ್ಟು ಸಮುದಾಯಗಳು ಒಂದೊಂದು ಕ್ಷೇತ್ರ ಆರಿಸಿಕೊಂಡು ವಾಸಿಸುತ್ತಿರುವಾಗ ಒಂದು ಬುಡಕಟ್ಟು ಇನ್ನೊಂದು ಬುಡುಕಟ್ಟಿನ ಪ್ರದೇಶದಲ್ಲಿ ಆಕ್ರಮಿಸಬಾರದು, ಬೇಟೆಯಾಡಬಾರದು ಎಂದು ಸೀಮೆಯನ್ನು ಎರಡು ಪ್ರದೇಶಗಳ ಮಧ್ಯ ನಿಷ್ಕರ್ಷೆ ಮಾಡುತ್ತಿದ್ದರು. ಈ ಸೀಮೆಯೆಂದು ಹೇಳುವ ಜಾಗಕ್ಕೆ ಬುಡಕಟ್ಟುಗಳು ಒಕ್ಕಲುತನದ ಸಲುವಾಗಿ ಒಂದೆಡೆ ಸೇರಲು ಗ್ರಾಮವಾದಾಗ, ಗ್ರಾಮ ಗ್ರಾಮಗಳ ಸೀಮೆಗಳನ್ನು ಗುರುತಿಸಲು ಹಿಂದಿನ ಎಲ್ಲೆಯ ಕಲ್ಲನ್ನು ಊರಿದರು. ಮುಂದೆ ಬರುಬರುತ್ತಾ ಈ ಕಲ್ಲು ವಿಶೇಷತೆ ಪಡೆದು, ಆ ಕಲ್ಲಿನ ಇತಿಹಾಸ ಬೆಳೆದು ಆ ಸ್ಥಳದಲ್ಲಿ ಒಂದು ಗುಡಿ ಕಟ್ಟಿದರು. ಊರನ್ನು ಕಾಯಲು ಗ್ರಾಮದೇವತೆ ಇರುವಂತೆ ಅಡವಿಯನ್ನು ಕಾಯಲು ಸೀಮೆ ದೇವತೆ ಇರಬೇಕೆಂದು ಜನ ಎಲ್ಲೆಯ ದೇವತೆಯೇ ಯಲ್ಲಮ್ಮನೆಂದು ಆ ಗುಡಿಯನ್ನು ಸ್ಥಾಪಿಸಿದರು". (ಡಾ. ಮಂಜುನಾಥ ಬೇವಿನಕಟ್ಟಿ : ೨೦೦೯)

ಹೀಗೆ ಯಲ್ಲಮ್ಮ ದೇವತೆಯು ನೆಲೆಯೂರಿ ಎಲ್ಲಾ ಸಮುದಾಯದವರೂ ಪೂಜಿಸುವ ದೇವತೆಯಾಗಿದ್ದಾಳೆ. ಹ್ಯಾರಡಾದಲ್ಲಿರುವ ಯಲ್ಲಮ್ಮನಿಗೆ ಬೆತ್ತಲೆ ಸೇವೆ, ಪರುವು, ಕಾರ್ತಿಕೋತ್ಸವ ಮುಂತಾದ ಧಾರ್ಮಿಕ ಕಾರ್ಯಗಳನ್ನು ಮಾಡುವುದನ್ನು ಕಾಣಬಹುದಾಗಿದೆ.

೬.೯ ಬನ್ನಿ ಮಹಾಂಕಾಳಿ

ಗ್ರಾಮದಿಂದ ಅನತಿ ದೂರದಲ್ಲಿ ಹರಪನಹಳ್ಳಿ ಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತದೆ. ಇಲ್ಲಿ ಬನ್ನಿ ಮರವನ್ನು ಹೊಂದಿದ್ದು, ಮೂಲ ಬನ್ನಿ ಮರಕ್ಕೆ ಕಟ್ಟೆಯನ್ನು ಕಟ್ಟಲಾಗಿದ್ದು, ೩.೫ ಉದ್ದ ಅಗಲವನ್ನು ಹೊಂದಿದ್ದು, ಬನ್ನಿ ಮರಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಇತ್ತೀಚಿಗೆ

ನೂತನ ದೇವಾಲಯ ನಿರ್ಮಾಣ ಆಗಿದ್ದು, ದೇವಾಲಯವು ೧೧ ಅಡಿ ಉದ್ದ ಅಗಲವನ್ನು ಹೊಂದಿದೆ. ದೇವಾಲಯದ ಒಳಗಡೆ ಗದ್ದುಗೆಯನ್ನು ಹೊಂದಿದ್ದು, ಗದ್ದುಗೆಯು ೨.೫ ಅಡಿ ಅಗಲ ೩ ಅಡಿ ಉದ್ದವನ್ನು ಹೊಂದಿದೆ. ಗದ್ದುಗೆಯ ಮೇಲೆ ಮೂರ್ತಿ ಇದೆ. ಈ ಮೂರ್ತಿಯು ಕಲಾ ನೈಪುಣ್ಯತೆಯಿಂದ ಕೂಡಿದ್ದು, ಬಳಪದ ಕಲ್ಲು ಅಥವಾ ಕರಿಕಲ್ಲಿನಿಂದ ಕೆತ್ತನೆಯನ್ನು ಮಾಡಲಾಗಿದೆ. ದೇವಾಲಯದ ಮುಂದೆ ಪಾದುಕೆಯನ್ನು ಹೊಂದಿದೆ.

ಈ ದೇವತೆಯನ್ನು ಹೆಚ್ಚಾಗಿ ವಿಶ್ವಕರ್ಮ ಸಮುದಾಯದವರು ಆರಾಧಿಸುವುದುಂಟು. ಮಹಾನವಮಿ ದಿನದಂದು ಈ ದೇವತೆಗೆ ವಿಶೇಷವಾದ ಪೂಜಾ ಕೈಂಕರ್ಯವನ್ನು ನೆರವೇರಿಸುವುದುಂಟು. ಮಹಾನವಮಿ ಇದ್ದಾಗ ಗ್ರಾಮದ ಎಲ್ಲಾ ಸಮುದಾಯದ ಮಹಿಳೆಯರು ಮುಂಜಾನೆ ಒಪ್ಪತ್ತು ಇದ್ದು, ವಿಶೇಷವಾದ ಪೂಜೆಯನ್ನು ಮಾಡುತ್ತಾರೆ. ದೇವಿಗೆ ಬೇಕಾದ ನೈವೇದ್ಯವನ್ನು ಸಮರ್ಪಿಸುವುದರ ಮೂಲಕ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಾರೆ. ಕಾರ್ತಿಕೋತ್ಸವ ಹಾಗೂ ಪರುವಿನ ಸಮಯದಲ್ಲಿ ಸಾಮೂಹಿಕ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಿರುತ್ತಾರೆ. ಗ್ರಾಮದ ಎಲ್ಲಾ ಸಮುದಾಯದವರು ಇದರಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವರು.

೬.೧೧ ಅಲ್ಲಾಸ್ವಾಮಿ ಜಂಡಾ ಕಟ್ಟೆ

ಇದು ಮುಸ್ಲಿಂ ಸಮುದಾಯದ ಜಂಡಾ ಕಟ್ಟೆಯಾಗಿದೆ. ಇಲ್ಲಿ ಯಾವುದೇ ರೀತಿಯ ದೇವಾಲಯವು ಇರುವುದಿಲ್ಲ. ಅದರ ಬದಲಾಗಿ ಬೃಹದಾಕಾರದ ಬೇವಿನಮರವನ್ನು ಹೊಂದಿದ್ದು. ಬೇವಿನಮರದ ಸುತ್ತಲೂ ಕಟ್ಟೆಯನ್ನು ಕಟ್ಟಲಾಗಿದೆ. ಕಟ್ಟೆಯ ಮೇಲೆ ಅಲ್ಲಾಸ್ವಾಮಿಯ ಗದ್ದುಗೆಯನ್ನು ಕಾಣಬಹುದಾಗಿದೆ. ಈ ಗದ್ದುಗೆಯು ೫ ಅಡಿ ಉದ್ದ ೫ ಅಡಿ ಅಗಲದ ವ್ಯಾಪ್ತಿಯನ್ನು ಹೊಂದಿದೆ.

'ಮೊಹರಂ ದಿನ ಇಮಾಮ್ ಹುಸೇನರು ಹುತಾತ್ಮರಾದ ದಿನ. ಅಂದು ಗ್ರಾಮದ ಎಲ್ಲಾ ಗ್ರಾಮಸ್ಥರು ಕೂಡಿಕೊಂಡು ಓದಿಕೆ ಮಾಡಿಸುವರು. ನಂತರದಲ್ಲಿ ಈ ಜಂಡಾ ಕಟ್ಟೆಯ ಮೇಲೆ ಡೋಲಿಯನ್ನು ಕೂಡಿಸುವರು. ಇಲ್ಲಿ ಗ್ರಾಮಸ್ಥರು ವಿವಿಧ ರೀತಿಯ ರಿವಾಯತ್ ಪದಗಳನ್ನು ಹೇಳುವುದರ ಮೂಲಕ ಪೂಜಾ ಕೈಂಕರ್ಯಗಳನ್ನು ನೆರವೇರಿಸುವರು. ನಂತರದಲ್ಲಿ ಈ ಜಂಡಾ ಕಟ್ಟೆಯ ಮೇಲೆ ವಿವಿಧ ರೀತಿಯ ಕಲಾಮೇಳಗಳಾದ ಹಲಗಿನಾದ, ಕೋಲಾಟ, ಡೊಳ್ಳು, ಭಜನೆ ಇತ್ಯಾದಿಯಾಗಿ ತಮ್ಮ ಕಲೆಯನ್ನು ಪ್ರದರ್ಶಿಸುವರು. ಈ ಜಂಡಾ ಕಟ್ಟೆಯ ಬೇವಿನಮರಕ್ಕೆ ವಿವಿಧ ರೀತಿಯ ನಿಶಾನೆಗಳನ್ನು ಕಟ್ಟುವುದನ್ನು ಈಗಲೂ ಕಾಣುತ್ತೇವೆ. ಈ ಸ್ಥಳವು ಹಿಂದೂ-ಮುಸ್ಲಿಂ ಐಕ್ಯತೆಯ ದ್ಯೋತಕವಾಗಿದೆ. ಈ ಕಟ್ಟೆಯು ಗ್ರಾಮದ ಮಧ್ಯಭಾಗದಲ್ಲಿದ್ದು ಈಗಲೂ ಪೂಜಾ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

ಗ್ರಾಮದಲ್ಲಿ ಮಕ್ಕಳ ಮೈಮೇಲೆ ಗುಳ್ಳೆಗಳು ಎದ್ದಾಗ, ಬಹಳ ದಿನಗಳವರೆಗೆ ಹುಷಾರಿಲ್ಲದಿದ್ದಾಗ ಮುಸ್ಲಿಂ ಮೌಲ್ವಿಯು ಈ ಕಟ್ಟೆಯ ಮೇಲೆ ಕುಳಿತು ತಾಯತವನ್ನು ಕೊಡುತ್ತಿದ್ದರು. ಈ ತಾಯತದಿಂದ

ಮಕ್ಕಳ ಖಾಯಿಲೆಗಳು ವಾಸಿಯಾಗುವವು ಎಂಬ ನಂಬಿಕೆ ಇದೆ. ಎತ್ತು, ಎಮ್ಮೆಗಳಿಗೆ ಹುಷಾರಿಲ್ಲದಾಗ ಕಾಲುಬಾಯಿ ರೋಗಗಳು ಬಂದಾಗ ಕಟ್ಟೆಯ ಮೇಲೆ ಕುಳಿತು ಮಂತ್ರಿಸಿದ ಹಸಲಿ, ಲಾಡಿ ಗಜರಾವನ್ನು ಪ್ರಾಣಿಗಳ ಕೋಡಿಗೆ ಅಥವಾ ಕೊರಳಿಗೆ ಕಟ್ಟುವುದರ ಮೂಲಕ ಪ್ರಾಣಿಗಳಿಗೆ ಬಂದ ಖಾಯಿಲೆಗಳು ವಾಸಿಯಾಗುವವು ಎಂಬ ಪ್ರತೀತಿ ಇದೆ. ಎಷ್ಟೋ ಚಿಕ್ಕ ಮಕ್ಕಳು ಬಹಳಷ್ಟು ಅಳುವುದರ ಮೂಲಕ ಕಿರಿಕಿರಿಯನ್ನುಂಟು ಮಾಡಿದಾಗ, ಕೊರಳಲ್ಲಿ ತಾಯತ ಕಟ್ಟಿದ ಮೇಲೆ ಸರಿಹೋಗುತ್ತದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಆದರೆ ಗ್ರಾಮವು ಹೆಚ್ಚು-ಹೆಚ್ಚು ಸುಶಿಕ್ಷಿತರಾಗುತ್ತಿದ್ದಂತೆಯೇ ಇಂತಹ ಸಂಪ್ರದಾಯಗಳು ಇತ್ತೀಚಿಗೆ ಕ್ರಮೇಣ ಕಡಿಮೆಯಾಗುತ್ತಿವೆ. ಈಗಲೂ ಕೂಡ ಈ ಜಂಡಾ ಕಟ್ಟೆಯು ಸುಸ್ಥಿತಿಯಿಂದ ಇದೆ.

೬.೧೧ ಅಲ್ಲಾವುದ್ದೀನ್ ಪವಾಡ ಪುರುಷನ ಗದ್ದುಗೆ

ಈ ಗದ್ದುಗೆಯು ಉತ್ತರ ಕರ್ನಾಟಕದಿಂದ ವಲಸೆ ಬಂದ ಮುಸ್ಲಿಂ ಮೌಲ್ವಿಯ ಗೋರಿಯ ಮೇಲೆ ಕಟ್ಟಿದ ಗದ್ದುಗೆಯಾಗಿದೆ. ಈತನು ಹ್ಯಾರಡಾಕ್ಕೆ ಬಂದು ನೆಲೆನಿಂತು ಹಲವಾರು ಪವಾಡಗಳನ್ನು ಮಾಡಿದನು ಎಂದು ಗ್ರಾಮಸ್ಥರು ಹೇಳುವರು. ಈತನ ಪವಾಡಗಳನ್ನು ನೋಡಿದ ಈತನ ನಿಕಟವರ್ತಿಗಳು ಈಗಲೂ ಇದ್ದಾರೆ. ಇವರ ಹೇಳಿಕೆಯ ಪ್ರಕಾರ ಹಲವಾರು ಪವಾಡಗಳನ್ನು ಮಾಡುವುರ ಮೂಲಕ ಗ್ರಾಮದಲ್ಲಿ ಚಿರಪರಿಚಿತನಾಗಿದ್ದನು. ಅಂದಿನ ಕಾಲದಲ್ಲಿ ಕಾಲೇಜು ಉಪನ್ಯಾಸಕನಾಗಿದ್ದರೂ ಜೀವನದಲ್ಲಿ ಜಿಗುಪ್ಸೆ ಹೊಂದಿ ಲೋಕ ಸಂಚಾರಿಯಾಗಿ ಬಂದು ಹ್ಯಾರಡಾ ಗ್ರಾಮದಲ್ಲಿ ನೆಲೆಯೂರಿದ್ದನು. ಮೂಲತಃ ಇವರು ಬಿಜಾಪುರ ಜಿಲ್ಲೆಯವರು. ಹ್ಯಾರಡಾ ಅಲ್ಲದೇ ಸುತ್ತ-ಮುತ್ತಲಿನಲ್ಲಿ ಅತ್ಯಂತ ಚಿರಪರಿಚಿತರು. ಹೆಚ್ಚಾಗಿ ಹ್ಯಾರಡಾ ಗ್ರಾಮದಲ್ಲಿ ವಾಸವಿರುತ್ತಿದ್ದರು. ಇವರು ವಿಭೂತಿಯಿಂದಲೇ ಹೆಚ್ಚು ಪವಾಡಗಳನ್ನು ಮಾಡುತ್ತಿದ್ದರು ಎಂದು ಗ್ರಾಮಸ್ಥರು ಹೇಳುತ್ತಾರೆ. ಕಳಸಾಪುರದ ಮಾನಪ್ಪಜ್ಜ ಎಂಬುವರು ಅಲ್ಲಾವುದ್ದೀನ್ ಅವರ ಹಿಂಬಾಲಕರು. ಇವರು ಹೇಳುವ ಪ್ರಕಾರ "ಒಮ್ಮೆ ಮಾನಪ್ಪಜ್ಜ ಅವರಿಗೆ ನಾಯಿ ಕಡಿದು ಬಹಳಷ್ಟು ಬಾರಿ ವೈದ್ಯರ ಬಳಿಗೆ ತೋರಿಸಿದ್ದರೂ ಆರೋಗ್ಯ ಹುಷಾರಾಗಿರಲಿಲ್ಲವಂತೆ, ಅಮವಾಸ್ಯೆ, ಹುಣ್ಣಿಮೆ, ಮಳೆ, ಗುಡುಗು ಬಂದಾಗ ತಲೆ ದೊಡ್ಡದಾದಂತೆ ಭಾಸವಾಗುತಿತ್ತಂತೆ. ಆಗ ಅಲ್ಲಾವುದ್ದೀನ್ ಅವರ ಹತ್ತಿರ ಬಂದು ಇವರ ಸಮಸ್ಯೆ ಹೇಳಿಕೊಂಡಾಗ ವಿಭೂತಿಯನ್ನು ಕಾಲಿಗೆ ಹಚ್ಚಿ ಒಂದು ಲೋಟ ನೀರಿನಲ್ಲಿ ವಿಭೂತಿಯ ನೀರನ್ನು ಕುಡಿಸಿದರಂತೆ ಅಲ್ಲಿಂದ ಇಲ್ಲಿಯವರೆಗೆ ನನಗೆ ತಲೆಯ ಸಮಸ್ಯೆಯೇ ಬಂದಿಲ್ಲವಂತೆ. ಯಾವಾಗ ಈ ಸಮಸ್ಯೆ ಬಗೆಹರಿಯಿತೋ ಅಂದಿನಿಂದ ಅಲ್ಲಾವುದ್ದೀನರ ಹಿಂಬಾಲಕರಾಗಿ ನಡೆದುಕೊಂಡರಂತೆ" ಅದೇ ರೀತಿಯಾಗಿ ಗ್ರಾಮದ ಇನ್ನೊಬ್ಬ ವ್ಯಕ್ತಿಯಾದ ಬೆಂಡಿಗೇರಿ ದುರುಗಪ್ಪ ಅವರ ಪ್ರಕಾರ "ನಾನು ಚಿಕ್ಕವಯಸ್ಕನಾಗಿದ್ದೆ. ಆಗ ತಾನೇ ಹೊಲಕ್ಕೆ ಹೋಗಿ ಬಂದಿದ್ದೆ. ಅಲ್ಲಾವುದ್ದೀನ್ ರ ಮನೆಯ ಮುಂದೆ ಹೋಗುತ್ತಿದ್ದಾಗ ಅವರು ಕರೆದು ನನಗೆ ಒಂದು ರೂಪಾಯಿ ಕೊಟ್ಟು ಚಹಾ

ಅಂಗಡಿಯಲ್ಲಿ ಮಿರ್ಚಿಗಳನ್ನು ತೆಗೆದುಕೊಂಡು ಬಾ ಅಂದರು. ಅದರಂತೆ ನಾನು ಮಿರ್ಚಿಗಳನ್ನು ತಂದು ಕೊಟ್ಟೆ. ಆಮೇಲೆ ಅವರು ನೀನು ಮಿರ್ಚಿಯನ್ನು ತಿಂದೆಯೋ ಎಂದು ಪ್ರಶ್ನಿಸಿದರು. ಆಗ ನಾನು ಇಲ್ಲ ಅಜ್ಜೋರೆ ನನ್ನ ಹತ್ತಿರ ದುಡ್ಡಿಲ್ಲ ಅಂದೆ, ಆಗ ಅವರು ನಿನ್ನ ಜೇಬಲ್ಲಿ ಕೈ ಇಡು ಒಂದು ರೂಪಾಯಿ ಇದೆ ಅಂದರು. ಅದರಂತೆ ನಾನು ನೋಡಿದೆ ಒಂದು ರೂಪಾಯಿ ಇತ್ತು. ನನ್ನ ಹತ್ತಿರ ದುಡ್ಡೆ ಇರಲಿಲ್ಲ. ಅವರ ಪವಾಡದಿಂದ ಜೇಬಲ್ಲಿ ದುಡ್ಡು ಬಂದಿತ್ತು ಎಂದು ಹೇಳುತ್ತಾರೆ."

ಅಲ್ಲಾವುದ್ದೀನ್ ಅವರು ಅಂದಿನ ಕಾಲದಲ್ಲಿ ಸುಶಿಕ್ಷಿತರಾಗಿದ್ದರು. ಇವರು ಯಾವುದಾದರೂ ಒಂದು ವಿಷಯದ ಬಗ್ಗೆ ಮಾತನಾಡುತ್ತಿದ್ದರೆ ಜನರ ಗುಂಪು ಸೇರುತ್ತಿತ್ತು. ಅವರು ಉಪದೇಶಿಸುವ ಮಾತನ್ನು ಜನರು ಕೇಳುತ್ತಿದ್ದರು. ಇವರು ಅಷ್ಟೇ ಕೋಪಿಷ್ಠರೂ ಕೂಡಾ. ಇವರ ಶಾಪದಿಂದ ಎಷ್ಟೋ ಕುಟುಂಬಗಳು ಇಂದಿಗೂ ಚೇತರಿಸಿಕೊಂಡಿಲ್ಲ ಎಂದು ಕ್ಷೇತ್ರ ಕಾರ್ಯಕ್ಕೆ ತೆರಳಿದಾಗ ಗ್ರಾಮಸ್ಥರು ಹೇಳುವರು. ಇವರು ಕಾಲವಾದ ನಂತರ ಇವರ ಪರಂಪರೆಯನ್ನು ಕಳಸಾಪುರದ ಮಾನಪ್ಪಜ್ಜ ಅವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಮಾನಪ್ಪಜ್ಜ ಅವರು ಅಲ್ಲಾವುದ್ದೀನ್ ಅವರ ಶಕ್ತಿಯಿಂದ ಹಲವಾರು ಪವಾಡಗಳನ್ನು ಇಂದಿಗೂ ನಡೆಸುತ್ತಿದ್ದಾರೆ. ಗ್ರಾಮದಲ್ಲಿ ಯಾರಿಗಾದರೂ ದೆವ್ವ ಬಡಿದುಕೊಂಡರೆ ಕೂಡಲೇ ಮಾನಪ್ಪಜ್ಜನ ಹತ್ತಿರ ಕರೆದುಕೊಂಡು ಹೋಗುವರು. ಇವರು ವಿಭೂತಿಯನ್ನು ನೀರಿನಲ್ಲಿ ಹಾಕಿ ಅದನ್ನು ಕುಡಿಸುವುದರ ಮೂಲಕ ತನ್ನ ಬೆತ್ತವನ್ನು ತೋರಿಸುವುದರ ಮೂಲಕ ದೆವ್ವಗಳನ್ನು ಓಡಿಸುವ ಸಂಪ್ರದಾಯ ಈಗಲೂ ಇದೆ. ಮಾನಪ್ಪಜ್ಜನು ಅಂಗಿಯನ್ನು ಧರಿಸದೇ ಕೇವಲ ಲುಂಗಿಯನ್ನು ಹಾಕಿಕೊಂಡು ಸದಾ ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ಅಲ್ಲಾವುದ್ದೀನ್ ಅವರ ಅನುಗ್ರಹದಿಂದ ಹಲವಾರು ಪವಾಡಗಳನ್ನು ಮಾಡುವುದನ್ನು ಕಾಣಬಹುದು. ಸ್ಥಳೀಯರಲ್ಲದೇ ಬೇರೆ ಬೇರೆ ಗ್ರಾಮಗಳಿಂದ ಮಾನಪ್ಪಜ್ಜನ ಹತ್ತಿರ ಬಂದು ತಮ್ಮ ಸಮಸ್ಯೆಯನ್ನು ಹೇಳಿಕೊಂಡು ಪರಿಹರಿಸಿಕೊಳ್ಳುತ್ತಿದ್ದಾರೆ.

ಅಂದಿನ ಕಾಲದಲ್ಲಿ ಗ್ರಾಮದ ಜನರಿಗೆ ಕೆಲವು ವೈಚಾರಿಕ ಮನೋಭಾವನೆಗಳನ್ನು ಬೆಳೆಸುವಲ್ಲಿ ಅಲ್ಲಾವುದ್ದೀನ್ ಅವರು ಪ್ರಯತ್ನಿಸಿದರು ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಸದಾ ಬಡವರ ಮನೆಯಲ್ಲಿ ಮಾತ್ರ ಆಹಾರ ಸೇವಿಸುತ್ತಿದ್ದ ಇವರು ಅಂದಿನ ಕಾಲದ ಮೇಲ್ವರ್ಗ ಹಾಗೂ ಶ್ರೀಮಂತರ ಧಮನಕಾರಿ ನೀತಿಗಳ ವಿರುದ್ಧ ಶೋಷಿತರ ಪರವಾದ ಧ್ವನಿಯನ್ನು ಎತ್ತುತ್ತಿದ್ದರು ಎಂದು ತೋರುತ್ತದೆ. ಇವರು ಜೀವಿಸಿದ್ದ ಕಾಲಾವಧಿಯಲ್ಲಿ ಗ್ರಾಮದ ಜನರು ಅಷ್ಟೇನು ಸುಶಿಕ್ಷಿತರಾಗಿರಲಿಲ್ಲ. ಕೆಳ ವರ್ಗದ ಜನರಿಗಂತೂ ಶಿಕ್ಷಣ ಎಂಬುದು ಗಗನ ಕುಸುಮವಾಗಿತ್ತು, ಆಗ ಸುಶಿಕ್ಷಿತರಾಗಿದ್ದ ಅಲ್ಲಾವುದ್ದೀನ್‌ರು ಗ್ರಾಮದಲ್ಲಿ ಹಲವಾರು ವೈಚಾರಿಕಾ ಕ್ರಾಂತಿಯನ್ನು ಮೊಳಗಿಸಿದರು. ಶೋಷಿತ ವರ್ಗದ ಹಕ್ಕುಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು ಎಂದು ಹೇಳಬಹುದು. ಅಂದಿನ ದಿನಮಾನಗಳಲ್ಲಿ ಗ್ರಾಮವು ಮೇಲ್ವರ್ಗದ ಕಪಿಮುಷ್ಠಿಯಲ್ಲಿತ್ತು. ಹಲವು ಕ್ರಾಂತಿಕಾರಿ ಧ್ವನಿಗಳ ಅವಶ್ಯಕತೆ ಇತ್ತು. ಈ

ಧ್ವನಿ ಅಲ್ಲಾವುದ್ದೀನ್‌ರ ರೂಪದಲ್ಲಿ ತಾಳಿತು. ಈತನ ಮೇಲೆ ಹಲವಾರು ಆರೋಪಗಳನ್ನು ಹೊರಿಸಲಾಗಿತ್ತು. ಆದರೆ ಗ್ರಾಮದ ಶೋಷಿತ ವರ್ಗದ ಬೆಂಬಲವಿರುವ ಕಾರಣ ಅಪಾರ ಭಕ್ತರನ್ನು ಹೊಂದಿದ್ದರು. ಹೀಗೆ ಹ್ಯಾರಡಾ ಗ್ರಾಮದಲ್ಲಿ ಹಲವಾರು ವರ್ಷಗಳ ಕಾಲ ಜೀವಿಸಿದ್ದ ಇವರು ತಮ್ಮ ಹಿಂಬಾಲಕರ ಒಂದು ಪಡೆಯನ್ನೇ ಸೃಷ್ಟಿಸಿದ್ದಾರೆ ಎಂದು ಹೇಳಬಹುದು.

೬.೧೨ ಕೋಟೆಯ ದುರುಗಮ್ಮ

ಈ ದೇವಾಲಯವು ಹಳೆಯದಾದ ದೇವಾಲಯವನ್ನು ಹೊಂದಿದ್ದು ಅಟವಾಳಿಗೆಯನ್ನು ಹೊಂದಿದೆ. ದೇವಾಲಯವು ೧೧ ಅಡಿ ಉದ್ದ ೬ ಅಡಿ ಅಗಲವನ್ನು ಹೊಂದಿದೆ. ದೇವಿಯ ಮೂರ್ತಿಯು ಕಟ್ಟೆಗೆಯಿಂದ ಕೂಡಿದ ಮೂರ್ತಿಯು ೪ ಅಡಿ ಎತ್ತರವನ್ನು ಹೊಂದಿದ್ದು, ೨ ಅಡಿ ಅಗಲವನ್ನು ಹೊಂದಿದೆ. ದೇವಾಲಯದ ಇಕ್ಕೆಲುಗಳಲ್ಲಿ ಎರಡು ಬಸವಣ್ಣನ ಮೂರ್ತಿಗಳನ್ನು ಹೊಂದಿದೆ. ದೇವಾಲಯದ ಹೊರಗಡೆ ೨ ದೀಪದ ಗೂಣನ್ನು ಹೊಂದಿದೆ. ದೀಪದ ಪಣತೆಯನ್ನು ಹೊಂದಿದೆ. ದೇವಾಲಯದ ಮುಂದೆ ದುರುಗಮ್ಮನ ಪಾದಗಟ್ಟೆಯನ್ನು ಕಾಣಬಹುದು.

ದುರುಗಮ್ಮ ದೇವತೆಯು ಎಲ್ಲಾ ಗ್ರಾಮಗಳಲ್ಲಿ ಇರುವುದಿಲ್ಲ. ಯಾವ ಗ್ರಾಮದಲ್ಲಿ ಕೋಟೆ ಇರುತ್ತದೆಯೋ ಅಲ್ಲಿ ಈ ದೈವವನ್ನು ಪ್ರತಿಷ್ಠಾಪಿಸಿರುತ್ತಾರೆ. ಹ್ಯಾರಡಾ ಗ್ರಾಮದಲ್ಲಿಯೂ ಸಹ ಕೋಟೆಯನ್ನು ನಾವು ಕಾಣಬಹುದಾಗಿದೆ. ನಾವು ಇತಿಹಾಸವನ್ನು ಸಿಂಹಾವಲೋಕನ ಮಾಡಿದಾಗ ದುರುಗಮ್ಮ ದೈವವು ಹೆಚ್ಚಾಗಿ ಗುಡ್ಡಗಾಡಿನ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರ ಆರಾಧ್ಯ ದೈವವಾಗಿದೆ. ಇತಿಹಾಸದಲ್ಲಿ ಈ ದೈವವು ನಿರ್ವಹಿಸಿದ ಕಾರ್ಯಗಳಿಂದ ಪ್ರೇರೇಪಿತರಾಗಿ ರಾಜ ಪುರೋಹಿತರ ಸಲಹೆಯ ಮೇರೆಗೆ ರಾಜ-ಮಹಾರಾಜರುಗಳು ತಮ್ಮ ತಮ್ಮ ಕೋಟೆಗಳಲ್ಲಿ ಈ ದೈವವನ್ನು ಪ್ರತಿಷ್ಠಾಪಿಸಿದರು. ಇವರ ದೃಷ್ಟಿಯಲ್ಲಿ ದುರುಗಮ್ಮ ದೈವವೂ ಕೋಟೆಯ ದೇವತೆ, ಕೋಟೆಯ ರಕ್ಷಣೆಯನ್ನು ಮಾಡುವುದು ಈಕೆಯ ಹೊಣೆ ಎಂದು ಭಾವಿಸಿರುತ್ತಿದ್ದರು. ಕೋಟೆಗಳಿರುವ ಬಹುತೇಕ ಗ್ರಾಮಗಳಲ್ಲಿ ದುರುಗಮ್ಮ ದೈವವು ಇರುತ್ತದೆ. ಒಂದು ವೇಳೆ ಕೋಟೆಯು ಹಾಳಾಗಿ ಹೋಗಿದ್ದರೆ, ಇಂದಿಗೂ ಈ ದೈವದ ಪೂಜೆ ನಡೆಯುತ್ತದೆ. ಹ್ಯಾರಡಾ ಗ್ರಾಮದಲ್ಲಿಯೂ ಸಹ ಇಂದಿಗೂ ದುರುಗಮ್ಮನ ಪೂಜೆ ನಡೆಯುತ್ತಿದೆ. ದಸರಾ ದಿನದಂದು ಈಕೆಗೆ ಹ್ಯಾರಡಾ ಗ್ರಾಮದಲ್ಲಿ ವಿಶೇಷ ಪೂಜೆಯನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ.

೬.೧೩ ಚೌಡಮ್ಮ ದೇವಿ

ಈ ದೇವಾಲಯವು ಮಲಿಯಮ್ಮ ದೇವಿಯ ದೇವಾಲಯದ ಅನತಿ ದೂರದಲ್ಲಿದೆ. ದೇವಾಲಯವು ೧೧ ಅಡಿ ಉದ್ದ, ಅಗಲಗಳನ್ನು ಹೊಂದಿದೆ. ದೇವಾಲಯದಲ್ಲಿ ಗದ್ದುಗೆ ಇದೆ. ಈ ಗದ್ದುಗೆಯು ೩ ಅಡಿ ಉದ್ದ, ಅಗಲ ಹೊಂದಿದೆ. ಗದ್ದುಗೆಯ ಮೇಲೆ ೨ ಅಡಿ ಎತ್ತರದ ಮೂರ್ತಿಯನ್ನು ಕಾಣಬಹುದಾಗಿದೆ. ಮೂರ್ತಿಯು ಕರಿಕಲ್ಲಿನಿಂದ ನಿರ್ಮಾಣ ಮಾಡಿದ್ದು ಕಲಾ ನೈಪುಣ್ಯದಿಂದ ಕೂಡಿದೆ. ಮೂರ್ತಿಯ ಇಕ್ಕೆಲುಗಳಲ್ಲಿ ಎರಡು ದೀಪದ ಉಯ್ಯಾಲೆಯನ್ನು ಕಾಣಬಹುದಾಗಿದೆ.

ಈಕೆಯ ಮೂಲದ ಬಗ್ಗೆ ಜನಪದರ ಐತಿಹ್ಯ ಪ್ರಕಾರ " ಏಳು ಕೊಳ್ಳದಲ್ಲಿ ಮುಳುಗಿದ್ದ ಎಲ್ಲಮ್ಮ ಮೇಲೇಳಲಿಲ್ಲವಂತೆ, ಯಾವುದೇ ವಾದ್ಯ ತೆಗೆದುಕೊಂಡು ಬಾರಿಸಿದಾಗಲೂ ಮೇಲೆ ಬರಲಿಲ್ಲವಂತೆ, ಚೌಡಿಕೆ ವಾದ್ಯ ತೆಗೆದುಕೊಂಡು ಬಾರಿಸಿದಾಗ ಈ ವಾದ್ಯದ ನಾದಕ್ಕೆ ಸಂಪ್ರೀತಳಾಗಿ ಎಲ್ಲಮ್ಮ ಮೇಲೆದ್ದು ಬಂದಳಂತೆ, ಅದಕ್ಕಾಗಿ ಎಲ್ಲಮ್ಮನಿಗೆ ಚೌಡಿಕೆಯಿಂದ ಚೌಡಮ್ಮನೆಂದು ಇನ್ನೊಂದು ಹೆಸರು ಬಂತೆಂದು ಹೇಳುತ್ತಾರೆ. ಹಾವಿನ ಪೂಜೆಯಿಂದ ನಾಗದೇವತ ಹುಟ್ಟಿಕೊಂಡರೆ, ಚೋಳಿನ ಪೂಜೆಯಿಂದ ಚೋಳಮ್ಮ> ಚೌಳಮ್ಮ> ಚೌಡಮ್ಮ ಹುಟ್ಟಿಕೊಂಡಳು." (ಡಾ. ಮಂಜುನಾಥ ಬೇವಿನಕಟ್ಟಿ : ೨೦೦೯)

೬.೧೪ ಅಡವಿ ಊರಮ್ಮ ದೇವಿ

ಈ ಗದ್ದುಗೆಯು ಊರಿನಿಂದ ೫ ಕಿ.ಮಿ ದೂರದಲ್ಲಿದೆ. ಇದು ದೇವಾಲಯವನ್ನು ಹೊಂದಿರದೇ ೨೫ ಅಡಿ ಉದ್ದ, ೩೫ ಅಡಿ ಅಗಲವಾದ ಕಟ್ಟೆಯನ್ನು ಹೊಂದಿದೆ. ಕಟ್ಟೆಯ ಮೇಲೆ ಗದ್ದುಗೆಯನ್ನು ಹೊಂದಿದ್ದು, ಗದ್ದುಗೆಯ ಮೇಲೆ ಮೂರ್ತಿಯನ್ನು ಕಾಣಬಹುದು. ಈ ಮೂರ್ತಿಯು ೨ ಅಡಿ ಎತ್ತರ ಒಂದು ಅಡಿ ಅಗಲವನ್ನು ಹೊಂದಿದೆ. ಕಟ್ಟೆಯ ಮುಂದೆ ದೇವಿಯ ಪಾದುಕೆಯನ್ನು ಕಾಣಬಹುದು.

ಸಾಮಾನ್ಯವಾಗಿ ಬಹುತೇಕ ಗ್ರಾಮಗಳಲ್ಲಿ ಹರಿಜನ ಸಮುದಾಯದವರು ಈ ದೈವವನ್ನು ಆರಾಧಿಸುವುದುಂಟು. ಸ್ತ್ರೀ ದೈವಗಳಲ್ಲಿಯೇ ಅತ್ಯಂತ ಶಕ್ತಿಶಾಲಿ. ಹಲವಾರು ಬಲಿಯನ್ನು ಕೇಳುವ ದೈವವಾಗಿದೆ. ಕ್ಷೇತ್ರ ಕಾರ್ಯದಲ್ಲಿ ತೊಡಗಿದಾಗ ಗ್ರಾಮದ ಹಲವಾರು ಜನಪದರು ಹಲವಾರು ಐಹ್ಯಗಳನ್ನು ಹೇಳುತ್ತಾರೆ. ಈ ಗದ್ದುಗೆಯು ಇತ್ತೀಚಿಗೆ ರಚನೆಯಾದ ಅಭಿಪ್ರಾಯವನ್ನು ಹ್ಯಾರಡಾ ಜನಪದರು ವ್ಯಕ್ತಪಡಿಸುತ್ತಾರೆ. ಈ ಗದ್ದುಗೆಯ ನಿರ್ಮಾಣವಾದ ಬಗ್ಗೆ ಗ್ರಾಮಸ್ಥರಾದ ಬರಡಿ ಗುಡ್ಡಪ್ಪ ಅವರು ಹೀಗೆ ಹೇಳುವರು. "ಗ್ರಾಮದ ಪಕ್ಕದಲ್ಲಿರುವ ಗರ್ಭಗುಡಿ ಎಂಬ ಗ್ರಾಮವಿದೆ. ಆ ಗ್ರಾಮದ ದೇವತೆ ಊರಮ್ಮಳಾಗಿದ್ದಾಳೆ. ಪ್ರತಿ ವರ್ಷ ಈ ದೇವತೆಯ ಜಾತ್ರೆಯನ್ನು ಮಾಡುವುದುಂಟು. ಅದರಂತೆಯೇ ಕೋಣವನ್ನು ಬಲಿಕೊಡುವುದುಂಟು. ಒಂದು ವರ್ಷ ಗರ್ಭಗುಡಿಯ ಗ್ರಾಮದ ವ್ಯಕ್ತಿಯ ಹೊಲದಲ್ಲಿ ಕೋಣವು ಮೇಯುತ್ತಿರುವ ಸಂದರ್ಭದಲ್ಲಿ ಅದಕ್ಕೆ ವಿದ್ಯುತ್ ಸ್ಪರ್ಶವಾಗಿ ಸಾಯುತ್ತದೆ. ಈ ವಿಷಯ ಊರಿನ ಜನರಿಗೆ ಗೊತ್ತಾದರೆ ಕಷ್ಟವಾಗುತ್ತದೆ ಎಂದು ತಿಳಿದ ಹೊಲದ ಮಾಲೀಕನು ರಾತ್ರೋ ರಾತ್ರಿ ಕೋಣವನ್ನು ಹ್ಯಾರಡ ಗ್ರಾಮದ ಅಡವಿಯಲ್ಲಿ ಹಾಕಿ ಹೋಗುವನು.

ಒಂದು ರಾತ್ರಿ ಗುಡ್ಡಪ್ಪನು ಮಲಗಿದಾಗ ಆತನ ಕನಸಿನಲ್ಲಿ ಕೋಣ ಬಂದು ಹೂಂಕರಿಸಿ ಆತನನ್ನು ಗುದ್ದಲು ಬರುತ್ತದೆ. ಆಗ ಆತನು ಹೆದರಿ ಮರವನ್ನೇರುತ್ತಾನೆ. ಇದಾದ ನಂತರ ಮುಂಜಾನೆ ಆತನು ಅಡವಿಯಲ್ಲಿ ಸಸಿಯನ್ನು ನೆಡಲು ಹೋಗಿದ್ದಾಗ ದಟ್ಟವಾದ ಕಾಡಿನಲ್ಲಿ ಆತನ

ಸಾಲಿನಲ್ಲಿಯೇ ಸತ್ತು ಬಿದ್ದ ಕೋಣವನ್ನು ನೋಡುತ್ತಾನೆ. ಆಗ ಈತನು ನಿನ್ನೇ ರಾತ್ರಿ ಬಿದ್ದ ಕನಸನ್ನು ಕಲ್ಪಿಸಿಕೊಂಡು ಆ ಕೋಣವನ್ನು ಅಲ್ಲಿಯೇ ಪೂಜಾ ವಿಧಿ-ವಿಧಾನದಿಂದ ಹೂಳುವರು. ನಂತರ ಅದರ ಮೇಲೆ ಗದ್ದುಗೆಯನ್ನು ನಿರ್ಮಾಣ ಮಾಡಿದರು. ಅಂದಿನಿಂದ ಅದು ಧಾರ್ಮಿಕ ಕ್ಷೇತ್ರವಾಗಿ ಬದಲಾಯಿತು." ಎಂದು ಹೇಳುತ್ತಾನೆ. ಪ್ರತಿವರ್ಷ ಈ ದೈವದ ಪರುವನ್ನು ಗ್ರಾಮಸ್ಥರು ವೈಭವದಿಂದ ಮಾಡುವುದುಂಟು.

೬.೧೫ ಕಲ್ಲೇಶ್ವರ ದೇವಾಲಯ

ಈ ದೇವಾಲಯವು ೧೧ ಅಡಿ ಉದ್ದ ಅಗಲವನ್ನು ಹೊಂದಿದೆ. ದೇವಾಲಯದ ಒಳಗಡೆ ಈಶ್ವರ ದೇವರ ಮೂರ್ತಿ ಇದೆ. ಪಕ್ಕದಲ್ಲಿ ಬಸವಣ್ಣನ ಮೂರ್ತಿಯನ್ನು ಕಾಣಬಹುದಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ೨೦ ಅಡಿ ಉದ್ದ, ೨೦ ಅಡಿ ಅಗಲ ಅವಾರವನ್ನು ಹೊಂದಿದೆ. ಇತ್ತೀಚಿಗೆ ಈ ದೇವಾಲಯವನ್ನು ಗ್ರಾಮದವರಾದ ಹರಪನಹಳ್ಳಿ ಬಸಮ್ಮ ಅವರು ತಮ್ಮ ಸ್ವಂತ ಹಣದಿಂದ ಜೀರ್ಣೋದ್ಧಾರ ಮಾಡಿದ್ದಾರೆ.

೬.೧೬ ಹಾದಿ ಹನುಮಂತ

ಈ ದೇವಾಲಯವು ಸಂಗಮೇಶ್ವರನ ದೇವಸ್ಥಾನದ ಪಕ್ಕದಲ್ಲಿದೆ. ದೇವಾಲಯವು ೧೧ ಅಡಿ ಉದ್ದ ಅಗಲವನ್ನು ಹೊಂದಿದೆ. ಈ ದೇವಾಲಯವು ಗೋಪುರವನ್ನು ಹೊಂದಿದ್ದು, ೫ ಅಡಿ ಎತ್ತರವನ್ನು ಹೊಂದಿದೆ. ದೇವಾಲಯದ ಒಳಗಡೆ ಗದ್ದುಗೆಯು ೨ ಅಡಿ ಎತ್ತರ, ಒಂದು ಅಡಿ ಅಗಲ ಹೊಂದಿದೆ.

ಈ ದೈವವು ಗ್ರಾಮದ ಪ್ರಮುಖ ಬೀದಿಯಲ್ಲಿ ಪ್ರತಿಷ್ಠಾಪಿಸಿರುವುದರಿಂದ ಹಾದಿಯ ಹನುಮಂತ ಎಂದು ಕರೆಯುವುದುಂಟು. ಗ್ರಾಮದ ಎಲ್ಲ ಸಮುದಾಯದ ಜನಪದರು ಶನಿವಾರ ದಿನದಂದು ವಿಶೇಷ ಪೂಜೆಯನ್ನು ಸಲ್ಲಿಸುವುದುಂಟು. ಶನಿವಾರ ದಿನದಂದು ಸ್ನಾನ ಮಾಡಿ ಸಣ್ಣ ಬಟ್ಟಲಿನಲ್ಲಿ ಎಣ್ಣೆ, ಬತ್ತಿಯನ್ನು ತೆಗೆದುಕೊಂಡು ಹೋಗಿ ದೀಪವನ್ನು ಬೆಳಗಿಸುವುದರ ಮೂಲಕ ಯಾವುದೇ ಶನಿಯು ನಮ್ಮನ್ನು ಹಿಂಬಾಲಿಸದಿರಲಿ ಎಂದು ಪ್ರಾರ್ಥಿಸುವುದುಂಟು. ಈ ದೈವದೊಂದಿಗೆ ಗ್ರಾಮದ ಜನಪದರು ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡು, ಕಾರ್ತಿಕೋತ್ಸವವನ್ನು ವಿಜೃಂಭಣೆಯಿಂದ ಮಾಡುವುದರ ಮುಖಾಂತರ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮೆರೆದಿದ್ದಾರೆ.

೬.೧೭ ಶರೀಫ್ ಸಾಹೇಬರ ಕಟ್ಟೆ

ಗ್ರಾಮದಿಂದ ಹೊಳಲಿಗೆ ಹೋಗುವ ಮಾರ್ಗದಲ್ಲಿ ಅನತಿ ದೂರದಲ್ಲಿ ಬಲಗಡೆ ಶಿಶುನಾಳ ಶರೀಫ್ ಸಾಹೇಬರ ಗದ್ದುಗೆ ಇದ್ದು, ಇದು ೪ ಅಡಿ ಉದ್ದ, ಅಗಲದ ಚೌಕಾಕಾರವಾಗಿದ್ದು, ಕಟ್ಟೆಯ ಮೇಲೆ ಶರೀಫ್ ಸಾಹೇಬರ ಮೂರ್ತಿ ಇದೆ.

ಈ ಗದ್ದುಗೆಯನ್ನು ಶಿಶುನಾಳ ಶರೀಫರ ಆರಾಧಕರಾದ ಸಣ್ಣೀಲಪ್ನರ ನಾಗಪ್ಪ ಅವರು ಪ್ರತಿಷ್ಠಾಪಿಸಿದ್ದಾರೆ ಎಂಬುದು ಸ್ಥಳೀಯರ ಹೇಳಿಕೆಯಾಗಿದೆ. ಸಣ್ಣೀಲಪ್ನರ ನಾಗಪ್ಪ ಎಂಬುವರು ಶಿಶುನಾಳ ಶರೀಫರ ತತ್ವಪದಗಳನ್ನು ಹೇಳುತ್ತಾ ಕೈಯಲ್ಲಿ ಸದಾ ಗಾಂಜಾವನ್ನು ಹಿಡಿದು ಶಿಶುನಾಳ ಶರೀಫರ ಹಿಂಬಾಲಕರು ಆಗಿದ್ದರು. ಅವರ ನೆನಪಿಗೋಸ್ಕರ ಈ ಗದ್ದುಗೆಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಗದ್ದುಗೆಯು ಇನ್ನೂ ಸುಧಾರಿಸಬೇಕಾಗಿದೆ.

೬.೧೪ ಮೈಲಾರ ಲಿಂಗೇಶ್ವರನ ಶಿಬಾರ

ಈ ಶಿಬಾರವು ೭ ಅಡಿ ಅಗಲ, ೯ ಅಡಿ ಉದ್ದವಾದ ಕಟ್ಟೆಯನ್ನು ಕಟ್ಟಲಾಗಿದ್ದು, ಇದರ ಮೇಲೆ ಶಿಬಾರ ನಿರ್ಮಾಣವಾಗಿದೆ. ಇದು ೩ ಅಡಿ ಅಗಲ ೪.೫ ಅಡಿ ಎತ್ತರವನ್ನು ಹೊಂದಿದೆ. ಈ ಕಟ್ಟೆಯಲ್ಲಿ ಬೃಹದಾಕಾರದ ಬೇವಿನಮರ ಇದೆ.

"ಶಿಬಾರ" ಎಂಬ ಪದದ ಪದನಿಷ್ಪತ್ತಿಯನ್ನು ನೋಡುವುದಾದರೆ "ಆರ" ಎಂದರೆ ಬಯಲು, ವಾಸಸ್ಥಾನ, "ಶಿವ" ಎಂದರೆ ದೈವ, 'ಶಿವ' 'ಆರ' ಸೇರಿ ಶಿಬಾರ ಆಗಿದೆ. ಗ್ರಾಮೀಣ ಜನರ ಗ್ರಾಮ್ಯ ಭಾಷೆಯಲ್ಲಿ ಬರುಬರುತ್ತಾ 'ಶಿವಾರ' ಹೋಗಿ 'ಶಿಬಾರ' ಎಂದು ಕರೆಯುವುದುಂಟು. ಯಾವ ಗ್ರಾಮದಲ್ಲಿ ಹೆಚ್ಚಾಗಿ ಕುರುಬ ಸಮುದಾಯವಿರುತ್ತೋ ಅಲ್ಲಿ ಬಹುತೇಕವಾಗಿ 'ಶಿಬಾರ'ಗಳನ್ನು ಕಾಣುತ್ತೇವೆ. ಅದರಂತೆಯೇ ಹ್ಯಾರಡಾ ಗ್ರಾಮದಲ್ಲಿ ಕುರುಬ ಸಮುದಾಯದವರು ಬಹು ಸಂಖ್ಯಾತರಾಗಿದ್ದು, ಶಿಬಾರ ಸ್ಥಳವು ಕುರುಬರ ಧರ್ಮ ಶ್ರದ್ಧಾ ಕೇಂದ್ರಗಳಾಗಿ ಮಾರ್ಪಟ್ಟಿವೆ ಎಂದು ಹೇಳಬಹುದು. ಕುರುಬರ ಬಹುಸಂಖ್ಯಾತ ಊರುಗಳಾದ ಮೈಲಾರ ಹಾಗೂ ದೇವರ ಗುಡ್ಡದಲ್ಲಿ ಶಿಬಾರಗಳ ಅಸಂಖ್ಯಾತ ಸಮುಚ್ಚಯವನ್ನೇ ಕಾಣಬಹುದಾಗಿದೆ.

ಶಿಬಾರಗಳ ಹುಟ್ಟು ಮತ್ತು ಬೆಳವಣಿಗೆಗಳ ಬಗ್ಗೆ ನಾವುಗಳು ನೋಡುವುದಾದರೆ "ಶಿಬಾರಗಳ ಹುಟ್ಟು, ಬೆಳವಣಿಗೆ ಕುತೂಹಲಕಾರಿಯಾಗಿದೆ. ಅದು ಮಾಲಗಂಬದೊಂದಿಗೆ ರೂಪ ಪಡೆಯುತ್ತ ಹೋಗುತ್ತದೆ. ಕುರಿ, ದನಗಳನ್ನು ಮೇಯಿಸುತ್ತಾ ಸಂಚರಿಸುತ್ತಿದ್ದ ಕುರುಬರು ಸಂಜೆಯ ಹೊತ್ತಿಗೆ ತಮ್ಮ ಬಿಡಾರಗಳಿಗೆ ಮರಳುತ್ತಿದ್ದರು. ಕಾಡಿನಲ್ಲಿ ತಮ್ಮ ಬಿಡಾರದ ಸ್ಥಳ ಗುರುತಿಸಲು ಅನುಕೂಲವಾಗಲೆಂಬ ಕಾರಣಕ್ಕಾಗಿ, ಬಿಡಾರಕ್ಕೆ ನಿಕಟವಾದ ಬೆಟ್ಟದ ಮೇಲೆ ಎತ್ತರದ ಬೊಂಬು(ಕಂಬ) ನಿಲ್ಲಿಸಿ ಮೇಲ್ತುದಿಗೆ ಎಣ್ಣೆದಾರದಲ್ಲಿ ಕೈಯಿಂದ ಹೆಣೆದ ಒಂದು ಪಟ(ಬಟ್ಟೆ) ಕಟ್ಟುತ್ತಿದ್ದರು. ಅದು ನಿಶಾನೆ, ಮೈಲಾರ ಸಂಪ್ರದಾಯದಲ್ಲಿ ನಿಶಾನೆಗೆ ಈಗಲೂ ಬಹಳ ಮಹತ್ವವಿದೆ. ಹೆಚ್ಚು ಉದ್ದದ ಪಟ ತಯಾರಿಸಲು ಸಮರ್ಥರಾದಂತೆ, ಕಂಬಕ್ಕೂ ಅದನ್ನು ಸುತ್ತುತ್ತಿದ್ದರು. ಅದು 'ಮಲೆ' ಪ್ರದೇಶದ ಮೇಲೆ ನೆಟ್ಟ ಕಂಬವಾಗಿದ್ದರಿಂದ ಅದು 'ಮಾಲಗಂಬ(<ಮಲೈಕಂಬ). ಈ ಮಾಲಗಂಬಗಳೇ ಶಿಬಾರಗಳ ಹುಟ್ಟಿಗೆ ಕಾರಣವಾದವು. ಶಿವಾಲಯಗಳ ನಿರ್ಮಾಣದೊಂದಿಗೆ ಇವು ದೀಪ ಸ್ತಂಭಗಳಾಗಿ ಮಾರ್ಪಾಡಾದವು"(ಡಾ. ಎಫ್.ಟಿ. ಹಳ್ಳಿಕೇರಿ : ೨೦೧೧ : ೯೩)

ಸಾಮಾನ್ಯವಾಗಿ ಶಿಬಾರಗಳು ಮೈಲಾರ ಮತ್ತು ಮಾಳಿಯರ ಸಮಾಗಮ ಸ್ಥಳ ಎಂಬುದು ಬಹುತೇಕ ಕುರುಬ ಸಮುದಾಯದ ಅಭಿಪ್ರಾಯವಾಗಿದೆ. ಯಾವುದೇ ಶಿಬಾರವನ್ನು ನಾವುಗಳು ಗಮನಿಸಿದಾಗ ಒಂದು ಕಟ್ಟೆಯ ಮೇಲೆ ಎರಡು ಗುಂಡು ಕಲ್ಲುಗಳನ್ನು ನೋಡುತ್ತೇವೆ. ಅದರಲ್ಲಿ ಒಂದು ಮೈಲಾರಿ, ಇನ್ನೊಂದು ಮಾಳಿ ಎಂಬುದು ನಂಬಿಕೆಯಾಗಿದೆ. ನಂತರ ಕಟ್ಟೆಯ ಮೇಲೆ ಎರಡು ಶಿಲಾ ಸ್ತಂಭಗಳು, ಅದರ ಮೇಲೆ ಅಡ್ಡ ಪಟ್ಟಿಯನ್ನು ಕಾಣುತ್ತೇವೆ. ಈ ಅಡ್ಡ ಪಟ್ಟಿಯ ಮಧ್ಯಭಾಗದಲ್ಲಿ ತ್ರಿಶೂಲವನ್ನು ಕಾಣಬಹುದಾಗಿದೆ. ನಂತರದಲ್ಲಿ ಕಾಲ ಬದಲಾದಂತೆ ಶಿಬಾರಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣುತ್ತೇವೆ.

ಗ್ರಾಮದಲ್ಲಿ ಕುರುಬ ಸಮುದಾಯದವರು ಹೆಚ್ಚಾಗಿ ಇದನ್ನು ಆರಾಧಿಸುವುದುಂಟು. ಹೆಚ್ಚಾಗಿ ಹುಣ್ಣಿಮೆಯ ದಿನದಿಂದ ಶಿಬಾರಕ್ಕೆ ತೆರಳಿ ಹಣ್ಣು, ಹೂ, ಕಾಯಿ, ಎಣ್ಣೆ, ಭಂಡಾರ, ಕರ್ಪೂರವನ್ನು ತೆಗೆದುಕೊಂಡು ವಿಶೇಷವಾದ ಪೂಜೆಯನ್ನು ಮಾಡುವುದುಂಟು. ಕುರುಬರು ಇದರ ಬಗ್ಗೆ ಅಪಾರವಾದ ನಂಬಿಕೆಯನ್ನು ಹೊಂದಿದ್ದಾರೆ. ನಮ್ಮ ಕುರಿಗಳನ್ನು ಕಾಯುವ ಹಾಗೂ ಸಂರಕ್ಷಿಸುವ ದೈವ ಎಂದು ಶಿಬಾರವನ್ನು ವಿಶೇಷವಾಗಿ ಪೂಜಿಸುವುದುಂಟು.

೬.೧೯ ಹೊನ್ನತ್ತೆಮ್ಮ ದೇವಿ

ಈ ದೇವಾಲಯವು ಹಳೆಯದಾದ ದೇವಸ್ಥಾನವಾಗಿದ್ದು, ಗೋಪುರವನ್ನು ಹೊಂದಿದೆ. ದೇವಾಲಯವು ಅಟವಾಳಿಗೆಯನ್ನು ಹೊಂದಿದ್ದು, ೧೬ ಅಡಿ ಅಗಲ ೬ ಅಡಿ ಉದ್ದವನ್ನು ಹೊಂದಿದೆ. ಒಳಗಡೆ ಗರ್ಭಗುಡಿಯನ್ನು ಹೊಂದಿದೆ. ಗರ್ಭಗುಡಿಯಲ್ಲಿ ದೇವಿಯ ಮೂರ್ತಿ ಇದೆ. ಈ ಮೂರ್ತಿಯು ೨ ಅಡಿ ಎತ್ತರ ಒಂದು ಅಡಿ ಅಗಲವನ್ನು ಹೊಂದಿದೆ. ಗೋಪುರವು ೭ ಅಡಿ ಎತ್ತರ ೬ ಅಡಿ ಸುತ್ತಳತೆಯನ್ನು ಹೊಂದಿದೆ.

ಗ್ರಾಮದ ಎಲ್ಲಾ ಸಮುದಾಯದವರು ಈ ದೈವದೊಂದಿಗೆ ಅನ್ಯೋನ್ಯವಾದ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಈ ದೈವವು ಊರಿನ ಹೊರಗಡೆ ಇದ್ದು, ಗ್ರಾಮವನ್ನು ದುಷ್ಟ ಶಕ್ತಿಯಿಂದ ಕಾಪಾಡುವ ದೈವ ಎಂದು ನಂಬಿದ್ದಾರೆ. ಬೇಡಿದ್ದನ್ನು ಕೊಡುವ ದೈವವಾಗಿದೆ. ಹೊನ್ನವನ್ನು ಬೇಡಿದರೂ ಸಹ ಅದನ್ನು ಕರುಣಿಸುವ ದೈವ ಹೊನ್ನತ್ತೆಮ್ಮ ಎಂದು ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡು ಬಂದಿದ್ದಾರೆ. ಈ ದೇವಾಲಯವನ್ನು ಜೀರ್ಣೋದ್ದಾರ ಮಾಡುವ ತುರ್ತು ಕೆಲಸವಾಗಬೇಕಾಗಿದೆ. ಸರ್ಕಾರಗಳು, ಸಂಘ ಸಂಸ್ಥೆಗಳು ಇದರ ಬಗ್ಗೆ ಗಮನಹರಿಸಿ ಪ್ರಮುಖ ಪ್ರವಾಸಿ ತಾಣವನ್ನಾಗಿ ಮಾಡುವ ಕೆಲಸವಾಗಬೇಕಾಗಿದೆ.

೬.೨೦ ಚಿಕ್ಕ ಮಲಿಯಮ್ಮ

ಈ ದೇವಾಲಯವು ಹಳೆಯದಾಗಿದ್ದು, ೭ ಅಡಿ ಉದ್ದ, ೫ ಅಡಿ ಅಗಲವನ್ನು ಹೊಂದಿದ್ದು. ಗದ್ದುಗೆಯನ್ನು ಹೊಂದಿದೆ. ಈ ಗದ್ದುಗೆಯಲ್ಲಿ ಹಲವಾರು ಸಣ್ಣ ಪುಟ್ಟ ಮೂರ್ತಿಗಳನ್ನು ಕಾಣಬಹುದಾಗಿದೆ.

ಈ ದೈವವು ಗ್ರಾಮ ದೇವತೆಯಾದ ಮಲಿಯಮ್ಮನ ಸಹೋದರಿ ಎಂದು ನಂಬಿದ್ದಾರೆ. ಗ್ರಾಮ ದೇವತೆಯಾದ ಮಲಿಯಮ್ಮನಿಗೆ ಸಲ್ಲುವ ವಿಶೇಷ ಪೂಜೆಗಳೂ ಸಹ ಚಿಕ್ಕ ಮಲಿಯಮ್ಮನಿಗೆ ಸಲ್ಲುವ ಸಂಪ್ರದಾಯವನ್ನು ನಾವಿಲ್ಲಿ ಕಾಣಬಹುದಾಗಿದೆ. ಗ್ರಾಮದ ಚಿಕ್ಕ ಚಿಕ್ಕ ಮಕ್ಕಳು, ವೃದ್ಧರು ದೂರದ ಮಲಿಯಮ್ಮನ ದೇವಸ್ಥಾನಕ್ಕೆ ಹೋಗಲು ಆಗದೇ ಚಿಕ್ಕ ಮಲಿಯಮ್ಮನಿಗೆ ಪೂಜೆ ಸಲ್ಲಿಸಿದರೆ ಮಲಿಯಮ್ಮನ ಪೂಜೆ ಮಾಡಿದಂತೆ ಎಂಬ ಅಪಾರ ನಂಬಿಕೆಯನ್ನು ಹೊಂದಿದ್ದಾರೆ. ಗ್ರಾಮದ ಎಲ್ಲಾ ಸಮುದಾಯದವರು ಮಂಗಳವಾರ ಹಾಗೂ ಶುಕ್ರವಾರ ವಿಶೇಷ ಪೂಜೆಯನ್ನು ಮಾಡುವುದುಂಟು. ಪ್ರಮುಖವಾಗಿ ಕಾರ್ತಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವುದನ್ನು ಕಾಣಬಹುದಾಗಿದೆ. ಇನ್ನೊಂದು ವಿಶೇಷವೆಂದರೆ ಗ್ರಾಮ ದೇವತೆಯಾದ ಮಲಿಯಮ್ಮನಿಗೆ ಸಲ್ಲುವ ವಿಶೇಷ ಪೂಜೆಯು, ತನ್ನ ಸಹೋದರಿಯಾದ ಚಿಕ್ಕ-ಮಲಿಯಮ್ಮನಿಗೆ ಸಲ್ಲಬೇಕೆಂಬುದು ಗ್ರಾಮದೇವತೆಯಾದ ಮಲಿಯಮ್ಮನ ಬಯಕೆಯಾಗಿದೆ ಎಂದು ಇಲ್ಲಿಯ ಜನಪದರು ನಂಬಿದ್ದಾರೆ. ಈ ನಂಬಿಕೆಯು ಗ್ರಾಮೀಣ ಜನರಲ್ಲಿ ಭಾತೃತ್ವ, ಅಕ್ಕ-ತಂಗಿ, ಬಾಂಧವ್ಯವನ್ನು ಸಾರುವಲ್ಲಿ ಪ್ರಮುಖವಾದ ಅಂಶವನ್ನು ಮನಗಾಣಬೇಕಾಗದೆ. ಈ ದೈವದ ಆಚರಣೆಯ ಮುಖಾಂತರ ಸಾಮಾಜಿಕ ಸಾಮರಸ್ಯ ಜೀವನಕ್ಕೆ ಇಲ್ಲಿಯ ಜನಪದರು ನಾಂದಿಯನ್ನು ಹಾಡಿರುವುದನ್ನು ಕಾಣಬಹುದಾಗಿದೆ.

೬.೨೧ ನಾಗದೈವಗಳು

ಹಾದಿ ಹನುಮಂತನ ದೇವಸ್ಥಾನದ ಪಕ್ಕದಲ್ಲಿವೆ. ಇಲ್ಲಿ ಗದ್ದುಗೆ ಇದೆ. ಈ ಗದ್ದುಗೆಯು ೨೦ ಅಡಿ ಉದ್ದ, ೧ ಅಡಿ ಅಗಲ ಹೊಂದಿದ್ದು, ೭ ನಾಗದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಪಂಚಮಿಯಂದು ಊರಿನ ಎಲ್ಲಾ ಜನಪದರು ಇವುಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ.

ಈ ನಾಗದೈವಗಳನ್ನು ಹಾದಿಯ ಹನುಮಂತ, ಸಂಗಮೇಶ್ವರ ದೇವಾಲಯದ ಅನತಿ ದೂರದಲ್ಲಿ ಪ್ರತಿಷ್ಠಾಪಿಲಾಗಿದೆ. ಈ ನಾಗದೈವಗಳು ಪೂರ್ವಜರ ಕಾಲದಿಂದಲೂ ಪೂಜಿಸಲ್ಪಟ್ಟಿದ್ದವು ಎಂದು ಸ್ಥಳೀಯರು ಹೇಳುವರು. ಗ್ರಾಮದ ಎಲ್ಲಾ ಸಮುದಾಯಗಳ ಜನಪದರು ಈ ದೈವವನ್ನು ಆರಾಧಿಸುವುದುಂಟು. ಆರೇಳು ಆಯತಾಕಾರದ ಕಲ್ಲಿನ ಮೇಲೆ ನಾಗ ದೈವಗಳನ್ನು ಕೆತ್ತಿ, ಅವುಗಳನ್ನು ಪ್ರತಿಷ್ಠಾಪಿಸಲಾಗಿದೆ. ವಿಶೇಷವಾಗಿ ಪಂಚಮಿಯ ದಿನದಂದು ಪೂಜಿಸುವುದುಂಟು. ನಾಗದೈವಳಿಗೆ ಹಾಲಿನಿಂದ ಅಭಿಷೇಕವನ್ನು ಮಾಡುವರು. ವಿವಿಧ ರೀತಿಯ ಖಾದ್ಯ ಪದಾರ್ಥಗಳನ್ನು ತಯಾರಿಸಿ ನೈವೇದ್ಯವನ್ನು ಕೊಡುವ ಸಂಪ್ರದಾಯವನ್ನು ನಾವಿಲ್ಲಿ ಕಾಣಬಹುದಾಗಿದೆ. ಪಂಚಮಿಯ ದಿನದಂದು ನಾಗದೈವಕ್ಕೆ ಹೂವಿನ ಮಾಲೆಯನ್ನು ಹಾಕದೇ ವಿಶೇಷವಾಗಿ ತಯಾರಿಸಿದ "ಕೊಂಕಣ ಬತ್ತಿ-ಕೊಕ್ಕ ಬತ್ತಿ" ಗ್ರಾಮ್ಯ ಭಾಷೆಯಲ್ಲಿ ಕರೆಯುವ ಒಂದು ಸರವನ್ನು ನಾಗದೈವಗಳ ಕೊರಳಿಗೆ ಹಾಕುವುದನ್ನು ಕಾಣಬಹುದಾಗಿದೆ. ಈ ಸರವನ್ನು ಹತ್ತಿಯಿಂದ ಮಾಡಿ, ಅರಿಶಿಣವನ್ನು ತೇಯ್ದು ಅಲ್ಲಲ್ಲಿ ಅರಿಶಿಣ ತೇಯ್ದು ಹಚ್ಚಿ ಮಾಡಿರುವ ಸರವಾಗಿದೆ.

ಈ ಸರವನ್ನು ಸಮರ್ಪಿಸುವದರ ಮೂಲ ಉದ್ದೇಶ ಜೀವನದಲ್ಲಿ ಕಷ್ಟ-ದುಃಖ, ಏರು-ಇಳಿವು ಬರುತ್ತಲಿರುತ್ತವೆ, ಅವುಗಳೆಲ್ಲವನ್ನು ಪರಿಹರಿಸುವ ದೈವ ನಾಗದೈವ ಎಂದು ಇಲ್ಲಿಯ ಜನಪದರು ನಂಬಿದ್ದಾರೆ. ಹೆಚ್ಚಾಗಿ ನಾಗದೈವಗಳು ವಿಷವನ್ನು ಕಾರುವ ದೈವವಾಗಿದ್ದು, ಇದರಿಂದ ನಮ್ಮನ್ನು ಕಾಪಾಡು ಎಂದು ವಿಶೇಷ ಪೂಜೆಯನ್ನು ಮಾಡುವ ಸಂಪ್ರದಾಯವನ್ನು ನಾವಿಲ್ಲಿ ಕಾಣಬಹುದಾಗಿದೆ.

೬.೨೨ ಕೋಟೆ ಚೌಡಮ್ಮ

ಈ ದೇವಾಲಯವು ಕೋಟೆಯ ಒಳ ಭಾಗದಲ್ಲಿದ್ದು, ೬ ಅಡಿ ಅಗಲ, ೪ ಅಡಿ ಉದ್ದವಾದ ಅಟವಾಳಿಗೆಯನ್ನು ಹೊಂದಿದೆ. ಗರ್ಭಗುಡಿಯಲ್ಲಿ ಗದ್ದುಗೆಯನ್ನು ಹೊಂದಿದ್ದು, ಅದರ ಮೇಲೆ ಮೂರ್ತಿಯನ್ನು ಹೊಂದಿದೆ.

ಕೋಟೆಯಿರುವ ಬಹುತೇಕ ಗ್ರಾಮಗಳಲ್ಲಿ ಚೌಡಮ್ಮ ದೈವ ಇರುವುದನ್ನು ನಾವುಗಳು ಕಾಣಬಹುದಾಗಿದೆ, ಹೆಚ್ಚಾಗಿ ಈ ದೈವವನ್ನು ಗೊಲ್ಲ ಸಮುದಾಯದವರು ಆರಾಧಿಸುವುದನ್ನು ಕಾಣಬಹುದಾಗಿದೆ, ಇತ್ತೀಚಿಗೆ ಈ ಸಮುದಾಯದ ವತಿಯಿಂದ ತಮ್ಮ ಸ್ವಂತ ಹಣದಿಂದ ದೇವಾಲಯವನ್ನು ಜೀರ್ಣೋದ್ದಾರ ಮಾಡಿದ್ದಾರೆ, ಈಗಲೂ ಸಹ ಈ ದೈವಕ್ಕೆ ಗೊಲ್ಲ ಸಮುದಾಯದವರು ಪೂಜೆಯನ್ನು ಸಲ್ಲಿಸುವುದನ್ನು ಕಾಣಬಹುದಾಗಿದೆ. ಜಾನಪದ ವಿದ್ವಾಂಸರ ಪ್ರಕಾರ ಈ ದೇವತೆಯನ್ನು ದೇವಾಂಗದವರು ಅಥವಾ ನೇಕಾರರು ಪೂಜಿಸುವುದುಂಟು.

೬.೨೩ ಗಂಗಾ ಪರಮೇಶ್ವರಿ ದೇವಸ್ಥಾನ

ಈ ದೇವಾಲಯವು ನೂತನವಾಗಿ ನಿರ್ಮಾಣವಾಗಿರುವ ದೇವಾಲಯವಾಗಿದ್ದು, ೧೩ ಅಡಿ ಅಗಲ, ೧೧ ಅಡಿ ಉದ್ದದ ದೇವಾಲಯವನ್ನು ಹೊಂದಿದೆ. ದೇವಾಲಯದ ಮುಂಭಾಗದ ಕುಂಬಿಯ ಮೇಲೆ ಪಾರ್ವತಿ ಪರಮೇಶ್ವರ ಮೂರ್ತಿ, ಗಂಗಾ ಪರಮೇಶ್ವರಿ ಮೂರ್ತಿ ಹಾಗೂ ಅಂಬಿಗರ ಚೌಡಯ್ಯನ ಮೂರ್ತಿಯನ್ನು ಕಾಣಬಹುದಾಗಿದೆ. ಈ ದೈವವನ್ನು ಹೆಚ್ಚಾಗಿ ಗ್ರಾಮದ ಗಂಗಾಮತಸ್ಥರು ಆರಾಧಿಸುವುದುಂಟು. ಗಂಗೆಯನ್ನು ಪವಿತ್ರ ದೇವತೆಯನ್ನಾಗಿ ಪೂಜಿಸುವರು. ಏಕೆಂದರೆ ಇವರ ದಿನನಿತ್ಯದ ಕಾಯಕವು ದೋಣಿಯನ್ನು ನಡೆಸುವುದು ಆಗಿತ್ತು. ಆದ್ದರಿಂದ ಗಂಗೆಯನ್ನು ಪ್ರಮುಖವಾಗಿ ಆರಾಧಿಸುವುದುಂಟು.

ಗಂಗೆ ಹಾಗೂ ಈಕೆಯ ಪತಿಯಾದ ಪರಮೇಶ್ವರನನ್ನು ಪೂಜಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಗಂಗೆಯು ಭೂಮಿಯ ಮೇಲೆ ಹೇಗೆ ಅವತರಿಸಿದಳು ಎಂಬುದರ ಬಗ್ಗೆ ಇಲ್ಲಿಯ ಸ್ಥಳೀಯ ಜನಪದರು ಕಥೆಯನ್ನು ಹೇಳುವರು. ಅದೇನೆಂದರೆ, ಹಿಂದಿನ ಕಾಲದಲ್ಲಿ ಸಾಗರಾಜ ಎಂಬ ಅರಸನಿದ್ದನು, ಆತ ಒಂದುದಿನ ಅಶ್ವಮೇಧಯಾಗವನ್ನು ಕೈಗೊಂಡು ಕುದರೆಯನ್ನು ಬಿಟ್ಟನು. ಈ ಕುದುರೆಯ ಕಾವಲಿಗೆ ತನ್ನ ಚಿಕ್ಕಪ್ಪರಾದ ತನುಜಾ ಮತ್ತು ತಕ್ಷಕಾ ಅವರನ್ನು ನಿಯೋಜಿಸಿದನು. ಹೀಗೆ ಕುದುರೆಯು ಒಂದು ಅಡವಿಯಲ್ಲಿ ಹೋಗುತ್ತಿರುವಾಗ ಋಷಿಯ

ಕುಟೀರವನ್ನು ಹಾಳುಮಾಡುತ್ತದೆ. ಆಗ ಕೋಪಗೊಂಡ ಋಷಿಯು ತನುಜಾ ಮತ್ತು ತಕ್ಷಕಾ ಅವರಿಗೆ ಶಾಪವನ್ನು ಕೊಟ್ಟು ಅಲ್ಲಿಯೇ ಭಸ್ಮವನ್ನಾಗಿ ಮಾಡಿದನು. ಆಗ ಸಾಗರಾಜನು ತನ್ನ ಚಿಕ್ಕಪ್ಪರನ್ನು ಬದುಕಿಸಲು ಭಗೀರಥನ ಹೆಸರಿನಲ್ಲಿ ಗಂಗೆಯನ್ನು ಕುರಿತು ಘೋರ ತಪಸ್ಸನ್ನು ಮಾಡುವನು. ಗಂಗೆಯು ಈತನ ತಪಸ್ಸಿಗೆ ಸಂಪ್ರೀತಳಾಗಿ ನಿನಗೆ ಯಾವ ವರ ಬೇಕು ಕೇಳು ಎಂದಳು. ಆಗ ಗಂಗೆಯು ನಾನು ಭೂಲೋಕಕ್ಕೆ ಬರುತ್ತೇನೆ, ಆದರೆ ಒಂದು ಷರತ್ತನ್ನು ಪಾಲಿಸಬೇಕೆಂದು ಹೇಳಿದಳು. ಆಗ ಭಗೀರಥನು ಯಾವ ಷರತ್ತು ಎಂದು ಕೇಳಿದಾಗ, ನಾನು ಭೂಮಿಗೆ ಬಂದಾಗ ಮಾನವರು ನನ್ನನ್ನು ಅಪವಿತ್ರಗೊಳಿಸಬಾರದು. ಅಪವಿತ್ರಗೊಳಿಸದಂತೆ ನೀನು ನೋಡಿಕೊಳ್ಳಬೇಕೆಂದು ಷರತ್ತನ್ನು ವಿಧಿಸಿದಳು. ಸಾಗರಾಜನು (ಭಗೀರಥ) ಈ ಷರತ್ತಿಗೆ ಒಪ್ಪಿದಾಗ ಗಂಗೆಯು ನೀರಿನ ರೂಪದಲ್ಲಿ ಭೂಮಿಯಲ್ಲಿ ಹರಿದು ಭಸ್ಮವಾಗಿದ್ದ ತನುಜಾ ಮತ್ತು ತಕ್ಷಿತಾ ಇದ್ದ ಜಾಗದಲ್ಲಿ ಗಂಗೆ ಹರಿದಳು . ಆಗ ಇವರಿಬ್ಬರು ಬದುಕಿದರು ಎಂಬ ಕಥೆಯನ್ನು ನೋಡಬಹುದಾಗಿದೆ.

ಮೇಲಿನ ಕಥೆಯಲ್ಲಿ ಸಾಗರಾಜನು ಗಂಗಾಮತಸ್ಥರ ವಂಶಸ್ಥನಾಗಿರಬಹುದು. ಅಲ್ಲಿಂದ ಇಲ್ಲಿಯವರೆಗೂ ಬಹುತೇಕ ಗಂಗಾ ಮತಸ್ಥರು ನೀರಿನಲ್ಲಿಯೇ ದೋಣಿಯನ್ನು ಚಲಿಸುವ ಕಾಯಕ ಮಾಡುತ್ತಾ ಅದರ ಜೊತೆಗೆ ಗಂಗೆಯನ್ನು ಶುದ್ಧಗೊಳಿಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ನೋಡಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇವರು ಒಂದು ಶ್ಲೋಕವನ್ನು ಹೇಳುವುದುಂಟು "ಭಗೀರಥನಂ ಪುಣ್ಯಂ ಇಷ್ಟಾರ್ಥ ಫಲದಾಯನಂ ಮಹಾ ಋಷಿ ಸೇವಂ, ತರಮಂ ಶುಭಂ ಮಹೇಶ್ವರಿ ಭಜೆ" ಎಂದು ಶುಭಕಾರ್ಯಗಳಲ್ಲಿ ಇದನ್ನು ಹೇಳುವುದುಂಟು.

ಹೊಳೆಯ ದಂಡೆಯಲ್ಲಿ ಗಂಗೆಯನ್ನು ಈ ಸಮುದಾಯದವರು ವಿಶಿಷ್ಟ ರೀತಿಯಲ್ಲಿ ಪೂಜಿಸುವುದುಂಟು. ಮಂಗಳವಾರ ಹಾಗೂ ಶುಕ್ರವಾರದಂದು ಈ ಶುಭ ಕಾರ್ಯವನ್ನು ಮಾಡುವುದುಂಟು. ಹೊಳೆಯ ದಂಡೆಯಲ್ಲಿ ಕಬ್ಬಿನ ಜಲ್ಲೆಯಿಂದ ಚಪ್ಪರವನ್ನು ಹಾಕುವರು. ಆ ಚಪ್ಪರದ ಕೆಳಗೆ ಐದು ಮರಳಿನ ಗುಂಪಿಯನ್ನು ಮಾಡುವರು. ಈ ಐದು ಮರಳಿನ ಗುಂಪಿಯನ್ನು ಮರಳಿನ ಗೌರಮ್ಮ ಎಂದು ಕರೆಯುವರು. ಅದರ ಮುಂದೆ ಐದು ಕುಂಬಗಳನ್ನು ಇಟ್ಟು ಇದಕ್ಕೆ ವಿವಿಧ ರೀತಿಯ ನೈವೇದ್ಯ, (ಹೋಳಿಗೆ,ಕಡುಬು) ಸಮರ್ಪಿಸುವರು. ಪೂಜೆಯನ್ನು ಮಾಡಿದ ನಂತರ ಈ ಐದು ಕುಂಬಗಳನ್ನು ತಮ್ಮ ಮನೆಗಳಿಗೆ ತಂದು ಜಗುಲಿಯ ಮೇಲಿಟ್ಟು ಪೂಜೆ ಮಾಡಿ ನಂತರ ಈ ಕುಂಬಗಳನ್ನು ಐದು ಮುತ್ತೈದೆ ಹೆಣ್ಣು ಮಕ್ಕಳು ತೆಗೆದುಕೊಂಡು ಹೊಳೆಯ ದಂಡೆಯ ಕಬ್ಬಿನ ಜಲ್ಲೆಯ ಚಪ್ಪರದಲ್ಲಿ ಪ್ರತಿಷ್ಠಾಪಿಸಿ, ಮನೆ ಮಂದಿಯೆಲ್ಲಾ ಪೂಜೆಯನ್ನು ಮಾಡಿ, ಸಿಹಿಯೂಟವನ್ನು ಸವಿದು ಈ ಕಾರ್ಯಕ್ರಮವನ್ನು ಮಾಡುವುದುಂಟು.

ಗ್ರಾಮದಲ್ಲಿ ಬಹುತೇಕ ಈ ಸಮುದಾಯದವರು ಆರ್ಥಿಕವಾಗಿ ಸಬಲರಾಗಿಲ್ಲ. ಆದರೆ ಯಾರ ಹತ್ತಿರವೂ ಕೈ ಚಾಚಿ ಬೇಡುವ ಸ್ಥಿತಿಯಲ್ಲಿಲ್ಲ. ತಮ್ಮ ಹೊಟ್ಟೆಗೆ-ಬಟ್ಟೆಗೆ ಕೊರತೆಗಳು ಇಲ್ಲವೆಂದು

ಇವರ ಬಗ್ಗೆ ಗ್ರಾಮ ಜನಪದರು ಒಂದು ಕಥೆಯನ್ನು ಹೇಳುವುದುಂಟು. ಒಂದು ದಿನ ಬೆಸ್ತನು ನದಿಯಲ್ಲಿ ಮೀನನ್ನು ಹಿಡಿಯುತ್ತಿದ್ದನು. ಯಾವುದೇ ಮೀನುಗಳು ಬಲೆಗೆ ಬೀಳಲಿಲ್ಲ, ಆಗ ಬೆಸ್ತನು ಇವತ್ತಿನ ಊಟಕ್ಕೆ ಏನು ಗತಿ ಎಂದು ಚಿಂತಿಸುತ್ತಿದ್ದನು. ಆಗ ಬಲೆಯಲ್ಲಿ ಎರಡು ಕುಂಬಳಕಾಯಿಗಳು ದೊರೆತವು. ಒಂದು ಹೊನ್ನಿನ ಕುಂಬಳಕಾಯಿ ಇನ್ನೊಂದು ಅನ್ನದ ಕುಂಬಳಕಾಯಿ ಇದನ್ನು ಬೆಸ್ತನು ತೆಗೆದುಕೊಂಡು ಇದನ್ನಾದರೂ ಬೇಯಿಸಿಕೊಂಡು ತಿಂದರಾಯಿತು ಎಂದು ತೆಗೆದುಕೊಂಡು ಮನೆಗೆ ಹೋಗುತ್ತಿದ್ದನು. ಅದೇ ದಾರಿಯಲ್ಲಿ ಒಬ್ಬ ಬ್ರಾಹ್ಮಣನು ಬಂದನು. ಕುಂಬಳಕಾಯಿಯೊಂದನ್ನು ನನಗೆ ಕೊಡು ನಿನಗೆ ಐದು ರೂಪಾಯಿಗಳನ್ನು ಕೊಡುವೆ ಎಂದು ಹೊನ್ನಿನ ಕುಂಬಳಕಾಯಿಯನ್ನು ತೆಗೆದುಕೊಂಡು ಹೋದನಂತೆ. ಅನ್ನದ ಕುಂಬಳಕಾಯಿಯನ್ನು ಬೆಸ್ತನು ತೆಗೆದುಕೊಂಡು ಬಂದನಂತೆ ಅಂದಿನಿಂದ ಬೆಸ್ತನಿಗೆ ಅನ್ನದ ಕೊರತೆ ಬಾರದಂತೆ ಗಂಗಾ ಮಾತೆಯು ಕರುಣಿಸಿದಳು ಎಂಬ ಕಥೆಯನ್ನು ನೋಡಬಹುದಾಗಿದೆ. ಹೀಗೆ ಗಂಗಾ ಮಾತೆಯನ್ನು ಈ ಸಮುದಾಯದವರು ವಿಶೇಷವಾಗಿ ಆರಾಧಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

೬.೨೪ ಕೇರಿಯ ಕರಿಬಾನಿ(ಮಾತಂಗೆಮ್ಮನ ಕಟ್ಟಿ)

ಇಲ್ಲಿ ೬ ಅಡಿ ಅಗಲ, ೫ ಅಡಿ ಉದ್ದವಾದ ಕಟ್ಟೆಯನ್ನು ಕಾಣಬಹುದು. ಈ ಕಟ್ಟೆಯ ಮೇಲೆ ಮಣ್ಣಿನಿಂದ ತಯಾರಿಸಿದ ಎರಡು ಕರಿ ಬಾನಿಗಳನ್ನು ಕಟ್ಟೆಯ ಮೇಲೆ ಹುಗಿಯಲಾಗಿದೆ. ಒಂದೊಂದು ಬಾನಿಗಳು ಬಹುಶಃ ೪ ಕೊಡ ನೀರನ್ನು ಹಿಡಿಯಬಹುದು. ಹೊಸ ಮನೆಗಳ ಗೃಹ ಪ್ರವೇಶಕ್ಕೆ ಈ ಕರಿಬಾನಿಯಿಂದ ನೀರನ್ನು ಒಯ್ದು ಪೂಜೆಗೆ ಉಪಯೋಗಿಸುತ್ತಾರೆ. ಇದು ಮಾದಿಗರ ಸಮುದಾಯದ ಓಣಿಯಲ್ಲಿ ಕಂಡುಬರುತ್ತದೆ. ಈಗಲೂ ಇದು ಸುಸ್ಥಿತಿಯಲ್ಲಿದ್ದು ಪೂಜಾ ಚಟುವಟಿಕೆಗಳು ನೆರವೇರುತ್ತವೆ.

ಮಾತಂಗಿ ದೇವತೆಯು ಮಾದಿಗ ಸಮುದಾಯದ ಪ್ರಮುಖ ದೇವತೆಯಾಗಿದ್ದಾಳೆ. ಈ ಮಾತಂಗಿಯ ಪ್ರತಿರೂಪವೇ ಕರಿಬಾನಿಯಾಗಿದೆ. ಈ ಮಾತಂಗಿಯ ಬಗ್ಗೆ ಹಲವಾರು ಕಥೆಗಳನ್ನು ಕಾಣಬಹುದಾಗಿದೆ. " ಯಲ್ಲಮ್ಮ ಸಂಕಷ್ಟದಲ್ಲಿದ್ದಾಗ ಮಾತಂಗಿ ಸಹಾಯ ಮಾಡುತ್ತಾಳೆ. ಸವದತ್ತಿಯಲ್ಲಿ ಒಬ್ಬ ಶ್ರೀಮಂತ ಒಕ್ಕಲಿಗನಿದ್ದ. ಒಂದು ವರುಷ ಭೀಕರ ಬರಗಾಲ ಬಂದಿತು. ಜನ ಕೂಳು ಕೂಳು ಎಂದು ಗೋಳಾಡುವಾಗ ಆ ಶ್ರೀಮಂತ ಮಳೆ ತರಿಸಿ ಬೆಳೆ ಬರುವಂತೆ ಮಾಡಿದರೆ ಒಂದು ಪಡಿ ಜೋಳ ಯಲ್ಲಮ್ಮನಿಗೆ ಸಲ್ಲಿಸುವೆನು" ಎಂದು ಹರಕೆ ಹೊತ್ತನು. ಯಲ್ಲಮ್ಮನ ದಯೆಯಿಂದ ಮಳೆ ಬಂದಿತು. ಬೆಳೆ ಸಮೃದ್ಧವಾಗಿ ಆಯಿತು. ಆದರೆ ಆ ರೈತ ಪಡಿ ಜೋಳ ಕೊಡಲೇ ಇಲ್ಲ. ಅವನನ್ನು ಪರೀಕ್ಷಿಸಲು ಯಲ್ಲಮ್ಮ ಸಾಮಾನ್ಯ ವೇಷ ಧರಿಸಿ ಅವನ ಕಣಕ್ಕೆ ಹೋಗಿ ಬಿಕ್ಷೆ ಬೇಡಿದರೆ ರೈತ ನೀಡಲಿಲ್ಲ, ನೀಡುವುದರ ಬದಲಾಗಿ ಯಲ್ಲಮ್ಮನನ್ನು ಹೊಡೆದೋಡಿಸಿದನು. ಅಲ್ಲಿಂದ ಯಲ್ಲಮ್ಮ ಅವನ ಹೊಲಕ್ಕೆ ನುಗ್ಗಿ ನಾಲ್ಕು ಬದನೆಕಾಯಿ, ಉಳ್ಳಾಗಡ್ಡಿ, ಹಸಿಮೆಣಸಿನಕಾಯಿ ಹರಿದುಕೊಂಡಳು.

ಯಲ್ಲಮ್ಮ ಹೊಲದಲ್ಲಿ ನುಗ್ಗಿ ಕಳುವು ಮಾಡುವುದನ್ನು ರೈತ ನೋಡಿದ. ಆಕೆಯನ್ನು ಕಳ್ಳಿ ಎಂದು ತಿಳಿದು ಕಳ್ಳಿ ಕಳ್ಳಿ ಎಂದು ಬೆನ್ನು ಹತ್ತಿದ. ಆದರೆ ಯಲ್ಲಮ್ಮ ಓಡೋಡುತ್ತಾ ಸಮೀಪದಲ್ಲಿದ್ದ ಮಾದರ ಮಾತಂಗಿಯ ಮನೆ ಹೊಕ್ಕು ತಾನಿಲ್ಲಿರುವ ಸುದ್ದಿ ತಿಳಿಸಬಾರದೆಂದು ಹೇಳಿದಳು. ಆ ರೈತ ಓಡುತ್ತಾ ಬಂದು ಆ ಕಳ್ಳಿಯನ್ನು ಎಲ್ಲಿ ಬಚ್ಚಿಟ್ಟಿರುವೆ ಎಂದು ಮಾತಂಗಿಯನ್ನು ಹೊಡೆಯತೊಡಗಿದಾಗ ಯಲ್ಲಮ್ಮ ಹೊರಗೆ ಬಂದು "ನಿರಪರಾಧಿಗೆ ಹೊಡೆದಂಥ ನಿನಗೆ ರೋಗಬರಲಿ ಎಂದು ಶಾಪಕೊಟ್ಟಳು. ತನಗೆ ಆಶ್ರಯಕೊಟ್ಟು ಕಷ್ಟಕ್ಕೀಡಾದ ಮಾತಂಗಿಗೆ ನನ್ನ ಪೂಜೆಗೆ ಮೊದಲು ನಿನ್ನ ಪೂಜೆ ನಡೆಯಲಿ ಎಂದು ಆಶೀರ್ವಾದ ಮಾಡಿದಳು."(ಡಾ. ಮಂಜುನಾಥ ಬೇವಿನಕಟ್ಟಿ) ಎಂಬ ಐತಿಹ್ಯವನ್ನು ನೋಡಬಹುದಾಗಿದೆ.

ಈಗಲೂ ಹ್ಯಾರಡಾದಲ್ಲಿ ಪಡಲಿಗೆ ತುಂಬುವ ಸಮಯದಲ್ಲಿ ಮೊದಲು ಮಾತಂಗಿಗೆ ಎಡೆಯನ್ನು ಕೊಡುವರು. ಆಕೆಯ ಪೂಜೆಯನ್ನು ಮಾಡುವರು. ಯಲ್ಲಮ್ಮನ ಜೋಗತಿಯರು ತಮ್ಮ ಪಡಲಿಗೆಯಲ್ಲಿ ಯಲ್ಲಮ್ಮನ ಇಷ್ಟಾರ್ಥಗಳಾದ ಬದನೆಕಾಯಿ, ಉಳ್ಳಾಗಡ್ಡಿ, ಮೆಣಸಿನಕಾಯಿಗಳನ್ನು ಇಡುವುದನ್ನು ನಾವುಗಳು ಕಾಣಬಹುದಾಗಿದೆ.

೬.೨೫ ಅಲ್ಲಾಸ್ವಾಮಿ ಮಸೀದಿ

ಈ ಮಸೀದಿಯು ಇತ್ತೀಚಿಗೆ ನಿರ್ಮಾಣವಾಗಿರುವಂತಹದ್ದು. ೧೫ ಅಡಿ ಉದ್ದ, ೧೭ ಅಡಿ ಅಗಲದ ವ್ಯಾಪ್ತಿಯನ್ನು ಹೊಂದಿದೆ. ಮಸೀದಿಯ ಒಳಗಡೆ ಗದ್ದುಗೆಯು ೩.೫ ಅಡಿ ಅಗಲ, ೩ ಅಡಿ ಉದ್ದವನ್ನು ಹೊಂದಿದೆ. ಇಲ್ಲಿ ಅಲ್ಲಾಸ್ವಾಮಿಯ ಡೋಲಿ ಇದ್ದು, ಈ ಡೋಲಿಯು ೩ ಅಡಿ ಎತ್ತರ ೪ ಅಡಿ ಅಗಲವನ್ನು ಹೊಂದಿದ್ದು, ಮಸೀದಿಯ ಮುಂದೆ ಅಲೆಗುಣಿಯನ್ನು ತೋಡಲಾಗಿದ್ದು, ೫ ಅಡಿ ಆಳವನ್ನು ಹೊಂದಿ ಸುತ್ತಳತೆ ೧೧ ಅಡಿ ಇದೆ.

ಇಲ್ಲಿ ವಿಶೇಷವಾಗಿ ಮುಸ್ಲಿಂ, ಪಿಂಜಾರ ಧರ್ಮಿಯರು ನಮಾಜ್ ಮಾಡುವುದನ್ನು ಕಾಣಬಹುದಾಗಿದೆ. ವಿಶೇಷ ಹಬ್ಬವಾಗಿ ಮೊಹರಂ ಹಬ್ಬವನ್ನು ಆಚರಿಸುವರು. ಮೊಹರಂ ಹಬ್ಬವನ್ನು ಗ್ರಾಮದ ಎಲ್ಲಾ ಸಮುದಾಯದವರು ಕೂಡಿಕೊಂಡು ವಿಜೃಂಭಣೆಯಿಂದ ಆಚರಿಸುವರು.

೬.೨೬ ಕೆಂಗೇರಿ ಮಲಿಯಮ್ಮ

ಗ್ರಾಮದ ಅನತಿ ದೂರದಲ್ಲಿ ಹೊಸಕೆರೆ ಎಂಬ ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯ ದಡದ ಮೇಲೆ ಬೃಹದಾಕಾರದ ಬೇವಿನಮರವಿದ್ದು, ಅದರ ಕೆಳಗೆ ಒಂದು ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ಗದ್ದುಗೆಯ ಮೇಲೆ ಹಲವಾರು ದುಂಡನೆಯ ಕಲ್ಲುಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಕಲ್ಲುಗಳನ್ನು ಹ್ಯಾರಡಾದ ಜನಪದರು ಕೆಂಗೇರಿ ಮಲಿಯಮ್ಮ ಎಂದು ಈಗಲೂ ಆರಾಧಿಸುವರು. ಪ್ರತಿ ವರ್ಷ ಪರುವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುವರು. ಹೆಚ್ಚಾಗಿ ಈ ದೇವತೆಗೆ ಮಾಂಸದ ಆಹಾರವನ್ನು ನೈವೇದ್ಯವಾಗಿ ಕೊಡುವರು.

ಕೆರೆಯ ಏರಿಯ ಮೇಲೆ ಈಕೆಯನ್ನು ಪ್ರತಿಷ್ಠಾಪಿಸುವುದರಿಂದ ಕೆಂಗೇರಿ ಮಲಿಯಮ್ಮ ಎಂದು ಕರೆಯುವರೆಂದು ಸ್ಥಳೀಯ ಜನಪದರು ಹೇಳುವುದುಂಟು .ಈಕೆಯು ಸಹ ಗ್ರಾಮ ದೇವತೆಯಾದ ಮಲಿಯಮ್ಮನ ಸಹೋದರಿ ಎಂದು ಇಲ್ಲಿಯ ಜನಪದರು ನಂಬಿದ್ದಾರೆ. ಗ್ರಾಮದ ಎಲ್ಲಾ ಸಮುದಾಯದವರು ಈ ದೈವವನ್ನು ಆರಾಧಿಸುವರು. ಈ ದೈವಕ್ಕೆ ಇಲ್ಲಿಯ ಜನಪದರು ಸಸ್ಯಾಹಾರ ಹಾಗೂ ಮಾಂಸಾಹಾರ ನೈವೇದ್ಯವನ್ನು ಕೊಡುವರು.

೬.೨೭ ಕಟ್ಟೆಪ್ಪನ ಗದ್ದುಗೆ

ಈ ಗದ್ದುಗೆಯು ಮಲಿಯಮ್ಮ ದೇವಸ್ಥಾನದಿಂದ ಅನತಿ ದೂರದಲ್ಲಿದೆ. ಹ್ಯಾರಡಾ ಹಾಗೂ ಅರಸನಾಳು ಗ್ರಾಮದ ಗಡಿರೇಖೆಯಾಗಿದೆ. ಈ ಪ್ರದೇಶವು ಸಂಪೂರ್ಣವಾಗಿ ಕಾಡಿನಿಂದ ಆವೃತವಾಗಿದೆ. ಈ ಗದ್ದುಗೆಯು ೩ ಅಡಿ ಎತ್ತರವನ್ನು ಹೊಂದಿದ್ದು, ಇದರ ಬಗ್ಗೆ ಜನಪದರು ಒಂದು ಕಥೆಯನ್ನೇ ಹೇಳುವರು. ಕಟ್ಟೆಪ್ಪ ಎಂಬುವನು ಅರಸನಾಳು ಗ್ರಾಮದ ವ್ಯಕ್ತಿ, ಒಮ್ಮೆ ಹ್ಯಾರಡಾದಲ್ಲಿ ಮಲಿಯಮ್ಮನ ಜಾತ್ರೆ ನಡೆದಾಗ ದೇವಿಗೆ ಕೋಣವನ್ನು ಬಲಿಕೊಟ್ಟು ಅದರ ರಕ್ತದಿಂದ ಹುಲುಸನ್ನು ತಯಾರಿಸುತ್ತಾರೆ. ಈತನು ಆ ಹುಲಸನ್ನು ಕಳ್ಳತನದಿಂದ ತೆಗೆದುಕೊಂಡು ಹೋಗುತ್ತಿರುವಾಗ, ಈ ಸ್ಥಳದಲ್ಲಿ ತನ್ನ ಗ್ರಾಮದ ಗಡಿಯನ್ನು ಮುಟ್ಟುತ್ತಿರುವಾಗ ದೇವಿಯ ದಿವ್ಯ ದೃಷ್ಟಿಯಿಂದ ಗೊತ್ತಾಗಿ ಆತನು ಅಲ್ಲಿಯೇ ರಕ್ತಕಾರಿ ಸಾಯುವಂತೆ ಮಾಡಿದಳು ಎಂದು ಹ್ಯಾರಡಾದ ಜನಪದರು ಹೇಳುವರು. ಈ ಹುಲುಸನ್ನು ಬೇರೆ ಗ್ರಾಮದವರು ಯಾರು ಕೊಂಡೊಯ್ಯುವಂತಿಲ್ಲ. ಒಂದು ವೇಳೆ ಒಯ್ದರೆ ಗ್ರಾಮಕ್ಕೆ ಕೇಡುಗಾಲ ಬರುವುದು ಎಂಬ ನಂಬಿಕೆ. ಅದರಂತೆ ಕಟ್ಟೆಪ್ಪನು ಯಾರಿಗೂ ಗೊತ್ತಾಗದ ಹಾಗೆ ಹುಲುಸನ್ನು ತೆಗೆದುಕೊಂಡು ಇನ್ನೊಂದು ತನ್ನ ಗ್ರಾಮದ ಗಡಿರೇಖೆಯನ್ನು ತಲುಪುವಷ್ಟರಲ್ಲಿಯೇ ಮಲಿಯಮ್ಮನ ದಿವ್ಯ ದೃಷ್ಟಿಯಿಂದ ಕಟ್ಟೆಪ್ಪನು ಅಲ್ಲಿಯೇ ರಕ್ತವನ್ನು ಕಾರಿ ಸತ್ತನು. ಆದ್ದರಿಂದ ಅದರ ನೆನಪಿಗಾಗಿ ಈ ಗದ್ದುಗೆಯನ್ನು ನಿರ್ಮಿಸಲಾಗಿದೆ ಎಂದು ಗ್ರಾಮಸ್ಥರು ತಿಳಿಸುವರು.

ಮೇಲಿನ ಘಟನೆಯನ್ನು ಇಲ್ಲಿಯ ಜನಪದರು ವಿವರಿಸುವಾಗ ಗ್ರಾಮದೇವತೆಯಾದ ಮಲಿಯಮ್ಮಳು ದುಷ್ಟ ಸಂಹಾರಿಣಿ, ಗ್ರಾಮಕ್ಕೆ ಕೇಡುಗಾಲ ಬಾರದಂತೆ ನೋಡಿಕೊಳ್ಳುವ ದೇವತೆ ಎಂದು ನಂಬಿದ್ದಾರೆ. ಗ್ರಾಮದ ಹಿತ, ಅದರ ಶ್ರೇಯೋಭಿವೃದ್ಧಿ ಗ್ರಾಮ ದೇವತೆಯ ಕೈಯಲ್ಲಿಯೇ ಇದೆ, ಆದ್ದರಿಂದ, ಕಟ್ಟೆಪ್ಪನಂತಹ ದುಷ್ಟ ವ್ಯಕ್ತಿಗಳನ್ನು ದೇವಿ ಕ್ಷಮಿಸುವುದಿಲ್ಲಾ ಎಂಬ ಅಭಿಪ್ರಾಯವನ್ನು ಇಲ್ಲಿಯ ಜನಪದರು ಹೇಳುವರು.

೬.೨೮ ದಾಸನಹಳ್ಳಿ ಕೆರೆಯ ಒಡ್ಡವ್ವ

ಗ್ರಾಮದಿಂದ ಅನತಿ ದೂರದಲ್ಲಿ ದಾಸನಹಳ್ಳಿ ಕೆರೆ ಇದೆ. ಇದರ ದಡದಲ್ಲಿ ಒಡ್ಡವ್ವ ದೈವದ ಗದ್ದುಗೆಯನ್ನು ಪ್ರತಿಷ್ಠಾಪಿಸಲಾಗಿದೆ. ಗದ್ದುಗೆಯ ಮೇಲೆ ಹಲವಾರು ದುಂಡನೆಯ ಕಲ್ಲುಗಳನ್ನು ಪ್ರತಿಷ್ಠಾಪಿಸಿ ಬೃಹದಾಕಾರದ ಬೇವಿನಮರವನ್ನು ಹೊಂದಿದೆ. ಬೇವಿನಮರಕ್ಕೆ ಹಸಿರು ಬಳೆ, ಹಸಿರು

ಬಟ್ಟೆಯನ್ನು ಕಟ್ಟುವುದರ ಮೂಲಕ ತಮ್ಮ ಹರಕೆಯನ್ನು ಭಕ್ತರು ತೀರಿಸುವುದುಂಟು. ಸಾಮಾನ್ಯವಾಗಿ ಈ ದೇವತೆಗೆ ಮಾಂಸದ ಆಹಾರವನ್ನು ನೈವೇದ್ಯವಾಗಿ ಕೊಡುವುದುಂಟು.

ದಾಸನಹಳ್ಳಿ ಕೆರೆಯನ್ನು ನಿರ್ಮಿಸುವಾಗ ಒಡ್ಡು ಪದೇ ಪದೇ ಒಡೆಯುತ್ತಿತ್ತಂತೆ, ಆದ್ದರಿಂದ ಆ ಕೆರೆಯ ಒಡ್ಡಿನ ಮೇಲೆ ಈ ದೈವವನ್ನು ಪ್ರತಿಷ್ಠಾಪಿಸಿದ್ದು, ಈಕೆಯನ್ನು ಒಡ್ಡವ್ವ ಎಂದು ಕರೆದರು ಎಂಬ ಅಭಿಪ್ರಾಯವನ್ನು ಗ್ರಾಮದ ಜನಪದರಾದ ಬರಡಿ ಗುಡ್ಡಪ್ಪ ಅವರ ಅಭಿಪ್ರಾಯವಾಗಿದೆ. ಈ ದೈವವನ್ನು ಕೆರೆಯ ಪಕ್ಕದಲ್ಲಿ ಜಮೀನು ಇರುವ ರೈತರು ಪೂಜಿಸುವುದುಂಟು. ಜಮೀನಿನಲ್ಲಿ ಬೆಳೆಯು ಹುಲುಸಾಗಿ ಬಂದು ಕೆರೆಯು ನೀರಿನಿಂದ ತುಂಬುವಂತಾಗಲಿ ಎಂಬ ಹರಕೆಯನ್ನು ಹೊರುವರು. ಈ ದೈವಕ್ಕೆ ವಿಶೇಷವಾಗಿ ಕೋಳಿಯ ಮಾಂಸವನ್ನು ಅರ್ಪಿಸುವರು. ಬೇವಿನ ಮರಕ್ಕೆ ಕೋಳಿಯ ಕಾಲು ಹಾಗೂ ತಲೆಯನ್ನು ನೇತಾಡುವಂತೆ ಕಟ್ಟುವರು. ಹೀಗೆ ಈ ದೈವವನ್ನು ವಿಶಿಷ್ಟವಾಗಿ ಆರಾಧಿಸುವುದುಂಟು.

೬.೨೯ ಲಿಂಗನಾಯಕನಹಳ್ಳಿ ಮಠದ ಗರ್ಭಗುಡಿ

ಈ ಗರ್ಭಗುಡಿಯು ಗ್ರಾಮದಿಂದ ಅನತಿ ದೂರದಲ್ಲಿರುವ ಗರ್ಭಗುಡಿ ಎಂಬ ಕೆರೆಯ ಹತ್ತಿರವಿದೆ. ಇದು ಸಂಪೂರ್ಣವಾಗಿ ನಾಶವಾಗಿದೆ. ಗೋಡೆಯ ಕುರುಹುಗಳನ್ನು ಮಾತ್ರ ಕಾಣಬಹುದಾಗಿದೆ. ಈ ಗರ್ಭಗುಡಿಯಲ್ಲಿ ಹದಿನೆಂಟನೇಯ ಶತಮಾನದ ಪರಮ ಶಿವಾನುಭಾವಿಗಳೂ, ಮಹಾ ತಪಸ್ವಿಗಳೂ ಆದ ಲಿಂಗನಾಯಕನಹಳ್ಳಿಯ ಪರಮ ಜಂಗಮ ಶ್ರೀ ಚನ್ನವೀರ ಮಹಾಸ್ವಾಮಿಗಳು ಸ್ವಲ್ಪ ದಿನ ಇಲ್ಲಿ ವಾಸವಾಗಿದ್ದರು ಎಂದು ಗ್ರಾಮಸ್ಥರು ಹೇಳಿದ್ದಾರೆ.

ಚನ್ನವೀರ ಮಹಾಸ್ವಾಮಿಗಳ ಪರಿಚಯ : ಹರಪನಹಳ್ಳಿ ನಗರದ ಸಮೀಪ ಈಗಲೂ ಗೋಸಳ್ಳಿ ಬೆಟ್ಟವನ್ನು ಕಾಣಬಹುದು. ಇದನ್ನು ಹಿಂದೆ ಹಾಲವರ್ತಿ ಬೆಟ್ಟ ಎಂದು ಕರೆಯುತ್ತಿದ್ದರು. ಈ ಬೆಟ್ಟದಲ್ಲಿ ಚನ್ನವೀರ ಮಹಾಸ್ವಾಮಿಗಳು ತಪಸ್ಸನ್ನು ಮಾಡಿದ್ದರಿಂದ ಅವರಿಗೆ ಈಗಲೂ ಹಾಲವರ್ತಿ ಶಿವಾಚಾರ್ಯರು ಎಂದು ಕರೆಯುತ್ತಾರೆ. ಹೀಗೆ ಹಾಲವರ್ತಿ ಶಿವಾಚಾರ್ಯರು ಬೆಟ್ಟದಲ್ಲಿ ತಪಸ್ಸನ್ನು ಮಾಡುತ್ತಿರುವಾಗ ಆ ಬೆಟ್ಟದಲ್ಲಿರುವ ಕ್ರೂರ ಪ್ರಾಣಿಗಳೂ ಸಹ ತಮ್ಮ ಮೂಲ ಗುಣವಾದ ಕ್ರೂರತ್ವವನ್ನು ಬಿಟ್ಟು, ವೈರತ್ವವನ್ನು ಮರೆತು ಅನ್ಯೋನ್ಯವಾಗಿದ್ದವು. ಒಮ್ಮೆ ಹರಪುರದ ನಾಯಕನಾದ ಸೋಮಶೇಖರನು ತನ್ನ ಪತ್ನಿ ಬಸವಮ್ಮಳೊಂದಿಗೆ ಭೇಟಿಮಾಡಲು ಈ ಬೆಟ್ಟಕ್ಕೆ ಬಂದನು. ಆಗ ಚನ್ನವೀರಸ್ವಾಮಿಗಳು ತಪಸ್ಸನ್ನು ಮಾಡುತ್ತಿರುವುದನ್ನು ಕಾಣುವರು. ಆಗ ಶ್ರೀಗಳು ದಂಪತಿಗಳಿಗೆ ತತ್ತ್ವೋಪದೇಶವನ್ನು ಮಾಡಿದರು. ಅಂದಿನಿಂದ ರಾಜ ಸೋಮಶೇಖರನು ಸಾತ್ವಿಕವಾದ ಜೀವನವನ್ನು ಅಳವಡಿಸಿಕೊಂಡು ರಾಜ್ಯ ಭಾರವನ್ನು ಮಾಡತೊಡಗಿದನು. ಆಗ ರಾಜನು ಚನ್ನವೀರಸ್ವಾಮಿಗಳಿಂದ ಲಿಂಗ ದೀಕ್ಷೆಯನ್ನು ತೆಗೆದುಕೊಂಡನು.

"ಹರಪುರದ ನಾಯಕನ ವಂಶದಿ
ಬರುವ ಪಾಳೆಯಗಾರನಾಗಿಹ

ಪರಮ ನೀತಿಯ ಸೋಮಶೇಖರ ಲಿಂಗ ಧರಿಸಿದನು ॥

ಶ್ರೀ ಶಿಖಾಮಣಿ ಶ್ರೇಣಿ ತತ್ವಾ
ಕಾಶ ಪ್ರಭು ಶಿವಯೋಗಿ ಪಂಥ ಪ್ರ
ಕಾಶ ಪೂರ್ಣ ವಿಚಾರ ವಿವರಣ ಸಂಗ ಸಂಕಿರಣ ॥

ಭೂಷಣತೆಗೊಂಡಿರುತ ಮನಕೆ ವಿ
ಭೂಷಣತೆ ತಂದಿಡುತ ಷಟ್ ಸ್ಥಲ
ಘೋಷಿಸುವ ಸದ್ಬೋಧ ಸಂಗಮಕೆನ್ನೆ ಶರಣಾರ್ಥಿ ॥

ತತ್ವ ತೇಜ ಪ್ರಸಾದ ಪೂರ್ಣರ
ತತ್ವ ದುಪದೇಶವನು ನೀಡುತ
ಸತ್ವ ದಾಚಾರೊಳಗೆಯಿರಿಸಲು ಶರಣ ಶರಣದನು ॥
ಸತ್ವ ಮೂರುತಿ ಬಗೆ ಬಗೆಯ ಪ್ರ
ಭುತ್ವ ದನುಭವ ಬೀರಿ ಸಾಧನ ತತ್ವ ಚಿಜ್ಯೋತಿಯಲಿ ಚಿರವಿಟ್ಟಂಥ ಶಿವಯೋಗಿ ॥

ಸೊಂಪು ಸಂಸ್ಕೃತಿ ಪೂರ್ಣ ಸಂಪದ
ಹಂಪಿ ತಂಪನುಗೂಡಿ ಚನ್ನನ
ಕೆಂಪು ಹರಡುತ ಭೂವಲಯ ಜಡ ಚೇಟನೆಲ್ಲದಡೆ ॥

ತಂಪು ಮಧುರತೆ ಸಾರಿ ಮುಂದೆ ಚಿ
ದಂಪು ಹರಪನಹಳ್ಳಿ ಸನಿಹ ದೊ
ಳಿಂಪು ಸ್ಥಾನದು ಹಾಲವರ್ತಿಯರಿರ್ದು ಗೌಪ್ಯದಲಿ ॥

ತಿಳಿಯ ನೀರಿನ ಹೊಂಡವಿಲ್ಲಿರೆ
ಸೆಲೆಯು ಹಾಲಿನ ರುಚಿಯ ಹರ್ಷದ
ನೆಲೆಯ ಕಾರಣ ಹಾಲವರ್ತಿಯು ಸಾರ್ಥಕದ ನಾಮ॥

ಬಲದು ಸ್ವಾಮಿಯ ಸ್ಪರ್ಶ ಸುಖದಲಿ
ಸೆಳೆದು ಜನಮನ ಚರೆತದಂದದಿ
ಸುಳಿದು ಹೃದಯದಿ ಹೊಳೆದು ಬೆಳಗುತ ಗುಡ್ಡ ಭೂ ಪ್ರರವು ॥

ಒಳಗೆ ನೋಡಿರಲಲ್ಲಿ ತಪಘನ
ಕಳೆವು ಬೆಳಗಿರಲಲ್ಲಿ ಹೊರಗಣ
ತಲ ಮೃಗಾಂಗಣ ವೈರ ಭಾವನೆಯಿರದ ಪರಿಸರಣ ॥

ತಿಳಿಸುತಿದುವು ಪತಂಜಲಿಯ ನಿಜ
ದೊಲಿಮೆ ಸೂತ್ರದು ಚಿತ್ರ ಸಾಕ್ಷಿಯು
ಫಲವಹಿಂಸಾ ಪ್ರಭೆಯ ಸನ್ನಿಧಿ ವೈರರಹಿತವನು ॥

ಆತ್ಮ ಸರಸ ವಿಭೂತಿ ಮಯನಿಗೆ
ಯಾತ್ಮರಸಿಕನಿಗೆತ್ತರಾಗದು
ರಾತ್ಮ ರಂತಿಹ ಕ್ರೋಧವೆತ್ತದು ದ್ವಂದ್ವ ಪರಿಹರದ ॥

ಆತ್ಮ ಸಾಕ್ಷಾತ್ಕಾರ ಯೋಗಿಯ
ಸ್ವಾತ್ಮಾದನು ನಿರ್ವೈರಭಾವ ಜಡಾತ್ಮ ಹಿಂಸಕ ಪ್ರಾಣಿಯೊಳು ಸಹ ಪ್ರತಿಭೆ ಪಸರಿಸುತ(ಶ್ರೀ ಮ.ನಿ.ಪ್ರ ನಿರುಪರಾದಿ ಸ್ವಾಮಿಗಳು, ಅಡವಿ ಸಿದ್ದೇಶ್ವರ ಮಠ, ಮರೆಗುದ್ದಿ: ೧೯೯೧: ೧೭)

ಹೀಗೆ ಹಾಲವರ್ತಿ ಶಿವಾಚಾರ್ಯರ ಪ್ರಭಾವದಿಂದ ಇಡೀ ಬೆಟ್ಟದಲ್ಲಿಯ ಕ್ರೂರ ಮೃಗಗಳು ವೈರತ್ವವನ್ನು ಮರೆತು ಅನ್ಯೋನ್ಯವಾಗಿದ್ದವು. ಅಲ್ಲಿಂದ ಶಿವಾಚಾರ್ಯರು ಲೋಕ ಸಂಚಾರಿಯಾಗಿ ಹರಪನಹಳ್ಳಿಯ ಹತ್ತಿರವಿರುವ ಕಲ್ಲಳ್ಳಿ(ಶಿಲಾ ಪಳ್ಳಿ)ಗೆ ಬಂದರು. ಅಲ್ಲಿರುವ ಪತ್ರಿವನದಲ್ಲಿ ಅನುಷ್ಠಾನವನ್ನು ಕೈಗೊಂಡರು. ಆ ಪತ್ರಿವನದ ಗುಹೆಯಲ್ಲಿ ಶಿವಾಚಾರ್ಯರು 'ಓಂ' ಎನ್ನುವ ಮಂತ್ರದೊಂದಿಗೆ ತಪಸ್ಸನ್ನು ಮಾಡತೊಡಗಿದರು. ಗವಿಯಿಂದ ಓಂ ಎಂಬ ಧ್ವನಿಯು ಬರುತ್ತಿರುವುದನ್ನು ಕಲ್ಲಹಳ್ಳಿಯ ಗೋಪಾಲಕರು ಗಮನಿಸಿದರು. ಇದನ್ನು ಗ್ರಾಮಸ್ಥರಿಗೂ ತಿಳಿಸಿದರು. ನಂತರ ಗ್ರಾಮಸ್ಥರೆಲ್ಲರೂ ಕೂಡಿಕೊಂಡು ಶಿವಾಚಾರ್ಯರ ಹತ್ತಿರ ಹೋಗಿ ಬಿನ್ನಹದ ಮೇರೆಗೆ ಗ್ರಾಮಕ್ಕೆ ಆಹ್ವಾನಿಸಿದರು. ಅಲ್ಲಿ ಶಿವಾಚಾರ್ಯರು ಆ ಗ್ರಾಮಸ್ಥರಿಗೆ ತತ್ವೋಪದೇಶವನ್ನು ಮಾಡಿದರು.

ನಂತರದಲ್ಲಿ ಅಲ್ಲಿಂದ ಶಿವಾಚಾರ್ಯರು ಹ್ಯಾರಡಾದ ಅಡವಿಯಲ್ಲಿರುವ ಈಗಿನ ಗರ್ಭಗುಡಿಯಲ್ಲಿ ಬಂದರು. ಅಲ್ಲಿ ಅವರು ತಪಸ್ಸನ್ನು ಗೈದರು. ಸ್ವಲ್ಪ ದಿನ ಅವರು ಅಲ್ಲೆ ಇದ್ದರು. ಈಗಲೂ ಸಹ ಹ್ಯಾರಡಾ ಗ್ರಾಮದಲ್ಲಿ ಊರಿನ ಮಧ್ಯಭಾಗದ 'ಮಠ' ಎಂದು ಕರೆಯುವ ಜಾಗವಿದೆ. ಆದರೆ ಆ ಜಾಗದಲ್ಲಿ ಜನ ವಸತಿಯನ್ನು ಕಾಣುತ್ತೇವೆ. ಈ ಮಠಕ್ಕೆ ಸಂಬಂಧಿಸಿದಂತೆ ಜಮೀನು ಇದೆ. ಈಗಲೂ ಈ ಜಮೀನಿಗೆ 'ಮಠದ ಹೊಲ' ಎಂದು ಕರೆಯುವುದುಂಟು. ಸ್ವಲ್ಪ ದಿನ ಹ್ಯಾರಡಾದಲ್ಲಿ ಇದ್ದು ನಂತರ ಹೊಳಲಿನ ಮಾರ್ಗವಾಗಿ ಹಾಲವರ್ತಿ ಶಿವಾಚಾರ್ಯರು ಈಗಿನ ಲಿಂಗನಾಯಕನಹಳ್ಳಿಗೆ ಬಂದು ಅಲ್ಲಿಯೇ ತಮ್ಮ ನೆಲೆಯನ್ನು ಕಂಡುಕೊಳ್ಳುವರು. ಇಲ್ಲಿ ಮಠವನ್ನು ಸ್ಥಾಪಿಸಿ ಇವರ ಆಶ್ರಮದಲ್ಲಿ ಒಂದು ಗುರುಕುಲವನ್ನು ಸ್ಥಾಪಿಸಿದರು. ಈ ಗುರುಕುಲದಲ್ಲಿ ಮೈಲಾರ ಬಸವಲಿಂಗ ಶರಣರು, ಮುಳಗುಂದದ ಮಹಾಂತ ಶಿವಯೋಗಿಗಳು ಅಭ್ಯಾಸ ಮಾಡಿ ನಾಡಿನ ಹೆಸರಾಂತ ವ್ಯಕ್ತಿಗಳಾಗಿದ್ದಾರೆ.

ಮೈಲಾರ ಬಸವಲಿಂಗ ಶರಣರು ಗುರುವೆ ಕೃಪೆಯಾಗು ಎನ್ನುವಂತಹ 'ಗುರುಕರುಣ ತ್ರಿವಿಧಿ' ಕನ್ನಡ ಸಾಹಿತ್ಯದಲ್ಲಿ ಹೊಸ ಶಕೆಯನ್ನುಂಟು ಮಾಡುತ್ತವೆ. ಇದರಲ್ಲಿ ಬಸವಲಿಂಗ ಶರಣರು ತಮ್ಮ ಗುರುಗಳಾದ ಚನ್ನವೀರ ಮಹಾಸ್ವಾಮಿಗಳನ್ನು ಹಾಡಿ ಹೊಗಳಿದ್ದಾರೆ.

'ಹಲವು ಮಾತೇನು ನೀನೊಲಿದು ಪಾದವನಿಟ್ಟ
ನೆಲವೆ ಸುಕ್ಷೇತ್ರ ಜಲವೆ ಪಾವನ ತೀರ್ಥ
ಸುಲಭ ಶ್ರೀ ಗುರುವೇ ಕೃಪೆಯಾಗು

ಶ್ರೀ ಗುರುವೆ ಸತ್ ಕ್ರಿಯ ಯಾಗರವೆ ಸುಜ್ಞಾನ
ಸಾಗರವೇ ಎನ್ನ ಮತಿಗೆ ಮಂಗಳವಿತ್ತು
ರಾಗದಿಂ ಬೇಗ ಕೃಪೆಯಾಗು

ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋ
ಹರವೆ ನಿಜಭಕ್ತಿ ಜ್ಞಾನ ವೈರಾಗ್ಯಮಂ
ದಿರವೆ ಮದ್ಗುರುವೆ ಕೃಪೆಯಾಗು

ದೇಶಿಕನೆ ಅನು ಭಾವೋಲ್ಲಾಸಕನೆ ಸಂಕಲ್ಪ
ನಾಶಕನೇ ಆಣವಾದಿ ತ್ರೈಮಲದೊಳ್ ನಿ
ರಾಶಕನೇ ಎನಗೆ ಕೃಪೆಯಾಗು

ಕಾರ್ಯಕಾರಣ ಭಕ್ತಿ ತೂರ್ಯ ತಾಮಸದ ಚಿತ್
ಸೂರ್ಯ ಎಡರಿಂಗೆ ಧೈರ್ಯವಾಗಹ ಗುರು
ವರ್ಯ ನಿನೆನಗೆ ಕೃಪೆಯಾಗು

ಸಾಧ್ಯ ಸದ್ ಭಕ್ತರ್ಗೆ ವೇಧ್ಯ ಲಿಂಗೈಕ್ಯರ್ಗೆ
ಬೇದ್ಯ ಸತ್ ಪ್ರಮಥಗಣನಿಕರವೆಲ್ಲಕಾ-
ರಾಧ್ಯ ನೀನನಗೆ ಕೃಪೆಯಾಗು(ಸಂ: ಡಾ. ಎಸ್. ಶಿವಾನಂದ : ೨೦೧೨ : ೪೪).

ಹೀಗೆ ತಮ್ಮ ಗುರುಗಳನ್ನು ತಮ್ಮ 'ಗುರುಕರಣ ತ್ರವಿಧಿ'ಯಲ್ಲಿ ಹಾಡಿ ಹೊಗಳಿದ್ದಾರೆ. ಬಸವಲಿಂಗ ಶರಣರಲ್ಲದೇ ಬನ್ನಿಮಟ್ಟಿ ಚನ್ನಪ್ಪ, ಹೊಳಲಿನ ಚನ್ನಪ್ಪ ರಾಚೋತೇಶ, ಶಾಂತ ವೀರೇಶ, ಯರನಾಳದ ಬಾಲಲೀಲಾ ಮಹಾಂತರು ಹೆಸರಾಂತ ಶಿಷ್ಯ ಪರಂಪರೆಯಾಗಿದೆ.

೬.೩೦ ಬತ್ತಿಕಟ್ಟಿಸರ ಹನುಮಂತ

ಹೊಳಲಿಗೆ ಹೋಗುವ ಮಾರ್ಗದಲ್ಲಿ ಬತ್ತಿಕಟ್ಟಿ ಸರ ಬರುತ್ತದೆ. ಅಲ್ಲಿ ಈ ದೈವವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಮೂಲ ಮೂರ್ತಿಯು ನಡುವಿನಹಳ್ಳಿಯ ಕೊಟ್ರೇಶಪ್ಪ ಅವರ ಹೊಲದಲ್ಲಿ

ಈಗಲೂ ಇದೆ. ಇದು ಎರಡು ಅಡಿ ಅಗಲದ ೪ ಅಡಿ ಎತ್ತರದ ಮೂರ್ತಿಯನ್ನು ಹೊಂದಿದೆ. ಅದರ ತದ್ರೂಪಿ ಮೂರ್ತಿಯನ್ನು ಕೆತ್ತನೆ ಮಾಡಿ ಬತ್ತಿಕಟ್ಟೆ ಸರದಲ್ಲಿ ಈ ದೇವರನ್ನು ಪ್ರತಿಷ್ಠಾಪಿಸಲಾಗಿದೆ.

ಈ ದೈವವನ್ನು ಎಲ್ಲಾ ಸಮುದಾಯದವರು ಪೂಜಿಸುವುದುಂಟು. ವಿಶೇಷವಾಗಿ ಶನಿವಾರ ದಿನದಲ್ಲಿ ವಿಶೇಷವಾದ ಪೂಜೆ ನಡೆಯುತ್ತದೆ. ಹೂವು, ಹಣ್ಣು, ಕಾಯಿ, ಹಾಗೂ ವಿವಿಧ ರೀತಿಯ ಖಾದ್ಯಗಳನ್ನು ಸಮರ್ಪಿಸುವರು. ವರ್ಷಕ್ಕೊಮ್ಮೆ ಕಾರ್ತಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ದೈವವನ್ನು ಪ್ರತಿಷ್ಠಾಪಿಸಿದ ಸ್ಥಳದ ಅಕ್ಕಪಕ್ಕದಲ್ಲಿರುವ ರೈತರು ವಿಶೇಷವಾಗಿ ಆರಾಧಿಸವುದುಂಟು. ರೈತರೇ ತಮ್ಮ ಸ್ವಂತ ಹಣದಿಂದ ದೇವಾಲಯವನ್ನು ನಿರ್ಮಿಸಿದ್ದಾರೆ. ದಿನನಿತ್ಯವು ಈ ದೈವಕ್ಕೆ ಪೂಜೆಯನ್ನು ನೇರವೇರಿಸುವುದನ್ನು ಕಾಣಬಹುದಾಗಿದೆ.

೬.೩೧. ಅಳ್ಳಳ್ಳಿ ಚೌಡವ್ವ

ಈ ದೈವವು ಊರಿಂದ ಹೊರಗಿದೆ. ಬಹಳಷ್ಟು ಪುರಾತನವಾದ ದೈವವಾಗಿದೆ. ಗ್ರಾಮವು ಸ್ಥಿರಗೊಳ್ಳುವ ಸಮಯದಲ್ಲಿ ಈ ದೈವವನ್ನು ನಿರ್ಮಾಣ ಮಾಡಲಾಗಿದೆ. ಬೃಹದಾಕಾರದ ಆಲದ ಮರದ ಕೆಳಗೆ ಇದನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಇತ್ತೀಚಿಗೆ ಈ ದೈವವು ನೆಲಸಮವಾಗಿದೆ. ಅದರ ಕುರುಹುಗಳನ್ನು ಮಾತ್ರ ಕಾಣಬಹುದಾಗಿದೆ.

ಹ್ಯಾರಡಾ ಗ್ರಾಮದ ದೈವಗಳ ಅಧ್ಯಯನದ ಮಹತ್ವ: ಗ್ರಾಮೀಣ ಜನಪದರ ಜೀವನದಲ್ಲಿ ಗ್ರಾಮೀಣ ದೈವಗಳ ಅವಿನಾಭಾವ ಸಂಬಂಧವನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದ ಜನಪದ ದೈವಗಳು ಗ್ರಾಮಸ್ಥರ ಬದುಕಿನ ಭಾಗವಾಗಿವೆ. ಗ್ರಾಮದ ಪ್ರತಿಯೊಂದು ದೈವದ ಆಚರಣೆ, ಸಂಪ್ರದಾಯ, ದೈವಕ್ಕೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯವನ್ನು ಅವಲೋಕಿಸಿದಾಗ, ವಿವಿಧ ಸಮುದಾಯದ ಭಿನ್ನ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಬಹುದಾಗಿದೆ. ಗ್ರಾಮದ ಯಾವುದೇ ಜಾತ್ರೆ, ಉತ್ಸವವನ್ನು ಆಚರಿಸುವ ಸಂದರ್ಭದಲ್ಲಿ ವಿವಿಧ ಸಮುದಾಯದವರಿಗೆ ವಿವಿಧ ರೀತಿಯ ಜವಾಬ್ದಾರಿಯನ್ನು ವಹಿಸುವುದುಂಟು. ಇದರ ಮುಖೇನ ಸಾಮೂಹಿಕ ಐಕ್ಯತೆಯನ್ನು ಕಾಪಾಡಿಕೊಂಡು ಬರುವುದನ್ನು ನಾವಿಲ್ಲಿ ಗಮನಿಸಬಹುದಾದ ಸಂಗತಿಯಾಗಿದೆ. ಮಲಿಯಮ್ಮನ ಜಾತ್ರೆ ಸಮಯದಲ್ಲಿ ವಿವಿಧ ಸಮುದಾಯದವರು ಅಲ್ಲಿ ನಿರ್ವಹಿಸುವ ಪರಿಯು ಇದಕ್ಕೆ ಪುಷ್ಟಿಯನ್ನು ನೀಡುತ್ತವೆ.

ಒಂದು ನಿರ್ಧಿಷ್ಟ ವರ್ಗಕ್ಕೆ ಸೇರಿದ ದೈವದ ಆಚರಣೆ, ಐತಿಹ್ಯ ಕಥೆಯನ್ನು ಗಮನಿಸಿದಾಗ ಆ ವರ್ಗದ ಸಮಾಜದ ವಿವಿಧ ಮುಖಗಳನ್ನು ಕಾಣಬಹುದಾಗಿದೆ. ಅವರು ಸಮಾಜದಲ್ಲಿ ಅನುಭವಿಸಿದ ಸಂಕಟ, ನೋವು, ಬಡತನವನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿ ಶಿಷ್ಟ ದೇವತೆಗಳಿಗೆ ಪ್ರಾಮುಖ್ಯತೆ ಇಲ್ಲ. ಶಿಷ್ಟ ದೇವತೆಯನ್ನು ಆರಾಧಿಸುವ ವರ್ಗವೂ ಕಂಡುಬರುವುದಿಲ್ಲ. ಗ್ರಾಮೀಣ ದೈವಗಳನ್ನೇ ಅಚಲವಾಗಿ ನಂಬಿರುವ ಸಮುದಾಯಗಳನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ಇಂತಹ ವಿಶಿಷ್ಟ ರೀತಿಯ ದೈವಗಳ ಆಚರಣೆ ಅವಸಾನದತ್ತ ಸಾಗುತ್ತಿರುವುದು ಆತಂಕಕಾರಿ

ವಿಷಯವಾಗಿದೆ. ಆದ್ದರಿಂದ ಇಂತಹ ದೈವಗಳ ಆಚರಣೆ, ಪದ್ಧತಿಗಳನ್ನು ಸಂಗ್ರಹಿಸಿ ಅರ್ಥಪೂರ್ಣ ಚರ್ಚೆಗೆ ಒಳಪಡಿಸಿ, ಔಚಿತ್ಯ ಪೂರ್ಣವಾದ ಅಧ್ಯಯನವನ್ನು ಕೈಗೊಳ್ಳುವುದು ತುರ್ತಾದ ಕೆಲಸವಾಗಿದೆ. ಒಂದು ಕಾಲಘಟ್ಟದ ಒಂದು ಸಮುದಾಯದ ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿವಿಧ ಮಗ್ಗಲುಗಳನ್ನು ದೈವಗಳ ಮುಖೇನ ಅರ್ಥೈಸಿಕೊಳ್ಳಬಹುದಾಗಿದೆ. ದೈವಗಳ ಅಧ್ಯಯನದ ಮುಖಾಂತರ ವಿಪುಲವಾದ ಮೌಖಿಕ ಸಾಹಿತ್ಯದ ರಾಶಿಯನ್ನು ಅಧ್ಯಯನಕ್ಕೆ ಒಳಪಡಿಸಿ ಅದು ಶಿಷ್ಟ ಸಾಹಿತ್ಯದ ಬೆಳವಣಿಗೆಗೆ ಪ್ರೇರಕವಾಗುವ ಸಂಗತಿಗಳನ್ನು ಚರ್ಚೆಗೆ ಒಳಪಡಿಸಬಹುದಾಗಿದೆ. ಗ್ರಾಮವು ತೀವ್ರಗತಿಯ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತಿದೆ. ಕೈಗಾರಿಕೀಕರಣ, ನಗರೀಕರಣ, ವೈಜ್ಞಾನಿಕವಾಗಿ ಹೊಸ ಹೊಸ ಸಂಗತಿಗಳು ಜನರ ಚಿಂತನಾ ಕ್ರಮವನ್ನು ಹೊಸದೊಂದು ಹೊಸ್ತಿಲಿಗೆ ತಂದು ಬಿಟ್ಟಿದೆ. ಇಂತಹ ಆತಂಕವನ್ನು ದೂರ ಮಾಡಲು ಗ್ರಾಮದ ದೈವಗಳ ಅಧ್ಯಯನವು ಅಭ್ಯಾಸಯೋಗ್ಯವಾಗಿದೆ.

ಗ್ರಾಮದ ಜನರು ತಮ್ಮ ದುಃಖಗಳನ್ನು, ನೋವು-ನಲಿವುಗಳನ್ನು ತೋಡಿಕೊಳ್ಳುವುದು ದೈವಗಳ ಧಾರ್ಮಿಕ ಆಚರಣೆಗಳಲ್ಲಿ. ಆದ್ದರಿಂದ ಗ್ರಾಮೀಣ ಜನಪದರ ಮನೋಭಾವವನ್ನು ಅರಿಯಲು ಗ್ರಾಮೀಣ ದೈವಗಳ ಆಧ್ಯಯನ ಮಹತ್ವವಾಗಿದೆ. ಅಲ್ಲಾವುದ್ದೀನ್ ಪವಾಡ ಪುರುಷನ ಪವಾಡ ಸಂಬಂಧಿಗಳ ಬವಣೆಗಳನ್ನು ನೀಗಿಸಿ ಮಾರ್ಗ ಬೋಧನೆಯ ಅಂಶಗಳನ್ನು ಗಮನಿಸಬಹುದಾಗಿದೆ. ಜಂಡಾ ಕಟ್ಟೆಯ ಮೇಲೆ ಕುಳಿತು ಸಾಮಾನ್ಯ ಮಕ್ಕಳ ಖಾಯಿಲೆಗಳು, ದನಕರುಗಳಿಗೆ ಬರುವ ಖಾಯಿಲೆಗಳನ್ನು ನಿವಾರಿಸುವುದು ಗ್ರಾಮೀಣ ಜನರ ಚಿಂತನೆ. ಕ್ರಿಯೆಗಳು ದೈವದ ಸಾಕ್ಷಿಯಲ್ಲಿ ಮುಂದುವರೆದು ಸಮಸ್ಯೆಯ ನಿವಾರಣೆಯ ಒಂದು ಮಾರ್ಗವಾಗಿದೆ. ಹೀಗೆ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹ್ಯಾರಡ ದೈವಗಳ ಅಧ್ಯಯನ ಅತ್ಯಂತ ಮಹತ್ವದ್ದಾಗಿದೆ.

ಹ್ಯಾರಡಾ ಗ್ರಾಮವು ಹಲವಾರು ಧರ್ಮಿಯರ ಗ್ರಾಮವಾಗಿದೆ. ಗ್ರಾಮದಲ್ಲಿ ಶಿವನ ಆರಾಧಕರು, ಜೈನರು, ಮುಸ್ಲಿಂ, ಬ್ರಾಹ್ಮಣರು ಮತ್ತು ಕ್ರೈಸ್ತ ಸಮುದಾಯದವರನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಊರಿನ ಮೂಲ ನಿವಾಸಿಗಳು ಹಿಂದೂಗಳು. ಸುಮಾರು ೩೦೦ ವರ್ಷಗಳಿಂದೀಚೆಗೆ ಜೈನರು ಮೊಟ್ಟಮೊದಲು ವಲಸೆ ಬಂದವರಾಗಿದ್ದಾರೆ. ಗ್ರಾಮವು ಉದಯಿಸಿದ ಪ್ರಾರಂಭದಲ್ಲಿ ಹಿಂದೂಗಳ ಪಾತ್ರ ಬಹುಮುಖ್ಯವಾದುದು. ಗ್ರಾಮದಲ್ಲಿ ಸಂಗಮೇಶ್ವರ ದೇವಾಲಯವಿದ್ದು ಸಂಗಮೇಶ್ವರನು ಶಿವನ ಪ್ರತಿರೂಪವಾಗಿದ್ದು ಈ ದೈವವನ್ನು ಆರಾಧಿಸುವ ಜನರನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಗ್ರಾಮದ ಪ್ರಮುಖ ವೈಶಿಷ್ಟವೆಂದರೆ ಹಲವಾರು ಧರ್ಮಿಯರು ಇದ್ದರೂ ಒಂದೇ ಕುಟುಂಬದ ರೀತಿಯಲ್ಲಿ ಪರಸ್ಪರ ಸಹಬಾಳ್ವೆಯ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಜೈನ ಧರ್ಮಿಯರು ಮಹಾವೀರನ ತತ್ವ ಸಿದ್ಧಾಂತಗಳನ್ನು ಚಾಚೂತಪ್ಪದೇ ಪಾಲಿಸುತ್ತಿದ್ದಾರೆ. ಮುಸ್ಲಿಂರು ತಮ್ಮ ತತ್ವ ಸಿದ್ಧಾಂತಗಳನ್ನು ಪರಿಪಾಲಿಸುತ್ತಿದ್ದಾರೆ. ಜೈನ ಧರ್ಮಿಯರು ಮಹಾವೀರನ ಜಯಂತಿಯನ್ನು ಆಚರಿಸುವುದರ ಮೂಲಕ ಮಹಾವೀರನ ತತ್ವ ಸಿದ್ಧಾಂತಗಳನ್ನು ಪರಿಪಾಲಿಸುತ್ತಿದ್ದಾರೆ. ಗ್ರಾಮದಲ್ಲಿ

ಯಾವುದೆ ಆಚರಣೆ, ಹಬ್ಬ, ಜಾತ್ರೆಯನ್ನು ಎಲ್ಲಾ ಧರ್ಮಿಯರು ಕೂಡಿಕೊಂಡು ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಪದ್ದತಿ ಮೊದಲಿನಿಂದಲೂ ರೂಡಿಯಲ್ಲಿದೆ. ಮುಸ್ಲಿಂರ ಹಬ್ಬವಾದ ಮೊಹರಂನಲ್ಲಿ ಬಹುತೇಕ ಹಿಂದೂಗಳು ಸೇರಿ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುವ ಪದ್ದತಿ ಮೊದಲಿನಿಂದಲೂ ರೂಢಿಯಲ್ಲಿದೆ. ಅಲ್ಲಾಸ್ವಾಮಿಗೆ ಸಕ್ಕರೆಯನ್ನು ಸಮರ್ಪಿಸುವುದು, ಅಲೆಗುಣಿಗೆ ತಮ್ಮ ತಮ್ಮ ಶಕ್ತ್ಯಾನುಸಾರ ಉಪ್ಪನ್ನು ಸುರಿಯುವುದು ಮತ್ತು ಅಲೆಗುಣಿಗೆ ಕಟ್ಟಿಗೆಯನ್ನು ಆಹುತಿಕೊಡುವುದು ಬಹುತೇಕ ಹಿಂದೂಗಳೆ. ಹುಲಿಯ ವೇಷವನ್ನು ಧರಿಸಿ ಸುಮಾರು ೩ ದಿನಗಳ ಕಾಲ ಗ್ರಾಮದ ಪ್ರತಿಯೊಂದು ಮನೆಗಳಿಗೆ ತೆರಳಿ ಭಿಕ್ಷೆಯನ್ನು ಬೇಡುವುದು ಬಹುತೇಕ ಹಿಂದೂಗಳೆ.

ಹೀಗೆ ಪ್ರತಿಯೊಂದು ಧರ್ಮಿಯರೂ ಸೇರಿ ಅತ್ಯಂತ ಸಡಗರದಿಂದ ಹಬ್ಬವನ್ನು ಆಚರಿಸುವುದುಂಟು. ಹಿಂದೂಗಳ ಹಬ್ಬ, ಜಾತ್ರೆ ಅದರಲ್ಲೂ ವಿಶೇಷವಾಗಿ ಗ್ರಾಮ ದೇವತೆಯಾದ ಮಲಿಯಮ್ಮನ ಜಾತ್ರೆಯಲ್ಲಿ ಎಲ್ಲಾ ಧರ್ಮಿಯರು ಸೇರಿಕೊಂಡು ಅದರ ವಿಧಿ-ವಿಧಾನಗಳನ್ನು ನೆರವೇರಿಸುವ ಪದ್ದತಿ ಹ್ಯಾರಡ ಗ್ರಾಮದಲ್ಲಿ ಮೊದಲಿನಿಂದಲೂ ರೂಢಿಯಲ್ಲಿದೆ. ಬಸವೇಶ್ವರರ ಜಯಂತಿ ಪ್ರಯುಕ್ತ ನಡೆಯುವ ಅಗ್ನಿಪ್ರವೇಶದಲ್ಲಿ ಎಲ್ಲಾ ಧರ್ಮಿಯರೂ ಕೂಡಿಕೊಂಡು ಊರಿನ ತುಂಬೆಲ್ಲಾ ಬಸವೇಶ್ವರರ ಪ್ರತಿಮೆಯನ್ನು ಮೆರವಣಿಗೆ ಮೂಲಕ ಕೊಂಡೊಯ್ದು ಗ್ರಾಮದ ವಿವಿಧ ಕಲಾ ತಂಡಗಳು ಸೇರಿ ಬಹಳಷ್ಟು ಸಡಗರದಿಂದ ಆಚರಿಸುವ ಪದ್ದತಿ ಮೊದಲಿನಿಂದಲೂ ರೂಢಿಯಲ್ಲಿದೆ. ಆದರೆ ಇತ್ತೀಚಿಗೆ ನಾಗರೀಕತೆಯ ಪ್ರಬಾವದಿಂದ ಗ್ರಾಮದ ಕೆಲವು ಕುಟುಂಬಗಳು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಅಧ್ಯಾಯ-೭

ಹ್ಯಾರಡ ಗ್ರಾಮದ ಸಾಹಿತ್ಯ

೭.೧ ಜನಪದ ಸಾಹಿತ್ಯ

ಜಾನಪದವೆಂಬುದು ಕೇವಲ ಸಾಹಿತ್ಯವಲ್ಲ ಒಂದು ಜನಾಂಗದ, ಒಂದು ಪ್ರದೇಶದ ಸಂಸ್ಕೃತಿಯಾಗಿದೆ. ಜಾನಪದ ಎಂಬುದು ಜನರ ಜೀವನದ ಆಚಾರ, ವಿಚಾರ, ನಂಬಿಕೆ ಮತ್ತು ಸಂಪ್ರದಾಯಗಳನ್ನೊಳಗೊಂಡ ಜೀವನದ ಶೈಲಿಯಾಗಿದೆ.ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ-ತಲೆ ಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಾಗಿದೆ. ಗ್ರಾಮೀಣ ಜನರ ಬದುಕಿನ ಸೂಕ್ಷ್ಮ ಸಂಗತಿಗಳನ್ನು ಜಾನಪದ ಒಳಗೊಂಡಿದೆ. ಜನಪದರ ಸಾವಿರಾರು ಸಂಗತಿಗಳು ಜಾನಪದದಲ್ಲಿ ಹಾಸು ಹೊಕ್ಕಾಗಿವೆ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹರಿದು ಬರುವಂತಹ ಜೀವಂತ ಪಳೆಯುಳಿಕೆಯಾಗಿದೆ. ಗ್ರಾಮೀಣ ಅನಕ್ಷರಸ್ಥ ಜನರುಗಳ ಜ್ಞಾನವಾಗಿದೆ. ಅನಿಸಿದ್ದನ್ನು, ಕಂಡದ್ದನ್ನು ಆಡುಮಾತಿನಲ್ಲಿ ಸರಳವಾಗಿ ಸ್ಪಷ್ಟವಾಗಿ ಹೇಳುವಂತಹ ಸೊಗಡನ್ನು ಹೊಂದಿದೆ. ಪರಂಪರಾನುಗತವಾಗಿ ಬಾಯಿಂದ ಬಾಯಿಗೆ ಸಾಗಿ ಬಂದು ಕಾಲಕ್ಕೆ ತಕ್ಕಂತೆ ಬದಲಾವಣೆಯಾದರೂ ತನ್ನ ಮೂಲದ ಸೊಗಡನ್ನು ಬಿಟ್ಟು ಕೊಡದೇ ತನ್ನಲ್ಲಿಯೇ ಗರ್ಭೀಕರಿಸಿಕೊಂಡು ಬಂದ ಜ್ಞಾನವಾಗಿದೆ. ಇದು ಯಾವುದೇ ವರ್ಗ,ಸಮುದಾಯ, ವರ್ಣಕ್ಕೆ ಸೀಮಿತವಾಗದೇ ಒಟ್ಟಾರೆಯಾಗಿ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಹೇಳಬಹುದು,

ಹ್ಯಾರಡಾ ಗ್ರಾಮದಲ್ಲಿ ವಿಪುಲವಾದ ಜನಪದ ಸಾಹಿತ್ಯವನ್ನು ಕಾಣಬಹುದು. ಇಲ್ಲಿಯ ಜನಪದರು ಗ್ರಾಮದ ವಿವಿಧ ದೈವಗಳ ಮೇಲೆ, ಜೀವನದ ಪ್ರಮುಖ ಘಟ್ಟಗಳ ಮೇಲೆ ಜನಪದ ಸಾಹಿತ್ಯವನ್ನು ಸೃಷ್ಟಿಮಾಡಿದ್ದಾರೆ. ಬಿಡುವಿನ ವೇಳೆಯಲ್ಲಿ, ಹೊಲ-ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವ ಸಂದರ್ಭದಲ್ಲಿ ಈ ಮೌಖಿಕ ಸಾಹಿತ್ಯವು ಹುಟ್ಟಿಕೊಂಡಿದೆ. ಜನಪದ ಗೀತೆ, ಜನಪದ ಕಥೆ, ಗಾದೆ, ಒಗಟುಗಳು, ಲಾವಣಿ ಹೀಗೆ ವಿವಿಧ ಪ್ರಕಾರಗಳ ಸಾಹಿತ್ಯವನ್ನು ಇಲ್ಲಿಯ ಜನಪದರು ಸೃಷ್ಟಿಸಿದ್ದಾರೆ. ತಮ್ಮ ಅನುಭವದ ಮೂಸೆಯಲ್ಲಿ ಮೂಡಿಬಂದ ಸಾಹಿತ್ಯರಾಶಿಯಾಗಿದೆ. ಈ ಮೌಖಿಕ ಸಾಹಿತ್ಯದಲ್ಲಿ ನೀತಿ, ಮೌಲ್ಯ, ಜೀವನ ಕ್ರಮ, ಆದರ್ಶ ಮುಂತಾದ ಮಾನವೀಯ ಗುಣಗಳ ಹೂರಣವನ್ನು ಕಾಣಬಹುದಾಗಿದೆ.

ಹ್ಯಾರಡಾದಲ್ಲಿ ಹೆಚ್ಚಾಗಿ ಸ್ತ್ರೀ ಜನಪದರು ಜನಪದ ಸಾಹಿತ್ಯವನ್ನು ಸೃಷ್ಟಿಸಿರುವುದನ್ನು ನಾವಿಲ್ಲಿ ಕಾಣಬಹುದು. ಗ್ರಾಮದ ಹಿರಿಯ ಸ್ತ್ರೀ ಜನಪದರಾದ ಸೆಟ್ಟೆಮ್ನರ ಕೆಂಚಮ್ಮ, ಬಿಸಿಮುದ್ದೆ ಕೆಂಚಮ್ಮ, ಬರಡಿ ದುರುಗಮ್ಮ, ಬಾಗಳಿ ಮಲಿಯಮ್ಮ, ಗದುಗಿನ ಯಲ್ಲಮ್ಮ, ಗದುಗಿನ ಪಕ್ಕೀರಮ್ಮ, ಬೂದೆಪ್ನರ ಹೊನ್ನಮ್ಮ, ಭೀಮಕ್ಕನವರ ಮಾಯಮ್ಮ, ದಡಾರಮ್ಮ, ಸುಣಗಾರ ಹಾಲಮ್ಮ, ಕತ್ತೆಬೆನ್ನೂರು ಮಾಯಮ್ಮ, ಕಿಚಡಿ ಬಸವಣೆವ್ವ ಇವರುಗಳು ಜನಪದ ಸಾಹಿತ್ಯವನ್ನು ತಮ್ಮದೇ ಆದ ಶೈಲಿಯಲ್ಲಿಯೇ ಸೃಷ್ಟಿಸಿ ಹಾಡುವರು.

ಇವರು ಜಾನಪದ ಹಾಡುಗಳನ್ನು ಹೇಳುವಲ್ಲಿ ವಿಶೇಷ ಪ್ರಭುತ್ವವನ್ನು ಹೊಂದಿದವರಾಗಿದ್ದಾರೆ. ಜಾನಪದ ಹಾಡುಗಳ ಖಜಾನೆ ಎಂದು ಕರೆದರೆ ತಪ್ಪಾಗಲಾರದು. ಏನೂ ಓದು-ಬರಹ ಬಾರದೇ ಇದ್ದರೂ ಅದ್ಭುತ ನೆನಪಿನ ಶಕ್ತಿಯಿಂದ ಬಿಟ್ಟುಬಿಡದೇ ವಾರಗಟ್ಟಲೇ ಹಾಡುಗಳನ್ನು ಹೇಳುವ ಶಕ್ತಿ ಇವರಿಗಿದೆ. ಆದ್ದರಿಂದಲೇ ಕನ್ನಡದ ಪ್ರಪ್ರಥಮ ಉಪಲಬ್ದ ಕೃತಿ ಕವಿರಾಜಮಾರ್ಗದಲ್ಲಿ ಶ್ರೀವಿಜಯನು "ಕುರಿತೋದಯಂ ಕಾವ್ಯ ಪ್ರಯೋಗ ಪರಿಣಿತಮತಿಗಳ್" ಎಂದಿರುವುದು ಔಚಿತ್ಯಪೂರ್ಣವಾಗಿದೆ. ಈ ಜನಪದರು ದೈವ, ಆಚರಣೆ, ಸಂಪ್ರದಾಯ, ಜಾತ್ರೆ ಇವುಗಳ ಮೇಲೆ ಹಾಡುಗಳನ್ನು ಹೇಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ನಮ್ಮ ಸಂಸ್ಕೃತಿಯ ನೈಜ ಸತ್ವ ಅಡಗಿರುವುದೇ ಇಂತಹ ಜನಪದ ಗಾರುಡಿಗರ ಕಂಠಸ್ಥ ಪರಂಪರೆಯಿಂದ. ಇಂದಿನ ಮಾಧ್ಯಮಗಳು ಹಾಗೂ ಆಧುನಿಕತೆಯಿಂದಾಗಿ ಜಗತ್ತು ಚಿಕ್ಕದಾಗಿದ್ದು, ತನ್ನ ನೆಮ್ಮದಿಯನ್ನ ಕಳೆದುಕೊಳ್ಳುತ್ತಿದೆ. ಇಂತಹ ಆಧುನಿಕ ವಿಕಾಸದ ವೇಗದ ಎದುರು ಜಾನಪದದ ಭವಿಷ್ಯ ಅಯೋಮಯವಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಜನಪದ ಸಾಹಿತ್ಯವನ್ನು ಉಳಿಸಿಕೊಂಡು ಹೋಗುವಂತಹ ಕಾರ್ಯ ಇವರಿಂದ ಸಾಗಿದೆ. ಗ್ರಾಮದಲ್ಲಿ ಸುತ್ತಮುತ್ತಲಿನ ಯಾವುದೇ ದೇವರ ಕಾರ್ಯಕ್ರಮಗಳು ನಡೆಯುತ್ತಿದ್ದರೆ ಇವರು ಹಾಜರಾಗಿ ಜಾನಪದ ಸೊಗಡನ್ನು ಪಸರಿಸುತ್ತಿದ್ದಾರೆ. ಈ ಜನಪದ ಗಾರುಡಿಗರು ಜನಪದ ದೈವಗಳಾದ ಮೈಲಾರಲಿಂಗೇಶ್ವರ, ಅಲ್ಲಾಸ್ವಾಮಿ, ಪಾರ್ವತಿ-ಪರಮೇಶ್ವರ, ಊರಮ್ಮ, ಕಾಳಮ್ಮ ದೇವರು ಹೀಗೆ ಹತ್ತು ಹಲವು ಜನಪದ ದೈವಗಳ ಮೇಲೆ ಪುಂಖಾನುಪುಂಖವಾಗಿ ಹಾಡುಗಳನ್ನು ಹೇಳುವುದು ಯಾರನ್ನಾದರೂ ನಿಬ್ಬೆರಗಾಗಿಸುತ್ತದೆ. ಅವರ ಹಾಡಿನಲ್ಲಿ ಇನ್ನೊಂದು ವಿಶೇಷವೇನೆಂದರೆ. "ಗುಣಿಸಾಗ್ರಿ" ಪದಗಳು ಎಂಬ ಹಾಡುಗಳನ್ನು ವಾರಗಟ್ಟಲೇ ಹೇಳುವರು. ಗುಣಿಸಾಗ್ರಿ ಹಾಡುಗಳೆಂದರೆ ರಾಮಾಯಣ ಆಧಾರಿತವಾದ ಪ್ರತಿಯೊಂದು ಘಟನೆಗಳನ್ನು ಮತ್ತು ಅದರಲ್ಲಿ ಬರುವ ಪಾತ್ರಗಳ ಗುಣಗಳನ್ನು ಹೊಗಳಿ ಹಾಡುವಂತಹ ಹಾಡುಗಳಾಗಿವೆ. ಈ ಗುಣಸಾಗ್ರಿ ಪದಗಳನ್ನು ಅವರು ಎಲ್ಲಿ ಬೇಕಾದರಲ್ಲಿ ಹೇಳುವುದಿಲ್ಲ ಅವುಗಳನ್ನು ಹಾಡಬೇಕಾದರೆ ಅವರದೇ ಆದ ಆಚರಣೆಗಳಿವೆ. ಹೆಚ್ಚಾಗಿ ನಾಡಿನಲ್ಲಿ ಬರಗಾಲ, ಕ್ಷಾಮ ತಲೆದೋರಿದಾಗ ಹಾಡುವುದುಂಟು. ಈ ಹಾಡಗಳನ್ನು ಹಾಡಬೇಕಾದರೆ ಪೂಜಾವಿಧಿ ವಿಧಾನಗಳೊಂದಿಗೆ ಗ್ರಾಮದೇವತೆಯಾದ ಮಲಿಯಮ್ಮನನ್ನು ಪೂಜೆ ಮಾಡುವುದರೊಂದಿಗೆ ಪ್ರಾರಂಭಿಸುತ್ತಾರೆ.

ರಾಮಾಯಣದಲ್ಲಿ ಬರುವ ವಿವಿಧ ಸನ್ನಿವೇಶಗಳಿಗೆ ತಕ್ಕಂತೆ ಅಂದರೆ ತೊಟ್ಟಿಲ ಕಾರ್ಯಕ್ರಮ, ಹೆಸರಿಡುವ ಕಾರ್ಯಕ್ರಮ ಇವುಗಳನ್ನು ಓಣಿಯ ಹೆಂಗಸರು ಕೂಡಿ ಆಚರಣೆ ಮಾಡುತ್ತಾ ಈ ಹಾಡುಗಳ ಹಾಡುವಿಕೆ ಸಾಗುತ್ತಾ ಹೋಗುತ್ತದೆ. ಬುರ್ರಕಥಾ ಪ್ರವೀಣೆ ದರೋಜಿ ಈರಮ್ಮಳಂತೆಯೇ ಇವರೂ ಕೂಡ ಗುಣಸಾಗ್ರಿ ಪದಗಳ ಪ್ರವೀಣರು. ಹಾಡಿನ ಸನ್ನಿವೇಶದಲ್ಲಿ ತೊಟ್ಟಿಲ ಕಾರ್ಯಕ್ರಮ ಬಂದಾಗ ಸಣ್ಣದೊಂದು ತೊಟ್ಟಿಲನ್ನು ತಂದು ಅದರಲ್ಲಿ ಗೊಂಬೆಯನ್ನಿಟ್ಟು ಓಣಿಯ ಹೆಣ್ಣುಮಕ್ಕಳು ಸೇರಿ ಆ ಗೊಂಬೆಗೆ ಹೆಸರಿಟ್ಟು ಸಂಭ್ರಮಿಸುತ್ತಾರೆ. ಹೀಗೆ ಸಂಭ್ರಮಿಸಿ ಆ ಗೊಂಬೆಗೆ ಆಯರ್ ಮಾಡುವ ಪದ್ದತಿಯೂ ಇದೆ. ಹೀಗೆ ಜನಪದ ಸಂಸ್ಕೃತಿ ಇನ್ನೂ ಜೀವಂತವಾಗಿರಿಸಿ ಅದರ ಆಚರಣೆ, ಸಂಪ್ರದಾಯ, ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿರುವುದು ನಮ್ಮೂರಿನ ಹೆಮ್ಮೆಯ ಸಂಗತಿಯಾಗಿದೆ. ಇಂತಹ ಅಪ್ರತಿಮ ಪ್ರತಿಭೆಗಳಿಗೆ ಈಗಾಗಲೇ ವಯಸ್ಸಾಗಿದೆ. ಇದ್ದಾಗಲೇ ಇವರ ಹಾಡುಗಳನ್ನು ಸಂಗ್ರಹಿಸಿ ಮುದ್ರಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ನಮ್ಮೂರಿನ ಜನಪದ ಗಾರುಡಿಗರ ಬಗ್ಗೆ ನಮ್ಮೂರಿನವರೇ ಆದ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಸಚಿವರು, ಜಾನಪದ ವಿದ್ವಾಂಸರು, ಜಾನಪದ ವಿಭಾಗದ ಪ್ರಾಧ್ಯಾಪಕರು ಆದ ಮಾನ್ಯ ಶ್ರೀ ಡಾ. ಮಂಜುನಾಥ ಬೇವಿನಕಟ್ಟಿಯವರಿಗೆ ಈ ವಿಷಯವನ್ನು ತಿಳಿಸಿದಾಗ ಅವರು ಕೂಡ ಹೆಮ್ಮೆ ವ್ಯಕ್ತಪಡಿಸಿ ಅವರ ಹಾಡುಗಳನ್ನು ರೆಕಾರ್ಡಿಂಗ್ ಮಾಡಿ ಮುದ್ರಿಸಿ ಪುಸ್ತಕ ರೂಪದಲ್ಲಿ ಹೊರತರುವಲ್ಲಿ ಆಲೋಚಿಸುತ್ತಿದ್ದಾರೆ.

೭.೧.೧ ಜನಪದ ಗೀತೆಗಳು

೦೧ ಕೆಲಸದ ಹಾಡುಗಳು.

೦೧ ಹಂತಿಯ ಹಾಡುಗಳು.

೦೨ ಬೀಸುವ ಹಾಡುಗಳು.

೦೩ ಕುಟ್ಟುವ ಹಾಡುಗಳು.

೦೨ ಹಬ್ಬದ ಹಾಡುಗಳು.

೦೧ ಹೋಳಿ ಹಬ್ಬದ ಹಾಡುಗಳು.

೦೨ ಗುರ್ಜಿ ಪದಗಳು.

೦೩ ಜೋಕುಮಾರನ ಹಾಡುಗಳು.

.೦೩ ಜೀವನಾವರ್ತನ ಹಾಡುಗಳು

೦೧ ಬಾಲ್ಯ, ಯೌವ್ವನ, ಮದುವೆ.

೦೨ ಸಾವಿನ ಹಾಡುಗಳು.

೦೩ ಜೋಗುಳ ಹಾಡುಗಳು.

೦೪ ಸೋಬಾನ ಪದಗಳು.

೦೫ ಮದುವೆ ಪದಗಳು.

೦೪ ಕುಣಿತದ ಹಾಡುಗಳು.

೦೧ ಕೋಲಾಟದ ಹಾಡುಗಳು.

೦೨ ಡೊಳ್ಳಿನ ಹಾಡುಗಳು.

೦೫ ದೇವರ ಸ್ತುತಿಸುವ ಹಾಡುಗಳು.

೦೧ ದೇವರ ಕುರಿತು.

೦೨ ನಾಮಸ್ಮರಣೆ ಮಾಡುವ ಹಾಡುಗಳು.

೦೬ ಜೈನ ಧರ್ಮಿಯರ ಭಜನೆಗಳು

೦೭ ಪುರುವಂತಿಕೆಯ ಒಡಪುಗಳು

೦೮ ಭಜನಾ ಹಾಡುಗಳು

೦೧ ಕೆಲಸದ ಹಾಡುಗಳು: ಗ್ರಾಮೀಣ ಜನಪದರು ಸಾಮಾನ್ಯವಾಗಿ ಹೊಲ-ಗದ್ದೆಗಳಲ್ಲಿ ವ್ಯವಸಾಯ ಒಕ್ಕಲುತನ, ಬೀಸುವುದು, ಕುಟ್ಟುವುದು ಮಾಡುವುದುಂಟು. ಸತತವಾಗಿ ಕೆಲಸವನ್ನು ಮಾಡಿ ದಣಿದಾಗ, ಬೇಸರಿಕೆಯಾದಾಗ ಅವರು ಜನಪದ ಗೀತೆಗಳನ್ನು ಹೇಳುವರು. ಅದೇ ರೀತಿಯಲ್ಲಿ ಒಬ್ಬ ಜನಪದ ಸ್ತ್ರೀಯು ಅಕ್ಕಿಯನ್ನು ಕುಟ್ಟುವಾಗ ಹೇಳುತ್ತಿದ್ದ ಹಾಡು ಈ ರೀತಿಯಾಗಿದೆ.

ಹಾಡು:- ನಿತ್ಯ ಕೆಲಸದ ಹಾಡು

"ಅಕ್ಕಿ ಕುಟ್ಟೇನವ್ವ ಅಕ್ಕಿ ಕುಟ್ಟೇನವ್ವ ಬಣ್ಣದ ವಣಕೀಲೆ
ಅಕ್ಕಿ ಕೇರೇನವ್ವ ಅಕ್ಕಿ ಕೇರೇನವ್ವ ಗಿಲಿಗಿಲಿ ಸುಪಲೇಲೆ
ಬಾನ ಮಾಡೇನವ್ವ ಬಾನ ಮಾಡೇನವ್ವ ಸೊಸಿದೀಲೆ
ಬುತ್ತಿ ಕಟ್ಟೇನವ್ವ ಬುತ್ತಿ ಕಟ್ಟೇನವ್ವ ಸ್ವಾದರ ಮಾವರಿಗೆ
ಬುತ್ತಿನುಂಡೇನವ್ವ ಬುತ್ತಿನುಂಡೇನವ್ವ ಈಚಲ ಗಿಡದಡಿಗೆ
ನೀರು ಕುಡಿದೇನವ್ವ ನೀರು ಕುಡಿದೇನವ್ವ ಗಂಗಮ್ಮನ ಹೊಳಿಯಾಗ
ನಿದ್ದಿ ಮಾಡೇನವ್ವ ನಿದ್ದಿ ಮಾಡೇನವ್ವ ಬುದ್ದಿಲ್ಲದ ಊರಾಗ
ಹೊತ್ತು ಮುಣಿಗೀತವ್ವ ಹೊತ್ತು ಮುಣಿಗೀತವ್ವ ಕುಂಬಾರೋಣ್ಯಾಗ
ನಾಯಿ ಕೂಗೀತವ್ವ ನಾಯಿ ಕೂಗೀತವ್ವ ಪಿಂಜಾರ ಓಣ್ಯಾಗ್
ಅಕ್ಕಿ ಕುಟ್ಟೇನವ್ವ .... ಬಣ್ಣದ ವಣಕೀಲೆ
ಅಕ್ಕಿ ಕೇರೇನವ್ವ...................... ಗಿಲಿಗಿಲಿ ಮುತ್ಲೇಲಿ"(ವಿರುಪಾಕ್ಷಗೌಡ. ಕೆ: ೧೯೭೨ : ೧೯)

ಹೀಗೆ ಒಬ್ಬ ಜನಪದ ಸ್ತ್ರೀಯು ಮುಂಜಾನೆದ್ದು ಅಕ್ಕಿ ಕುಟ್ಟುವಾಗ ತನ್ನ ದಿನನಿತ್ಯದ ಕೆಲಸವನ್ನು ತನ್ನ ಹಾಡಿನ ಮೂಲಕ ಅಭಿವ್ಯಕ್ತ ಪಡಿಸುವ ಪರಿಯನ್ನು ಕಾಣಬಹುದಾಗಿದೆ.

ಗ್ರಾಮೀಣ ಜನಪದ ಮಹಿಳೆಯು ದಿನದ ತನ್ನ ಕೆಲಸದ ಬಗ್ಗೆ ಬಹಳಷ್ಟು ಸುಂದರವಾಗಿ ವರ್ಣಿಸಲಾಗಿದೆ. ಗ್ರಾಮದ ಜನಪದ ಸ್ತ್ರೀಯಾದ ಸೆಟ್ಟೆಮ್ನರ ಕೆಂಚಮ್ಮ ತನ್ನದೇ ಆದ ಧಾಟಿಯಲ್ಲಿ ಈ ಹಾಡನ್ನು ಹೇಳುವರು. ಬಣ್ಣದ ವಣಿಕೆ(ಧಾನ್ಯ ಕುಟ್ಟುವ ಸಾಧನ)ಯ ಮೂಲಕ ಅಕ್ಕಿಯನ್ನು ಕುಟ್ಟಿ ಅದನ್ನು ಹಸನು ಮಾಡಿ, ಆ ಅಕ್ಕಿಯನ್ನು ಸುಪಲೀಲೆ(ಮೊರ) ಮೂಲಕ ಸ್ವಚ್ಚಗೊಳಿಸುವಳು. ನಂತರ ಅಕ್ಕಿಯಿಂದ ಬಾನ(ಅನ್ನ)ವನ್ನು ಮಾಡಿ ಮೂರು ಸಹೋದರರಿಗೆ ಬುತ್ತಿಯನ್ನು ಕಟ್ಟಿಕೊಂಡು ಹೋಗುವಳು. ಹೊಲದಲ್ಲಿರುವ ಈಚಲ ಮರದಡಿಯಲ್ಲಿ ಬುತ್ತಿಯ ಬಾನವನ್ನು ಊಟ ಮಾಡುವರು. ನಂತರ ಹೊಲದ ಪಕ್ಕದಲ್ಲಿರುವ ಹೊಳಿಯಲ್ಲಿ ನೀರು ಕುಡಿವರು. ನಂತರ ಕೆಲಸವನ್ನು ಮುಗಿಸಿಕೊಂಡು ಬಂದು, ಸಾಕಾಗಿ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು ಎಚ್ಚರವಾಗುತ್ತಿದ್ದಂತೆಯೇ, ಮನೆಯ ಅನತಿ ದೂರದಲ್ಲಿರುವ ಕುಂಬಾರ ಓಣಿಯಲ್ಲಿ ಸೂರ್ಯ ಮುಳುಗಿ ಪಿಂಜಾರ ಓಣಿಯಲ್ಲಿ ನಾಯಿ ಕೂಗಿತು. ಎಂದು ತನ್ನ ಒಂದು ದಿನದ ದಿನಚರಿಯನ್ನು ಅತ್ಯಂತ ಸೋದಾಹರಣವಾಗಿ ವರ್ಣಿಸಿದ್ದಾಳೆ.

ಮೇಲಿನ ಹಾಡಿನಲ್ಲಿ ಹಳ್ಳಿಯ ಜನಪದರ ಸಂಪೂರ್ಣ ಚಿತ್ರಣವನ್ನು ನೋಡಬಹುದು. ಗ್ರಾಮದ ಜನಪದ ಸ್ತ್ರೀಯ ದಿನನಿತ್ಯದ ಕಾರ್ಯ, ಹೊಲದಲ್ಲಿಯ ಕೃಷಿ ಚಟುವಟಿಕೆಗಳು, ಗ್ರಾಮದ ಪ್ರಮುಖ ಓಣಿಗಳು ಹೀಗೆ ಗ್ರಾಮದ ದಿನನಿತ್ಯದ ಚಟುವಟಿಕೆಗಳನ್ನು ಪ್ರತಿಬಿಂಬಿಸುವ ಅಂಶ ಇದರಲ್ಲಿ ಎದ್ದು ಕಾಣುತ್ತದೆ.

ಹಾಡು:- ವ್ಯಂಗ್ಯಾರ್ಥ ಹಾಡು

ವಕ್ಕಲಿಗೇರ ಅಣ್ಣ ಹೊಲನೊಡಾಕ್
ಹೋದ
ಹೊಲನೋಡಾಕ್ ಹೋದ ಮಲದ ಮರಿ
ತಂದ
ಅಯ್ಯಯ್ಯ ಶಿವನೇ ಹುಲಿಬಂತಂದ
ಮನಿಗೋಡಿ ಬಂದ
ಮನಿಗೋಡಿ ಬಂದ ಕುರುಬಗೇರ್ಯಾಕ
ಹೋದ
ಕುರುಬಗೇರ್ಯಾಕ ಹೋದ ಕುರಿಮರಿ ತಂದ
ಅಯ್ಯಯ್ಯ ಶಿವನೇ ಕರಡಿ ಬಂತಂದ
ಮನಿಗೋಡಿ ಬಂದ
ಮನಿಗೋಡಿ ಬಂದ ಒಕ್ಕಲಿಗೇರಿಗೆ ಹೋದ
ಅಯ್ಯಯ್ಯ ಶಿವನೇ ಸರ್ಪವ ಬಂತಂದ

ಮನಿಗೋಡಿ ಬಂದ

ಮನಿಗೋಡಿ ಬಂದ ತಳವಾರಗೇರಿಗೆ

ಹೋದ

ತಳವಾರಗೇರಿಗೆ ಹೋದ ಕೋಳಿ

ಮರಿತಂದ

ಅಯ್ಯಯ್ಯ ಶಿವನೇ ಮನಿಗೋಡಿ

ಬಂದ.....(ಸೆಟ್ಟೆಮ್ಮನವರ ಕೆಂಚಮ್ಮ ಮತ್ತು ಸಂಗಡಿಗರು)

ಮೇಲಿನ ಹಾಡಿನಲ್ಲಿ ಇಲ್ಲಿಯ ಜನಪದರು ತಮ್ಮ ಗ್ರಾಮದ ವಿವಿಧ ಸಮುದಾಯ ಹಾಗೂ ಅವರ ವೃತ್ತಿ ಇವುಗಳ ಆಧಾರದ ಮೇಲೆ ವ್ಯಂಗ್ಯಾರ್ಥವಾಗಿ ಹಾಡನ್ನು ರಚನೆ ಮಾಡುವುದನ್ನು ನೋಡಬಹುದಾಗಿದೆ. ಇಂತಹ ಹಾಡಿನಲ್ಲಿ ಗೂಡಾರ್ಥಗಳಿದ್ದು ಸಮುದಾಯಕ್ಕೆ ಹಾಗೂ ಸಮಾಜಕ್ಕೆ ಒಂದು ಸಂದೇಶವನ್ನು ರವಾನಿಸುತ್ತವೆ.

೦೨ ಹಬ್ಬದ ಹಾಡುಗಳು: ವಿಶೇಷವಾಗಿ ಗ್ರಾಮೀಣ ಜನಪದರು ಹಬ್ಬದ ಸಂದರ್ಭದಲ್ಲಿ ಹಬ್ಬಗಳಿಗೆ ತಕ್ಕಂತೆ ಹಾಡುಗಳನ್ನು ಹೇಳುವುದುಂಟು. ಆ ಹಬ್ಬಗಳ ಸಂಕ್ಷಿಪ್ತ ಪರಿಚಯವನ್ನು ತಮ್ಮ ಹಾಡಿನಿಂದಲೇ ಹೇಳುವರು. ಆ ಹಬ್ಬದ ವಿಶೇಷ, ಐತಿಹ್ಯ ಮುಂತಾದ ವಿಷಯಗಳನ್ನು ಹಾಡಿನ ಮೂಲಕ ಅಭಿವ್ಯಕ್ತಪಡಿಸುವರು. ಹಳ್ಳಿಗಳಲ್ಲಿ ಜೋಕುಮಾರನ ಪದಗಳು ಪ್ರಸಿದ್ಧವಾದವುಗಳು. ಗ್ರಾಮೀಣ ಜನಪದ ಸ್ತ್ರೀಯರ ಗುಂಪೊಂದು ಊರಿಂದ ಊರಿಗೆ ಮನೆಯಿಂದ ಮನೆಗೆ ಜೋಕುಮಾರನ ಮೂರ್ತಿಯನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ಜೋಕುಮಾರನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾ, ಪ್ರತಿಯೊಂದು ಮನೆ ಮನೆಗಳಲ್ಲಿ ದವಸ ಧಾನ್ಯಗಳನ್ನು ತೆಗೆದುಕೊಳ್ಳುತ್ತಾ, ಹೇಳುವ ಪದ್ದತಿ ಈಗಲೂ ಹಳ್ಳಿಯಲ್ಲಿ ಇದೆ.

ಹಾಡು:- ಜೋಕುಮಾರನ ಹಾಡು

"ಬಲ್ಲಂತಾಯಿ ಬಾಗಲಾಗ ನಿಂತಾಳ ಬ್ಯಾಗನೆ ಬೆಣ್ಣೆ ಕೊಡಿರವ್ವ

ನಿಮ್ಮಗಳ ಕಂದಮ್ಮಗಾಸೆವು ಸಿರಿಬಾಳ

ಜೋಕುಮಾರ ಹುಟ್ಟಲಿ ಲೋಕೆಲ್ಲ ಬೆಳಯಲಿ

ಆ ತಾಯಿ ಮಗನ ಹಡೆಯಲಿ

ನೆರಿಮನಿ ಕಾಪೆದ್ದು ಮೊಸರು ಕಟಿಯಲಿ

ಕೆಬ್ಬಣದ ಹೂವಲಿ ಜಗ್ಗಲ ಕೌದೆವ್ವ ಇಬ್ಬರು ತೂಗಿದರ ಮಲಗಾನ

ನಮ್ದೇವಿ ರಾಜಕುಮಾರನ ಹಡೆದಾಳ

ಸಿಟ್ಯಾಕ ನನ ಕಂದ ಬಟ್ಟಿ ಗುಂಗುರವಿಲ್ಲ

ಮತ್ತೆ ಮಾಣಿಕ್ಯದ ಹರಳಿಲ್ಲ

ಈ ಊರ ಗೌಡನ ಕೂಟ ಮನ ಮುನಿಸು
ಉತ್ತರಿ ಕಡೆ ಹುಟ್ಟ್ಯಾನ ಮಳಿ ಮಾಡು
ಗಟ್ಟಿಸಿದವೆರಡು ತಳಮಿಂಚು
ಗೌಡರೆ ಪಟ್ಟೇದ ಹಚ್ಚಡ ಹೊದುಕೊಳ್ಳಿ
ಹತ್ತಿ ಹೊಲದಾಗ ಹೊಕ್ಕು ಚೆಂಡಾಡಿದ
ಇಟ್ಟಗ್ಯಾರ ಮುದ್ದು ಘನಕುಮಾರ
ಚೆಂಡಾಡಿದಲ್ಲಿ ಹತ್ತು ಸಾವಿರ ಬೆಳಿಯಲಿ
ಎಳ್ಳು ಹೊಲದಾಗ ನಲ್ಲ ಚೆಂಡಾಡಿದ ನಲ್ಲೇರ ಮುದ್ದು ನನ ಕುಮಾರ
ಚೆಂಡಾಡಿದಲ್ಲಿ ಏಳುಸಾವಿರ ಬೆಳಿಯಲಿ
ಚೆಂಡ್ಹೂವಿನ ಸರ ಎಂಭತ್ತು ಹಾಕ್ಯಾಳ ರಂಬ್ಯಾಗ ಸೆರಗ ಹಿಡಿದಾನ
ಕಂದನನು ಕಂಡ ಬಾಲ್ಯಾರನ ಬಿಡಲಿಲ್ಲ
ಜಾದಾಲಿ ಸರ ನಲ್ವತ್ತು ಹಾಕ್ಯಾನ ನಾರ್‍ಯಾರ ಸೆರಗ ಹಿಡಿದಾನ
ಕಂದನನು ಓದೋ ಬಾಲ್ಯಾರು ಬಿಡಲಿಲ್ಲ
ಹಳ್ಳಕ್ಕೋಗೋದಿರ ಕೊಳ್ಳಕ್ಕೋಗೋದಿರ
ಚೆಳ್ಳಿಗೊಂಗಡಿ ಕರಚೆಲುವ
ಹ್ಯಾರಡಾ ನಲ್ಲೇರ ಕಣ್ಣು ನಿನಮ್ಯೂಲೆ
ಸಜ್ಜಿತರು ತಾಳಂತ ಬಗ್ ಬಗ್ಗಿ ನೋಡಿದ ಜುಬ್ಬರಗೆಂಡಿ ಹಿಡಕೊಂಡು
ಹನುಮವ್ವನ ಬಗ್ಗಿಸಿಕೊಂಡ ಒಲಿಮುಂದ
ಜ್ವಾಳಾತರುತಾಳಂತ ಬಾಗ್ ಬಾಗಿ ನೋಡಿದ ತನ್ನಾಯುಳ್ಳಗೆಂಡಿ ಹಿಂಡ್ಕೊಂಡ
ಮದಗವ್ವನ ಅನಿಸಿಕೊಂಡ ಒಲಿಮುಂದ
ಕಲ್ಲು ಕಂಬಕ ಕಟ್ಯಾರ ಸಿರಿದೊಟ್ಟಲ
ಕಾಳಿಂಗ ರಾಯನ ಮಿಣಿಮಾರಿ
ಸಿರಿ ಬಳಕೆವ್ವ ಭೂಮಿ ಪಾಲನ ಹಡದಾಳ
ಸರಕಾರದ ನೀರ ರೂಪಾಯಿಗೆ ಕೆ.ಜಿ. ಜೋಳ
ತ್ರಾಸಪಟ್ಟು ತಂದಾರವ್ವ ಕೆಂಪು ಬ್ವಾಳ ಗೋಧಿ
ಬಲ್ಲಂತಾಯಿ ಬಾಗಲಾಗ ನಿಂತಾಳ ಬ್ಯಾಗನೆ ಬೆಣ್ಣಿ ಕೊಡಿರವ್ವ
ನಿಮ್ಮಗಳ ಕಂದಮ್ಮಗಾಸೆವು ಸಿರಿಬಾಳ"(ವಿರುಪಾಕ್ಷ ಗೌಡ. ಕೆ : ೧೯೭೨ : ೨೨)

ಹೀಗೆ ಜೋಕುಮಾರನ ಐತಿಹ್ಯದ ಬಗ್ಗೆ, ಮಹತ್ವ ಹಾಗೂ ತಮ್ಮ ಸಂಸ್ಕೃತಿಯ ಸೂಕ್ಷ್ಮ ಒಳನೋಟಗಳನ್ನು ಹಾಡಿನ ಮುಖಾಂತರ ಹಾಡುತ್ತಾ ಜನಪದ ಸ್ತ್ರೀಯರ ಗುಂಪು ಜೋಕುಮಾರನ

ಹಬ್ಬವನ್ನು ಆಚರಿಸುವುದುಂಟು. ಹಬ್ಬಗಳು ಗ್ರಾಮೀಣ ಜನಪದರ ಜೀವಾಳವಾಗಿವೆ. ಅವರ ಸಾಂಸ್ಕೃತಿಕ ವಿಶಿಷ್ಟ ಸಂಪ್ರದಾಯವನ್ನು, ಆಚರಣೆಗಳನ್ನು ಈ ಸಂದರ್ಭಗಳಲ್ಲಿ ಕಾಣಬಹುದು. ದೈವಗಳ ಜೊತೆ ಇರುವ ಅವಿನಾಭಾವ ಸಂಬಂಧವನ್ನು ಕಾಣಬಹುದಾಗಿದೆ. ಹಲವು ದೈವಗಳ ಬಗ್ಗೆ ತಾವೇ ಸ್ವತಃ ಹಾಡುಗಳನ್ನು ಕಟ್ಟಿ, ಅದನ್ನು ರಾಗಬದ್ಧವಾಗಿ ಹಾಡುತ್ತಾ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮೆರೆಯುವುದನ್ನು ಈಗಲೂ ಹಳ್ಳಿಗಳಲ್ಲಿ ಕಾಣಬಹುದಾಗಿದೆ. ತಮ್ಮ ಸಂಸ್ಕೃತಿಯ ವಿಶಿಷ್ಟ ಪರಂಪರೆಯನ್ನು ತಮ್ಮ ಹಾಡಿನಲ್ಲಿ ನೋಡಬಹುದಾಗಿದೆ.

ಇಂತಹ ವಿಶೇಷ ಹಬ್ಬಗಳಲ್ಲಿ ಜೋಕುಮಾರನ ಹಬ್ಬ ಒಂದಾಗಿದೆ. ಈ ಹಬ್ಬವನ್ನು ಹ್ಯಾರಡಾ ಜನಪದರು ವಿಶೇಷವಾಗಿ ಆಚರಿಸುವುದುಂಟು. ಬೆಸ್ತ(ಬಾರ್ಕಿ) ಸಮುದಾಯದ ಮಹಿಳೆಯರು ವಿಶೇಷವಾಗಿ ಇದನ್ನು ಆರಾಧಿಸುವುದುಂಟು. ಈಗಲೂ ಸಹ ಈ ಸಮುದಾಯದ ಮಹಿಳೆಯರು ಜೋಕುಮಾರ ಸ್ವಾಮಿಯನ್ನು ಮನೆ ಮನೆಗೆ ಕರೆದೊಯ್ದು ವಿಶಿಷ್ಟ ರೀತಿಯಲ್ಲಿ ಆಚರಿಸುವುದುಂಟು. ಗಣೇಶ ಚತುರ್ಥಿಯ ನಂತರ ಜೋಕುಮಾರ ಸ್ವಾಮಿಯು ಹುಟ್ಟುವನು. ಹುಟ್ಟಿದ ಏಳು ದಿನದವರೆಗೆ ಮನೆಯಲ್ಲಿಯೇ ಇದ್ದು. ಎಂಟನೇಯ ದಿನದಂದು ಜೋಕುಮಾರ ಸ್ವಾಮಿಯ ಮೂರ್ತಿಯನ್ನು ಎರೆ ಮಣ್ಣಿನಿಂದ ತಯಾರಿಸುವರು. ಈ ಮೂರ್ತಿಯನ್ನು ಈಚಲ ಬುಟ್ಟಿಯಲ್ಲಿ ಇಟ್ಟುಕೊಂಡು ಬೇವಿನ ಸೊಪ್ಪಿನಿಂದ ಅಲಂಕೃತಗೊಳಿಸುವರು. ಈ ಬುಟ್ಟಿಯನ್ನು ಗ್ರಾಮದ ಪ್ರತಿಯೊಂದು ಮನೆ ಮನೆಗೆ ತೆರಳಿ ಹಾಡನ್ನು ಹೇಳುತ್ತಾ, ಗ್ರಾಮದ ಜನಪದರಿಂದ ಅಕ್ಕಿ, ಬೇಳೆ, ಜೋಳ, ರಾಗಿ ಧಾನ್ಯಗಳನ್ನು ಸ್ವೀಕರಿಸುತ್ತಾ ಅತ್ಯಂತ ಸಂಭ್ರಮದಿಂದ ಆಚರಿಸುವರು.

ಮೇಲಿನ ಹಾಡಿನಲ್ಲಿ ಜೋಕುಮಾರ ಸ್ವಾಮಿಯ ವಿವಿಧ ಬಾಲಲೀಲೆಗಳನ್ನು ವಿಹಂಗಮವಾಗಿ ವರ್ಣಿಸಿದ್ದಾರೆ. ಅದೇ ರೀತಿಯಾಗಿ ಜೋಕುಮಾರನ ಕೃಪೆಯಿಂದ ಹತ್ತಿ ಹೊಲ, ಚೆಂಡುಹೂವಿನ ಹೊಲದಲ್ಲಿ ಬೆಳೆಯು ಹುಲುಸಾಗಿ ಬೆಳೆಯಲಿ ಎಂಬ ಆಶೀರ್ವಾದದ ನುಡಿಯನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ಹಾಡಿನ ಮೂಲಕ ಗ್ರಾಮದ ಶ್ರೇಯೋಭಿವೃದ್ಧಿಗೆ ಜೋಕುಮಾರ ಸ್ವಾಮಿಯಲ್ಲಿ ಪ್ರಾರ್ಥಿಸುವರು. ಪ್ರತಿಯೊಂದು ಮನೆಗಳಿಗೆ ಅಂಬಲಿ ಹಾಗೂ ಕರಿ ಕಾಡಿಗೆಯನ್ನು ಜೋಕುಮಾರನ ಪ್ರಸಾದ ಎಂದು ಕೊಡುವರು. ಈ ಅಂಬಲಿಯನ್ನು ಹ್ಯಾರಡಾ ಜನಪದರು ತಮ್ಮ ತಮ್ಮ ಕೃಷಿ ಜಮೀನಿನಲ್ಲಿ ಹುಗಿಯುವರು. ಇದರಿಂದ ಜಮೀನಿನಲ್ಲಿ ಬೆಳೆಯು ಹುಲುಸಾಗಿ ಬರುವುದು ಎಂಬ ಅಪಾರ ನಂಬಿಕೆಯಾಗಿದೆ. ಹಾಗೆಯೇ ಕರಿ ಕಾಡಿಗೆಯನ್ನು ತಮ್ಮ ಮನೆಯ ಹೊಸ್ತಿಲಿಗೆ ಹಚ್ಚುವರು. ಇದರಿಂದ ಮನೆಯೊಳಗೆ ಯಾವುದೇ ದುಷ್ಟ ಶಕ್ತಿಗಳು ಬರಬಾರದು ಎಂಬ ಉದ್ದೇಶದಿಂದ ಇದನ್ನು ಹೊಸ್ತಿಲಿಗೆ ಹಚ್ಚುವರು.

ಹೀಗೆ ಪ್ರತಿಯೊಂದು ಮನೆಯಿಂದ ಬೆಣ್ಣಿಯನ್ನು ಸ್ವೀಕರಿಸುತ್ತಾ ಹೋಗುವರು. ಜೋಕುಮಾರ ಸ್ವಾಮಿ ಹುಟ್ಟಿ ಹದಿನಾಲ್ಕನೇಯ ದಿನಕ್ಕೆ ಸಾಯುವನು. ಈ ಜೋಕುಮಾರನ ಶವ ಸಂಸ್ಕಾರವನ್ನು ಗ್ರಾಮದ ದೇವದಾಸಿ ಮಹಿಳೆಯರು ಮಾಡುವುದುಂಟು. ಆದರೆ ಇಂದಿನ ದಿನಮಾನಗಳಲ್ಲಿ ಈ

ಪದ್ಧತಿ ಇಲ್ಲ, ಹೀಗೆ ಶವ ಸಂಸ್ಕಾರ ಮಾಡುವಾಗ ಎರೆ ಮಣ್ಣಿನಿಂದ ಮಾಡಿದ ಜೋಕುಮಾರ ಸ್ವಾಮಿಯ ಮೂರ್ತಿಯು ಬಿರಿ ಬಿಟ್ಟರೆ ಮಳೆ–ಬೆಳೆಗಳು ಚೆನ್ನಾಗಿ ಬರುವುದು. ಮೂರ್ತಿಯು ಬಿರಿ ಬಿಡದೇ ಹಾಗಯೇ ಇದ್ದರೆ ಬರಗಾಲ ಬರುತ್ತದೆ ಎಂಬ ಅಪಾರ ನಂಬಿಕೆಯನ್ನು ನೋಡಬಹುದಾಗಿದೆ. ಈ ರೀತಿಯಾಗಿ ಅತ್ಯಂತ ವಿಶಿಷ್ಟವಾಗಿ ಈ ಹಬ್ಬವನ್ನು ಆಚರಿಸುವುದನ್ನು ಗ್ರಾಮದಲ್ಲಿ ಈಗಲೂ ಕಾಣಬಹುದಾಗಿದೆ.

ಮೇಲಿನ ವಿಶಿಷ್ಟ ಸಂಪ್ರದಾಯವನ್ನು ಗಮನಿಸಿದಾಗ ಜೋಕುಮಾರ ಸ್ವಾಮಿಯು ಗ್ರಾಮೀಣ ಜನಪದ ಕಷ್ಟದ ಬವಣೆಗಳನ್ನು ನೀಗಿಸಿ ಗ್ರಾಮಕ್ಕೆ ಮಳೆ–ಬೆಳೆಯನ್ನು ಕರುಣಿಸುವ ದೈವವಾಗಿದೆ. ಈ ಆಚರಣೆಯನ್ನು ಮಾಡುವುದರಿಂದ ನಮ್ಮ ಕಷ್ಟಗಳು ದೂರವಾಗಿ ಸುಖ ಜೀವನವನ್ನು ನಡೆಸಬಹುದು ಎಂಬುದು ಇಲ್ಲಿಯ ಜನರ ಆಶಯವಾಗಿದೆ.

ಇನ್ನು ಗ್ರಾಮದಲ್ಲಿ ಭೀಕರ ಬರಗಾಲವಿದ್ದ ಸಮಯದಲ್ಲಿ ಮಳೆಯು ಸಕಾಲಕ್ಕೆ ಬಾರದೇ ದನ ಕರುಗಳಿಗೆ ಕುಡಿಲಿಕ್ಕೆ ನೀರು ಇಲ್ಲದಾಗ ಮೇವಿನ ಸಮಸ್ಯೆ ಉಲ್ಬಣವಾದಾಗ ಆಚರಿಸುವ ಹಬ್ಬ ಗುರ್ಜಿಯ ಹಬ್ಬ. ಮದುವೆಯಾಗದ ಸಣ್ಣ ಹುಡುಗ ಆಕಳಿನ ಸಗಣೆಯಿಂದ ದುಂಡಗೆ ಆಕಾರವನ್ನು ಮಾಡಿ ಅದನ್ನು ಅಗಲವಾದ ಕಟ್ಟಿಗೆಯ ಹಲಗೆಯ ಮೇಲೆ ಪ್ರತಿಷ್ಠಾಪಿಸಿ ಅದಕ್ಕೆ ಕುಂಕುಮ, ಬಂಡಾರ, ದಾರದ ಎಳೆಯನ್ನು ಸುತ್ತಿ ಪೂಜೆ ಮಾಡಿ ಆ ಹುಡುಗ ಬರಿ ಮೈಲಿನಲ್ಲಿ ಹೊತ್ತುಕೊಂಡು ಮನೆ ಮನೆಗೆ ತಿರುಗಾಡುವನು ಆಗಾ ಹೇಳುವ ಹಾಡು ಹೀಗಿದೆ.

ಹಾಡು:– ಗುರ್ಜಿ ಹಾಡು

"ಗುರ್ಜಿ ಗುರ್ಜಿ ಎಲ್ಲಾಡಿ ಬಂದಿ
ಹಳ್ಳಾ ಕೊಳ್ಳಾ ಹರದ್ಯಾಡಿ ಬಂದಿ
ಕಾರ ಮಳಿಗೆ ಕಪಾಟ ಮಳಿಯ
ಬಣ್ಣ ಕುಡುತನ ಬಾ ಮಳಿಯ ಬಾ ಮಳಿಯ
ಸುಣ್ಣಾ ಕುಡುತನ ಸುರಿಮಳೆಯ ಸುರಿಮಳೆಯ"

ಎಂದು ಹೇಳುತ್ತಾ ಮನೆ ಮನೆಗೆ ತೆರಳಿ ಮೈಮೇಲೆ ನೀರನ್ನು ಹಾಕಿಕೊಳ್ಳುತ್ತಾ ಮಳೆ ದೇವನನ್ನು ಸ್ಮರಿಸಿ ಮಳೆಯನ್ನು ತರಿಸಿಕೊಳ್ಳುವ ಪರಿಪಾಠ ಅತ್ಯಂತ ಮನೋಹರವಾಗಿರುತ್ತದೆ. ಇಂದಿಗೂ ಕೂಡ ಹ್ಯಾರಡಾ ಗ್ರಾಮದಲ್ಲಿ ಈ ಸಂಪ್ರದಾಯವನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಗುರ್ಜಿಯನ್ನು ಪೂಜಿಸುವುದರಿಂದ ಮಳೆ ಬರುವುದೆಂಬ ಅಪಾರ ನಂಬಿಕೆ ಇಲ್ಲಿಯ ಜನಪದರದಾಗಿದೆ. ಈ ಗುರ್ಜಿಯ ಆಚರಣೆಯನ್ನು ಮಾಡಿದಾಗ ಮಳೆ ಬಂದ ಎಷ್ಟೋ ಉದಾಹರಣೆಗಳು ಇವೆ ಎಂದು ಗ್ರಾಮದ ಜನಪದ ಸ್ತ್ರೀಯಾದ ಬರಡಿ ದುರುಗಮ್ಮನವರ ಅಭಿಪ್ರಾಯವಾಗಿದೆ.

೦೩ ಜೀವನಾವರ್ತನ ಹಾಡುಗಳು

ಜನಪದರು ತಮ್ಮ ಜೀವನದ ಮುಖ್ಯ ಘಟ್ಟಗಳಾದ ಬಾಲ್ಯ, ಯೌವನ, ಮದುವೆ, ಸಾವಿನ ಸಂಧರ್ಭದಲ್ಲಿ ಹಾಡುವ ಹಾಡುಗಳು,ಗುಣ–ದೋಷ, ಜೋಗುಳ ಮುಂತಾದ ಸಂಧರ್ಭಗಳಲ್ಲಿ ತಮ್ಮ ಹಾಡಿನಿಂದ ಆ ಘಟನೆಯ ಸಂಪೂರ್ಣ ವಿವರಣೆಯನ್ನು ಕೊಡಬಲ್ಲರು.ಆದ್ದರಿಂದ ಕವಿರಾಜ ಮಾರ್ಗದಲ್ಲಿ ಶ್ರೀ ವಿಜಯನು "ಕುರಿತೋದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದಿರುವುದು ಓದು –ಬರಹ ಬಾರದೇ ಇದ್ದರೂ ಸಹ ಕಾವ್ಯಗಳನ್ನು ರಚಿಸುವ ಹಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ಕೆಳಗಿನ ಜನಪದ ಗೀತೆಯಲ್ಲಿ ಒಂದು ಜನಪದ ಸ್ತ್ರೀಯ ಗುಣ–ದೋಷಗಳನ್ನು ಆಕೆಯ ತುಡಿತವನ್ನು ಸೃಷ್ಟೀಕರಿಸಿದ್ದಾರೆ.

ಹಾಡು:– ಸ್ತ್ರೀ ಗುಣದೋಷ ಹಾಡು

"ಕಾಚಿಲ್ಲದ ವೀಳ್ಯಾವ ಹಾಕೋರ ಮಗಳಲ್ಲ
ಹಾಸಿಗೆ ಮ್ಯಾಗ ಬೆಳ್ಳಿ ಎಳಿ । ಬಿದ್ದರೆ
ಆಸಿ ಮಾಡುವವರ ಮಗಳಲ್ಲ॥ । ॥

ಅಂಜಿಕೆ ತೋರಿದರ ಅಂಜುವರ ಮಗಳಲ್ಲ
ಇಂಜಾಣದಾಗ ಹುಲಿ ಕರಡಿ । ಬಂದರೆ
ಹಿಂತಿರುಗುವವರ ಮಗಳಲ್ಲ ॥೨॥

ಕಟ್ಟೀಗೆ ಕುಂತಾಳ ಕಟ್ಟಾಣಿ ಹಾಕ್ಯಾಳ
ಬಟ್ಟೀಲೆ ವಿಭೂತಿ ಧರಿಸ್ಯಾಳ । ಗಂಗವ್ವ
ಸಟ್ಟೀನ ಗರತಿ ಇಡಿನೀರ ॥೩॥

ಮಾರ್ಗ್ಹಾಯ ನಿನಸೂಳಿ ಮತ್ಸರ ನನಮ್ಯಾಲೆ
ಎಚ್ಚರ ಹೇಳು ಅವಳಿಗೆ । ತಲಿಯೋಳು
ಪಿತ್ತ ಗಳಿಗಿಯನ್ನು ಬಿಡಿಸ್ಯಾಳು ॥೪॥

ಹರಿಯುವ ನೀರಾಗಾ ಅರಿಬಿಯ ಒಗಿಯ್ಹಾಕಿ
ಕರದೀತಿ ಭಾಳ ಚೆಲುವಾನು । ಸಾವತ್ರಿ
ಎರಿದಾಟ್ಟ ಮಗನ ಹೆಸರೇನು ॥೫॥

ಅಂಗಿಯ ಬಕ್ಕಣಕ ತುಂಬ್ಯಾವ ಲ್ಯಾವಂಗ
ತಂಗಿ ಕೇಳಿದರೆ ಕೊಡುವಲ್ಲಿ । ತನ್ಮಡದಿ
ಕೇಳಿದರೆ ಸುರಿವ್ಯಾನ ॥೬॥

ಗುಡು ಗುಟ್ಟುದಿರು ಗೌರಿ ಗುಡುಗು ಮಾರೇಳು
ಗುಡುಗು ನಮ್ಮಲ್ಲಿ ತರವಲ್ಲ । ಮುಂಗಾರಿ
ಸಿಡಿಲಿನಂತೆ ಅಣ್ಣ ಬರಲೇಳು ॥೭॥

ಉತ್ತಮರ ಕಣ್ಣೀಗೆ ಮುತ್ತಾಗಿ ಹೊಳದಾನ
ಮಚ್ಚೇರಿನ ಬರುವ ವೈರಿಯ । ಕಣ್ಣಿಗೆ
ಬಿಚ್ಚುಕತ್ಯಾಗಿ ಹೊಳಿದಾನ ॥೮॥

ಮಾತು ಕೇಳಾದವಳ ಮಾಗಳಕೆ ಕೊಡಬೇಕು
ಮಾತೇಲಿ ಅವರು ದಣಿಸ್ಯಾರು । ರಂಗಾಪುರ
ತ್ಯಾಪೀಲೆ ನೀರು ಹೊರಿಸ್ಯಾರು ॥೯॥

ಹರಪನಹಳ್ಳಿ ಗೌಡ ಅರಿತು ಮರೆತು ಬಾರ
ಬರುತ ನನಮಗಳ ಕರೆತಾರ । ತರದಿದ್ರೆ
ತರುಬೇನ ನಿನ್ನ ಮುಖ ಹಿಡಿದು ॥೧೦॥

ಅಡಗಿ ಒಲ್ಲ ಕಾದ ಬೂದಿ ಬಲ್ಲ
ಹೋಗಿ ಬಡವರನ ಬಿಡುವೊಲ್ಲ । ಈರಣ್ಣ
ನಾಲಿಗೆಗೆ ಸೂತ್ರ ಬೇಡ್ಯಾನ ॥೧೧॥

ಮಾತಿಗೆ ಬಿದ್ದರೆ ಹೆದರಿ ಬರುವವಳಲ್ಲ
ಮಾತಿಗೆ ಮಾತು ಜವಾಬು ಕೊಟ್ಟು । ನಿಂತರೆ
ಸೋತು ಬರುವವಳ ಮಗಳಲ್ಲ ॥೧೨॥

ಹಿಡಿಯ ಜ್ವಾಳವ ಬಿತ್ತಿ ಖಂಡ್ಗ ರಾಶಿಯ ಮಾಡಿ
ದನ ಕೊಂಡಿದಾನ ಮನಿಯಾಗ । ತಿಂದಣ್ಣನ
ಹಣೆ ಕಟ್ಟಿನ ಹೋರಿ ಹದಿನಾರು ॥೧೩॥

ಹಬ್ಬ ಬಂತು ಹೆಬ್ಬಳ್ಳಿ ದೀವಳಿಗೆ
ಹಬ್ಬಕ್ಕೆ ಹಬ್ಬ ಹಿರಿಹಬ್ಬ । ನಾಗರ ಪಂಚಮಿ
ನುಗ್ಗು ಮಾಡಿತು ಬಡವರನ॥೧೪॥

ಪಂಚಾಯ್ತಿ ಬೋರ್ಡು ತರಿಸ್ಯಾರ ಗೌಡ್ರು
ರೈತರಿಗೆ ಪೋಟ ತೆಗಿಸ್ಯಾರ । ಹಡಗಲಿ
ತನಕ ಸಾಗೈತಿ ಮೆರವಣಿಗೆ ॥೧೫॥ (ವಿರುಪಾಕ್ಷಗೌಡ. ಕೆ : ೧೯೭೨ : ೧೦)

ಮೇಲಿನ ಜನಪದ ಗೀತೆಯಲ್ಲಿ ಹ್ಯಾರಡಾದ ಸುತ್ತ-ಮುತ್ತಲಿರುವ ಮಾಗಳ, ಹಡಗಲಿ, ಹರಪನಹಳ್ಳಿ, ರಂಗಾಪುರ ಮುಂತಾದ ಗ್ರಾಮಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಒಬ್ಬ ಜನಪದ ಸ್ತ್ರೀಯ ಸೂಕ್ಷ್ಮವಾದ ಒಳ ತುಡಿತವನ್ನು ನಾವಿಲ್ಲಿ ಕಾಣಬಹುದಾಗಿದೆ. ಮಾತು ಕೇಳದ ಹೆಣ್ಣು ಮಗಳನ್ನು ಮಾಗಳಕೆ ಮದುವೆ ಮಾಡಿ ಕೊಡಬೇಕು. ಅವರು ಆ ಸ್ತ್ರೀಗೆ ಸಿಮೆಂಟ್ ಕೆಲಸ ಮಾಡಲು ಬಳಸುವ ತ್ಯಾಪೀಲೆ ನೀರು ಹೊರಿಸ್ಯಾರು ಎಂಬ ಮಾತು ಆ ಸ್ತ್ರೀಯು ಅನುಭವಿಸುವ ಸಂಕಟವನ್ನು ನಾವಿಲ್ಲಿ ಕಾಣಬಹುದಾಗಿದೆ.

ಇಂದಿನ ಬಹುತೇಕ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಗ್ರಾಮೀಣ ಜನಪದ ಸ್ತ್ರೀಯರ ಪಾತ್ರ ಬಹುಮುಖ್ಯವಾದುದು. ಇವರಿಗೆ ಪ್ರತಿಯೊಂದು ಕ್ಷಣದಲ್ಲಿ ಕ್ಷಣಾರ್ದದಲ್ಲಿ ಸಾಹಿತ್ಯವನ್ನು ಸೃಷ್ಟಿಸಬಲ್ಲ ಶಕ್ತಿ ಇದೆ. ತಮ್ಮ ನೋವು, ನಲಿವು, ಸಂಕಟ, ಬದುಕಿನ ಒಳನೋಟವನ್ನು ತಮ್ಮ ಸಾಹಿತ್ಯದಲ್ಲಿ ಬಿಂಬಿಸುವರು. ಮೇಲಿನ ಹಾಡಿನಲ್ಲಿ ಜನಪದ ಸ್ತ್ರೀಯು ಬಹು ವಿಧದಿಂದ ಕೊಂಡಾಡಿದ್ದಾಳೆ. "ಮಚ್ಚೇರಿನ ಬರುವ ವೈರಿಯ ಕಣ್ಣಿಗೆ ಬಿಚ್ಚು ಕತ್ತಿಯಾಗಿ ಹೊಳಿದಾನ" ಎಂಬ ಮಾತಿನಲ್ಲಿ ಅಣ್ಣನ ಶೌರ್ಯ, ಸಾಹಸ, ಆತನಲ್ಲಿರುವ ಧೀರತನವನ್ನು ಸಾರಿದೆ. ಹೀಗೆ ಅಣ್ಣನ ಮನೆಯಿಂದ ಗಂಡನ ಮನೆಗೆ ಹೋದರೂ ತವರಿನ ಪ್ರೀತಿಯ ತೀವ್ರತೆಯನ್ನು ಕಾಣಬಹುದಾಗಿದೆ. ತವರಿನ ವೈಭವವನ್ನು ವೈಭವೀಕರಿಸಿ ಹೇಳುವ ಸ್ತ್ರೀಯ ಒಳ ತುಡಿತವನ್ನು ಇಲ್ಲಿ ಅರಿಯಬಹುದು. ಹೀಗೆ ಸಮಾಜದಲ್ಲಿ ಅಣ್ಣ-ತಂಗಿ, ಅಕ್ಕ-ತಮ್ಮ ಎಂಬ ಭ್ರಾತೃತ್ವವನ್ನು ಸಮಾಜದ ಮೇಲ್ಪಂಕ್ತಿಗೆ ಹಾಕಿದವರು ಗ್ರಾಮೀಣ ಜನಪದರು ಎಂದರೆ ಅತಿಶಯೋಕ್ತಿಯಲ್ಲ.

ಮೇಲಿನ ಹಾಡಿನಲ್ಲಿ ಸ್ತ್ರೀಯು ತನ್ನ ಅಣ್ಣನ ಹೆಂಡತಿಯ ಬಗ್ಗೆ ಅಸಹನೆಯನ್ನು ಹೊಂದಿದ್ದಾಳೆ. ಅಣ್ಣನ ಹೆಂಡತಿ ನನ್ನಣ್ಣನನ್ನು ಕೈಗೊಂಬೆಯನ್ನಾಗಿ ಮಾಡಿಕೊಂಡಿದ್ದಾಳೆ ಎಂಬ ಅಳಲನ್ನು ತೋಡಿಕೊಳ್ಳುವಳು. "ನನ್ನಣ್ಣ ತನ್ನ ಅಂಗಿಯ ಬಕ್ಕಣಕ ಲ್ಯಾವಂಗ ಹಾಕ್ಯಂಡು ಇರುವಾಗಿ ತಂಗಿ ಕೇಳಿದರೆ ಕೊಡದೇ ಹೆಂಡತಿಗೆ ಕೊಡುವನು" ಎಂಬ ಅಭಿಪ್ರಾಯವನ್ನು ಕಾಣಬಹುದು. ಮೇಲಿನ ಅಂಶವು ಅಂದಿನ ಸಮಾಜದ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಮದುವೆಯಾದ ಮೇಲೆ ಎಷ್ಟೋ ಗಂಡಸರು ಹೆಂಡತಿಯ ಕೈಗೊಂಬೆಯಾಗಿ ತನ್ನ ಕುಟುಂಬ, ಅಕ್ಕ, ತಂಗಿ, ತಂದೆ-ತಾಯಿಯರನ್ನು ಕಡೆಗಣಿಸುವರು. ಅಂತಹ ಸೂಕ್ಷ್ಮ ಸಂಗತಿಯನ್ನು ಜನಪದ ಮಹಿಳೆಯು ತನ್ನ ಹಾಡಿನಲ್ಲಿ ಸೋದಾಹರಣವಾಗಿ ವಿವರಿಸಿದ್ದಾಳೆ.

ಇನ್ನು ಮದುವೆಯ ಸಂಧರ್ಭದಲ್ಲಿ ಅಣ್ಣನು ತನ್ನ ಮಗನ ಮದುವೆಗೆ ತಂಗಿಯನ್ನು ಕರೆಸಿಕೊಳ್ಳುವಾಗ ಜನಪದರು ಕಟ್ಟಿರುವ ಈ ಹಾಡು ಕೆಳಗಿನಂತಿದೆ.

ಹಾಡು:- ಅಣ್ಣ ತಂಗಿ ಹಾಡು

"ತಂಗ್ಹೋಗಿ ಮೂರು ದಿನಕ ನಂದೀಯ ಕಾಲ್ಮುರಿದು

ಮನೇಳ ಮಡದಿಗೆ ಉರಿಚಳಿ । ಬಂದಾರೆ
ಹೊತ್ತಿಗಿ ತೆಗಿಸಾಕ ಹೊರ ಹೊರಟ ॥೧॥

ಹೊತ್ತಿಗಿ ತೆಗಿಸ್ಯಾರ ದೇವ್ರಿಲ್ಲ ದಿಂಡ್ರಲ್ಲ
ಮನೇಳ ತಂಗಿ ಉಸ್ಸೆಂದು । ಹೋಗ್ಯಾಳ
ಕರಸಪ್ಪ ಮಗನ ಮದುವೀಗೆ ॥೨॥

ಬಂಡಿ ಬಾಡ್ಗಿ ಮಾಡಿ ತಂಗಿ ಕರಿಯಲು ಹೋದ
ಏನ್ಮಾತ್ತಿ ತಂಗಿ ಹೊರ ಒಳಗೆ । ನಾಳಿಗೆ
ಹೊರಡವ್ವ ಮಗನ ಮದುವೀಗೆ ॥೩॥

ಏನು ಮಾಡೋದಿಲ್ಲ ಎಂತು ಮಾಡೋದಿಲ್ಲ
ಉಂಬುತೀನಣ್ಣ ಹೊರಗೀರು । ನೀನಾಡಿದ
ಮಾತು ನುಂಗುತ್ತೀನಣ್ಣ ಮನದಾಗ ॥೪॥

ಉಂಡಾರೆ ಉಣ್ಣವ್ವ ತಿಂದಾರೆ ತಿನ್ನವ್ವ
ಬರಬೇಕವ್ವ ಮಗನ ಮದುವೀಗೆ । ಹಂದರದಾಗ
ಮೇಲಾವು ಜವುಳಿ ಉಡುವಂತಿ ॥೫॥

ಮದುವೀಗಿ ಬರಾಕ ನನ್ನಿಚ್ಛಿ ನಿನ್ನಿಚ್ಛಿ
ಅತ್ತಿ ಮಾವನ ಬೆಸಗೊಳ್ಳೊ । ಪತಿರಾಯನ
ಕೇಳಿ ತಿಳಿದಾರೆ ಯೋಚಿಸುವೆ ॥೬॥

ಅತ್ತೀನ ಬೆಸಗೊಂಡೆ ಮಾವನ ಬೆಸಗೊಂಡೆ
ಚಿಕ್ಕ ಮೈದುನರ ಬೆಸಗೊಂಡೆ ।ಬಾರವ್ವ
ಹೊರಡವ್ವ ತಂಗಿ ಮದುವೀಗೆ ॥೭॥

ಅವರಿ ಹರಿಯಲಾರದೆ ತೊಗರಿ ಕೊಯ್ಯಲಾರದೆ
ತವರ ಮ್ಯಾಗಳ ಗದ್ದಿ ಕೊಯ್ಯಲಾರದೆ । ಹ್ಯಾಂಗ
ಬರಲಿ ಅಣ್ಣಯ್ಯ ಮದುವೀಗೆ ॥೮॥

ಅವರಿ ಹರಿವವರ ಕೊಡುವೆ ತೊಗರಿ ಕೊಯ್ವರ ಕೊಡ್ವೆ
ತೆವರ ಮ್ಯಾಗಳ ಗದ್ದಿ ಕೊಯ್ಯೋರ । ಕೊಡುವೆ
ಹೊರಡವ್ವ ತಂಗೀ ಮದುವೀಗೆ ॥೯॥

ಮೇಲಿನ ಜನಪದ ಗೀತೆಯಲ್ಲಿ ಒಬ್ಬ ಜನಪದ ಸ್ತ್ರೀಯು ಅಣ್ಣನ ಮಾತಿನಿಂದ ಸಿಟ್ಟಾಗಿ ಗಂಡನ

ಮನೆಗೆ ಬರುತ್ತಾಳೆ. ಆಗ ಅಣ್ಣನು ತನ್ನ ಮಗನ ಮದುವೆಗೆ ಸಿದ್ಧತೆ ಮಾಡಿಕೊಳ್ಳುತ್ತಾನೆ. ಇದ್ದಕ್ಕಿದ್ದಂತೆಯೇ ಅಣ್ಣನ ಹೆಂಡತಿಗೆ ಹುಷಾರಿಲ್ಲದಂತೆ ಆಗಿ ಜೋತಿಷಿ ಹತ್ರ ಕೇಳಿಸ್ತಾನೆ. ಆಗ ಅವರು ನಿನ್ನ ತಂಗಿ ಉಸಿರು ಹಾಕಿ ಬೇಜಾರು ಆಗಿ ಗಂಡನ ಮನೆಗೆ ಹೋಗಿದ್ದಾಳೆ. ಮದುವೆಗೆ ನಿನ್ನ ತಂಗಿಯನ್ನು ಕರೆಸಿದರೆ ಸರಿ ಹೋಗುತ್ತದೆ ಎಂದರು. ಆವಾಗ ಅಣ್ಣ ಬಂಡಿ ಹೊಡಿಕೊಂಡು ತಂಗಿಯ ಮನೆಗೆ ಬಂದು ಏನ್ಮಾಡುತ್ತಿದ್ದೀಯ ತಂಗಿ ಎಂದು ವಿಚಾರಿಸಿದ. ಏನಿಲ್ಲ ಅಣ್ಣ ಊಟ ಮಾಡ್ತಿದ್ದೆ, ನಿನ್ನ ಮಾತು ಮನದಾಗ ನುಂಗುತಿದ್ದೀನಣ್ಣಾ ಎಂದು ಉತ್ತರಿಸಿದಳು. ಆವಾಗ ಅಣ್ಣ ನನ್ನ ಮಗನ ಮದುವೆಗೆ ಬಾರಮ್ಮ ಒಳ್ಳೆಯ ಬಟ್ಟೆಯನ್ನು ಕೊಡಿಸ್ತೀನಿ ಅಂದ. ಆಗ ತಂಗಿ ಮದುವೆಗೆ ಬರೋದು ನನ್ನಿಚ್ಚೆ ನಿನ್ನಿಚ್ಚೆ ಅಲ್ಲ ನನ್ನ ಅತ್ತಿ ಮಾವನ ಕೇಳು ಆ ಮೇಲೆ ಯೋಚಿಸುವೆ ಎಂದಳು. ಆಯ್ತಮ್ಮ ನಿಮ್ಮ ಅತ್ತೀನ ಕೇಳ್ತೀನಿ ಹೊರಡು ಮದುವಿಗೆ ಎಂದನು. ಆಗ ಒಲ್ಲದ ಮನಸ್ಸಿನಿಂದ ಆ ಜನಪದ ಸ್ತ್ರೀಯು ಅವರಿ ಹರಿಯೊರು ಇಲ್ಲ, ತೊಗರಿ ಕೊಯ್ಯೋರು ಇಲ್ಲ ಹ್ಯಾಂಗ ಬರಲಿ ಎಂದಳು. ಅವರಿ ಹರಿಯೋರು ತೊಗರಿ ಕೊಯ್ಯೋರ ಕೊಡುವೆ ಬಾ ಮದುವಿಗೆ ಎಂದು ಅಣ್ಣ ಉತ್ತರಿಸುವನು.

ಮೇಲಿನ ಜನಪದ ಗೀತೆಯಲ್ಲಿ ಅಣ್ಣ-ತಂಗಿಯ ಸಂಬಂಧ ಎಷ್ಟು ಅನ್ಯೋನ್ಯವಾಗಿದೆ ಎಂದು ನೋಡಬಹುದು. ತಂಗಿ ಬೇಜಾರಾದ್ರೆ ಯಾವ ರೀತಿಯ ತಾಪತ್ರಯಗಳು ಬರುತ್ತವೆ ಎಂಬುದನ್ನು ಜನಪದರು ಮನೋಜ್ಞವಾಗಿ ಹೇಳಿದ್ದಾರೆ. ಇನ್ನು ಮದುವೆಯಾದ ಹೊಸತರಲ್ಲಿ ಮಗಳನ್ನು ಗಂಡನ-ಮನೆಗೆ ಕಳಿಸುವಾಗ ತಾಯಿ ಹೀಗೆ ಹೇಳುವಳು.

"ಅತ್ತೀ ಮನಿಗ್ಹೋಗುವ ಮುತ್ತೈದೆ ಮಗಳಿಗೆ
ಮತ್ತೊಂದ್ಹೇಳೋದು ಮರೆತೇನ । ನನಮಗಳೇ
ಅತ್ತಿಗುತ್ತರ ಕೊಡಬೇಡ"

ತಾಯಿ ಮಗಳಿಗೆ ನೀನು ಗಂಡನ ಮನೆಗೆ ಹೊದಾಗ ಅತ್ತಿಯ ವಿರುದ್ದ ಮಾತಾಡಬೇಡ ಅವರ ಮನಸ್ಸಿಗೆ ನೋವನ್ನುಂಟು ಮಾಡಬೇಡ ಎಂದು ಬುದ್ದಿ ಹೇಳುವುದನ್ನು ಕಾಣಬಹುದಾಗಿದೆ. ಆಗ ಆ ಮಗಳು ತನ್ನ ತಾಯಿಯ ಕುರಿತು ಹೀಗೆ ಹೇಳುವಳು.

"ಕಣ್ಣು ಕಾಣುವ ತನಕ
ಬೆನ್ನು ಬಾಗುವ ತನಕ
ತಾಯಿ ಇರಲಿ ನನಗೆ ತವರಿರಲಿ,"

ಗಂಜಿಯ ಕುಡಿದರೂ ಗಂಡನ ಮನೆ ಲೇಸು
ಅಂದಾವ ಮ್ಯಾಲೆ ಪಲ್ಲಕ್ಕಿ ಹಾಕಿದರೂ
ಹಂಗಿನ ತವರಾ ಮನೆ ಸಾಕು"

ಮಗಳು ನನಗೆ ಕಣ್ಣು ಕಾಣುವವರೆಗೂ ನನಗೆ ಬೆನ್ನು ಬಾಗುವವರೆಗೂ ಅಂದರೆ ವಯಸ್ಸು ಆಗುವ ವರೆಗೂ ತವರಿರಬೇಕು ಎಂದು ಉದ್ಗರಿಸುವಳು. ಮುಂದುವರೆದು ತನ್ನ ಸಂಕಟವನ್ನು ಬಿತ್ತರಿಸುವಳು. ಗಂಜಿಯ ಕುಡಿದರೂ ಸಹ ನನ್ನ ಗಂಡನ ಮನೆಯೇ ಗತಿ ಎನಗೆ ಪಲ್ಲಕ್ಕಿಯ ಮೇಲೆ ಕೂರಿಸಿದರೂ ಅಂತಹ ಹಂಗಿನ ತವರು ನನಗೆ ಬೇಕಿಲ್ಲ ಎಂದು ತಿರಸ್ಕಾರದ ಮಾತನ್ನು ಹೇಳುವಳು .

ಜೋಗುಳದ ಹಾಡುಗಳು: ಜೋಗುಳದ ಹಾಡುಗಳಿಗೆ ಜನಪದ ಸಾಹಿತ್ಯದಲ್ಲಿ ವಿಶೇಷವಾದ ಸ್ಥಾನವಿದೆ ಮಗುವಿನ ಲಾಲನೆ, ಪಾಲನೆ, ಪೋಷಣೆ ಮುಂತಾದವುಗಳ ಸಂಪೂರ್ಣವಾಗಿ ಜೋಗುಳದ ಹಾಡಿನಲ್ಲಿಯೇ ಕಾಣುತ್ತೇವೆ. ತಾಯಂದಿರು ಮಕ್ಕಳನ್ನು ಸಂತೋಷ ಪಡಿಸಲು,ಅಳುವುದನ್ನು ನಿಲ್ಲಿಸಲು, ಸಮಾಧಾನಗೊಳಿಸಲು, ನಿದ್ರೆ ಮಾಡಿಸಲು, ವಿಶೇಷ ಸಂದರ್ಭದಲ್ಲಿ ಜೋಗುಳದ ಹಾಡುಗಳು ಮೂಡಿ ಬಂದಿವೆ. ಇಂತಹ ಹಾಡುಗಳಿಂದ ಮಗು ಒಂದು ಕ್ಷಣ ತನ್ನನೇ ತಾನು ಮರೆತು ಅಳುವುದನ್ನು ನಿಲ್ಲಿಸಿ ನಿದ್ರೆಗೆ ಜಾರುವುದುಂಟು .ಏಕೆಂದರೆ ಜನಪದರಲ್ಲಿ ಆ ಶಕ್ತಿ ಉಂಟು. ಅವರ ಹಾಡಿನಲ್ಲಿ ಅಂತಹ ಅದ್ಬುತ ಚಮತ್ಕಾರವನ್ನು ಕಾಣಬಹುದಾಗಿದೆ. ಜನಪದರ ಬಾಳಿನ ಸಹಜ ಕ್ರಿಯೆಯಾಗಿದೆ. ಮಗುವಿನ ಬಾಲ್ಯದ ವಿವಿಧ ಹಂತಗಳನ್ನು ಹೃದಯಂಗಮವಾಗಿ ಹಾಡಿದ್ದಾರೆ .

"ಆಡಿ ಬಾ ನನ ಕಂದಾ ಅಂಗಾಲ ತೊಳೆದೇನಾ
ತೆಂಗಿನ ಕಾಯಿ ತಿಳಿನೀರ । ತಕ್ಕೊಂಡು
ಬಂಗಾರ ಮೋರೆ ತೊಳೆದೇನು"

ಮೇಲಿನ ತ್ರಿಪದಿಯಲ್ಲಿ ತಾಯಿಗೆ ತನ್ನ ಮಗು ಬಂಗಾರವಿದ್ದಂತೆ ತನ್ನ ಮಗು ಆಟವಾಡಿ ಬಂದಾಗ ಮುಖದ ಮೇಲಿನ ಧೂಳನ್ನು ತೆಂಗಿನ ಕಾಯಿಯ ತಿಳಿನೀರಿನಿಂದ ತೊಳಿತೀನಿ ಎಂಬ ಹೋಲಿಕೆ ಅದ್ಬುತವಾದದ್ದು .

"ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿ ಹುಬ್ಬು ಬೇವಿನೆಸಳಂಗ ।ಕಣ್ ನೋಟ
ಶಿವನ ಕೈ ಅಲಗು ಹೊಳೆದಂಗ"

ತನ್ನ ಮಗುವು ಯಾವುದೇ ಕಾರಣದಿಂದ ಅಳುವಾಗ ಆ ಮಗುವಿನ ಚಿತ್ರಣವನ್ನು ಮೇಲಿನ ತ್ರಿಪದಿಯಲ್ಲಿ ಕಾಣಬಹುದಾಗಿದೆ. ಕಂದನನ್ನು ವರ್ಣಿಸುವ ಬಗ್ಗೆ ಇಲ್ಲಿ ಮನೋಜ್ಞವಾಗಿದೆ.

"ಲಾಲೀಯ ಹಾಡಿದರೆ ಲಾಲಿಸಿ ಕೇಳ್ಯಾನು
ತಾಯ ಹಂಬಲ ಮರೆತಾನು । ಕಂದಯ್ಯ
ತೋಳ ಬೇಡ್ಯಾನು ತಲೆದಿಂಬ"

ತಾಯಿಯ ಲಾಲಿಯಿಂದ ತಾಯಿಯ ಹಂಬಲವನ್ನು ಸಹ ಮರೆತು ತಾಯಿಯ ತೋಳನ್ನು ತಲೆದಿಂಬಾಗಿ ಮಾಡಿ ಮಲಗಿಕೊಳ್ಳುವನು ಎಂದು ಇಲ್ಲಿ ಚಿತ್ರಿಸಲಾಗಿದೆ.

"ನನ ಕಂದ ಮುದ್ದು ಹೊನ್ನ ತಾವರೆ ಮುದ್ದು
ಹಣ್ಣುಳ್ಳ ಗಿಡಕೆ ಗಿಣಿ ಮುದ್ದು । ಕಂದವ್ವ
ನೀ ಮುದ್ದು ನನ್ನ ಬಳಗಕ್ಕೆ"

ಮೇಲಿನ ಗೀತೆಯಲ್ಲಿ ಸ್ತ್ರೀಯು ತುಂಬಾ ಹೋಲಿಕೆಯನ್ನು ಕೊಟ್ಟಿದ್ದಾಳೆ ಹೂವಿನಲ್ಲಿಯೇ ತಾವರೆ ಹೂವು ಅತ್ಯಂತ ಸೊಬಗನ್ನು ಹೊಂದಿರುವಂತಹದ್ದು.ಅದು ಎಲ್ಲರಿಗೂ ಇಷ್ಟ .ಅದೇ ರೀತಿ ಒಂದು ಮರದಲ್ಲಿ ಹಣ್ಣುಗಳಿದ್ದರೆ ಆ ಹಣ್ಣುಗಳನ್ನು ತಿನ್ನಲು ಗಿಳಿಗಳು ಬಂದರೆ ಬಹಳಷ್ಟು ಸುಂದವಾಗಿರುತ್ತದೆ. ಹಣ್ಣಿನ ಗೊಂಚಲಕ್ಕೆ ಗಿಳಿಗಳು ಇದ್ದ ಹಾಗೆ ಎಂದು ಹಾಡಿ ಹೊಗಳುವಳು.

"ಬಾಲ ಹನುಮನ ಮುಂದೆ ಬಾಗಿ ಚೆಂಡಾಡ್ಯಾನು
ಬಾಳವೊಲಿ ಕಿವಿಯ ನನ ಬಾಲ ಕಂಡರೆ
ಬಾಲೇರು ಬಸರು ಬಯಸ್ಯಾರು

ಮೇಲಿನ ಸಾಲುಗಳಲ್ಲಿ ತಾಯಿಯು ತನ್ನ ಮಗುವಿನ ಚೆಲುವನ್ನು ವರ್ಣಿಸುವಳು "ಬಾಲ್ಯಾರು ಬಸಿರು ಬಯಸ್ಯಾರು" ಎಂಬ ಮಾತಿನಲ್ಲಿ ಆ ಮಗುವಿನ ಅಂದ ಚೆಂದ ಚೆಲುವು ಆಕರ್ಷಣೆಗಳೆಲ್ಲಾ ಇಲ್ಲಿ ಪ್ರತಿಧ್ವನಿಸಿವೆ.

"ಹಾಲ ಬೇಡುತ್ತಾನು ಕೋಲು ಬೇಡಿ ಕುಣಿದಾನು
ಮೊಸರ ಬೇಡಿ ಕೆಸರ ತುಳಿದಾನು । ಕಂದಯ್ಯನ
ಕುಸಲದ ಗೆಜ್ಜೆ ಕೆಸರಾಯ್ತೋ"

ನನ್ನ ಮಗು ಹಾಲನ್ನು ಬೇಡುತ್ತಾನೆ. ಕೋಲನ್ನು ಬಯಸುತ್ತಾನೆ. ಮೊಸರು ಕೂಡ ಬೇಕೆಂದು ಕೆಸರು ತುಳಿಯುತ್ತಾ ಹಠ ಹಿಡಿದಿದ್ದಾನೆ. ಹೀಗೆ ಕೆಸರು ತುಳಿಯುವಾಗ ತನ್ನ ಕಾಲಲ್ಲಿ ಹಾಕಿದ ಗೆಜ್ಜೆಗಳು ಕೆಸರಾದವೋ ಎಂಬ ಅಭಿಪ್ರಾಯವನ್ನು ನಾವಿಲ್ಲಿ ಕಾಣಬಹುದು.

"ತೊಟ್ಟಿಲೊಳಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗವನೆ । ಕಂದಯ್ಯಗೆ
ಮುತ್ತಿನ ದೃಷ್ಟಿ ಇಳಿಸೇನು"

ಆಗ ತಾನೇ ಹುಟ್ಟಿದ ಮಗುವನ್ನು ತಾಯಿಯು ದಿಟ್ಟಿಸಿ ನೋಡುತ್ತಾ ನೋವನ್ನು ಅನುಭವಿಸಿದರೂ ಸಹ ಆ ಮಗುವಿನ ದೇಹಕ್ಕೆಲ್ಲಾ ಎಣ್ಣೆಯನ್ನು ಹಚ್ಚಿ ಸ್ನಾನವನ್ನು ಮಾಡಿಸಿ ತೊಟ್ಟಿಲೊಳಗೆ ಹಾಕಿದಾಗ ಆ ಮಗುವು ಆಕೆಗೆ ಮುತ್ತಿನಂತೆ ಗೋಚರಿಸುತ್ತದೆ. ಆಗ ಮಗುವು ಹೊಟ್ಟೆಯ ಮೇಲೆ ಮಾಡಿ ಸುಖನಿದ್ರೆಯಲ್ಲಿ ಜಾರುತ್ತದೆ ಎಂಬ ಅಭಿಪ್ರಾಯವನ್ನು ನಾವಿಲ್ಲಿ ಕಾಣಬಹುದಾಗಿದೆ

ಇತ್ತೀಚಿನ ದಿನಮಾನಗಳಲ್ಲಿ ಜನಪದ ಸ್ತ್ರೀಯರೂ ಕೂಡ ಜೋಗುಳದ ಹಾಡುಗಳನ್ನು ತಮ್ಮದೇ ಶೈಲಿಯಲ್ಲಿ ಹೇಳುವರು.

ಹಾಡು:- ಮಕ್ಕಳ ಹಾಡು

"ದೂರಿ ದೂರಿ ದೂರಿ ಆಡಪ್ಪ
ದೂರಿ ದೂರಿ ದೂರಿ ಕೇಳಪ್ಪ
ದೂರಿ ದೂರಿ ದೂರಿ ನಿನ್ನ ಕಣ್ಣು ಕಾಮಣ್ಣ
ದೂರಿ ದೂರಿ ದೂರಿ ನಿನ್ನ ಮೂಗು ಮಲ್ಲೇ ಹೂ
ದೂರಿ ದೂರಿ ದೂರಿ ನಿನ್ನ ತುಟಿ ತೊಂಡೆ ಹಣ್ಣು
ದೂರಿ ದೂರಿ ದೂರಿ ನಿನ್ನ ಹಲ್ಲು ಪಲ್ಲಕ್ಕಿ
ದೂರಿ ದೂರಿ ದೂರಿ ನಿನ್ನ ಹಲ್ಲು ನಾರಾಯಣ
ದೂರಿ ದೂರಿ ದೂರಿ ನಿನ್ನ ತೊಳು ಬಾಳೆಕಂಬ
ದೂರಿ ದೂರಿ ದೂರಿ ನಿನ್ನ ಅಂಗಳು ತಿಂಗಳ ಮಾವ
ದೂರಿ ದೂರಿ ದೂರಿ ನಿನ್ನ ಬೆನ್ನು ಭೀಮಣ್ಣ
ದೂರಿ ದೂರಿ ದೂರಿ ನಿನ್ನ ಹೊಟ್ಟೆ ಪುಟ್ಟಣ್ಣ" (ಶ್ರೀಮತಿ ಎನ್.ಪಿ. ರತ್ನ)

ಮೇಲಿನ ಗೀತೆಯಲ್ಲಿ ಒಬ್ಬ ಜನಪದ ಸ್ತ್ರೀಯು ತನ್ನ ಮಗುವಿನ ಅಂಗಾಂಗಗಳನ್ನು ಬಹು ವಿಧದಲ್ಲಿ ವರ್ಣಿಸಿದ್ದಾಳೆ "ಅಳ್ಳುಳ್ಳಾಯ" ಎನ್ನುತ್ತಾ ಮಗುವು ಅಳುವುದನ್ನು ಕ್ಷಣಾರ್ಧದಲ್ಲಿ ನಿಲ್ಲಿಸಿ ಬಿಡುತ್ತಾಳೆ. ಹೀಗೆ ಒಬ್ಬ ಜನಪದ ಸ್ತ್ರೀಯು ಜೋಗುಳದ ಪದಗಳನ್ನು ಜನಪದ ಸಾಹಿತ್ಯ ರಾಶಿಗೆ ಎರಕವನ್ನು ಹೊಯ್ದಿದ್ದಾಳೆ ಎಂದು ಹೇಳಬಹುದು.

೦೪ ಕುಣಿತದ ಹಾಡುಗಳು

ಜನಪದ ಕುಣಿತಗಳು ಜನಪದರ ಅವಿಭಾಜ್ಯ ಅಂಗಗಳಾಗಿವೆ. ವಿಶೇಷ ಸಂದರ್ಭಗಳಾದ ಹಬ್ಬ ಹರಿದಿನಗಳಲ್ಲಿ, ಮದುವೆ ಸಂದರ್ಭಗಳಲ್ಲಿ, ಜಾತ್ರೆಯ ಸಂದರ್ಭಗಳಲ್ಲಿ ಈ ವಿಶಿಷ್ಟ ಕಲೆಗಳನ್ನು ಪ್ರದರ್ಶಿಸುವುದುಂಟು. ವಿವಿಧ ಪೋಷಾಕುಗಳನ್ನು ಧರಿಸಿಕೊಂಡು ನೋಡುಗರ ಮನಮುಟ್ಟುವಂತೆ ಮನೋಜ್ಞವಾಗಿ ಅಭಿನಯಿಸುತ್ತಾರೆ. ಅವುಗಳಲ್ಲಿ ಹೆಚ್ಚಾಗಿ ಕೋಲಾಟಗಳು ಮತ್ತು ಡೊಳ್ಳಿನ ಕುಣಿತಗಳು ಮನೋಜ್ಞವಾಗಿರುತ್ತವೆ

೦೧ ಕೋಲಾಟ: ಕೋಲಾಟ ಪ್ರದರ್ಶನವು ನೃತ್ಯ ಪ್ರಧಾನವಾದ ಕಲೆಗಳಲ್ಲಿ ಒಂದಾಗಿದೆ. ಬಹುಶಃ ಕೋಲಾಟ ಇಲ್ಲದ ಊರುಗಳೇ ಇಲ್ಲ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಇದು ಹೆಚ್ಚು ಪ್ರಚಲಿತದಲ್ಲಿದೆ. ಸುಗ್ಗಿಯ ದಿನಗಳಂತೂ ಇದರ ಸೊಬಗನ್ನು ನೋಡವುದು ಇನ್ನೂ ಚೆಂದ. ದಿನವೆಲ್ಲಾ ದುಡಿದು ಬಂದು ದೇಹಕ್ಕೆ ದಣಿವಾದಾಗ ರಾತ್ರಿಗಳಲ್ಲಿ ಇದನ್ನು ಹಾಡುವುದು

ಮತ್ತು ನೃತ್ಯ ಮಾಡುವುದು ಎಂತಹವರ ಮನಸ್ಸನ್ನು ಮುದಗೊಳಿಸಬಲ್ಲದು. ಕೈಯಲ್ಲಿ ತಮಗೆ ಅನುಕೂಲವಾಗಿರುವಂತೆ ಕಟ್ಟಿಗೆಯ ಕೋಲುಗಳನ್ನು ಹಿಡಿದು ಅವುಗಳಿಗೆ ವಿವಿಧ ಬಣ್ಣದ ರಿಬ್ಬನ್‌ಗಳನ್ನು ಕಟ್ಟಿರುತ್ತಾರೆ ಕಣ್-ಕಣ್ ಸದ್ದು ಮಾಡುವ ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಹಾಡುಗಳನ್ನು ಹಾಡುತ್ತಾ ಕುಣಿಯುತ್ತಾ ಹೇಳುವ ಪರಿ ಬಹಳಷ್ಟು ಆಕರ್ಷಣೀಯವಾದುದು. ಹ್ಯಾರಡ ಗ್ರಾಮದಲ್ಲಿ ಈ ಕಲೆಯು ಬಹಳ ವರ್ಷಗಳಿಂದ ನಡೆಯುತ್ತಾ ಬಂದಿದೆ.

ಹ್ಯಾರಡಾ ಗ್ರಾಮದಲ್ಲಿ ಚಿಕ್ಕಮಕ್ಕಳೂ ಸಹ ಕೋಲಾಟ ಆಡುವುದನ್ನು ನಾವು ಕಾಣಬಹುದಾಗಿದೆ. ಈ ಪರಂಪರೆಯು ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಇಲ್ಲಿಯ ಜನಪದರು ಸ್ವತಃ ತಾವೇ ಹಾಡುಗಳನ್ನು ರಚನೆ ಮಾಡಿ ಅದನ್ನು ಕೋಲಾಟದಲ್ಲಿ ಹಾಡಿ ನೃತ್ಯ ಮಾಡುವರು. ಗ್ರಾಮದ ಪ್ರಮುಖ ದೈವಗಳ ಮೇಲೆ, ಜೀವನದ ಪ್ರಮುಖ ಘಟ್ಟಗಳ ಮೇಲೆ, ಹೆಣ್ಣು ಮಕ್ಕಳ ಮೇಲೆ, ತಂದೆ-ತಾಯಿರ ಮೇಲೆ, ಅಕ್ಕ-ತಂಗಿಯರ ಮೇಲೆ ಹೀಗೆ ವಿವಿಧ ವಸ್ತುಗಳು ಹಾಗೂ ವ್ಯಕ್ತಿಗಳ ಮೇಲೆ ಹಾಡುಗಳನ್ನು ರಚಿಸಿ ಹಾಡುವ ಕಲೆಯನ್ನು ಹ್ಯಾರಡಾ ಜನಪದರು ಹೊಂದಿದ್ದಾರೆ. ಗ್ರಾಮದ ವಿಶೇಷ ಸಂದರ್ಭಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುವರು. ಕೋಲಾಟ ನೃತ್ಯವನ್ನು ಪ್ರದರ್ಶಿಸುವವರ ವೇಷಭೂಷಣಗಳು ವಿಶೇಷದಿಂದ ಕೂಡಿರುತ್ತವೆ. ಏರುಗಚ್ಚಿ, ಒಂದೇ ಬಣ್ಣದ ಮೂರುಗುಂಡಿಯ ಅಂಗಿ, ಸೊಂಟಕ್ಕೆ ವಸ್ತ್ರ, ತೆಲೆಗೊಂದು ರುಮಾಲು, ಹಣೆಗೆ ವಿಭೂತಿ, ಕಾಲಲ್ಲಿ ಗೆಜ್ಜೆ, ಮುಂಗೈಗೆ ಬಣ್ಣ ಬಣ್ಣದ ರಿಬ್ಬನ್, ಕೋಲುಗಳಿಗೆ ವಿವಿಧ ರೀತಿಯ ಬಣ್ಣಗಳ ಲೇಪನ ಇವೆಲ್ಲವುಗಳನ್ನು ಧರಿಸಿ "ಥಯ್ಯ" "ಉಡುದಯ್ಯ" ಎಂಬ ನುಡಿಗಟ್ಟನ್ನು ಹೇಳುವ ಮೂಲಕ ಈ ನೃತ್ಯವನ್ನು ಪ್ರದರ್ಶಿಸುವರು.

ಈ ನೃತ್ಯವು ಜಾತ್ಯಾತೀತ ನೃತ್ಯವಾಗಿದೆ. ಗ್ರಾಮದ ಎಲ್ಲಾ ಸಮುದಾಯದ ವ್ಯಕ್ತಿಗಳು ಈ ನೃತ್ಯವನ್ನು ಪ್ರದರ್ಶಿಸುವರು. ಹ್ಯಾರಡಾದಲ್ಲಿ ಕೋಲಾಟ ನೃತ್ಯದಲ್ಲಿ ಪ್ರಸಿದ್ಧರಾದವರು ಮಲ್ಕಪ್ಪನವರ ಬಸಪ್ಪ, ಕಟಿಗೇರ ಲಕ್ಷ್ಮಪ್ಪ, ವಜ್ಜೀರಪ್ನರ ದ್ಯಾಮಪ್ಪ, ಕುಂಚೂರು ಅಂಜಿನೆಪ್ಪ ಇತ್ಯಾದಿ. ಇವರುಗಳು ಕ್ಷಣಾರ್ಧದಲ್ಲಿ ಹಾಡನ್ನು ರಚನೆ ಮಾಡಿ ನೃತ್ಯ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಹಾಡು : ಗರ್ಭಿಣಿ ಸ್ತ್ರೀಯ ಹಾಡು

ಬಾರಮ್ಮ ಬಾ ಸಕಿಯೇ ನನಿಗೊಂದಂದೇ ಬವಿಕೆಮ್ಮ
ಬಾರಮ್ಮ ಬಾ ಸಕಿಯೇ ನನಿಗೊಂದಂದೇ ಬವಿಕೆಮ್ಮ ॥ಪ॥

ಒಂದೆಂಬೋ ತಿಂಗಳಿಗೆ ನಾರಿ ಒಂದೇನಾ
ಬಗಸಿದಳಾ ನಾರಿ ಒಂದೇನಾ
ಬಗಸಿದಳಾ..... ಒಂದೇ ಹೊಳಕಿ ಚಿಗುರೆಲೆಯೋ
ನನಿಗೊಂದಂದೇ ಬವಿಕೆಮ್ಮ ॥ಪ॥

ಎರಡೆಂಬೋ ತಿಂಗಳಿಗೆ ನಾರಿ ಎರಡನಾ
ಬಗಸಿದಳಾ ನಾರಿ ಎರಡೇನಾ
ಬಗಸಿದಳಾ.....ಎರಿಯ ಹೊಲದಾನ ಎಳಿಸೌತೋ
ನನಿಗೊಂದಂದೇ ಬವಿಕೆಮ್ಮ ॥ಪ॥

ಮೂರೆಂಬೋ ತಿಂಗಳಿಗೆ ನಾರಿ ಮೂರೇನಾ
ಬಗಸಿದಳಾ ನಾರಿ ಮೂರೇನಾ
ಬಗಸಿದಳಾ..... ಮೂಡಲ ದೇಸದ ಮಗಿ ಮಾವೋ
ನನಿಗೊಂದೊಂದೇ ಬವಿಕೆಮ್ಮ ॥ಪ॥

ನಾಕೆಂಬೋ ತಿಂಗಳಿಗೆ ನಾರಿ ನಾಕೇನ
ಬಗಸಿದಾಳಾ ನಾರಿ ನಾಕೇನ
ಬಗಸಿದಳಾ..... ಕಕ್ಕಿಯ ಹಣ್ಣು ಕೈಯ ತುಂಬೋ
ನನಿಗೊಂದೊಂದೇ ಬವಿಕೆಮ್ಮ ॥ಪ॥

ಐದೆಂಬೋ ತಿಂಗಳಿಗೆ ನಾರಿ ಐದೇನಾ
ಬಗಸಿದಳಾ ನಾರಿ ಐದೇನಾ
ಬಗಸಿದಳಾ.....ಕೊಯ್ದ ಮಲ್ಲಿಗಿ ನೆಲುದಂಡ್ಯೋ
ನನಿಗೊಂದೊಂದೇ ಬವಿಕೆಮ್ಮ ॥ಪ॥

ಆರೆಂಬೋ ತಿಂಗಳಿಗೆ ನಾರಿ ಆರೇನಾ
ಬಗಸಿದಳಾ ನಾರಿ ಆರೇನಾ
ಬಗಸಿದಳಾ..... ಆರಿದಾ ಬಾನಾ ಕೆನಿ ಮಸುರೋ
ನನಿಗೊಂದೊಂದೇ ಬವಿಕೆಮ್ಮ ॥ಪ॥

ಏಳೆಂಬೋ ತಿಂಗಳಿಗೆ ನಾರಿ ಏಳೇನಾ
ಬಗಸಿದಳಾ ನಾರಿ ಏಳೇನಾ
ಬಗಸಿದಳಾ..... ಹೇಳಿ ಕಳುವ್ಯಾಳೋ ತವರಿಗೇ
ನನಿಗೊಂದೊಂದೇ ಬವಿಕೆಮ್ಮ ॥ಪ॥

ಎಂಟೆಂಬೋ ತಿಂಗಳಿಗೆ ನಾರಿ ಏಂಟೇನಾ
ಬಗಸಿದಳಾ ನಾರಿ ಏಂಟೇನಾ
ಬಗಸಿದಳಾ.....ಸೊಂಟ ಯಾಲಕ್ಕಿ ಪುಡಿ ಬೆಲ್ಲೋ
ನನಿಗೊಂದೊಂದೇ ಬವಿಕೆಮ್ಮ ॥ಪ॥

ಒಂಭತ್ತು ತಿಂಗಳಿಗೆ ನಾರಿ ಮತ್ತೇನ
ಬಗಸಿದಳಾ ನಾರಿ ಮತ್ತೇನಾ
ಬಗಸಿದಳಾ..... ತುಂಬಿ ಬಂದಾವು ದಿನುಮಾನ
ನನಿಗೊಂದೊಂದೇ ಬವಿಕೆಮ್ಮಾ ॥ಪ॥

ಹತ್ತೆಂಬೋ ತಿಂಗಳಿಗೆ ನಾರಿ ಮತ್ತೇನ
ಬಗಸಿದಳಾ ನಾರಿ ಮತ್ತೇನ
ಬಗಸಿದಳಾ..... ಹೆತ್ತವಿಲ್ಲಲ್ಲೋ ಜಲುಮಕ್ಕೋ
ನನಿಗೊಂದೊಂದೇ ಬವಿಕೆಮ್ಮ ॥ಪ॥ (ಅಂಜಿನಪ್ಪ ಕುಂಚೂರು, ಕಟಿಗೇರ ಲಕ್ಷ್ಮಪ್ಪ)

ಹಾಡು:– ಜೀವನದ ನೀತಿ ಸಾರುವ ಹಾಡು
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ ॥ಪ॥

ಮೈಲಾರು ಲಿಂಗಣ್ಣ ಮಲ್ಡೆಲ್ಲಾ ಮಲ್ಲಿಗೆ
ದಂಡದು ಕೋಲೇ ಇಳುದಾವು ನಾವೇ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ
ದಂಡಿಗೆ ಹೊಗತೀನಿ ಗಿಂಡೀಲೆ ನೀರು ತಾರೆ
ಅರಸಿ ಮಾಳವ್ವ ನಿನ ಪುರುಷರೆಲ್ಲೊಗ್ಯಾರೇ
ಅರುಶಿಣ ಚೀಲ ಬಲಗೈಯ
ಕೋಲೋರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ಅರುಶಿಣ ಏ ಚೀಲ ಬಲಗೈಯ ನಿಂಗಣ್ಣ
ಪರುಸ್ಯಾಗ ಹೋಗಿ ಏ ಬರುವೇನು
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ದುಡ್ಡು ಕೊಡತೇನೆಂದು ದೊಡ್ಡ ದೊಡ್ಡ ಮಾತಾಡಿ
ಒಡ್ಡಾರು ಗೇರೆ ಏ ಅಡಿಗ್ಯಾನ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ಒಡ್ಡರು ಗೇರ್ಯಾಗ ಅಡಗಿ ನಿಂಗಣ್ಣನು
ಗಡ್ಡವ ಹಿಡಿದು ಏ ಎಳೆದು ತರ್ಯಾ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ಬಿಲ್ಲಿ ಕೊಡುತೇನೆಂದು ಬಲ್ಲಂಗ ಮಾತಾಡಿ
ಗೊಲ್ಲರು ಗೇರ್ಯಾಗ ಏ ಅಡಿಗ್ಯಾನ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ಕಾಸು ಕೊಡತೀನೆಂದು ಬಾಸಿಗೆ ತಪ್ಪದೇ
ದಾಸರು ಗೇರ್ಯಾಗ ಏ ಅಡಿಗ್ಯಾನ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ದಾಸರು ಗೇರ್ಯಾಗ ಅಡಗಿ ನಿಂಗಣ್ಣನ
ಮೀಸಿಯ ಹಿಡಿದು ಏ ಎಳದು ತರ್ಯಾ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ಉಚ್ಚಂಗಿ ಕೆಂಚಮ್ಮ ಉಟ್ಯಾಳ ಉಡಿಗೀಯ
ತೊಟ್ಟಾಳ ನಾಗಾಭರುಣವೇ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ

ತೊಟ್ಟಾಳ ನಾಗಭರಣ ಉಚ್ಚಂಗೆಮ್ಮ
ಒಕ್ಕಾಳ ತನ್ನ ಏ ಸದರಿಪ
ಕೋಲೇರನ್ನದು ಕೋಲೆಣ್ಣ
ಏ ಮುದ್ದು ಏ ಕೋಲು ಕೋಲೆಣ್ಣ
ಯದತ್..... ಸದದ್ ದಿಮಿತಾ..... (ಅಂಜಿನಪ್ಪ ಕುಂಚೂರು, ಕಟಿಗೇರ ಲಕ್ಷ್ಮಪ್ಪ)

ಹಾಡು:– ಸ್ತ್ರೀ ದೈವಗಳ ಹಾಡು
ಕೋಲು ಕೋಲಿನ ಮುತ್ತಿನ ಕೀಲ ಮೇಲಿನ
ಏನು ಹೇಳಲೋ ಹುಡುಗರು ಒಯ್ಯೋ ಮಾಲಿನ ॥ಪ॥

ಶಹರ ಹ್ಯಾಡಲ ಒಳ್ಳ ಧೀರ ಮಲಿಯಮ್ಮ
ಒಳ್ಳೆ ಸತ್ತುಳ್ಳ ಮಲಿಯಮ್ಮ
ಕರುಣವಿರಲಿ ನಮ್ಮ ಮೇಲೆ ಕೈಯ ಮುಗಿದೇವಾ
॥ಕೋಲು ಕೋಲಿನ॥

ಶಹರ ಹುಲಿಕಟ್ಟಿ ಒಳ್ಳೆ ಧೀರ ಲಕ್ಕಮ್ಮ
ಒಳ್ಳೆ ಸತ್ತುಳ್ಳ ಲಕ್ಕಮ್ಮ
ಕರುಣವಿರಲಿ ನಮ್ಮ ಮೇಲೆ ಕೈಯ ಮುಗಿದೇವಾ
॥ಕೋಲು ಕೋಲಿನ॥

ಶಹರ ಹಾವನೂರ ಒಳ್ಳೆ ಧೀರ ದ್ಯಾಮಮ್ಮ
ಒಳ್ಳೆ ಸತ್ತುಳ್ಳ ದ್ಯಾಮಮ್ಮ
ಕರಣವಿರಲಿ ನಮ್ಮ ಮೇಲೆ ಕೈಯ ಮುಗಿದೇವಾ
॥ಕೋಲು ಕೋಲಿನ॥

ಶಹರ ದಾವಣಗೇರಿ ಒಳ್ಳೆ ಧೀರ ದುಗ್ಗಮ್ಮ
ಒಳ್ಳೆ ಸತ್ತುಳ್ಳ ದುಗ್ಗಮ್ಮ
ಕರುಣವಿರಲಿ ನಮ್ಮ ಮೇಲೆ ಕೈಯ ಮುಗಿದೇವಾ
॥ಕೋಲು ಕೋಲಿನ॥(ಅಂಜಿನಪ್ಪ ಕುಂಚೂರು, ಕಟಿಗೇರ ಲಕ್ಷ್ಮಪ್ಪ)

ಹಾಡು :- ಗ್ರಾಮೀಣ ಮಹಿಳೆ ಕುರಿತು ಹಾಡು
ಆ ಊರು ಈ ಊರು ಜೋಗಿ ಜಂಗಮನೂರು
ನೀರಿಲ್ಲದೂರು ನರಗುಂದೋ ರಾಜಣ್ಣ
ನೀರಿಲ್ಲದೇ ಇರುವ ನರಗುಂದದುಡಿಗ್ಯಾರ
ಬಣ್ಣದ ಸಿಂಬಿ ಬರಿಗೊಡನೋ ರಾಜಣ್ಣ

ಬಣ್ಣದು ಏ ಸಿಂಬಿ ಬರಿಗೊಡ ಹೊತಗೊಂಡು

ಉಸಿರೆಂದು ಬಾವಿ ಇಳಿದಾಳೋ ರಾಜಣ್ಣ

ಬಾವಿಯ ಇಳಿದಾಳು ಎಡ ಬಲ ನೋಡ್ಯಾಳು
ಏಡ ಬಲ ನೋಡ್ಯಾಳು ಕೊಡಗಳ ತುಂಬ್ಯಾಳು
ಹೊರ್ಸು ಬಾ ಎಂದು ಕರೆದಾಳೋ ರಾಜಣ್ಣ
ಕೊಡಗಳ ಹೊರ್ಸಿದ್ರೆ ನನಗೇನ ಕೊಡತೀದಿ
ಮುತ್ತಿನುಂಗುರ ಬೆರಳಿಗೋ ರಾಜಣ್ಣ

ಮುತ್ತಿನ ಉಂಗುರ ಬೆಲೆ ಮಾಡಿ ನೋಡಿದ್ರ

ಸವನಾಗಿ ಸವನೂರುಂಟೋ ರಾಜಣ್ಣ

ಯದತ್.....ಸದದ್ ದಿಮಿತಾ..... (ಅಂಜಿನಪ್ಪ ಕುಂಚೂರು, ಕಟಿಗೇರ ಲಕ್ಷ್ಮಪ್ಪ)

ಮೇಲಿನ ಹಾಡುಗಳು ಇಲ್ಲಿಯ ಜನಪದರ ಅನುಭವದ ಮೂಸೆಯಲ್ಲಿ ಮೂಡಿರುವಂತಹವು. ಮೇಲಿನ ಗರ್ಭಿಣಿ ಸ್ತ್ರೀಯ ಹಾಡಿನಲ್ಲಿ ಒಬ್ಬ ಜನಪದ ಗರ್ಭಿಣಿ ಸ್ತ್ರೀಯು ತನ್ನ ಒಂಭತ್ತು ತಿಂಗಳಿನಲ್ಲಿ ಪ್ರತಿಯೊಂದು ತಿಂಗಳಿನ ಆಕೆಯ ಬಯಕೆಯನ್ನು ಇಲ್ಲಿ ಅನಾವರಣ ಮಾಡಲಾಗಿದೆ. ಮೊದಲನೆಯ ತಿಂಗಳಿನಲ್ಲಿ ಚಿಗುರೆಲೆಯನ್ನು ತಿನ್ನುವ ಬಯಕೆ, ಎರಡನೇಯ ತಿಂಗಳಿನಲ್ಲಿ ಎಳೆ ಸೌತೆಕಾಯಿ ತಿನ್ನುವ ಬಯಕೆ, ಮೂರನೇಯ ತಿಂಗಳಿನಲ್ಲಿ ಮಾವಿನ ಹಣ್ಣನ್ನು ತಿನ್ನುವ ಬಯಕೆ, ನಾಲ್ಕನೇಯ ತಿಂಗಳಿನಲ್ಲಿ ಕಕ್ಕಿಯ ಹಣ್ಣನ್ನು ತಿನ್ನುವ ಬಯಕೆ, ಐದನೇಯ ತಿಂಗಳಿನಲ್ಲಿ ಮಲ್ಲಿಗೆ ಹೂವನ್ನು ಮುಡಿಯುವಾಸೆ, ಆರನೇಯ ತಿಂಗಳಿನಲ್ಲಿ ಆರಿದ ಅನ್ನದಲ್ಲಿ ಕೆನೆ ಮೊಸರನ್ನು ತಿನ್ನುವ ಬಯಕೆ, ಏಳನೇಯ ತಿಂಗಳಿನಲ್ಲಿ ತನ್ನ ತವರಿಗೆ ಸಿಹಿ ಸುದ್ದಿ ಹೇಳುವ ಆಸೆ, ಎಂಟನೇಯ ತಿಂಗಳಿನಲ್ಲಿ ಸೊಂಟಿ, ಯಾಲಕ್ಕಿ, ಬೆಲ್ಲದಿಂದ ಮಾಡಿ ಖಾರ ಕೊಬ್ಬರಿಯನ್ನು ತಿನ್ನುವ ಬಯಕೆ, ಒಂಭತ್ತನೇಯ ತಿಂಗಳಿನಲ್ಲಿ ತುಂಬು ಗರ್ಭಿಣಿಯ ಸ್ಥಿತಿ, ನಂತರ ನನ್ನ ಜನ್ಮಕ್ಕೆ ಹೆತ್ತ ತಾಯಿ ಇಲ್ಲವಲ್ಲ ಎಂಬ ಕೊರಗನ್ನು ವ್ಯಕ್ತಪಡಿಸಿದ್ದಾಳೆ. ಹೀಗೆ ಆಕೆಯ ಬಯಕೆಯನ್ನು ತನ್ನದೇ ಶೈಲಿಯಲ್ಲಿ ಹಾಡಿನ ರೂಪದಲ್ಲಿ ಅನಾವರಣಗೊಳಿಸಲಾಗಿದೆ.

ಇನ್ನು ಜೀವನದ ನೀತಿ ಸಾರುವ ಹಾಡಿನಲ್ಲಿ ಜೀವನದ ಪ್ರತಿಯೊಂದು ಹಂತದಲ್ಲಿ ಯಾವ ರೀತಿ ವರ್ತಿಸಬೇಕು, ಎಂತಹ ವ್ಯಕ್ತಿಗಳ ಜೊತೆ ವ್ಯವಹರಿಸಬೇಕು ಎಂಬುದನ್ನು ಮಾರ್ಮಿಕವಾಗಿ ವರ್ಣಿಸಲಾಗಿದೆ. ಸ್ತ್ರೀ ದೈವಗಳ ಬಗೆಗೆ ತಮ್ಮದೇ ಶೈಲಿಯಲ್ಲಿ ಹೇಳಲಾಗಿದೆ. ಹೀಗೆ ಪ್ರತಿಯೊಂದು ದೈವ, ವಸ್ತು, ವ್ಯಕ್ತಿಗಳ ಬಗ್ಗೆ ಹಾಡನ್ನು ರಚಿಸಿ ಕೋಲಾಟವನ್ನು ಆಡುವುದು ಇಲ್ಲಿಯ ಜನಪದರ ಮುಖ್ಯ ಲಕ್ಷಣವಾಗಿದೆ.

೦೨ ಡೊಳ್ಳಿನ ಹಾಡುಗಳು

ಸಾಮಾನ್ಯವಾಗಿ ಡೊಳ್ಳಿನ ಹಾಡುಗಳನ್ನು ಜಾತ್ರೆ ಉತ್ಸವದಲ್ಲಿ ಪ್ರದರ್ಶಿಸುವುದುಂಟು.ಅನಾದಿ ಕಾಲದಿಂದಲೂ ಡೊಳ್ಳಿನ ಪದಗಳು ಹ್ಯಾರಡಾ ಗ್ರಾಮದಲ್ಲಿ ಪ್ರಚಲಿತದಲ್ಲಿವೆ.

ಸಾಮಾನ್ಯವಾಗಿ ಗ್ರಾಮದಲ್ಲಿ ಇದನ್ನು ಗಂಡು ಕಲೆ ಎಂದು ಕರೆಯುವರು. ಗ್ರಾಮದಲ್ಲಿ ಹೆಚ್ಚಾಗಿ ಕುರುಬ ಸಮುದಾಯದವರು ಈ ಕಲೆಯನ್ನು ಪ್ರದರ್ಶಿಸುವರು. ಆದರೆ ಇತ್ತೀಚಿಗೆ ಎಲ್ಲಾ ಸಮುದಾಯದವರು ಈ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಡೊಳ್ಳಿನ ಹಾಡುಗಳಲ್ಲಿ ಪ್ರಸಿದ್ದಾರಾದವರೆಂದರೆ ಬಡ್ಡಿ ಸುಡುಗಾಡೆಪ್ಪ. ಇವರು ಹಾಕುವ ತಾಳದ ನಾದ ಅತ್ಯಂತ ಮನೋಹರವಾಗಿರುತ್ತದೆ, ಇನ್ನುಳಿದವರು ವೃತ್ತಾಕಾವಾಗಿ ನಿಂತು ನೃತ್ಯವನ್ನು ಮಾಡುತ್ತಾ ಡೊಳ್ಳನ್ನು ಬಾರಿಸುತ್ತಾ ಈ ಕಲೆಯನ್ನು ಪ್ರದರ್ಶಿಸುವರು. ಡೊಳ್ಳನ್ನು ಸಾಮಾನ್ಯವಾಗಿ ಮರದ ಕಟ್ಟಿಗೆಯಿಂದ ತಯಾರಿಸುತ್ತಾರೆ.

ಡೊಳ್ಳಿನ ಎರಡು ಕಡೆ ಕಬ್ಬಿಣದ ಬಳೆಗಳನ್ನು ಹಾಕಿ ಅದಕ್ಕೆ ಚರ್ಮದ ಬಾರುಗಳಿಂದ ಬಿಗಿದು ಕಟ್ಟಿರುತ್ತಾರೆ. ಇದೊಂದು ಚರ್ಮವಾದ್ಯವಾಗಿದ್ದು, ಈ ವಾಧ್ಯವನ್ನು (ಡೊಳ್ಳನ್ನು) ಸೊಂಟಕ್ಕೆ ಕಟ್ಟಿಕೊಂಡು, ಬಲಗೈಯಲ್ಲಿ ಗುಣುಪನ್ನು ತೆಗೆದುಕೊಂಡು ಬಾರಿಸುತ್ತಾ, ಎಡಗೈಯ ಒಂದು ಪೆಟ್ಟನ್ನು ಕೊಡುತ್ತಾ ಈ ನೃತ್ಯವನ್ನು ಪ್ರದರ್ಶಿಸುವರು.

ಡೊಳ್ಳನ್ನು ಬಾರಿಸುತ್ತಾ ವಿವಿಧ ರೀತಿಯ ಕಸರತ್ತುಗಳನ್ನು ಮಾಡುವರು. ಕುಕ್ಕರಗಾಲಿನಲ್ಲಿ ಕುಳಿತು ಡೊಳ್ಳು ಬಾರಿಸುವುದು, ಮಂಡಿಯೂರಿ ಡೊಳ್ಳು ಬಾರಿಸುವರು ಹೀಗೆ ವಿವಿಧ ಕಸರತ್ತುಗಳನ್ನು ಮಾಡುವರು. ಡೊಳ್ಳು ಬಾರಿಸುವವರು ಕಚ್ಚೆ ಪಂಜೆ ಹಾಕಿ ಹೆಗಲ ಮೇಲೆ ಕರಿಯ ಕಂಬಳಿ ಹಾಕಿ ನೃತ್ಯವನ್ನು ಪ್ರದರ್ಶಿಸುವರು.

ಗ್ರಾಮದ ವಿಶೇಷ ಸಂಧರ್ಭಗಳಾದ ಜಾತ್ರೆ, ಹಬ್ಬ-ಹರಿದಿನಗಳು, ಉತ್ಸವ, ಪರುವು, ಕಾರ್ತಿಕೋತ್ಸವ ಹೀಗೆ ಪ್ರಮುಖ ದಿನಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುವರು. ಇತ್ತೀಚಿಗೆ ಗ್ರಾಮದಲ್ಲಿ ಡ್ರಮ್‌ಗಳು ಚಾಲ್ತಿಯಲ್ಲಿವೆ. ಪ್ರತಿಯೊಂದು ಕಾರ್ಯಗಳಿಗೂ ಈ ಡ್ರಮ್‌ಗಳ ಮೂಲಕ ಈ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ.

"ಗುರುವೇ ನಮ್ಮಯ ದೇವರ್ ಬಂದಾವ್ ಬನ್ನಿರೇ
ಶಿವನೇ ನಮ್ಮಯ ದೇವರ್ ಬಂದಾವ್ ಬನ್ನೀರೇ"

ಎಂದು ಪಲ್ಲವಿಯನ್ನು ಪುನರುಚ್ಚರಿಸುತ್ತಾ ಹಾಡುಗಳು ಪ್ರಾರಂಭವಾಗುವವು.

ಹಾಡು:- ಬೀರಲಿಂಗೇಶ್ವರನ ಹಾಡು

"ಕಲ್ಲಿಗೆ ಕಲ್ಲೆ ಹೊಂದ್ಯಾವ ನಿನಗುಡಿ
ಕೆಬ್ಬಣದರಿಮಳಿ ಜಡದಾವ ಕಲ್ಲಿಗೆ ಕಲ್ಲೆ ಜಡದಾವ
ಕೆಬ್ಬಣದರಿಮಾಳ್ಗೆಗೆ ತಕ್ಕ ಉಕ್ಕಿನ ನೆಲಗಾರವೆ
ಉಕ್ಕಿನ ನೆಲಗಾರ್‍ಯದ ಮ್ಯಾಲೆ ಕಾಜಿನ ಕಲ್ಲು ಕಂಬಾವೆ
ಗಾಜಿನ ಕಲ್ಲು ಕಂಬಾದ ಮ್ಯಾಲೆ ಚಿನ್ನದ ಸಿಟಿಬೋದೇಳೆ
ಚಿನ್ನದ ಸಿಟಿ ಬೋದಿನ ಮಾಲೆ ರನ್ನದ ತೊಲಿಗಳನೇರ್‍ಯಾವೆ
ರನ್ನದ ತೊಲಿಕಂಬಕೆ ತಕ್ಕ ಬೆಳ್ಳಿಯಬಿಗಿ ಜೆಂತೇಳೆ
ಬೆಳ್ಳಿಯ ಬಿಗಿ ಜೆಂತೇಳಿನ ಮ್ಯಾಲೆ ಹವಳದ ಮಳವಂತೇಳೆ
ಹವಳದ ಮಳವಂತಾದ ಮ್ಯಾಲೆ ಅರಗಿನ ಬರಗಿನ ತೊಪ್ಪಲೇ
ಅರಗಿನ ಬರಗಿನ ತೊಪ್ಪಲ ಮ್ಯಾಲೆ ಸೀಸದ ಮೇಲ್ ಮುದ್ದೇಳೆ
ಸೀಸದ ಮೇಲ್ಮುದ್ದಿಗೆ ತಕ್ಕಾ ಭಂಡಾರದ ಬದಿಮಣ್ಣೇಳೆ
ಭಂಡಾರದ ಬದಿಮಣ್ಣಿಗೆ ತಕ್ಕ ಬೆಲ್ಲುದಚ್ಚಿನ ಕುಂಬೇಳೆ

ಬೆಲ್ಲದಚ್ಚಿನ ಕುಂಬಿಯ ತೆಳಗೆ ರನ್ನಾದರುನಾಳಿಗೆ ಇಟ್ಟಾರೆ
ಬಾಚೆಲೆ ಕೆತ್ತಿದ ಬಾಗಲ್ತೋಳಿಗೆ ಜೋಡೆಳ್ಡು ಗಿಳಿಗಳನಚ್ಚಾರೆ
ಜೋಡೆಳ್ಡು ಗಿಳಿಗಳನಚ್ಚಾರಪ್ಪಾ ಮೇಲೆರಡರಗಿಣಿನಚ್ಚಾರೆ
ಮಲಿಯಮ್ಮ ನಿನಗುಡಿಯಾ ಮುಂದೆ ಸಕ್ಕರಿ ಭಾರಿ ಮರನೇಳೆ
ಸಕ್ಕರಿ ಭಾರಿ ಮರಕ್ಕೆ ನೋಡು ಲೆಕ್ಕಾವಿಲ್ಲದ ಗಿಳಿವಿಂಡು
ಲೆಕ್ಕಾವಿಲ್ಲದ ಗಿಳಿಹಿಂಡಪ್ಪಾ ಪಕ್ಕವಿಲ್ಲದ ಪಾರಿವಾಳ
ಪಕ್ಕಾವಿಲ್ಲದ ಪಾರಿವಾಳ ಕುತಗಂಡು ಏನೇನಾ ಸವಿಗಳ ಮೇಲಾದದೆ
ಏನೇನ ಸವಿಗಳ ಮೇದಾವಪ್ಪ ಹಣ್ಣು ಹಂಪಲು ಮೇದಾವೆ
ಹಣ್ಣು ಹಂಪಲು ಮೇದಾವಕ್ಕಿ ಕಬ್ಬು ಕಡಲಿ ಮೇದಾವೆ
ಕಬ್ಬು ಕಡಲಿ ಮೇದಾವಕ್ಕಿ ಬೆಲ್ಲ ಬ್ಯಾಳಿಯ ಮೇದಾವೆ
ಬೆಲ್ಲ ಬ್ಯಾಳಿಯ ಮೇದಾವಕ್ಕಿ ಏನಂಧ್ವರಕಿ ಕೊಡುತಾವೆ
ಹಬ್ಬಲಿ ಹಬ್ಬಲಿ ಹಬ್ಬಲಿ ಈ ಮನಿ ಹೀರಿ ಬಳ್ಳಾಗ್ಹಬ್ಬಲಿ
ಹೀರಿ ಬಳ್ಳಾಗ್ಹಬ್ಬಲಿ ಈ ಮನಿ ಹಿರೇತನಗಳು ನಡಿಯಲಿ
ನಾವು ಕೊಟ್ಟೋಂಧ್ವರಕೀಲಪ್ಪ ನಮ್ಮೇವು ಕೊಟ್ಟಂದರಮೀಲಿ
ಆಗಲಿ ಆಗಲಿ ಆಗಲಿ ಈ ಮನಿ ಹಾಗಲಬಳ್ಳಿಗ್ಹಬ್ಬಲಿ
ಹಾಗಲಬಳ್ಳಾಗ್ಹಬ್ಬಲೀ ಮನಿ ಹಾಲು ತುಪ್ಪ ಹರದಾಡಲಿ
ದೇವರು ಕೊಟ್ಟ ವರವೀಲಿ ಭಕ್ತ ಮುನ್ನಂತಪದವಿ ಆಗಲಿ
ಹಬ್ಬಲಿ ಹಬ್ಬಲಿ ಹಬ್ಬಲಿ ಈ ಮನಿ ಕವಡಿ ಬಳ್ಳಾಗ್ಹಬ್ಬಲಿ
ಕವಡಿ ಬಳ್ಳಾಗ್ಹಬ್ಬಲೀ ಮನಿ ಗೌಡಕಿ ಪಟ್ಟ ನಡಿಯಾಲಿ
ಮಾಳಿಗಿ ತುಂಬ ಮಣಕೆಮ್ಮಾಗಲಿ ಕೊಟಗಿ ತುಂಬಾಕ್ವಾರೆಮ್ಮಿ
ಕಟ್ಟಲಿ ಎತ್ತು ಕಟ್ಟಲಿ ಈ ಮನಿ ಎಂಟು ಬ್ಯಾಸಾಯ ನಡಿಯಾಲಿ
ಹಳ್ಳದ ಹೊಲವ ಮಾಡಲಿ ಈ ಮನಿ ಬನ್ನಿಮರ ನೆರಳಾಗಲಿ
ಕಾಮಣ್ಣ ಭೀಮಣ್ಣರೆಂಬೋ ಅಣ್ಣ ತಮ್ಮಗಳು ಆಗಲಿ
ಗಂಗವ್ವ ಗೌರವ್ವನೆಂಬೋ ಅಕ್ಕ ತಂಗೇರು ಆಗಲಿ
ನಿಂಗವ್ವ ನೀಲವ್ವ ರೆಂಬ ನೆಗಣ್ಣೆ ನೆಗೆಣ್ಣೇರಾಗಲೀ
ಈ ಊರು ಭಂಡಾರಿಳದಾವಪ್ಪ ಮುಂದಲೂರು ಭಂಡಾರೇರ್ಯಾವ
ಈ ಊರ ಭಕ್ತರು ಕಳವಿರ್ಯಾಪ್ಪ ಮುಂದಲೂರು ಭಕ್ತರು ಕಾದಾರೆ
ಹೊಡಿಯಪ್ಪ ಡೊಳ್ಳು ಹಿಡಿಯಪ್ಪ ಚತ್ರಿಕಿ
ನಡಿಯಪ್ಪ ನಮ್ಮ ನಾಡಿಗೆ

ದೇವರು ಬಂದಾವು ಬನ್ನಿರೇ
ಕಲ್ಲಿಗೆ ಕಲ್ಲೆ ಹೊಂದ್ವಾವ ನಿನಗುಡಿ
ಕೆಬ್ಬಣದರಿಮಳಿ ಜಡದಾವ"(ವಿರುಪಾಕ್ಷ ಗೌಡ.ಕೆ : ೧೯೭೨ : ೧೯)

ಮೇಲಿನ ಡೊಳ್ಳಿನ ಹಾಡಿನಲ್ಲಿ ಊರಿನ ಜನರಿಗೆ ಒಳಿತನ್ನು ಬಯಸುವ ಅವರಿಗೆ ಹರಕೆಯನ್ನು ಹೇಳುವ ಸಂದರ್ಭವನ್ನು ನೋಡಬಹುದಾಗಿದೆ.

ಹಾಡು:- ದೈವಗಳ ಕುರಿತು ಹಾಡು
ಕರಿ ಕೊಂಬಳಿ ಮರದು ಗದ್ದುಗೆ ಮಾಡಿ
ಬೀರದೊಳ್ಳ ತಂದಿಳಿವ್ಯಾರಾ
ಬೀರದೊಳ್ಳದಂದುಕಾವು ಕೇಳಿ
ಬಂದರಪ್ಪ ಶಿವ ಶಿರುಣಾರೂ
ಬಂದರಪ್ಪ ಶಿವ ಶಿರುಣಾರೂ
ಅಗ್ಗನಿ ದೇವಿಯ ಕರಿಸಿದರಪ್ಪ
ಮುತ್ತಿನಾರತಿ ತರಿಸಿದರೋ
ಕುಂತು ಯಾರಿಗೆ ಬೆಳಗಲಿ ಸ್ವಾಮಿ
ನಿಂತು ಯಾರಿಗೆ ಬೆಳಗಾಲೋ
ಕುಂತು ಭೂಮಿ ತಾಯವ್ವಗ ಬೆಳಗು
ನಿಂತು ಮ್ಯಾಲೆ ಮಾದೇವನಿಗೆ
ಊರಾಗ ಯಾರಿಗೆ ಬೆಳಗಲಿ ಸ್ವಾಮಿ
ಕೇರ್ಯಾಗ ಯಾರಿಗೆ ಬೆಳಗಾಲೋ
ಊರಾಗೀರ ಊರಮ್ಮಗ ಬೆಳಗು
ಕೇರಿಗೇರ ದುರುಗಮ್ಮಗ
ಹಾದಿಗ್ಯಾರಿಗೇ ಬೆಳಗಾಲೋ ಸ್ವಾಮಿ
ಬೀದಿಗ್ಯಾರಿಗೇ ಬೆಳಗಾಲೋ
ಹಾದಿಗೇರ ಹಾದಿ ಹನುಮಗ ಬೆಳಗು
ಬೀದಿಗೇರ ಪಾಂಡವರಿಗೆ
ತಾಯಿಯ ನೆನೆದೇವು ತಂದೀಯ ನೆನೆದೇವೋ
ತಂದಿ ಬೀರಪ್ಪನ ಪಾದವ ಹಿಡಿದರೆ
ಬೇಡಿದ ವರಗಳ ಕೊಡುವವನಂತೆ. (ಅಂಜಿನಪ್ಪ ಕುಂಚೂರು, ಕಟಿಗೇರ ಲಕ್ಷ್ಮಪ್ಪ)

ಮೇಲಿನ ಬೀರಲಿಂಗೇಶ್ವರ ಡೊಳ್ಳಿನ ಹಾಡಿನಲ್ಲಿ ಬೀರಲಿಂಗೇಶ್ವರನನ್ನು ಕುರಿತು ಹಾಡಿದ

ಹಾಡಾಗಿದೆ. ಬೀರಲಿಂಗೇಶ್ವರನ ಮಹಿಮೆ, ಭಕ್ತರ ಭಕ್ತಿಯ ಪರಾಕಾಷ್ಠೆ ಹಾಗೂ ವಿವಿಧ ಆಚರಣೆಗಳ ಬಗ್ಗೆ ವಿವರಿಸಲಾಗಿದೆ. ದೈವಗಳ ಕುರಿತು ಹಾಡಿನಲ್ಲಿ ಗ್ರಾಮದ ವಿವಿಧ ದೈವಗಳಾದ ಭೂಮಿತಾಯಿ, ಬೀರಲಿಂಗೇಶ್ವರ, ದುರುಗಮ್ಮ, ಹಾದಿ ಹನುಮಂತ, ಅಗ್ನಿ ದೇವತೆಯನ್ನು ಕುರಿತು ಹೇಳಲಾಗಿದೆ. ಹೀಗೆ ಪ್ರತಿಯೊಂದು ಹಂತದಲ್ಲಿ ಇಲ್ಲಿಯ ಜನಪದರು ದೈವಗಳೊಂದಿಗೆ ಅವಿನಾಭಾವ ಸಂಬಂಧವನ್ನಿಟ್ಟುಕೊಂಡು ತಮ್ಮ ಸಾಂಸ್ಕೃತಿಕ ಸೊಗಡನ್ನು ಪಸರಿಸುತ್ತಿದ್ದಾರೆ.

೦೫ ದೇವರ ಸ್ತುತಿಸುವ ಹಾಡುಗಳು

ಜನಪದರಿಗೂ ಹಾಗೂ ಜನಪದ ದೈವಗಳಿಗೂ ಅವಿನಾಭಾವ ಸಂಬಂಧವನ್ನು ನಾವುಗಳು ಕಾಣಬಹುದಾಗಿದೆ. ಜನಪದರು ದಿನನಿತ್ಯದ ಜೀವನದಲ್ಲಿ ದೇವರನ್ನು ಸ್ತುತಿಸುವ ಪರಿಪಾಠವನ್ನು ಬೆಳೆಸಿಕೊಂಡು ಪೋಷಿಸಿಕೊಂಡು ಬಂದಿದ್ದಾರೆ ಎಂಬುದನ್ನು ಕೆಳಗಿನ ತ್ರಿಪದಿಯಲ್ಲಿ ನಾವು ಕಾಣಬಹುದು.

"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರೀಗಿ ಬೆಳೆಯೋಳ । ಭೂಮಿತಾಯನ
ಎದ್ದೊಂದು ಗಳಿಗೆ ನೆನೆದೇನ

ಒಬ್ಬ ಜನಪದ ಸ್ತ್ರೀಯು ಮುಂಜಾನೆ ಎದ್ದು ತಕ್ಷಣ ತನ್ನ ನಿತ್ಯಕರ್ಮಗಳೆಲ್ಲವನ್ನೂ ಮುಗಿಸಿಗೊಂಡು ಬೆಳಗ್ಗೆ ಎದ್ದ ಕೂಡಲೇ ನಾನು ಯಾವ ದೇವರನ್ನು ನೆನೆಯಲಿ ನಮ್ಮೆಲ್ಲರನ್ನು ಸಲಹುವ, ಎಳ್ಳು ಜೀರಿಗಿಯನ್ನು ಬೆಳೆಯುವ ಭೂಮಿ ತಾಯಿಯನ್ನು ನಾನು ನೆನೆಯುತ್ತೇನೆ ಎಂದು ಮೇಲಿನ ತ್ರಿಪದಿಯಲ್ಲಿ ಹೇಳುತ್ತಾಳೆ.

ಹಾಡು :– ಸ್ತ್ರೀ ದೈವಗಳ ಸ್ತುತಿಸುವ ಹಾಡು
"ಸೆಜ್ಜಿಯ ಉಡ್ಯಕ್ಕಿ ಮಗ್ಗಿ ಮಲ್ಲಿಗೆ ದಂಡಿ
ಬಗ್ಗಿ ದೇವರಿಗೆ ಶರಣೆಂಬೆ । ಸಾಂಬಕ್ಕ
ಭಾಗ್ಯವ ಬೇಡು ತೌರಿಗೆ ॥೧॥

ಬಂಡೆರಂಗ ನನಗೆ ಗಂಡು ಮಗನ ಕೊಡು
ಚೆಂಡು ಹೂವಿನಂತ ಚೆಲುವನ । ಕೊಟ್ಟರೆ
ಮುಂದಕ್ಕೆ ತೇರು ಎಳಿಸೇನು ॥೨॥

ಅಕ್ಕ ಮಾತಂಗನ್ನತ್ತಿ ನೋಡಾನು ಬಾರೆ
ಕತ್ತಲುಪ್ಪರಿಗೆ ಕಮಲವ । ಕಲ್ಲಿನ
ತೇರು ಕಟ್ಟಿಸಿ ಹೋಗ್ಯಾರ ಶರಣರು ॥೩॥

ಕಸ್ತೂರಿ ಕದವ್ವಾಕಿ ಲ್ಯಾವಂಗದಗುಳಿ ಹಾಕಿ
ವಸ್ತಿಗಾರಣ್ಣ ಮಲಗ್ಯಾನ । ಕೊಪ್ಪಳದ
ಗಚ್ಚಿನಮರದ ಗವಿಸ್ವಾಮಿ ॥೪॥

ವಾರಿಗೆ ಗೆಣಿತ್ಯಾರು ವಾರ ಮಾಡಾನು ಬರ್ರೇ
ವಾರಕ್ಕೆ ವಾರ ಶನಿವಾರ । ಮಾಡಿದರೆ
ಯಾರಿಗೆ ಒಲಿತಾನ ಹನ್ಮಂತ ॥೫॥

ಸೊನ್ನದ ಸೊಲ್ಲಮ್ಮ ಸ್ವಾಗಿಯ ಎಲ್ಲಮ್ಮ
ಎಲ್ಲಿ ನೋಡಿದರು ಸುಳಿವಿಲ್ಲ ।ಹುಲಿಗೀಯ
ನೆಲ್ಲುಗದ್ದ್ಯಾಗ ನಲಿದಾಳು ॥೬॥

ಕಿತ್ತೂರ ಮುತ್ತೂರ್ಗು ತಂಬ್ರಳ್ಳಿ
ಚಿತ್ತಾರದಳ್ಳಿ ಚೆಲುಗೋಡು । ಬಯಲಾಗ
ಅಕ್ಕ ಕರಿಯಮ್ಮ ನೆಲಿಸ್ಯಾಳ ॥೭॥

ಮಲ್ಲಿಗಿ ಮಲ್ಲಿಗಿ ಇದು ಎಂಥ ಮಲ್ಲಿಗಿ?
ವಾಸನಿಲ್ಲದ ಕಣಗಲಿ । ಹೂವ್ವಿಗೆ
ವಾಸವಾಗ್ಯಾನ ಹನುಮಂತ ॥೮॥

ನೀರಿಗೆ ಹೋಗೂತ ಸುರುವ್ಯಾನ ಲೋಬಾನ
ಗಾಳಿ ಬೀಸಿದರೆ ಘಮ ಘಮ । ದುರುಗಮ್ಮ
ತೋಳು ಬೀಸಿದರೆ ಥಳ ಥಳ ॥೯॥

ಓದುವ ಸಾಲಿಗೆ ಹೋಗ್ಯಾಳ ಸರಸೋತಿ
ಓದು ನೋಡ್ಯಾಳ ಚೆಲುವಾನ । ನನ ತಮ್ಮನ
ನಾಲಿಗೆಗೆ ಅಕ್ಷಾರ ಹೊಡಿದಾಳ ॥೧೦॥

ಮುಂಜಾನೆ ಮಲ್ಲಿಗಿ ಗಂಗಾಳ ತುಂಬ್ಯಾವ
ಕಂದನ ಕೂಟ ಕಳುವೇನ । ಬಂಡೆರಂಗ
ಗಂಧದ ಮ್ಯಾಲೆ ಮುಡಿಯಲಿ ॥೧೧॥

ವಲ್ಲಿಯ ಹೊದ್ದಾನ ಮಲ್ಲಿಗಿ ಮುಡುದಾನ
ಕಲ್ಲು ಪಡಿಯಾಗ ಅಡಗ್ಯಾನ । ಮೈಲಾರಲಿಂಗ
ಪಲ್ಲಕ್ಕಿ ಮುಂದ ಮೆರಿದಾನ ॥೧೨॥

ಕಾಮಿಯ ಉಟ್ಟಾನ ಕಮಂಡಲ ಧರಿಸ್ಯಾನ
ಕಾದ ಕಲ್ಲಾಗ ಮಲಗ್ಯಾನ । ಬಂಡೆರಂಗ
ತಾಯಿದ್ದರೇಟು ಮರುಗ್ಯಾಳ ॥೧೩॥

ಹಾಗಲಕಾಯಿಗೆ ಹನೊಂದು ಸಾಂಬಾರ
ಉಂಡು ನೋಡಣ್ಣ ರುಚಿಸವಿ । ಬಡವರ ಮಗಳ
ತಂದು ನೋಡಣ್ಣ ಬದುರೇಗೆ ॥೧೪॥

ತುಂಬಿದ ಹೊಳಿಯಾಗ ತೂಗು ಮಂಚದ ಮೇಲೆ
ನಿಂಬಿಯ ಹಣ್ಣನ್ನು ಸಲುವಾರಿ । ಹುಲಿಗೆಮ್ಮ
ಇಲ್ಲಿಂದ ಕೈಯ ಮುಗಿವೇನು ॥೧೫॥

ಸಿಟ್ಟು ಮಾಡಲಿಬ್ಯಾಡ ಶ್ರೀರಾಮ ನನಮ್ಯಾಲ
ಕಟ್ಟೆಕೊಬ್ಯಾಡ ಕದನವ । ತಾಯ್ತಂದೆ
ಕೊಟ್ಟು ಹೋಗ್ಯಾರ ನೀಮಗ್ಯಾರ ॥೧೬॥

ಚೆಲುವ ನನ ತಮ್ಮ ಚಿರುಗೀಲೆ ಮುಖ ತೊಳಿಯೊ
ಉಗುರೀಲೆ ಗಂಧ ಹದಮಾಡು । ಜಗಳೂರ
ಗುರುಸ್ವಾಮಿ ಬರುತಾರ ಇದಿರ್ಹೋಗು ॥೧೭॥

ಗುಡ್ಡದ ಜಂಬಯ್ಯ ಗುಡಿಯಲ್ಲಿ ಮಲ್ಲೀಗಿ
ಹಾಸು ಬಂಡೆಲ್ಲ ಹವಳಾವು । ಜಂಬಣ್ಣನ
ಬೀಸಣಿಕೆಗೆಲ್ಲ ಬಿಡಿಮುತ್ತು ॥೧೮॥

ಸಕ್ಕರೆ ಸವಿಗರ ವೀಳ್ಯದ ರುಚಿಗಾರ
ವೀರಭದ್ರನವತಾರ । ದಂತಾಮಗನ
ಊರಿಗೆ ಕಳಿಸಿ ಇರಲಾರೆ ॥೧೯॥

ತಂಗಿ ಊರಮ್ಯಾಲೆ ಗಂಗಾವತಿ ಮ್ಯಾಲೆ
ಬೇಗ್ಯಾಗಿ ಬಾರೋ ಮಳೆರಾಯ । ತಂಗೆಮ್ಮನ
ಹೋಗುವ ಪಯಣವ ನಿಲ್ಲಿಸೋ ॥೨೦॥

ಮಕ್ಕಳ ಕೊಡು ಶಿವನೆ ಮದುವೀಯ ಮಾಡೇನ
ಹಬ್ಬೆ ಕೆಮ್ಮಣ್ಣು ಒಲಿಕೊರಿದು। ಮಾಡೇನು
ಚೊಚ್ಚಿಲ ಮಗನ ಮದುವೀನ ॥೨೧॥

ತಾಯಿ ನಮ್ಮವ್ವನ ಯಾವಾಗ ನೆನಿಬೇಕು?
ಮಾಡಾಲಗೆಂಪು ಹರಿವಾಗ । ಮಲ್ಲಿಗ್ಹೊವ
ಪುಟ್ಟ್ಯಾಗ ಮಠಕೆ ತರುವಾಗ ॥೨೨॥

ಸತ್ತ್ಯಳ್ಳ ಶರಣಾರು ಸತ್ತಾರೆನ್ನದಿರು
ಸತ್ತರೀಭೂಮಿ ಬೆಳಿಯಾದು । ಆನಿಗೊಂದಿ
ವತ್ತೀಲೆ ಆದಾರೊ ಶರಣರು ॥೨೩॥

ಆಕಳ ಕೋಡಿನ ಮ್ಯಾಲೆ ಹವಳ ಗುಡ್ಡಿಗೆ ಮೂಡಿ
ಆಯ್ತು ಪಂಪಯ್ಯನ ಶಿವ ಪೂಜಿ । ಆಗೋ ಹೊತ್ಲೆ
ಆಕಾಶದಿಂದ ಹೂಗಿಬಂದು ॥೨೪॥

ಶ್ರೀಗಂಧದ ಚೆಕ್ಕೆ ಮುರುದು ಒಲಿಯಾಗಿ ತುಂಬೀನಿ
ತಿರುಗಾಡ್ತ ನೀರು ಬೆರಿಸೀನಿ । ಹಿಡಿಹೊನ್ನು
ತರುವ ನನ್ಮನೆ ಹಿರಿಯರಿಗೆ ॥೨೫॥

ಆನಿಗೊಂದಿ ಮ್ಯಾಲೆ ಅದಾಳ ಹಂಪವ್ವ
ನೋಡಿ ಬಂದಣ್ಣ ಉಣುವಲ್ಲ । ಪಂಪಾಪತಿ
ನಾಳೆ ಬಂದಾಡೋ ನವುಲಾಟ ॥೨೬॥

ಮೇಲಿನ ತ್ರಿಪದಿಗಳಲ್ಲಿ ಒಬ್ಬ ಜನಪದ ಸ್ತ್ರೀಯು ಎಲ್ಲಾ ದೈವಗಳನ್ನು ಸ್ತುತಿಸುವ ಪರಿಯನ್ನು ಕಾಣಬಹುದಾಗಿದೆ. ಇಲ್ಲಿ ಹಲವಾರು ದೈವಗಳನ್ನು ಕಾಣಬಹುದು ಬಂಡೆರಂಗ, ಮಾತೆಂಗಮ್ಮ. ಕೊಪ್ಪಳ ಗವಿ ಮಠದ ಸ್ವಾಮಿ, ಹನುಮಂತ, ಸೊಲ್ಲಮ್ಮ, ಯಲ್ಲಮ್ಮ, ಕರಿಯಮ್ಮ, ದುರುಗಮ್ಮ, ಶ್ರೀ ರಾಮ, ಜಗಳೂರು ಗುರುಸ್ವಾಮಿ, ಗುಡ್ಡದ ಜಂಬಯ್ಯ, ವೀರಭದ್ರ, ಮಳೆರಾಯ, ಪಂಪಯ್ಯಶಿವ ಹಾಗೂ ಪಂಪಾಪತಿ ಹೀಗೆ ಎಲ್ಲಾ ದೈವಗಳಲ್ಲಿ ತನ್ನ ಕೋರಿಕೆಯನ್ನು ಸಲ್ಲಿಸುತ್ತಾಳೆ. " ಮಕ್ಕಳ ಕೊಡು ಶಿವನೆ ಮದುವೀಯ ಮಾಡೇನು" ಎಂಬ ಜನಪದ ಸ್ತ್ರೀಯ ತಾಯ್ತನದ ಹಂಬಲವನ್ನು ಎತ್ತಿ ತೋರಿಸುತ್ತದೆ. "ನನ್ನ ತಮ್ಮನ ನಾಲಿಗೆಗೆ ಅಕ್ಷಾರ ಹೊಡಿದಾಳ" ಎಂಬ ಮಾತಿನಲ್ಲಿ ನನ್ನ ತಮ್ಮನಿಗೆ ಅಕ್ಷರದ ಜ್ಞಾನವನ್ನು ಕೊಡು ಎಂದು ಸರಸ್ವತಿಯಲ್ಲಿ ಕೇಳುತ್ತಾಳೆ. "ವಾರಿಗೆ ಗೆಣೆತ್ಯಾರು ವಾರ ಮಾಡಾನು ಬರ್ರೆ" ಎನ್ನುವ ಮಾತಿನಲ್ಲಿ ತನ್ನ ವಾರಿಗೆಯ ಗೆಳತಿಯರೊಂದಿಗೆ ಇರುವಂತಹ ಅನ್ಯೋನ್ಯ ಸಂಬಂಧವನ್ನು ನಾವಿಲ್ಲಿ ಕಾಣಬಹುದಾಗಿದೆ. ಹೀಗೆ ಸಮಾಜದ ಪ್ರತಿಯೊಂದು ಸ್ತರಗಳಲ್ಲಿಯೂ ತಮ್ಮ ಅನ್ಯೋನ್ಯ ಸಂಬಂಧವನ್ನು ಗಟ್ಟಿಗೊಳಿಸುವ ಕಾರ್ಯವನ್ನು ಜನಪದ ಸ್ತ್ರೀಯರು ಮಾಡಿದ್ದಾರೆ.

ಹಾಡು :- ಸ್ತ್ರೀ ದೈವಗಳ ಸ್ತುತಿಸುವ ಹಾಡು

ದೇವರು ಒಳ್ಳೆನೆ ಹನುಮಣ್ಣ
ಗಿಣಿಸಾಕ್ಯಾರ ಏನು ಚಂದ
ಗಿಣಿಸಾಕ್ಯಾರ ಏನು ಚಂದ
ಹ್ಯಾಡಲ ಸಾಲಿ ಮುಂದ
ಆಡಿ ಬಾ ಕಂದ ನನ್ನಿಂದ
ತವರೂರ ಮಾಲಿನ ಮುಂದ

ದೇವರು ಒಳ್ಳೇನೆ ಹನುಮನ ಬಲಕಿರುವ
ದೇವಿ ಒಳ್ಳೇಕಿ ದುರುಗಮ್ಮ
ಗಿಣಿಸಾಕ್ಯಾರ ಏನು ಚಂದ

ತುಂಬಿದ ಕೆರಿಯ್ಯಾಗ
ತೂಗು ಮಂಚದ ಮ್ಯಾಲೆ
ಓಲಾಡಿ ಹೂವ ಮುಡಿಯ್ಯಾಲೆ
ಮಲಿಯಮ್ಮ
ಗಿಣಿಸಾಕ್ಯಾರ ಏನು ಚಂದ

ಓಲಾಡಿ ಹೂವ ಮುಡಿಯ್ಯಾಲೆ
ಮಲಿಯಮ್ಮ
ನನಗೊಂದು ಹೂವ ದಯಮಾಡೇ
ಗಿಣಿಸಾಕ್ಯಾರ ಏನು ಚಂದ

ನಾಕೇನೆ ಬಾಜಾರ ನೆರೆತಾವ ತಂಗೆವ್ವ
ಓಕಳಿ ಆಡಿ ಬರುತಾನೆ
ಗಿಣಿಸಾಕ್ಯಾರ ಏನು ಚಂದ

ಕಲ್ಲಿಗೆ ಮೂರುತಿ ಎಲ್ಲವ್ವ ದೇವರ ನೆನೆದ
ಕಲ್ಲವನ್ನು ಮ್ಯಾಲಿರುವ ಕರುಗಿ
ಗಿಣಿಸಾಕ್ಯಾರ ಏನು ಚಂದ

ಕಲ್ಲನೆ ಮ್ಯಾಲಿರುವ ತಾಯಿ ಸರಸ್ವತಿಯೇ
ಸಲ್ಲಿಗೆ ಒಮ್ಮೊಮ್ಮೆ ನೆನೆದೇನ
ಗಿಣಿಸಾಕ್ಯಾರ ಏನು ಚಂದ

ಹುಲಿಯಲ್ಲ ನನ್ನ ಮುನಿಸ್ವಾಮಿ
ಗೋಣಿಬಸವ
ಹುಲಿಬ್ಯಾಟಿನಾಡಿ ಬರುತಾನ
ಗಿಣಿಸಾಕ್ಯಾರ ಏನು ಚಂದ

ಕಾವಿನ ತೊಟ್ಟಾನೆ ಕಾಮಂಡಲದವನೇ
ಕಾರಕಲ್ಲಿನ ಮಲಿಗ್ಯಾನ
ಗಿಣಿಸಾಕ್ಯಾರ ಏನು ಚಂದ

ಕಾಡಿನ ಕಲ್ಲಗ ಮಲಿಗ್ಯಾನ ಗೋಣಿಬಸವ
ಈ ವಯಸ್ಸಿನಾ ಮಾಟ ವಿಪರೀತ
ಗಿಣಿಸಾಕ್ಯಾರ ಏನು ಚಂದ

ಬೀಸೆಕಲ್ಲಿನ ಮಾಟ ಬೇಸಾದಾಗಿಲ್ಲವ್ವ
ಈ ವಯಸ್ಸಿನಾ ಮಾಟ ವಿಪರೀತ
ಗಿಣಿಸಾಕ್ಯಾರ ಏನು ಚಂದ

ಈ ವಯಸ್ಸಿನಾ ಮಾಟ ಅಪರೂಪ
ಕುರುವತ್ತಿ
ತೇರಿನ ಮಾಟ ಎಲಿದೋತ
ಗಿಣಿಸಾಕ್ಯಾರ ಏನು ಚಂದ
ಜತ್ತಿಯಲಿ ಹರಿಯುವ ಕೆಳದಿ ಕಾಳಮ್ಮನ
ಹುಲಿಯ ಕಂಡೇನ ನಿನ್ನ ಪೂಜಾ
ಗಿಣಿಸಾಕ್ಯಾರ ಏನು ಚಂದ(ಬಿಸೆಮುದ್ದಿ ಕೆಂಚಮ್ಮ ಮತ್ತು ಸಂಗಡಿಗರು)

ಜನಪದ ನಂಬಿಕೆಗಳೇ ಇವರಿಗೆ ಜೀವನದ ಆಧಾರ. ದಿನ ನಿತ್ಯದ ಪ್ರತಿಯೊಂದು ಕ್ಷಣದಲ್ಲಿ ದೈವಗಳನ್ನು ನೆನೆದು ತಮ್ಮ ಕಾರ್ಯವನ್ನು ಪ್ರಾರಂಭಿಸುವರು. ಇಡೀ ಸಮಸ್ತ ಜೀವರಾಶಿಗಳಿಗೆ ಒಳಿತನ್ನು ಬಯಸುವ ತುಡಿತವನ್ನು ನಾವಿಲ್ಲಿ ಅರಿಯಬಹುದು. ನಾವು-ನಮ್ಮವರು ಎನ್ನುವ ಭಾವನೆಯಿಂದ ತುಂಬು ಜೀವನವನ್ನು ನಡೆಸಿದಂತಹ ಸಾರ್ಥಕತೆ ಈ ಗ್ರಾಮೀಣ ಜನಪದರದ್ದು.

೦೬ ಹ್ಯಾರಡಾದ ಜೈನ ಧರ್ಮಿಯರು ಭಜಿಸುವ ಜೈನ ಭಜನೆಗಳು

ಹ್ಯಾರಡಾ ಗ್ರಾಮದ ಜೈನ ಧರ್ಮಿಯರು ಹಲವಾರು ಮಂತ್ರಗಳು, ಭಜನೆಗಳನ್ನು ಭಜಿಸುತ್ತಾರೆ. ಅವುಗಳ ಮೂಲಕ ಜೈನ ಧರ್ಮದ ವಿಶಿಷ್ಟ ಸಂಸ್ಕೃತಿಯನ್ನು ಕೆಳಕಂಡ ಹಾಡು, ಭಜನೆಯಲ್ಲಿ ಕಾಣಬಹುದಾಗಿದೆ.

ಹಾಡು:- ಓಂ ನಮಃಸಿದ್ದೇಭ್ಯಃ

ದರ್ಶನಂ ದೇವದೇವಸ್ಯ ದರ್ಶನಂ ಪಾಪನಾಶನಂ

ದರ್ಶನಂ ಸ್ವರ್ಗಸೋಪಾನಂ, ಧರ್ಶನಂ ಮೋಕ್ಷ ಸಾಧನಂ

ದರ್ಶನೇನ ಜಿನೇಂದ್ರಾಣಾಂ ಸಾಧೂನಾಂ ವಂದನೇನಚ

ನ ಚಿರಂ ತಿಷ್ಟತೇ ಪಾಪಂ ಛಿದ್ರ ಹಸ್ತೇ ಯಥೋದಕಂ

ವೀತರಾಗಮುಖಂ ದೃಷ್ಟಾ ಪದ್ಮಾರಾಗಸಮಪ್ರಭಂ

ನೈಕ ಜನ್ಮಕೃತಂ ಪಾಪಂ ದರ್ಶನೇನ ವಿನಶ್ಯತಿ

ಧರ್ಶನಂ ಜಿನಸೂರ್ಯಸ್ಯ ಸಂಸಾರಾಧ್ವಾಂತನಾಶನಂ

ಬೋಧನಂ ಚಿತ್ತಪದ್ಮಸ್ಯ, ಸಮಸ್ತಾರ್ಥಪ್ರಕಾಶನಂ

ಧರ್ಶನಂ ಜಿನಚಂದ್ರಸ್ಯ ಸದ್ಧರ್ಮಾಮೃತವರ್ಷಣಂ

ಜನ್ಮದಾಹವಿನಾಶಾಯ ವರ್ಧನಂ ಶಖಃಭವಾರಿಧೇ

ಸಮ್ಯಕ್ತ್ವ ಮುಖ್ಯಾಷ್ಟಗುಣಾಶ್ರಯಾಯ,

ಹಾಡು:- ಬಾಹುಬಲಿ ಸ್ವಾಮಿ

ಬಾಹುಬಲಿ ಸ್ವಾಮಿ/ಜಗಕೆ ನೀ ಸ್ವಾಮಿ/

ಶಾಂತಿಯ ಮೂರುತಿಯೇ/ ನಮಿಪೆವು ಅನುದಿನವು ॥ಪ॥

ಆದಿನಾಥಾ ಕುವರಾ/ಭರತನ ಸೋದರಾ/

ಸೋದರನ, ಗೆದ್ದೆಯಲ್ಲಾ/ರಾಜ್ಯವನ್ನೆ ಕೊಟ್ಟೆಯಲ್ಲ ॥ ೦೧ ॥

ನೋಡೆ ನೀ ಕಿರಿಯವ/ಆದೆ ನೀ ಹಿರಿಯವ/

ವಿವೇಕ ನಿನ್ನದಾಗೇ/ ತಾಳ್ಮೆಯ ಬಾಳಾಗೆ ॥೦೨॥

ಶಾಂತಿಯ ವದನಾ/ಕಾಂತಿಯ ನಿಲವು/

ವಿಶ್ವಕೆ ಆದರ್ಶಾ/ನಿನ್ನಯ ದರ್ಶನವು ॥೦೩॥

ಬೆಳಗುಳ ರಾಜಾ/ಅಗಣಿತ ತೇಜಾ/

ಅರಳಿದ ಬಿಳಿಕಮಲ/ನಿನ್ನಯ ಪದಯುಗಲಾ ॥೦೪॥

ಸುನಂದಾ ದೇವಿಯ/ಗರ್ಭದೊಳ್ ಜನಿಸಿ/

ಕೀರ್ತಿಯ ತಂದಿರುವೇ/ಇಡಿಯ ಪ್ರಪಂಚದೊಳು ॥೦೫॥

ಹಾಡು;- ಶ್ರೀ ಶಾಂತಿನಾಥಸ್ವಾಮಿ ಸ್ತುತಿ :-

ಶಾಂತಿನಾಥನೆ ಪ್ರಾಣರೂಪನೆ

ಭ್ರಾಂತಿನಾಶನೇ ದೇವನೇ

ಶಾಂತಿಸುಖ ಸಾಮ್ರಾಜ್ಯದಧಿಪತಿ
ವಿಶ್ವನಾಥನೆ ದೇವನೇ
ಹೃದಯಕಮಲದೊಳಿರುವ ನಿನ್ನನು
ಮುದದಿ ಧ್ಯಾನವಗೈಯ್ಯದೆ
ನಿಧಿಯಮನದೊಳಗಿರಿಸಿಕೊಳ್ಳುತ
ವಿಧಿಯ ದೂರುತಲಿರುವೆನು.
ಮಾನಮದ ಮತ್ಸರ್ಯದಿಂದಲೆ
ದೀನನಾದೆನು ದೇವನೇ
ಧ್ಯಾನಸಿದ್ಧಿಯ ಕರುಣಿಸೆಂದು
ಭಾವಶುದ್ಧಿಯೊಳು ಪೂಜಿಪೆ
ನೀನೆ ಎನ್ನೆಯ ಪ್ರಾಣನಿಧಿಯು
ನೀನೇ ಜೀವನ ಸರ್ವವು
ತಾನು ತನ್ನದೆಂಬುದೆ ಇಲ್ಲವು
ನಿನ್ನದಾಗಿಹುದೆಲ್ಲವು.
ಹಾಡು;– ಶ್ರೀ ಪಾರ್ಶ್ವನಾಥ ಸ್ತುತಿ
ಪರಮಾತ್ಮ ಭಕ್ತಪಾಲ ಪಾರ್ಶ್ವನಾಥ ಪಾಲಿಸೋ
ಸುರಸೇವ್ಯ ನಿನ್ನ ನುತಿಪೆ ಮುಕ್ತಿಪಥವ ತೋರಿಸೋ
ವಾರಣಾಸಿಪುರದ ಪುಣ್ಯ ಜನ್ಮ ಜಿನೇಶ
ಪಾರುಮಾಡೋ ದುಃಖ ಶರಧಿಯಿಂದ ಮಹೇಶ
ವಿಶ್ವಸೇನರಾಜ ವಾಮಾದೇವಿಯ ಕಂದ/
ವಿಶ್ವಶಾಂತಿ ಕೋರಿ ಪಡೆದೆ ಮುಕ್ತಿಯಾನಂದ
ಘೋರಕಮಟೋಪಸರ್ಗ ವಿಜಯೀ ವಿಶೇಷ
ಶ್ರೀ ರಮೇಶ ಸರ್ಪಲಾಂಛನೇಶ ಜಿನೀಶ
ಉರಗರಾಜನರಸಿ ಪದ್ಮಾಂಬೆಯೊಂದಿತಾ
ಧರೆಯೊಳಧಿಕಾರದ ಜೈನ ಭಕ್ತ ಪೂಜಿತಾ
ಕಾಮಬಾಣ ನಾಶ ನಿನ್ನಪಾದ ಪಾವನ
ಸ್ವಾಮಿ ನಿನ್ನ ನಾಮಧ್ಯಾನ ಮುಕ್ತಿ ಸಾಧನ.
ಜ್ಞಾನಪೂರ್ಣ ಪೊರೆಯೋ ಪಾರ್ಶ್ವನಾಥ ಜಿನೇಶ
ಜೈನಮತೋದ್ಧಾರಕ ಸಮ್ಮದ ಗಿರೀಶ.

ಹಾಡು;- ಪದ್ಮಾವತಿದೇವಿಯ ಸ್ತುತಿ

ಬಿಡು ಬಿಡು ದೇವಿಯ ಮೌನವನು
ಕೊಡು ಕೊಡು ಬಲದ ಪ್ರಸಾದವನು
ಎಡಬಿಡದದೆನುದಿನು ಸ್ಮರಿಸುವೆನು
ಬಡವಳು ನಾನಿಯೇ ಪೊರೇ ನೀನು

ಎನ್ನನು ಪೊರೆವರು ರಾರಿಲ್ಲ
ನಿಮ್ಮನು ಬಿಟ್ಟರೆ ಯಾರಿಲ್ಲ
ನಿಮ್ಮನೇ ನಂಬಿಯೇ ನಿಮ್ಮನೇ ಸ್ಮರಿಸುವೆ
ಎನ್ನ ವಚನವಿನು ಸುಳ್ಳಲ್ಲ

ಪರಮ ಚಂಚಾಕ್ಷರಿ ರೂಪಿಣಿಯೇ
ಶರಣರ ಭಾಗ್ಯ ರಕ್ಷಮಣಿಯೇ
ಅಂಬೆಯೇ ಮೂಜಗದಾಂಬೆಯೇ
ನಂಬಿಹ ಎನ್ನನು ದಿನಾಕಾಯೇ.

೦೭ ಹ್ಯಾರಡಾದ ಪುರುವಂತಿಕೆಯ ಒಡಪುಗಳು

ಒಡಪು:- ಘನ

ಭಳಿರೇ, ಅಹಹಹಾ ರುದ್ರಾ, ಶ್ರೀ ಗಂಗಾಧರಾ,
ಗೌರೀವರಾ ಮಂಗಳಕರ, ತಿಂಗಳಧರಾ!
ಅಂದಿಗೆ ವೈರಿಗಳಿಗೆ ಯಮಗಂಡನಾದಂಡ ಶ್ರೀ ಶರ
ಭೇಶ್ವರನೇ ಬಹುಪರಾಕ್.
ಅಹಹಹಾ ರುದ್ರಾ, ಬ್ರಹ್ಮನು ಘನವೆಂತೆಂಬಿರಿ ಬ್ರಹ್ಮನು ಘನವಲ್ಲ
ಬ್ರಹ್ಮನು ಕಮಲದಲ್ಲಿ ಪುಟ್ಟಿದ ಕಮಲವು ಘನವೆಂತೆಂಬಿರಿ
ಕಮಲವು ಘನವಲ್ಲ, ಕೆಸರಿನಲ್ಲಿ ಪುಟ್ಟಿತು.
ಕೆಸರು ಘನವೆಂತೆಂಬಿರಿ
ಕೆಸರು ಘನವಲ್ಲ, ಕೆಸರು ನೀರಿನಲ್ಲಿ ಪುಟ್ಟಿತು.
ನೀರು ಘನವೆಂತೆಂಬಿರಿ, ನೀರು ಘನವಲ್ಲ
ನೀರು ಸಮುದ್ರಲ್ಲಿ ಪುಟ್ಟಿತು.
ಸಮುದ್ರವು ಘನವೆಂತೆಂಬಿರಿ
ಬಿರಿ ಸಮುದ್ರವು ಘನವಲ್ಲ,
ಸಮುದ್ರವು ಅಗಸ್ತ್ಯನ ಬಾಯಿಯಲ್ಲಿತ್ತು

ಅಗಸ್ತ್ಯನು ಘನವೆಂತೆಂಬಿರಿ ಅವನು ಕುಂಬದಲ್ಲಿ ಪುಟ್ಟಿದ.
ಕುಂಭವು ಘನವೆಂತೆಂಬಿರಿ, ಕುಂಭವೂ ಘನವಲ್ಲ,
ಕುಂಭವು ಭೂಮಿಯಲ್ಲಿ ಪುಟ್ಟಿತು.
ಭೂಮಿ ಘನವೆಂತೆಂಬಿರಿ ಭೂಮಿಯು ಘನವಲ್ಲ ಭೂಮಿ
ನಮ್ಮ ಆದಿಶೇಷನ ಕಡೆಗೆ ಸಾಲವಾಗಿ ಹೋಯಿತು.
ಆದಿಶೇಷನು ಘನವೆಂತೆಂಬರಿ, ಆತನೂ ಘನವಲ್ಲ,
ನಮ್ಮ ಆದಿಶೇಷನು ಪಾರ್ವತಾದೇವಿಯು ಕಿರುಬೆರಳಿಗೆ ಸಾಲವಾಗಿ ಹೋಯಿತು.
ನಮ್ಮ ಪಾರ್ವತಾದೇವಿಯು ಘನವೆಂತೆಂಬಿರಿ,
ಪಾರ್ವತಾದೇವಿಯು ಘನವಂತೆಯಲ್ಲ, ನಮ್ಮ ಪಾರ್ವತಾದೇವಿಯು ಪರಮೇಶ್ವರನ
ಎಡತೊಡೆಯನ್ನು ಬಿಟ್ಟು ಬಲ ತೊಡೆಯನ್ನರಿಯಳು
ನಮ್ಮ ಪರಮೇಶ್ವರನು ಘನವೆಂತೆಂಬಿರಿ, ನಮ್ಮ ಪರಮೇಶ್ವರನು ಘನವಂತನಲ್ಲ.
ನಮ್ಮ ಪರಮೇಶ್ವರನು ತನ್ನ ಭಕ್ತನಾದ ಬಸವಣ್ಣನೆದುರಿಗೆ ಮೆರೆಸಿದ ಶಾಸ್ತ್ರಗಳು
ಸಾರುತ್ತಿರುವನೆಂದುನಯ್ಯಾ ಅಂಬಿಗರ ಚೌಡಯ್ಯ.
ಅಹಹಹಾ ರುದ್ರಾ ಹರನಿಟ್ಟ ಮುಂಡಗಿಯ,
ಅರಿದೊಬ್ಬರ ಮೌನನಿಷ್ಠ ಮುಂಡಗಿ, ತಾನೇ ಬಂದು ತಾನೇ ಎತ್ತಬೇಕಲ್ಲದೆ.
ನರಮಾನವರಿಗೆ ಆಳವಲ್ಲ, ಊಟಕ್ಕೆ ಬಂದರೆ, ಊಟಕ್ಕೆ ನೀಡಿರಿ
ಇಲ್ಲದಿದ್ದರೆ, ಇದ್ದದ್ದು ರದ್ದು ಮಾಡ್ಯಾರು
ಮನೆಯವರು ಮನೆಗೆ ಬಂದಾರು, ಗುಡಿಯವರು ಗುಡಿಗೆ ಬಂದಾರು,
ಕಟ್ಟಿ ಕಲ್ಲಕಟ್ಟೆಗೆ ಬಂದೀತು, ಗಟ್ಯಾಗಿ ತಿಳಿದುಕೊಳ್ಳಿರಿ
ಮುದ್ದು ಮುಖದ ಮೌನಯ್ಯನ ಮಾತು
ಮುಗಳ ಟೊಪ್ಪಿಗೆ.
ಹಸುರ ಕುದರೆ ಏರಿ, ಹಸುಮಗನಾಗಿ ಬರ್‍ತಾನ.
ಹಸನಾಗಿ ಕೇಳಿರಿ, ಅಹಹಾ ರುದ್ರಾ
ಸತ್ಯಭಕ್ತಿ ಶುದ್ಧಭಾವ ಉಳ್ಳವರಲ್ಲಿ ಈತನಿದ್ದಾನೆಕಾಣಿರಣ್ಣ
ಇಂಥಪ್ಪ ಶರಣರಿಗೆ ಜೀಯಾ ಎನ್ನುವನೆಯ್ಯಾ ಕರುಣಾಗ್ರವಾಲ,
ಕರವೀರಭದ್ರ ಶರಣನ ಕೋಪದಿಂದ ಹುಟ್ಟಿದಾತ ರುದ್ರ,
ವಜ್ರಕಾಯ ರುದ್ರ, ಖಡೇ...ಖಡೇ...ಎಂದ.(ಬಣಗಾರ ದೇವರಾಜ. ಮುರುವಂತರು)

ಒಡಪು:– ಬ್ರಹ್ಮ ಕಪಾಲ
ಅಹಹಹಾ ರುದ್ರಾ, ಹೇ ಶಂಭೋ

ಓಂನಮೋ ಗಣೇಶ ಗಗನಸುತ, ಗೌರಿಪುತ್ರಾ,
ಗಹನವಿಷಯ ವಿಶಾರದಾ, ಜ್ಞಾನ ಭಂಡಾರಿ ನಮೋನ್ನಮಃ
ವೇದ ಶಾಸ್ತ್ರಗಳೇಕೆ ವಾದ ತರ್ಕಗಳೇಕೆ
ಕಾದಾಡಬಹುದೇ ಕುಲ ಛಲಕೆ ಮಾದಿಗರ
ಹಾಗಿರಬೇಕು ಬಸವಣ್ಣ
ಮೇದಿನಿಗೊಬ್ಬ ಶಿವನಾದ ಮೇಲೆ
ಕಾದಾಡಬಹುದೇ ಕುಲ ಛಲಕೆ ಲೋಕದ
ಓದು ತರ್ಕದ ಹೊಲೆಯರ ನೋಡು ಬಸವಣ್ಣ
ಮುತ್ತು ಚಿಪ್ಪಿನೊಳ ಪುಟ್ಟುವುದು
ರತ್ನ ಪಾಷಾಣದೊಳ ಪುಟ್ಟುವುದು
ಉತ್ತಮ ಶರಣರು ಹೊಲೆಯಲ್ಲಿ ಹುಟ್ಟಿದ ಮೇಲೆ
ನನ್ನ ಕುಲ ತನ್ನ ಕುಲ ಹೆಚ್ಚೆನ್ನಬಹುದೇ ಬಸವಣ್ಣ
ಕೂಳಿದ್ದ ಕಾಲಕ್ಕೆ ಕುಲಾಚಾರ ನೀರಿದ್ದ
ಕಾಲಕೆ. ನೇಮ ನಿತ್ಯ ಕೂಳು ನೀರು
ಎರಡು ಕಡಿಮೆಯಾದರೆ ದಾರಿದ್ರರಿಗೆ
ಆರ ಮನೆಯಾದರೇನು ಬಸವಣ್ಣ
ಸಾವು ಮರಣಗಳೊಂದೆ ದಾರಿಯಲ್ಲಾ ಒಂದೆ
ಜನಿತಗಳು ಒಂದೆ ಸಕಲರ ಕುಲವೆಲ್ಲ ಒಂದೆ
ಬಸವಣ್ಣ ಇದರೊಳಗೆ ಅವಕುಲ
ಹಿರಿದು ಕಿರಿದು ಎನಬಹುದೆ ಬಸವಣ್ಣ
ಎತ್ತು ಎಮ್ಮಿಗೆ ಕುಲವು ಕತ್ತೆ ಕುದುರೆಗೆ ಕುಲವು
ಸತ್ಯ ಶರಣರಿಗೆ ಯಾತರ ಕುಲವಯ್ಯ ನಮ್ಮ
ನಿರ್ತು ಇದ್ದಲ್ಲಿ ಕೇಳಬಹುದು ಬಸವಣ್ಣ
ಸೂಕ್ಷ್ಮದ ಸುತ್ತಿಗೆ ದೀಕ್ಷದ ಇಕ್ಕಳಿಗೆ
ಲೋಕಪಾವನ ಅಡಿಗಲ್ಲು ಬ್ರಹ್ಮ, ವಿಷ್ಣು, ರುದ್ರ
ವಿವೇಕದಿಂದಾದ ಒಲಿಗುಂಡು ಬಸವಣ್ಣ
ಹರನೆ ಕಮ್ಮಾರನಾಗಿ ನರರೂಪಂ ತಾಳಿ
ಸರ್ವ ಕಾಯಕಕ್ಕೆ ಉಪದೇಶ ಕೊಟ್ಟಂಥ

ಗುರುವಿನ ಮುಂದೆ ಗುರು ಉಂಟೇನು ಬಸವಣ್ಣ

ಹರನೆ ಕಮ್ಮಾರ ವಿಷ್ಣುವೇ ಬಡಿಗ

ಬಸವಣ್ಣನೆ ಎತ್ತಲ್ಲವೆ ಈ ಲೋಕದ

ಕತ್ತೆಗಳೇನು ಬಲ್ಲರು ಬಸವಣ್ಣ. ಖಡೇ... ಖಡೇ.....(ಬಣಗಾರ ದೇವರಾಜ. ಪುರುವಂತರು.)

೦೮ ಹ್ಯಾರಡಾ ಜನಪದರ ಭಜನಾ ಹಾಡುಗಳು

ಹಾಡು:- ವ್ಯಕ್ತಿಯ ವ್ಯಕ್ತಿತ್ವದ ಹಾಡು

"ಏ ತಿಳಿದು ನಡಿಯೋ ತಮ್ಮ ಜಗದಾಗ ಆಗಬ್ಯಾಡ ಹುಮ್ಮ
ಮನಿ ಬಿಟ್ಟು ನೀನು ಸಿಕ್ಕಂಗ ತಿರಿಗಿದರ
ಕಳಿತ್ತಾರೋ ನಿನ್ನ ಮಾನ ॥ಪ॥

"ಮಂದಿಯ ಕೂಡ ಜಗಳಕ್ಕೆ ಹೋಗಿ ಆಗಬ್ಯಾಡೋ ಐರಾಣ
ಸುಮ್ಮನ ಕುಂತ ಮಂದಿನ ತಡವಿದ್ರ ಉಳಿದಿಲ್ಲ ನಿನ್ನ ಮಾನ
ಮಾನಕಳಕೊಂಡು ಬೈಲಿಗೆ ಬಿದ್ದರೆ ಅಂತರಪ್ಪ ಶ್ವಾನ ॥ಪ॥

ತುತ್ತು ಕೂಳಿಗಾಗಿ ಹೊಟ್ಟಿದ ಬಣವೆ ಕೆಡುವ ಬ್ಯಾಡೋ ನಿವಾ
ಮಂಗನ್ನ ಬೆನ್ನತ್ತಿ ಸಿಕ್ಕಾಂಗ ತಿರಿಗಿದರ ಆಗ್ತೀದಿ ಐರಾಣ
ನಿಂದು ಮೊದಲ ನೀ ತಿಳಿಯಬೇಕೋ ಹೇಳುವೆನು ನಾನಾ ॥ಪ॥

ನೆತ್ತಿಯ ಮೇಲೆ ಹೊತ್ತು ಬಂದಿತ್ತು ತಿಳೊಕೋರು ಹುಚ್ಚುಕೋಣ
ನಾನಾದೇಶ ಸುತ್ತಿ ಭಾಷಣ ಮಾಡಿತೀದಿ ತಿಳುಕೊಂಡು ನಡಿ ಕೋಣಾ
ನೀತಿ ತಪ್ಪಿ ತಿನಬ್ಯಾಡ ನೀನಾ ಹುಳಿಯಿಲ್ಲದ ಬಾನಾ ॥ಪ॥

ಹುಚ್ಚ ನಾಯಿಯಂತೆ ಹೆಸರಿಟ್ಟ ಕರೆದರೆ ತಿಳಿಲಿಲ್ಲೊ ನಿನಾ
ಅನ್ನ ಹಾಕಿದ ಅರಸನ ಋಣ ಮುಟ್ಟಿಸೆಪ್ಪ ನಿನಾ
ತಾಯಿ ಗರ್ಭದಿಂದ ಹೊರಗ ಬರುವಾಗ ತಂದೀ ನೀ ಏನ ॥ಪ॥

ಸ್ವಂತ ಮನಿಯಂತ ಮ್ಯಾಲೋಗಿ ಕುಂತೀದಿ ಇಲ್ಲಪ್ಪ ನಿನ್ನಾ ಕೂಸಾ
ಬಾಡಿಗೆ ಮನಿಯಾಗ ಒಂಟಾಟ ನಡಿಸೀದಿ ಏನು ಹೇಳಲಿ ನಾನಾ
ಮಲಿಯಮ್ಮನ ಸೇವಾ ತಪ್ಪದೆ ಮಾಡಿದರೆ ಸಿಗತೈತಿ ಮುಕ್ತಿ ದ್ವಾರಾ ॥ಪ॥

ಮೇಲಿನ ಹಾಡಿನಲ್ಲಿ ವ್ಯಕ್ತಿಯು ತನ್ನ ವೈಯಕ್ತಿಕ ಬದುಕಿನಲ್ಲಿ ಹೇಗಿರಬೇಕೆಂಬುದನ್ನು ಹ್ಯಾರಡಾ ಜನಪದರು ತಮ್ಮದೇ ಆದ ಭಾಷೆಯಲ್ಲಿ ರಚನೆ ಮಾಡಿ ಹಾಡುವರು.

ಹಾಡು:- ನೀತಿ ಮಾರ್ಗದ ಹಾಡು

"ಬಾಯಿಗಿ ಹಾಕೇಳ್ರಿ ಅನುಭವದ ಕೀಲಿ
ಬಾಯಿಗೆ ಬಂದಿದ್ದ ಹೇಳಿದರ ಹಚ್ಚುತಾರ ಬೇಲಿ
ನಾನೇ ದೊಡ್ಡವಂತ ಜಗಿಬ್ಯಾಡಿದರ ಸಾಕಷ್ಟದಾರ
ಜಗದಲ್ಲಿ ಪಂಡಿತರ ಪಂಡಿತರು ಅದಾರ ಜಗದಲ್ಲಿ
ಚಂದಾಗಿ ಹೋಗುಮೂಳ ಇರುತನ ಲಜ್ಜೆಗೆಟ್ಟು
ಮಾಡಬ್ಯಾಡ ಕೆಟ್ಟತನ ಬಣವರ ಗೋಣ ಮುರಿದು ಘಳಿಸಬ್ಯಾಡೇ ಹಣ
ಇವತ್ತಿಲ್ಲ ನಾಳೆ ಹರಾಜು ನಿನ್ನ ಮಾನಾ
ಮಾಡ್ಕೊಂಡ ಹೆಂಡಿನರಿ ಕೊಂದವನಾ ಕುಷ್ಠರೋಗಿಯಾಗಿ ಹುಟ್ಟತ್ತಾನಾ
ಇನ್ನೊಬ್ರ ಹೆಣ್ಣು ಮಕ್ಕಳ್ನ ನೋಡಿದವನಾ
ಇನ್ನೊಬ್ರ ಹೆಣ್ಣು ಮಕ್ಕಳ್ನ ನೋಡಿದವನಾ ಚಂಡನಾಗಿ ಹುಟ್ಟುತ್ತಾನ ॥ಪ॥

ಗರ್ವದಿಂದ ಗುರುವಿಗೆ ದ್ರೋಹ ಮಾಡಿದವನಾ ನಾಯಿಯಾಗಿ ಹುಟ್ಟುತ್ತಾನಾ
ಸುಳ್ಳು ಸಾಕ್ಷಿ ಹೇಳಿದವನಾ
ಸುಳ್ಳು ಸಾಕ್ಷಿ ಹೇಳಿದವನಾ ಮೂಖವಾಗಿ ಹುಟ್ಟುತ್ತಾನ ॥ಪ॥

ಸಾಕಿದ ಆಕಳ ಒದ್ದವನಾ ಕಾಲಿಲ್ಲದವನಾಗಿ ಹುಟ್ಟುತ್ತಾನ
ಹತ್ತಿಬಟ್ಟಿ, ಚಪ್ಪಲಿ ಕದಿವವನಾ
ಹತ್ತಿಬಟ್ಟಿ, ಚಪ್ಪಲಿ ಕದಿವವನಾ ಕ್ರೂರಿಯಾರಿ ಹುಟ್ಟುತ್ತಾನ ॥ಪ॥

ಸುತ್ತ ದೇಶದೊಳಗೆ ಹ್ಯಾರಡಾ ಗ್ರಾಮದ ಕವನಾ
ಮಲಿಯಮ್ಮ ಸೇವಕರು ಹಾಡ್ಯಾರ ದಿನ
ಸದ್ಗುರು ಸೇವಾ ಭಾಯಿ ಸತ್ಯ ಶರಣ ಎಷ್ಟಂತ ಮಾಡಲಿ ಇವರ ವರುಣ"

ಮೇಲಿನ ಹಾಡಿನಲ್ಲಿ ಮನವನು ಅನೀತಿ ಮಾರ್ಗದಲ್ಲಿ ನಡೆಯಬಾರದು. ಸತ್ಯದ ಮಾರ್ಗದಲ್ಲಿ ನಡೆದರೆ ಆತನ ಮುಕ್ತಿ ದೊರೆಯುವುದು ಎಂದು ಹ್ಯಾರಡಾ ಜನಪದರು ಹಾಡುವರು.

ಹಾಡು:- ಜೀವನದ ನೀತಿಸಾರುವ ಹಾಡು

"ಮಾಡಬಾರದೋ ಯಣ್ಣ ಮಾಡಬಾರದೋ
ಮಾಡಬಾರದ ಮಾಡಿ ದಾರಿ ಬಿಡಬಾರದೋ ॥ಪ॥

ನಡತಿ ಇದ್ದ ಮನಿಗೆ ಕೇಡು ಬಗೆಯಬಾರದೋ
ಬಡವರಿಗೆ ಭಾಷೆ ಕೊಟ್ಟು ತಪ್ಪಬಾರದೋ ॥ಪ॥

ಕಳ್ಳಿ ಸುಳ್ಳಿರ ಮಾತು ಕೇಳಬಾರದೋ
ಒಳ್ಳೆಯವರ ಗೆಳತನ ಬಿಡಬಾರದೋ ॥ಪ॥

ಮಳ್ಳಿಯಂಗ ಒಬ್ಬರ ಬುಡುಕ ಡೊಗ್ಗಬಾರದೋ
ಹೆಂಡ್ತಿ ಮುಂದ ತಾಯಿನ ಬೈಯಬಾರದೋ ॥ಪ॥

ಹಸ್ತಿನೆಂದರೆ ಕಿವೀಲಿ ಕೇಳಬಾರದೋ
ಶಿಸ್ತಿನಿಂದ ಮುಂದಕ್ಕೋಗು ಎನ್ನಬಾರದೋ ॥ಪ॥

ಸಂತಿ ಸೂಳ್ಯಾರ ಸಂಘ ಮಾಡಬಾರದೋ
ಓಸಿ ಇಸ್ಪೀಟ್ ಮಾತ್ರ ಕಲಿಯಬಾರದೋ ॥ಪ॥

ಕಬರಗೆಟ್ಟ ಓಣಿ-ಓಣಿ ತಿರುಗಬಾರದೋ
ಯಾರದ ರೊಕ್ಕ ಯಲ್ಲಮ್ಮನ ಜಾತ್ರೆ ಮಾಡಬಾರದೋ ॥ಪ॥

ಮೇಲಿನ ಹಾಡಿನಲ್ಲಿ ವ್ಯಕ್ತಿಯ ವ್ಯಕ್ತಿತ್ವ ಮಹೋನ್ನತವಾಗಿರಬೇಕು. ಯಾರಿಗೂ ಕೇಡನ್ನು ಬಯಸದೇ ಜೀವನ ಮಾಡಬೇಕೆಂಬುದು ಹ್ಯಾರಡಾ ಜನಪದರ ಅಭಿಪ್ರಾಯವಾಗಿದೆ.

ಹಾಡು:- ಜೀವನದ ಹಾಡು

"ಕೊಳ್ಳಿ ಸಂಸಾರ ಬಿಟ್ಟು ನೀ ಬಾರ
ಎಷ್ಟಿದ್ದರೊಂದು ದಿನ ಹೋಗುದು ನಿರ್ಧಾರ
ಹೆಂಡರು ಮಕ್ಕಳು ಇವರೆಲ್ಲ ಯಾರ
ಬಂಡಿ ತುಂಬ ಬಳಗ ನಿನಗ ಇದ್ದಾರ
ಕಂಡಕಂಡಗೆಲ್ಲಾ ಪ್ರೀತಿಯ ಗೆಳೆಯರ
ಉಂಡು ಉಡುವುದಕ್ಕೆ ಬೆನ್ನ ಹತ್ತಾರ ॥ಪ॥

ನಾನು ನನ್ನದೆಂಬ ಮೋಹದ ದಾಳಿ
ಏನು ಉಳಿಯದಂತೆ ಮಾಡ್ಯೆತಿ ದೋಳಿ
ಜಾಣ ಯಮ ಬರುವುದಿಲ್ಲ ನಿನಗೆಂದು ಹೇಳಿ
ನಿನಗರಿಯದಂತೆ ಕಳಿಸುವನು ದಾಳಿ ॥ಪ॥

ಯಾರಿಗೆ ಯಾರಿಲ್ಲ ತಿಳಿಯೋ ಸರದಾರ
ನೀರ ಮೇಲಿನ ಗುರಳಿ ನಿನ್ನ ಶರೀರ
ಊರಿಗೆ ಹೋಗುವಾಗ ಯಾರು ಬರುತ್ತಾರ
ಸಾರಿ ಹೇಳಿದರಿಲ್ಲ ನಿನಗ ದರಕಾರ ॥ಪ॥

ಕಷ್ಟಪಟ್ಟು ದುಡಿದು ಗಳಿಸಿದಿಯಲ್ಲಾ
ಹೊಟ್ಟೆ ತುಂಬ ನೀನು ಎಂದೂ ಉಣ್ಣಲಿಲ್ಲ
ಎಷ್ಟಿದ್ದಕೊ ಕೊನೆಗೆ ನೀನು ಹೋಗೋದು ಖಿಲ್ಲ ॥ಪ॥

ಐರಪುರ ಹುಣಿಶ್ಯಾಳ ಕೈವಲ್ಯಶ್ರಮ ನೋಡಿ
ಗುರು ಶರಣರ ಚರಣವ ಕೊಂಡಾಡ
ಗುರುವಿನ ಗುರು ದೇವರ ಈ ಮಾತ ಮರಿಬೇಡ
ಅರಿವಿನ ಈ ಜನ್ಮ ಹಾಳು ಮಾಡಲು ಬೇಡ ॥ಪ॥

ಹೀಗೆ ಹ್ಯಾರಡಾ ಜನಪದರು ತಮ್ಮ ಜೀವನದ ಪ್ರತಿಯೊಂದು ಹಂತದಲ್ಲಿ ತಾವು ಕಂಡುಂಡ ಜೀವನದ ಚಿತ್ರಣವನ್ನು ಹಾಡಿನ ರೂಪದಲ್ಲಿ ಸೆರೆಹಿಡಿದಿದ್ದಾರೆ.

೭.೧.೨ ಜನಪದ ಕಥೆಗಳು

ಜಾನಪದ ವಿದ್ವಾಸರಾದ ಸ್ಮಿತ್ ಥಾಂಸನ್ ಜನಪದ ಕಥೆಗಳನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ "The story which has been handed down from generation to generation by word of mouth" ಕನ್ನಡದಲ್ಲಿ ಅಜ್ಜಿಕಥೆ, ಅಡುಗೂಲಜ್ಜಿ ಕಥೆ, ಕಟ್ಟುಕಥೆ, ಕಾಗಕ್ಕ, ಗುಬ್ಬಕ್ಕನ ಕಥೆ, ರಾಜರಾಣಿ ಕಥೆ...... ಇತ್ಯಾದಿ ಪದಗಳನ್ನು ಜನಪದ ಕಥೆಗೆ ಸಂವಾದಿಯಾಗಿ ಬಳಸುವ ರೂಢಿ ಇದೆ.

ಕಥೆಗಳಲ್ಲಿ ಕಲ್ಪನೆಗಳೇ ಬಹಳ ಪ್ರಾಧಾನ್ಯ. ಕಥೆಯ ಬೇರೆ ಬೇರೆ ಪ್ರಕಾರಗಳಲ್ಲಿ ಈ ಕಲ್ಪನೆಯು ಪ್ರಮಾಣದಲ್ಲಿ ವ್ಯತ್ಯಾಸವಾಗಬಹುದು. ಇಲ್ಲಿ ವಾಸ್ತವ ಅಂಶಗಳೊಂದಿಗೆ ಕಾಲ್ಪನಿಕ ವಿವರಗಳು ಯಾವುದೇ ಭೇದವಿಲ್ಲದೆ ಬೆರೆತು ಬರುತ್ತವೆ. ಮಾತನಾಡುವ ಪ್ರಾಣಿಗಳು, ಜೀವಿಗಳಂತೆ ವರ್ತಿಸುವ ನಿರ್ಜೀವ ವಸ್ತಗಳು, ದೇವತೆ, ರಾಕ್ಷಸ, ದೆವ್ವ, ಬೇತಾಳ,ಕಿನ್ನರ ಯಕ್ಷಣಿ ಮೊದಲಾದ ಕಾಲ್ಪನಿಕ ಅತಿಮಾನುಷ ಜೀವಿಗಳು, ಮಾಟಗಾತಿಯರು, ಸಾಧು ಸಂತರು ಇಲ್ಲಿ ಪಾತ್ರವಹಿಸುತ್ತಾರೆ. ಆದಿಮಾನವನ ಚಿಂತನೆ ಹಾಗೂ ಬದುಕಿನ ಪ್ರತಿಬಿಂಬವಾದ ನರಭಕ್ಷತನ, ಮಾಯ-ಮಾಟ, ಮೂಢ-ನಂಬಿಕೆ, ಹಾಗೂ ಆಚರಣೆಗಳನ್ನು ಕಥೆಗಳಲ್ಲಿ ಗುರುತಿಸಬಹುದು. ಕಥೆಗಳ ವಸ್ತುವಿನಲ್ಲಿ ಹೆಚ್ಚಿನಂಶ ಕಾಲ್ಪನಿಕವಾಗಿದ್ದರೂ ಚಾರಿತ್ರಿಕ, ಪೌರಣಿಕ, ಸಾಮಾಜಿಕ ಹಾಗೂ ವಾಸ್ತವಿಕ ವಿವರಗಳು ಸಮರಸವಾಗಿ ಬೆರೆತು ಅಂದೊಂದು ವಿಶಿಷ್ಟ ನಿರೂಪಣೆಯಾಗಿರುತ್ತದೆ.

ಜನಪದ ಸಾಹಿತ್ಯದಲ್ಲಿ ಜನಪದ ಕಥೆಗೆ ಮಹತ್ವದ ಸ್ಥಾನವಿದೆ. ಈ ಜನಪದ ಕಥೆಗಳನ್ನು ಕೇಳುವುದಾಗಲಿ, ಹೇಳುವುದಾಗಲಿ, ನಿನ್ನೆಮೊನ್ನೆಯದಲ್ಲ ಕಂಠಸ್ಥ ಸಂಪ್ರದಾಯದ ಕಥೆ ಇತಿಹಾಸಕ್ಕಿಂತ ಪ್ರಾಚೀನವಾದುದು. ತಲೆ-ತಲೆಮಾರುಗಳಿಂದ ಬಾಯಿ ಮಾತಿನ ಮೂಲಕ ಹರಿದು ಬಂದಿರುವ ಕಥೆಯಾಗಿದೆ. ಇದನ್ನು ಇಂಗ್ಲೀಷನಲ್ಲಿ 'ಪೋಕ್ ಟೇಲ್' ಎಂದು ಕರೆಯುತ್ತಾರೆ. ಭಾರತದಲ್ಲಿ ಅಷ್ಟೇ ಅಲ್ಲ ವಿದೇಶದಲ್ಲೂ ಇದರ ಅಧ್ಯಯನ ಸತತವಾಗಿ ನಡೆಯುತ್ತಲೇ ಇದೆ.

ಜಾನಪದವನ್ನು ಸಾಹಿತ್ಯ, ಭಾಷಿಕ, ವಿಜ್ಞಾನ ಮತ್ತು ಕ್ರಿಯಾತ್ಮಕ ಎಂದು ನಾಲ್ಕು ವಿಭಾಗ ಮಾಡಿದ್ದಾರೆ. ಸಾಹಿತ್ಯದಲ್ಲಿ ಕಥೆಯೂ ಒಂದು ಪ್ರಕಾರವಾಗಿದೆ. ಈ ಕಥೆ ಮಕ್ಕಳಿಗೆ ದೊಡ್ಡವರಿಗೆ ಹಾಗೂ ವಯಸ್ಸಾದವರಿಗೂ ರುಚಿಯನ್ನುಂಟು ಮಾಡುತ್ತದೆ. ಕಥೆಗಳನ್ನು ಹಲವು ಸಂದರ್ಭಗಳಲ್ಲಿ ಹೇಳುತ್ತಾರೆ. ಮಕ್ಕಳು ಮಲಗುವಾಗ, ದುಡಿದು ದಣಿವಾರಿಸಿಕೊಳ್ಳುವಾಗ, ಬೇಸರ ಕಳೆಯಲು ಹೀಗೆ ಅನೇಕ ಸಂದರ್ಭಗಳುಂಟು. ಹಿಂದಿನ ಕಾಲದಲ್ಲಿ ರಾಜಮಹಾರಾಜರು ಕಥೆ ಹೇಳುವವರನ್ನು ನೇಮಿಸಿಕೊಳ್ಳುತ್ತಿದ್ದರು.

* ಜನಪದ ಕಥೆಗಳ ಪ್ರಕಾರಗಳು

೧ ಅತಿಮಾನುಷ ಕಥೆಗಳು.

೨ ಅದ್ಭುತ ಕಥೆಗಳು.

೩ ಪ್ರಾಣಿ ಕಥೆಗಳು.

೪ ಹಾಸ್ಯ ಕಥೆಗಳು.

೫ ಬುದ್ಧಿವಂತ ಕಥೆಗಳು.

೦೧ ಅತಿಮಾನುಷ ಕಥೆಗಳು : ನಾಯಕರು ತನ್ನ ಸಾಹಸವನ್ನು ಮೆರೆಯಲು, ಅಸಾಧ್ಯ ಎನ್ನುವುದುನ್ನು ಸಾಧಿಸಲು ಇತರರ ನೆರವನ್ನು ಪಡೆಯುತ್ತಾನೆ. ಸಹಾಯಕರು ದೇವಕನ್ಯೆ, ಪ್ರಾಣಿ, ರಾಕ್ಷಸ, ದೆವ್ವ ಮತ್ತು ಜೊತೆಗಾರ ಯಾರಾದರೂ ಆಗಬಹುದು. ಅವರು ಅಸಾದ್ಯವಾದುದನ್ನು ಸಾಧ್ಯವಾಗಿಯೂ ಅಸಂಭಾವ್ಯವಾದುದನ್ನು ಸಂಭಾವ್ಯವಾಗಿಯೂ ಮಾಡುತ್ತಾರೆ. ಹ್ಯಾರಡ ಗ್ರಾಮದಲ್ಲಿ ಇಂತಹ ವಿಪುಲವಾದ ಕಥೆಗಳನ್ನು ಕಾಣಬಹುದಾಗಿದೆ. ಶೇಂಗಾ ಒಕ್ಕಲುತನ ಮಾಡುವಾಗ, ಜೋಳದ ಒಕ್ಕಲುತನ ಮಾಡುವಾಗ, ಹೊಲಗಳಲ್ಲಿ ಕಳೆಯನ್ನು ಕೀಳುವ ಸಂದರ್ಭದಲ್ಲಿ ಇಂತಹ ಕಥೆಗಳನ್ನು ಹೇಳುವುದುಂಟು. ಅದರಲ್ಲಿ ವಿಶೇಷವಾಗಿ ಹ್ಯಾರಡಾದ ಜನಪದ ಸ್ತ್ರೀಯರು ಇಂತಹ ಕಥೆಗಳನ್ನು ಹೇಳುವುದರಲ್ಲಿ ನಿಸ್ಸೀಮರು. ಅದಕ್ಕೊಂದು ಉದಾಹರಣೆ " ಬೆಕ್ಕಿನ ಮರಿ ರಾಣಿ ಆದದ್ದು" ಎಂಬ ಕಥೆ ಕೆಳ ಕಂಡಂತಿದೆ;

"ಒಂದು ಊರ್ನಲ್ಲಿ ಒಬ್ಬ ರಾಜ ರಾಜಂಗೆ ಏಳು ಜನ ಗಂಡು ಮಕ್ಕಳು. ಆರು ಜನಕ್ಕೆ ಮದ್ವೆ ಆಗಿತ್ತು. ಅದರೆ ಏಳನೆಯವನು ಎಲ್ಲೂ ಹೆಣ್ಣು ಒಪ್ಪುತ್ತಿರಲಿಲ್ಲ ಆದ್ದರಿಂದ ಅವನ ಅತ್ತಿಗೆಯರೆಲ್ಲಾ ತಮಾಷೆಮಾಡ್ತಾ ನೀನು ಎಂಥ ಹೆಂಡತಿ ತರುತ್ತೀಯಾ, ಅವಳೇನು ದೇವಲೋಕದ ಅಪ್ಸರೇನಾ ಎಂದು ಕೇಳ್ತಿದ್ರು, ಸರಿ ಒಂದು ದಿವಸ ಹೊರಟ. ಹೊಗ್ತಾ ಹೋಗ್ತಾ ಒಂದು ಹಳ್ಳಿಗೋಗಿ ಒಬ್ಬ ಅಜ್ಜಿ ಹತ್ತಿರ ತನ್ನ ವಿಷಯ ಎಲ್ಲಾ ಹೇಳ್ಕೊಂಡ. ಆಗ ಅಜ್ಜಿ ಉಪಾಯ ಮಾಡಿ ಒಂದು ಪೆಟ್ಟಿಗೆಯಲ್ಲಿ ಬೆಕ್ಕಿನ ಮರಿ ಇಟ್ಟು ಬೀಗ ಹಾಕಿ ಒಳ್ಳೆ ಹೆಣ್ಣನ್ನು ತಂದಿದ್ದೀನಿ ಅವಳಿಗೆ ತುಂಬಾ ನಾಚಿಕೆ ಆದ್ದರಿಂದ ನಿಮ್ಮನೆಗೋಗಿ ನೋಡ್ಕೊ ಎಂದು ಪೆಟ್ಟಿಗೆಯನ್ನು ಕೊಟ್ಟಳು. ಅದಕ್ಕೆ ದುಡ್ಡನ್ನು ಇಸ್ಕೋತಾಳೆ. ರಾಜಕುಮಾರ ಮನೆಗೆ ಹೋಗಿ ನೋಡುತ್ತಾನೆ. ಸರಿ ಅದು ಬೆಕ್ಕಿನಮರಿ ಚೆಂಗನೆ

ನೆಗೆಯುತ್ತದೆ.ಆಗ ಓಹೋ...... ನಾನು ಕೆಟ್ಟೆ ಅಂತ ಅಳ್ತಾ ಕುಂತ್ಕಂತಾನೆ. ಆಗ ಬೆಕ್ಕಿನ ಮರೀನೇ ಸಮಾಧಾನ ಮಾಡುತ್ತದೆ. ಯಾರಿಗೂ ಈ ವಿಷಯವನ್ನು ತಿಳಿಸಲೇ ಇಲ್ಲ ಮಹಾರಾಣಿ ನಿನ್ನ ಹೆಂಡತಿ ತೋರಿಸು ಅಂದರೂ ತೋರಿಸುವುದಿಲ್ಲ. ಆಗ ಊರಿನಲ್ಲಿ ದೊಡ್ಡ ಹಬ್ಬ ಬರುತ್ತದೆ.ಎಲ್ಲಾ ಸೊಸೆಯರಿಗೂ ಒಂದೊಂದು ಕೆಲಸ ಹೇಳಿ ಕಿರಿಯವನ ಹೆಂಡತಿಗೆ ಒಂದು ಪಲ್ಲ ಬತ್ತ ಕುಟ್ಟುವುದು ತಿಳಿಸ್ತಾರೆ. ರಾಜಕುಮಾರ ರೂಮಿನಲ್ಲಿ ಅಳ್ತಾ ಇರಬೇಕಾದ್ರೆ ಮತ್ತೆ ಬೆಕ್ಕಿನಮರಿ ಕೇಳ್ತದೆ. ಅದ್ಯಾತಕ್ಕೆ ಚಿಂತಿಸುತ್ತಿರಿ? ನಾನು ಮಾಡಿಸ್ತಿನಿ ಎಂದು ಧೈರ್ಯ ಹೇಳ್ತದೆ.

ಬೆಕ್ಕಿನಮರಿ ಅಳುತ್ತಾ ಇಲಿ ಬಿಲದ ಹತ್ತಿರ ಕುಳಿತುಕೊಳ್ಳುತ್ತೆ. ಆಗ ಇಲಿಗಳು ಬಂದು ಕೇಳುತ್ತವೆ. ಬೆಕ್ಕು ನಡೆದ ಸಂಗತಿ ಎಲ್ಲಾ ತಿಳಿಸುತ್ತದೆ.ರಾತ್ರಿಯಾದ ಮೇಲೆ ಇಲಿಗಳ ಹಿಂಡೆಲ್ಲಾ ಬಂದು ಎಲ್ಲವೂ ಬಾಯಲ್ಲಿ "ಕುರುಕಿ" ಅಕ್ಕಿ ಮಾಡುತ್ತವೆ. ಬೆಳಗಾದ ಮೇಲೆ ಅಕ್ಕಿನಾ ತಾಯಿಗೆ ಕೊಡ್ತಾನೆ. ಮಾರಾಣಿ ಅಕ್ಕಿ ನೋಡ್ತಾರೆ ಆಶ್ಚರ್ಯ, ಅಕ್ಕೀಲಿ ಒಂದು ನುಚ್ಚೇ ಇರಲಿಲ್ಲ. ಯಾವ ರೀತಿ ಕುಟ್ಟಿದ್ದಾಳೆ ಅಕ್ಕೀನೆ ಇಷ್ಟರಮಟ್ಟಿಗೆ ಇರೋದಾದ್ರೆ ನನ್ನ ಸೊಸೆ ಎಷ್ಟರ ಮಟ್ಟಿಗೆ ಇರ್ತಾಳೆ? ಎಂದು ಸಂತೋಷ ಪಟ್ಕೋತಾಳೆ. ಸರಿ ಹಬ್ಬದ ದಿನ ಜನಕ್ಕೆಲ್ಲಾ ಊಟ ಬಡಿಸುವಾಗ ಕೊನೆ ಸೊಸೆ ಚಿನ್ನದ ಬಟ್ಲಲ್ಲಿ ತುಪ್ಪ ಬಡಿಸಬೇಕು" ಎಂದು ಮಗನಿಗೆ ತಿಳಿಸ್ತಾರೆ.

ಸರಿ ರಾಜಕುಮಾರಂಗೆ ಮತ್ತೆ ಯಸ್ನ ಬಂತು. ಯಾವ ರೀತಿ ತಾಯಿ ಅತ್ತಿಗೆಯವರಿಗೆ ತಿಳಿಸುವುದು. ಮೊದಲೇ ಎಲ್ಲರೂ ಕೇಳ್ತಿದ್ದಾರೆ. ಏನು ಮಾಡಲಿ ಅಂತಾ ಮಕಾಡೆ ಮಲ್ಕಂಡು ಅಳುತ್ತಿರುತ್ತಾನೆ. ಬೆಕ್ಕಿನ ಮರಿಗೂ ವಿಷಯ ತಿಳಿಯಿತು. ಪಾಪ ಬೆಕ್ಕು ಏನು ಮಾಡಲಿಕ್ಕೆ ಸಾಧ್ಯ? ಅದಕ್ಕೂ ಸಹ ಅಳು ಬಂತು. ಸರಿ ಮನೆ ಬಿಟ್ಟು ದೂರ, ದೂರ ಕಾಡಿಗೆ ಹೋಗಿ ಅಲ್ಲಿ ಜೋರಾಗಿ ಅಳ್ತಾ ಕೂತ್ಕೊತ್ತದೆ. ಅದೇ ಸಮಯದಲ್ಲಿ ಪಾರ್ವತಿಯು ಯಾರೋ ಹೆಂಗಸು ಅಳ್ತಾ ಇದ್ದಾಳೆ ಎಂದು ಬಂದು ನೊಡಿದಾಗ ತನ್ನ ಪರಿಸ್ಥಿತಿ ಎಲ್ಲಾ ಹೇಳ್ಕೊಳ್ಳುತ್ತದೆ. ಆಗ ಪಾರ್ವತಿಯು ಕಮಂಡಲ ನೀರನ್ನು ಚಿಮುಕಿಸಿದ ತಕ್ಷಣ ಒಳ್ಳೆ ದೇವಲೋಕದ ಅಪ್ಸರೆಯಂತಾಗಿ ತನ್ನ ಮನೆಗೆ ಬರುತ್ತಾಳೆ. ರಾಜಕುಮಾರ ನೋಡಿ ಬೆಕ್ಕಸ ಬೆರಗಾಗಿ ಯಾರು ಅಂತ ಕೇಳ್ತಾನೆ. ಆಗ ನಡೆದ ಸಂಗತಿಯನ್ನೆಲ್ಲಾ ಯುವರಾಣಿ ತಿಳಿಸ್ತಾಳೆ. ರಾಜಕುಮಾರನ ಸಂತೋಷಕ್ಕೆ ಪಾರವೇ ಇಲ್ಲದಂತಾಗುತ್ತದೆ. ಹಬ್ಬದ ದಿನ ಬಂತು ಆಗ ಮನೆಯವರು ಊರಿನವರೂ ಎಲ್ಲರೂ ನೋಡಿ ಆಹಾ...... ರಾಜಕುಮಾರ ಎಂಥ ಹೆಂಡ್ತಿನಾ ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಈ ಕಥೆಯಲ್ಲಿ ಬೆಕ್ಕಿನ ಮರಿ ರಾಣಿ ಆದದ್ದು ಸೋಜಿಗದ ಸಂಗತಿ ಆಗಿದೆ. ಅಸಾಧ್ಯ ಎಂಬುದು ಸಾಧ್ಯವಾಗಿದೆ.

ಮೇಲಿನ ಕಥೆಯನ್ನು ಗ್ರಾಮದ ಜನಪದ ಸ್ತ್ರೀಯಾದ ಸೆಟ್ಟೆಮ್ನರ ಕೆಂಚಮ್ಮ ಅತ್ಯಂತ ಮನೋಜ್ಞವಾಗಿ ಹೇಳುವರು. ಮೇಲಿನ ಕಥೆಯು ಕೇಳುಗರಲ್ಲಿ ಉತ್ಸಾಹವನ್ನು ಕೆರಳಿಸಿ ಮುಂದೆ ಏನಾಗುವುದೋ ಎಂಬ ಲೋಕಕ್ಕೆ ಕರೆದೊಯ್ಯುತ್ತದೆ. ಗ್ರಾಮೀಣ ಜನಪದರು ಕೃಷಿ ಚಟುವಟಿಕೆಗಳನ್ನು ಮಾಡುವಾಗ,

ಕಳೇ ಕೀಳುವಾಗ, ಹತ್ತಿ ಬಿಡಿಸುವಾಗ, ಶೇಂಗಾ ಹರಿಯುವಾಗ ಈ ಕಥೆಗಳನ್ನು ಹೇರಳವಾಗಿ ಹೇಳುವುದುಂಟು. ಇಂತಹ ಕಥೆಗಳಲ್ಲಿ ಅಸಾಧ್ಯವಾದುದನ್ನು ಸಾಧ್ಯ ಎಂಬುದಾಗಿ ಬಿಂಬಿಸುವ ಕಲೆ ಪ್ರಧಾನವಾದುದು. ಕೇಳುಗರಿಗೆ ಮನೋರಂಜನೆಯನ್ನು ಕೊಡುವುದರ ಮೂಲಕ, ಎಂತಹ ಶ್ರಮದಾಯಕ ಕೆಲಸವೂ ಸರಳವಾಗಿ ನಡೆಯುವುದುಂಟು. ಇಲ್ಲಿ ಅತಿಮಾನುಷ ಶಕ್ತಿಗಳನ್ನು ವೈಭವೀಕರಿಸಿ ಹೇಳುವುದುಂಟು. ವಾಸ್ತವ ಜೀವನಕ್ಕೆ ದೂರವಿರುವ ಅಂಶಗಳೇ ಇಲ್ಲಿ ಪ್ರಧಾನವಾದವುಗಳು. ಕಲ್ಪನೆಗೆ ಪ್ರಮುಖ ಪ್ರಾಧಾನ್ಯತೆಯನ್ನು ಕೊಟ್ಟಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಅತಿಮಾನುಷ ಶಕ್ತಿಗಳನ್ನು ಒಂದೊಂದಾಗಿ ವರ್ಣರಂಜಿತವಾಗಿ, ಕೇಳುಗರ ಉತ್ಸಾಹ ಕೆರಳಿಸುವ ರೀತಿಯು ನಮ್ಮ ಜನಪದರ ಶಕ್ತಿಯಾಗಿದೆ. ಮೇಲಿನ ಕಥೆಯಲ್ಲಿ ಒಂದು ಬೆಕ್ಕಿನ ಮರಿ ರಾಜಕುಮಾರಿಯಾಗಿದ್ದು ಅತ್ಯಂತ ಸೋಜಿಗದ ಸಂಗತಿಯಾಗಿದೆ. ವಾಸ್ತವ ಲೋಕಕ್ಕೆ ದೂರವಿರುವ ಅಂಶವಾಗಿದೆ. ಆದರೂ ನಮ್ಮ ಜನಪದರು ತಮ್ಮ ಮನೋರಂಜನೆಗಾಗಿ ಇಂತಹ ಹಲವಾರು ಕಥೆಗಳನ್ನು ಹೆಣೆದುಕೊಂಡಿದ್ದಾರೆ. ಇದು ಅವರ ಕಲ್ಪನಾ ಲೋಕಕ್ಕೆ ಹಿಡಿದ ಕೈಗನ್ನಡಿಯಾಗಿದೆ.

೦೨ ಅದ್ಭುತ ಕಥೆಗಳು : ಮಾಟ-ಮಂತ್ರಗಳಿಗೆ ಸಂಬಂಧಿಸಿದ ಕಥೆಗಳೇ ಅದ್ಭುತ ಕಥೆಗಳು. ಉದಾರಣೆಗೆ ಗಾಳಿಯಲ್ಲಿ ಮತ್ತು ನೀರಿನ ಮೇಲೆ ನಡೆಯುವುದು, ಏಳು ಮಲ್ಲಿಗೆ ತೂಕದ ತರುಣಿ ನಕ್ಕರೆ ಸಕ್ಕರೆ ಸೂಸುವ ಚೆಲುವೆ ಮತ್ತು ಸಾವಿರ ಕಣ್ಣಿನ ಮನುಷ್ಯ, ಇಪ್ಪತ್ತು ಕಾಲಿನ ನಾಯಿ ಇಂಥ ವಿಚಿತ್ರಗಳನ್ನು ಕಾಣುತ್ತೇವೆ. ಹಳ್ಳಿಗಳಲ್ಲಿ ಇಂದಿಗೂ ಸಹ ಮಾಟ ಮಂತ್ರಗಳಿಗೆ ಜನರು ಮಾರುಹೋಗುತ್ತಾರೆ. ದೇವರು ಮೈಯಲ್ಲಿ ಬರುವುದು, ದೆವ್ವ ಬಿಡಿಸುವುದು ಇಂದಿಗೂ ಹ್ಯಾರಡಾ ಗ್ರಾಮದಲ್ಲಿ ಸರ್ವೇಸಾಮಾನ್ಯವಾಗಿದೆ. ಉದಾಹರಣೆಗೆ "ಕರಿಮುದ್ದನ ಕಥೆ" ಕೆಳಕಂಡಂತಿದೆ. "

ಒಂದು ಊರ್‍ಕಲ್ಲಿ ಒಬ್ಬ ಮುದ್ಕಿಗೆ ಒಬ್ಬ ಮಗ ಇರ್ತಾನೆ. ಅವನು ದಪ್ಪಗೆ ಕುಳ್ಳಗೆ ,ಕಪ್ಪಗೆ ಇರ್ತಾನೆ, ಅವನನ್ನು ಎಲ್ಲರೂ "ಕರಿಮುದ್ದ" ಎಂದು ಕರೆಯುತ್ತಾರೆ. ಅವನಿಗೆ ಯಾರೂ ಹೆಣ್ಣನ್ನು ಕೊಡ್ತಿರಲಿಲ್ಲ. ಕರಿಮುದ್ದನೇ ಹೆಣ್ಣನ್ನು ಹುಡುಕಲು ಹೊರಟ. ಒಂದು ಹಳ್ಳಿಗೋಗಿ ಪಟೇಲರ ಮನೇಲಿ ಹೆಣ್ಣನ್ನು ಕೇಳ್ತಾನೆ. ಅವರೂ ಹೆಣ್ಣನ್ನು ಕೊಡಲಿಲ್ಲ ಸರಿ ಒಬ್ಬರ ಮನೇಲಿ ದನ ಕಾಯ್ಕಂಡು ಇರ್ತಾನೆ. ಅಲ್ಲಿಗೆ ಒಂದು ತೋಳ ಬರುತ್ತದೆ. ಕರಿಮುದ್ದ ಸಪ್ಪಗೆ ಕುಂತಿರುವುದನ್ನು ನೋಡಿ ಯಾಕಪ್ಪಾ ಹುಷಾರಿಲ್ವಾ? ಅಂತ ತೋಳ ಕೇಳುತ್ತದೆ. ತೋಳನ ಹತ್ತಿರ ತನ್ನ ವಿಷಯ ಎಲ್ಲಾ ಹೆಳ್ಕೋತ್ತಾನೆ. ಆಗ ತೋಳ ಅವನಿಗೊಂದು ಉಪಾಯ ಹೇಳುತ್ತದೆ.

ಮುಂದ್ಲೂರಿನಲ್ಲಿ ಒಬ್ಬ ಅಜ್ಜಿ ಹತ್ತಿರ ಮಂತ್ರದ ಚಾವಟಿ ಇದೆ. ಅದನ್ನು ಉಪಾಯದಿಂದ ಗೆದ್ದು ಪಡೆದುಕೋ ಆಗ ಮಂತ್ರದಂಡ ಹೇಳಿದ ಹಾಗೆ ಮಾಡುತ್ತದೆ. ಕರಿಮುದ್ದ ಅಜ್ಜಿನಾ ಹುಡ್ಕಂಡೋಗಿ ಅಜ್ಜಿ ನಾನು ನಿನ್ನ ಮೊಮ್ಮಗ ಎಂದು ಸುಳ್ಳು ಹೇಳಿ, ಅವಳ ಮನೆಯಲ್ಲಿ ಕೆಲವು ದಿನ ಇದ್ದು "ಮಂತ್ರ ದಂಡವನ್ನು" ಎಗರಿಸಿಕೊಂಡು ಬರ್ತಾನೆ. ಮಂತ್ರದಂಡ ತೆಗೆದು ಕೊಂಡು ನಾನು "ಬಿಳಿಮುದ್ದ" ಆಗಲಿ ಎಂದು ಒಂದು ಏಟನ್ನು ತನ್ನ ಮೈಗೆ ಹೊಡೆದುಕೊಳ್ಳುತ್ತಾನೆ. ಸರಿ

ಕರಿಮುದ್ದ ಬಿಳಿಮುದ್ದ ಆಗುತ್ತಾನೆ. ಮಂತ್ರದಂಡದಿಂದ ಕುದುರೆ ಮೇಲೆ ಕುತ್ಕೊಂಡು ಪಟೇಲರ ಮನೆಗೆ ಹೆಣ್ಣಿಗೋಗ್ತಾನೆ. ಪಟೇಲರು ದೊಡ್ಡ ಶ್ರೀಮಂತ ಎಂದು ಮದ್ವೆ ಮಾಡ್ಕೊಡ್ತಾರೆ.

ಸರಿ ಹೆಂಡ್ತಿನಾ ಕರ್ಕೊಂಡೋಗುವಾಗ ಇನ್ನು ಬಿಳಿಮುದ್ದನ್ನ ಮನೆಯವರು ಗುರ್ತಿಸೋದಿಲ್ಲ ಅಂತ ತಿಳ್ಕೊಂಡು ಈ ಬಿಳಿಮುದ್ದ ಕರಿಮುದ್ದ ಆಗಲಿ ಎಂದು ಮತ್ತೆ ಒಂದು ಏಟನ್ನು ಹೊಡೆದುಕೊಂಡು "ಕರಿಮುದ್ದನ ರೂಪದಲ್ಲಿ ಮನೆಗೆ ಹೋಗ್ತಾನೆ. ಕರಿಮುದ್ದ ಒಳ್ಳೆ ಸುಂದರ ಹುಡಿಗೀನ ಮದ್ವೆ ಮಾಡ್ಕೊಂಡು ಬಂದಿರುವುದನ್ನು ಊರವರೆಲ್ಲಾ ನೋಡಿ ಆಶ್ಚರ್ಯ ಪಡುತ್ತಾರೆ. ಪಾಪ ಅವರಿಗೇನು ಗೊತ್ತು ಈ ಮಂತ್ರದ ವಿಷಯ.

ಮೊದಲಿನಿಂದಲೂ ಗ್ರಾಮೀಣ ಜನಪದರು ಮಾಟ, ಮಂತ್ರ, ದೆವ್ವ ಇವುಗಳನ್ನು ಅಪಾರವಾಗಿ ನಂಬುತ್ತಾರೆ. ಈಗಲೂ ಹ್ಯಾರಡ ಗ್ರಾಮದಲ್ಲಿ ಸರ್ವೇಸಾಮಾನ್ಯವಾಗಿವೆ. ಹ್ಯಾರಡಾ ಗ್ರಾಮದಲ್ಲಿ ಕುಟುಂಬದಲ್ಲಿ ಯಾರಾದರೂ ಧೀರ್ಘಕಾಲದವರೆಗೆ ಅನಾರೋಗ್ಯದಿಂದ ಬಳಲುತ್ತಿದ್ದರೆ, ಏನನ್ನಾದರು ನೋಡಿ ಹೆದರಿದ್ದರೆ ಮೂರು ದಾರಿಗಳು ಸಂಧಿಸುವ ಜಾಗದಲ್ಲಿ ದೆವ್ವದ ಗೊಂಬೆಯನ್ನಿಟ್ಟು ಬರುವುದು ಸಾಮಾನ್ಯವಾಗಿದೆ. ಆ ಕುಟುಂಬದ ಯಜಮಾನ ಒಡೆದ ಮಡಿಕೆಯಲ್ಲಿ ಮಣ್ಣಿನ ಗೊಂಬೆಯನ್ನು ಮಾಡಿಕೊಂಡು ಮಡಿಕೆಯಲ್ಲಿಟ್ಟು, ಅದಕ್ಕೆ ಕುಂಕುಮ, ವಿಭೂತಿ ಹಚ್ಚಿ ಅದರಲ್ಲಿ ನಿಂಬೆಹಣ್ಣು, ಮೊಟ್ಟೆ, ಊದುಬತ್ತಿ, ನಾಣ್ಯಗಳನ್ನು ಇಟ್ಟುಕೊಂಡು ದೀಪವನ್ನು ಹಚ್ಚಿಕೊಂಡು ಸಾಯಂಕಾಲ ೭:೩೦ರ ಸುಮಾರಿಗೆ ಅದನ್ನು ತೆಗೆದುಕೊಂಡು, ಕೈಯಲ್ಲೊಂದು ಕುಡುಗೋಲನ್ನು ಹಿಡಿದುಕೊಂಡು ಮೂರು ದಾರಿಗಳು ಸಂಧಿಸುವ ಜಾಗದಲ್ಲಿ ಇಟ್ಟು ಬರುವುದುಂಟು. ಈ ಸಂಪ್ರದಾಯವನ್ನು ಹೆಚ್ಚಾಗಿ ಅಮವಾಸ್ಯೆಯ ದಿನದಂದು ಮಾಡುವುದುಂಟು. ಇದರ ಪ್ರಮುಖ ಉದ್ದೇಶ ಅನಾರೋಗ್ಯಕ್ಕೆ ಒಳಗಾಗಿರುವವರು, ಹೆದರಿದವರು ಬೇಗ ಗುಣಮುಖವಾಗಲಿ ಎಂದು.

ಇಂತಹ ಎಷ್ಟೋ ಆಚರಣೆಗಳು ಗ್ರಾಮದಲ್ಲಿ ಇಂದಿಗೂ ಚಾಲ್ತಿಯಲ್ಲಿವೆ. ಮೇಲಿನ ಕರಿಮುದ್ದನ ಕಥೆಯಲ್ಲಿ ಮಂತ್ರ ಶಕ್ತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಕರಿಮುದ್ದನು ಬಿಳಿ ಮುದ್ದನು ಆಗಿದ್ದು ಮಂತ್ರ ದಂಡದಿಂದ, ಹೀಗೆ ಮಂತ್ರ, ಮಾಟ ದೆವ್ವಗಳ ಅಮಾನುಷ ಶಕ್ತಿಗಳನ್ನು ಗ್ರಾಮೀಣ ಜನಪದರು ಇಂದಿಗೂ ನಂಬುತ್ತಾರೆ

೦೩. ಪ್ರಾಣಿಕಥೆಗಳು: ಗ್ರಾಮೀಣ ಜನಪದರಲ್ಲಿ ಪ್ರಾಣಿಗಳ ಮೇಲಿಯೂ ಸಹ ಕಥೆಗಳನ್ನು ಕಟ್ಟುವ ಚಮತ್ಕಾರವಿದೆ. ಇಂದಿಗೂ ಸಹ ಗ್ರಾಮೀಣ ಜನರು ಕಾಡು ಪ್ರಾಣಿಗಳು, ಪಕ್ಷಿಗಳು, ಹಾಗೂ ಸಾಕು ಪ್ರಾಣಿಗಳ ಮೇಲೆ ತಮ್ಮದೇ ಆದ ಧಾಟಿಯಲ್ಲಿ ಕಥೆಗಳನ್ನು ರಚಿಸಿದ್ದಾರೆ, ಉದಾಹರಣೆಗೆ "ಹುಲಿಯ ಗುರು" ಎಂಬ ಕಥೆ ಕೆಳಕಂಡಂತಿದೆ.

ಬಹಳ ಹಿಂದೆ ಬೆಕ್ಕು ಅರಣ್ಯದಲ್ಲಿ ವಾಸವಾಗಿತ್ತು, ಹುಲಿ, ಸಿಂಹಗಳಿಗೆ ಬೇಟೆಯಾಡುವುದನ್ನು ಕಲಿಸಿಕೊಟ್ಟಿದ್ದೇ ಬೆಕ್ಕು. ಹುಲಿಯ ಸೋದರ ಮಾವ ಬೆಕ್ಕು. ಬೆಕ್ಕು ಬೇಟೆಯಾಡುವುದರಲ್ಲಿ ಅತೀ

ಪ್ರವೀಣ ಅದನ್ನು ಕಂಡು ಹುಲಿಯು ಮಾವಾ..... ಮಾವಾ... ನನಗೂ ಭೇಟೆಯಾಡುವುದನ್ನು ಕಲಿಸು ಎನ್ನುತ್ತದೆ. ಅದರಂತೆ ಹುಲಿಗೆ ವಿದ್ಯೆಯನ್ನೆಲ್ಲಾ ಕಲಿಸುತ್ತದೆ.

ಒಂದು ದಿನ ಹುಲಿಗೆ ತುಂಬಾ ಹಸಿವಾಗುತ್ತದೆ. ಯಾವ ಪ್ರಾಣಿನೂ ಸಿಗುವುದಿಲ್ಲ. ಆಗ ಬೆಕ್ಕಿನ ಹತ್ತಿರ ಬಂದು ಮಾವ ನನಗೆ ತುಂಬಾ ಹಸಿವಾಗಿದೆ, ನಿನ್ನನ್ನು ತಿನ್ನುತ್ತೇನೆ. ಹೇಗೋ ನಿನ್ನ ವಿದ್ಯೆಯನ್ನೆಲ್ಲಾ ನನಗೆ ಬರುತ್ತದೆ ಇನ್ನು ನಿನ್ನ ಅವಶ್ಯಕತೆ ಇಲ್ಲಾ ಎಂದು ನೆಗೆಯುವಷ್ಟರಲ್ಲಿ ಬೆಕ್ಕು ಅಳಿಯ ದೇವರೇ ನೀನು ಕಲಿಯ ಬೇಕಾದದ್ದು ಮತ್ತೊಂದಿದೆ. ಎಂದು ಸರ್ರನೇ ಮರ ಹತ್ತುತ್ತದೆ. ಆಗ ಹುಲಿಯು ಮಾವ... ಮಾವ... ಮರ ಹತ್ತುವ ವಿದ್ಯೆಯನ್ನು ನನಗೆ ಹೇಳಿಕೊಡಲೇ ಇಲ್ಲವಲ್ಲಾ ಅದೊಂದು ಹೇಳಿಬಿಡು ಎನ್ನತ್ತದೆ. ಆಗ ಬೆಕ್ಕು, ದ್ರೋಹಿಯೇ ನೀನೆಂದೂ ಇಂಥ ಕೆಲಸ ಮಾಡುತ್ತೀಯಾ ಎಂದು ಈ ಗುಟ್ಟನ್ನು ನಿನಗೆ ತಿಳಿಸಲಿಲ್ಲ, ಇನ್ನು ನಿನ್ನ ಸಹವಾಸ ಬೇಡ ಎಂದು ಹೇಳಿ ಕಾಡನ್ನು ಬಿಟ್ಟು ಮಾನವರ ಸಂಗಡ ಊರು ಸೇರಿಕೊಂಡಿತು. ಆದ್ದರಿಂದ ಇಂದೂ ಕೂಡ ಹುಲಿಗೆ ಮರ ಹತ್ತುವುದಕ್ಕೆ ಬರುವುದಿಲ್ಲ.

ಪ್ರಾಣಿಗಳು ಹಾಗೂ ಗ್ರಾಮೀಣ ಜನಪದರಿಗೂ ಅನ್ಯೋನ್ಯ ಸಂಬಂಧವಿದೆ. ವಿವಿಧ ಪ್ರಾಣಿಗಳನ್ನು ಸಾಕುವುದರ ಮೂಲಕ ಅವುಗಳ ಜೊತೆ-ಜೊತೆಗೆ ಜೀವನವನ್ನು ಸಾಗಿಸುವುದು ಗ್ರಾಮೀಣ ಜನಪದರ ಮುಖ್ಯ ಕಾರ್ಯಗಳಲ್ಲೊಂದು. ಎತ್ತು, ಎಮ್ಮೆ, ಆಕಳು, ಬೆಕ್ಕು, ನಾಯಿ, ಮೇಕೆ, ಕುರಿ ಇತ್ಯಾದಿ ಪ್ರಾಣಿಗಳ ಜೊತೆಗೆ ಬದುಕುವರು. ಈ ಪ್ರಾಣಿ ಸಂಕುಲವನ್ನು ದೈವತ್ವದ ಎತ್ತರಕ್ಕೆ ಪೂಜಿಸುವುದು ಗ್ರಾಮೀಣ ಜನಪದರ ಮುಖ್ಯ ಲಕ್ಷಣ. ಇಂತಹ ಪ್ರಾಣಿಗಳ ಸುತ್ತ ಹಲವಾರು ಕಥೆಗಳನ್ನು ಹೆಣೆದಿರುವುದನ್ನು ನಾವು ಕಾಣಬಹುದು. ಪ್ರಾಣಿಗಳಲ್ಲಿರುವ ಗುಣಾವಗುಣಗಳು, ಅದರ ಮಹತ್ವಗಳನ್ನು ತಮ್ಮ ಕಥೆಗಳಲ್ಲಿ ಹೆಣೆದಿರುವುದನ್ನು ಕಾಣಬಹುದು. ಪ್ರಾಚೀನ ಕಾಲದಿಂದಲೂ ಮಾನವನ ಮೊದಲ ಸಂಗಾತಿ ಎಂದರೆ ಪ್ರಾಣಿಗಳು. ಪ್ರಾಣಿಗಳ ಬಗ್ಗೆ ಜನಪದರ ಸಹಾನೂಭೂತಿ, ದೈವತ್ವ ಮನೋಭಾವಗಳನ್ನು ನಾವು ಅರಿಯಬಹುದಾಗಿದೆ. ಮೇಲಿನ "ಹುಲಿಯ ಗುರು" ಕಥೆಯಲ್ಲಿ ಬೆಕ್ಕು ಹಾಗೂ ಹುಲಿಯ ಗುಣಾವಗುಣಗಳನ್ನು ವೈಭವೀಕರಿಸಿ ಅವುಗಳ ಮಹತ್ವವನ್ನು ಹೇಳುವ ಪರಿಯನ್ನು ನಾವು ಮನಗಾಣಬಹುದಾಗಿದೆ.

೭.೧.೩ ಗಾದೆಗಳು

ಇಂಗ್ಲೀಷಿನ "proverb" ಎಂಬ ಶಬ್ದಕ್ಕೆ ಸಂವಾದಿಯಾಗಿ ಗಾದೆ ಎಂಬ ಶಬ್ದವನ್ನು ಬಳಸಲಾಗುತ್ತಿದೆ. ಗಾದೆಗಳು ಗ್ರಾಮೀಣ ಜನಪದರ ಅನುಭವದ ಮೂಸೆಯಲ್ಲಿ ಹುಟ್ಟಿದಂತಹುಗಳು. ಗ್ರಾಮೀಣ ಜನಪದರ ದಿನನಿತ್ಯದ ಜೀವನದಲ್ಲಿ ಹಾಸು ಹೊಕ್ಕಾಗಿವೆ, "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಮಾತಿನಂತೆ ಗಾದೆಗಳು ಗ್ರಾಮೀಣ ಜನಪದರ ಮನಸ್ಸಿನ ವಿವಿಧ ಮಗ್ಗಲುಗಳನ್ನು ಅನಾವರಣಗೊಳಿಸುತ್ತವೆ. ಅದರಲ್ಲಿ ಹಿತನುಡಿ, ವ್ಯಂಗ್ಯ, ವಿವೇಕ, ಜ್ಞಾನ, ಅನುಭವ, ಮೌಲ್ಯ, ನೀತಿ ಮುಂತಾದವುಗಳನ್ನು ಒಳಗೊಂಡಿರುವ ಒಂದು ಸಾಹಿತ್ಯದ ರಾಶಿಯಾಗಿದೆ. ಲಾರ್ಡ ಜಾನ್

ರಸಿನ್ ಅವರು ಗಾದೆಯನ್ನು "ಹಲವರ ಜ್ಞಾನ, ಒಬ್ಬನ ವಿವೇಕ" ಎಂದಿದ್ದಾರೆ. ಇಸೆಲಿಯನ್ ಅವರು "ಗಾದೆಯಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ ಸಾರ್ವಜನಿಕ ಮುದ್ರೆ ಬಿದ್ದಿರುವ ಪ್ರಚಲಿತವೂ, ಮೌಲ್ಯ ಭರಿತವೂ ಆಗಿರುವ ನಾಣ್ಯ" ಎಂದಿದ್ದಾರೆ.

ಎಲ್ಲಾ ದೇಶಗಳಲ್ಲಿಯೂ ಗಾದೆಗಳು ಪ್ರಚಲಿತದಲ್ಲಿವೆ. ಗಾದೆಯಲ್ಲಿ ಬಹಳಷ್ಟು ಹಲವಾರು ದೃಷ್ಟಾಂತಗಳಿಗೆ ಉಪಮ ಮತ್ತು ರೂಪಕಗಳು ಸಮ್ಮಿಲಗೊಂಡು ಸೃಷ್ಠಿಯಾಗಿರುವಂತಹದ್ದು. ಉದಾಹರಣೆಗೆ ಹಲವಾರು ಗಾದೆಗಳನ್ನು ಕಾಣಬಹುದಾಗಿದೆ.

೦೧ ಎತ್ತು ಎರೆಗೆಳೆದರೆ ಕೋಣ ಕೆರೆಗೆಳೆಯಿತಂತೆ.

೦೨ ಹತ್ತಿ ತೂಗೋ ಜಾಗದಾಗ ನೊಣಕ್ಕೇನು ಕೆಲಸ.

೦೩ ಶುಭ ನುಡಿಯೇ ಶೋಭನಗಿತ್ತಿ ಅಂದರೆ ಹಂದರ ತುಂಬಾ ಹಾದರದೋರು ಅಂದಳಂತೆ.

೦೪ ಉದ್ಯೋಗವಿಲ್ಲದ ಬಡಿಗಿ ಮಗನ ಮುಕುಳಿ ಕೆತ್ತಿದಂತೆ.

೦೫ ಮಲಿ ಬರಾಕಿಗೆ ನೆಲ ಕಾಣೋದಿಲ್ಲ ಮೀಸಿ ಬರೋನಿಗೆ ದೇಶ ಕಾಣೋದಿಲ್ಲ.

೦೬ ಹಲ್ಲಿದ್ದೋರಿಗೆ ಕಡ್ಲಿಲ್ಲ ಕಡ್ಲಿದ್ದೋರಿಗೆ ಹಲ್ಲಿಲ್ಲ.

೦೭ ಮಾಡಿದ್ದುಣ್ಣೋ ಮಹರಾಯ.

೦೮ ನೀಡೋರು ನಮ್ಮೋರು ಇದ್ದಾಗ ಎಲ್ಲಿ ಕುಂತ್ರೇನು.

೦೯ ಬರುತಾ ಬರುತಾ ರಾಜನ ಕುದರಿ ಕತ್ತ್ಯಾತಂತೆ.

೧೦ ದಂಡಿಗ್ಹೋಗ್ತಿನಂತಾ ಹಿಂಡು ಕೋಳಿ ತಿಂದನಂತೆ.

೧೧ ಊರಿಗೆ ಉಪಕಾರ ಮಾಡಬಾರದು ಹೆಣಕ್ಕೆ ಸಿಂಗಾರ ಮಾಡಬಾರದು.

೧೨ ಹೊಸ ಡಾಕ್ಟರಗಿಂತ ಹಳೇರೋಗಿ ವಾಸಿ.

೧೩ ಕಷ್ಟಕ್ಕೆ ಕರೀಬ್ಯಾಡ್ರಿ ಊಟಕ್ಕೆ ಮರೀಬ್ಯಾಡ್ರಿ.

೧೪ ಥೂ ಅಂದರೆ ಇತತ ಬಾ ಅಂದರಂತೆ.

೧೫ ಮರ ಹತ್ತುವವರನ್ನು ಸಿಗೋಮಟ ದಬ್ಬಬಹುದು.

೧೬ ತೇರುನುಂಗಿ ಪರಶೀಗೆ ಕೈ ಹಾಕ್ಯಾನಂತೆ.

೧೭ ಎಳಿ ಕೊಟ್ಟರ ಹಚ್ಚಡ ನುಂಗಿದಂತೆ.

೧೮ ದನ ತಿನ್ನೋರಿಗೆ ಹಪ್ಪಳೆಷ್ಟು ಈಡು.

೧೯ ಹದ ನೋಡಿ ಹರಗು ಬೆದಿ ನೋಡಿ ಬಿತ್ತು.

೨೦ ಊರ ಮುಂದ ಕುಂಟಿ ಹಾಕಿದರೆ ಒಬ್ಬರ ಕಡದೈತಿ ಒಬ್ಬರ ಬಳುದೈತಿ ಅಂದರಂತೆ.

೨೧ ಎಲ್ಲರ ಮನಿ ದ್ವಾಸಿ ತೂತ.

೨೨ ಆಚಾರ ಹೇಳೋಕೆ ಮಾಡ್ಯೆತಿ, ಬದ್ನಿಕಾಯಿ ತಿನ್ನೋಕೆ ಮಾಡ್ಯೆತಿ.

೨೩ ಹಲ್ಲುಹತ್ತಿದ ದಾಸಪ್ಪ ಒಳ್ಳು ಕಲ್ಲು ನೆಕ್ಕಿದ.

೨೪ ಆಳಾಗಿ ದುಡಿ ಅರಸನಾಗಿ ಉಣ್ಣು.

೨೫ ಸಂಕಟ ಬಂದಾಗ ವೆಂಕಟರಮಣ.

೨೬ ಊರಾಗ ಹುಲಿ, ಮನಿಯಾಗ ಇಲಿ.

೨೭ ಕೂದಲಿದ್ದಾಕಿ ಹೆಂಗಾರ ತುರುಬು ಕಟ್ಟುತಾಳ.

೨೮ ರಂಡಿಮುಂಡಿಗೆ ಶಾನುಭೋಗ ಗಂಟು ಬಿದ್ದಾಂಗೆ.

೨೯ ಲೆಕ್ಕ ಬಲ್ಲೋನು ಪಕ್ಕ ಕಳ್ಳ.

೩೦ ನಾಯಿಗ್ಹೇಳಿದರೆ ನಾಯಿ ಬಾಲಕೆ ಹೇಳಿತಂತೆ.

೩೧ ಮುಲಾಜಿಗೆ ಸುಮ್ಮನಿದ್ದರೆ, ಮನಿತುಂಬಾ ಮಕ್ಕಳಂತೆ.

೩೨ ಮಳಿ ಬಂದರೆ ಕೇಡಲ್ಲ, ಮಗ ಉಂಡರೆ ಕೇಡಲ್ಲ.

೩೩ ತಮ್ಮ ಗಂಗಾಳದಾಗ ಕತ್ತಿ ಸತ್ತು ಬಿದ್ದೈತಿ ಇನ್ನೊಬ್ಬರ ಗಂಗಾಳದಾಗಿನ ನೊಣ ಸತ್ತದ್ದು ಹೇಳಿದರಂತೆ.

೩೪ ಗಂಡಸರ ಕೈಯಾಗ ಕೂಸು ನಿಲ್ಲೋದಿಲ್ಲ, ಹೆಂಗಸರ ಕೈಯಾಗ ಪೈಸಾ ನಿಲ್ಲೋದಿಲ್ಲ.

೩೫ ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲು ಕೆಳಗೆ.

೩೬ ಯತಿ ಬಂದಾಗ ಕತ್ತಿಕಾಲು ಹಿಡಿಬೇಕು.

೩೭ ಓದು ಒಕ್ಕಾಲು ಬುದ್ಧಿ ಮುಕ್ಕಾಲು.

೩೮ ವಿದ್ಯೆ ಇಲ್ಲದವನು ಹದ್ದಿಗಿಂತ ಕಡೆ.

೩೯ ದುಡ್ಡು ಇದ್ದೋನು ದೊಡ್ಡಪ್ಪ.

೪೦ ಮುಖ ನೋಡಿ ಮಣಿ ಹಾಕಿದರಂತೆ.

೪೧ ಮೂರು ವರ್ಷದ ಬುದ್ಧಿ ನೂರು ವರ್ಷದತನಕ.

೪೨ ಕಟ್ಟಿಕೊಟ್ಟ ಬುತ್ತಿ, ಹೇಳಿಕೊಟ್ಟ ಮಾತು ಎಷ್ಟು ದಿವಸ?

೪೩ ಹಣ ಅಂದರೆ ಹೆಣ ಬಾಯಿ ತಗಿತೈತಿ.

೪೪ ಅಡಿಕೆಗೆ ಹೋದ ಮಾನ ಆನಿ ಕೊಟ್ಟರೂ ಬಾರದು.

೪೫ ಒಂದೂರಗೌಡ ಇನ್ನೊಂದೂರಿಗೆ ಕರಕಟ್ಟ ಗೂಟ.

೪೬ ಬ್ಯಾಡಾದ ಗಂಡಗೆ ಮೊಸರಾಗ ಕಲ್ಲು-ಹರಳು ಕಾಣ್ತಾ.

೪೭ ನೋಡಿಕೋತ ಹೋದರೆ ಮನಿ ಹೆಂಡತಿ ಕುರುಡಿ.

೪೮ ಮುಂಜಾನೆ ಬಂದ ಮಳಿ, ಸಂಜಿಗೆ ಬಂದ ಅಳಿಯ ಗಡಾ ಹೋಗೋದಿಲ್ಲ.

೪೯ ಹಿರಿಯಕ್ಕನ ಚಾಳಿ ಮನಿಮಂದಿಗೆಲ್ಲ.

೫೦ ದೊಡ್ಡೋರು ನಿಂತು ಉಚ್ಚಿಹೂಯ್ದರೆ ಸಣ್ಣವರು ಓಡ್ಯಾಡಿ ಹೊಯ್ದರಂತೆ.

೫೧ ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲು ಮಟ ನೀರು.

೫೨ ಹನಿಗೆ ಹನಿ ಕೂಡಿ ಹಳ್ಳ; ತೆನಿಗೆ ತೆನಿ ಕೂಡಿ ರಾಶಿ.

೫೩ ಮನಿ ಕಟ್ಟಿಸಿ ನೋಡು,ಮದವಿ ಮಾಡಿ ನೋಡು.

೫೪ ಅರೋಗ್ಯವೇ ಮಹಾಭಾಗ್ಯ.

೫೫ ಕೈಕೊಟ್ಟು ಹಗ್ಗ ಕಟ್ಟಿಸಿಕೊಂಡರಂತೆ.

೫೬ ಅಂಗೈ ತೋರಿಸಿ ಅವಲಕ್ಷಣ ಮಾಡಿಸಿಕೊಂಡರಂತೆ.

೫೭ ನೆಣ ಇದ್ದರೆ ನೊಣ ಮುಕ್ಕುರುತಾವ.

೫೮ ಗಂಡಸು ಕೂತ ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು.

೫೯ ಕೋಶ ಓದೋಕಿಂತ ದೇಶ ನೋಡು.

೬೦ ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ.

೬೧ ಮಾತು ಕೊಟ್ಟರೆ ಹೋಯ್ತು, ಮುತ್ತ ಒಡೆದರೆ ಹೋಯ್ತು.

೬೨ ಹಮ್ಮಿಗ್ಹೋಗಿ ಬ್ರಹ್ಮ ಕೆಟ್ಟ.

೬೩ ಗಂಟುಗಳ್ಳಗೆ ವ್ಯಾಪಾರ ಜಾಸ್ತಿ, ಕಮ್ಮಿ ಕುಲದವನಿಗೆ ಆಚಾರ ಜಾಸ್ತಿ.

೬೪ ಮಳಿ ನಿಂತರೂ ಮರದ ಹನಿ ನಿಲ್ಲದು.

೬೫ ಹುಚ್ಚುಮುಂಡಿ ಲಗ್ನದಾಗ ಉಂಡೋನೆ ಜಾಣ.

೬೬ ಹಾಡತ ಹಾಡತ ರಾಗ, ಉಗುಳತ ಉಗುಳತ ರೋಗ.

೬೭ ಮೂರ್ತಿ ಸಣ್ಣದು, ಕೀರ್ತಿ ದೊಡ್ಡದು.

೬೮ ಕ್ವಾಣನ ಮುಂದ ಕಿನ್ನರಿ ಬಾರಿಸಿದರಂತೆ.

೬೯ ಗಂಟಿದ್ದಾಗ ಊರೆಲ್ಲಾ ನೆಂಟರಂತೆ.

೭೦ ಕುಳಿತುಂಡರೆ ಕುಡಿಕಿ ಹೊನ್ನು ಸಾಲದು.

೭೧ ಗುಡ್ಡಕ್ಕೆ ಕಲ್ಲು ಹೊತ್ತಹಾಗೆ

೭೨ ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

೭೩ ಕೊಂಕಣ ಸುತ್ತಿ ಮೈಲಾರಕ್ಕೆ ಹೋದರಂತೆ.

೭೪ ಸಿದ್ದ ಕವಲೂರಿಗೆ ಹೋದಂತೆ.

೭೫ ಊರಿಗೆ ಬಂದಾಕಿ ನೀರಿಗೆ ಬರ್ತಾಳೆ.

೭೬ ರಾತ್ರೆಲ್ಲಾ ರಾಮಾಯಣ ಕೇಳಿ ಮುಂಜಾನೆ ಸೀತೆ ರಾಮಗೇನಾಗಬೇಕು ಎಂದರಂತೆ.

೭೭ ಸುಖದ ಗೂದಿಗೆ ಮುಳ್ಳು ಚುಚ್ಚಿ ಕೊಂಡಹಾಗೆ.

೭೮ ಕುಣಿಯಾಕೆ ಬರದಲೆ ನೆಲ ಸೊಟ್ಟ ಐತೆ ಅಂದರಂತೆ.

೭೯ ಆಂಗೈ ಹುಣ್ಣಿಗೆ ಕನ್ನಡಿ ಯಾಕೆ?

೮೦ ಆಚಾರವೇ ಸ್ವರ್ಗ, ಅನಾಚಾರವೇ ನರಕ.

೮೧ ಇಟ್ಟದ್ದು ಪರರಿಗೆ, ಬಚ್ಚಿಟ್ಟದ್ದು ಪರರಿಗೆ.

೮೨ ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಾಕ್ಕೆ ಹೋದ್ರಂತೆ.

೮೩ ನೆಗಡಿಯಂತ ಜಡ್ಡಿಲ್ಲ, ಬುಗುಡಿಯಂತ ವಸ್ತುವಿಲ್ಲ.

೮೪ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು.

೮೫ ಹೆಗ್ಗಣಕೆ ಹೆಗ್ಗಣಮರಿ ಮುದ್ದು.

೮೬ ನೆಲುವಿಗೆ ಹಾರದ ಬೆಕ್ಕು ಆಕಾಶಕ್ಕೆ ಹಾರತೈತಾ?

೮೭ ಬರಗಾಲದಾಗ ಅಧಿಕ ಮಾಸ ಬಂತಂತೆ.

೮೮ ಓದಿ ಓದಿ ಕೂಚುಭಟ್ಟ ಅದನಂತೆ.

೮೯ ಆನ್ಯಾಗಿ ಕಬ್ಬು ಮೇಯೋದಕ್ಕಿಂತ ಇರಿಬಿಯಾಗಿ ಸಕ್ರಿ ಮೇಯ್ಬೇಕು.

೯೦ ತೋಳ ಸಂಬಳಲಿಲ್ಲದಂತೆ ಕುರಿಕಾಯ್ತೀನಿ ಅಂತೈತೆ.

೯೧ ಆನಿ ಬೀದಿಗೆ ಬಂದರೆ ನಾಯಿ ಬೊಗಳಿದಂತೆ.

೯೨ ಬೊಗಳೋ ನಾಯಿ ಕಚ್ಚೋದಿಲ್ಲ, ಕಚ್ಚೋ ನಾಯಿ ಬೊಗಳೋದಿಲ್ಲ.

೯೩ ವಡಕ ಗಡಿಗಿ ಸದ್ದು ಭಾಳ.

೯೪ ತುಂಬಿದ ಕೊಡ ತುಳುಕೋದಿಲ್ಲ.

೯೫ ಸಾಬರ ಸಹವಾಸ ಮನಿಮಂದೆಲ್ಲ ಉಪವಾಸ.

೯೬ ದೇವರು ವರ ಕೊಟ್ರೂ ಪೂಜಾರಿ ವರ ಕೊಡಲಿಲ್ಲ.

೯೭ ಸಾವಿರ ಮಂದಿಗೆ ಸರದಾರ, ಮನಿ ಹೇಣ್ತಿಗೆ ಪಿಂಜಾರ.

೯೮ ಆರು ಹಡದಕಿ ಮುಂದ ಮೂರ ಹಡದಕಿ ಮುರಕ ಮಾಡತಿದ್ಲಂತೆ.

೭.೧.೪ ಒಗಟುಗಳು

ಒಗಟು ಎಂಬುದು ಜನಪದ ಸಾಹಿತ್ಯದಲ್ಲಿ ಒಂದು ಮುಖ್ಯವಾದ ಪ್ರಕಾರವಾಗಿದೆ. ಒಗಟು ಎಂದರೆ "ಒಬ್ಬರು ಮತ್ತೊಬ್ಬರಿಗೆ ಒಡ್ಡಿದ ಸವಾಲು ಎಂದರ್ಥ". ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ಮೂಲಕ ಚಮತ್ಕಾರವಾಗಿ ವರ್ಣಿಸಿ ಆ ಅವ್ಯಕ್ತ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು. ಇದರಲ್ಲಿ ಎರಡು ಸಾದೃಶ್ಯ ವಸ್ತುಗಳಿರಬೇಕು ಒಂದು ಉಪಮಾನ ಮತ್ತೊಂದು ಉಪಮೇಯ, ಇಲ್ಲಿ ಉಪಮಾನ ವಾಚ್ಯವಾಗಿರುತ್ತದೆ. ಉಪಮೇಯ ಅಸ್ಪಷ್ಟವಾಗಿ ರಹಸ್ಯವಾಗಿರುತ್ತದೆ. ಇದನ್ನು ಒಗಟು ಹೇಳುವವರು ಜಾಣ್ಮೆಯಿಂದ ಬಚ್ಚಿಟ್ಟಿರುತ್ತಾನೆ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆಮಾಡಬೇಕಾಗುತ್ತದೆ. ಇದು ಬುದ್ಧಿಶಕ್ತಿಯ ಪರೀಕ್ಷೆಗೊಂದು ಒಳ್ಳೆಯ ಓರೆಗಲ್ಲು.

ಗ್ರಾಮೀಣ ಜನಪದ ಜೀವನದಲ್ಲಿ ಒಗಟುಗಳು ಹಾಸುಹೊಕ್ಕಾಗಿವೆ. ಮಾನವನ ಇತಿಹಾಸದಷ್ಟೇ ಪ್ರಾಚೀನವಾದ ಇತಿಹಾಸ ಈ ಒಗಟಿಗಿದೆ. ಗ್ರಾಮೀಣ ಜನಪದರು ಪ್ರಕೃತಿಯಲ್ಲಿ ಸಿಗುವ ವಸ್ತುಗಳ

ಮೇಲೆ, ಜೀವನದ ಪ್ರಮುಖ ಘಟ್ಟಗಳ ಘಟನಾವಳಿಗಳ ಮೇಲೆ ಒಗಟುಗಳನ್ನು ರಚಿಸುವ ಕಲೆಯನ್ನು ಕರಗತಮಾಡಿಕೊಂಡಿದ್ದಾರೆ. ಮಾನವನು ಪ್ರಕೃತಿಯ ವಸ್ತುಗಳಲ್ಲಿ ಸಾದೃಶ್ಯಗಳನ್ನು ಗುರ್ತಿಸಿದ್ದೇ ಈ ಒಗಟುಗಳ ಹುಟ್ಟಿಗೆ ಕಾರಣವಾಗಿದೆ. ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ಸಾದೃಶ್ಯವನ್ನು, ಮನೋರಂಜನೆಗಾಗಿ ಹಾಸ್ಯಕ್ಕಾಗಿ ಬಳಸಿಕೊಂಡರು. ಅದರ ಫಲವಾಗಿ ಒಗಟುಗಳು ಹುಟ್ಟಿಕೊಂಡವು ಎಂಬುದು ಬಹುತೇಕ ಜಾನಪದ ವಿದ್ವಾಂಸರ ಅಭಿಪ್ರಾಯವಾಗಿದೆ. ಗ್ರಾಮೀಣ ಜನಪದರ ಲೋಕಾನುಭವ, ಕಲ್ಪನಾಶಕ್ತಿ ಸೂಕ್ಷ್ಮ ಸಂವೇದನೆ ಅವರ ಬುದ್ಧಿಶಕ್ತಿಯ ಫಲವನ್ನು ಒಗಟಿನಲ್ಲಿ ಕಾಣಬಹುದು.

ಹ್ಯಾರಡಾ ಜನಪದರಲ್ಲಿ ವಿಪುಲವಾದ ಒಗಟಿನ ಮೌಖಿಕ ಸಾಹಿತ್ಯವನ್ನು ಕಾಣಬಹುದು. ತಮ್ಮ ಕೆಲಸಗಳ ಮಧ್ಯದಲ್ಲಿ ಒಗಟುಗಳನ್ನು ಹೇಳುವುದರ ಮೂಲಕ ತಮ್ಮ ಆತ್ಮ ಸಂತೋಷದ ಜೊತೆಗೆ ಇತರರಿಗೂ ಮನೋರಂಜನೆಯನ್ನು ಒದಗಿಸುವುದು ಇಲ್ಲಿಯ ಜನಪದರ ಮುಖ್ಯ ಲಕ್ಷಣವಾಗಿದೆ. ಇಲ್ಲಿಯ ಜನಪದರು ತಮ್ಮ ಅನುಭವ, ಜೀವನದ ಪ್ರಮುಖ ಘಟನಾವಳಿಗಳನ್ನು ಅನುಸರಿಸಿ ಒಗಟುಗಳನ್ನು ರಚಿಸಿರುವುದನ್ನು ನಾವು ಕಾಣಬಹುದು. ಇಲ್ಲಿಯ ಜನಪದರ ಬುದ್ಧಿಶಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಇಂತಹ ಸಾವಿರಾರು ಒಗಟುಗಳು ಇಲ್ಲಿಯ ಜನಪದರಲ್ಲಿ ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಅವುಗಳು ಕೆಳಕಂಡಂತಿವೆ.

೦೧ ಗೂಡಿನಲ್ಲಿನ ಪಕ್ಷಿ ನಾಡೆಲ್ಲಾ ನೋಡುತ್ತಿದೆ – ಕಣ್ಣು

೦೨ ಕಾಸಿನ ಕುದುರೆಗೆ ಬಾಲದ ಲಗಾಮು – ಸೂಜಿದಾರ

೦೩ ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಾಗಿದೆ. ಮೆಳೆಯಿಲ್ಲ, ಬೆಳೆಯಿಲ್ಲ ಮೈ ಹಸುರಾಗಿದೆ–ಗಿಳಿ

೦೪ ಮನೆ, ಮನೆಗೆರಡು ಬಾಗಿಲು, ಬಾಗಿಲ ಮುಂದೆ ಮುಚ್ಚಿದರೆ ಹಾನಿ ಇದೇನು ? – ಮೂಗು, ಬಾಯಿ

೦೫ ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರೂ ಬಾಗಿಲಲ್ಲಿ. ಇದು ಏನು ? – ಮೊಟ್ಟೆ

೦೬ ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆಯುವುದು, ತನ್ನ ಮಕ್ಕಳ ಹಂಗಿಸಿ ಮಾತನಾಡುವುದು ಇದು ಏನು ? – ಕೋಳಿ

೦೭ ಇದ್ದಲು ನುಂಗುತ್ತ, ಗದ್ದಲ ಮಾಡುತ್ತಾ, ಉದ್ದಕ್ಕೂ ಓಡುತ್ತ ಮುಂದಕ್ಕೆ ಸಾಗುವ ನಾನ್ಯಾರು? – ರೈಲು

೦೮ ಊಟಕ್ಕೆ ಕುಳಿತವರು ಹನ್ನೆರಡು ಜನರು, ಬಡಿಸುವವರು ಇಬ್ಬರು, ಒಬ್ಬನು ಒಬ್ಬರಿಗೆ ಬಡಿಸುವಷ್ಟರಲ್ಲಿ ಇನ್ನೊಬ್ಬನು ಹನ್ನೆರಡು ಜನಕ್ಕೂ ಬಡಿಸುತ್ತಾನೆ – ಗಡಿಯಾರ

೦೯ ಹಸಿರು ಹಾವರಾಣಿ ತುಂಬಿದ ತತ್ರಾಣಿ, ಹೇಳದಿದ್ದರೆ ನಿಮ್ಮ ದೇವರಾಣಿ – ಕಲ್ಲಂಗಡಿ ಹಣ್ಣು

೧೦ ಮೊಟ್ಟೆ ಒಡೆಯೋ ಹಾಗಿಲ್ಲ, ಕೊಡ ಮುಳುಗಿಸೋ ಹಾಗಿಲ್ಲ, ಬರಿ ಕೊಡೆ ತಗೊಂಡು ಬರೋ ಹಾಗಿಲ್ಲ – ತೆಂಗು

೧೧ ಕಡಿದರೆ ಕಚ್ಚೋಕೆ ಆಗಲ್ಲ, ಹಿಡಿದ್ರೆ ಮುಟ್ಟೋಕೆ ಸಿಗೋದಿಲ್ಲ – ನೀರು

೧೨ ಒಂದು ರುಮಾಲು ನಮ್ಮಪ್ಪನೂ ಸುತ್ತಲಾರ – ದಾರಿ

೧೩ ಅಬ್ಬಬ್ಬ ಹಬ್ಬ ಬಂತು, ಸಿಹಿ–ಕಹಿ ಎರಡೂ ತಂತು – ಯುಗಾದಿ

೧೪ ಹುಟ್ಟುತ್ತಲೇ ಹುಡುಗ ತಲೆಯಲ್ಲಿ ಟೋಪಿ ಹಾಕಿರುತ್ತೆ – ಬದನೆಕಾಯಿ

೧೫ ಸಾಗರ ಪುತ್ರ, ಸಾರಿನ ಮಿತ್ರ – ಉಪ್ಪು

೧೬ ಸಾವಿರಾರು ಹಕ್ಕಿಗಳು, ಒಂದೇ ಬಾರಿಗೆ ನೀರಿಗಿಳಿಯುತ್ತವೆ – ಅಕ್ಕಿ

೧೭ ಗುಡುಗು, ಗುಡುಗಿದರೆ ಸಾವಿರ ಕಣ್ಣುಗಳು ಅರಳುವವು – ನವಿಲು

೧೮ ಕಣ್ಣಿಲ್ಲ, ಕಾಲಿಲ್ಲ, ಆದರೂ ಚಲಿಸುತ್ತಿದೆ. ಯಾವುದು? ಎಲ್ಲಿದೆ? ಬಲ್ಲಿದನ ಹೇಳಿರಲ್ಲ– ನದಿ

೧೯ ಹಲ್ಲಿಲ್ಲದ ಹಕ್ಕಿಗೆ ಗೂಡು ತುಂಬ ಮರಿಗಳು – ಕೋಳಿ

೨೦ ಮೋಟು ಗೋಡೆ ಮೇಲೆ, ದೀಪ ಉರೀತಿದೆ – ಮೂಗುಬೊಟ್ಟು

೨೧ ಹೊಂಚು ಹಾಕಿದ ದೆವ್ವ, ಬೇಡ ಬೇಡ ಎಂದರೂ ಜೊತೆಯೇ ಬರುತ್ತೆ – ನೆರಳು

೨೨ ಮರನು ಮರನೇರಿ ಮತ್ತೆ ಮರನೇರಿ ಬಸವನಾ ಕತ್ತೇರಿ ತಿರುಗುತ್ತಿದೆ – ಗಾಣ

೨೩ ಹೊಕ್ಕಿದ್ದು ಒಂದಾಗಿ ಹೊರಟಿದ್ದು ಅದು ನೂರಾಗಿ – ಶ್ಯಾವಿಗೆ

೨೪ ಮಣ್ಣು ಆಗಿದೆ, ಕಲ್ಲು ಸಿಕ್ಕಿತು, ಕಲ್ಲು ಆಗಿದೆ ಬೆಳ್ಳಿಸಿಕ್ಕಿತು, ಬೆಳ್ಳಿ ಒಡೆದ ನೀರು ಸಿಕ್ಕಿತು – ತೆಂಗಿನಕಾಯಿ

೨೫ ಕತ್ತಲೆ ಮನೆಯಲ್ಲಿ ಕಾಳವ್ವ ಕುಂತವ್ಳೆ, ಕುಯ್ಯೋ ಮರ್ರೋ ಅಂತವಳೇ – ತಂಬೂರಿ

೨೬ ಹಾರಿದರೆ ಹನುಮಂತ, ಕೂತರೆ ಮುನಿ, ಕೂಗಿದರೆ ಕಾಡಿನ ಒಡೆಯ – ಕಪ್ಪೆ

೨೭ ಕೈಲಿದ್ದಾಗ ಗುಡಿಸಾಡುತ್ತೇನೆ, ಕೈ ಬಿಟ್ಟಾಗ ಗೊರಕೆ ಹೊಡೆಯುತ್ತೇನೆ – ಕಸಪೊರಕೆ

೨೮ ಗಿಡ ಕೊಡಲಾರದು, ಮರ ಬೆಳೆಸಲಾರದು, ಅದಿಲ್ಲದೆ ಊಟ ಸೇರಲಾರದು – ಉಪ್ಪು

೨೯ ಒಬ್ಬನನ್ನು ಹಿಡಿದರೆ ಎಲ್ಲಾರ ಮರ್ಜಿಯು ಗೊತ್ತಾಗುತ್ತದೆ – ಅನ್ನದ ಅಗುಳು

೩೦ ಮೇಲೆ ನೋಡಿದರೆ ನಾನಾ ಬಣ್ಣ, ಉಜ್ಜಿದರೆ ಒಂದೇ ಬಣ್ಣ – ಸಾಬೂನು

೩೧ ಒಂದು ಕೊಂಬಿನ ಗೂಳಿ, ಅದರ ತಲೆಯಲೆಲ್ಲಾ ಮುಳ್ಳು – ಬದನೆಕಾಯಿ

೩೨ ಕೊಳದ ಒಳಗೆ ಒಂದು ಮರ ಹುಟ್ಟಿ ಬೇರು ಇಲ್ಲ, ನೀರು ಇಲ್ಲ – ಎಣ್ಣೆ ದೀಪ

೩೩ ಬಡಬಡ ಬಂದ, ಅಂಗಿ ಕಳಚಿದ ಬಾವಿಯೊಳಗೆ ಬಿದ್ದ – ಬಾಳೆಹಣ್ಣು

೩೪ ನೋಡಿದರೆ ನೋಟಗಳು, ನಕ್ಕರೆ ನಗುವಳೂ, ಒಡೆದರೆ ತುಂಡುಗಳು – ಕನ್ನಡಿ

೩೫ ಕಲ್ಲು ಕೋಳಿ ಕೂಗುತ್ತದೆ, ಮುಲ್ಲ ಚೂರಿ ಹಾಕುತ್ತಾನೆ – ಗಿರಣಿ

೩೬ ತಕ್ಕಡೀಲಿ ಇಟ್ಟು ಮಾರೋ ಹಾಗಿಲ್ಲ, ಅದಿಲ್ಲದೆ ಹಬ್ಬ ಆಗೋ ಹಾಗಿಲ್ಲ – ಸಗಣಿ

೩೭ ಚರಚರ ಕೊಯ್ತದೆ ಕತ್ತಿ ಅಲ್ಲ, ಮಿಣಿ ಮಿಣಿ ಮಿಂಚುತ್ತದೆ. ಮಿಂಚಲ್ಲ, ಪೆಟ್ಟಿಗೆಗೆ ತುಂಬ್ತದೆ ದಾಗಿನ ಅಲ್ಲ – ಗರಗಸ

೩೮ ಕುದುರೆ ಮೇಲೆ ಒಬ್ಬ ಬರುತ್ತಾನೆ, ಒಬ್ಬ ಇಳಿಯುತ್ತಾನೆ – ರೊಟ್ಟಿ, ದೋಸೆ

೩೯ ಕುತ್ತಿಗೆ ಇದೆ ತಲೆ ಇಲ್ಲ, ತೋಳಿದೆ ಬೆರಳಿಲ್ಲ, ದಡಾ ಇದೆ, ಕಾಲಿಲ್ಲ, ನಾನ್ಯಾರು – ಅಂಗಿ

೪೦ ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ – ಮಲ್ಲಿಗೆ

೪೧ ಅಂಗೈ ಅಗಲದ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ – ಆಕಾಶ, ನಕ್ಷತ್ರ

೪೨ ಸುಟ್ಟ ಹೆಣ ಮತ್ತೆ ಸುಡ್ತಾರೆ – ಇದ್ದಿಲು

೪೩ ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ – ಹಲಸಿನ ಹಣ್ಣು ಬೀಜ

೪೪ ಅಂಗೈ ಕೊಟ್ಟರೆ ಮುಂಗೈನೂ ನುಂಗುತ್ತದೆ – ಬಳೆ

೪೫ ಒಂದು ಹಪ್ಪಳ ಊರಿಗೆಲ್ಲ ಊಟ – ಚಂದ್ರ

೪೬ ಆಕಾಶದಲ್ಲಿ ಕೊಡಲಿಗಳು ತೇಲಾಡುತ್ತವೆ – ಹುಣಸೆ ಹಣ್ಣು

೪೭ ನೀಲಿ ಕೆರೆಯಲಿ ಬಿಳಿ ಮೀನು – ನಕ್ಷತ್ರ

೪೮ ಬೆಳ್ಳಿ ಸಮುದ್ರದಲ್ಲಿ ಕಪ್ಪು ಸೂರ್ಯ – ಕಣ್ಣು

೪೯ ಅಕ್ಕನ ಮೇಲೆ ಛತ್ರಿ – ರೆಪ್ಪೆ

೫೦ ತಮ್ಮಂಗೆ ಮೂರು ಕಣ್ಣು, ಅಮ್ಮಂಗೆ ಒಂದೇ ಕಣ್ಣು – ತೆಂಗಿನಕಾಯಿ

ಹೀಗೆ ಹ್ಯಾರಡಾದ ಗ್ರಾಮೀಣ ಜನಪದರು ಪ್ರತಿಯೊಂದು ವಸ್ತುಗಳ ಮೇಲೆ ಒಗಟನ್ನು ರಚಿಸುವ ಶಕ್ತಿಯನ್ನು ಹೊಂದಿದ್ದಾರೆ. ಇದು ಇವರ ಕಲ್ಪನಾ ಶಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಹೆಚ್ಚಾಗಿ ಗ್ರಾಮದ ಸ್ತ್ರೀ ಜನಪದರು ಒಗಟುಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರು.

೭.೨ ಶಿಷ್ಟ ಸಾಹಿತ್ಯ

ಶಿಷ್ಟ ಸಾಹಿತ್ಯದ ಬೇರು ಜನಪದ ಸಾಹಿತ್ಯ ಎಂಬುದು ವೇದವಾಕ್ಯ "ಜನವಾಣಿ ಬೇರು, ಕವಿ ವಾಣಿ ಮರ" ಎಂಬುದು ಅತ್ಯಂತ ಸ್ತುತ್ಯಾರ್ಹವಾಗಿದೆ. ಹ್ಯಾರಡಾ ಗ್ರಾಮದಲ್ಲಿ ಜನಪದ ಮೌಖಿಕ ಸಾಹಿತ್ಯದಂತೆಯೇ, ಶಿಷ್ಟ ಸಾಹಿತ್ಯವು ಅತ್ಯಂತ ವಿಪುಲವಾಗಿ ಬೆಳೆದು ಬಂದಿದೆ. ಗ್ರಾಮವು ಹೆಚ್ಚು ಜನ ಅಕ್ಷರಸ್ಥರನ್ನು ಹೊಂದಿರುವುದರಿಂದ ಶಿಷ್ಟ ಸಾಹಿತ್ಯವು ಬೆಳೆದು ಬಂದಿದೆ. ಇತ್ತೀಚಿನ ಯುವ ಪೀಳಿಗೆಯು ಕಥೆ, ನಾಟಕ, ಕವನ, ಸಂಪಾದಿತ ಕೃತಿಗಳನ್ನು ಹೆಚ್ಚು ಹೆಚ್ಚು ಬರೆಯುತ್ತಿದ್ದಾರೆ. ಗ್ರಾಮದಲ್ಲಿ ಮೊಟ್ಟ ಮೊದಲು ಶಿಷ್ಟ ಸಾಹಿತ್ಯದ ಪ್ರಕಾರವನ್ನು ಪ್ರಚುರ ಪಡಿಸಿದವರು ಹಂಪಿ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು. ಗ್ರಾಮದ ಗ್ರಾಮದೇವತೆಯಾದ ಮಲಿಯಮ್ಮ ನಿನ್ನಾಲ್ಕುದೋ... ಉದೋ... ಎಂಬ ಕೃತಿಯು ಗ್ರಾಮದ ಮೊದಲ ಶಿಷ್ಟ ಸಾಹಿತ್ಯದ ಕೃತಿಯಾಗಿದೆ. ತದ ನಂತರದಲ್ಲಿ ಇವರ ಹಲವಾರು ಕೃತಿಗಳು

ಪ್ರಕಟಗೊಂಡು ಶಿಷ್ಟ ಸಾಹಿತ್ಯವನ್ನು ಪ್ರಚುರ ಪಡಿಸಿದರು. ನಂತರದಲ್ಲಿ ಗ್ರಾಮದ ಯುವ ಪೀಳಿಯು ಕವನ, ಕಥೆಗಳನ್ನು ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡರು. ನಾಗಭೂಷಣ ಜಿ.ಹೆಚ್.ಎಂ. ಆನಂದ ಬಾರ್ಕಿ, ಮಂಜುನಾಥ ನಾಯ್ಕರ, ಶಾಂತರಾಜ ಜೈನ್, ಪಿಂಜಾರ ಚಮನ್ ಸಾಹೇಬ್, ಯಲ್ಲಪ್ಪ ಸಣ್ಣೀಲಪ್ಪನರ ಇನ್ನೂ ಮುಂತಾದ ಯುವ ಕವಿಗಳು ಗ್ರಾಮದಲ್ಲಿ ಶಿಷ್ಟ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಶ್ರಮಿಸುತ್ತಿದ್ದಾರೆ.

ಹಲವಾರು ಕವನ ಸಂಕಲನಗಳು, ಹಾಡುಗಳು, ಲೇಖನಗಳು, ನಾಟಕ ಇತ್ಯಾದಿ ಶಿಷ್ಟ ಸಾಹಿತ್ಯದ ಪ್ರಕಾರಗಳು ಇತ್ತೀಚಿಗೆ ಗ್ರಾಮದಲ್ಲಿ ಹುಟ್ಟತೊಡಗಿವೆ. ಹೀಗೆ ಕನ್ನಡ ಸಾಹಿತ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸುವಲ್ಲಿ ಶ್ರಮಿಸುತ್ತಿದ್ದಾರೆ.

ಅಧ್ಯಾಯ-೮

ಹ್ಯಾರಡ ಗ್ರಾಮದ ಸಮಕಾಲೀನ ಸ್ಥಿತ್ಯಂತರಗಳು

ಬದಲಾವಣೆ ಎಂಬುದು ಪ್ರಕೃತಿಯ ನಿಯಮ. ಈ ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುಗಳು ಗತಿಶೀಲತೆಯನ್ನು ಹೊಂದುತ್ತವೆ. ಮಾನವನ ಇತಿಹಾಸದುದ್ದಕ್ಕೂ ಗತಿಶೀಲತೆಯನ್ನು ಕಂಡುಕೊಂಡು ಹಲವಾರು ಬದಲಾವಣೆಗಳನ್ನು ಇತಿಹಾಸದಿಂದ ನಾವುಗಳು ತಿಳಯಬಹುದಾಗಿದೆ. ಮಾನವನ ಪ್ರತಿಯೊಂದು ಹೆಜ್ಜೆಗಳಲ್ಲಿಯೂ ಬದಲಾವಣೆಗಳನ್ನು ಕಾಣಬಹುದಾಗಿದೆ. ಆತನ ಜೀವನ ಶೈಲಿ, ಆಚಾರ-ವಿಚಾರ, ಸಂಪ್ರದಾಯ, ಆಚರಣೆ, ಅಲೋಚನೆಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣಬಹುದಾಗಿದೆ. ನಿರ್ಧಿಷ್ಟ ಪ್ರದೇಶದಲ್ಲಿ ವಾಸಿಸುವ ಒಂದು ಸಮುದಾಯವು ಹಲವಾರು ಪ್ರಭಾವಕ್ಕೆ ಒಳಪಟ್ಟು ಹಲವಾರು ಪಲ್ಲಟಗಳನ್ನು ಕಾಣಬಹುದಾಗಿದೆ. ಜನಸಂಖ್ಯೆ ಹೆಚ್ಚಿದಂತೆಲ್ಲಾ, ಅವಶ್ಯಕತೆಗಳು ಹೆಚ್ಚಿದಂತೆಲ್ಲಾ ಹಲವಾರು ಸ್ಥಿಂತ್ಯಂತರಗಳನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದಲ್ಲಿಯೂ ಕೂಡ ಹಲವಾರು ಕ್ಷೇತ್ರಗಳಲ್ಲಿ ಬದಲಾವಣೆಗಳ ಪರ್ವವನ್ನು ನಾವುಗಳು ಕಾಣಬಹುದಾಗಿದೆ. ತನ್ನ ಆಚರಣಾ ಲೋಕದಲ್ಲಿ, ಉಡುಗೆ-ತೊಡುಗೆಯಲ್ಲಿ, ಸಂಸ್ಕೃತಿಯಲ್ಲಿ, ಸಂಪ್ರದಾಯಗಳಲ್ಲಿ, ಆಚರಣೆಗಳಲ್ಲಿ ಹೀಗೆ ಹಲವಾರು ಪ್ರಮುಖ ಘಟ್ಟದಲ್ಲಿ ಬದಲಾವಣೆಗಳನ್ನು ಕಾಣಬಹುದಾಗಿದೆ.

ಹಿಂದೆ ಗ್ರಾಮದಲ್ಲಿ ಸಾಂಪ್ರದಾಯಿಕ ವ್ಯವಸಾಯವನ್ನು ಮಾಡುತ್ತಿದ್ದರು. ಆದರೆ ಇಂದಿನ ಆಧುನಿಕ ಪ್ರಪಂಚದಲ್ಲಿ ಯಂತ್ರೋಪಕರಣಗಳನ್ನು ಅತೀ ಹೆಚ್ಚು ಬಳಸಲಾಗುತ್ತದೆ. ಸಾಂಪ್ರದಾಯಿಕ ಕೃಷಿಯಲ್ಲಿ ಕೇವಲ ಸಾವಯವ ಗೊಬ್ಬರಗಳನ್ನು ಬಳಸುತ್ತಿದ್ದರು, ಕಾಲ ಬದಲಾದಂತೆಲ್ಲಾ ಇಂದು ರಾಸಾಯನಿಕ ಗೊಬ್ಬರಗಳನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ. ಸಾಂಪ್ರದಾಯಿಕ ಕೃಷಿಯಲ್ಲಿ ಮಳೆಯಾಶ್ರಿತ ವ್ಯವಸಾಯವನ್ನು ಮಾಡುತ್ತಿದ್ದರು. ಆದರೆ ಇಂದು ಅಂತರ್ಜಲವನ್ನು ಬಳಸಿಕೊಂಡು ವ್ಯವಸಾಯವನ್ನು ಮಾಡುವ ಪದ್ಧತಿಯನ್ನು ಕಾಣಬಹುದಾಗಿದೆ. ಕೃಷಿಯಲ್ಲಿ ಹೆಚ್ಚು ಹೆಚ್ಚು ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದಂತೆಯೇ ವಾಣಿಜ್ಯ ಬೆಳೆಗಳನ್ನು ಬೆಳೆದು ಕೃಷಿಯ ವರಮಾನವನ್ನು ಹೆಚ್ಚಿಸಿಕೊಂಡಿದ್ದಾರೆ.

ಇನ್ನು ಆಚರಣೆ, ಸಂಪ್ರದಾಯಗಳು ಅಮೂಲಾಗ್ರವಾದ ಬದಲಾವಣೆಯನ್ನು ಕಂಡುಕೊಂಡಿದೆ. ಗ್ರಾಮದ ಪ್ರತಿಯೊಂದು ಆಚರಣೆಗಳು, ಸಂಪ್ರದಾಯಗಳು ಜಾತ್ಯಾತೀತವಾಗಿದ್ದವು. ಆದರೆ ಇಂದು ಒಂದೊಂದು ಸಮುದಾಯದವರು ತಮ್ಮದೇ ಆದ ಪ್ರತ್ಯೇಕ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡಿದ್ದಾರೆ. ಉಡುಗೆ-ತೊಡುಗೆಯಲ್ಲಿ ಅಮೂಲಾಗ್ರವಾದ ಬದಲಾವಣೆಗಳನ್ನು ಕಾಣಬಹುದಾಗಿದೆ. ಹಿಂದೆ ಗ್ರಾಮದಲ್ಲಿ ಕಚ್ಚೆಪಂಚೆ ಮೂರುಗುಂಡಿನ ದೊಡ್ಡ ಅಂಗಿಗಳು ಸರ್ವೇಸಾಮಾನ್ಯವಾಗಿದ್ದವು. ಆದರೆ ಇಂದು ಇವು ಕಣ್ಮರೆಯಾಗಿ ಆಧುನಿಕ ಶೈಲಿಯ ಉಡುಗೆ-ತೊಡುಗೆಯನ್ನು ಧರಿಸುವುದನ್ನು ಕಾಣಬಹುದಾಗಿದೆ.

ಆಹಾರ ಪದ್ಧತಿಯಲ್ಲಿ ಹೆಚ್ಚು ಬದಲಾವಣೆಯನ್ನು ಕಾಣಬಹುದಾಗಿದೆ. ಹಿಂದೆ ಗ್ರಾಮದಲ್ಲಿ ಬಹುತೇಕವಾಗಿ ಮನೆಯಲ್ಲಿಯೇ ತಯಾರಿಸಿದ ಆಹಾರವನ್ನು ಸೇವಿಸುತ್ತಿದ್ದರು. ಆದರೆ ಇಂದು ಅಂಗಡಿ, ಹೋಟೆಲ್‌ಗಳ ಆಹಾರವನ್ನು ಹೆಚ್ಚು ಇಷ್ಟಪಡುತ್ತಾರೆ. ಗ್ರಾಮವು ೧೯೨೦ ರ ದಶಕದಲ್ಲಿ ಹೆಚ್ಚು ಅನಕ್ಷರಸ್ಥರಿಂದ ಕೂಡಿತ್ತು. ಆದರೆ ೧೯೫೦ ರ ದಶಕದಲ್ಲಿ ಗ್ರಾಮವು ಹೆಚ್ಚು ಹೆಚ್ಚು ಅಕ್ಷರ ಜ್ಞಾನವನ್ನು ಪಡೆಯತೊಡಗಿತು. ಹಿಂದಿನ ದಿನಮಾನಗಳಲ್ಲಿ ರಾಜಕೀಯ ಕೇವಲ ಮೇಲ್ವರ್ಗದವರ ಹಿಡಿತದಲ್ಲಿತ್ತು. ಆದರೆ ಇಂದು ಗ್ರಾಮದ ಕಟ್ಟಕಡೆಯ ವ್ಯಕ್ತಿಯೂ ಕೂಡ ಸಕ್ರಿಯ ರಾಜಕಾರಣದಲ್ಲಿರುವುದನ್ನು ಕಾಣಬಹುದಾಗಿದೆ. ವ್ಯಾಪಾರ ವ್ಯವಹಾರಗಳಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣಬಹುದಾಗಿದೆ. ಮೊದಲು ಹಾಗೆ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಸಂಬಂಧಗಳು ಗಟ್ಟಿಯಾಗಿದ್ದವು. ಆದರೆ ಇಂದು ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಅಪನಂಬುಗೆ, ಮೋಸ, ಸ್ವಾರ್ಥ ಭಾವನೆಗಳು ರಾರಾಜಿಸುತ್ತಿವೆ. ಗ್ರಾಮದ ಪ್ರತಿಯೊಂದು ಸಮುದಾಯದವರು ಅಣ್ಣ, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಳಿಯ ಎಂಬ ಸಂಬೋಧನೆಯಿಂದ ಅನ್ಯೋನ್ಯವಾದ ಜೀವನವನ್ನು ನಡೆಸುತ್ತಿದ್ದರು. ಆದರೆ ಇಂದು ಇಂತಹ ಯಾವ ಮಾನವೀಯ ಮೌಲ್ಯಗಳು ಸಿಗುವುದಿಲ್ಲ.

ಇನ್ನು ಗ್ರಾಮದ ಭೌತಿಕ ಸ್ಥಿತಿಗತಿಗಳಲ್ಲಿ ಬಹಳಷ್ಟು ಬದಲಾವಣೆಯನ್ನು ಕಾಣಬಹುದಾಗಿದೆ. ಜನಸಂಖ್ಯೆಯು ಹೆಚ್ಚಿದಂತೆಲ್ಲಾ ಗ್ರಾಮದ ಹರವು ಚಾಚಿಕೊಂಡಿದೆ. ಆಧುನಿಕತೆಯ ಲಯವನ್ನು ಕಂಡುಕೊಳ್ಳುತ್ತಿದೆ. ಹೆಚ್ಚು ಕಡಿಮೆ ನಗರೀಕರಣ ವ್ಯವಸ್ಥೆಯ ಹೊಸ್ತಿಲಿಗೆ ಬಂದು ತಲುಪಿದೆ.

೮.೧ ಭೌತಿಕ ಸ್ಥಿತ್ಯಂತರ

ಗ್ರಾಮಗಳು ಪ್ರತಿಯೊಂದು ಹಂತಗಳಲ್ಲಿಯೂ ಭೌತಿಕ ಬದಲಾವಣೆಯ ಸ್ವರೂಪವನ್ನು ಕಂಡುಕೊಳ್ಳುತ್ತವೆ. ಹ್ಯಾರಡಾ ಗ್ರಾಮವು ಮೊದಲ ಕೋಟೆಯ ಭಾಗ ಮಾತ್ರ ಊರಾಗಿತ್ತು. ಆದರೆ ಇಂದು ಈ ಕೋಟೆಯು ಗ್ರಾಮದ ಕೇಂದ್ರ ಸ್ಥಾನವಾಗಿದೆ. ಮೊದಲಿನಿಂದಲೂ ಹ್ಯಾರಡಾ ಗ್ರಾಮವು ಸುತ್ತಲೂ ಅರಣ್ಯ ಪ್ರದೇಶದಿಂದ ಕೂಡಿರುತ್ತಿತ್ತು. ಜನಸಂಖ್ಯೆ ಹೆಚ್ಚಿದಂತೆಲ್ಲಾ ಸಾಗುವಳಿ ಮಾಡಿ ವಸತಿಯೋಗ್ಯ ಪ್ರದೇಶಗಳನ್ನಾಗಿ ಮಾಡಿಕೊಳ್ಳಲಾಗಿದೆ. ಹ್ಯಾರಡಾ ಗ್ರಾಮವು ಮೊದಲಿನಿಂದಲೂ

ಕಬ್ಬಿಣದ ವ್ಯಾಪಾರಕ್ಕೆ ಹೆಸರುವಾಸಿ. ಗ್ರಾಮದ ಗುಡ್ಡಗಳಲ್ಲಿ ಸಿಗುವ ಕಚ್ಚಾ ವಸ್ತುಗಳನ್ನು ತಂದು ಅದಕ್ಕೆ ಅತೀ ಹೆಚ್ಚು ಶಾಖವನ್ನು ಒದಗಿಸಿ ದ್ರವರೂಪದ ಕಬ್ಬಿಣವನ್ನು ತೆಗೆದು ಅದನ್ನು ಉಂಡೆಯಾಕಾರವಾಗಿ ಮಾಡಿ ವ್ಯಾಪಾರ ಮಾಡುವ ಒಂದು ದೊಡ್ಡ ಪರಂಪರೆ ಹ್ಯಾರಡಾ ಗ್ರಾಮಕ್ಕಿದೆ. ಕ್ಷೇತ್ರ ಕಾರ್ಯಕ್ಕೆ ತೆರಳಿದಾಗ ಅಲ್ಲಿರುವ ಜನಪದರು ಹೇಳುವ ಪ್ರಕಾರ ಹಿಂದಿನ ಕಾಲದಲ್ಲಿ ಸುಮಾರು ೨೦ ರಿಂದ ೨೫ ಕುಲುಮೆಗಳು ಇದ್ದವು ಎಂದು ಹೇಳುವುದುಂಟು. ಇದಕ್ಕೆ ಕುರುಹು ಎಂಬಂತೆ ಗ್ರಾಮದ ಹೊರವಲಯದಲ್ಲಿ ಕಬ್ಬಿಣವನ್ನು ತೆಗೆದು ನಿರಪಯುಕ್ತ ಮಣ್ಣಿನ ದೊಡ್ಡ ಗುಡ್ಡವೇ ಇದೆ. ಇದನ್ನು ಈಗಲೂ ಕುಲುಮೆಯ ಪೆಂಟೆ ಎಂದು ಹೇಳುವರು. ಆದರೆ ಇಂದು ಇದು ಕಣ್ಮರೆಯಾಗಿ ಮನೆಗಳು ನಿರ್ಮಾಣವಾಗಿ ಭೌತಿಕ ಬದಲಾವಣೆಯನ್ನು ಕಾಣಬಹುದಾಗಿದೆ.

ಹಿಂದಿನ ದಿನಮಾನಗಳಲ್ಲಿ ಗ್ರಾಮದ ಬಹುತೇಕ ಮನೆಗಳು ಮೇಲುಮುದ್ದೆ ಹಾಗೂ ಪಟ್ಟಿ ಜಂತಿಯಿಂದ ಕೂಡಿದ ಮಣ್ಣಿನ ಮನೆಗಳನ್ನು ಕಾಣಬಹುದಾಗಿತ್ತು. ಆದರೆ ಇಂದು ಎಲ್ಲವೂ ಕಣ್ಮರೆಯಾಗಿ ಆರ್.ಸಿ.ಸಿ. ಮನೆಗಳನ್ನು ಕಾಣಬಹುದಾಗಿದೆ. ಗ್ರಾಮದ ಒಳಗಡೆ ಎಲ್ಲಾ ರಸ್ತೆಗಳು ಕಚ್ಚಾ ರಸ್ತೆಗಳಿದ್ದವು. ಆದರೆ ಇಂದು ಗ್ರಾಮವು ಆಧುನಿಕತೆಗೆ ತೆರೆದುಕೊಳ್ಳುತ್ತಿದಂತೆಯೇ ಸಿ.ಸಿ. ರಸ್ತೆಗಳನ್ನು ಕಾಣಬಹುದಾಗಿದೆ. ಗ್ರಾಮದ ಹೊರವಲಯದಲ್ಲಿ ಪ್ರತಿಯೊಂದು ಹೊಲ-ಗದ್ದೆಗಳನ್ನು ಸಂಧಿಸುವ ಮಾರ್ಗಗಳು ಕಾಲು ದಾರಿಗಳಾಗಿದ್ದವು. ಆದರೆ ಇಂದು ರಸ್ತೆಗಳಾಗಿ ಮಾರ್ಪಟ್ಟು ವಿಶಾಲವಾಗಿವೆ. ಬೇರೆ ಊರುಗಳಿಗೆ ಹೋಗುವ ಮಾರ್ಗಗಳು ಕಚ್ಚಾ ಮಾರ್ಗಗಳಾಗಿದ್ದವು. ಇಂದು ಈ ರಸ್ತೆಗಳು ಡಾಂಬರೀಕರಣವನ್ನು ಕಂಡಿವೆ. ಗ್ರಾಮದ ಪ್ರತಿಯೊಂದು ಕಿರು ದಾರಿಗಳು ಕಲ್ಲಿನ ಪರಿಸಿಯನ್ನು ಹೊಂದಿದ್ದವು. ಈಗ ಸಿ.ಸಿ. ರಸ್ತೆಗಳನ್ನು ಹೊಂದಿವೆ.

೮.೨ ಸಾಮಾಜಿಕ ಸ್ಥಿತ್ಯಂತರ

ಕರ್ನಾಟಕದ ಪ್ರತಿಯೊಂದು ಹಳ್ಳಿಗಳನ್ನು ನಾವು ಅಧ್ಯಯನಕ್ಕೆ ಒಳಪಡಿಸಿದಾಗ ವರ್ಣ ವ್ಯವಸ್ಥೆ ಎಂಬುದು ಬಹಳಷ್ಟು ಆಚರಣೆಯಲ್ಲಿರುವುದನ್ನು ಕಾಣಬಹುದಾಗಿದೆ. ಹ್ಯಾರಡಾ ಗ್ರಾಮದ ಮೂಲ ನಿವಾಸಿಗಳು ಅತ್ಯಂತ ಕೆಳವರ್ಗದವರು ಎಂದು ದಾಖಲೆಗಳು ಹೇಳುತ್ತಿವೆ. ಆದರೆ ಗ್ರಾಮದಲ್ಲಿ ಮೇಲ್ವರ್ಗದವರ ದಬ್ಬಾಳಿಕೆ ಹೆಚ್ಚಾಗಿತ್ತು. ಮೇಲ್ವರ್ಗದವರ ಹಿಡಿತದಲ್ಲಿ ಕೆಳವರ್ಗದವರು ಜೀತದಾಳುಗಳಾಗಿ ದುಡಿಯಬೇಕಾಗಿತ್ತು. ಕೆಳವರ್ಗದವರಲ್ಲಿ ಅಕ್ಷರ ಜ್ಞಾನ ಇರಲಿಲ್ಲ. ಕೇವಲ ಊಟಕ್ಕಾಗಿ ದುಡಿಯುವ ಪದ್ಧತಿ ರೂಢಿಯಲ್ಲಿತ್ತು. ಗ್ರಾಮದಲ್ಲಿ ೧೯೬೪ ರಲ್ಲಿ ಶಾಲೆಯು ಪ್ರಾರಂಭವಾಗಿ, ಜನರಲ್ಲಿ ಮೊದಲು ಅಕ್ಷರ ಜ್ಞಾನದ ಬೀಜಾಂಕುರವಾಯಿತು. ಇದರಿಂದ ಎಚ್ಚೆತ್ತ ಜನರು ತಮ್ಮ ಹಕ್ಕು-ಭಾದ್ಯತೆಗಳನ್ನು ಪಡೆಯಲು ಹಲವಾರು ಸಂಘರ್ಷಗಳನ್ನು ಮಾಡಿದರು. ಕ್ರಿ.ಶ. ೧೯೫೦ರ ದಶಕದಲ್ಲಿ ಗ್ರಾಮದ ಬಹುತೇಕ ಜನರು ಅಕ್ಷರಸ್ಥರಾದರು.

ಗ್ರಾಮದಲ್ಲಿರುವ ತಲೆತಲಾಂತರದಿಂದ ಬಂದ ಕಸುಬುಗಳಾದ ಕಮ್ಮಾರಿಕೆ, ಬಡಗಿತನ, ನೇಕಾರಿಕೆ ಮುಂತಾದವುಗಳು ಆಧುನಿಕ ಸ್ಪರ್ಶವನ್ನು ಕಂಡುಕೊಳ್ಳುತ್ತಿವೆ. ಈ ಕ್ಷೇತ್ರಗಳಲ್ಲಿ ಇಂದು ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ಪ್ಲೇನಿಂಗ್ ಮಿಷನ್, ಪಾಲಿಶ್ ಮಿಷನ್ ಮುಂತಾದ ಆಧುನಿಕ ಉಪಕರಣಗಳನ್ನು ಬಳಸುವ ಪದ್ಧತಿ ರೂಢಿಯಲ್ಲಿದೆ. ಮೊದಲಿನಿಂದಲೂ ಕಂಬಳಿಯನ್ನು ನೇಯುವ ಮಗ್ಗಗಳು ಇದ್ದವು. ಆದರೆ ಇಂದು ಇವುಗಳು ಬಹುತೇಕ ಕಣ್ಮರೆಯಾಗಿವೆ. ಚರ್ಮದ ಚಪ್ಪಲಿಯನ್ನು ತಯಾರಿಸುವ ಚಮ್ಮಾರಿಕೆ ಗ್ರಾಮದಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿತ್ತು. ಆದರೆ ಇಂದು ಚಮ್ಮಾರಿಕೆಯ ಕೆಲಸ ಇಲ್ಲದಾಗಿದೆ. ಆಧುನಿಕ ಭರಾಟೆಯಲ್ಲಿ ಇಂದು ಕುಲ ಕಸುಬುಗಳು ದಿಕ್ಕು ತೋಚದಂತಾಗಿ ಪರ್ಯಾಯವಾಗಿ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ.

ಆಹಾರ ಪದ್ಧತಿಯಲ್ಲಿಯೂ ಅಮೂಲಾಗ್ರವಾದ ಬದಲಾವಣೆಯನ್ನು ಕಾಣಬಹುದಾಗಿದೆ. ಆಹಾರ ಬೆಳೆಗಳು ಕಣ್ಮರೆಯಾಗಿ ವಾಣಿಜ್ಯ ಬೆಳೆಗಳು ಇಂದು ಹೆಚ್ಚು ಪ್ರಚಲಿತದಲ್ಲಿವೆ. ಗ್ರಾಮದಲ್ಲಿ ಮೊದಲು ಅತೀ ಹೆಚ್ಚು ಜೋಳ, ರಾಗಿ, ತೊಗರಿ, ಹೆಸರು, ಸೂರ್ಯಕಾಂತಿ, ಶೇಂಗಾ, ಹುರುಳಿ, ಗುರಾಳು, ನವಣೆ, ಮುಂತಾದ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ಆಧುನಿಕತೆಯ ಸ್ಪರ್ಶದಿಂದಾಗಿ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ಮೆಕ್ಕೆಜೋಳ, ದಾಳಿಂಬೆ ಮುಂತಾದ ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಹೀಗೆ ಆಹಾರ ಪದ್ಧತಿಯಲ್ಲಿ, ಕಸಬುಗಳಲ್ಲಿ, ವೃತ್ತಿಗಳಲ್ಲಿ ಅಮೂಲಾಗ್ರವಾದ ಬದಲಾವಣೆಯನ್ನು ಕಾಣಬಹುದಾಗಿದೆ.

೮.೩. ಸಾಂಸ್ಕೃತಿಕ ಸ್ಥಿತ್ಯಂತರ

ಸಂಸ್ಕೃತಿ ಎನ್ನುವಂತಹದ್ದು ಮಾನವನನ್ನು ವಿವಿಧ ಆಯಾಮಗಳಿಂದ ಕೂಡಿರುವ ಒಂದು ಪರಂಪರೆಯಾಗಿದೆ. ಸಂಸ್ಕೃತಿಯೇ ಗ್ರಾಮೀಣ ಸಮುದಾಯಗಳ ಜೀವಾಳವಾಗಿದೆ. ಪ್ರತಿಯೊಂದು ಹೆಜ್ಜೆಯಲ್ಲಿಯೂ ಆಚಾರ-ವಿಚಾರ, ಸಂಪ್ರದಾಯ. ನಂಬಿಕೆಗಳು ಹಾಸುಹೊಕ್ಕಾಗಿವೆ. ವಿವಿಧ ಸಂಸ್ಕೃತಿಗಳ ಪ್ರಯೋಗಾಲಯ ಎಂದರೆ ಗ್ರಾಮೀಣ ಸಮುದಾಯಗಳು. ಹ್ಯಾರಡಾ ಗ್ರಾಮದಲ್ಲಿಯೂ ಕೂಡ ಹಲವಾರು ಸಂಸ್ಕೃತಿಗಳ ಆಗರವಾಗಿದೆ. ತನ್ನದೆ ಆದ ಆಚರಣಾ ಲೋಕವನ್ನು ಸೃಷ್ಟಿಸಿಕೊಂಡಿದೆ. ಆದರೆ ಇಂದು ಮೂಲ ಸಾಂಸ್ಕೃತಿಕ ಪರಂಪರೆ ಕಣ್ಮರೆಯಾಗುತ್ತಿದೆ. ಹುಟ್ಟಿನಿಂದ ಸಾವಿನವರೆಗೆ ಹಲವಾರು ಆಚರಣೆಗಳು ಹಾಸುಹೊಕ್ಕಾಗಿದ್ದವು. ಆದರೆ ಇಂದು ಇವುಗಳು ಬಹುತೇಕ ಕಣ್ಮರೆಯಾಗುತ್ತಿವೆ. ಮಗುವಿನ ನಾಮಕರಣ, ಋತುಮತಿಯಾದ ಸಂದರ್ಭದಲ್ಲಿ, ಮದುವೆ ಸಂದರ್ಭ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಸೋಬಾನೆ ಪದಗಳನ್ನು ವಿಶೇಷವಾಗಿ ಹಾಡುತ್ತಿದ್ದರು. ಆದರೆ ಇಂದು ಈ ಪರಂಪರೆಯು ಕಣ್ಮರೆಯಾಗಿದೆ.

ಮದುವೆ ಸಂದರ್ಭದಲ್ಲಂತೂ ಆಚರಣೆಗಳ ಸರಮಾಲೆಗಳನ್ನೇ ನೋಡಬಹುದಿತ್ತು. ಐದಾರು ತಿಂಗಳುಗಳಿಂದ ಮದುವೆಯ ಸಿದ್ದತೆಯನ್ನು ಮಾಡಿಕೊಳ್ಳುತ್ತಿದ್ದರು. ವಧು-ವರರನ್ನು ಹಿರಿಯರು ನಿಶ್ಚಯಿಸಿ ಅವರ ಮುಂದಾಳತ್ವದಲ್ಲಿ ಪ್ರತಿಯೊಂದು ಕಾರ್ಯಕ್ರಮಗಳು ಜರುಗುತ್ತಿದ್ದವು. ಮನೆಯ ಮುಂದೆ ಹಸಿರು ತೋರಣಗಳಿಂದ ಕೂಡಿದ ಚಪ್ಪರವನ್ನು ಹಾಕಿ, ಬೀಗರನ್ನು ಕರೆಯಿಸಿ ಗ್ರಾಮದ ಎಲ್ಲಾ ಸಮುದಾಯದವರು ಕೂಡಿಕೊಂಡು ಅತ್ಯಂತ ವಿಜೃಂಭಣೆಯಿಂದ ಮದುವೆ ಕಾರ್ಯಕ್ರಮಗಳು ಜರುಗುತ್ತಿದ್ದವು. ಆದರೆ ಇಂದು ಹುಡುಗ-ಹುಡುಗಿ ತಾವೇ ಪರಸ್ಪರ ಪ್ರೀತಿಸಿ ನಾಮಕಾವಸ್ತೆಗೆ ಹಿರಿಯರ ಒಪ್ಪಿಗೆಯನ್ನು ಪಡೆದು ಐದಾರು ದಿನಗಳಲ್ಲಿ ಮದುವೆ ಕಾರ್ಯಗಳು ಮುಗಿದ ಎಷ್ಟೋ ಉದಾಹರಣೆಗಳನ್ನು ಕಾಣಬಹುದಾಗಿದೆ. ಹೀಗೆ ಮದುವೆಯ ಶಾಸ್ತ್ರಗಳು ಇಂದು ಸಂಪೂರ್ಣವಾಗಿ ನಶಿಸಿ ಹೋಗುತ್ತಿವೆ.

ಗ್ರಾಮದಲ್ಲಿ ಯಾವುದಾದರೂ ಹಬ್ಬ-ಹರಿದಿನಗಳು, ಜಾತ್ರೆಗಳು ಬಂದರೆ ಗ್ರಾಮದ ಎಲ್ಲಾ ಸಮುದಾಯದವರು ಕೂಡಿಕೊಂಡು ಪರಸ್ಪರ ಸಾಮರಸ್ಯದಿಂದ ಈ ಕಾರ್ಯಗಳನ್ನು ಪೂರೈಸುತ್ತಿದ್ದರು. ಆದರೆ ಇಂದು ಪ್ರತಿಯೊಂದು ಸಮುದಾಯದವರು ಪ್ರತ್ಯೇಕವಾದ ಹಬ್ಬ-ಹರಿದಿನಗಳನ್ನು ಆಚರಿಸುವುದುಂಟು. ರಾಜಕೀಯ ಎಂಬ ವಿಷ ವರ್ತುಲದಲ್ಲಿ ಎಲ್ಲಾ ಸಮುದಾಯದವರು ಸಿಲುಕಿಕೊಂಡು ಬಹುತೇಕ ಸಾಮರಸ್ಯದ ಜೀವನವನ್ನು ಮರೆತಿದ್ದಾರೆ. ಸದಾ ಎಲ್ಲರಲ್ಲಿಯೂ ಸ್ವಾರ್ಥದ ಛಾಯೆ ತುಂಬಿ ತುಳುಕಾಡುತ್ತಿದೆ. ಸಮುದಾಯ-ಸಮುದಾಯಗಳ ಮಧ್ಯೆ, ಅಣ್ಣ-ತಮ್ಮಂದಿರ ಮಧ್ಯೆ, ಕಚ್ಚಾಟ, ಸಂಘರ್ಷಗಳನ್ನು ಕಾಣುತಿದ್ದೇವೆ. ಗ್ರಾಮದ ಮೂಲ ಸಂಸ್ಕೃತಿಗೆ ತಿಲಾಂಜಲಿ ಇಟ್ಟು ಸದಾ ಸ್ವಾರ್ಥದ ವರ್ತುಲದಲ್ಲಿ ಸಿಲುಕಿಕೊಂಡಿದ್ದಾರೆ.

೮.೪ ಶೈಕ್ಷಣಿಕ ಸ್ಥಿತ್ಯಂತರ

ಒಂದು ಸಮುದಾಯಕ್ಕೆ ಶಿಕ್ಷಣವನ್ನು ಒದಗಿಸಿದರೆ ಹೇಗೆ ಅದು ಬದಲಾವಣೆಯನ್ನು ಹೊಂದುತ್ತದೆ ಎಂಬುದಕ್ಕೆ ಹ್ಯಾರಡಾ ಗ್ರಾಮವೇ ಸಾಕ್ಷಿಯಾಗಿದೆ. ಮೊದಲಿನಿಂದಲೂ ಗ್ರಾಮದಲ್ಲಿ ಶಿಕ್ಷಣವು ಮೇಲ್ವರ್ಗದ ಸ್ವತ್ತಾಗಿತ್ತು. ಗ್ರಾಮದ ಇತರೆ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣವು ಮರೀಚಿಕೆಯಾಗಿತ್ತು. ಯಾವಾಗ ಗ್ರಾಮದಲ್ಲಿ ಹಿರೇಮಠದ ಶಿವರುದ್ರಯ್ಯನವರು ಕ್ರಿ.ಶ.೧೯೧೪ ರಲ್ಲಿ ಮೇಲ್ವರ್ಗದವರ ವಿರೋಧ ಕಟ್ಟಿಕೊಂಡು ತಮ್ಮ ಮನೆಯಲ್ಲಿಯೇ ಶಾಲೆಯನ್ನು ತೆರೆದರೋ ಅಲ್ಲಿಂದ ಅತ್ಯಂತ ಕೆಳ ಸಮುದಾಯಗಳು ಶಿಕ್ಷಣವನ್ನು ಪಡೆಯುವ ಸ್ವಾತಂತ್ರ್ಯವನ್ನು ಪಡೆದುಕೊಂಡು ಅತ್ಯಂತ ಯಶಸ್ವಿಯಾಗಿ ಮುಂದೆ ಸಾಗಿತು. ೧೯೭೮ ರಲ್ಲಿ ಗ್ರಾಮದಲ್ಲಿ ಶಾಲೆಗೆ ಸ್ವಂತ ಕಟ್ಟಡಗಳು ನಿರ್ಮಾಣವಾದವು. ಆಗಿನ ರಾಜಕೀಯ ವ್ಯಕ್ತಿಗಳ ಇಚ್ಛಾ ಶಕ್ತಿಯಿಂದ ನೂತನ ಕಟ್ಟಡವು ನಿರ್ಮಾಣವಾಯಿತು.

ವಿಶ್ವೇಶ್ವರಯ್ಯ ಯುವಕ ಮಿತ್ರ ಮಂಡಳಿ, ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಕೆ. ಬಸವರಾಜ ಅವರ ಅಪಾರವಾದ ಅಸ್ಥೆಯಿಂದ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಒತ್ತನ್ನು ಕೊಟ್ಟರು. ಅದರ

ಫಲವಾಗಿ ಇಂದು ಹೂವಿನ ಹಡಗಲಿಯಲ್ಲಿಯೇ ಅತೀ ಹೆಚ್ಚು ಸರ್ಕಾರಿ ನೌಕರರನ್ನು ಹೊಂದಿದ ಗ್ರಾಮವಾಗಿ ಹೊರಹೊಮ್ಮಿರುವುದು ಹೆಮ್ಮೆಯ ಸಂಗತಿಯಾಗಿದೆ. ಸುಮಾರು ೧೬೨ ಸರ್ಕಾರಿ ನೌಕರರನ್ನು ಹೊಂದಿದ ಹೆಗ್ಗಳಿಕೆ ಹ್ಯಾರಡಾ ಗ್ರಾಮದ್ದಾಗಿದೆ. ಈ ಶಾಲೆಯಲ್ಲಿ ಓದಿದ ಹಲವಾರು ವಿದ್ಯಾರ್ಥಿಗಳು ದೇಶದ ಉದ್ದಗಲದಲ್ಲಿ ವಿದೇಶದಲ್ಲಿಯೂ ವೃತ್ತಿಯನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇಂದು ಗ್ರಾಮದಲ್ಲಿ ಶೇ೮೦ ರಷ್ಟು ಜನರು ಅಕ್ಷರಸ್ಥರಾಗಿದ್ದಾರೆ. ಸರ್ಕಾರಿ ವೃತ್ತಿಗಳಲ್ಲಿ ವಿವಿಧ ಸೇವೆಗಳಲ್ಲಿ ಹ್ಯಾರಡಾದ ವಿದ್ಯಾರ್ಥಿಗಳನ್ನು ಕಾಣಬಹುದಾಗಿದೆ. ಹೀಗೆ ಗ್ರಾಮವು ಗುಣಾತ್ಮಕ ಶಿಕ್ಷಣದಿಂದ ರಾಜಕೀಯವಾಗಿ, ಆರ್ಥಿಕವಾಗಿ ಬಹಳಷ್ಟು ಮುನ್ನಡೆಯನ್ನು ಕಾಯ್ದುಕೊಂಡು ಬಂದಿದೆ.

೮.೫ ಆರ್ಥಿಕ ಸ್ಥಿತ್ಯಂತರ

ಗ್ರಾಮವು ಮೊದಲಿನಿಂದಲೂ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿತ್ತು. ಕೇವಲ ಉಳ್ಳವರ ಹತ್ತಿರ ಸಂಪತ್ತು ಕ್ರೋಢೀಕರಣವಾಗಿತ್ತು. ಸಮಾಜದ ಪ್ರತಿಯೊಂದು ಹಂತದಲ್ಲಿ ಉಳ್ಳವರ ಪ್ರಭಾವ ಹೆಚ್ಚಾಗಿತ್ತು. ಗ್ರಾಮವು ವಿವಿಧ ಘಟ್ಟಗಳಲ್ಲಿ ಹಲವಾರು ಸ್ಥಿತ್ಯಂತರಗಳಿಗೆ ಒಳಗಾಗಿ ಅಮೂಲಾಗ್ರವಾದ ಆರ್ಥಿಕ ಚೇತರಿಕೆಯನ್ನು ಕಂಡಿದೆ. ಜನರು ಅಕ್ಷರಸ್ಥರಾಗುತ್ತಿದ್ದಂತೆಯೇ ತಮ್ಮ ಹಕ್ಕು-ಭಾದ್ಯತೆಗಳ ಬಗ್ಗೆ ಜಾಗೃತಿ ಉಂಟಾಯಿತು. ಆರ್ಥಿಕ ಸದೃಢತೆಗೆ ದುಡಿಮೆಯೊಂದೇ ಸಿದ್ದ ಔಷಧ ಎಂಬ ತಿಳುವಳಿಕೆ ಮೂಡತೊಡಗಿತು. ಅದರ ಫಲವಾಗಿ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಶ್ರಮಧಾರಿ ವ್ಯವಸ್ಥೆಯನ್ನು ಕಂಡುಕೊಂಡರು. ಕೃಷಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಪ್ರಯೋಗಿಸಿದರು. ಇದರಿಂದ ಕೃಷಿಯ ಆದಾಯವನ್ನು ಹೆಚ್ಚಿಸತೊಡಗಿದರು. ಅದರಲ್ಲೂ ವಿಶೇಷವಾಗಿ ಸರ್ಕಾರದ ಯೋಜನೆಗಳನ್ನು ಅಚ್ಚುಕಟ್ಟಾಗಿ ಬಳಸಿಕೊಂಡು ಆರ್ಥಿಕವಾಗಿ ಸದೃಢರಾಗುತ್ತಾ ಹೋದರು. ಕೃಷಿಯಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆದು ಆರ್ಥಿಕ ಮುಗ್ಗಟ್ಟನ್ನು ತಗ್ಗಿಸಿದರು.

ಕೃಷಿಯ ಜೊತೆ-ಜೊತೆಗೆ ಇಂದು ಹ್ಯಾರಡಾ ಗ್ರಾಮದಲ್ಲಿ ಹೈನುಗಾರಿಕೆ ಹೆಚ್ಚು ಪ್ರಚಲಿತದಲ್ಲಿದೆ. ಗ್ರಾಮದ ದೊಡ್ಡ ಹಿಡುವಳಿದಾರ ರೈತರು ಕೂಡ ಇಂದು ಹೈನುಗಾರಿಕೆ ಮೊರೆ ಹೋಗಿದ್ದಾರೆ. ಇದರ ಮುಖಾಂತರ ಆರ್ಥಿಕ ಸದೃಢರಾಗುತ್ತಿದ್ದಾರೆ. ಕೃಷಿಯ ಜೊತೆ-ಜೊತೆಗೆ ವ್ಯಾಪಾರವೂ ಕೂಡ ಹೆಚ್ಚು ಪ್ರಚಲಿತದಲ್ಲಿದೆ. ರಸಗೊಬ್ಬರ, ವ್ಯಾಪಾರ, ದಿನನಿತ್ಯದ ವಸ್ತುಗಳ ವ್ಯಾಪಾರ, ಕೃಷಿ ಉತ್ಪನ್ನಗಳನ್ನು ಖರೀದಿಸುವ ವ್ಯಾಪಾರ ಗ್ರಾಮದಲ್ಲಿ ಹೆಚ್ಚು ಚಾಲ್ತಿಯಲ್ಲಿದೆ. ಇದರ ಮುಖಾಂತರ ತಮ್ಮ ಆರ್ಥಿಕ ಭದ್ರತೆಯನ್ನು ಒದಗಿಸಿಕೊಂಡಿದ್ದಾರೆ. ಇದರ ಜೊತೆ-ಜೊತೆಗೆ ಸಹಕಾರಿ ಬ್ಯಾಂಕ್ ರಾಷ್ಟ್ರೀಕೃತ ಬ್ಯಾಂಕ್‌ಗಳು ರೈತರಿಗೆ ರಿಯಾಯತಿ ದರದಲ್ಲಿ ಸಾಲ ಸೌಲಭ್ಯಗಳನ್ನು ಕೊಡುತ್ತಿವೆ. ಇದರ ಮುಖಾಂತರ ತಮ್ಮ ದಿನ ನಿತ್ಯ ಜೀವನದಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸಲು ಸಹಕಾರಿಯಾಗಿದೆ. ಗ್ರಾಮದ ಪ್ರತಿಯೊಬ್ಬ ವ್ಯಕ್ತಿಯೂ ಕೃಷಿ ಭೂಮಿಯನ್ನು ಹೊಂದಿದ್ದಾನೆ. ನವೀನ ರೀತಿಯಲ್ಲಿ ಬೆಳೆಗಳನ್ನು ಬೆಳೆದು ಗ್ರಾಮವು ಆರ್ಥಿಕವಾಗಿ ಸದೃಡವಾಗುತ್ತಿದೆ.

ಅಧ್ಯಾಯ–೯

ಉಪಸಂಹಾರ

ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ಭಾರತವು ವೈವಿಧ್ಯತೆಯಿಂದ ಕೂಡಿದ ಸಂಸ್ಕೃತಿಯ ಆಗರವಾಗಿದೆ. ವಿಭಿನ್ನ ಸಮುದಾಯಗಳ ಸಂಸ್ಕೃತಿಯೇ ಒಂದು ರೋಚಕವಾಗಿದೆ. ವಿವಿಧ ಧರ್ಮಗಳಿದ್ದರೂ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ದೇಶ ಭಾರತ. ಇಲ್ಲಿಯ ಗ್ರಾಮೀಣ ಜನಪದರ ಬದುಕು, ಆಚಾರ–ವಿಚಾರ, ಸಂಪ್ರದಾಯ, ಆಚರಣೆಗಳು, ಸಂಸ್ಕೃತಿ ಜೀವನದ ಮೌಲ್ಯವನ್ನು ಸಾರುವಂತಹ ಅಂಶಗಳಾಗಿವೆ. ಭಾರತವು ಅನಾದಿ ಕಾಲದಿಂದಲೂ ಪರಕೀಯರ ದಾಳಿಗೆ ತುತ್ತಾದರೂ ತನ್ನ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಬರುವಲ್ಲಿ ಯಶಸ್ವಿಯಾಗಿದೆ. ಭಾರತದ ಮಣ್ಣಿನಲ್ಲಿ ಸಂತರು, ಸತ್ಪುರುಷರು, ಋಷಿಮುನಿಗಳು, ಸಮಾಜ ಸುಧಾರಕರು ತಮ್ಮ ಉದಾತ್ತ ಮೌಲ್ಯಗಳನ್ನು ಈ ಮಣ್ಣಿಗೆ ಬಳುವಳಿಯಾಗಿ ಕೊಟ್ಟಿದ್ದಾರೆ. ಇಲ್ಲಿಯ ಹಿತಕರವಾದ ಹವಾಗುಣ, ಪ್ರಕೃತಿಯ ಸೌಂದರ್ಯ, ಸಂಪದ್ಭರಿತವಾದ ಕಾಡು ಪರಕೀಯರನ್ನು ಕೈಬೀಸಿ ಕರೆಯುತ್ತಿದೆ.

ಅದರಲ್ಲಿ ವಿಶೇಷವಾಗಿ ಗ್ರಾಮೀಣ ಸಂಸ್ಕೃತಿಗಳು ನಮ್ಮ ಭವ್ಯ ಪರಂಪರೆಯ ಹಮ್ಮೆಯಾಗಿದೆ. ಜನಪದರ ಜೀವನ, ಸಾಹಿತ್ಯ, ಸಂಸ್ಕೃತಿ ವಿಭಿನ್ನವಾಗಿ ಮೂಡಿಬಂದಿವೆ. ಈ ಹಿನ್ನೆಲೆಯಲ್ಲಿ ಹ್ಯಾರಡಾ ಗ್ರಾಮವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಯನವು ಸಂಪೂರ್ಣವಾಗಿ ಕ್ಷೇತ್ರಕಾರ್ಯಗಳ ಮೂಲಕ ಸ್ಥಳೀಯ ಜನಪದರ ಹೇಳಿಕೆಯ ಆಧಾರದ ಮೇಲೆ ವಿಶ್ಲೇಷಣೆಯನ್ನು ಮಾಡಿ ಸಂಶೋಧನಾ ಮಹಾ ಪ್ರಬಂಧವನ್ನು ತಯಾರಿಸಲಾಗಿದೆ. ನಾನು ಚಿಕ್ಕವನಿರುವಾಗಿನಿಂದಲೂ ಈ ಗ್ರಾಮದ ವಿಭಿನ್ನ ಸಂಸ್ಕೃತಿಯನ್ನು ಹತ್ತಿರದಿಂದ ನೋಡಿದ್ದೇನೆ. ಆದ್ದರಿಂದ ಸಂಶೋಧನೆಗೆ "ಹ್ಯಾರಡ ಗ್ರಾಮ : ಸಾಸ್ಕೃತಿಕ ಸ್ಥಿತ್ಯಂತರ" ಎಂಬ ಶೀರ್ಷಿಕೆಯಡಿ ಅಧ್ಯಯನವನ್ನು ಕೈಗೊಂಡಿದ್ದೇನೆ. ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಗ್ರಾಮದ ವ್ಯಕ್ತಿಗಳ ಸ್ಪಂದನೆ ಅತ್ಯುತ್ತಮವಾಗಿತ್ತು. ತಮ್ಮ ಮತೀಯ ಮಿತಿಯೊಳಗೆ ಯಾವ ವಿಷಯಗಳು ಇದ್ದವೋ ಅವೆಲ್ಲವುಗಳನ್ನು ತಿಳಿಸಿದ್ದಾರೆ. ಸ್ವತಃ ನಾನೇ ಗ್ರಾಮದ ಸ್ಥಳೀಯ ಹಿರಿಯ ಜನಪದರ ಹತ್ತಿರ ಹೋಗಿ ಪ್ರಶ್ನಾವಳಿಯ ಮೂಲಕ, ಸಂದರ್ಶನದ ಮೂಲಕ, ಅವರ ಧ್ವನಿ ಸುರುಳಿಯನ್ನು ಸಂಗ್ರಹಿಸುವುದರ ಮೂಲಕ ಮಾಹಿತಿಗಳನ್ನು ಕ್ರೋಢೀಕರಿಸುವ ಪ್ರಯತ್ನವನ್ನು ಮಾಡಿದ್ದೇನೆ. ಹ್ಯಾರಡಾ ಜನಪದರು ಯಾವಾಗ ಸಿಗುತ್ತಾರೋ ಅವಾಗಲೆಲ್ಲಾ ಅವರ ಬಳಿ ತೆರಳಿ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ.

ಗ್ರಾಮದ ಭೌಗೋಳಿಕ ಲಕ್ಷಣಗಳು ಇಲ್ಲಿಯ ಜನಪದರ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ. ಈ ಗ್ರಾಮವು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವುದರಿಂದ ಶಾಸನಗಳ ಅಧ್ಯಯನವನ್ನು ಅತ್ಯಂತ ಜಾಗೃತಿಯಿಂದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಗ್ರಾಮದ ಸ್ಥಳನಾಮದ ಬಗ್ಗೆ ಗ್ರಾಮದ ಜನಪದರಿಂದ ಐತಿಹ್ಯದ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಹ್ಯಾರಡಾ ಗ್ರಾಮದ ಸಾಮಾಜಿಕ ಜೀವನ ಸಂರಚನೆಯು ಬಹಳಷ್ಟು ವೈವಿಧ್ಯತೆಯಿಂದ ಕೂಡಿದೆ. ಗ್ರಾಮದ ಜನಪದರ ಜೀವನದ ವಿವಿಧ ಮಗ್ಗಲುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವುದರ ಮೂಲಕ, ಅಗತ್ಯ ಬಂದಾಗಲೆಲ್ಲಾ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಗ್ರಾಮದಲ್ಲಿರುವಂತಹ ಹಿಂದೂ, ಜೈನ, ಮುಸ್ಲಿಂ, ಹಾಗೂ ಕ್ರೈಸ್ತ ಸಮುದಾಯಗಳ ಹಿನ್ನೆಲೆ ಸಾಮರಸ್ಯದ ಜೀವನದ ಬಗ್ಗೆ ಚರ್ಚಿಸಲಾಗಿದೆ. ಗ್ರಾಮದ ವಿಭಿನ್ನ ಸಂಸ್ಕೃತಿ ಅನಾವರಣಗೊಳ್ಳುವುದು. ಅವರ ಆಚರಣಾ ಲೋಕವನ್ನು ಅಧ್ಯಯನ ಮಾಡಿದಾಗ ಇಂತಹ ವಿಭಿನ್ನ ಆಚರಣೆಗಳು, ಸಂಪ್ರದಾಯಗಳು, ವಿಧಿ-ನಿಷೇಧಗಳನ್ನು ಕಂಡುಕೊಂಡು ಇವುಗಳ ಬಗ್ಗೆ ಚರ್ಚಿಸಿಲಾಗಿದೆ.

ಗ್ರಾಮವು ಮೊದಲಿಗಿಂತಲೂ ಶೈಕ್ಷಣಿಕವಾಗಿ ಉತ್ತುಂಗ ಸ್ಥಿತಿಯಲ್ಲಿದೆ. ಇದಕ್ಕೆ ಮೂಲ ಕಾರಣ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪಕ್ರಮವಾಗಿದೆ ಎಂಬ ಅಂಶವನ್ನು ಮನಗಾಣಲಾಗಿದೆ. ಒಂದು ಸಮುದಾಯಕ್ಕೆ ಶೈಕ್ಷಣಿಕ ಉಪಕ್ರಮಗಳನ್ನು ಒದಗಿಸಿದರೆ ಆ ಸಮುದಾಯ ಹೇಗೆ ಸರ್ವರಂಗಗಳಲ್ಲಿ ಉನ್ನತಿಯನ್ನು ಕಾಣುತ್ತದೆ ಎಂಬುದಕ್ಕೆ ಹ್ಯಾರಡ ಗ್ರಾಮ ಜೀವಂತ ಸಾಕ್ಷಿಯಾಗಿದೆ. ಗ್ರಾಮದಲ್ಲಿ ಧಾರ್ಮಿಕ ಸ್ಥಿತಿಗಳು, ಸಾಂಸ್ಕೃತಿಕ ಸ್ಥಿತಿಗಳು ಆಯಾಕಾಲಕ್ಕೆ ಸ್ಥಿತ್ಯಂತರಗೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ವಿಶೇಷವಾಗಿ ಕೃಷಿಗೆ ಸಂಬಂಧಿಸಿದಂತೆ ಜಾಗತೀಕರಣದ ನೇರ ಪ್ರಭಾವವನ್ನು ಕಾಣಬಹುದಾಗಿದೆ. ಸಾಂಪ್ರದಾಯಿಕ ಕೃಷಿ ವ್ಯವಸ್ಥೆಗೂ, ಆಧುನಿಕ ಕೃಷಿ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಕಾಣಬಹುದಾಗಿದೆ.

ಗ್ರಾಮದಲ್ಲಿ ಜನಪದ ದೈವಗಳು ಸಾಕಷ್ಟಿವೆ. ಅವುಗಳ ಹಿನ್ನೆಲೆ, ಐತಿಹ್ಯಗಳನ್ನು ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಮಾಹಿತಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಗ್ರಾಮದಲ್ಲಿ ಜನಪದ ಸಾಹಿತ್ಯವು ಹೇರಳವಾಗಿದೆ. ಜನಪದರು ತಮ್ಮ ದಿನನಿತ್ಯದ ಜೀವನದಲ್ಲಿ ಜನಪದ ಸಾಹಿತ್ಯವನ್ನು ಮೈಗೂಡಿಸಿಕೊಂಡಿದ್ದಾರೆ. ಮದುವೆ, ಸಮಾರಂಭ, ನಾಮಕರಣ, ಹಬ್ಬ-ಹರಿದಿನಗಳು, ಜಾತ್ರೆ ಮುಂತಾದ ಕಾರ್ಯಕ್ರಮಗಳಲ್ಲಿ ಸೋಬಾನೆ ಪದಗಳು ಸರ್ವೇಸಾಮಾನ್ಯವಾಗಿವೆ. ಇವುಗಳ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಿದ್ದಾರೆ. ಜನಪದ ಗೀತೆಗಳು, ಜನಪದ ಗಾದೆಗಳು, ಒಗಟುಗಳನ್ನು ಹೇಳುವ ಸಾಕಷ್ಟು ಜನಪದರು ಗ್ರಾಮದಲ್ಲಿದ್ದಾರೆ. ಅದರಂತೆಯೇ ಶಿಷ್ಟ ಸಾಹಿತ್ಯವೂ ಕೂಡ ಹುಲುಸಾಗಿ ಬೆಳೆದಿದೆ. ಗ್ರಾಮದೇವತೆಯಾದ ಮಲಿಯಮ್ಮನನ್ನು ಜಾತ್ಯಾತೀತವಾಗಿ ಆರಾಧಿಸುವುದುಂಟು. ಪ್ರತಿ ಮೂರು ವರ್ಷಕ್ಕೊಮ್ಮೆ ದೇವಿಯ ಜಾತ್ರೆಯನ್ನು ಬಹಳಷ್ಟು ಅದ್ದೂರಿಯಿಂದ ಮಾಡಲಾಗುತ್ತದೆ. ದೇವಿಯ ವಿವಿಧ ಆಚರಣೆಗಳು, ಸಂಪ್ರದಾಯಗಳು, ಹರಕೆ ಮುಂತಾದವುಗಳನ್ನು ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗೆ ಹ್ಯಾರಡಾ ಗ್ರಾಮದ ವಿಭಿನ್ನ ಸಂಸ್ಕೃತಿಯನ್ನು ಇಲ್ಲಿ ಸಂಶೋಧನೆಗೆ ಒಳಪಡಿಸಲಾಗಿದೆ.

ಹ್ಯಾರಡಾ ಗ್ರಾಮವು ವಿಶಿಷ್ಟವಾದ ಸಾಮಾಜಿಕ ಜೀವನ ಸಂರಚನೆಯನ್ನು ಹೊಂದಿದೆ. ಇಲ್ಲಿರುವ ವಸತಿ ವ್ಯವಸ್ಥೆಯು ಕೇಂದ್ರೀಕೃತ ಲಕ್ಷಣವನ್ನು ಹೊಂದಿದೆ. ವ್ಯವಸ್ಥಿತವಾದ ರಸ್ತೆಯ ವ್ಯವಸ್ಥೆ ಗಮನಾರ್ಹವಾದುದು. ಚರಂಡಿ ವ್ಯವಸ್ಥೆ, ಮನೆಯಲ್ಲಿ ವಿವಿಧ ಕೊಠಡಿಗಳು, ಆಧುನಿಕ ವ್ಯವಸ್ಥೆಗೆ ಒಳಗೊಂಡಿದೆ. ಇಲ್ಲಿಯ ಜನಪದರು ವಿಶಿಷ್ಟ ರೀತಿಯ ಆಹಾರ ಪದ್ಧತಿಯನ್ನು ಕಂಡುಕೊಂಡಿದ್ದಾರೆ. ಸ್ಥಳೀಯವಾಗಿ ಬೆಳೆಯುವ ಧಾನ್ಯಗಳು, ತರಕಾರಿಗಳು, ಆಹಾರ ಪದಾರ್ಥಗಳು ಆಹಾರದ ಮೂಲಗಳಾಗಿವೆ. ಇದರ ಜೊತೆಗೆ ಪ್ರಾಣಿ ಜನ್ಯ ಮೂಲದ ಮಾಂಸಾಹಾರವನ್ನು ಸೇವಿಸುತ್ತಿದ್ದಾರೆ. ಹಬ್ಬ-ಹರಿದಿನ, ಜಾತ್ರೆಗಳಲ್ಲಿ ಮಾಡುವ ವಿಶೇಷ ಸಿಹಿ-ತಿನಿಸುಗಳು ಇವರ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಿದೆ. ಬೇಟೆಯಾಡುವ ಪದ್ಧತಿಯನ್ನು ಅನಾದಿ ಕಾಲದಿಂದಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಗ್ರಾಮದಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳನ್ನು ಕಾಣಬಹುದು. ಇದರ ಮುಖೇನ ಗ್ರಾಮದ ವಿಶಿಷ್ಟ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತಿದ್ದಾರೆ. ಗ್ರಾಮದ ಎಲ್ಲಾ ಸಮುದಾಯದವರು ಭ್ರಾತೃತ್ವ ಭಾವನೆಯನ್ನು ತಾಳಿರುವುದನ್ನು ನಾವಿಲ್ಲಿ ಅರಿಯಬಹುದು.

ವಿವಿಧ ರೀತಿಯ ವೃತ್ತಿಯನ್ನು ಅವಲಂಭಿಸಿದ ಕುಟುಂಬಗಳನ್ನು ಕಾಣಬಹುದು. ಕೇವಲ ಲಾಭದ ದೃಷ್ಟಿಯಿಂದ ನೋಡದೇ ಸಮಷ್ಟಿಯ ಸಮಭಾವದ ದೃಷ್ಠಿಯಿಂದ ವ್ಯಾಪಾರ ವಹಿವಾಟು ನಡೆಯುವುದನ್ನು ಕಾಣಬಹುದು. ಕೊಡು-ಕೊಳ್ಳುವಿಕೆಯಲ್ಲಿ ವಿಶಿಷ್ಟ ಪರಂಪರೆಯನ್ನು ಕಾಣಬಹುದು. ಗ್ರಾಮದ ಶ್ರೇಯೋಭಿವೃದ್ದಿಗೆ ಹಲವಾರು ಸಂಘ ಸಂಸ್ಥೆಗಳ ಕೊಡುಗೆ ಅಪಾರವಾದುದು. ಇಲ್ಲಿ ವಿಶ್ವೇಶ್ವರಯ್ಯ ಯುವಕ ಸಂಘ, ಪ್ರಜ್ಞಾವಂತ ಯುವ ವೇದಿಕೆಯಂತಹ ಸಂಘಗಳು ಗ್ರಾಮದ ಒಳಿತಿಗೆ ಶ್ರಮಿಸಿರುವದನ್ನು ಕಾಣಬಹುದು. ಹಾಗೆಯೇ ಉಡುಗೆ-ತೊಡುಗೆಯಲ್ಲಿ ವಿಶಿಷ್ಟ ಸಂಸ್ಕೃತಿಯನ್ನು ಕಾಣಬಹುದು. ಇದರ ಮುಖೇನ ಭಾರತೀಯ ವಿಶಿಷ್ಟ ಪರಂಪರೆಯ ಸೊಗಡನ್ನು ಮನಗಾಣಬಹುದು. ಗ್ರಾಮೀಣ ಕ್ರೀಡೆಗಳು ಗ್ರಾಮೀಣ ಜನಪದರ ಜೀವಾಳವಾಗಿವೆ. ಆ ಕ್ರೀಡೆಗಳ ಹಿನ್ನೆಲೆಯ ಮಹತ್ವವನ್ನು ಇಲ್ಲಿ ಅರಿಯಬಹುದು. ವಿವಿಧ ರೀತಿಯ ಕ್ರೀಡೆಯ ಮುಖಾಂತರ ತಮ್ಮ ಆಚರಣೆ, ಸಂಪ್ರದಾಯ, ನಂಬಿಕೆಯ ಹೂರಣವನ್ನು ನೋಡಬಹುದು. ಗ್ರಾಮವು ಮೊದಲಿನಿಂದಲೂ ವೈದ್ಯ-ವಿದ್ಯೆಗೆ ಆಧ್ಯತೆಯನ್ನು ಕೊಟ್ಟಿದೆ. ಇಲ್ಲಿ ಅಪಾರ ಪ್ರಮಾಣದ ಸಸ್ಯ ಜನ್ಯ ಮೂಲವಾದ ಗಿಡ ಮೂಲಿಕೆಗಳು ಹೇರಳವಾಗಿವೆ. ಇದರ ಉಪಯೋಗವನ್ನು ಪಡೆದುಕೊಂಡು ತಮಗೆ ಬಾಧಿಸುವ ಖಾಯಿಲೆಗಳಿಗೆ ಔಷಧಿಯನ್ನು ಕಂಡುಕೊಳ್ಳುವ ವ್ಯವಸ್ಥೆಯನ್ನು ನೋಡಬಹುದು. ಗ್ರಾಮದಲ್ಲಿ ಜನಪದ ಕಲಾ ಮೇಳಗಳಾದ ಭಜನೆ, ಕೋಲಾಟ, ಡೊಳ್ಳು ಕುಣಿತ, ಹಲಗೆ ವಾದ್ಯ ವಿಶಿಷ್ಟವಾಗಿ ಮೂಡಿ ಬಂದಿದೆ. ಈಗಲೂ ಸಹ ಈ ಪರಂಪರೆಯ ಅನಾವರಣವನ್ನು ಕಾಣಬಹುದು. ವಿವಿಧ ಧರ್ಮಗಳಾದ ಹಿಂದೂ, ಜೈನ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳ ಸಮ್ಮಿಲನವನ್ನು ಕಾಣಬಹುದು. ಧಾರ್ಮಿಕ ಸಾಮರಸ್ಯದಿಂದ ಕೂಡಿದ ಜೀವನವನ್ನು ಈಗಲೂ ಕಾಣಬಹುದಾಗಿದೆ.

ಒಂದು ಸಮುದಾಯದ ಆಚರಣೆಗಳು ಅದರ ವಿಶಿಷ್ಟ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇವುಗಳು ಅವರ ಜೀವನ ಕ್ರಮಗಳ ಮೇಲೆ ನೇರವಾದ ಪ್ರಭಾವವನ್ನು ಬೀರುತ್ತವೆ. ಹೀಗೆ ಆಚರಣೆಯಲ್ಲಿ

ನಂಬಿಕೆಯು ಮೂಲ ತಳಹದಿಯಾಗಿ ಪ್ರತಿಯೊಂದು ಹಂತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹ್ಯಾರಡಾ ಜನಪದರಲ್ಲಿ ಜೀವನಾವರ್ತನ ಆಚರಣೆಗಳು ಹಾಗೂ ವಾರ್ಷಿಕಾವರ್ತನ ಆಚರಣೆಗಳ ವಿಶಿಷ್ಟ ಪರಂಪರೆಯನ್ನು ಕಾಣಬಹುದು. ಹಬ್ಬ, ಜಾತ್ರೆ, ಮದುವೆ, ಸಾವು ಮುಂತಾದ ಸಂದರ್ಭಗಳಲ್ಲಿ ಆಚರಿಸುವ ಸಂಪ್ರದಾಯಗಳು ವಿಶಿಷ್ಟ ರೂಪದಿಂದ ರೂಪುಗೊಂಡಿವೆ. ಇದರ ಜೊತೆ-ಜೊತೆಗೆ ವಿಧಿ-ನಿಷೇಧಗಳು ಗ್ರಾಮದಲ್ಲಿ ಹೆಚ್ಚು ಪ್ರಚಲಿತದಲ್ಲಿವೆ.

ಗ್ರಾಮದಲ್ಲಿ ಬಹುತೇಕವಾಗಿ ಸ್ತ್ರೀ ದೈವಗಳನ್ನು ಕಾಣಬಹುದು. ವಿವಿಧ ದೈವಗಳೊಂದಿಗೆ ಇವರ ಅವಿನಾಭಾವ ಸಂಬಂಧ, ಸಂಪ್ರದಾಯ, ಆಚರಣೆಗಳ ಪದ್ಧತಿಯನ್ನು ಕಾಣಬಹುದು. ಅದರಲ್ಲಿ ವಿಶೇಷವಾಗಿ ಗ್ರಾಮ ದೇವತೆಯಾದ ಮಲಿಯಮ್ಮನ ಬಗ್ಗೆ ಇರುವ ಭಕ್ತಿಯ ಪರಾಕಾಷ್ಠೆಯನ್ನು ಕಾಣಬಹುದು. ಜಾತ್ರೆಯ ಸಮಯದಲ್ಲಿ ವಿವಿಧ ಸಮುದಾಯದವರ ಸಹಭಾಗಿತ್ವದೊಂದಿಗಿನ ಅವರ ಆಚರಣಾ ಲೋಕವನ್ನು ಅನಾವರಣಗೊಳಿಸಿದೆ.

ಹ್ಯಾರಡಾ ಗ್ರಾಮದ ಸಾಂಪ್ರದಾಯಿಕ ಕೃಷಿ ವ್ಯವಸ್ಥೆಯು ಅತ್ಯಂತ ವಿಶಿಷ್ಟವಾದುದು. ಕೃಷಿಯೇ ಆರ್ಥಿಕತೆಯ ಬೆನ್ನೆಲುಬಾಗಿದೆ. ನವೀನ ರೀತಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಆರ್ಥಿಕ ಪ್ರಗತಿಯತ್ತ ದಾಪುಗಾಲು ಇಟ್ಟಿರುವುದನ್ನು ನೋಡಬಹುದು. ಇತ್ತೀಚಿಗೆ ಹೆಚ್ಚು-ಹೆಚ್ಚು ವಾಣಿಜ್ಯ ಬೆಳೆಗಳಿಗೆ ಆದ್ಯತೆಯನ್ನು ಕೊಡುವುದರ ಮೂಲಕ ಆರ್ಥಿಕ ಸ್ಥಿರತೆಯನ್ನು ಕಾಪಾಡಿಕೊಂಡಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಅಮೂಲಾಗ್ರವಾದ ಬದಲಾವಣೆಯನ್ನು ಕಂಡುಕೊಳ್ಳುವುದರ ಮೂಲಕ ಇತ್ತೀಚಿಗೆ ಗ್ರಾಮದಲ್ಲಿ ಹೆಚ್ಚು-ಹೆಚ್ಚು ಸುಶಿಕ್ಷಿತರನ್ನು ಕಾಣಬಹುದು. ವಿವಿಧ ರೀತಿಯ ಸರ್ಕಾರಿ ನೌಕರಿಗಳನ್ನು ಅಲಂಕರಿಸಿರುವುದನ್ನು ನಾವಿಲ್ಲಿ ಕಾಣಬಹುದು. ಇದರ ಮುಖಾಂತರ ತಮ್ಮ ಆರ್ಥಿಕ ಪ್ರಗತಿಯನ್ನು ಸುಧಾರಿಸಿಕೊಂಡಿರುವುದನ್ನು ನಾವಿಲ್ಲಿ ಮನಗಾಣಬಹುದು.

ಗ್ರಾಮದಲ್ಲಿ ಮೊದಲಿನಿಂದಲೂ ವಿಪುಲವಾದ ಮೌಖಿಕ ಸಾಹಿತ್ಯದ ರಾಶಿಯನ್ನು ಕಾಣಬಹುದು. ತಮ್ಮ ದಿನನಿತ್ಯ ಜೀವನದ ಬಗ್ಗೆ, ವಿವಿದ ದೈವಗಳ ಬಗ್ಗೆ, ಆಚರಣೆಗಳ ಬಗ್ಗೆ ಇವರು ಮೌಖಿಕ ಸಾಹಿತ್ಯದಲ್ಲಿ ಸೆರೆಹಿಡಿದಿರುವುದನ್ನು ಕಾಣಬಹುದು. ಕೆಲಸದ ಹಾಡುಗಳು, ಹಬ್ಬದ ಹಾಡುಗಳು, ಜೀವನದ ಮುಖ್ಯ ಘಟ್ಟಗಳಲ್ಲಿ, ಜೋಗುಳದ ಹಾಡುಗಳು, ಕುಣಿತದ ಹಾಡುಗಳು, ದೇವರ ಸ್ತುತಿಸುವ ಹಾಡುಗಳು, ಜನಪದ ಕಥೆಗಳು, ಗಾದೆಗಳು, ಒಗಟುಗಳು ಮುಂತಾದ ಮೌಖಿಕ ಸಾಹಿತ್ಯದ ಪ್ರಕಾರಗಳ ಸಮ್ಮಿಲನವನ್ನು ನಾವಿಲ್ಲಿ ಕಾಣಬಹುದು. ಈ ಸಾಹಿತ್ಯದ ಪ್ರಕಾರಗಳನ್ನು ದಾಖಲಿಸಿ ಕೃತಿ ರೂಪದಲ್ಲಿ ಹೊರತರುವ ಜರೂರು ಕಾರ್ಯ ಆಗಬೇಕಿದೆ.

ಅಧ್ಯಯನದ ಫಲಿತಗಳು

ಪ್ರಸ್ತುತ ಈ ಮಹಾಪ್ರಬಂಧದ ಅಧ್ಯಯನದಲ್ಲಿ ಹಾಗೂ ಕ್ಷೇತ್ರಕಾರ್ಯದ ಎಲ್ಲಾ ಹೇಳಿಕೆಗಳನ್ನು ವಿವಿಧ ದೃಷ್ಟಿಕೋನದಿಂದ ಪರಿಶೀಲನೆಗೆ ಒಳಪಡಿಸಿದಾಗ ನಾನು ಕಂಡುಕೊಂಡ ಅಧ್ಯಯನದ ಫಲಿತಗಳ ವಿವರಣೆ ಹೀಗಿದೆ;

* ಹ್ಯಾರಡಾ ಗ್ರಾಮವು ಚಾರಿತ್ರಿಕವಾದ ಹಿನ್ನೆಲೆಯನ್ನು ಹೊಂದಿರುವುದರಿಂದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

* ಇಲ್ಲಿ ಗ್ರಾಮೀಣ ಜನಪದರು ವಿಶಿಷ್ಟ ಸಾಮಾಜಿಕ ಜೀವನ ಸಂರಚನೆಯನ್ನು ಹೊಂದಿರುವುದರಿಂದ ಅದರ ಹಿನ್ನೆಲೆಯಲ್ಲಿ ಆಹಾರ ಪದ್ದತಿ, ವಸತಿ, ಕುಟುಂಬ ಪದ್ಧತಿ, ಉಡುಗೆ-ತೊಡುಗೆ, ವೃತ್ತಿ, ಕ್ರೀಡೆಗಳು, ವೈದ್ಯ-ವಿದ್ಯೆ ಮುಂತಾದ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿ ಇಲ್ಲಿಯ ಜನರ ನೈತಿಕತೆಯ ಮಟ್ಟವನ್ನು ಅರಿಯಲಾಗಿದೆ.

* ಹ್ಯಾರಡಾ ಗ್ರಾಮೀಣ ಜನಪದರ ಕ್ರೀಡೆಗಳ ಹಿನ್ನೆಲೆಯನ್ನು ತಿಳಿದುಕೊಳ್ಳುವುದರ ಮೂಲಕ ಈ ಕ್ರೀಡೆಗಳು ಇಂದು ಕಣ್ಮರೆಯಾಗುತ್ತಿರುವುದನ್ನು ತಿಳಿಯಬಹುದು.

* ಕೃಷಿಯಲ್ಲಿ ಸಾಂಪ್ರದಾಯಿಕ ಪದ್ದತಿ ಕಣ್ಮರೆಯಾಗಿ ಯಾಂತ್ರೀಕೃತ ಪದ್ದತಿಯು ಹೆಚ್ಚು ಮುನ್ನೆಲೆಗೆ ಬಂದಿದೆ.

* ಉಡುಗೆ-ತೊಡುಗೆಯಲ್ಲಿ ಗ್ರಾಮವು ಹೆಚ್ಚು ಆಧುನಿಕತೆಗೆ ತೆರೆದುಕೊಳ್ಳುತ್ತಿದೆ.

* ಹ್ಯಾರಡಾ ಗ್ರಾಮದ ಜನಪದರ ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಆಚರಣೆಗಳು ವಿಶಿಷ್ಟವಾಗಿ ಕಂಡುಬಂದಿವೆ.

* ಗ್ರಾಮವು ಮೊದಲಿಗಿಂತಲೂ ಪ್ರಸ್ತುತ ಶೈಕ್ಷಣಿಕ ಸ್ಥಿತಿಗತಿಯಲ್ಲಿ ಹೆಚ್ಚು ಸುಧಾರಣೆಯನ್ನು ಕಂಡುಕೊಂಡಿದೆ.

* ಇತ್ತೀಚಿಗೆ ಗ್ರಾಮದಲ್ಲಿ ಕೆಳವರ್ಗದ ಸಮುದಾಯಗಳು ಸ್ಥಳೀಯ ಸಕ್ರಿಯ ರಾಜಕಾರಣದಲ್ಲಿರುವುದನ್ನು ನೋಡಬಹುದು.

* ಆಧುನಿಕತೆಯ ಪರಿಣಾಮದಿಂದ ಗ್ರಾಮದಲ್ಲಿ ಕೃಷಿಯಲ್ಲಿ ನಾವೀನ್ಯತೆಯನ್ನು ಕಂಡುಕೊಂಡು ಹೆಚ್ಚು-ಹೆಚ್ಚು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತಿದೆ.

* ಗ್ರಾಮದೇವತೆಯಾದ ಮಲಿಯಮ್ಮ ಗ್ರಾಮದ ಎಲ್ಲಾ ಸಮುದಾಯಗಳಿಗೆ ಜನಪ್ರಿಯ ಸ್ತ್ರೀ ದೈವವಾಗಿದ್ದು, ಅಪಾರ ಪ್ರಮಾಣದ ಭಕ್ತ ಸಮೂಹವನ್ನು ಹೊಂದಿದೆ.

* ಜಾತ್ರೆಯ ದಿನ ಜರುಗುವ ಹುಲ್ಸು ಹೊಡೆಯುವುದು. ಗಾಗುರಿ ಸೀಯುವುದರ ಹಿಂದಿನ ಉದ್ದೇಶಗಳನ್ನು ತಿಳಿಯಬಹುದು.

* ಸಂಗಮೇಶ್ವರನ ಕೆಂಡ ಹಾಯುವ ಉದ್ದೇಶದ ಹಿನ್ನೆಲೆಯು ತಿಳಿಯುತ್ತದೆ.

* ಗ್ರಾಮ ದೇವತೆಯಾದ ಮಲಿಯಮ್ಮ ಹಾಗೂ ಗ್ರಾಮದ ಇತರ ದೈವಗಳೊಂದಿಗಿನ ಸಹಸಂಬಂಧ ತಿಳಿಯುತ್ತದೆ.

* ಅಲ್ಲಾವುದ್ದೀನ್ ಪವಾಡ ಪುರುಷನಾಗಿದ್ದು, ಅಂದಿನ ಕೆಳವರ್ಗದ ಜನರ ಧ್ವನಿಯಾಗಿದ್ದನು.

* ಗ್ರಾಮದ ಜನಪದರು ವಿವಿದ ದೈವಗಳೊಂದಿಗಿನ ಅವಿನಾಭಾವ ಸಂಬಂಧ ಹಾಗೂ ಇದರ ಮುಖೇನ ಸಾಮೂಹಿಕ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿರುವುದನ್ನು ಗಮನಿಸಬಹುದು.

* ಗ್ರಾಮದ ಮೌಖಿಕ ಸಾಹಿತ್ಯ, ಅದರಲ್ಲಿ ವಿಶೇಷವಾಗಿ ದೈವಗಳ ಬಗ್ಗೆ ಮೌಖಿಕ ಸಾಹಿತ್ಯವು ವಿಫುಲವಾಗಿದ್ದು ಇತ್ತೀಚಿಗೆ ಕಣ್ಮರೆಯಾಗುತ್ತಿದೆ.

* ಗ್ರಾಮೀಣ ಕಲೆಗಳಾದ ಭಜನೆ, ಕೋಲಾಟ, ಹಾಡುಗಳು ಹಾಗೂ ವಿಶಿಷ್ಟ ಕ್ರೀಡೆಗಳು ಕ್ಷೀಣಿಸುತ್ತಿವೆ.

* ಗ್ರಾಮದ ಐತಿಹಾಸಿಕ ಕೋಟೆಯು ನಾಶವಾಗಿ ಕಣ್ಮರೆಯಾಗುವ ಹಂತಕ್ಕೆ ಬಂದಿದೆ.

* ಗ್ರಾಮವು ಬಹುತೇಕವಾಗಿ ವಿವಿಧ ಘಟ್ಟಗಳಲ್ಲಿ ಭೌತಿಕ ಬದಲಾವಣೆಯನ್ನು ಕಂಡಿದೆ.

* ಗ್ರಾಮದ ವಿವಿಧ ದೈವಗಳ ದೇವಾಲಯಗಳು ಶಿಥಿಲಾವಸ್ಥೆವನ್ನು ಕಂಡಿವೆ.

* ಗ್ರಾಮವು ವಿವಿಧ ಕ್ಷೇತ್ರಗಳಲ್ಲಿ ಹಲವಾರು ಸ್ಥಿತ್ಯಂತರಗಳಿಗೆ ಒಳಪಟ್ಟು ಬದಲಾವಣೆಯನ್ನು ಕಂಡಿರುವುದು.

* ಗ್ರಾಮದಲ್ಲಿ ಶಿಷ್ಟ ಸಾಹಿತ್ಯವು ಅಷ್ಟೇನು ಪ್ರಗತಿಯನ್ನು ಕಂಡಿರುವುದಿಲ್ಲ.

ಮುಂದಿರುವ ಸಾಧ್ಯತೆಗಳು

* ಹ್ಯಾರಡಾ ಗ್ರಾಮದ ಕೋಟೆಯು ಚಾರಿತ್ರಿಕವಾದ ಹಿನ್ನೆಲೆಯನ್ನು ಹೊಂದಿರುವುದರಿಂದ ಸರ್ಕಾರದ ಪುರಾತತ್ವ ಇಲಾಖೆಯು ಕಾಳಜಿ ವಹಿಸುವುದು.

* ಮಲಿಯಮ್ಮ ದೇವಸ್ಥಾನದ ಮುಂದೆ ಬಹಳಷ್ಟು ಖಾಲಿ ಜಾಗವಿರುವುದರಿಂದ ಸಮುದಾಯ ಭವನವನ್ನು ನಿರ್ಮಾಣಮಾಡುವುದು ಸೂಕ್ತ.

* ಗ್ರಾಮದ ಹಲವಾರು ದೇವಾಲಯಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ಇವುಗಳನ್ನು ಜೀರ್ಣೋದ್ಧಾರ ಮಾಡುವುದು.

* ಹ್ಯಾರಡಾ ಗ್ರಾಮದಲ್ಲಿ ವಿಫುಲವಾದ ಮೌಖಿಕ ಸಾಹಿತ್ಯವಿರುವುದರಿಂದ ಅವುಗಳನ್ನು ರೆಕಾರ್ಡ್ ಮಾಡಿ ಸಂಗ್ರಹಿಸಿ ಮಸ್ತಕ ರೂಪದಲ್ಲಿ ಹೊರತರುವುದು ಸೂಕ್ತ.

* ಮಲಿಯಮ್ಮ ದೇವಾಲಯದ ಮುಂದೆ ಖಾಲಿ ಜಾಗವಿರುವುದರಿಂದ ಸೂಕ್ತವಾದ ಪಾರ್ಕ್(ಹೂದೋಟ) ನಿರ್ಮಿಸುವುದು ಸೂಕ್ತವಾಗಿದೆ.

* ಗ್ರಾಮದಲ್ಲಿ ಸಾಂಪ್ರದಾಯಿಕ ಕೃಷಿಯ ಬದಲು ಆಧುನಿಕ ತಂತ್ರಜ್ಞಾನಗಳ ಬಳಕೆ ಮಾಡುವುದು ಅವಶ್ಯಕವಾಗಿದೆ.

* ಗ್ರಾಮದೇವತೆಯಾದ ಮಲಿಯಮ್ಮನ ಜಾತ್ರೆಯಲ್ಲಿ ಹಗಲಿರುಳೂ ಶ್ರಮಿಸುವ ಪ್ರಮುಖ ಆಯಗಾರ ಸಮುದಾಯಗಳಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವುದು.

* ಪ್ರಮುಖ ದೇವಾಲಯಗಳಿಗೆ ಹೈಟೆಕ್ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡುವುದು.

* ಗ್ರಾಮದಲ್ಲಿ ಬಹಳಷ್ಟು ಜನರು ಸುಶಿಕ್ಷಿತರಿರುವುದರಿಂದ ಶಿಷ್ಟ ಸಾಹಿತ್ಯವು ಸೃಷ್ಟಿಯಾಗಲು ಹೈಟೆಕ್ ಸಾರ್ವಜನಿಕ ಗ್ರಂಥಾಲಯವನ್ನು ನಿರ್ಮಿಸುವುದು.

* ಗ್ರಾಮಕ್ಕೆ ಪಕ್ಕದ ಗ್ರಾಮಗಳಿಂದ ವಿದ್ಯಾಭ್ಯಾಸ ಮಾಡಲು ಬರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಸತಿ ನಿಲಯನ್ನು ನಿರ್ಮಿಸುವುದು.

* ಗ್ರಾಮದ ಜನಸಂಖ್ಯೆಯು ಹೆಚ್ಚಳವಾಗಿರುವುದರಿಂದ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯುವುದು.

ಅನುಬಂಧಗಳು

ಅನುಬಂಧ-೧

ವಕ್ತೃಗಳ ವಿವರ

ಕ್ರಸಂ.	ಹೆಸರು	ವೃತ್ತಿ	ಜಾತಿ	ವಯಸ್ಸು
೦೧	ಬಿಸೆಮುದ್ದಿ ಕೆಂಚಮ್ಮ	ಕೂಲಿ	ಕುರುಬ	೭೮
೦೨	ಬೇವಿನಕಟ್ಟಿ ಬಸವರಾಜಪ್ಪ	ವ್ಯವಸಾಯ	ವಾಲ್ಮೀಕಿ	೭೦
೦೩	ಕೆ. ಸುಕುಮಾರಪ್ಪ	ವ್ಯಾಪಾರಿ	ಜೈನ	೮೦
೦೪	ಬರಡಿ ದುರುಗಮ್ಮ	ಕೂಲಿ	ಕುರುಬ	೬೫
೦೫	ಬರಡಿ ಗುಡ್ಡಪ್ಪ	ವ್ಯವಸಾಯ	ಕುರುಬ	೩೧
೦೬	ಕಂಬಳಿ ಹನುಮಂತಪ್ಪ	ವ್ಯವಸಾಯ	ಕುರುಬ	೩೪
೦೭	ಬರಡಿ ಬಸವಲಿಂಗಪ್ಪ	ವ್ಯವಸಾಯ	ಕುರುಬ	೪೫
೦೮	ಹೆಚ್.ಎಂ. ಕೊಟ್ರಯ್ಯ	ಶಿಕ್ಷಕ	ಜಂಗಮ	೪೮
೦೯	ಚಕ್ರಸಾಲಿ ಸಂಗಪ್ಪ	ವ್ಯವಸಾಯ	ಕುಂಬಾರ	೫೫
೧೦	ಪಿ.ಚಮನ್ ಸಾಬ್	ಕಲಾವಿದರು	ಮುಸ್ಲಿಂ	೫೦
೧೧	ಕೆ.ರಂಗಜ್ಜ	ವ್ಯವಸಾಯ	ಕುರುಬ	೭೦
೧೨	ಸಣ್ಣೀಲಪ್ನರ ನಾಗಮ್ಮ	ಗೃಹಿಣಿ	ಕುರುಬ	೫೫
೧೩	ಕಡತಿ ಬಸಮ್ಮ	ಗೃಹಿಣಿ	ಕುರುಬ	೪೫
೧೪	ಬಾಗಳಿ ಮಲಿಯಮ್ಮ	ವ್ಯವಸಾಯ	ಕುರುಬ	೬೫
೧೫	ಶಾಂತರಾಜ್. ಜೈನ್	ವ್ಯಾಪಾರಿ	ಜೈನ	೨೯
೧೬	ನಿಂಗನಗೌಡ ಬುಡುಗೌಡ್ರ	ಉಪನ್ಯಾಸಕ	ಗೊಲ್ಲ	೩೪
೧೭	ಹರ್ವಿ ಉಜ್ಜಪ್ಪ	ಪೋಲಿಸ್	ಲಿಂಗಾಯತ	೩೪
೧೮	ರಮೇಶ ಗೊರವರ	ಶಿಕ್ಷಕ	ಕುರುಬ	೩೨
೧೯	ಆನಂದ ಬಾರ್ಕಿ	ಉಪನ್ಯಾಸಕ	ಬೆಸ್ತರು	೪೫
೨೦	ಕುಂಚೂರು ಅಂಜಿನಪ್ಪ	ವ್ಯವಸಾಯ	ವಾಲ್ಮೀಕಿ	೫೫

೨೧	ಕಟಿಗೇರ ಲಕ್ಷ್ಮಪ್ಪ	ವ್ಯವಸಾಯ	ವಾಲ್ಮೀಕಿ	೭೦
೨೨	ಬತ್ತಿ ಕೆಂಚಪ್ಪ	ಪೋತರಾಜ	ವಾಲ್ಮೀಕಿ	೭೦
೨೩	ಬತ್ತಿ ನಿಂಗಪ್ಪ	ವ್ಯವಸಾಯ	ವಾಲ್ಮೀಕಿ	೩೪
೨೪	ಡಿಳ್ಳೆಪ್ಪ	ಕರವಸೂಲಿಗಾರ	ಕುರುಬ	೪೦
೨೫	ಬಣಕಾರ ಜಯಪ್ಪ	ವ್ಯವಸಾಯ	ಲಿಂಗಾಯತ	೬೦
೨೬	ಭೀಮಕ್ಕನವರ ಬಸವರಾಜ	ಯುವ ಮುಖಂಡ	ಆದಿಕರ್ನಾಟಕ	೩೨
೨೭	ಅರ್ಕಾಚಾರಿ ಕುಮಾರ	ಪೋಟೋಗ್ರಾಫರ್	ವಿಶ್ವಕರ್ಮ	೩೪
೨೮	ಪ್ರಕಾಶ ಹರ್ವಿ	ರಾಜಕೀಯ ಮುಖಂಡ	ಲಿಂಗಾಯತ	೬೦
೨೯	ಬರಡಿ ನಾಗರಾಜ	ರಾಜಕೀಯ ಮುಖಂಡ	ಕುರುಬ	೪೧
೩೦	ಸಣ್ಣೀಲಪ್ನರ ಹನುಮಂತಪ್ಪ	ರಾಜಕೀಯ ಮುಖಂಡ	ಕುರುಬ	೪೫
೩೧	ಬಿ. ವಿನೋದ ಕುಮಾರಿ	ಶಿಕ್ಷಕಿ	ವಿಶ್ವಕರ್ಮ	೫೦
೩೨	ಎ.ಎಸ್. ಗುಡಗೂರ್	ಶಿಕ್ಷಕ	ಲಿಂಗಾಯತ	೪೨
೩೩	ಪ್ರಕಾಶ್. ಹೆಚ್.	ಶಿಕ್ಷಕ	ಲಿಂಗಾಯತ	೫೦
೩೪	ಹೊನ್ನಪ್ಪ. ಹೆಚ್.ಎಲ್.	ಶಿಕ್ಷಕ	ಲಿಂಗಾಯತ	೫೫
೩೫	ಶಿವಪ್ಪ ಭಂಗಿ	ಶಿಕ್ಷಕ	ಬೆಸ್ತರು	೪೭
೩೬	ಮಾನಜ್ಜ	ಸ್ವಾಮಿಗಳು	ಕಮ್ಮಾರ	೬೦
೩೭	ಚಂದ್ರಪ್ಪ ಸುಣಗಾರ	ಹೈಸ್ಕೂಲ್ ಶಿಕ್ಷಕ	ವಾಲ್ಮೀಕಿ	೫೫
೩೮	ಸೆಟ್ಟೆಮ್ಮನರ ಕೆಂಚಮ್ಮ	ಕೂಲಿ	ಕರುಬ	೭೫
೩೯	ಬಣಕಾರ ಸಂಗಪ್ಪ	ರಾಜಕೀಯ ಮುಖಂಡ	ಲಿಂಗಾಯತ	೫೫
೪೦	ಕರ್ಜಗಿ ನಾಗಪ್ಪ	ರೈತ ಮುಖಂಡ	ಲಿಂಗಾಯತ	೪೨
೪೧	ಕೆ. ಬಾಹುಬಲಿ	ಯುವ ಮುಖಂಡ	ಜೈನ್	೪೨
೪೨	ಕೆ. ಶಕುಂತಲಮ್ಮ	ಗೃಹಿಣಿ	ಜೈನ್	೬೦
೪೩	ಬಾವಿ ಭೀಮಪ್ಪ	ವ್ಯವಸಾಯ	ಕುರುಬ	೪೮
೪೪	ಅಮಿತ್ ಜೈನ್	ವ್ಯಾಪಾರಿ	ಜೈನ್	೨೫
೪೫	ಕೆ. ಸುರೇಂದ್ರನಾಥ್	ವ್ಯಾಪಾರಿ	ಜೈನ್	೪೫
೪೬	ಚಂದ್ರನಾಥ.ಕೆ.	ವ್ಯಾಪಾರಿ	ಜೈನ್	೪೮
೪೭	ಸಣ್ಣೀಲಪ್ನರ ಜಾನಕಿ	ಗೃಹಿಣಿ	ಕುರುಬ	೨೮
೪೮	ಸಣ್ಣೀಲಪ್ನರ ಜಯಶೀಲ	ಗೃಹಿಣಿ	ಕುರುಬ	೨೬
೪೯	ಸಣ್ಣೀಲಪ್ನರ ಪವಿತ್ರ	ಗೃಹಿಣಿ	ಕುರುಬ	೨೪
೫೦	ಮಾಚಿಹಳ್ಳಿ ಸೋಮಣ್ಣ	ವ್ಯಾಪಾರಿ	ಗೊಲ್ಲ	೭೦

೫೧	ಕೃಷ್ಣಗೌಡ.ಬಿ.	ಗ್ರಂಥಪಾಲಕ	ಗೊಲ್ಲ	೪೯
೫೨	ಬಸವಕುಮಾರ ಸುಣಗಾರ	ಎಸ್.ಡಿ.ಎಮ್.ಸಿ.ಅಧ್ಯಕ್ಷ	ವಾಲ್ಮೀಕಿ	೩೪
೫೩	ನಾಗಭೂಷಣ.ಜೆ.ಹೆಚ್.ಎಂ.	ಕಲಾವಿದರು	ಜಂಗಮ	೩೩
೫೪	ಕೋಟೆಪ್ಪ ವಳ್ಳರ	ಪಶು ಚಿಕಿತ್ಸಾಲಯ ಇಲಾಖೆ	ಕುರುಬ	೨೮
೫೫	ಮಂಜುನಾಥ ನಾಯ್ಕರ	ಶಿಕ್ಷಕ	ಲಿಂಗಾಯಾತ	೩೫
೫೬	ಗುಡ್ಡಪ್ಪ ಬಡ್ಡಿ	ಶಿಕ್ಷಕ	ಕುರುಬ	೩೪
೫೭	ಜಿ.ರಾಮಕೃಷ್ಣ ಗೌಡರ್	ಶಿಕ್ಷಕ	ಗೊಲ್ಲ	೪೪
೫೮	ಹೆಚ್.ಎಂ. ರಾಜಶೇಖರಯ್ಯ	ವ್ಯವಸಾಯ	ಜಂಗಮ	೫೮
೫೯	ಹೆಚ್.ಎಂ.ಚನ್ನಬಸಯ್ಯ	ಪಂಚಾಂಗ ಪಠಣ	ಜಂಗಮ	೨೫
೬೦	ಸಣ್ಣೀಲಪ್ನರ ಚಿಕ್ಕಪ್ಪ	ಬಿ.ಎಂ.ಟಿ.ಸಿ. ನೌಕರ	ಕುರುಬ	೩೮
೬೧	ಹಳ್ಳಿ ಗೋಣೆಪ್ಪ	ಪ್ರಜ್ಞಾವಂತ ಯುವ ವೇದಿಕೆ ಅಧ್ಯಕ್ಷ	ವಾಲ್ಮೀಕಿ	೩೪
೬೨	ಕಂಬಳಿ ನೀಲಪ್ಪ	ಹಾಡುಗಾರ	ಕುರುಬ	೩೪
೬೩	ಬೇವಿನಕಟ್ಟಿ ಚಿನ್ನಮ್ಮ	ಗ್ರಾ.ಪಂ. ಸದಸ್ಯರು	ವಾಲ್ಮೀಕಿ	೫೫
೬೪	ತೇಜಮ್ಮನವರ ನೀಲಮ್ಮ	ಬಿಸಿಯೂಟ ನೌಕರರು	ಕುರುಬ	೫೫
೬೫	ಮಲ್ಲಪ್ಪನವರ ಬಸಪ್ಪ	ಮುಖಂಡರು	ವಾಲ್ಮೀಕಿ	೬೦
೬೬	ಕಂಬಳಿ ತಿಪ್ಪವ್ವ	ವ್ಯವಸಾಯ	ಕುರುಬ	೫೪
೬೭	ಹೌಸಿ ಸಿದ್ದೇಶ್ವರ	ವೈದ್ಯರು	ಲಿಂಗಾಯತ	೩೪
೬೮	ದೇವರಾಜ ಸಣ್ಣೀಲಪ್ನರ	ವ್ಯಾಪಾರಿ	ಕುರುಬ	೨೮
೬೯	ಹರ್ವಿ ಶಿವಕುಮಾರ	ಶಿಕ್ಷಕ	ಲಿಂಗಾಯತ	೩೮
೭೦	ಕೊಟ್ರೇಶಪ್ಪ ನಡುವಿನಹಳ್ಳಿ	ವ್ಯಾಪಾರಿ	ಲಿಂಗಾಯತ	೩೩
೭೧	ಹೆಚ್.ಎಂ.ಹೇಮಯ್ಯ	ನಿ.ಶಿಕ್ಷಕರು	ಜಂಗಮ	೭೫
೭೨	ಸಣ್ಣಪ್ಪ ಹರ್ವಿ	ನಿ. ಶಿಕ್ಷಕರು	ಲಿಂಗಾಯತ	೭೫
೭೩	ಬೀರಪ್ಪ ಕಡತಿ	ವ್ಯವಸಾಯ	ಕುರುಬ	೫೫
೭೩	ನಿಂಗಪ್ಪ ಸಣ್ಣೀಲಪ್ನರ	ವ್ಯವಸಾಯ	ಕುರುಬ	೭೦
೭೪	ಗೋವಿಂದಪ್ಪ, ಹೆಚ್.	ಶಿಕ್ಷಕರು	ವಿಶ್ವಕರ್ಮ	೪೯
೭೫	ಓಬ್ಯಾ ಸಾಹೇಬ್	ವೈದ್ಯರು	ಮುಸ್ಲಿಂ	೪೯
೭೬	ಚುಚ್ಚಿಗೇರಿ ಪಕ್ಕೀರಮ್ಮ	ತಾ.ಪಂ.ಸದಸ್ಯರು	ಕುರುಬ	೫೦
೭೭	ಚುಚ್ಚಿಗೇರಿ ನೀಲಪ್ಪ	ಯುವ ಮುಖಂಡರು	ಕುರುಬ	೩೨
೭೮	ಚಿಗರಿ ಮಹೇಶ	ಗ್ರಾ.ಪಂ.ಸದಸ್ಯರು	ವಾಲ್ಮೀಕಿ	೩೫

೭೯	ಚಕ್ರಸಾಲಿ ಹೊಳಿಯಪ್ಪ	ಕಲಾವಿದರು ಮತ್ತು ಹಾಡುಗಾರ	ಕುಂಬಾರ	೫೦
೮೦	ಕಿಚಡಿ ತಿರುಕಪ್ಪ	ಭಜನಾ ಮಾಸ್ತರರು	ಕುರುಬ	೫೦
೮೧	ಗದುಗಿನ ಯಲ್ಲಮ್ಮ	ಗೃಹಿಣಿ	ಕುರುಬ	೭೩
೮೨	ಗದುಗಿನ ಪಕ್ಕೀರಮ್ಮ	ವ್ಯವಸಾಯ	ಕುರುಬ	೫೫
೮೩	ಬೂದೆಪ್ಪನರ ಹೊನ್ನಮ್ಮ	ವ್ಯವಸಾಯ	ಕುರುಬ	೬೫
೮೪	ಭೀಮಕ್ಕನವರ ಮಾಯಮ್ಮ	ಕೂಲಿ	ಆದಿಕರ್ನಾಟಕ	೬೫
೮೫	ದಡಾರಮ್ಮ	ಕೂಲಿ	ಆದಿಕರ್ನಾಟಕ	೬೫
೮೬	ಸುಣಗಾರ ಹಾಲಮ್ಮ	ಗೃಹಿಣಿ	ವಾಲ್ಮೀಕಿ	೬೦
೮೭	ಕಿಚಡಿ ಬಸವಣೆಮ್ಮ	ಗೃಹಿಣಿ	ಕುರುಬ	೫೦
೮೮	ಕತ್ತೆಬೆನ್ನೂರ ಮಾಯಮ್ಮ	ವ್ಯವಸಾಯ	ಕುರುಬ	೪೮
೮೯	ಸಂದಿಮನಿ ರಾಜಪ್ಪ	ವ್ಯವಸಾಯ	ವಾಲ್ಮೀಕಿ	೩೩
೯೦	ಹಳ್ಳಿ ಸುರೇಶ	ವ್ಯವಸಾಯ	ವಾಲ್ಮೀಕಿ	೩೫
೯೧	ಹಾವನೂರು ಜಗದೀಶ	ವ್ಯವಸಾಯ	ಬೆಸ್ತರು	೩೪
೯೨	ಗುಡ್ಡಾಣಿ ರವಿ	ವ್ಯವಸಾಯ	ಕುರುಬ	೨೮
೯೩	ಬೆಂಡಿಗೇರಿ ಮಂಜುನಾಥ	ವ್ಯವಸಾಯ	ಕುರುಬ	೩೬
೯೪	ಗುಮಾನಿ ಶಂಕ್ರಪ್ಪ	ವ್ಯವಸಾಯ	ವಾಲ್ಮೀಕಿ	೪೫
೯೫	ಬಾರ್ಕಿ ಸೋಮಣ್ಣ	ವ್ಯವಸಾಯ	ಬೆಸ್ತರು	೫೫
೯೬	ಹಳ್ಳಿ ಬಸಪ್ಪ	ವ್ಯವಸಾಯ	ವಾಲ್ಮೀಕಿ	೪೫
೯೭	ಮುಸುರಿ ಸಿದ್ದಪ್ಪ	ವ್ಯವಸಾಯ	ಕುರುಬ	೩೩
೯೮	ಗಣೇಶ ಬೇವಿನಕಟ್ಟಿ	ಉದ್ಯಮ	ಹಡಪದ	೨೮
೯೯	ಶಿವಮೂರ್ತಿಸ್ವಾಮಿ	ಉದ್ಯಮ	ಹಡಪದ	೨೫
೧೦೦	ರೇಷ್ಮ ಕಡತಿ	ಗೃಹಿಣಿ	ಕುರುಬ	೨೧
೧೦೧	ಹೊನ್ನಪ್ಪ	ಬೇಕರಿ ವ್ಯಾಪಾರಿ	ವಾಲ್ಮೀಕಿ	೩೦
೧೦೨	ಯಲ್ಲಪ್ಪ ಬಿದರಳ್ಳಿ	ಡಾಟಾ ಆಪರೇಟರ್	ಗಾಣಿಗರು	೪೦

ಅನುಬಂಧ ೨ : ಸಾಂಸ್ಕೃತಿಕ ಪದಕೋಶಗಳು

೦೧ ಕಾನನ–ಅರಣ್ಯ

೦೨ ನೆಡುತೋಪು–ಹೊಸ ಹೂ ಗಿಡಗಳನ್ನು ಬೆಳೆಸುವುದು.

೦೩ ಕುಲುಮೆ–ಕಬ್ಬಿಣವನ್ನು ಮೆದುಗೊಳಿಸುವ ಸ್ಥಳ.

೦೪ ಕುಕ್ಕಿ–ಎತ್ತುಗಳ ಬಾಯಿಗೆ ಹಾಕುವ ವಸಲಕರಣೆ.

೦೫ ಕಣಶಿಲೆ–ಒಂದು ಬಗೆಯ ಕಲ್ಲು.

೦೬ ಕಸುಬು–ಕೆಲಸ, ವೃತ್ತಿ.

೦೭ ಮೇಲುಮುದ್ದಿ–ಮರದ ರೆಂಬೆ ಕೊಂಬೆಗಳನ್ನು ಹರಡಿ ಮೇಲೆ ಮಣ್ಣನ್ನು ಹಾಕುವುದು.

೦೮ ಹುಸಿ–ಮನೆಯಲ್ಲಿ ಎಲ್ಲರೂ ಕುಳಿತುಕೊಳ್ಳುವ ಸ್ಥಳ.

೦೯ ಸಸ್ಯಜನ್ಯ–ಸಸ್ಯಮೂಲ.

೧೦ ಕೊಣಬಿಗಿ–ಹಿಟ್ಟನ್ನು ಹದಗೊಳಿಸಲು ಬಳಸುವ ವಸ್ತು.

೧೧ ನಾದುವುದು–ಮೃದುಗೊಳಿಸುವುದು.

೧೨ ಕಟ್ಟಿನ ಸಾಂಬಾರು–ಹೋಳಿಗೆ ಸಾಂಬಾರು.

೧೩ ತಂಬಳಿ–ಶೇಂಗಾದಿಂದ ತಯಾರಿಸಿದ ಸಾಂಬಾರು.

೧೪ ಅಂಬಲಿ–ಜೋಳದಿಂದ ತಯಾರಿಸದ ಆಹಾರ.

೧೫ ಕಪ್ಪು ಮಂದಿ–ಕೆಳವರ್ಗದ ಜನರು.

೧೬ ಹುರಕಡ್ಲಿ–ಪುಟಾಣಿ.

೧೭ ಜಲ್ಡಿ–ಧಾನ್ಯಗಳನ್ನು ಸೋಸುವ ವಸ್ತು

೧೮ ಕರಿಹಬ್ಬ–ಮಾಂಸದ ಊಟ ಹೊಂದಿದ ಹಬ್ಬ.

೧೯ ಕಿಟ್ಟ–ತ್ಯಾಜ್ಯ.

೨೦ ತೀಕೆ ಸರ–ಬಂಗಾರದ ಗುಂಡಿನಿಂದ ಮಾಡಿದ ಸರ.

೨೧ ಕಡಪ್ನಹರಳು–ಗಂಡಸರು ಕಿವಿಯಲ್ಲಿ ಧರಿಸುವ ಆಭರಣ.

೨೨ ಗುನ್ನ–ಹೊಡೆತ.

೨೩ ತುರುಬೆ ಗಿಡ–ಸ್ಥಳೀಯವಾಗಿ ಸಿಗುವ ಒಂದು ಬಗೆಯ ಸಸ್ಯ

೨೪ ರೊಕ್ಕ–ಹಣ.

೨೫ ತತ್ರಾಣಿ–ನೀರು ಶೇಖರಿಸುವ ಮಡಿಕೆ ಸಾಧನ.

೨೬ ಸೂಲಗಿತ್ತಿ–ಹೆರಿಗೆಯನ್ನು ಮಾಡಿಸುವ ಹಳ್ಳಿ ಮಹಿಳೆ.

೨೭ ಕುಂಚಿಗಿ– ಮಗುವಿನ ತಲೆಗೆ ಹಾಕುವ ಒಂದು ವಸ್ತ್ರ.

೨೮ ಕೊಬ್ಬರಿಕಾರ–ಬೆಲ್ಲ, ಕೊಬ್ಬರಿ,ಉತ್ತತ್ತಿಯಿಂದ ತಯಾರಿಸಿದ ವಿಶೇಷ ಸಿಹಿತಿನಿಸು.

೨೯ ಹಟ್ಟಿ ಹಬ್ಬ–ದೀಪಾವಳಿ.

೩೦ ಹಗೇವು–ಧಾನ್ಯ ಶೇಖರಿಸುವ ಸ್ಥಳ.

೩೧ ಜೂಲ–ಎತ್ತುಗಳಿಗೆ ಹಾಕುವ ಅಲಂಕಾರಿಕ ವಸ್ತು.

೩೨ ಖಂಡೆ ಪೂಜೆ–ಆಯುಧ ಪೂಜೆ.

೩೩ ಪೀರ್ಲ ಹಬ್ಬ–ಮೊಹರಂ.

೩೪ ಕುಂಬಿ–ಕಟ್ಟಡದ ಮೇಲ್ಭಾಗ.

೩೫ ಪಾದುಕೆ–ಪಾದರಕ್ಷೆ.

೩೬ ಹರೆಮರಿ–ಬಲಿ ಕೊಡಲು ಸಿದ್ಧವಾದ ಕುರಿ ಮರಿ.

೩೭ ಗಳೇವು–ಎರಡು ಎತ್ತಿನಿಂದ ಕೃಷಿ ಮಾಡುವುದು.

೩೮ ದೈವ–ದೇವರು.

೩೯ ಅಂಕೆಗೆ ಹಾಕುವುದು–ಮಿತ ಆಹಾರ ಸೇವನೆ.

೪೦ ಗಟ್ಟಿಮನೆ–ಜಾತ್ರೆಯ ಬಿಡುವಿನ ದಿನದಲ್ಲಿ ದೇವತೆಯ ಮೂರ್ತಿಯನ್ನು ಇಡುವ ಸ್ಥಳ.

೪೧ ಆಯಗಾರರು–ವಿವಿಧ ರೀತಿಯ ವೃತ್ತಿಯಾಧಾರಿತ ಕೆಲಸ ಮಾಡುವವರು.

೪೨ ಕಣುಕ–ಗೋಧಿ ಹಿಟ್ಟನ್ನು ನೀರಿನಿಂದ ಮಿಶ್ರಣ ಮಾಡಿದ ಪದಾರ್ಥ.

೪೩ ಜಗುಲಿ–ದೇವರ ಮೂರ್ತಿಯನ್ನು ಇಡುವ ಜಾಗ.

೪೪ ಒಪ್ಪತ್ತು–ದಿನವಿಡೀ ಆಹಾರ ಸೇವಿಸದೇ ಇರುವುದು.

೪೫ ರೆಂಪಿಗೆ–ಚರ್ಮವನ್ನು ಕತ್ತರಿಸುವ ಸಾಧನ.

೪೬ ಹುಲ್ಸು–ಬಲಿಯಾದ ಕೋಣದ ಯಕೃತ್ ಹಾಗೂ ಬೇಯಿಸಿದ ಜೋಳದ ಮಿಶ್ರಣ.

೪೭ ಗಂಡುಗೊಡಲಿ–ಹರೆಮರಿಯನ್ನು ಕತ್ತರಿಸುವ ಸಾಧನ.

೪೮ ಗಾವುಗುರಿ–ಜೀವಂತ ಹುಗಿಯುವ ಕುರಿಮರಿ.

೪೯ ಗಾಗುರಿ ಮಲ್ಡಿ–ಹ್ಯಾರಡಾದ ಬೆಟ್ಟದ ಹೆಸರು.

೫೦ ಫಸಲು–ಬೆಳೆ.

೫೧ ಚೌಡಿಕಟ್ಟೆ–ಹ್ಯಾರಡಾ ಗ್ರಾಮದ ಪ್ರಮುಖ ಬೀದಿ.

೫೨ ಕುರುಬ ಗೌಡ–ಕುರುಬರ ಮುಖ್ಯಸ್ಥ.

೫೩ ಡಂಗೂರ–ಹಲಗೆ ನಾದ.

೫೪ ಕಾಯಿಕೊಲು–ದೇವರ ಮುಂಭಾಗ ಹಿತ್ತಾಳೆಯ ಉದ್ದನೆಯ ಸಾಧನಕ್ಕೆ ಬಟ್ಟೆ ಸುತ್ತಿ ಅದಕ್ಕೆ ಎಣ್ಣೆ ಹಾಕಿ ಉರಿಯುವಂತೆ ಮಾಡುವ ಸಾಧನ.

೫೫ ಉಚಯ್ಯ–ಉತ್ಸವದ ರಥ.

೫೬ ಅಟವಾಳಿಗೆ–ಮಣ್ಣಿನಿಂದ ಮೇಲು ಹೊದಿಕೆಯ ಮನೆ.

೫೭ ಪಟ–ನಿಶಾನೆ.

೫೮ ಅಂತರಗಾಯಿ–ತೆಂಗಿನಕಾಯಿ.

೫೯ ಪಾದಗಟ್ಟಿ–ಪಾದುಕೆಗಳ ಚಿತ್ರವನ್ನು ಹೊಂದಿರುವ ಸ್ಥಳ

೬೦ ಗೊಂಗಡಿ–ಕಂಬಳಿ.

೬೧ ಅಲಗು–ಕಬ್ಬಿಣದ ಸಲಾಕೆ.

೬೨ ಪಡಲಿಗೆ–ಯಲ್ಲಮ್ಮ ಜೋಗತಿಯರು ಬಳಸುವ ಸಾಧನ.

೬೩ ಉಳ್ಳಾಗಡ್ಡಿ–ಈರುಳ್ಳಿ.

೬೪ ಬ್ಯಾಟಿಯೂಟ–ಮಾಂಸದ ಊಟ.

೬೫ ನೆರಿಮನಿ–ನೆರೆಯ ಮನೆ.

೬೬ ತ್ರಾಸಪಡು–ಕಷ್ಟಪಡು.

೬೭ ಬಕ್ಕಣ–ಜೇಬು.

೬೮ ತ್ಯಾಪಿ–ಕಟ್ಟಡ ಕಟ್ಟುವಾಗ ಬಳಸುವ ಸಾಮಗ್ರಿ

೬೯ ಜವಾಬು–ಉತ್ತರ.

೭೦ ಜ್ವಾಳ–ಜೋಳ.

೭೧ ಪೋಟ–ಛಾಯಾಚಿತ್ರ

೭೨ ಹೊತ್ತಿಗಿ–ಪುಸ್ತಕ.

೭೩ ಉಂಬು–ಊಟ ಮಾಡು.

೭೪ ಜವುಳಿ–ಬಟ್ಟೆ

೭೫ ಗದ್ದಿ–ಗದ್ದೆ.

೭೬ ಮೋರೆ–ಮುಖ.

೭೭ ಬಾಲೇರು–ಹೆಣ್ಣುಮಕ್ಕಳು.

೭೮ ಚತ್ರಿಕಿ–ಛತ್ರಿ,ಕೊಡೆ.

೭೯ ಒಂದು ಪಲ್ಲ–ಒಂದು ಕ್ವಿಂಟಾಲ್ ಧಾನ್ಯದ ಚೀಲ.

೮೦ ಇರಿಬಿ–ಇರುವೆ.

೮೧ ದ್ವಾಸಿ–ದೋಸೆ.

೮೨ ತ್ವಾಳ–ತೋಳ.

೮೩ ಮ್ಯಾಕ–ಮೇಲೆ.

೮೪ ಈದ್ಯೆತಿ–ಪ್ರಾಣಿಗಳು ಮರಿಹಾಕುವುದು.

೮೫ ಅಕ್ಸಾಲಿ–ಅಕ್ಕಸಾಲಿಗ.

೮೬ ಕಡ್ಲಿ–ಶೇಂಗಾ.

೮೭ ಚಾಳೀಸು–ಕನ್ನಡಕ.

೮೮ ಜಡ್ಡು–ಖಾಯಿಲೆ.

೮೯ ಅರಿಬಿ–ಬಟ್ಟೆ.

೯೦ ಡೋರೆಗಾಯಿ–ಇತ್ತ ಹಣ್ಣು ಅಲ್ಲದ, ಇತ್ತ ಕಾಯಿ ಅಲ್ಲದ ಹಣ್ಣು.

೯೧ ವಡಕ ಗಡಿಗಿ–ಒಡೆದ ಮಡಿಕೆ.

೯೨ ಕೊಳಗ–ನೀರು ಶೇಖರಿಸುವ ವಸ್ತು.

೯೩ ದೌಳಾರು–ಶ್ರೀಮಂತರು.

೯೪ ಬವಿಕೆ–ಬಯಕೆ.

೯೫ ಜಲುಮ–ಜನುಮ, ಜನ್ಮ

೯೬ ಮಲ್ಡಿ–ಬೆಟ್ಟ, ಗುಡ್ಡ.

೯೭ ಕರುಣ–ಕರುಣೆ.

೯೮ ತಂದಿ–ತಂದೆ.

೯೯ ಶ್ರಾವಕ–ಪುರುಷ.

೧೦೦ ಶ್ರಾವಕಿ–ಸ್ತ್ರೀ.

ಅನುಬಂಧ –೩ : ಆಧಾರ ಗ್ರಂಥಗಳು

೧. ಬಸವರಾಜ ಸಬರದ, ಜಾನಪದ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೨. ಬಸವರಾಜು.ಬಿ.ಎಸ್, ಕಬ್ಬಾಳು : ಸಂಕಥನ, ಮಹಾ ಪ್ರಬಂಧ ಪ್ರಕಟಿತ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೭

೩. ಬಾಲಚಂದ್ರ ರಾವ್ ಎಸ್. ಸಂಪ್ರದಾಯ ವಿಜ್ಞಾನ ಮತ್ತು ಸಮಾಜ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೨

೪. ಚಿನ್ನಸ್ವಾಮಿ ಸೋಸಲೆ ಎನ್. ಪ್ರಾಚೀನ ಜೈನ ಕಾವ್ಯಗಳಲ್ಲಿ ಚಾರಿತ್ರಿಕ ಪ್ರಜ್ಞೆ , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೭

೫. ಚನ್ನಬಸವಯ್ಯ ಎಂ., ಭಾರತೀಯ ಹಿಂಧೂ–ಧರ್ಮದ ಆಚಾರ ವಿಚಾರಗಳು ಏಕೆ? ಏನು?, ಮಾರುತಿ ಪ್ರಕಾಶನ, ಬೆಂಗಳೂರು, ೨೦೧೧

೬. ಚಂದ್ರಶೇಖರ್ ಬಿ.ಎಸ್., ಸಂವಹನ ಮಾಧ್ಯಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩

೭. ದಿವಾಕರ ನಾ, ದಲಿತರು– ವಿಮೋಚನೆಯ ಹಾದಿ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೧೩

೮. ದಸ್ತಗೀರ್ ಅಲ್ಲೀಭಾಯಿ, ಮೊಹರಂ ಪದಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೪

೯. ದೇವಿಪ್ರಸಾದ ಚಟ್ಟೋಪಾಧ್ಯಾಯ, ಕನ್ನಡಕ್ಕೆ : ಬಿ.ವಿ. ಕಕ್ಕಿಲ್ಲಾಯ,ಪ್ರಾಚೀನ ಭಾರತದಲ್ಲಿ ಭೌತಿಕವಾದ–ಚಾರ್ವಾಕ/ಲೋಕಾಯತ ದರ್ಶನದ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫

೧೦. ದೇವಿಪ್ರಸಾದ ಚಟ್ಟೋಪಾಧ್ಯಾಯ. ಸಂ ; ಡಾ.ಜಿ. ರಾಮಕೃಷ್ಣಯ್ಯ, ಲೋಕಾಯತ–ಪ್ರಾಚೀನ ಭಾರತದಲ್ಲಿ ಭೌತವಾದ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬

೧೧. ದೀಪಿಕಾ, ಉಗ್ರಾಣ ನಿರ್ವಹಣೆ, ಪ್ರಕಾಶಕರು, ಪ್ರಧಾನ್ ಪ್ರಿಂಟರ್ಸ್, ಬೆಂಗಳೂರು, ೧೯೮೯
೧೨. ಗೋವಿಂದೇಗೌಡ, ಆಧುನಿಕ ಕೃಷಿ ಪದ್ದತಿ, ರಚನಾ ಪ್ರಕಾಶನ, ಮೈಸೂರು, ೧೯೯೨
೧೩. ಹರೀಶ್ಚಂದ್ರ ದಿಗ್ಸಂಗಿಕರ್, ಲಾವಣಿ(ಸವಾಲ್–ಜವಾಬ್ ಪದಗಳು), ಪ್ರಸಾರಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೦೫.
೧೪. ಹನುಮಂತಪ್ಪ ತಾರಿಹಳ್ಳಿ, ಹೈದರಾಬಾದ್ ಕರ್ನಾಟಕದ ಕೃಷಿ ಆಚರಣೆಳು, ಪ್ರಸಾರಾಂಗ, ಕನ್ನಡ ವಿಶ್ವವಿಧ್ಯಾಲಯ ಹಂಪಿ, ೨೦೧೭
೧೫. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೭
೧೬. ಹಾಲಪ್ಪ ಲಿಂಗದಹಳ್ಳಿ, ಹಾಲುಮತ ಸಂಸ್ಕೃತಿ, ರಾ.ಚಿಂ. ಢೇರೆ ಅವರ ಚಿಂತನೆಗಳು, ಪ್ರಸಾರರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,೨೦೧೭
೧೭. ಇರ್ಫಾನ್ ಹಬೀಬ್, ಕನ್ನಡಕ್ಕೆ : ಬಿ.ವಿ. ಕಕ್ಕಿಲ್ಲಾಯ, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫
೧೮. ಕಂಬಾರ ಸಿ.ಆರ್. ಶೆಟ್ಟಿಕೇರಾ, ಶೆಟ್ಟಿಕೇರಾ ಗ್ರಾಮಾಧ್ಯಯನ, ಗಾಯತ್ರಿ ಪ್ರಕಾಶನ, ೨೦೧೭
೧೯. ಕೊಟ್ರೇಶ್ ಎಂ. ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧
೨೦. ಕೃಷ್ಣಯ್ಯ ಗೌಡ ಎಚ್. ಆರ್. ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಪ್ರಕಾಶಕರು, ಮೈಸೂರು ಬುಕ್ ಹೌಸ್, ಮೈಸೂರು, ೨೦೧೭
೨೧. ಲಿಂಗಣ್ಣ ಸಿಂಪಿ, ಉತ್ತರ ಕರ್ನಾಟಕದ ಜಾನಪದ ಗೀತೆಗಳು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೭೫
೨೨. ಮಂಜುನಾಥ ಬೇವಿನಕಟ್ಟಿ, ವರವು ಕುರುವು ಕೂಲಹಳ್ಳಿ(ಕೂಲಹಳ್ಳಿ ಗ್ರಾಮ:ಸಾಂಸ್ಕೃತಿಕ ಸಂಕಥನ), ಅರುಣ್ ಪ್ರಕಾಶನ, ಬೆಂಗಳೂರು, ೨೦೧೬
೨೩. ಮಂಜುನಾಥ ಬೇವಿನಕಟ್ಟಿ, ಆದಿವಾಸಿ, ಪ್ರಕಾಶನ, ದಿವ್ಯಾ ಪ್ರಿಂಟ್ಸ್, ಬೆಂಗಳೂರು, ೨೦೦೭
೨೪. ಮಧು ಬಿ.ಎ. ಮೂಢನಂಬಿಕೆಗಳು, ಪ್ರಕಾಶನ, ಅಖಿಲ್ ಎಜೆನ್ಸಿಸ್, ಮೈಸೂರು, ೧೯೯೬
೨೫. ಮಂಜುನಾಥ ಬೇವಿನಕಟ್ಟಿ, ಜನಕಥ, ಜೋತಿ ಪ್ರಕಾಶನ, ಮೈಸೂರು, ೨೦೧೮
೨೬. ಮಂಜುನಾಥ ಬೇವಿನಕಟ್ಟಿ, ಗ್ರಾಮ ಸಮುದಾಯ ಸಂಕಥನ, ಅರುಣ್ ಪ್ರಕಾಶನ, ಬೆಂಗಳೂರು, ೨೦೧೮
೨೭. ಮಂಜುನಾಥ ಬೇವಿನಕಟ್ಟಿ, ಜನಪದ ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಪಂಪಿ, ೧೯೯೬
೨೮. ಮಂಜುನಾಥ ಬೇವಿನಕಟ್ಟಿ, ದೇಸೀ ಗಿಖ ಜಾಗತೀಕರಣ , ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪

೨೯. ಮಂಜುನಾಥ ಬೇವಿನಕಟ್ಟಿ, ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ, ಹ್ಯಾರಡ, ೧೯೯೪
೩೦. ಮಂಜುನಾಥ ಬೇವಿನಕಟ್ಟಿ, ಜನ ಜಾನಪದ, ಪ್ರಕಾಶನ, ಗೌತಮ್ ಬುಕ್ ಹೌಸ್, ಕಮಲಾಪುರ, ೨೦೧೬
೩೧. ಮುಲ್ಕ್ ರಾಜ್ ಆನಂದ್, ಅನುವಾದ:ಡಿ.ಎ. ಶಂಕರ್, ಅಸ್ಪೃಶ್ಯ, ಪ್ರಕಾಶಕರು, ಗೀತಾಬುಕ್ ಹೌಸ್, ಮೈಸೂರು, ೧೯೯೨
೩೨. ಮಂಜುನಾಥ ಬೇವಿನಕಟ್ಟಿ, ವ್ಯಾಧಚರಿತೆ (ಬೇಡ ಕುಲಮೂಲದ ಕಥನಗಳು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭
೩೩. ಮಂಜುನಾಥ ಬೇವಿನಕಟ್ಟಿ, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯
೩೪. ಮಂಜುನಾಥ ಬೇವಿನಕಟ್ಟಿ, ರಾಮಾಯಣ ಮರುದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮
೩೫. ಮಂಜುನಾಥ ಬೇವಿನಕಟ್ಟಿ, ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯
೩೬. ಎನ್ಕೆ, ಉತ್ತರ ಕರ್ನಾಟಕ ರಂಗಭೂಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧
೩೭. ನಿಂಗಣ್ಣ ಚಿ.ಸಿ., ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೧೨
೩೮. ನಗುವನಹಳ್ಳಿ ಪಿ.ರತ್ನ, ಜಾನಪದ ಸೋಪಾನ, ಪ್ರಶಾಂತಿ ಪ್ರಕಾಶನ, ಮೈಸೂರು, ೧೯೯೨
೩೯. ನಾಗರಾಜ ಮೈ.ನ. ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೨
೪೦. ನಿರುಪಾಧಿ ಸ್ವಾಮಿಗಳು ಮ.ನಿ.ಪ್ರ. ಅಡವಿ ಸಿದ್ದೇಶ್ವರ ಮಠ, ಮರೆಗುದ್ದಿ, ಶ್ರೀ ಚನ್ನವೀರ ವಿಲಾಸ, ಪ್ರಕಾಶನ, ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, ೧೯೯೧
೪೧. ನಾಗರಾಜ ತಂಬ್ರಹಳ್ಳಿ, ಅಂಜಿನಪ್ಪ, ಕಡಲಬಾಳು ಗ್ರಾಮ : ಸಾಂಸ್ಕೃತಿಕ ಸ್ಥಿತ್ಯಂತರ, ಮಹಾಪ್ರಬಂಧ ಪ್ರಕಟಿತ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭
೪೨. ನಾಗರಾಜಯ್ಯ ಹಂಪ, ನೋಂಪಿಯ ಕಥೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲ ಹಂಪಿ, ೨೦೦೧
೪೩. ನಾರಾಯಣ ರಾವ್ ಜಿ.ಟಿ., ವೈಜ್ಞಾನಿಕ ಮನೋಧರ್ಮ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧
೪೪. ನಾಯ್ಡು ಜೆ.ವಿ.ಟಿ., ವನ ಸಂಪತ್ತು, ಪ್ರಕಾಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦

೪೫. ಪರಮಶಿವಯ್ಯ ಜೀ. ಶಂ. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶನ, ಬೆಂಗಳೂರು. ೨೦೧೬

೪೬. ಪರಮಶಿವಮೂರ್ತಿ ಡಿ.ವಿ, ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೪೭. ರೇವತಿ ಆರ್.ಪಿ, ಶಿವಮೊಗ್ಗ ಜಿಲ್ಲೆಯ ಬಾಹುಸಾರ ಕ್ಷತ್ರಿಯ ಸಮುದಾಯ, ಮಹಾಪ್ರಬಂಧ ಪ್ರಕಟಿತ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೩

೪೮. ರವೀಂದ್ರನಾಥ ಕೆ. ಕರ್ನಾಟಕ ಜೈನಮಠಗಳು ಮತ್ತು ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧

೪೯. ರೋಮಿಲ ಥಾಪರ್, ಹರ್ಬನ್ಸ್ ಮುಖಿಯ, ಬಿಪಿನ್ ಚಂದ್ರ, ಕನ್ನಡಕ್ಕೆ : ಕೆ.ಎಲ್. ಗೋಪಾಲಕೃಷ್ಣ ರಾವ್, ಕೋಮುವಾದ ಹಾಗೂ ಭಾರತೀಯ ಲೇಖಿನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪

೫೦. ರಾಜಶೇಖರಯ್ಯ ಎಂ. ಎಂ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ-೫, ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬

೫೧. ರಾಜೇಗೌಡ ಹ.ಕ. ಕರ್ನಾಟಕದ ವ್ಯವಸಾಯ ಪದ್ದತಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೧

೫೨. ರಮೇಶ್ ಬೆ.ಗೋ., ಎಣ್ಣೆ ಕಾಳು ಬೆಳೆಗಳು, ಶಾರದಾ ಪ್ರಸಾದ ಪ್ರಕಾಶನ, ಮೈಸೂರು, ೧೯೯೪

೫೩. ಸುರೇಶ ಕೆ.ಸಿ. ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಮಹಾಪ್ರಬಂಧ ಪ್ರಕಟಿತ ಕನ್ನಡ ವಿಶ್ವವಿಧ್ಯಾಲಯ ಹಂಪಿ. ೨೦೧೧

೫೪. ಸಂಧ್ಯಾರೆಡ್ಡಿ ಕೆ.ಆರ್. ಜಾನಪದ ಪರಿಶೀಲನೆ, ಪ್ರಕಾಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬

೫೫. ಸರ್ದೇಸಾಯಿ ಎಸ್.ಜಿ. ಅನುವಾದ:ಡಾ.ಕೆ.ಎಲ್. ಗೊಪಾಲ ಕೃಷ್ಣಯ್ಯ, ಭಾರತೀಯ ಇತಿಹಾಸದ ವೈಲಕ್ಷಣ್ಯಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೬

೫೬. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು-ಜಾನಪದೀಯ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೫

೫೭. ಸಾಹಿತ್ಯಾಚಾರ್ಯ ಬಾಳಶಾಸ್ತ್ರಿ ಹರದಾಸ್, ಸಂಗ್ರಹ:ಸು.ನಾ.ಮಲ್ಯ, ಶ್ರೀ ರಾಮನ ಕಥೆಯಲ್ಲಿ ಆದರ್ಶಗಳು, ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೦

೫೮. ಸರೋಜಾ ಕೆ. ಮಹಿಳೆ ಮತ್ತು ಸಮೂಹ ಮಾಧ್ಯಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿಧ್ಯಾಲಯ ಹಂಪಿ, ೨೦೦೪

೫೯. ಸ್ವಾಮಿ ಆನಂದ್, ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ, ಅಗ್ನಿ ಪ್ರಕಾಶನ, ಬೆಂಗಳೂರು, ೨೦೧೫

೬೦. ಸಪ್ತಪಾಲ್ ಮಲಯಾನಿ, ಡಾ. ಅಬ್ದುಲ್ ಹಕೀಮ್, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕೈಪಿಡಿ, Karnataka law jowrnal pudlications, ಬೆಂಗಳೂರು, ೨೦೧೬

೬೧. ಶರ್ಮಾ ಆರ್.ಎಸ್. ಕನ್ನಡಕ್ಕೆ:ಎಸ್. ಗುರುದತ್ತ, ಭಾರತಕ್ಕೆ ಆರ್ಯರ ಪ್ರವೇಶ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫

೬೨. ಶರ್ಮ ಆರ್.ಎಸ್. ಕನ್ನಡಕ್ಕೆ:ಡಾ. ಜೆ. ಶ್ರೀನಿವಾಸ ಮೂರ್ತಿ, ಡಾ. ಆರ್. ಶೋಭಾ,ಡಾ. ಎಸ್. ಗುರುದತ್, ಡಾ.ಜಿ.ರಾಮಕೃಷ್ಣ, ಪ್ರಾಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೭

೬೩. ಶಿವಾನಂದ ಎಸ್. ಮೈಲಾರ ಬಸವಲಿಂಗ ಶರಣರ ಸಮಗ್ರ ಕೃತಿಗಳು, ಪ್ರಕಾಶಕರು, ಶ್ರೀ. ಮ.ನಿ.ಪ್ರ ಚನ್ನವೀರ ಮಹಾಸ್ವಾಮಿಗಳ ಗ್ರಂಥ ಪ್ರಕರಣ ಸೇವಾ ಸಮಿತಿ, ಲಿಂಗನಾಯಕನಹಳ್ಳಿ, ೨೦೧೩

೬೪. ಶಾಂತಿರಾಜಶಾಸ್ತ್ರಿಗಳು ಎತ್ತೂರು, ದ್ರವ್ಯ ಸಂಗ್ರಹ:(ಜೈನ ಸಿದ್ದಾಂತ ಸಂಗ್ರಹ), ಪ್ರಕಾಶಕರು, ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಬೆಂಗಳೂರು, ೨೦೦೮

೬೫. ಶಾಂತಿರಾಜಶಾಸ್ತ್ರಿಗಳು ಎ. ಚಂದ್ರಗಿರಿ ಪೂಜಾ ಸಂಗ್ರಹ, ಪ್ರಕಾಶಕರು, ಚಂದ್ರಗಿರಿ–ಚಿಕ್ಕ ಬೆಟ್ಟ ಮಹೋತ್ಸವ ಆಚರಣಾ ಸಮಿತಿ, ಶ್ರವಣಬೆಳಗೋಳ, ೨೦೦೧

೬೬. ತಾರಾಮತಿ ಬಿ, ಕರ್ನಾಟಕದ ಖಾಟಿಕ್ ಸಮುದಾಯ, ಮಹಾಪ್ರಬಂಧ, ಪ್ರಕಟಿತ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭

೬೭. ವೆಂಕಟೇಶ ಇಂದ್ವಾಡಿ, ಊರೆಂಬುದು ಊರಾಗುತ್ತಿದ್ದ ಪರಿ, ಪ್ರಸಾರಾಂಗ, ಕನ್ನಡ ವಿಶ್ವವಿಧ್ಯಾಲಯ ಹಂಪಿ. ೨೦೧೭

೬೮. ವಸಂತಮಾಲಾ ಜಿ.ಎಸ್., ಜಾನಪದ ಗೀತೆಗಳಲ್ಲಿ ಬಾಹುಬಲಿ, ಪ್ರಕಾಶನ, ಚಂದ್ರಗಿರಿ–ಚಿಕ್ಕಬೆಟ್ಟ ಮಹೋತ್ಸವ ಸಮಿತಿ, ಶ್ರವಣಬೆಳಗೋಳ, ೨೦೦೫

೬೯. ವಿರುಪಾಕ್ಷಗೌಡ ಕೆ. ಕಲ್ಲೇಶ ಇಟ್ಟಗಿ, ಪಾಟೀಲ್ ಕರಿವೀರನಗೌಡ (ಸಂಗ್ರಹ), ಜನಪದ ಸಾಹಿತ್ಯ, ಶ್ರೀ ಕೊಟ್ಟೂರೇಶ್ವರ ಪ್ರಕಾಶನ, ಹಗರಿಬೊಮ್ಮನಹಳ್ಳಿ, ೧೯೭೨

೭೦. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೨

೭೧. ವಾಗೀಶ್ವರಿ ಶಾಸ್ತ್ರಿ, ಕರ್ನಾಟಕದ ಹಬ್ಬಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೩

೭೨. ವೀರಭದ್ರಪ್ಪ ಬಿ.ವಿ. ಭಗವದ್ಗೀತೆ–ಒಂದು ವೈಚಾರಿಕ ಒಳನೋಟ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫

೭೩. ವಸುಪಾಲ ಟಿ. ಎಸ್., ಶ್ರೀ ಜಿನ ಭಜನೆಗಳು, ಪ್ರಕಾಶಕರು, ಶ್ರೀ ಮಹಾವೀರ ಜ್ಯೋತಿ ಪ್ರಸಾರ ಗ್ರಂಥಮಾಲೆ, ದಾವಣಗೆರೆ, ೧೯೯೬

೭೪. ವೆಂಕಟರಾವ್ ಬಿ.ವಿ, ಮಣ್ಣು ಮತ್ತು ಬೆಳೆ, ಪ್ರಕಾಶಕರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೧೯೯೬

ನಿಘಂಟುಗಳು

೦೧ ಕನ್ನಡ ಇಂಗ್ಲೀಷ್ ನಿಘಂಟು ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು

೦೨ ಕನ್ನಡ ನಿಘಂಟುಗಳು, ಎಂಟು ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

೦೩ ಕನ್ನಡ ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೦೪ Dravition etymological dictionary

೦೫ ಹಳಗನ್ನಡ ಶಬ್ದಾರ್ಥಕೋಶ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

೦೬ ಕನ್ನಡ ನಿಘಂಟು, ಸಂಪುಟ-೩, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

ಪತ್ರಿಕೆಗಳು

೦೧ ಜಾನಪದ ಜಗತ್ತು

೦೨ ಕಲಾರಂಗ

೦೩ ಪ್ರಭಾತ

೦೪ ಜನಪದ, ಮಾಸ ಪತ್ರಿಕೆ, ವಾರ್ತಾ ಇಲಾಖೆ ಬೆಂಗಳೂರು,

೦೫ ಬಯಲು ದರ್ಶನ, ಮಾಸಪತ್ರಿಕೆ, ಹೂವಿನಹಡಗಲಿ

೦೬ ಕರ್ನಾಟಕ ವಿಕಾಸ, ಮಾಸ ಪತ್ರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು

೦೭ ಯೋಜನಾ, ಅಭಿವೃದ್ಧಿ ಮಾಸಪತ್ರಿಕೆ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ

೦೮ ಮಂಜುವಾಣಿ, ಮಾಸಪತ್ರಿಕೆ, ಶ್ರೀ ಕ್ಷೇತ್ರ ಧರ್ಮಸ್ಥಳ

೦೯ ಪ್ರಜಾವಾಣಿ, ದಿನಪತ್ರಿಕೆ(ಅಂಕಣಗಳು)

೧೦ ಕನ್ನಡ ಪ್ರಭ, ದಿನಪತ್ರಿಕೆ (ಅಂಕಣಗಳು)

೧೧ ವಿಜಯವಾಣಿ, ದಿನಪತ್ರಿಕೆ (ಅಂಕಣಗಳು)

ಇಂಗ್ಲೀಷ್

೦೧ ಕರ್ನಾಟಕ ಗೆಜೆಟಿಯರ್, ಬೆಂಗಳೂರು, ೨೦೧೧

ಹ್ಯಾರಡ ಗ್ರಾಮದ ನಕಾಶೆ



ಹ್ಯಾರಡ ಗ್ರಾಮದ ದೈವಗಳು



ಮಲಿಯಮ್ಮ ದೇವಿ



ಸಂಗಮೇಶ್ವರ



ಹನುಮಂತ



ಕೇರಿಯ ದುರುಗಮ್ಮ



ಬೀರಲಿಂಗೇಶ್ವರ



ಕಾಳಮ್ಮ



ಭರ್ಮಪ್ಪ



ನಿರ್ಮಾಣ ಹಂತದಲ್ಲಿರುವ ಯಲ್ಲಮ್ಮ
ದೇವಿ ದೇವಸ್ಥಾನ

ಹ್ಯಾರಡ ಗ್ರಾಮದ ದೈವಗಳು


ಬನ್ನಿಕಾಳಮ್ಮ


ಅಲ್ಲಾಸ್ವಾಮಿ ಜಂಡಾಕಟ್ಟಿ


ಅಲ್ಲಾವುದ್ದೀನ್ ಪವಾಡ ಪುರುಷನ ಗದ್ದುಗೆ


ಕೋಟೆಯ ದುರುಗಮ್ಮ


ಅಡವಿ ಊರಮ್ಮ ದೇವಿ


ಕಲ್ಲೇಶ್ವರನ ದೇವರು


ಹಾದಿ ಹನುಮಂತ


ಶರೀಪ್ ಸಾಹೇಬ್ರ ಕಟ್ಟಿ

ಹ್ಯಾರಡ ಗ್ರಾಮದ ದೈವಗಳು



ಶಿಬಾರ



ಹೊನ್ನತ್ತೆಮ್ಮ



ಚಿಕ್ಕಮಲಿಯಮ್ಮ ದೇವಿ



ನಾಗದೈವಗಳು



ಗಂಗಾ ಪರಮೇಶ್ವರಿ ದೇವಸ್ಥಾನ



ಕೇರಿಯ ಕರಿಬಾನಿ



ಬತ್ತಿಕಟ್ಟಿಸರ ಹನುಮಪ್ಪ



ಕೆಂಗೇರಿ ಮಲಿಯಮಮ್ಮ

ಹ್ಯಾರಡ ಗ್ರಾಮದ ದೈವಗಳು



ಕೋಣನ ಬಲಿದಾನದ ಸ್ಥಳ



ಮಸೀದಿ



ಮಲಿಯಮ್ಮನ ಪಾದುಕೆ



ಜೋಕುಮಾರ



ಬೀರಲಿಂಗೇಶ್ವರನ ದೀಪಸ್ತಂಭ



ಚೌಡಿಕಟ್ಟೆ

ಹ್ಯಾರಡ ಗ್ರಾಮದ ಸಾಂಪ್ರದಾಯಕ ಕೃಷಿ ಉಪಕರಣಗಳು




ಗೊಟ್ಟ



ನೊಗಸುತ್ತು



ಬಲ್ಲು




ಕುಡುಗೋಲು



ಮೇವಿನ ಕತ್ತರಿ



ಕುಕ್ಕಿ



ಮಿಂಡೆ



ಕುರ್ಪಿಗಿ



ಬಣವೆ



ಪುಟ್ಟಿ



ರೂಣಗಲ್ಲು



ಪಟಗಾಣಿ

ಹ್ಯಾರಡ ಗ್ರಾಮದ ಸಾಂಪ್ರದಾಯಕ ಕೃಷಿ ಉಪಕಣಗಳು



ಗ್ವಾಂಡ್ಲಿ



ನೊಗ



ಕೃಷಿ ಉಪಕರಣಗಳ ಇಡುವ ಸ್ಥಳ



ರಂಟಿ ಮೇಳೆ



ಬ್ಯಾಕೋಲು & ಮಿಣಿ



ಕುಂಟೆ



ಬಾರಿಕೋಲು



ಮೂರು ಕುಂಟೆ ನೊಗ



ನೀರಿನ ಬಾನಿ



ರಂಟೆ



ಜಂತುಗುಂಟಿ



ನೆರೆಕೋಲು


ಹ್ಯಾರಡ ಗ್ರಾಮದ ಸಾಂಪ್ರದಾಯಕ ಕೃಷಿ ಉಪಕಣಗಳು


ದಾಯಜಿಡುವ ರಂಟಿ


ಗ್ವಾರಿ


ಹಳೆಯ ಮಾದರಿ ಬಂಡಿ



ಕೂರಿಗೆ


ತತ್ರಾಣಿ


ಶೆಡ್ಡಿ


ಕೂರಿಗೆ ಬಟ್ಟಲು


ಕೊಡಲಿ


ಒಡೇವು

ಹ್ಯಾರಡ ಗ್ರಾಮದ ಆಚರಣೆಗಳು



ಸುರಿಗೆ ನೀರು ತರುವುದು



ಮದುಮಕ್ಕಳನ್ನು ಮಾಡುವುದು



ಇಳೇವು ಒಡೆಯುವುದು



ನಾಮಕರಣ



ಋತುಮತಿಯಾದಾಗ ಉಡಿತುಂಬುವುದು



ಮದುವೆಯ ಹಂದರ



ನಿಶ್ಚಿತಾರ್ಥ



ಪಂಜು ಹಿಡಿಯುವುದು



ಹೋಳಿ ಬಣ್ಣದಾಟ



ವಾರ್ಡ್ ಸಭೆ



ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ



ಗ್ರಾಮ ಸಭೆ



ಜಾನಪದ ಅಧ್ಯಯನ ವಿಭಾಗ